TEXT PROBLEM
WITHIN THE
BOOK ONLY

UNIVERSAL LIBRARY
OU_202206
UNIVERSAL LIBRARY

ಶ್ರೀ "ಶಾರದಾ" ಗ್ರನ್ಥಮಾಲಾ ೭

# ಭಾಷಾಮಯ ಧರ್ಮಸಿನ್ಧುಸಾರ

## ಒಂದು ಮತ್ತು ಎರಡನೇ ಪರಿಚ್ಛೇದ

ಬೆಂಗಳೂರು ಸೀಗೆಬೀಲಿಯಲ್ಲಿರುವ

ದೊಡ್ಡಬೆಲೆ ನಾರಾಯಣಶಾಸ್ತ್ರಿಯಿಂದ

ಪ್ರಚುರಗೊಂಡಿದೆ.

ಬೆಂಗಳೂರು.

"ಐರಿಷ್" ಮುದ್ರಾಲಯದಲ್ಲಿ ಮುದ್ರಿಸಲ್ಪಟ್ಟಿತು.

೧೯೧೩.

ರಿಜಿಸ್ಟರ್ಡ್ ಕಾಪೀರೈಟ್.

# ವಿಷಯಾನುಕ್ರಮಣಿಕೆ


| ವಿಷಯ ಸಂಖ್ಯೆ | ವಿಷಯಗಳು | ಪುಟಸಂಖ್ಯೆ |
|---|---|---|
| | —* ಮೊದಲನೆಯ ಪರಿಚ್ಛೇದವು *— | |
| ೧ | ಉಪೋದ್ಘಾತ. | ೧ |
| ೨ | (೨) ಸಂಕ್ರಾಂತಿ ನಿರ್ಣಯ | ೩ |
| ೩ | ಅಯನಾಂಶನಿರ್ಣಯ. | ೪ |
| ೪ | ಸಂಕ್ರಾಂತಿ ತ್ಯಾಜ್ಯಕಾಲ | ೬ |
| ೫ | (೩) ಮಲಮಾಸ ವಿಚಾರ | ೬ |
| ೬ | (೪) ವರ್ಜ್ಯಾವರ್ಜ್ಯನಿರ್ಣಯ | ೮ |
| ೭ | (೫) ಮಲಮಾಸ ವರ್ಜ್ಯಗಳು | ೧೦ |
| ೮ | ಸಿಂಹಸ್ಥಪವಾದ | ೧೧ |
| ೯ | (೬) ತಿಥಿಸಾಮಾನ್ಯ ಪರಿಭಾಷಾ | ೧೨ |
| ೧೦ | (೭) ಕರ್ಮವಿಶೇಷನಿರ್ಣಯ | ೧೩ |
| ೧೧ | (೮) ವ್ರತಪರಿಭಾಷೆ | ೧೮ |
| ೧೨ | ವ್ರತಾದಿಗಳಲ್ಲುಪಯೋಗಿಸಬಹುದಾದಆಹಾರವಸ್ತುಗಳು | ೨೧ |
| ೧೩ | ವ್ರತನಿಯಮ ಮೊದಲಾದವುಗಳಲ್ಲಿ ಜಾತಾಶೌಚ ಮುಂತಾದುವು ಬಂದರೆ ಮಾಡಬೇಕಾದವಿಧಿ | ೨೨ |
| ೧೪ | ಉಪವಾಸ, ಪಾರಣೆ, ಏಕಭಕ್ತ ಇವೆಲ್ಲವೂ ಒಂದುದಿನದಲ್ಲಿ ಕೂಡಿದರೆ ಮಾಡಬೇಕಾದುದ್ದು. | ೨೩ |
| ೧೫ | (೯) ಪ್ರತಿಪದಾದಿ ತಿಥಿನಿರ್ಣಯವು | ೨೫ |
| ೧೬ | (೧೦) ದ್ವಿತೀಯಾ ನಿರ್ಣಯವು | ೨೬ |
| ೧೭ | (೧೧) ತೃತೀಯಾ ನಿರ್ಣಯವು. | ೨೭ |
| ೧೮ | (೧೨) ಚತುರ್ಥೀನಿರ್ಣಯವು. | ೨೭ |
| ೧೯ | (೧೩) ಪಂಚಮೀ ನಿರ್ಣಯವು. | ೨೮ |
| ೨೦ | (೧೪) ಷಷ್ಠೀನಿರ್ಣಯವು. | ೨೯ |

| | | |
|---|---|---|
| ೪ | ಷಣ್ಣವತಿ ಶ್ರಾದ್ಧಗಳು. | ೯೭ |
| ೫ | ದಮನಕಾರೋಪಣಾದಿಗಳು. | ೯೮ |
| ೬ | ರಾಮನವಮೀ ನಿರ್ಣಯವು. | ೯೯ |
| ೭ | ನವಮೀ ಪ್ರಯೋಗವು. | ೧೦೦ |
| ೮ | ವಿಷ್ಣುವಿನ ದಮನೋತ್ಸವವು. | ೧೦೨ |
| ೯ | ವಿಶೇಷ | ೧೦೭ |
| ೧೦ | ವೈಶಾಖ ಸ್ನಾನವು. | ೧೦೮ |
| ೧೧ | (೨) ವೈಶಾಖಮಾಸವು. | ೧೦೯ |
| ೧೨ | ಅಕ್ಷಯ ತೃತೀಯು. | ೧೧೧ |
| ೧೩ | ಉದಕುಂಭ ದಾನವು. | ೧೧೩ |
| ೧೪ | ಪರಶುರಾಮ ಜಯಂತೀ. | ೧೧೫ |
| ೧೫ | ನೃಸಿಂಹಜಯಂತೀ ಪ್ರಯೋಗವು. | ೧೧೬ |
| ೧೬ | ತಿಲಾಜಿನಾದಿ ದಾನಗಳು. | ೧೧೮ |
| ೧೭ | (೩) ಜ್ಯೇಷ್ಠಮಾಸ ಕಾರ್ಯವು. | ೧೨೦ |
| ೧೮ | ವ್ರತವಿಧಿಯು. | ೧೨೧ |
| ೧೯ | ಗಂಗಾ ಸ್ತೋತ್ರವು. | ೧೨೪ |
| ೨೦ | ವಟಸಾವಿತ್ರೀ ವ್ರತವು. | ೧೨೭ |
| ೨೧ | (೪) ಆಷಾಢಮಾಸ ನಿರ್ಣಯವು | ೧೨೮ |
| ೨೨ | ವಿಷ್ಣುಶಯನೋತ್ಸವವು. | ೧೨೯ |
| ೨೩ | ಚಾತುರ್ಮಾಸ್ಯ ವ್ರತಾರಂಭವು. | ೧೩೦ |
| ೨೪ | ನಿಷೇಧವುಳ್ಳ ಪದಾರ್ಥಗಳು. | ೧೩೨ |
| ೨೫ | ಹವಿಷ್ಯವಸ್ತುಗಳು. | ೧೩೩ |
| ೨೬ | ಕಾಮ್ಯ ವ್ರತಗಳು. | ೧೩೪ |
| ೨೭ | ಕೋಕಿಲಾ ವ್ರತವು. | ೧೩೬ |
| ೨೮ | ಅಶೂನ್ಯ ಶಯನ ವ್ರತವು | ೧೩೯ |
| ೨೯ | (೫) ಶ್ರಾವಣಮಾಸ ನಿರ್ಣಯವು | ,, |
| ೩೦ | ಪವಿತ್ರಾರೋಪಣವು. | ೧೪೧ |
| ೩೧ | ಋಗ್ವೇದೋಪಾಕರ್ಮವು | ೧೪೭ |

| | | |
|---|---|---|
| ೩೨ | ಯಜುರ್ವೇದೋಪಾಕರ್ಮನಿರ್ಣಯವು. | ೧೪೮ |
| ೩೩ | ಸಾಮವೇದೋಪಾಕರ್ಮವು | ೧೫೦ |
| ೩೪ | ಸರ್ವಸಾಧಾರಣ ನಿರ್ಣಯವು. | ೧೫೧ |
| ೩೫ | ರಕ್ಷಾಬಂಧನವು | ೧೫೪ |
| ೩೬ | ಜನ್ಮಾಷ್ಟಮೀ ನಿರ್ಣಯವು | ೧೫೬ |
| ೩೭ | ರೋಹಿಣೀಯುಕ್ತವಾದ ಅಷ್ಟಮೀ ಭೇಧಗಳು. | ೧೫೭ |
| ೩೮ | ಜನ್ಮಾಷ್ಟಮೀ ನಿರ್ಣಯ ಸಂಗ್ರಹವು. | ೧೬೦ |
| ೩೯ | ಮತಭೇದಗಳು. | ೧೬೧ |
| ೪೦ | ಪಾರಣೆಯ ಕಾಲವು | ೧೬೩ |
| ೪೧ | ಸಂಕ್ಷೇಪವಾಗಿ ವ್ರತವಿಧಿಯು. | ೧೬೪ |
| ೪೨ | ದರ್ಭಾಹರಣೆಯು. | ೧೭೩ |
| ೪೩ | (೬) ಭಾದ್ರಪದಮಾಸವು | ೧೭೪ |
| ೪೪ | ಹರಿತಾಳಿಕಾ ವ್ರತವು | ,, |
| ೪೫ | ಗಣೇಶ ಚತುರ್ಥೀ | ೧೭೫ |
| ೪೬ | ದೂರ್ವಾಷ್ಟಮಿ | ೧೭೭ |
| ೪೭ | ವಿಷ್ಣುಪರಿವರ್ತನೋತ್ಸವ | ೧೭೯ |
| ೪೮ | ಶ್ರವಣ ದ್ವಾದಶೀವ್ರತವು | ,, |
| ೪೯ | ಪಾರಣೆಯು | ೧೮೨ |
| ೫೦ | ವಾಮನ ಜಯಂತಿ | ೧೮೪ |
| ೫೧ | ಪಯೋವ್ರತಂ. | ೧೮೫ |
| ೫೨ | ಅನಂತವ್ರತಂ. | ೧೮೬ |
| ೫೩ | ಪ್ರೋಷ್ಠಪದೀ ಶ್ರಾದ್ಧಂ. | ೧೮೭ |
| ೫೪ | (೭) ಮಹಾಲಯವು. | ೧೮೭ |
| ೫೫ | ಮಹಾಲಯ ದೇವತೆಗಳು. | ೧೯೦ |
| ೫೬ | ವಿಪ್ರನಿಮಂತ್ರಣಾದಿಗಳು. | ೧೯೧ |
| ೫೭ | ವಿಧವೆಯು ಮಹಾಲಯವನ್ನು ಮಾಡುವುದು | ೧೯೪ |
| ೫೮ | ಜೀವತ್ಪಿತೃಕ ಮೊದಲಾದವರು ಸಂಕಲ್ಪವಿಧಿಯಿಂದ ಮಾಡುವಿಕೆ | ,, |
| ೫೯ | ಪ್ರತಿಸಾಂವತ್ಸರಿಕ ಶ್ರಾದ್ಧಗಳು ಬಂದರೆ | ೧೯೫ |

| | | | |
|---|---|---|---|
| ೬೦ | | ಭರಣೀ ಶ್ರಾದ್ಧವು | ೧೯೬ |
| ೬೧ | | ಅನ್ವಷ್ಟಕ್ಯಾದಿ ಶ್ರಾದ್ಧವು | ೧೯೭ |
| ೬೨ | | ಅವಿಧವಾನವಮಿ | ೧೯೮ |
| ೬೩ | | ಮಘಾತ್ರಯೋದಶೀ ಶ್ರಾದ್ಧವು | ೧೯೯ |
| ೬೪ | | ಚತುರ್ದಶಿಯಲ್ಲಿ ಶಸ್ತ್ರಾದಿಗಳಿಂದ ಹತರಾದವರಿಗೆ | ೨೦೧ |
| ೬೫ | | ದೌಹಿತ್ರ ಶ್ರಾದ್ಧವು | ೨೦೩ |
| ೬೬ | (೮) | ಕಪಿಲಾಷಷ್ಠೀ ನಿರ್ಣಯವು | ೨೦೪ |
| ೬೭ | | ವ್ರತವಿಧಿಯು | ,, |
| ೬೮ | (೯) | ಆಶ್ವಿನಮಾಸವು | ೨೦೭ |
| ೬೯ | | ನವರಾತ್ರಾರಂಭವು | ,, |
| ೭೦ | | ಪೂಜಾದಿದಳಲ್ಲಿ ಅಧಿಕಾರವು | ೨೦೯ |
| ೭೧ | | ಅನುಕಲ್ಪಗಳು | ೨೧೦ |
| ೭೨ | | ನವರಾತ್ರ ಕರ್ತವ್ಯಗಳು | ೨೧೧ |
| ೭೩ | | ಪ್ರಯೋಗವು | ೨೧೨ |
| ೭೪ | | ಚಂಡೀಪಾಠವಿಧಿಯು | ೨೧೪ |
| ೭೫ | | ಕುಮಾರೀ ಪೂಜೆಯು | ೨೧೬ |
| ೭೬ | | ಆಶೌಚಾದಿಗಳಲ್ಲಿ ಮಾಡಬೇಕಾದದ್ದು | ೨೧೭ |
| ೭೭ | | ಉಪಾಂಗಲಲಿತಾವ್ರತಂ | ೨೧೮ |
| ೭೮ | | ಸರಸ್ವತ್ಯಾವಾಹನಾದಿಗಳು | ೨೧೯ |
| ೭೯ | | ಮಹಾಷ್ಟಮ್ಯಾದಿಗಳು | ೨೨೦ |
| ೮೦ | | ನವಮಿಯಲ್ಲಿ ಹೋಮಾದಿಗಳು | ೨೨೧ |
| ೮೧ | | ಆಯುಧ, ಅಶ್ವ ಇವುಗಳ ಪೂಜೆಯು | ೨೨೪ |
| ೮೨ | | ಪಾರಣೆಗೂ ವಿಸರ್ಜನೆಗೂ ಕಾಲವು. | ೨೨೫ |
| ೮೩ | | ವಿಜಯ ದಶಮೀ | ೨೨೬ |
| ೮೪ | | ಅಪರಾಜಿತಾಶಮೀಪೂಜೆಯು. | ೨೨೭ |
| ೮೫ | | ವಿಜಯ ಮುಹೂರ್ತವು. | ೨೩೦ |
| ೮೬ | | ಕಾರ್ತಿಕಸ್ನಾನವು | ೨೩೧ |
| ೮೭ | | ಕಾರ್ತಿಕವ್ರತಗಳು | ೨೩೩ |

| | | | |
|---|---|---|---|
| ೮೮ | | ಕಾರ್ತಿಕದಲ್ಲಿ ಬಿಡಬೇಕಾದವುಗಳು. | ೨೩೫ |
| ೮೯ | | ಪುರಾಣಾದಿಗಳನ್ನು ಕೇಳುವುದು. | ೨೩೬ |
| ೯೦ | | ಆಕಾಶ ದೀಪವು. | ೨೩೭ |
| ೯೧ | | ಕೋಜಾಗರೀ ವ್ರತವು. | ೨೩೮ |
| ೯೨ | | ಆಗ್ರಯಣವು. | ೨೩೯ |
| ೯೩ | | ಆಗ್ರಯಣಾನು ಕಲ್ಪಗಳು. | ೨೪೨ |
| ೯೪ | | ಗೋವತ್ಸ ದ್ವಾದಶೀ. | ೨೪೩ |
| ೯೫ | | ನರಕಚತುರ್ದಶಿಯು | ೨೪೫ |
| ೯೬ | | ಯಮತರ್ಪಣವು. | ೨೪೬ |
| ೯೭ | | ಲಕ್ಷ್ಮೀಪೂಜೆ ಮೊದಲಾದುವು. | ೨೪೮ |
| ೯೮ | (೧೦) | ಕಾರ್ತಿಕ ಮಾಸವು. | ೨೪೯ |
| ೯೯ | | ಪ್ರತಿಪನ್ನಿರ್ಣಯವು. | ೨೪೯ |
| ೧೦೦ | | ಬಲಿಪೂಜಾ, ದೀಪೋತ್ಸವಾದಿಗಳು | ೨೫೦ |
| ೧೦೧ | | ಗೋವು ಮತ್ತು ಗೋವರ್ಧನಗಳ ಪೂಜೆಯು. | ೨೫೨ |
| ೧೦೨ | | ಮಾರ್ಗಪಾಳೀ ಬಂಧನೆಯು. | ೨೫೩ |
| ೧೦೩ | | ಯಮದ್ವಿತೀಯೆಯು. | ೨೫೪ |
| ೧೦೪ | | ಭೀಷ್ಮಪಂಚಕ ವ್ರತಂ. | ೨೫೫ |
| ೧೦೫ | | ತುಲಸೀ ಕಾಷ್ಠಮಾಲಾಧಾರಣೆಯು. | ,, |
| ೧೦೬ | | ಧಾತ್ರೀ ಮೂಲೇ ಪೂಜಾ. | ೨೫೯ |
| ೧೦೭ | | ಪ್ರಬೋಧೋತ್ಸವ ತುಲಸೀ ವಿವಾಹಾದಿಗಳು. | ೨೬೧ |
| ೧೦೮ | | ವೈಕುಂಠ ಚತುರ್ದಶಿಯು. | ೨೬೫ |
| ೧೦೯ | | ಚಾತುರ್ಮಾಸ್ಯ ವ್ರತದಾನಗಳು. | ೨೬೬ |
| ೧೧೦ | | ಲಕ್ಷಪೂಜಾ ಫಲಾದಿಗಳು. | ೨೬೭ |
| ೧೧೧ | | ಕಾಲಾಷ್ಟಮಿಯು. | ೨೬೯ |
| ೧೧೨ | (೧೧) | ಮಾರ್ಗಶೀರ್ಷ ಮಾಸವು. | ೨೭೦ |
| ೧೧೩ | | ಅಷ್ಟಕಾದಿ ಶ್ರಾದ್ಧಗಳು. | ೨೭೧ |
| ೧೧೪ | | ಭಾನುವಾರಗಳಲ್ಲಿ ಸೌರವ್ರತವು. | ೨೭೩ |
| ೧೧೫ | (೧೨) | ಪೌಷಮಾಸವು | ೨೭೩ |
| ೧೧೬ | | ಮಕರಸಂಕ್ರಾಂತಿ ನಿರ್ಣಯವು. | ೨೭೪ |
| ೧೧೭ | | ಮಾಘಸ್ನಾನವು. | ೨೭೭ |

| | | | |
|---|---|---|---|
| ೧೧೮ | | ಸ್ನಾನವಿಧಿಯು. | ೨೭೮ |
| ೧೧೯ | | ಅದಕ್ಕೆ ನಿಯಮವು. | ೨೭೯ |
| ೧೨೦ | | ಅರ್ಧೋದಯ ಯೋಗವು. | ೨೮೦ |
| ೧೨೧ | | ಕಂಚಿನ ಭೋಜನ ಪಾತ್ರೆಯ ದಾನವು. | ೨೮೧ |
| ೧೨೨ | (೧೩) | ಮಾಘಮಾಸವು. | ೨೮೨ |
| ೧೨೩ | | ತಿಲಪಾತ್ರ ದಾನವು. | ೨೮೩ |
| ೧೨೪ | | ತುಲಸೀಪತ್ರ ಸಾಲಗ್ರಾಮ ದಾನವು. | ೨೮೪ |
| ೧೨೫ | | ವೇಣೀ ದಾನವು. | ೨೮೫ |
| ೧೨೬ | | ತ್ರಿವೇಣಿಯಲ್ಲಿ ದೇಹತ್ಯಾಗವು. | ೨೮೬ |
| ೧೨೭ | | ತಿಲ ಸ್ನಾನಾದಿಗಳು. | ೨೮೭ |
| ೧೨೮ | | ರಥಸಪ್ತಮಿ. | ೨೮೮ |
| ೧೨೯ | | ಭೀಷ್ಮಾಷ್ಟಮಿಯು. | ೨೮೯ |
| ೧೩೦ | | ಮಾಘ ಪೌರ್ಣಮಿಯ ಕೃತ್ಯಗಳು. | ೨೯೦ |
| ೧೩೧ | | ಶಿವರಾತ್ರಿಯು. | ೨೯೧ |
| ೧೩೨ | | ವ್ರತಪ್ರಯೋಗವು. | ೨೯೩ |
| ೧೩೩ | | ನಾಲ್ಕುಯಾಮದಲ್ಲಿ ನಾಲ್ಕುಪೂಜೆಗಳು. | ೨೯೬ |
| ೧೩೪ | | ಪಾರ್ಥಿವ ಲಿಂಗಪೂಜೆಯು. | ೨೯೮ |
| ೧೩೫ | | ಲಿಂಗವಿಶೇಷಫಲವು. | ೩೦೦ |
| ೧೩೬ | (೧೪) | ಫಾಲ್ಗುಣ ಮಾಸವು. | ೩೦೧ |
| ೧೩೭ | | ಹೋಳಿಕಾನಿರ್ಣಯವು. | ,, |
| ೧೩೮ | | ಭದ್ರಾಮುಖ ಪುಚ್ಛಲಕ್ಷಣವು. | ೩೦೨ |
| ೧೩೯ | | ಹೋಳಿಕಾ ಪೂಜೆಯು. | ೩೦೩ |
| ೧೪೦ | | ವಸಂತಾರಂಭ ಚೂತಪುಷ್ಪಾಶನಾದಿಗಳು. | ೩೦೫ |
| ೧೪೧ | (೧೫) | ಎರಡು ಪರಿಚ್ಛೇದಗಳ ಮಿಶ್ರವಿಷಯಗಳು. | ೩೦೬ |
| ೧೪೨ | | ಚಾಂದ್ರಮಾನ ಸಂವತ್ಸರ ಭೇದಗಳು. | ,, |
| ೧೪೩ | | ಚಾಂದ್ರಾದಿಸಂಕ್ರಾಂತಿ ಪರ್ವಕಾಲವು, | ೩೦೭ |
| ೧೪೪ | | ನವಗ್ರಹ ಸ್ನಾನಗಳು. | ,, |
| ೧೪೫ | | ಗ್ರಹಗಳಿಗೆ ದಾನಗಳು. | ೩೦೮ |
| ೧೪೬ | | ಶನಿ ವ್ರತವು. | ೩೦೯ |
| ೧೪೭ | | ಶನಿ ಸ್ತೋತ್ರವು. | ,, |

ಶ್ರೀಃ.

ಶ್ರೀ ಶಾರದಾಮ್ಬಾಯೈ ನಮಃ

# ಭಾಷಾಮಯಧರ್ಮಸಿನ್ಧುಸಾರಃ.

ಶ್ಲೋ॥ ವನ್ದೇ ಕಾಲಾತ್ಮಕಂ ದೇವಂ ಗ್ರಹೇಶಂ ಕರ್ಮಸಾಕ್ಷಿಣಂ ।
ಲೋಕಸ್ಯ ವ್ಯವಹಾರೋಯಂ ಯೇನ ಸಞ್ಜಾಯತೆನೃಣಾಂ ॥
ನಾರಾಯಣಂ ನಮಸ್ಕೃತ್ಯ ನಾರಾಯಣಮನೀಷಿಣಾ ।
ಕ್ರಿಯತೆ ಧರ್ಮಸಿನ್ಧೋಸ್ತು ಸಾರೊಭಾಷಾಮಯೋಧುನಾ ॥

ಶ್ರೀ ಮದನಂತಭಟ್ಟ ಕುಮಾರ ಶ್ರೀ ಕಾಶೀನಾಥೋಪಾಧ್ಯಾಯನೆಂಬ ಧರ್ಮಜ್ಞನಾದ ನಿಬಂಧನಕಾರನು ಶ್ರೀವಿಠ್ಠಲ ಶ್ರೀ ರುಕ್ಮಿಣಿಯರನ್ನೂ, ಶ್ರೀ ಶಂಕರ ಪಾರ್ವತೀ ವಿಘ್ನೇಶಪಿತಾಮಹ ಸರಸ್ವತಿಯರನ್ನೂ, ಶ್ರೀಲಕ್ಷ್ಮೀ ಗರುಡಾದಿಶೇಷ ಪ್ರದ್ಯುಮ್ನಾಂಜನೇಯರನ್ನೂ, ಸೂರ್ಯಾದಿಗ್ರಹಗಳನ್ನೂ, ವಿದ್ವಜ್ಜನರನ್ನೂ, ಗುರುಗಳನ್ನೂ, ತಾಯಿ ತಂದೆಗಳನ್ನೂ, ಮಾಧವಾಚಾರ್ಯರೇ ಮೊದಲಾದ ಧರ್ಮಜ್ಞರನ್ನೂ, ಅಭಿವಂದಿಸಿ, ಪೂರ್ವ ಧರ್ಮ ಶಾಸ್ತ್ರಗಳನ್ನು ಪರಿಶೀಲನೆ ಮಾಡಿ, ನಿರ್ಣಯ ಸಿಂಧುವಿಗೆ ಅನುಸಾರವಾಗಿ ಮೂಲವನ್ನು ಅನುಸರಿಸಿ, ಸಂಸ್ಕೃತ ವಚನರೂಪವಾಗಿ ಬಾಲಬೋಧೆಗೋಸ್ಕರ ರಚಿಸಿರುವ ಧರ್ಮಸಿಂಧುಸಾರವೆಂಬ ದಿವ್ಯಪ್ರಬಂಧವನ್ನು, ದೊಡ್ಡಬೆಲೆಯ ನಾರಾಯಣ ಶರ್ಮನು, ಸಕಲ ಲೋಕ ವ್ಯವಹಾರಕ್ಕೆ ಮೂಲಕಾರಣನಾಗಿ ಕಾಲಾತ್ಮಕನೆನಿಸಿ ಸರ್ವಗ್ರಹಾಧಿಪತಿಯಾಗಿರುವ ಕರ್ಮ ಸಾಕ್ಷಿಯಾದ ಶ್ರೀ ಸೂರ್ಯ ಭಗವಂತನನ್ನೂ, ಶ್ರೀ ಲಕ್ಷ್ಮೀನಾರಾಯಣರನ್ನೂ, ಅಭಿವಂದಿಸಿ, ಶ್ರೀ ಶಿವಗಂಗಾ ಶ್ರೀಮಠದಲ್ಲಿ ತಪಶ್ಚಕ್ರವರ್ತಿಗಳಾಗಿ ನೆಲೆಗೊಂಡಿರುವ ಶ್ರೀ ಸುಬ್ರಹ್ಮಣ್ಯಾಭಿನವ ಸಚ್ಚಿದಾನಂದ ಭಾರತೀ ಸ್ವಾಮಿಗಳವರಿಂದ ಆಜ್ಞಪ್ತನಾಗಿ ಕನ್ನಡಿಗರ ಉಪಯೋಗಕ್ಕಾಗಿ ದೇಶಭಾಷೆಯಲ್ಲಿ ವಿವರಿಸುತಲಿದಾನೆ.

ಕಾಲವೆಂಬುದು ಸಾಧಾರಣವಾಗಿ ವತ್ಸರ, ಅಯನ, ಋತು, ಮಾಸ, ಪಕ್ಷ, ದಿವಸ, ಎಂದು ಆರು ಬಗೆಯಾಗಿದೆ, ಆವತ್ಸರವು, ಚಾಂದ್ರ, ಸೌರ, ಸಾವನ, ನಾಕ್ಷತ್ರ, ಬಾರ್ಹಸ್ಪತ್ಯ, ಎಂಬದಾಗಿ ಐದು ವಿಧ. ಶುಕ್ಲಪಕ್ಷದ ಪ್ರತಿಪತ್ತು ಮೊದಲುಗೊಂಡು ದರ್ಶದವರೆಗೆ ಚೈತ್ರವೇ ಮೊದಲಾದ ಸಂಜ್ಞೆಗಳುಳ್ಳ ಹನ್ನೆರಡು ತಿಂಗಳುಗಳಿಂದ ಮುನ್ನೂರ ಐವತ್ತು ನಾಲ್ಕು ದಿನಗಳನ್ನೊಳಗೊಂಡು ಮಲಮಾಸವಿದ್ದರೆ ಹದಿಮೂರು ತಿಂಗಳುಗಳುಳ್ಳದ್ದಾಗಿ ಚಾಂದ್ರವತ್ಸರವೆನಿಸಿಕೊಳ್ಳುತ್ತದೆ. ಈ ಚಾಂದ್ರಮಾನಕ್ಕೇ ಪ್ರಭವ, ವಿಭವ, ಶುಕ್ಲ, ಮುಂತಾದ ಅರುವತ್ತು ಹೆಸರುಗಳು ರೂಢವಾಗಿವೆ. ಸೂರ್ಯನು ಮೇಷ ಮುಂತಾದ ಹನ್ನೆರಡು ರಾಶಿಗಳನ್ನು ಕ್ರಮವಾಗಿ ಅನುಭವಿಸಿದರೆ ಮುನ್ನೂರ ಅರವತ್ತೈದು ದಿನಗಳನ್ನೊಳಗೊಂಡು ಸೌರವತ್ಸರವೆನಿಸಿಕೊಳ್ಳುತ್ತದೆ. ಮುನ್ನೂರ ಅರವತ್ತು ದಿವಸಗಳ ಎಣಿಕೆಯಿಂದ ಸಾವನವತ್ಸರವಾಗುವುದು. ಮುಂದೆ ಹೇಳುವ ಹನ್ನೆರಡು ನಾಕ್ಷತ್ರ ಮಾಸಗಳಿಂದ ನಾಕ್ಷತ್ರ ವತ್ಸರವಾಗುತ್ತದೆ, ಇದು ಮುನ್ನೂರ ಇಪ್ಪತ್ತು ನಾಲ್ಕು ದಿವಸಗಳನ್ನೊಳಗೊಂಡಿರುವುದು. ಬೃಹಸ್ಪತಿಯು ಮೇಷ ಮೊದಲಾಗಿರುವ ಯಾವುದಾದರೊಂದು ರಾಶಿಯನ್ನು ಅನುಭವಿಸಿದರೆ ಬಾರ್ಹಸ್ಪತ್ಯ ವತ್ಸರವೆನಿಸುವುದು, ಇದು ಮೂನ್ನೂರ ಅರವತ್ತೊಂದು ದಿವಸಗಳಿಂದ ಪೂರ್ಣವಾಗುವುದು. ಕರ್ಮಾಚರಣೆಯೇ ಮೊದಲಾದ ಸಂಕಲ್ಪದಲ್ಲಿ ಚಾಂದ್ರವತ್ಸರವನ್ನೇ ಸ್ಮರಿಸಬೇಕ (ಉಚ್ಚರಿಸಬೇಕು) ಲ್ಲದೆ ಇತರ ವತ್ಸರವನ್ನು ಸ್ಮರಿಸಕೂಡದು ಇನ್ನು ದಕ್ಷಿಣಾಯನವೆಂತಲೂ, ಉತ್ತರಾಯಣವೆಂತಲೂ, ಅಯನವು ಎರಡು ವಿಧ. ಸೂರ್ಯನು ಕರ್ಕಾಟಕ ರಾಶಿಯನ್ನು ಮೊದಲ್ಗೊಂಡು ಆರು ರಾಶಿಗಳನ್ನು ಅನುಭವಿಸಿದರೆ ದಕ್ಷಿಣಾಯನವಾಗುವುದು ಮೀನಾರಂಭವಾಗಿಯಾಗಲೀ ಮೇಷಾರಂಭವಾಗಿಯಾಗಲೀ ಸೌರಋತುವೆಂತಲೂ, ಚಾಂದ್ರ ಋತುವೆಂತಲೂ, ಋತುವು ಎರಡು ವಿಧ. ಸೂರ್ಯನು ಎರಡು ರಾಶಿಗಳನ್ನು ಅನುಭವಿಸುತ ಬಂದಾಗ ವಸಂತವೇ ಮೊದಲಾದ ಸಂಜ್ಞೆಯುಳ್ಳ ಆರು ಸೌರಋತುಗಳಾಗುವುವು. ಚೈತ್ರಮಾಸ ಮೊದಲುಗೊಂಡು ಎರಡೆರಡು ತಿಂಗಳಿಗೆ ಕ್ರಮವಾಗಿ ವಸಂತಾದಿ ಸಂಜ್ಞೆಯುಳ್ಳ ಚಾಂದ್ರ ಋತುವಾಗುತ್ತದೆ. ಮಲ ಮಾಸದಲ್ಲಿಯಾದರೋ, ಸ್ವಲ್ಪ

ಕಡಮೆ ತೊಂಭತ್ತು ದಿನಗಳಿಂದ ಚಾಂದ್ರ ಋತುವಾಗುವುದು. ಶ್ರೌತ ಸ್ಮಾರ್ತಾದಿ ಕರ್ಮಗಳಲ್ಲಿ ಚಾಂದ್ರ ಋತುವನ್ನೇ ಸ್ಮರಿಸುವದು. ಪ್ರಶಸ್ತ. ಚಾಂದ್ರ, ಸೌರ, ಸಾವನ, ನಾಕ್ಷತ್ರ ಎಂಬದಾಗಿ ಮಾಸವು ನಾಲ್ಕು ಬಗೆ. ಶುಕ್ಲ ಪ್ರತಿಪತ್ತು ಮೊದಲ್ಗೊಂಡು ಅಮಾವಾಸ್ಯೆಯುವರೆಗಾಗಲೀ, ಕೃಷ್ಣಪ್ರತಿಪತ್ತು ಮೊದಲಾಗಿ ಪೂರ್ಣಿಮಾಂತವಾಗಿಯಾಗಲೀ ಚಾಂದ್ರ ಮಾಸವಾಗುವುದು. ಅದರಲ್ಲಿಯೂ ಶುಕ್ಲಾದಿಯೇ ಮುಖ್ಯವಾದದ್ದು. ಕೃಷ್ಣಾದಿಯು ವಿಂಧ್ಯೋತ್ತರದಲ್ಲಿ ಗ್ರಾಹ್ಯವಾದದ್ದು. ಈ ಚೈತ್ರಾದಿ ಸಂಜ್ಞೆಯ ಮಾಸವನ್ನೇ ಕರ್ಮಾದಿಯಲ್ಲಿ ನೆನೆಯಬೇಕು. ಕೆಲವರು ಸೌರಮಾಸಗಳಿಗೆ ಮೀನರಾಶಿಯನ್ನು ಮೊದಲ್ಗೊಂಡೇ ಚೈತ್ರ ಮುಂತಾದ ಸಂಜ್ಞೆಗಳನ್ನು ಹೇಳುತ್ತಾರೆ. ಸೂರ್ಯನು ಸಂಕ್ರಮಿಸುವ ಕಾಲ ಮೊದಲ್ಗೊಂಡು ಉತ್ತರ ಸಂಕ್ರಾಂತಿಯಾಗುವವರೆಗಿನ ಅವಧಿಯುಳ್ಳದ್ದು ಸೌರಮಾನವು. ಮೂವತ್ತು ದಿವಸಗಳಾದರೆ ಸಾವನಮಾಸವೆನಿಸುವುದು. ಚಂದ್ರನು ಅಶ್ವಿನಿ ಮೊದಲಾದ ಇಪ್ಪತ್ತೇಳು ನಕ್ಷತ್ರಗಳನ್ನು ಅನುಭವಿಸಿದರೆ ನಾಕ್ಷತ್ರಮಾಸವಾಗುವುದು. ಪ್ರತಿಪತ್ತು ಮೊದಲು ಪೌರ್ಣಿಮಾಂತದವರೆಗೆ ಕೃಷ್ಣಪಕ್ಷ. ಅರುವತ್ತುಗಳಿಗೆಗಳುಳ್ಳದ್ದು ದಿವಸ. ಇಂತು ಧರ್ಮಸಿಂಧುಸಾರದಲ್ಲಿ ಪ್ರಥಮೋದ್ದೇಶವು.

## ೨—ಸಂಕ್ರಾಂತಿನಿರ್ಣಯ

ಮೇಷರಾಶಿಯಲ್ಲಿ ಸೂರ್ಯಸಂಕ್ರಮಣವಾದರೆ ಪೂರ್ವದಲ್ಲಿಯೂ ಪರದಲ್ಲಿಯೂ ಹದಿನೈದು ಹದಿನೈದು ಗಳಿಗೆಗಳು ಪುಣ್ಯಕಾಲವು ಹತ್ತು ಹತ್ತೆಂದು ಕೆಲವರು. ವೃಷಭಸಂಕ್ರಮಣದೊಳಗೆ ಪೂರ್ವದಲ್ಲಿಯೇ ಹದಿನಾರು ಗಳಿಗೆಗಳು ಪುಣ್ಯಕಾಲವು. ಮಿಥುನದೊಳಗೆ ಪರದಲ್ಲಿ ಹದಿನಾರು ಗಳಿಗೆಗಳು. ಕರ್ಕಾಟಕದೊಳಗೆ ಪೂರ್ವದಲ್ಲಿಯೇ ಮೂವತ್ತು ಗಳಿಗೆಗಳು. ಸಿಂಹದೊಳಗೆ ಪೂರ್ವದಲ್ಲಿ ಹದಿನಾರು. ಕನ್ಯೆಯಲ್ಲಿ ಪರದೊಳಗೆ ಹದಿನಾರು ಗಳಿಗೆಗಳು. ತುಲೆಯೊಳಗೆ ಹಿಂದೂ ಮುಂದೂ ಹದಿನೈದು ಹದಿನೈದು. ಹತ್ತು ಹತ್ತೆಂದು ಕೆಲವರು. ವೃಶ್ಚಿಕದೊಳಗೆ ಪೂರ್ವದಲ್ಲಿ ಇಪ್ಪತ್ತುನಾಲ್ಕು ಗಳಿಗೆಗಳು. ಕುಂಭದೊಳಗೆ ಪೂರ್ವದಲ್ಲಿಯೇ ಹದಿನಾರು. ಮೀನದೊಳಗೆ ಪರದಲ್ಲಿ ಹದಿನಾರು. ಅಸ್ತಮ

ಯಕ್ಕೆ ಎರಡು ಮೂರುಗಳಿಗೆ ಮಾತ್ರ ಉಳಿದಿರುವಾಗ ಮಿಥುನ, ಕನ್ಯ, ಮೀನ, ಧನಸ್ಸು, ಮಕರ, ಇವುಗಳೊಳಗೆ ಯಾವುದಾದರೊಂದು ಸಂಕ್ರಮಣವಾದರೆ ಪೂರ್ವದಲ್ಲಿಯೇ ಪುಣ್ಯಕಾಲವು. ಪ್ರಾತಃಕಾಲ ಎರಡ ಮೂರು ಗಳಿಗೆಗಳೊಳಗೆ ವೃಷಭ, ಸಿಂಹ, ತುಲೆ, ವೃಶ್ಚಿಕ, ಕುಂಭ, ಇವುಗಳಲ್ಲಿ ಯಾವುದಾದರೊಂದು ಸಂಕ್ರಮಣವಾದರೆ ಪರದಲ್ಲಿಯೇ ಪುಣ್ಯ ಕಾಲವು. ಪ್ರಾತಃಕಾಲದಲ್ಲಿ ಸಂಕ್ರಾನ್ತಿಯಾದರೆ ಪೂರ್ವ ದಿನ ದಲ್ಲಿಯೇಪುಣ್ಯಕಾಲವೆಂದು ಕೆಲವರು. ರಾತ್ರಿಯಲ್ಲಿ ಸಕ್ರಾಂತಿಯಾ ದರೆ ಎಂದರೆ ಮಧ್ಯರಾತ್ರಿಗಿಂತಲೂ ಪೂರ್ವದಲ್ಲಿ ಸಂಕ್ರಮಣವಾದರೆ ಪೂರ್ವ ದಿವಸದ ಉತ್ತರಾರ್ಧವು ಪುಣ್ಯಕಾಲ. ಮಧ್ಯರಾತ್ರಿಗಿಂತಲೂ ಪರದಲ್ಲಿ ಸಂಕ್ರಮಣವಾದಲ್ಲಿ ಪರದಿನದ ಪೂರ್ವಾರ್ಧವು ಪುಣ್ಯಕಾಲ. ನಿಶೀಥ ಮಧ್ಯದಲ್ಲಿಯೇ (ನಟ್ಟನಡುವಣ ಇರುಳೊಳಗೆ)ಸಂಕ್ರಮಣವಾ ದರೆ ಪೂರ್ವ ದಿವಸದ ಉತ್ತರಾರ್ಧವೂ ಪರದಿವಸದ ಪೂರ್ವಾರ್ಧವೂಪು ಣ್ಯಕಾಲವು, ಈನಿಯಮವು ಮಕರ ಕರ್ಕಾಟಕಗಳನ್ನು ಬಿಟ್ಟುಉಳಿದ ಎಲ್ಲಾ ರಾಶಿ ಸಂಕ್ರಮಣಗಳಿಗೂ ಲಗತ್ತಾಗತಕ್ಕದ್ದೆಂದು ತಿಳಿಯುವುದು. ಅಯನ ವಿಷಯದಲ್ಲಿಯಾದರೋ ಮಕರದಲ್ಲಿ ರಾತ್ರಿ ಸಂಕ್ರಮಣವಾದರೆ ಯಾವಾಗಲೂ ಪರದಿನದಲ್ಲಿಯೇ ಪುಣ್ಯಕಾಲ. ರಾತ್ರಿಯಲ್ಲಿ ಕರ್ಕಾ ಟಕ ಸಂಕ್ರಮಣವಾದರೆ ಪೂರ್ವದಿನವೇ ಪುಣ್ಯಕಾಲ. ಸೂರ್ಯನು ಅಸ್ತಮಯಿಸಿದ ಮೇಲೆ ಮೂರು ಗಳಿಗೆಯವರೆಗೂ ಸಂಧ್ಯೆಯೆನಿಸಿಕೊ ಳ್ಳುತ್ತದೆ, ಆಗ ಮಕರ ಸಂಕ್ರಮಣವಾದರೆ ಪೂರ್ವದಿನದಲ್ಲಿಯೇ ಪುಣ್ಯ ಕಾಲ. ಸೂರ್ಯೋದಯಕ್ಕಿಂತಲೂ ಪೂರ್ವದಲ್ಲಿ ಮೂರು ಗಳಿಗೆಯವ ರೆಗೆ ಪ್ರಾತಸ್ಸಂಧ್ಯೆ, ಆಗ ಕರ್ಕಾಟಕಸಂಕ್ರಮಣವಾದರೆ ಪರದಿನದಲ್ಲಿ ಪುಣ್ಯಕಾಲವೆಂದರಿಯುವುದು. ಸಂಧ್ಯಾಕಾಲದ ವಿಶೇಷ ಸಂಗತಿಯು ಜ್ಯೋತಿಶ್ಶಾಸ್ತ್ರದಲ್ಲಿ ಪ್ರಸಿದ್ಧವಾಗಿದೆ.

## ಸಂಕ್ರಮಣ ಕಾಲದಲ್ಲಿನ ದಾನವಿಷಯಗಳು.

ಮೇಷಸಂಕ್ರಮಣದಲ್ಲಿ ಮೇಕೆಯ ದಾನವು ಪ್ರಶಸ್ತ, ವೃಷಭದಲ್ಲಿ ಗೋದಾನ, ಮಿಥುನದಲ್ಲಿ ವಸ್ತ್ರಾನ್ನದಾನ, ಕರ್ಕಾಟಕದಲ್ಲಿ ತುಪ್ಪ ಮತ್ತು ಆಕಳುಗಳ ದಾನ, ಸಿಂಹದಲ್ಲಿ ಛತ್ರ ಮತ್ತು ಸುವರ್ಣ ದಾನ, ಕನ್ಯೆಯಲ್ಲಿ ಗೃಹ ವಸ್ತ್ರದಾನ, ತುಲಾ ಸಂಕ್ರಮಣದಲ್ಲಿ ಎಳ್ಳು, ಹಾಲು

(ರಸವರ್ಗ). ವೃಶ್ಚಿಕದಲ್ಲಿ ದೀಪದಾನವನ್ನು ಮಾಡಬೇಕು. ಧನುಸ್ಸಿನಲ್ಲಿ ವಸ್ತ್ರ ಮತ್ತು ಯಾನ. ಮಕರದಲ್ಲಿ ಕಾಷ್ಠ (ಕಟ್ಟಿಗೆ) ಅಗ್ಗಿಷ್ಟಿಕೆ, ಕುಂಭದೊಳಗೆ ಆಕಳು, ನೀರು, ಹಾಲು. ಮೀನದಲ್ಲಿ ಭೂಮಿ (ಪೀಠ) ಪುಷ್ಪಹಾರ. ಹೀಗೆಯೇ ಇತರದಾನಗಳನ್ನೂ ತಿಳಿದುಕೊಳ್ಳತಕ್ಕದು. ಮಕರ, ಮೇಷ, ತುಲ, ಈ ಸಂಕ್ರಾಂತಿಗಳೊಳಗೆ ಹಿಂದೆ, ಮೂರು ಅಥವಾ ಒಂದುರಾತ್ರಿಯಾದರೂ ಉಪವಾಸಮಾಡಿ ಸ್ನಾನದಾನಾದಿಗಳನ್ನು ಮಾಡಬೇಕು. ಕಡೆಯ ಉಪವಾಸವು ಸಂಕ್ರಮಣವುಳ್ಳ ದಿವಸದ ಅಹೋರಾತ್ರಿಗಳಲ್ಲಾಗಲಿ, ಪುಣ್ಯಕಾಲವಿರುವ ಅಹೋರಾತ್ರಿಯಲ್ಲಾಗಲೀ ಹೇಗೆ ಸಂಭವಿಸುವುದೋ ಹಾಗೆ ಮಾಡಬೇಕು. ಈಯುಪವಾಸವು ಪುತ್ರವಂತನಲ್ಲದ ಪುರುಷನು ಪಾಪಪರಿಹಾರಕ್ಕಾಗಿ ಮಾಡಬೇಕು, ಆದ್ದರಿಂದ ಇದು ಕಾಮ್ಯವೇ ಹೊರತು ನಿತ್ಯವಲ್ಲ. ಎಲ್ಲಾ ಸಂಕ್ರಮಣಗಳಲ್ಲಿಯೂ ಪಾರ್ವಣ (ಪಿಂಡ) ವಿಲ್ಲದ ಶ್ರಾದ್ಧವನ್ನೂ ಮಾಡಬೇಕು. ಅಯನದ್ವಯದಲ್ಲಿ ಇದು ನಿತ್ಯ. ಸಂಕ್ರಾಂತಿಗಳಲ್ಲಿ ದಾನಗಳನ್ನು ಹೇಗೆ ಮಾಡಬೇಕೋ ಹಾಗೆಯೇ ಆಯಾಸಂಕ್ರಮಣಗಳಗಿಂತ ಮೊದಲು ಅಯನಾಂಶ ಪ್ರವೃತ್ತಿಯಲ್ಲಿಯೂ ಆಯಾಸಂಕ್ರಾಂತಿಗಳಿಗುಚಿತವಾದ ಸ್ನಾನದಾನಾದಿಗಳನ್ನು ಮಾಡತಕ್ಕದ್ದು. ಅಯನಾಂಶಗಳು ಜ್ಯೋತಿಶ್ಶಾಸ್ತ್ರದಲ್ಲಿ ಪ್ರಸಿದ್ಧಗಳಾಗಿವೆ.

## ಅಯನಾಂಶ ನಿರ್ಣಯ.

ಆ ಅಯನಾಂಶಗಳು ಈಗ ಎಂದರೆ ೧೭೨೨ ನೆಯ ಶಾಲಿವಾಹನ ಶಕೆಯಲ್ಲಿ ಇಪ್ಪತ್ತೊಂದು ಅಯನಾಂಶಗಳು. ಆದುದರಿಂದ ಇಪ್ಪತ್ತೊಂದನೆಯ ದಿವಸದಲ್ಲಿ ಮೊದಲು ಅಯನಾಂಶ ಪರ್ವಕಾಲವೆಂದು ಪರ್ಯವಸಾನವಾಗುತ್ತದೆ, ಹೀಗೆ ಶಕೆಯತಾರತಮ್ಯದಿಂದ ಊಹಿಸಿ ತಿಳಿದುಕೊಳ್ಳತಕ್ಕದ್ದು. ವೃಷಭ, ಸಿಂಹ, ವೃಶ್ಚಿಕ, ಕುಂಭಗಳು ವಿಷ್ಣುಪದಸಂಜ್ಞೆಯುಳ್ಳವುಗಳು, ಮಿಥುನ, ಕನ್ಯ, ಧನುಸ್ಸು, ಮೀನಸಂಕ್ರಾನ್ತಿಗಳು ಷಡಶೀತಿಸಂಜ್ಞೆಯನ್ನು ಪಡೆದಿವೆ. ಮೇಷತುಲಗಳಿಗೆ ವಿಷುವಸಂಜ್ಞೆಯು, ಕರ್ಕಮಕರಗಳಿಗೆ ಅಯನವೆಂದು ಹೆಸರು. ಈ ನಾಲ್ಕು ವಿಧಗಳಲ್ಲಿ ಮುಂದಮುಂದಣದು ಪುಣ್ಯಾಧಿಕ್ಯವುಳ್ಳದ್ದು.

## ಸಂಕ್ರಾನ್ತಿತ್ಯಾಜ್ಯಕಾಲ

ಮಂಗಳಗಳಲ್ಲಿ (ಶುಭಕಾರ್ಯಗಳೊಳಗೆ) ಎಲ್ಲಾ ಸಂಕ್ರಮಣಗಳಲ್ಲಿಯೂ ಸರಿಯಾಗಿ ಹಿಂದೆಯೂ ಮುಂದೆಯೂ ಹದಿನಾರು ಹದಿನಾರು ಗಳಿಗೆಗಳನ್ನು ಬಿಡಬೇಕು. ಚಂದ್ರಾದಿಸಂಕ್ರಾನ್ತಿಗಳಲ್ಲಿಯಾದರೋ ಹಿಂದೆಯೂ ಮುಂದೆಯೂ ಸೇರಿ ಕ್ರಮವಾಗಿ ಎರಡು, ಒಂಭತ್ತು, ಎರಡು, ಎಂಭತ್ತು ನಾಲ್ಕು, ಆರು, ಒಂದನೂರ ಐವತ್ತು, ಗಳಿಗೆಗಳಷ್ಟು ಬಿಡತಕ್ಕದ್ದು. ರಾತ್ರಿಯಲ್ಲಿ ಸಂಕ್ರಮಣವಾದರೆ ಗ್ರಹಣಕಾಲದಂತೆ ರಾತ್ರಿಯಲ್ಲಿಯೇ ಸ್ನಾನದಾನಾದಿಗಳನ್ನು ಮಾಡಬೇಕೆಂದುಕೆಲವರು. ರಾತ್ರಿಯಲ್ಲಿ ಸಂಕ್ರಮಣವಾದರೂ ಹಗಲಿನಲ್ಲಿಯೇ ಸ್ನಾನ ಮುಂತಾದದ್ದನ್ನು ಆಚರಿಸಬೇಕು ರಾತ್ರಿಯಲ್ಲಿ ಕೂಡದು, ಎಂಬುದು ಸರ್ವಸಮ್ಮತವಾಗಿದೆ. ಬಹುದೇಶಾಚಾರವೂ ಹೀಗೆಯೇ ಇದೆ. ಯಾವನ ಜನ್ಮ ನಕ್ಷತ್ರದಲ್ಲಿ ಸೂರ್ಯಸಂಕ್ರಮಣವಾಗುವುದೋ ಅಂಥವನಿಗೆ ಧನಕ್ಷಯಾದಿಪೀಡೆಯ ಉಂಟಾಗುತ್ತದೆ,ಅದರ ಪರಿಹಾರಕ್ಕಾಗಿ ತಾವರೆಯೆಲೆಯಿಂದೊಡಗೂಡಿದ ಜಲದಿಂದ ಸ್ನಾನಮಾಡಬೇಕು. ವಿಷುವಾಯನಗಳೊಳಗೆ ಹಗಲಿನಲ್ಲಿ ಸಂಕ್ರಮಣವಾದರೆ ಪೂರ್ವಾಪರರಾತ್ರಿಗಳಲ್ಲಿಯೂ, ಆ ಹಗಲಿನಲ್ಲಿಯೂ, ಅಧ್ಯಯನಾಧ್ಯಾಪನಗಳನ್ನು ವರ್ಜಿಸಬೇಕು. ರಾತ್ರಿಸಂಕ್ರಮಣವಾದರೆ ಪೂರ್ವಾಪರದಿನಗಳಲ್ಲಿಯೂ ಆರಾತ್ರಿಯಲ್ಲಿಯೂ ಬಿಡಬೇಕು. ಹೀಗೆ ಸಂಕ್ರಾಂತಿಯೆಂಬುದು ಪಕ್ಷಿಣಿಯೆನಿಸಿಕೊಳ್ಳುತ್ತದೆ. ಹನ್ನೆರಡು ಯಾಮಗಳವರೆಗೂ ಅನಧ್ಯಾಯ ಮುಂತಾದದ್ದೆಂದು ತಾತ್ಪರ್ಯವು. ಇತರ ವಿಶೇಷಸಂಗತಿಯು ಅಯನ ಸಂಕ್ರಾಂತಿಯಲ್ಲಿ ವ್ಯಕ್ತವಾಗುತ್ತದೆ. ಇಂತು ಸಂಕ್ರಾಂತ್ಯುದ್ದೇಶವು ಎರಡನೆಯದು—೨.

## ೩. ಮಲಮಾಸವಿಚಾರವು.

೩. ಅಧಿಕಮಾಸವೆಂತಲೂ. ಕ್ಷಯಮಾಸವೆಂತಲೂ, ಮಲಮಾಸವು ಎರಡುವಿಧ. ಸಂಕ್ರಾನ್ತಿರಹಿತವಾದ ಮಾಸವೇ ಅಧಿಕಮಾಸ. ಸಂಕ್ರಾನ್ತಿದ್ವಯಯುಕ್ತವಾದ ಮಾಸವು ಕ್ಷಯಮಾಸವೆನಿಸುವುದು. ಪೂರ್ವಾಧಿಮಾಸಕ್ಕಿಂತಲೂ ಉತ್ತರವಾದ ಅಧಿಕಮಾಸವು ಮೂವತ್ತನೆಯ ಮಾಸವೊದಲು ಮೂವತ್ತೆಂಟನೆಯ ಅಥವಾ ಮೂವತ್ತೊಂಭತ್ತನೆಯದರಲ್ಲೊಂದಾಗುವದು. ಕ್ಷಯಮಾಸವಾದರೋ ನೂರನಲವ

ತ್ತೊಂದು ವರ್ಷಗಳಿಗಾಗಲೀ, ಹತ್ತೊಂಭತ್ತು ವರ್ಷಗಳಿಗಾಗಲೀ ಆ ಗುತ್ತದೆ. ಅಧಿಕಮಾಸದಂತೆ ಅಲ್ಪಕಾಲದಿಂದ ಸಂಭವಿಸುವುದಿಲ್ಲ. ಕ್ಷಯಮಾಸವು ಕಾರ್ತಿಕ, ಮಾರ್ಗಶೀರ್ಷ, ಪೌಷಮಾಸಗಳಲ್ಲೊಂದಾಗುವದಲ್ಲದೆ ಮತ್ತೊಂದಾಗುವುದಿಲ್ಲ. ಯಾವ ವರ್ಷದಲ್ಲಿ ಕ್ಷಯಮಾಸವೋ ಆ ವರ್ಷದಲ್ಲಿ ಅಧಿಕಮಾಸದ್ವಯವು. ಕ್ಷಯಮಾಸಕ್ಕಿಂತಲೂ ಮೊದಲು ಒಂದು ಅಧಿಕಮಾಸವು, ಕ್ಷಯಮಾಸಾನಂತರದಲ್ಲಿ ಒಂದು ಅಧಿಕಮಾಸವು. ಅಧಿಕಮಾಸೋದಾಹರಣೆ—ಚೈತ್ರಾಮಾವಾಸ್ಯೆಯಲ್ಲಿ ಮೇಷಸಂಕ್ರಮಣವು, ಬಳಿಕ ಶುಕ್ಲಪ್ರತಿಪತ್ತು ಮೊದಲ್ಗೊಂಡು ಅಮಾವಾಸ್ಯೆಯವರೆಗೂ ಸಂಕ್ರಾಂತಿ ಯಿಲ್ಲವು, ಆ ಬಳಿಕ ಶುಕ್ಲಪ್ರತಿಪತ್ತಿನಲ್ಲಿ ವೃಷಭಸಂಕ್ರಮಣವು, ಹೀಗೆ ಸಂಕ್ರಾಂತಿರಹಿತವಾದ ಮಾಸವು ಅಧಿಕ ವೈಶಾಖ ಸಂಜ್ಞೆಯುಳ್ಳದ್ದು. ವೃಷಭ ಸಂಕ್ರಾನ್ತಿ ಯಿಂದೊಡಗೂಡಿದ್ದಾದರೋ ಶುದ್ಧವೈಶಾಖಸಂಜ್ಞೆಯುಳ್ಳದ್ದು. ಕ್ಷಯಮಾಸೋದಾಹರಣೆ--ಭಾದ್ರಪದ ಕೃಷ್ಣಾಮಾವಾಸ್ಯೆಯಲ್ಲಿ ಕನ್ಯಾಸಂಕ್ರಮಣವು, ಆಮೇಲೆ ಆಶ್ವಿನವು ಅಧಿಕಮಾಸವು, ಶುದ್ಧಾಶ್ವಿನ ಪ್ರತಿಪತ್ತಿನಲ್ಲಿ ತುಲಾಸಂಕ್ರಮಣವು, ಕಾರ್ತಿಕ ಶುಕ್ಲ ಪ್ರತಿಪತ್ತಿನಲ್ಲಿ ಧನುಸ್ಸಂಕ್ರಮಣವು, ಅದೇಮಾಸದೊಳಗೆ ಅಮಾವಾಸ್ಯೆಯಲ್ಲಿ ಮಕರಸಂಕ್ರಾನ್ತಿಯು ಹೀಗೆ ಧನುರ್ಮಕರ ಸಂಕ್ರಾನ್ತಿದ್ವಯಯುಕ್ತವಾದ ಒಂದು ಮಾಸವು ಕ್ಷಯಮಾಸಸಂಜ್ಞೆಯುಳ್ಳದ್ದು. ಅದು ಮಾರ್ಗಶೀರ್ಷ ಪೌಷಗಳೆಂಬ ಮಾಸದ್ವಯಾತ್ಮಕವಾಗಿರುವ ಒಂದು ಮಾಸವೆಂದು ತಿಳಿಯತಕ್ಕದ್ದು ಆ ಮಾಸದ ಪ್ರತಿಪದಾದಿ ತಿಥಿಗಳೊಳಗೆ ಪೂರ್ವಾರ್ಧವು ಮಾರ್ಗಶೀರ್ಷಮಾಸವೆಂತಲೂ, ಉತ್ತರಾರ್ಧವು ಪೌಷಮಾಸವೆಂತಲೂ, ಹೀಗೆಎಲ್ಲತಿಥಿಗಳಿಗೂ ಮಾಸದ್ವಯಾತ್ಮಕತ್ವವೆಂದು ಅರಿಯುವುದು. ಈ ಮಾಸದೊಳಗೆ ತಿಥಿಯಪೂರ್ವಾರ್ಧದೊಳಗೆ ಮೃತನಾದವನಿಗೆ ಮಾರ್ಗಶೀರ್ಷಮಾಸದಲ್ಲಿ ಪ್ರತ್ಯಾಬ್ದಿಕಶ್ರಾದ್ಧವನ್ನೂ, ಆಯಾತಿಥಿಯ ಉತ್ತರಾರ್ಧದಲ್ಲಿ ಮೃತನಾದವನಿಗೆ ಪೌಷಮಾಸದಲ್ಲೆಂತಲೂ ನಿರ್ಣಯ. ಹೀಗೆಯೇ ಜನನದಲ್ಲಿ ವರ್ಧಾಪನಾದಿ ವಿಧಿಯನ್ನು ಆಚರಿಸತಕ್ಕದ್ದು. ಆಮೇಲೆ ಮಾಘಾಮಾವಾಸ್ಯೆಯಲ್ಲಿ ಕುಮ್ಭಸಂಕ್ರಮಣವು, ಬಳಿಕ ಫಾಲ್ಗುಣವು ಅಧಿಕಮಾಸವು, ಶುದ್ಧಫಾಲ್ಗುಣ ಶುಕ್ಲಪ್ರತಿಪತ್ತಿನಲ್ಲಿ

ಮೀನಸಂಕ್ರಮಣವು, ಹೀಗೆ ಪೂರ್ವಾಪರಾಧಿಕ ಮಾಸದ್ವಯದಿಂದೊಡ ಗೂಡಿರುವ ಕ್ಷಯಮಾಸವು ಯಾವವರ್ಷದಲ್ಲಿ ಒದಗುವುದೋ ಆಗ ಹದಿ ಮೂರು ತಿಂಗಳುಗಳರೂಪವಾಗಿ ಸ್ವಲ್ಪಕಡಮೆ ಮುನ್ನೂರುತೊಂಭ ತ್ತು ದಿನಗಳಿಂದ ವರ್ಷವಾಗುವುದು, ಅದರಲ್ಲಿ ಕ್ಷಯಮಾಸಕ್ಕಿಂತಲೂ ಮೊದಲನೆಯದಾದ ಅಧಿಕಮಾಸವು ಸಂಸರ್ಪ ಸಂಜ್ಞೆಯುಳ್ಳದ್ದು. ಸ ರ್ವಕರ್ಮಗಳಿಗೂ ಅರ್ಹವಾದದ್ದು. ಅದರಲ್ಲಿ ಶುಭಕರ್ಮಗಳನ್ನೂ ಬಿಡಕೂಡದು. ಕ್ಷಯಮಾಸವಾದರೋ ಅಂಹಸ್ಪತಿ ಸಂಜ್ಞೆಯುಳ್ಳದ್ದು, ಅದರ ಮುಂದೆ ಬರುವ ಅಧಿಕ ಮಾಸವಾದರೋ ಸರ್ವಕರ್ಮಗಳಲ್ಲಿ ಯೂ ತ್ಯಾಜ್ಯವಾದದ್ದು. ಹೀಗೆಯೇ ಮೂರುವರ್ಷಗಳೊಳಗೆ ಸಂಭ ವಿಸುವ ಅಧಿಕಮಾಸವೂ ವರ್ಜ್ಯವೆಂದು ತಿಳಿಯತಕ್ಕದ್ದು.

೪. ವರ್ಜ್ಯಾವರ್ಜ್ಯನಿರ್ಣಯ.

೪ ಅನನ್ಯಗತಿಕವಾದ (ಬೇರೆ ದಾರಿಯಿಲ್ಲದ) ನಿತ್ಯನೈಮಿತ್ತಿಕ ಕಾಮ್ಯಕರ್ಮಗಳನ್ನು ಅಧಿಕಮಾಸಕ್ಷಯಮಾಸಗಳಲ್ಲಿಯೂ ಆಚರಿಸತ ಕ್ಕದ್ದು. ಸಗತಿಕವಾದ (ಅವಕಾಶವುಳ್ಳ) ನಿತ್ಯನೈಮಿತ್ತಿಕ ಕಾಮ್ಯಕ ರ್ಮಗಳನ್ನು ಬಿಡಬೇಕು. ಹೇಗೆಂದರೆ-ಸಂಧ್ಯಾಗ್ನಿಹೋತ್ರಾದಿಗಳು ನಿ ತ್ಯಗಳು, ಗ್ರಹಣಸ್ನಾನಾದಿಗಳು ನೈಮಿತ್ತಿಕಗಳು, ಕಾರೀರ್ಯಾದಿಗಳು (ಮಳೆಯುಬಾರದಿದ್ದಾಗ ಮಾಡುವಕರ್ಮ) ರಕ್ಷಸ್ಸಿನಿಂದ ಹಿಡಿಯಲ್ಪಟ್ಟ ವರ ಸಂರಕ್ಷಣೆಗಾಗಿ ಆಚರಿಸುವರಕ್ಷೋಘ್ನೇಷ್ಟ್ಯಾದಿಕಾಮ್ಯಗಳೂ ಮಲಮಾಸದಲ್ಲಿಯೂ ಮಾಡಲ್ಪಡತಕ್ಕವುಗಳೇ. ಜ್ಯೋತಿಷ್ಟೋಮಾದಿ ನಿತ್ಯಕರ್ಮಗಳನ್ನೂ, ಜಾತೇಷ್ಟ್ಯಾದಿನೈಮಿತ್ತಿಕ ಕರ್ಮವನ್ನೂ, ಪುತ್ರ ಕಾಮೇಷ್ಟ್ಯಾದಿ ಕಾಮ್ಯಕರ್ಮವನ್ನೂ, ಮಲಮಾಸಾನಂತರದಲ್ಲಿ ಶು ದ್ಧಮಾಸದೊಳಗೇ ಆಚರಿಸಬೇಕು. ಶುದ್ಧಮಾಸದಲ್ಲಿ ಆರಂಭಿಸಿ ದ್ದರೆ ಮಲಮಾಸದಲ್ಲಿಯೂ ಆಚರಿಸಬಹುದು. ನೂತನಾರಂಭವೂ ಸಮಾಪ್ತಿಯೂ ಮಾಡತಕ್ಕದ್ದಲ್ಲ. ಪೂಜಾಲೋಪಾದಿನಿಮಿತ್ತಕವಾಗಿ ರುವ ಪುನರ್ಮೂರ್ತಿಪ್ರತಿಷ್ಠೆಯನ್ನೂ, ಗರ್ಭಾದಾನಾದ್ಯನ್ನಪ್ರಾಶನಾಂ ತ ಸಂಸ್ಕಾರಗಳನ್ನೂ, ಕಾಲಪ್ರಾಪ್ತಗಳಾಗಿರುವ ಅನನ್ಯಗತಿಗಳಾ ದವುಗಳನ್ನೂ, ಜ್ವರಾದಿಶಾಂತಿ ಕರ್ಮವನ್ನೂ, ಅಲಭ್ಯಯೋಗವುಳ್ಳ ಶ್ರಾದ್ಧವ್ರತಾದಿಗಳನ್ನೂ, ನೈಮಿತ್ತಿಕ ಪ್ರಾಯಶ್ಚಿತ್ತ ಕರ್ಮವನ್ನೂ

ನಿತ್ಯಶ್ರಾದ್ಧವನ್ನೂ, ಊನಮಾಸಿಕಾದಿ ಶ್ರಾದ್ಧಗಳನ್ನೂ, ದರ್ಶಶ್ರಾದ್ಧವನ್ನೂ, ಮಲಮಾಸದಲ್ಲಿಯೂ ಆಚರಿಸಬಹುದು. ಚೈತ್ರ ಮೊದಲಾದ ಮಲಮಾಸದೊಳಗೆ ಮೃತರಾದವರಿಗೆ ಬಹುಕಾಲದಮೇಲೆ ಬಂದಾನೊಂದು ಸಮಯದಲ್ಲಿ ಅದೇ ಚೈತ್ರಾದಿಮಾಸವು ಮಲಮಾಸವಾಗಿ ಬದಗಿದರೆ ಮಲಮಾಸದಲ್ಲಿಯೇ ಪ್ರತಿಸಾಂವತ್ಸರಿಕಶ್ರಾದ್ಧವನ್ನು ಮಾಡಬೇಕು. ಚೈತ್ರಾದಿ ಶುದ್ಧಮಾಸಗಳೊಳಗೆ ಮೃತರಾದವರಿಗಾದರೋ ಪ್ರತ್ಯಾಬ್ದಿಕಶ್ರಾದ್ಧವನ್ನು ಮಲಮಾಸದಲ್ಲಿ ಮಾಡಕೂಡದು. ಶುದ್ಧವಾಗಿರುವ ಚೈತ್ರಾದಿ ಮಾಸಗಳಲ್ಲಿಯೇ ಮಾಡಬೇಕು. ಶುದ್ಧಮಾಸದಲ್ಲಿ ಮೃತರಾದವರಿಗೆ ಪ್ರಥಮಾಬ್ದಿಕವನ್ನು ಮಲಮಾಸದಲ್ಲಿಯೇ ಮಾಡಬೇಕಲ್ಲದೆ ಶುದ್ಧಮಾಸದಲ್ಲಿ ಕೂಡದು. ದ್ವಿತೀಯಾಬ್ದಿಕವನ್ನು ಶುದ್ಧಮಾಸ ದಲ್ಲಿಯೇ ಮಾಡತಕ್ಕದ್ದು. ಏಕಾದಶಾಹಾಂತಕರ್ಮವನ್ನೂ, ಸಪಿಂಡೀಕರ್ಮವನ್ನೂ ಮಲಮಾಸದಲ್ಲಿಯಾದರೂ ಮಾಡತಕ್ಕದ್ದೇ. ದ್ವಿತೀಯಮಾಸಿಕಾದಿ ಶ್ರಾದ್ಧಗಳನ್ನು ಮಲಮಾಸದಲ್ಲಿಯೂ, ಶುದ್ಧಮಾಸದಲ್ಲಿಯೂ; ಆವೃತ್ತಿಯಿಂದ ಎರಡು ಸಾರಿ ಮಾಡಬೇಕು. ಏವಂಚ(ಹೀಗಾದಬಳಿಕ)ಯಾವಾಗಲಾದರೂ ಹನ್ನೆರಡನೆಯ ಮಾಸಿಕವು ಅಧಿಕಮಾಸದಲ್ಲಿ ಪ್ರಾಪ್ತವಾದರೆ ಅದನ್ನು ಮಲಮಾಸದಲ್ಲಿಯೂ ಅಧಿಕಮಾಸದಲ್ಲಿಯೂ ಎರಡು ಸಾರಿ ಮಾಡಿ ಊನಾಬ್ದಿಕಕಾಲದಲ್ಲಿ (೩೫೫ ರಿಂದ೩೬೦ ರೊಳಗೆ) ಊನಾಬ್ದಿಕವನ್ನು ಮಾಡಿ ಹದಿನಾಲ್ಕನೆಯ ತಿಂಗಳಲ್ಲಿ ಪ್ರಥಮಾಬ್ದಿಕವನ್ನು ಮಾಡಬೇಕು. ಯಾವ ವರ್ಷದಲ್ಲಿ ಕ್ಷಯಮಾಸವಾದಕೂಡಲೇ ಅಧಿಕಮಾಸವು ಬರುವುದೋ ಹೇಗೆಂದರೆ-ಕಾರ್ತಿಕಮಾಸವು ಅಧಿಕಮಾಸ, ಅದರ ಮುಂದಿನ ಮಾಸವು ವೃಶ್ಚಿಕ ಧನುಸ್ಸಂಕ್ರಾಂತಿಗಳಿಂದೊಡಗೂಡಿದ ಕ್ಷಯಸಂಜ್ಞೆಯುಳ್ಳಮಾಸವು,ಆಗ,ಕಾರ್ತಿಕಮಾಸದಲ್ಲಿನ ಪ್ರತ್ಯಾಬ್ದಿಕವನ್ನು ಪೂರ್ವದ ಅಧಿಕಮಾಸದಲ್ಲಿಯೂ ಮುಂದಿನದಾದ ಕ್ಷಯಮಾಸದಲ್ಲಿಯೂ ಮಾಡಬೇಕು. ಯಾವಾಗ ಕ್ಷಯಮಾಸದ ಹಿಂದೆ ಅಧಿಕಮಾಸವೋ, ಹೇಗೆಂದರೆ-ಆಶ್ವಯುಜವು ಅಧಿಕಮಾಸವು, ಮಾರ್ಗಶೀರ್ಷವು ಕ್ಷಯವು, ಆಗಲೂ ಆಶ್ವಯುಜ ಮಾಸಗತವಾದ ಶ್ರಾದ್ಧವನ್ನು ಅಧಿಕದಲ್ಲಿಯೂ, ಶುದ್ಧದಲ್ಲಿಯೂ ಆಶ್ವಯುಜದಲ್ಲಿ ಮಾಡಬೇಕು. ಈ ಎರಡೂ ಕರ್ಮಾರ್ಹಗಳೆಂದು ತೋ

ರುತ್ತದೆ. (ಇದು ಗ್ರಂಥಕರ್ತ್ತನ ಅಭಿಪ್ರಾಯ) ಹಿಂದಿರುವ ಕ್ಷಯಮಾಸಗತವಾದ ಆಬ್ದಿಕವನ್ನಾದರೋ ಕ್ಷಯಮಾಸದಲ್ಲಿಯೇ ಮಾಡಬೇಕು. ಕಡೆಗೆ ಪೂರ್ವೋಕ್ತವಾದ ಮಾರ್ಗಶೀರ್ಷ ಕ್ಷಯೋದಾಹರಣೆಯಲ್ಲಿ ಮಾರ್ಗಶೀರ್ಷಗತವಾದ ಮತ್ತು ಪೌಷಗತವಾದ ಆಬ್ದಿಕವನ್ನೂ ಒಂದೇ ತಿಂಗಳೊಳಗೆ ತಿಥಿಯ ಪೂರ್ವಾರ್ಧಾದಿ ವಿಭಾಗವಿಲ್ಲದೇನೇ ಮಾಡಬೇಕೆಂದು ಪರ್ಯವಸಾನವಾಗುತ್ತದೆ.

### ೫. ಮಲಮಾಸವರ್ಜ್ಯಗಳು.

೫. ಉಪಾಕರ್ಮೋತ್ಸರ್ಜನೆಗಳು, ಅಷ್ಟಕಾಶ್ರಾದ್ಧಗಳು, ಅಧಿಕದಲ್ಲಿ ಬಿಡಲ್ಪಡತಕ್ಕವುಗಳು. ಚೂಡಾಕರ್ಮ, ಮೌಂಜೀಬಂಧ, ವಿವಾಹ, ತೀರ್ಥಾದಿಯಾತ್ರೆ, ವಾಸ್ತುಕರ್ಮ, ಗೃಹಪ್ರವೇಶ, ದೇವಪ್ರತಿಷ್ಠೆ, ಕೂಪಾರಾಮಾದ್ಯುತ್ಸರ್ಗ, ನೂತನವಸ್ತ್ರಾಲಂಕಾರಧಾರಣ, ತುಲಾಪುರುಷಾದಿ ಮಹಾದಾನಗಳು, ಯಜ್ಞಕರ್ಮ, ಆಧಾನ, ಅಪೂರ್ವತೀರ್ಥದೇವತಾದರ್ಶನ, ಸನ್ಯಾಸ, ಕಾಮ್ಯವೃಷೋತ್ಸರ್ಗ, ರಾಜಾಭಿಷೇಕ, ವ್ರತಗಳು, ಸಗತಿಕವಾದ (ಅವಕಾಶವುಳ್ಳ) ಅನ್ನಪ್ರಾಶನ, ಸಮಾವರ್ತನ, ಅತಿಕ್ರಾಂತನಾಮಕರ್ಮ ಮುಂತಾದ ಸಂಸ್ಕಾರಗಳು, ಪವಿತ್ರಾರೋಪಣ, ದಮನಾರ್ಪಣ, ಶ್ರವಣಾಕರ್ಮ, ಸರ್ಪಬಲ್ಯಾದಿಪಾಕಸಂಸ್ಥಗಳು, ಶಯನಪರಿವರ್ತ್ತನಾದ್ಯುತ್ಸವ, ಶಪಥದಿವ್ಯಾದಿಕರ್ಮ (ಪ್ರಮಾಣಮಾಡುವುದು) ಈ ಮುಂತಾದುವುಗಳನ್ನು ಮಲಮಾಸದಲ್ಲಿ ಬಿಡಬೇಕು. ನೈಮಿತ್ತಿಕಗಳಾದ ರಜೋದರ್ಶನಶಾಂತಿ, ವಿಚ್ಛಿನ್ನಾಧಾನ, ಪುನಃಪ್ರತಿಷ್ಠಾದಿಗಳು, ಇಂಥವುಗಳನ್ನು, ಅವುಗಳು ಸಂಭವಿಸಿದಕೂಡಲೇ ಮಾಡುವುದಾದರೆ ಆಗ ಮಲಮಾಸಾದಿದೋಷವಿಲ್ಲವು. ಆಯಾ ಕಾಲಗಳು ಅತಿಕ್ರಮಿಸಿದರೆ ಶುದ್ಧಮಾಸದಲ್ಲಿಯೇ ಮಾಡಬೇಕು. ದುರ್ಭಿಕ್ಷಸಂಕಟದಲ್ಲಿ ಆಗ್ರಯಣವನ್ನು ಮಲಮಾಸದಲ್ಲಿಮಾಡಬೇಕು, ಹಾಗಿಲ್ಲದಿದ್ದರೆ ಶುದ್ಧದಲ್ಲಿಯೇ ಮಾಡತಕ್ಕದ್ದು. ಯುಗಾದಿ ಮನ್ವಾದಿಶ್ರಾದ್ಧಗಳಿಗೆ ಮಾಸದ್ವಯದಲ್ಲಿಯೂ ಆವೃತ್ತಿಯುಂಟು. ಕ್ಷಯಮಾಸದ ಹಿಂದಣ ಅಧಿಕಮಾಸವು ಸಂಸರ್ಪಸಂಜ್ಞೆಯುಳ್ಳದ್ದೆಂದು ಹಿಂದೆ ಹೇಳಿದೆ. ಅದರಲ್ಲಿ ಚೂಡಾಕರ್ಮ, ವ್ರತಬಂಧ, ವಿವಾಹ, ಅಗ್ನ್ಯಾಧಾನ, ಯಜ್ಞ,

ಉತ್ಸವ, ಮಹಾಲಯ, ರಾಜಾಭಿಷೇಕ, ಇವುಗಳನ್ನು ಮಾತ್ರವೇ ಬಿಡಬೇಕು. ಇತರ ಕರ್ಮಗಳನ್ನು ಬಿಡಕೂಡದು. ಅಪೂರ್ವ ವ್ರತಾರಂಭವೂ, ವ್ರತಸಮಾಪ್ತಿಯೂ ಮಲಮಾಸದಲ್ಲಿ ಕೂಡದು. ಮೊದಲಿನಿಂದಲೂ ಆಚರಿಸುತ್ತಿರುವ ಮಾಘಸ್ನಾನಮುಂತಾದದ್ದರ ಆರಂಭವೂ ಸಮಾಪ್ತಿಯೂ ಕ್ಷಯಮಾಸದಲ್ಲಿಯೂ ಆಗಬಹುದು. ಮಕರಸಂಕ್ರಾನ್ತಿಯುಕ್ತವಾದ ಕ್ಷಯಮಾಸದಲ್ಲಿನ ಪೌರ್ಣಮಾಸ್ಯೆಯಲ್ಲಿ ಮಾಘಸ್ನಾನವನ್ನು ಆರಂಭಿಸಿ ಕುಮ್ಭಸಙ್ಕ್ರಾನ್ತಿಯಿಂದೊಡಗೂಡಿದ ಮಾಘಪೌರ್ಣಮಾಸ್ಯೆಯಲ್ಲಿ ಪೂರಯಿಸತಕ್ಕದ್ದು. ಹೀಗೆ ಕಾರ್ತಿಕಮಾಸದಲ್ಲಿಯೂ ಊಹಿಸಬೇಕು. ಯಾವಾಗಲಾದರೆ ವೈಶಾಖ ಮುಂತಾದದ್ದು ಅಧಿಕಮಾಸವಾಗುವುದೋ, ಆಗ ವೈಶಾಖಸ್ನಾನ ಮೊದಲಾದ ಮಾಸವ್ರತಗಳಿಗೆ ಎಂದರೆ ಚೈತ್ರಪೂರ್ಣಿಮೆಯಲ್ಲಿ ಆರಂಭಿಸಿದವುಗಳಿಗೆ ಶುದ್ಧವೈಶಾಖಪೌರ್ಣಮಾಸ್ಯೆಯಲ್ಲಿ ಸಮಾಪ್ತಿಯು, ಹೀಗೆ ಅವುಗಳಿಗೆ ಮಾಸದ್ವಯದಲ್ಲಿಯೂ ಅನುಷ್ಠಾನ. ಯಾವುದನ್ನು ಮಲಮಾಸದಲ್ಲಿ ಬಿಡಬೇಕೆಂದು ಹೇಳಿದೆಯೋ, ಅದನ್ನು ಗುರುಶುಕ್ರಾಸ್ತಗಳಲ್ಲಿಯೂ, ಬಾಲ್ಯವಾರ್ಧಕಗಳಲ್ಲಿಯೂ ಆಚರಿಸಕೂಡದೆಂದರಿಯತಕ್ಕದ್ದು. ಅದರಲ್ಲಿ ಅಸ್ತಕ್ಕಿಂತಲೂ ಮೊದಲು ಏಳುದಿವಸಗಳು ವಾರ್ಧಕವೆಂತಲೂ, ಉದಯಾನಂತರದಲ್ಲಿ ಏಳು ದಿವಸಗಳು ಬಾಲ್ಯವೆಂತಲೂ ಮುಖ್ಯ ಪಕ್ಷವು. ಹದಿನೈದುದಿನಗಳು, ಐದು ದಿನಗಳು, ಮೂರುದಿನಗಳು, ಎಂಬ ಪಕ್ಷಗಳು ಆಪದ್ವಿಷಯ, ಅನಾಪದ್ವಿಷಯವೆಂಬ ಭೇದದಿಂದಲೂ, ದೇಶವಿಶೇಷಪರತ್ವದಿಂದಲೂ ಅನ್ವಯಿಸಿಕೊಳ್ಳತಕ್ಕದ್ದು. ಈ ವರ್ಜ್ಯಾವರ್ಜ್ಯನಿರ್ಣಯವನ್ನು ಸಿಂಹದಲ್ಲಿ ಗುರುವಿರುವಾಗಲೂ ಅರಿಯತಕ್ಕದ್ದು. ಇದರಲ್ಲಿ ವಿಶೇಷವೇನೆಂದರೆ:—ಕರ್ಣವೇಧ, ಚೌಲ, ಮೌಂಜೀಬಂಧ, ವಿವಾಹ, ದೇವಯಾತ್ರೆ, ವ್ರತ, ವಾಸ್ತುಕರ್ಮ, ದೇವಪ್ರತಿಷ್ಠೆ, ಸನ್ನ್ಯಾಸ, ಇವುಗಳನ್ನು ವಿಶೇಷವಾಗಿ ಬಿಡಬೇಕು.

—ಸಿಂಹಸ್ಥಾಪವಾದ—

ಗುರುವು ಮಘಾನಕ್ಷತ್ರದಲ್ಲಿಯಾಗಲಿ, ಸಿಂಹಾಂಶದಲ್ಲಿಯಾಗಲೀ ಇರುವಾಗ ಎಲ್ಲಾದೇಶಗಳಲ್ಲಿಯೂ ಸಕಲಶುಭಕಾರ್ಯಗಳಿಗೂ ನಿಷೇಧ

ವುಂಟು. ಸಿಂಹಾಂಶೋತ್ತರದಲ್ಲಿ ಗೋದಾವರಿಯದಕ್ಷಿಣದೊಳಗೂ, ಭಾಗೀರಥಿಯ ಉತ್ತರದಲ್ಲಿಯೂ, ಸಿಂಹಸ್ಥದೋಷವಿಲ್ಲ. ಗಂಗಾಗೋದಾಮಧ್ಯದೇಶವಲ್ಲಿಯಾದರೋ ಸಿಂಹಸ್ಥಿತಿಯಲ್ಲೆಲ್ಲಾ ವಿವಾಹ ವ್ರತಬಂಧಗಳಿಗೆ ದೋಷವುಂಟು. ಸಿಂಹಾಂಶೋತ್ತರದಲ್ಲಿ ಎಲ್ಲದೇಶಗಳೊಳಗೂ ಸಕಲಕರ್ಮಗಳನ್ನೂ ಮಾಡಬಹುದು. ಸೂರ್ಯನು ಮೇಷದಲ್ಲಿರುವಾಗ ಎಲ್ಲ ದೇಶಗಳಲ್ಲಿಯೂ ಗುರುವಿಗೆ ಸಿಂಹಸ್ಥಿತಿಯಿದ್ದರೂ ಯಾವ ಶುಭಕರ್ಮಗಳ ಆಚರಣೆಗೂ ದೋಷವಿಲ್ಲ. ಸೂರ್ಯನು ವೃಷಭದಲ್ಲಿದ್ದಾಗಲೂ ದೋಷವಿಲ್ಲವೆಂದು ಕೆಲವು ಕಡೆ ಹೇಳಿಇದೆ. ಗುರುವು ಸಿಂಹದಲ್ಲಿರುವಾಗ ಗೋದಾವರೀ ಸ್ನಾನವೂ, ಕನ್ಯೆಯಲ್ಲಿರುವಾಗ ಕೃಷ್ಣಾಸ್ನಾನವೂ ಮಹಾಪುಣ್ಯಪ್ರದವು. ಯಾತ್ರಿಕರಿಗೆ ಗೋದಾವರಿಯಲ್ಲಿ ಮುಂಡನವೂ, ಉಪವಾಸವೂ, ಆವಶ್ಯಕಗಳು. ಆ ತೀರವಾಸಿಗಳಿಗೆ ಈ ನಿಯಮವಿಲ್ಲ. ಹೆಂಡತಿಯು ಗರ್ಭಿಣಿಯಾಗಿದ್ದರೂ, ವಿವಾಹಾದಿಮಂಗಳಾನಂತರದಲ್ಲಿಯೂ, ಗೋದಾವರೀತೀರಮುಂಡನದಲ್ಲಿ ದೋಷವಿಲ್ಲ. ಗಯಾಗೋದಾವರೀ ಯಾತ್ರೆಯಲ್ಲಿ ಮಲಮಾಸಗುರುಶುಕ್ರಾಸ್ತಾದಿ ದೋಷವಿಲ್ಲ. ಮಲಮಾಸದಲ್ಲಿನ ವ್ರತವಿಶೇಷಗಳನ್ನು ಅನ್ಯತ್ರತಿಳಿಯತಕ್ಕದ್ದು;

ಇಂತು ಮಲಮಾಸ, ಗುರುಶುಕ್ರಾಸ್ತ, ಸಿಂಹಸ್ಥಗುರುಸಮಯವರ್ಜ್ಯಾವರ್ಜ್ಯನಿರ್ಣಯವೆಂಬ ಮೂರನೆಯ ಉದ್ದೇಶವು.

### ೬. ತಿಥಿನಿರ್ಣಯ ಸಾಮಾನ್ಯಪರಿಭಾಷಾ.

೬. ಪೂರ್ಣವೆಂತಲೂ ಖಂಡವೆಂತಲೂ ತಿಥಿಯು ಎರಡು ವಿಧ. ಸೂರ್ಯೋದಯಕಾಲ ಮೊದಲ್ಗೊಂಡು ಅರುವತ್ತುಗಳಿಗೆಗಳವರೆಗೂ ವ್ಯಾಪಿಸಿರುವ ತಿಥಿಯು ಪೂರ್ಣತಿಥಿಯು. ಇದಕ್ಕಿಂತಲೂ ಭಿನ್ನವಾದದ್ದು ಸಖಂಡತಿಥಿಯು. ಶುದ್ಧವೆಂತಲೂ, ವಿದ್ಧವೆಂತಲೂ ಸಖಂಡ ತಿಥಿಯು ಎರಡುವಿಧ. ಸೂರ್ಯೋದಯ ಮೊದಲ್ಗೊಂಡು ಅಸ್ತಮಯದವರೆಗೂ ಇರುವ, ಶಿವರಾತ್ರಿ ಮುಂತಾದದ್ದರಲ್ಲಿ ನಿಶೀಥದವರೆಗೂ ಇರುವ ತಿಥಿಯು ಶುದ್ಧವೆನಿಸುವುದು. ಇದಕ್ಕಿಂತಲೂ ಭಿನ್ನವಾದದ್ದು ವಿದ್ಧತಿಥಿಯು. ಪ್ರಾತರ್ವೇಧೆಯೆಂತಲೂ, ಸಾಯಂವೇಧೆಯೆಂತಲೂ ವೇಧೆಯು ಎರಡು ವಿಧ. ಸೂರ್ಯೋದಯಾನಂತರದಲ್ಲಿ ಆರುಗಳಿಗೆಗಳವರೆಗೆ ಬೇರೆ ತಿಥಿಯುಸ್ಪರ್ಶ

ವಿದ್ದರೆ ಪ್ರಾತರ್ವೇಧೆ, ಸೂರ್ಯಾಸ್ತಮಯಕ್ಕಿಂತಲೂ ಮೊದಲು ಆರುಗಳಿಗೆಯಷ್ಟು ಬೇರ ತಿಥಿಯಸ್ಪರ್ಶವಿದ್ದರೆ ಸಾಯಂ ವೇಧೆ. ಏಕಾದಶೀ ವ್ರತವಿಷಯವಾದ ವೇಧೆಯು ಮುಂದೆ ಹೇಳಲ್ಪಡುವುದು. ಕೆಲವು ತಿಥಿ ವಿಶೇಷಗಳಲ್ಲಿ ವೇಧಾಧಿಕ್ಯವುಂಟು. ಪಂಚಮಿಯು ಹನ್ನೆರಡುಗಳಿಗೆಗಳ ವರೆಗೂ ಇದ್ದರೆ ಷಷ್ಠಿಯನ್ನು ವಿದ್ಧವನ್ನಾಗಿ ಮಾಡುತ್ತದೆ. ದಶಮಿಯು ಹದಿನೈದುಗಳಿಗೆಗಳಿಂದ ಏಕಾದಶಿಯನ್ನು ವೇಧೆಯುಳ್ಳದ್ದನ್ನಾಗಿ ಮಾಡುತ್ತದೆ. ಚತುರ್ದಶಿಯು ಹದಿನೆಂಟುಗಳಿಗೆಗಳಿಂದ ಪೌರ್ಣಮಾಸ್ಯೆಯನ್ನು ವೇಧಿಸುತ್ತದೆ. ವಿದ್ಧತಿಥಿಗಳು ಕೆಲವು ಕರ್ಮಗಳಲ್ಲಿ ಗ್ರಾಹ್ಯಗಳಾಗಿಯೂ, ಮತ್ತೆ ಕೆಲವು ಕರ್ಮಗಳಲ್ಲಿ ತ್ಯಾಜ್ಯಗಳಾಗಿಯೂ ಆಗುವುವು. ಇದರಲ್ಲಿ ಸಂಪೂರ್ಣವಾಗಿಯೂ ಶುದ್ಧವಾಗಿಯೂ ಇರುವ ತಿಥಿಯು ಸಂದೇಹವಿಲ್ಲದಿರುವುದರಿಂದ ಪ್ರಾಯಶಃ ನಿರ್ಣಯವನ್ನು ಅಪೇಕ್ಷಿಸುವುದಿಲ್ಲವು. ನಿಷೇಧ ವಿಷಯದಲ್ಲಿ ಸಖಂಡತಿಥಿಯೂ ನಿರ್ಣಯಾರ್ಹವಾದದ್ದು. "ನಿಷೇಧಸ್ತು ನಿವೃತ್ತ್ಯಾತ್ಮಾ ಕಾಲ ಮಾತ್ರ ಮಪೇಕ್ಷತೆ" ಎಂಬ ವಚನದಿಂದ ಅಷ್ಟಮಿ ಮೊದಲಾದವುಗಳಲ್ಲಿ ನಾರಿಕೇಳಾದಿ ಭಕ್ಷಣ ನಿಷೇಧವು ಆಯಾ ಕಾಲದಲ್ಲಿ ಮಾತ್ರ ವ್ಯಾಪಿಸಿರುವ ತಿಥಿಯನ್ನು ಅಪೇಕ್ಷಿಸುತ್ತದೆ. ವಿಹಿತವಾದ ವ್ರತಾದಿ ವಿಷಯದಲ್ಲಿ ನಿರ್ಣಯವೆಂತೆಂದರೆ-ಅದರಲ್ಲಿ ಯಾವ ಕರ್ಮಕ್ಕೆ ಯಾವುದು ಕಾಲವೋ ಆ ಕಾಲದಲ್ಲಿ ವ್ಯಾಪ್ತಿಯುಳ್ಳ ತಿಥಿಯನ್ನು ಪರಿಗ್ರಹಿಸಬೇಕು. ಹೇಗೆಂದರೆ-ವಿನಾಯಕಾದಿ ವ್ರತದಲ್ಲಿ ಮಧ್ಯಾಹ್ನಾದಿ ಸಮಯದೊಳಗೆ ಪೂಜೆ ಮುಂತಾದ್ದನ್ನು ವಿಧಿಸಿರುವುದರಿಂದ ಮಧ್ಯಾಹ್ನಾದಿ ವ್ಯಾಪ್ತಿಯುಳ್ಳ ತಿಥಿಯನ್ನು ಪರಿಗ್ರಹಿಸಬೇಕು. ಉಭಯ ದಿನಗಳಲ್ಲಿಯೂ ಕರ್ಮಕಾಲದಲ್ಲಿ ವ್ಯಾಪ್ತಿಯಿದ್ದರೆ ಅಥವಾ ಇಲ್ಲದಿದ್ದರೆ ಅಥವಾ ಅದರ ಒಂದುಭಾಗದ ವ್ಯಾಪ್ತಿಯಿದ್ದರೂ ಯುಗ್ಮವಾಕ್ಯವನ್ನು ಅನುಸರಿಸಿ ಪೂರ್ವವಿದ್ಧತಿಥಿಯನ್ನಾಗಲೀ, ಪರವಿದ್ಧ ತಿಥಿಯನ್ನಾಗಲೀ, ಗ್ರಹಿಸಬೇಕು. ಯುಗ್ಮವಾಕ್ಯವೆಂದರೆ—"ಯುಗ್ಮಾಗ್ನಿಯುಗ ಭೂತಾನಾಂ ಷಣ್ಮುನ್ಯೋರ್ವಸುರಂಧ್ರಯೋಃ । ರುದ್ರೇಣ ದ್ವಾದಶೀಯುಕ್ತಾ ಚತುರ್ದಶ್ಯಾಚಪೂರ್ಣಿಮಾ ॥ ಪ್ರತಿಪದ್ಯಪ್ಯಮಾವಾಸ್ಯಾ ತಿಥ್ಯೋರ್ಯುಗ್ಮಂ ಮಹಾಫಲಂ ।" ಯುಗ್ಮವೆಂದರೆ ದ್ವಿತೀಯೆ. ಅಗ್ನಿ--ತೃತೀಯೆ. ತದಿ

ಗೆಯಿಂದ ವಿದ್ಧವಾದ ಬಿದಿಗೆಯನ್ನು ಗ್ರಹಿಸಬೇಕು. ಬಿದಿಗೆಯಿಂದ ವಿದ್ಧವಾದ ತದಿಗೆಯನ್ನು ಗ್ರಹಿಸಬೇಕು. ಈಪ್ರಕಾರವಾಗಿ ಬಿದಿಗೆ ತದಿಗೆಗಳಿಗೆ ಯುಗ್ಮವೆಂದು ಹೆಸರು. ಚತುರ್ಥೀಪಂಚಮಿಗಳಿಗೆ ಯುಗ್ಮವು ಷಷ್ಠೀಸಪ್ತಮಿಗಳಿಗೆ ಯುಗ್ಮವು. ಅಷ್ಟಮೀನವಮಿಗಳಿಗೆ ಯುಗ್ಮವು. ಏಕಾದಶಿ ದ್ವಾದಶಿಗಳಿಗೆ ಯುಗ್ಮವು. ಚತುರ್ದಶಿ ಪೌರ್ಣಮಾಸ್ಯೆಗಳಿಗೆ ಯುಗ್ಮವು. ಅಮಾವಾಸ್ಯಾಪ್ರತಿಪತ್ತುಗಳ ಯುಗ್ಮವೂ ಹೀಗೆಯೇ ಎಂದು ವ್ಯವಸ್ಥೆಯು. ಕೆಲವುವೇಳೆ "ಚತುರ್ಥೀಗಣನಾಥಸ್ಯ ಮಾತೃವಿದ್ಧಾ ಪ್ರಶಸ್ಯತೇ ।" ಇತ್ಯಾದಿ ವಿಶೇಷವಚನಗಳಿಂದ ವಿನಾಯಕಪೂಜೋಪಯೋಗಿಯಾದ ಚತುರ್ಥಿಯು ತೃತೀಯಾವಿದ್ಧವಾಗಿರುವುದೇ ಪ್ರಶಸ್ತವು ಎಂದೀಪ್ರಕಾರ ವಿಶೇಷನಿರ್ಣಯವನ್ನು ತಿಳಿಯಬೇಕು.

ವಚನಬಲದಿಂದ ಗ್ರಹಿಸಬೇಕಾಗಿರುವ ತಿಥಿಯು ಕರ್ಮಕಾಲದಲ್ಲಿ ಇಲ್ಲದೆ ಹೋಗುವ ಸಂದರ್ಭದಲ್ಲಿ ಸಾಕಲ್ಯವಚನಗಳ ಬಲದಿಂದ ಕರ್ಮಕಾಲದಲ್ಲಿಯೂ ಇದೆಯೆಂದೇ ಭಾವಿಸಬೇಕು. ಸಾಕಲ್ಯವಚನಗಳಾವುವೆಂದರೆ.

"ಯಾಂತಿಥಿಂ ಸಮನುಪ್ರಾಪ್ಯ ಉದಯಂಯಾತಿಭಾಸ್ಕರಃ ।
ಸಾತಿಥಿಸ್ಸಕಲಾಜ್ಞೇಯಾ ಸ್ನಾನದಾನವ್ರತಾದಿಷು ॥೧॥
(ಯಾಂತಿಥಿಂಸಮನುಪ್ರಾಪ್ಯಯಾತ್ಯಸ್ತಂಯಾಮಿನೀಪತಿಃ ।
ಸಾತಿಥಿಸ್ಸಕಲಾಜ್ಞೇಯಾಸ್ನಾನದಾನಾದಿ ಕರ್ಮಸು ॥೨॥)

ಯಾವ ತಿಥಿಯು ಇರುವಾಗ ಸೂರ್ಯನು ಉದಯಿಸುತ್ತಾನೆಯೋ ಆ ದಿವಸದಲ್ಲೆಲ್ಲ ಮಾಡಬೇಕಾಗಿರುವ ಸ್ನಾನ, ದಾನ, ವ್ರತಾದಿಗಳೊಳಗೆ ಅದೇ ತಿಥಿಯು ಇರುವಂತೆಯೇ ತಿಳಿಯತಕ್ಕದ್ದು ॥೧॥ (ಚಂದ್ರನು ಯಾವತಿಥಿಯಲ್ಲಿದ್ದು ಅಸ್ತನಾಗುತ್ತಾನೆಯೋ ಆದಿವಸ ಮಾಡಬೇಕಾದ ಸ್ನಾನ, ದಾನ, ಮೊದಲಾದ ಕರ್ಮಗಳೊಳಗೆಲ್ಲ ಸಂಪೂರ್ಣವಾಗಿ ಅದೇ ತಿಥಿಯೇ ಇರುವುದೆಂದು ತಿಳಿಯಬೇಕು, ಉದಯಾನಂತರದಲ್ಲಿ ಎರಡು ಮುಹೂರ್ತಕ್ಕಿಂತಲೂ ಹೆಚ್ಚಾಗಿರುವ, ಅಸ್ತಮಯಕ್ಕಿಂತಲೂ ಮೊದಲು ಮೂರು ಮುಹೂರ್ತಕ್ಕಿಂತ ಹೆಚ್ಚಾಗಿರುವ ತಿಥಿಗೆ ಸಾಕಲ್ಯವ್ಯಾಪ್ತಿ

ಯೆಂಬುದು ಪ್ರಾಯಶಃ ಎರಡು ವಿಧವೆಂದು ಅರಿಯುವುದು) ಇಂತು ಸಾಮಾನ್ಯನಿರ್ಣಯವೆಂಬ ನಾಲ್ಕನೆಯ ಉದ್ದೇಶವು--೪.

೫. ಕರ್ಮವಿಶೇಷ ನಿರ್ಣಯ.

೧. ಏಕಭಕ್ತಾದಿ ಸ್ವರೂಪ ನಿರ್ಣಯ—ದೈವಕರ್ಮಗಳೆಂತಲೂ, ಪಿತ್ರ್ಯಕರ್ಮಗಳೆಂತಲೂ, ಕರ್ಮಗಳು ಎರಡುವಿಧವಾಗಿವೆ. ಏಕಭಕ್ತ, ನಕ್ತ, ಅಯಾಚಿತ, ಉಪವಾಸ, ವ್ರತ, ದಾನ. ಎಂಬದಾಗಿ ದೈವಕರ್ಮವು ಆರುಬಗೆಯಾಗಿದೆ. ಮಧ್ಯಾಹ್ನದಲ್ಲಿ ಮಾತ್ರವೇ ಒಂದು ಹೊತ್ತು ಒಂದು ಪಾಕದ ಅನ್ನವನ್ನು ಒಂದುಸಾರಿ ಭೋಜನಮಾಡುವುದು ಏಕಭಕ್ತ. ರಾತ್ರಿಯಲ್ಲಿ ಮಾತ್ರವೇ ಪ್ರದೋಷಕಾಲದಲ್ಲಿ ಒಂದುಸಾರಿ ಭೋಜನ ಮಾಡುವುದು ನಕ್ತ. ಯಾರನ್ನೂ ಯಾಚಿಸದೆಯೇ ಆ ದಿನದಲ್ಲಿ ಲಭಿಸಿದ ಅನ್ನವೊದಲಾದದ್ದನ್ನು ಭೋಜನಮಾಡುವುದು ಅಯಾಚಿತ. ಬೇರೊಂದುದಿನದಲ್ಲಿ ಲಭಿಸಿದ್ದನ್ನಾದರೂ, ಬೇಯಿಸುವ ಹೆಂಡರು ಮಕ್ಕಳು ಮೊದಲಾದವರನ್ನೂ ಯಾಚಿಸದೆಯೇ ಭೋಜನಮಾಡೋಣವು ಅಯಾಚಿತವೆಂದು ಕೆಲವರು. ಅಹೋರಾತ್ರಿಗಳಲ್ಲಿಯೂ ಭೋಜನವಿಲ್ಲದಿರೋಣವು ಉಪವಾಸವು. ಪೂಜಾದಿರೂಪವಾಗಿರುವ ಕರ್ಮವಿಶೇಷವು ವ್ರತವು. ಒಂದು ವಸ್ತುವಿನಲ್ಲಿ ತನಗಿರುವ ಸ್ವತ್ವವನ್ನು ನಿವೃತ್ತಿಮಾಡಿಕೊಂಡು ಆಸ್ವತ್ವವನ್ನು ಮತ್ತೊಬ್ಬನಿಗೆ ಮಾಡಿಸಿಬಿಡೋಣವೇ ದಾನ. ಈ ಏಕಭಕ್ತಾದಿಗಳು ಕೆಲವು ಸಮಯದಲ್ಲಿ ವ್ರತಾದಿಗಳಿಗೆ ಅಂಗವಾಗಿ ವಿಹಿತಗಳಾಗಿವೆ. ಮತ್ತೆ ಕೆಲವುವೇಳೆ ಏಕಾದಶಿಮುಂತಾದ ಉಪವಾಸಗಳಿಗೆ ಪ್ರತಿನಿಧಿಯಾಗಿ ವಿಹಿತಗಳಾಗಿವೆ, ಇನ್ನು ಕೆಲಸಂದರ್ಭಗಳಲ್ಲಿ ಸ್ವತಂತ್ರಗಳಾಗಿಯೂ ಇವೆ ಹೀಗೆ ಮೂರುವಿಧ. ವ್ರತಾದಿಗಳಿಗೆ ಅಂಗವಾಗಿರತಕ್ಕವುಗಳಿಗೂ, ಪ್ರತಿನಿಧಿಗಳಾಗಿರತಕ್ಕವುಗಳಿಗೂ, ಅವುಗಳವುಗಳ ಪ್ರಧಾನಗಳನ್ನನುಸರಿಸಿ ನಿರ್ಣಯವು. ಸ್ವತಂತ್ರಗಳಾಗಿರುವವುಗಳಿಗೆ ನಿರ್ಣಯವೆಂತೆಂದರೆ—ಒಂದು ದಿವಸವನ್ನು ಐದುವಿಧವಾಗಿ ವಿಭಾಗಮಾಡಿ ಅದರೊಳಗೆ ಮೊದಲನೆಯ ಭಾಗವನ್ನು ಪ್ರಾತಃಕಾಲವೆಂದು ತಿಳಿಯತಕ್ಕದ್ದು, ಎರಡನೆಯದು ಸಂಗವವೆನಿಸುವುದು. ಮೂರನೆಯದು ಮಧ್ಯಾಹ್ನ, ನಾಲ್ಕನೆಯ ಭಾಗವು ಅಪರಾ

ಹ್ಣ, ಐದನೆಯದು ಸಾಯಾಹ್ನ, ಸೂರ್ಯಾಸ್ತಮಯಾನಂತರದಲ್ಲಿ ಮೂರು ಮುಹೂರ್ತದವರೆಗೆ ಪ್ರದೋಷ. ಇದರೊಳಗೆ ಏಕಭಕ್ತದಲ್ಲಿ ಮಧ್ಯಾಹ್ನವ್ಯಾಪ್ತಿಯುಳ್ಳ ತಿಥಿಯನ್ನು ಗ್ರಹಿಸಬೇಕು. ಅದರಲ್ಲಿಯೂ ಮೂವತ್ತುಗಳಿಗೆಗಳ ರೂಪವಾಗಿರುವ ದಿವಸದ ಮಧ್ಯಭಾಗಪ್ರಮಾಣದಿಂದ ಹದಿನಾರನೆಯದು ಮೊದಲ್ಗೊಂಡು ಮೂರುಗಳಿಗೆಗಳು ಮುಖ್ಯವಾದ ಭೋಜನಕಾಲವು. ಆಮೇಲೆ ಸಾಯಂಕಾಲದವರೆಗೂ ಗೌಣಕಾಲವು ಇಲ್ಲಿ ಪೂರ್ವದಿವಸದಲ್ಲಿ ಮಾತ್ರವೇ ಮುಖ್ಯಕಾಲವ್ಯಾಪ್ತಿ, ಎರಡನೆಯ ದಿವಸದಲ್ಲಿ ಮಾತ್ರವೇ ಮುಖ್ಯಕಾಲವ್ಯಾಪ್ತಿ, ಎರಡುದಿನಗಳಲ್ಲಿಯೂ ವ್ಯಾಪ್ತಿ, ಎರಡು ದಿನಗಳಲ್ಲಿಯೂ ವ್ಯಾಪ್ತಿಯಿಲ್ಲದಿರುವುದು, ಎರಡು ದಿವಸವಲ್ಲಿಯೂ ಸಮವಾಗಿ ಒಂದು ಭಾಗವ್ಯಾಪ್ತಿಯು, ವ್ಯತ್ಯಾಸದಿಂದ ಕೆಲವು ಭಾಗವ್ಯಾಪ್ತಿಯು, ಹೀಗೆ ಆರುಪಕ್ಷಗಳಾಗುತ್ತವೆ. ಇದರೊಳಗೆ ಪೂರ್ವದಿವಸದಲ್ಲಿಯೇ ಮುಖ್ಯಕಾಲದಲ್ಲಿ ಗ್ರಹಿಸಬೇಕಾದ ತಿಥಿಯು ಇದ್ದರೆ ಪೂರ್ವದಿವಸವೇ ಗ್ರಾಹ್ಯವಾದದ್ದು. ಎರಡನೆಯ ದಿವಸದಲ್ಲಿ ಮಾತ್ರವೇ ಇದ್ದರೆ ಎರಡನೆಯ ದಿನವೇ ಗ್ರಾಹ್ಯವೆಂಬುದು ನಿಸ್ಸಂದೇಹ. ಎರಡು ಕಡೆಯಲ್ಲಿಯೂ ಪೂರ್ಣವ್ಯಾಪ್ತಿಯಿದ್ದರೆ ಯುಗ್ಮವಾಕ್ಯದಿಂದ ನಿರ್ಣಯವು. ಉಭಯತ್ರವ್ಯಾಪ್ತಿಯಿಲ್ಲದಿರುವಾಗಲೂ ಗೌಣಕಾಲವ್ಯಾಪ್ತಿಯಿರುವುದರಿಂದ ಪೂರ್ವದಿವಸವೇ ಗ್ರಾಹ್ಯವಾದದ್ದು. ಉಭಯತ್ರ ಸಮವಾಗಿ ಒಂದು ಭಾಗವ್ಯಾಪ್ತಿಯಿದ್ದರೆ ಆಗಲೂ ಪೂರ್ವವೇ; ವೈಷಮ್ಯದಿಂದ ಏಕದೇಶವ್ಯಾಪ್ತಿ ಇದ್ದಲ್ಲಿ ಎರಡು ದಿನಗಳಲ್ಲಿಯೂ ಕರ್ಮಪೂರ್ತಿಯಾಗುವುದಕ್ಕೆ ಸಾಕಾಗುವಷ್ಟು ಕಾಲವು ಸಿಕ್ಕುವುದಾದರೆ ಯುಗ್ಮವಾಕ್ಯದಿಂದ ನಿರ್ಣಯವು. ಕರ್ಮಕ್ಕೆ ಬೇಕಾಗುವಷ್ಟು ಕಾಲವು ದೊರೆಯದೆ ಹೋದರೆ ಪೂರ್ವತಿಥಿಯೇ ಗ್ರಾಹ್ಯವು.

ಇಂತು ಏಕಭಕ್ತನಿರ್ಣಯ.

ನಕ್ತವಿವರವೆಂತೆಂದರೆ--ಅದರಲ್ಲಿ ಸೂರ್ಯಾಸ್ತಮಯಾನಂತರ ಮೂರು ಮುಹೂರ್ತರೂಪವಾಗಿರುವ ಪ್ರದೋಷಕಾಲವ್ಯಾಪ್ತಿಯುಳ್ಳ ತಿಥಿಯು ಗ್ರಾಹ್ಯವು. ನಕ್ತದಲ್ಲಿ ಎರಡು ದಿವಸಗಳೊಳಗೊಂದರಲ್ಲಿ ಆ ತಿಥಿಯು ವ್ಯಾಪ್ತಿಯಿದ್ದರೂ ಅಥವಾ ಒಂದು ಭಾಗಮಾತ್ರ ಸ್ಪರ್ಶವಿದ್ದರೂ

ಆ ತಿಥಿಯನ್ನೇ ಗ್ರಹಿಸಬೇಕು. ಆದರೆ ಅಸ್ತಮಯಾನಂತರದಲ್ಲಿ ಮೂರುಗಳಿಗೆಯು ರೂಪವಾಗಿರುವ ಸಂಧ್ಯಾಕಾಲವನ್ನು ಕಳೆದೇ ಭೋಜನ ಮಾಡಬೇಕು. ಸಂಧ್ಯಾಕಾಲದಲ್ಲಿ ಭೋಜನ, ನಿದ್ರೆ, ಮೈಥುನ, ಅಧ್ಯಯನ, ಇವುಗಳು ನಿಷೇಧಿಸಲ್ಪಟ್ಟಿವೆ. ಯತಿಗಳಿಗು, ಅಪುತ್ರವಂತರಿಗು ಅಪತ್ನೀಕರಿಗು, ವಿಧವೆಯರಿಗೂ, ರಾತ್ರಿಯಲ್ಲಿ ಭೋಜನವು ನಿಷಿದ್ಧವಾಗಿರುವುದರಿಂದ ಅವರು ನಕ್ತವನ್ನು ಸಾಯಾಹ್ನ ವ್ಯಾಪ್ತಿಯುಳ್ಳ ದಿನವ ಎಂಟನೆಯ ಭಾಗದಲ್ಲಿ ಆಚರಿಸತಕ್ಕದ್ದು. ಹೀಗೆ ಸೌರನಕ್ತವನ್ನೂ ಸಾಯಾಹ್ನ ವ್ಯಾಪ್ತಿಯಲ್ಲಿ ಹಗಲೊಳಗೇ ಮಾಡಬೇಕು. ಎರಡು ದಿನಗಳಲ್ಲಿಯೂ ಪ್ರದೋಷವ್ಯಾಪ್ತಿ ಯಿದ್ದರೆ ಪರತಿಥಿಯೇ ಗ್ರಾಹ್ಯವು. ದಿನದ್ವಯದಲ್ಲಿಯೂ ಪ್ರದೋಷವ್ಯಾಪ್ತ್ಯಭಾವದಲ್ಲಿ ಪರದಿನದೊಳಗೇ ಸಾಯಂಕಾಲದಲ್ಲಿ, ದಿನದ ಎಂಟನೆಯ ಭಾಗದೊಳಗೆ ನಕ್ತವನ್ನು ಮಾಡಬೇಕಲ್ಲದೆ ರಾತ್ರಿಯಲ್ಲಿ ಮಾಡಕೂಡದು. ಸಮವ್ಯಾಪ್ತಿ ಯಿದ್ದರೂ, ಒಂದು ಭಾಗ ವ್ಯಾಪ್ತಿ ಯಿದ್ದರೂ ಪರದಿನವೇ ಗ್ರಾಹ್ಯವಾದದ್ದು. ವೈಷಮ್ಯದಿಂದ ಪ್ರದೋಷದ ಒಂದು ಭಾಗದಲ್ಲಿ ವ್ಯಾಪ್ತಿ ಯಿದ್ದರೆ ಎಂದರೆ ಪೂಜಾಭೋಜನಗಳಿಗೆ ಸಾಕಾಗುವಷ್ಟು ಹೆಚ್ಚುಕಾಲವು ಸಿಕ್ಕುವುದಾದರೆ, ಆಗ ಆಧಿಕ್ಯವುಳ್ಳ ಪೂರ್ವ ತಿಥಿಯು ಗ್ರಾಹ್ಯವು. ಹಾಗಿಲ್ಲದಿದ್ದರೆ ಸಾಮ್ಯ ಪಕ್ಷದಂತೆ ಉತ್ತರ ತಿಥಿಯೇ ಗ್ರಾಹ್ಯವು. ಆಧಿಕ್ಯವಶದಿಂದ ಪೂರ್ವತಿಥಿಯು ಗ್ರಾಹ್ಯವಲ್ಲ. ನಕ್ತವ್ರತ ಭೋಜನವು ವಿಧಿವಿಹಿತವಾದುದರಿಂದ ರವಿವಾಸರಸಂಕ್ರಾನ್ತ್ಯಾದಿಗಳಲ್ಲಿಯೂ ರಾತ್ರಿಯಲ್ಲಿಯೇ ಆಚರಿಸತಕ್ಕದ್ದು. ರವಿವಾರಾದಿಗಳಲ್ಲಿ ರಾತ್ರಿಭೋಜನ ನಿಷೇಧವೆಂಬುದು ರಾಗ ಪ್ರಾಪ್ತವಾಗಿರುವ ಭೋಜನ ನಿಷೇಧಪರವೆಂದು ತಿಳಿಯತಕ್ಕದ್ದು. ಏಕಾದಶಿ ಮೊದಲಾದವುಗಳಿಗೆ ಪ್ರತ್ಯಾಮ್ನಾಯ ಎಂದರೆ ಪ್ರತಿನಿಧಿಯಾಗಿರುವ ನಕ್ತವಾದರೋ ಉಪವಾಸಕ್ಕೆ ಗೊತ್ತಾಗಿರುವ ದಿನದಲ್ಲಿಯೇ ಆಚರಿಸತಕ್ಕದ್ದು. ಅಯಾಚಿತವೆಂಬುದು ಅಹೋರಾತ್ರಗಳಲ್ಲಿ ನೆರವೇರಿಸತಕ್ಕದ್ದಾದುದರಿಂದ ಉಪವಾಸದಂತೆಯೇ ನಿರ್ಣಯವನ್ನರಿಯುವುದು. ಪಿತ್ರ್ಯ ಕರ್ಮಗಳಿಗೆ ಅಪರಾಹ್ಣ ಮೊದಲಾದ ವ್ಯಾಪ್ತಿಯಿಂದ ನಿರ್ಣಯವು. ಇದು ಆಯಾಯ ಪ್ರಕರಣದಲ್ಲಿ ಹೇಳ

ಲ್ಪಡುವುದು. ಪೂರ್ವ ದಿವಸದಲ್ಲಿ ಆಚರಿಸಿದ ಏಕಭಕ್ತ, ನಕ್ತ, ಅಯಾಚಿತ, ಉಪವಾಸ, ಇವುಗಳಿಗೆ ಎರಡನೆಯ ದಿನಸ ಆ ತಿಥಿಯ ಕೊನೆಯಲ್ಲಿ ಪಾರಣೆಯು. ಆ ತಿಥಿಯು ಮೂರು ಯಾಮಗಳಿಗಿಂತ ಮೇಲೆಯೂ ಇರುವುದಾದರೆ ಪ್ರಾತಃಕಾಲದಲ್ಲಿಯೇ ಪಾರಣವೆಂದು ಎಲ್ಲ ಕಡೆಗಳಲ್ಲಿಯೂ ತಿಳಿಯತಕ್ಕದ್ದು, ಎಂಬದಾಗಿ ಮಾಧವಾಚಾರ್ಯರ ಮತವು. ಇಂತು ಏಕಭಕ್ತಾದಿ ನಿರ್ಣಯವೆಂಬ ಐದನೆಯ ಉದ್ದೇಶವು ॥೫॥

## ೬. ವ್ರತಪರಿಭಾಷೆ—

೬. ವ್ರತಪರಿಭಾಷೆ—ವ್ರತಾಚರಣೆಗಳಲ್ಲಿ ಸ್ತ್ರೀಯರಿಗೂ ಶೂದ್ರರಿಗೂ ಎರಡುರಾತ್ರಿಗಳಿಗಿಂತಲೂ ಹೆಚ್ಚಾಗಿ ಉಪವಾಸಮಾಡುವುದಕ್ಕೆ ಅಧಿಕಾರವಿಲ್ಲ. ಸ್ತ್ರೀಯರಿಗೆ ಗಂಡನ ಆಜ್ಞೆಯಿಲ್ಲದೆ ವ್ರತೋಪವಾಸ ಮೊದಲಾದವುಗಳನ್ನು ಮಾಡುವ ಅಧಿಕಾರವಿಲ್ಲ. ಉಪವಾಸ ದಿನಗಳಲ್ಲಿಯೂ, ಪಿತೃದಿನಗಳಲ್ಲಿಯೂ, ಕಡ್ಡಿಯಿಂದ ಹಲ್ಲುಜ್ಜಕೂಡದು. ಎಲೆಮೊದಲಾದವುಗಳಿಂದಾಗಲಿ ಅಥವಾ ಹನ್ನೆರಡು ಸಾರಿ ಬಾಯಿಮುಕ್ಕಳಿಸುವುದರಿಂದಾಗಲಿ, ಶುದ್ಧಿ ಮಾಡಿಕೊಳ್ಳಬೇಕು. ನೀರಿನಿಂದ ತುಂಬಿದ ತಾಮ್ರ ಪಾತ್ರೆಯನ್ನು ಕೈಯಲ್ಲಿ ತೆಗೆದುಕೊಂಡು ಉತ್ತರಾಭಿಮುಖವಾಗಿ, ಬೆಳಗಿನ ಹೊತ್ತಿನಲ್ಲಿ ಉಪವಾಸಮೊದಲಾದ ವ್ರತಗಳಿಗೆ, ಸಂಕಲ್ಪ ಮಾಡಬೇಕು. ಹೊಸದಾಗಿ ಪ್ರಾರಂಭಿಸುವ ವ್ರತವನ್ನೂ ಮತ್ತು ಉದ್ಯಾಪನೆಯನ್ನೂ, ಅಧಿಕಮಾಸದಲ್ಲಿಯೂ, ಗುರು, ಶುಕ್ರರ ಅಸ್ತಕಾಲಗಳಲ್ಲಿಯೂ, ವೈಧೃತಿ, ವ್ಯತೀಪಾತ, ಮೊದಲಾದ ದುಷ್ಟಯೋಗಗಳಲ್ಲಿಯೂ, ಭದ್ರಾ ಎಂಬ ಕರಣದಲ್ಲಿಯೂ, ಮಂಗಳ, ಶನಿ, ಮೊದಲಾದ ಕ್ರೂರವಾರಗಳಲ್ಲಿಯೂ, ಅಮಾವಾಸ್ಯೆ ಮೊದಲಾದ ಅಯೋಗ್ಯತಿಥಿಗಳಲ್ಲಿಯೂ, ಮಾಡಕೂಡದು. ಹೀಗೆಯೇ ಖಂಡತಿಥಿಗಳಲ್ಲಿಯೂ ಮಾಡಕೂಡದು. ಈ ವಿಷಯದಲ್ಲಿ ಸತ್ಯವ್ರತನು ಹೇಳಿರುವುದೇನೆಂದರೆ-

ಉದಯಸ್ಥಾ ತಿಥಿರ್ಯಾಹಿ ನಭವೇದ್ದಿನಮಧ್ಯಭಾಕ್ ।
ಸಾಖಂಡಾ ನ ವ್ರತಾನಾಂ ಸ್ಯಾದಾರಂಭಶ್ಚ ಸಮಾಪನಂ ॥೧॥

ಯಾವದಿನದ ಸೂರ್ಯೋದಯಕಾಲದಲ್ಲಿರುವ ತಿಥಿಯು ಆದಿನದ ಮಧ್ಯಾಹ್ನದವರೆಗೂ ಇರುವುದಿಲ್ಲವೋ, ಆದಿನದ ತಿಥಿಯು ಖಂಡತಿಥಿಯೆನಿಸಿ

ಕೊಳ್ಳುವುದು. ಆ ದಿನದಲ್ಲಿ ಹೊಸದಾಗಿ ವ್ರತವನ್ನು ಮಾಡುವುದೂ, ಮತ್ತು, ವ್ರತದಉದ್ಯಾಪನೆಯನ್ನೂ ಮಾಡುವದೂ, ಕೂಡದು, ಎಂದು. ॥

ಕ್ಷಮಾ ಸತ್ಯಂ ದಯಾ ದಾನಂ ಶೌಚ ಮಿಂದ್ರಿಯ ನಿಗ್ರಹಃ ।
ದೇವಪೂಜಾ ಚ ಹವನಂ ಸಂತೋಷ ಸ್ತೇಯವರ್ಜನಂ ॥೨॥

ಎಲ್ಲಾವ್ರತಗಳಲ್ಲಿಯೂ, ವ್ರತದೀಕ್ಷೆಯನ್ನು ವಹಿಸಿರುವವರಿಗೆ ಸಹನ, ನಿಶ್ಚಯವಾದ ಮಾತು, ಕರುಣೆ, ದಾನ, ಪರಿಶುದ್ಧತ್ವ, ಇಂದ್ರಿಯ ನಿಗ್ರಹ, ದೇವತಾಪೂಜೆ, ಹೋಮ, ಸಂತೋಷ, ಕದಿಯದಿರುವುದು, ಇವುಗಳು ಆವಶ್ಯಕವಾದವುಗಳು. ಇಲ್ಲಿ ಹೋಮಗಳು ಕಾಮ್ಯವ್ರತಗಳಲ್ಲಿ, ವ್ಯಾಹೃತಿ ಮಂತ್ರಗಳಿಂದ ಮಾಡಬೇಕಾದವುಗಳಾಗಿವೆಯಲ್ಲದೆ ಬೇರೆ ಹೋಮಗಳು ಅಲ್ಲ. ಯಾವದೇವತೆಯನ್ನು ಉದ್ದೇಶಮಾಡಿಕೊಂಡು ಉಪವಾಸವ್ರತವನ್ನು ಮಾಡುತ್ತಾರೆಯೋ, ಆದೇವತೆಯ ಜಪ, ಧ್ಯಾನ, ಅದರ ಕಥೆಯನ್ನು ಕೇಳುವುದು, ಆದೇವತೆಯ ಪೂಜೆ, ಆದೇವತೆಯ ನಾಮಾವಳಿಯನ್ನು ಕೇಳುವುದು, ಪಾರಾಯಣ ಮಾಡುವುದು, ಇವುಗಳನ್ನೆಲ್ಲಾ ಮಾಡಬೇಕು. ಉಪವಾಸ ದಿನಗಳಲ್ಲಿ ಅನ್ನವನ್ನು ಮನಃಪೂರ್ವಕವಾಗಿ ನೋಡುವುದು, ಅದರವಾಸನೆಯನ್ನು ತೆಗೆದುಕೊಳ್ಳುವುದು, ಅಭ್ಯಂಗಸ್ನಾನ, ತಾಂಬೂಲಚರ್ವಣ, ಗಂಧಲೇಪನ, ಇವುಗಳನ್ನು ಬಿಡಬೇಕು. ಸುವಾಸಿನಿಯರು ಮಾಡುವ ಮಂಗಳಕರವಾದ ವ್ರತದಿನಗಳಲ್ಲಿ ಅಭ್ಯಂಗಸ್ನಾನ, ತಾಂಬೂಲ ಮೊದಲಾದುವುಗಳನ್ನು ಬಿಡಬೇಕಾದದ್ದಿಲ್ಲ.

ಅಷ್ಟೈತಾನ್ಯ ವ್ರತಘ್ನಾನಿ ಆಪೋ ಮೂಲಂ ಫಲಂ ಪಯಃ ।
ಹವಿರ್ಬ್ರಾಹ್ಮಣಕಾಮ್ಯಾ ಚ ಗುರೋರ್ವ್ವಚನಮೌಷಧಂ॥೧॥

ನೀರು, ಗೆಡ್ಡೆ ಗೆಣಸುಗಳು, ಹಣ್ಣು, ಹಾಲು, ಹವಿಸ್ಸು, ಬ್ರಾಹ್ಮಣನ ಇಷ್ಟವನ್ನುನೆರವೇರಿಸುವದು, ಗುರುವಿನ ಮಾತು, ಔಷಧ; ಈ ಎಂಟನ್ನು ವ್ರತಾಚರಣೆ ಮಾಡತಕ್ಕವರು ಸ್ವೀಕಾರ ಮಾಡುವುದರಿಂದ ವ್ರತನಿಯಮಕ್ಕೆ ಭಂಗಬರುವುದಿಲ್ಲ. ॥೧॥

ಅಜ್ಞಾನದಿಂದ (ಪ್ರಮಾದ) ವ್ರತನಿಯಮಕ್ಕೆ ಭಂಗವುಂಟಾದರೆ ಮೂರುದಿನಗಳು ಉಪವಾಸಮಾಡಿ ಅನಂತರದಲ್ಲಿ ಕ್ಷೌರಮಾಡಿಸಿಕೊಂ

ಡು ಶುದ್ಧನಾಗಿ ಪುನಃ ವ್ರತವನ್ನು ಮಾಡಬೇಕು. ಉಪವಾಸಮಾಡುವುದಕ್ಕೆ ಶಕ್ತಿಯಿಲ್ಲದವರು ವ್ರತಮಾಡಬೇಕಾದರೆ, ಒಬ್ಬ ಬ್ರಾಹ್ಮಣನಿಗೆ ಭೋಜನ ಮಾಡಿಸುವುದು ಅಥವಾ ಒಬ್ಬ ಬ್ರಾಹ್ಮಣನ ಊಟಕ್ಕೆ ತಕ್ಕಷ್ಟು ದ್ರವ್ಯವನ್ನು ದಾನಮಾಡುವುದು, ಅಥವಾ ಸಹಸ್ರಗಾಯತ್ರೀ ಜಪ ಮಾಡುವುದು, ಇಲ್ಲವೆ ಹನ್ನೆರಡು ಪ್ರಾಣಾಯಾಮಗಳನ್ನು ಮಾಡುವುದು, ಇವುಗಳನ್ನು ಪ್ರಾಯಶ್ಚಿತ್ತ ರೂಪವಾಗಿ ಮಾಡಬೇಕು. ಹಿಡಿದಿರುವ ವ್ರತವನ್ನುಮಾಡುವುದಕ್ಕೆ ಶಕ್ತಿ ಯಿಲ್ಲದಿದ್ದವರು ಮತ್ತೊಬ್ಬರಿಂದ ಮಾಡಿಸಬಹುದು, ಒಬ್ಬರಿಗೆ ಬದಲಾಗಿ ವ್ರತಮಾಡತಕ್ಕವರು ಅವರ ಮಗ, ಹೆಂಡತಿ, ಗಂಡ, ಸಹೋದರ, ಪುರೋಹಿತ, ಸ್ನೇಹಿತ; ಇವರಲ್ಲಿ ಯಾರಾದರೂ ಒಬ್ಬರಾಗಿರಬೇಕು. ಮೇಲೆಹೇಳಿರುವ ಮಗಮೊದಲಾದವರು ತಂದೆ ಮೊದಲಾದವರಿಗೆ ಬದಲಾಗಿ ವ್ರತಮಾಡಿದರೆ ಆವ್ರತಮಾಡಿದ ಫಲವನ್ನು ತಾವೂ ಹೊಂದುವರು.

ಅಸಕೃಜ್ಜಲ ಪಾನಾಚ್ಚ ಸಕೃತ್ತಾಂಬೂಲಚರ್ವಣಾತ್ ।
ಉಪವಾಸಃ ಪ್ರಣಶ್ಯೇತ ದಿವಾಸ್ವಾಪಾಚ್ಚ ಮೈಥುನಾತ್ ॥೧॥

ಬಾಯಾರಿಕೆಯನ್ನು ಹೋಗಲಾಡಿಸಿಕೊಳ್ಳುವುದಕ್ಕಾಗಿ ಒಂದು ಸಾರಿ ನೀರನ್ನು ಕುಡಿಯದೆ ಆಗಾಗ್ಯೆ ನೀರನ್ನು ಕುಡಿಯುವುದರಿಂದಲೂ, ಅಡಕೆಲೆಯನ್ನು ಹಾಕಿಕೊಳ್ಳುವುದರಿಂದಲೂ, ಹಗಲು ಹೊತ್ತಿನಲ್ಲಿ ನಿದ್ರೆ ಮಾಡುವುದರಿಂದಲೂ, ಸ್ತ್ರೀಸಂಭೋಗದಿಂದಲೂ, ಉಪವಾಸ ನಿಯಮಕ್ಕೆ ಭಂಗವುಂಟಾಗುವುದು. ॥೧॥

ಸಂಭೋಗವಿಷಯವನ್ನುಸ್ಮರಿಸುವದು, ಮತ್ತೊಬ್ಬರೊಡನೆ ವರ್ಣಿಸಿ ಹೇಳುವುದು, ಸ್ತ್ರೀಯನ್ನು ಮನಃಪೂರ್ವಕವಾಗಿ ನೋಡುವುದು, ಸ್ತ್ರೀಯಸುಂಗಡ ಆಟವಾಡುವುದು, ಗುಟ್ಟಾಗಿ ಮಾತನಾಡುವುದು, ಸಂಭೋಗವನ್ನು ಅಪೇಕ್ಷಿಸುವುದು, ಗೊತ್ತುಮಾಡಿಕೊಳ್ಳುವುದು, ಸಂಭೋಗ ಮಾಡುವುದು,ಈ ಎಂಟೂ ಸ್ತ್ರೀಸಂಗದಭೇದಗಳು. ಬಾಯಾರಿಕೆಯಿಂದ ಪ್ರಾಣವೇ ಹೋಗುವಷ್ಟು ಸಂಕಟವಾದಾಗ ಅನೇಕಸಾರಿ ನೀರನ್ನು ಕುಡಿದಾಗ್ಯೂ ದೋಷವಿಲ್ಲ, ಚರ್ಮದ ಚೀಲದಲ್ಲಿನ ನೀರು, ಎಮ್ಮೆ, ಕುರಿ ಮೊದಲಾದ ಹಸುವಿಗಿಂತ ಬೇರೆ ಜಾತಿಯ ಪಶುಗಳಹಾಲು,

ಕಿರುಗಡಲೆ, ನಿಂಬೆಯಹಣ್ಣು, ಮುತ್ತಿನ ಚಿಪ್ಪಿನ ಸುಣ್ಣ, ಮೊದಲಾದ ಭೋಗಯೋಗ್ಯವಾದ ಪದಾರ್ಥಗಳನ್ನು ವ್ರತದಿನಗಳಲ್ಲಿ ಉಪಯೋಗಿಸಿ ಕೊಳ್ಳಕೂಡದು, ಕಣ್ಣೀರು ಹಾಕಿಕ್ಕೊಳ್ಳುವುದು ಕೋಪಿಸಿಕೊಳ್ಳುವುದು, ಇವುಗಳು ತತ್‌ಕ್ಷಣದಲ್ಲಿಯೇ ವ್ರತನಿಯಮನ್ನುಹಾಳುಮಾಡುವುವು. ವ್ರತಮಾಡತಕ್ಕವರು ಆದಿನದಲ್ಲಿ ಪರಾನ್ನವನ್ನಊಟಮಾಡಿದರೆ ಅನ್ನವನ್ನಿಟ್ಟವರಿಗೆ ವ್ರತಫಲವು ಸೇರುವುದು. ಎಳ್ಳು, ಹೆಸರು; ಇವು ಹೊರತು ಉಳಿದ, ಕಡಲೆ ಮೊದಲಾದ, ಹೊಟ್ಟು ಅಥವಾ ಸಿಪ್ಪೆಯುಳ್ಳ ಧಾನ್ಯಗಳನ್ನೂ, ಉದ್ದನ್ನೂ, ಮುಲ್ಲಂಗಿ ಮೊದಲಾದ ಕಾರವಾದ ವಸ್ತುಗಳನ್ನೂ, ಉಪ್ಪು, ಮದ್ಯ, ಮಾಂಸ, ಮೊದಲಾದವುಗಳನ್ನೂ ಬಿಡಬೇಕು.

ವ್ರತಾದಿಗಳಲ್ಲುಪಯೋಗಿಸ ಬಹುದಾದ ಆಹಾರವಸ್ತುಗಳು.

ನವಣೆ, ಸಜ್ಜೆ, ಮೊದಲಾದ ತೃಣಧಾನ್ಯಗಳೂ, ಗೋಧಿಯೂ, ತಕ್ಕವು. ಬತ್ತ, ಹೆಸರು, ಯವೆ, ಎಳ್ಳು, ನವಣೆ, ನೆಲಗಡಲೆ, ಮುಂತಾದ ಧಾನ್ಯಗಳೂ, ಬಿಳಿಯ ಮುಲ್ಲಂಗಿ, ಸೂರಣ, ಮೊದಲಾದ ಗಡ್ಡೆ, ಸೈಂಧವಲವಣ, ಸಮುದ್ರದ ಉಪ್ಪು, ಹಸುವಿನ ಹಾಲು, ಮೊಸರು, ತುಪ್ಪ ಇವುಗಳೂ, ಅಳಲೆಕಾಯಿ, ಹಿಪ್ಪಲಿ, ಶುಂಠಿ, ಜೀರಿಗೆ, ಇವೂ, ತೆಂಗಿನ ಕಾಯಿ, ಹಲಸು, ಮಾವು, ಹುಣಸೆ, ಬಾಳೆ, ಲವಲಿ, ನೆಲ್ಲಿ, ಹಣ್ಣುಗಳೂ, ಬೆಲ್ಲವಲ್ಲದೆ ಕಬ್ಬಿನಿಂದಾಗುವ ಕಲ್ಲುಸಕ್ಕರೆ ಮೊದಲಾದ ಇತರವಸ್ತುಗಳೂ, ಎಣ್ಣೆಯಲ್ಲಿ ಕರಿದು ಮಾಡದಿರುವ ಪದಾರ್ಥಗಳೂ, ಆಹಾರಕ್ಕೆಯೋಗ್ಯವಾದವು. ಹಸುವಿನ ಮಜ್ಜಿಗೆಯೂ, ಎಮ್ಮೆಯ ತುಪ್ಪವೂ, ಕೆಲವುಸಂದರ್ಭಗಳಲ್ಲಿ ತಕ್ಕವು ಎಂದು ತಿಳಿಯಬೇಕು.

ವ್ರತವಿಧಿಯನ್ನು ಗೊತ್ತಾಗಿ ಹೇಳದಿದ್ದ ಸ್ಥಳದಲ್ಲಿ ಉದ್ದಿನ ಕಾಳು ಮುಂತಾದ್ದರ ತೂಕವುಳ್ಳ, ಚಿನ್ನ, ಅಥವಾ ಬೆಳ್ಳಿಯ ಪ್ರತಿಮೆಯನ್ನು ಮಾಡಿಸಿ ಪೂಜಿಸಬೇಕೆಂತಲೂ, ಹೋಮದ್ರವ್ಯವು ಗೊತ್ತಿಲ್ಲದಿದ್ದರೆ ತುಪ್ಪವನ್ನುಪಯೋಗಿಸಬೇಕೆಂತಲೂ, ಪ್ರಧಾನ ದೇವತೆಯನ್ನು ಹೇಳಿಲ್ಲದಿದ್ದರೆ ಬ್ರಹ್ಮನೆಂತಲೂ, ಮಂತ್ರವನ್ನು ಹೇಳದಿದ್ದಲ್ಲಿ ವ್ಯಾಹೃತಿಮಂತ್ರವೆಂತಲೂ, ಹೋಮ ಸಂಖ್ಯೆಯನ್ನು ಹೇಳದಿದ್ದರೆ ೧೦೮ ಅಥವಾ ೨೮ ಅಥವಾ ೮ ಎಂತಲೂ ಉಪವಾಸಮಾಡಿದ್ದು ಸಾಂಗವಾಗುವುದಕ್ಕಾಗಿ

ಬ್ರಾಹ್ಮಣ ಭೋಜನ ಮಾಡಿಸಬೇಕೆಂತಲೂ, ಉದ್ಯಾಪನೆಯ ವಿಧಿಸಿಕ್ಕದಿದ್ದರೆ ಗೋದಾನವನ್ನಾಗಲಿ,ಸುವರ್ಣದಾನವನ್ನಾಗಲೀ ಮಾಡಬೇಕೆಂತಲೂ, ತಿಳಿಯಬೇಕು. ದೇವರು ಸುಪ್ರೀತನಾದನೆಂದು ಬ್ರಾಹ್ಮಣರು ಹೇಳಿದರೆ ವ್ರತವು ಸಾಂಗವಾಗುವುದು. ಅವರು ಹಾಗೆ ಹೇಳುವುದನ್ನು ಅಂಗೀಕರಿಸತಕ್ಕವರು ದಕ್ಷಿಣೆಯನ್ನು ಕೊಟ್ಟು ಕೇಳತಕ್ಕದ್ದು. ಹಿಡಿದ ವ್ರತವನ್ನು ಮಾಡದೆ ಬಿಡುವವನು ಚಂಡಾಲನಿಗೆ ಸಮಾನನಾಗುವನು. ವಿಧವೆಯರು ವ್ರತಕಾಲಗಳಲ್ಲಿ ಬಿಳಿಯ ಬಟ್ಟೆಯನ್ನೇ ಉಟ್ಟು ಕೊಳ್ಳಬೇಕು. ಕೆಂಪುಬಣ್ಣ, ಮಿಶ್ರವರ್ಣವುಳ್ಳ ಬಟ್ಟೆಗಳನ್ನುಡಕೂಡದು.

ವ್ರತನಿಯಮ ಮೊದಲಾದವುಗಳಲ್ಲಿ ಜಾತಾಶೌಚ ಮುಂತಾದವು
ಬಂದರೆ ಮಾಡಬೇಕಾದ ವಿಧಿ :—

ನಿಯಮಕಾಲದಲ್ಲಿ ಜಾತಾಶೌಚ ಮುಂತಾದವು ಬಂದರೂ, ಸ್ತ್ರೀಯರು ತಾವು ಮಾಡಬೇಕಾದ ವ್ರತ ದಿನದಲ್ಲಿ ಬಹಿಷ್ಠೆಯರಾದರೂ, ಜ್ವರ ಮೊದಲಾದ ರೋಗಗಳಿಂದ ಅಶಕ್ತರಾಗಿದ್ದಾಗ್ಯೂ, ತಾವು ಹಿಡಿಗಿರುವ ವ್ರತಾದಿಗಳನ್ನು ಮಾಡಬೇಕಾದರೆ, ಆದಿನ ತಾವು ಮಾಡಬೇಕಾದ ಆಹಾರ ಮೊದಲಾದ ದೇಹಸಂಬಂಧವಾದ ನಿಯಮಗಳನ್ನುತಾವೇ ಮಾಡಬೇಕು, ಪೂಜೆ ಮೊದಲಾದವುಗಳನ್ನು ಇತರರಿಂದ ಮಾಡಿಸಬೇಕು. ಆಶೌಚಾದಿಗಳಲ್ಲಿ ಪೂರ್ವದಿಂದ ಮಾಡುತ್ತಿದ್ದ ವ್ರತಾದಿಗಳನ್ನು ಇತರರ ಮೂಲಕವಾಗಿ ಮಾಡಿಸಬಹುದೇಹೊರತು ಹೊಸದಾಗಿ ವ್ರತಾದಿಗಳನ್ನು ಪ್ರಾರಂಭಿಸ ಕೂಡದು.

ಕಾಮ್ಯೇ ಪ್ರತಿನಿಧಿ ರ್ನಾಸ್ತಿ ನಿತ್ಯೇ ನೈಮಿತ್ತಿಕೇಚಸಃ ।
ಕಾಮ್ಯೇಪ್ಯುಪಕ್ರಮಾ ದೂರ್ಧ್ವಂ ಕೇಚಿತ್ಪ್ರತಿನಿಧಿಂ ವಿದುಃ॥೧॥

ನಿತ್ಯ, ನೈಮಿತ್ತಿಕ, ಕಾಮ್ಯ, ಕರ್ಮಗಳನ್ನು ಯಾರು ಮಾಡಬೇಕಾಗಿದೆಯೋ ಅವರೇ ಮಾಡಬೇಕಲ್ಲದೆ ಮತ್ತೊಬ್ಬರಿಂದ ಮಾಡಿಸಕೂಡದು. ಜಾತಾಶೌಚಾದಿಗಳಿಂದ ಅಡ್ಡಿ ಬಂದರೆ ಆ ಕರ್ಮವನ್ನು ಬಿಟ್ಟು ಬಿಡಬೇಕು. ಹೊಸದಾಗಿ ಪ್ರಾರಂಭಿಸದೆ ಮೊದಲಿನಿಂದಲೂ ಮಾಡುತ್ತಿದ್ದ ವ್ರತಾದಿಗಳನ್ನು ಮಾತ್ರ ಅಂಥಾ ಸಂದರ್ಭದಲ್ಲಿ ತಕ್ಕವರಾದ ಇತರರಿಂದ ಮಾಡಿಸಬಹುದೆಂಬದಾಗಿ ಕೆಲವರು ಅಭಿಪ್ರಾಯ ಪಡುವರು.

ನಸನ್ಯಾತ್ಪ್ರತಿನಿಧಿರ್ಮಂತ್ರಸ್ವಾಮಿದೇವಾಗ್ನಿಕರ್ಮಸು ।
ನಾಪಿಪ್ರತಿ ನಿಧಾತವ್ಯಂ ನಿಷಿದ್ಧಂ ವಸ್ತು ಕುತ್ರಚಿತ್ ॥೧॥

ಕಾರ್ಯಾಲೋಚನೆ, ಮಂತ್ರ, ಸ್ವಾಮಿಕಾರ್ಯ, ದೇವತಾಕಾರ್ಯ, ಅಗ್ನಿಕಾರ್ಯ, ಇವುಗಳನ್ನು ಮಾಡಬೇಕಾದವರೇ ಮಾಡಬೇಕಲ್ಲದೆ ತಮಗೆಬದಲಾಗಿ ಇನ್ನೊಬ್ಬರಿಂದ ಮಾಡಿಸಕೂಡದು. ಅಯೋಗ್ಯವೆಂದು ತೆಗೆದುಹಾಕಿರುವ ವಸ್ತುವಿಗೆ ಬದಲಾಗಿ ಮತ್ತೊಂದು ವಸ್ತುವನ್ನು ಯಾವಾಗಲೂ ಇಟ್ಟುಕೊಳ್ಳಕೂಡದು, ಎಂದರೆ ಪ್ರಕೃತದಲ್ಲಿ ಮಾಡಬೇಕಾದವನಿಗೆ ಆಶೌಚ ಮೊದಲಾದ ಕಾರಣಗಳಿಂದ ಪ್ರಕೃತ ಕಾರ್ಯದಲ್ಲಿ ಅಧಿಕಾರವಿಲ್ಲದೆ ಹೋದರೆ ಹಾಗೆ ನಿಷೇಧಿಸಲ್ಪಟ್ಟವನ ಬದಲು ಬಂದವನೂ ಅದರಲ್ಲಿರತಕ್ಕ ಅಧಿಕಾರಿ ಯಾಗಲಾರನೆಂದು ತಿಳಿಯಬೇಕು. ॥೧॥

ಉಪವಾಸ, ಪಾರಣ, ಏಕಭಕ್ತ ; ಇವೆಲ್ಲವೂ ಒಂದು ದಿನದಲ್ಲಿ
ಕೂಡಿದರೆ ಮಾಡಬೇಕಾದದ್ದು.

ವ್ರತ, ದಾನ, ಹೋಮ, ಮುಂತಾದ ಪರಸ್ಪರವಿರೋಧವಿಲ್ಲದ ಕರ್ಮಗಳಾದರೆ ಬಂದಾಗುತ್ತಲೂ ಒಂದನ್ನು ಕ್ರಮವಾಗಿ ಮಾಡಬಹುದು. ಹಾಗಲ್ಲದೆ ಒಂದನ್ನು ಮಾಡುವುದರಿಂದ ಮತ್ತೊಂದಕ್ಕೆ ತೊಂದರೆಯಾಗುವಂತೆ ಏಕಭಕ್ತ, ಉಪವಾಸ, ಪಾರಣೆ ಮೊದಲಾದವುಗಳೆರಡು ಅಥವಾ ಮೂರು ಒಂದೇದಿನದಲ್ಲಿ ಸೇರಿದರೆ ಅವುಗಳಲ್ಲೊಂದನ್ನು ಮಾಡಿ ಉಳಿದದ್ದನ್ನು ಮಗ, ಅಥವಾ ಹೆಂಡತಿ, ಇಂಥವರಿಂದ ಮಾಡಿಸಬೇಕು. ಚತುರ್ದಶೀ, ಅಷ್ಟಮಿ, ಮುಂತಾದ ದಿವಸಗಳಲ್ಲಿ ಹಗಲು ಊಟಮಾಡಕೂಡದು. ಹಿಂದಣದಿವಸ ಮಾಡಿದ್ದ ವ್ರತದ ಪೂರ್ತಿಗಾಗಿ ಮಾಡಬೇಕಾದ ಪಾರಣೆಯನ್ನು ಆ ತಿಥಿಗಳಲ್ಲಿ ಮಾಡಬೇಕಾಗಿ ಬಂದರೆ ಹಗಲಿನಲ್ಲಿ ಊಟವನ್ನೇ ಮಾಡಬೇಕು, ಏಕೆಂದರೆ ಪಾರಣೆಯನ್ನು ಮಾಡಬೇಕೆಂಬುವುದು ನಿಯಮವು, ಆದರೆ ತಿಥಿಯನ್ನುದ್ದೇಶಿಸಿ ಹಗಲು ಭೋಜನವನ್ನು ಮಾಡಕೂಡದೆಂದು ನಿಷೇಧಿಸಿರುವದು, ಊಟದಮೇಲಣ ಪ್ರೀತಿಯಿಂದ ಮಾತ್ರ ಊಟಮಾಡುವುದು ಸರಿಯಲ್ಲವೆಂಬ ಅರ್ಥವನ್ನು ಸೂಚಿಸುವುದಕ್ಕೇ, ಎಂದು ತಿಳಿಯಬೇಕು. ಹೀಗೆಯೇ ಭಾನುವಾರದಲ್ಲಿ ಸ್ನಂ

ಕಟ ಚತುರ್ಥೀವ್ರತವು ಬಂದರೆ ರಾತ್ರಿಯಲ್ಲಿಯೇ ಭೋಜನಮಾಡಬೇಕು. ಸಾಮಾನ್ಯವಾಗಿ ಭಾನುವಾರ ರಾತ್ರಿ ಭೋಜನಮಾಡಕೂಡದೆಂಬ ನಿಷೇಧವು ಈ ಸಂದರ್ಭದಲ್ಲಿ ಅನ್ವಯಿಸುವುದಿಲ್ಲ. ಹೀಗೆ ಅಷ್ಟಮೀ ಮೊದಲಾದುವುಗಳಿಂದ ಭೋಜನಕ್ಕೂ, ಭಾನುವಾರ ಮೊದಲಾದವುಗಳಿಂದ ರಾತ್ರಿಭೋಜನಕ್ಕೂ, ನಿಷೇಧವು. ಒಂದೇದಿನದಲ್ಲಿ ಉಂಟಾದರೆ ಆದಿವಸ ಉಪವಾಸವನ್ನೇಮಾಡಬೇಕು. ಪುತ್ರವಂತನಾದ ಗೃಹಸ್ಥನಿಗೆ ಸಂಕ್ರಮಣಾದಿಗಳಲ್ಲಿ ಉಪವಾಸಕ್ಕೂ, ಅದೇದಿನದಲ್ಲಿ ಅಷ್ಟಮೀ ಮೊದಲಾದವುಗಳಿಂದ್ಚಹಗಲು ಭೋಜನಕ್ಕೂ, ಅವಕಾಶವಿಲ್ಲದಂತಾದರೆ, ಏನಾದರೂಸ್ವಲ್ಪ ಆಹಾರವನ್ನು ತೆಗೆದುಕೊಂಡು,ಉಪವಾಸವನ್ನೇ ಮಾಡಬೇಕು. ಚಾಂದ್ರಾಯಣ ವ್ರತದಮಧ್ಯದಲ್ಲಿ ಏಕಾದಶೀ ವ್ರತವುಬಂದರೆ. ಆದಿನದಲ್ಲಿಕ್ಲುಪ್ತವಾದ ಸಂಖ್ಯೆಗೆ ತಕ್ಕಷ್ಟು ತುತ್ತುಗಳನ್ನು ತೆಗೆದುಕೊಂಡು ಊಟವನ್ನೇ ಮಾಡಬೇಕು. ಕೃಚ್ಛ್ರ ಮೊದಲಾದ ವ್ರತಗಳಲ್ಲೂ ಹೀಗೆಯೇ ನಡೆಯಬೇಕು. ಏಕಾದಶೀ ದಿನದಲ್ಲಿ, ಹಿಂದಣ ದಿನಮಾಡಿದ್ದ ಉಪವಾಸಕ್ಕಾಗಿ ಪಾರಣೆಯನ್ನು ಮಾಡಬೇಕಾಗಿ ಬಂದರೆ ನೀರಿನಿಂದ ಪಾರಣೆಯನ್ನು ಮಾಡಿ ಉಪವಾಸಮಾಡಬೇಕು. ಮತ್ತು ದ್ವಾದಶಿಯದಿವಸಮಾಡಬೇಕಾದ ಪಾರಣೆಗೆ, ಮಾಸೋಪವಾಸ, ಶ್ರಾದ್ಧ, ಪ್ರದೋಷ, ಇವುಗಳಿಂದ ತೊಂದರೆ ಯುಂಟಾದರೂ ಜಲಪಾರಣೆಯನ್ನು ಮಾಡಬೇಕು.

ಏಕಾದಶಿ ಮೊದಲಾದ ಉಪವಾಸ ದಿನಗಳಲ್ಲಿ ಸಂಕ್ರಮಣವು ಬಂದರೆ ಪುತ್ರವಂತನಾದ ಗೃಹಸ್ಥನಿಗೆ ಉಪವಾಸ ನಿಷೇಧವೂ, ಏಕಾದಶಿಯ ಉಪವಾಸವೂ, ಎರಡೂ ಪ್ರಾಪ್ತವಾಗುವುವು. ಆದ್ದರಿಂದ ನೀರು, ಗೆಡ್ಡೆ,ಗೆಣಸು, ಹಣ್ಣು, ಹಾಲು, ಇವುಗಳನ್ನು ಆಹಾರವಾಗಿ ಉಪಯೋಗಿಸಿಕೊಂಡು, ಉಪವಾಸ ಮಾಡಹೇಕು. ಒಂದೇ ದಿನದಲ್ಲಿ, ಎರಡೆರಡು ಉಪವಾಸಗಳನ್ನೂ, ನಕ್ತಗಳನ್ನೂ, ಏಕ ಭಕ್ತಗಳನ್ನೂ ಮಾಡಬೇಕಾಗಿ ಬಂದರೆ ಆ ಎರಡೂ ಯಾವ ಯಾವವಿಷಯಕ್ಕೆಸಂಬಂಧ ಪಟ್ಟವೆಯೋ, ಆ ಎರಡು ವಿಷಯಗಳನ್ನೂ ಉದ್ದೇಶಿಸಿ ಒಟ್ಟಿಗೆ ಉಪವಾಸ ಮೊದಲಾದುವನ್ನು ಮಾಡುತ್ತೇನೆಂದು ಸಂಕಲ್ಪಮಾಡಿಕೊಂಡು ಒಟ್ಟಿಗೆ

ಪೂಜೆ, ಹೋಮ ಮುಂತಾದ್ದನ್ನು ಮಾಡಬೇಕು. ಉಪವಾಸವೂ ಏಕ ಭಕ್ತವೂ ಒಂದೇ ದಿನದಲ್ಲಿ ಮಾಡಬೇಕಾದದ್ದಾದರೆ, ಆ ದಿನಕ್ಕೆ ಎರಡು ತಿಥಿಗಳ ವ್ಯಾಪ್ತಿ ಇದ್ದಲ್ಲಿ, ಉದಯತಿಥಿವ್ಯಾಪ್ತಿಕಾಲದಲ್ಲೊಂದನ್ನೂ, ಎರಡನೆಯ ತಿಥಿವ್ಯಾಪ್ತಿಕಾಲದಲ್ಲಿ ಮತ್ತೊಂದನ್ನೂ, ಮಾಡಬೇಕು. ಹಾಗಿಲ್ಲದೆ ಅಖಂಡ ತಿಥಿಯಾಗಿದ್ದರೆ ಒಂದನ್ನು ತಾನು ಮಾಡಿ ಮತ್ತೊಂದನ್ನು ಮಗನೊದಲಾದವರಿಂದ ಮಾಡಿಸಬೇಕು.

"ಕಾಮ್ಯಂ ನಿತ್ಯಸ್ಯಬಾಧಕಂ" ಇತ್ಯಾದಿವಾಕ್ಯಗಳಿಂದ

ಕಾಮ್ಯವ್ರತವು ನಿತ್ಯಕ್ಕೆ ಬಾಧಕವಾದದ್ದು, ಎಂದರೆ ನಿತ್ಯಕ್ಕಿಂತಲೂ ಮುಖ್ಯವಾದದ್ದು. ಕಾಮ್ಯ, ನಿತ್ಯವೊದಲಾದವುಗಳಗೊಂದಕ್ಕೊಂದಕ್ಕಿರುವ ಬಲಾಬಲಗಳನ್ನೂ, ಒಂದು ಪ್ರಬಲವಾಗಿ ಮತ್ತೊಂದು ದುರ್ಬಲವಾಗುವದರಿಂದುಂಟಾಗುವ ಬಾಧೆ ಅಬಾಧೆಗಳನ್ನೂ ಅದರಿಂದ ಯಾವದು ಆಚರಿಸತಕ್ಕದ್ದು? ಯಾವದು ಬಿಡತಕ್ಕದ್ದು ಎಂಬುದನ್ನೂ ವಿಚಾರ ಮಾಡಿ ಮಾಡಬೇಕಾದದ್ದನ್ನು, ಊಹಿಸಿಕೊಳ್ಳಬೇಕು.

ಇಂತು ಸಾಮಾನ್ಯ ವ್ರತ ಪರಿಭಾಷೆ, ಎಂಬ ಆರನೆಯ ಉದ್ದೇಶವು.

## (೯) ಪ್ರತಿಪದಾದಿ ತಿಥಿನಿರ್ಣಯವು.

(೯) ಪ್ರತಿಪತ್ತಿಥಿನಿರ್ಣಯವು—ಪೂಜಾವ್ರತ ಮೊದಲಾದ ಶುಭ ಕರ್ಮಗಳಲ್ಲಿ ಶುಕ್ಲಪ್ರತಿಪತ್ತಿಗೆ ಅಪರಾಹ್ಣವ್ಯಾಪ್ತಿ ಇದ್ದಲ್ಲಿ ಅಮಾವಾಸ್ಯೆಯ ವೇಧೆಯುಳ್ಳ ಪ್ರತಿಪತ್ತನ್ನು ಗ್ರಹಿಸಬೇಕು, ಸಾಯಾಹ್ನವ್ಯಾಪ್ತಿ ಇದ್ದರೂ ಅಮಾವಾಸ್ಯಾವಿದ್ಧವಾದದ್ದೇ ಪ್ರಶಸ್ತವಾದದ್ದೆಂದು ಮಾಧವಾಚಾರ್ಯರು ಹೇಳಿರುವರು. ಅದಕ್ಕಿಂತಲೂ ಹೆಚ್ಚು ವ್ಯಾಪನೆ ಇದ್ದರೆ ಅಂದರೆ ಆದಿನರಾತ್ರಿಗೂ ಪ್ರತಿಪದ್ವ್ಯಾಪ್ತಿ ಇದ್ದರೆ ದ್ವಿತೀಯೆಯಿಂದ ಕೂಡಿದ ಪ್ರತಿಪತ್ತನ್ನು ಗ್ರಹಿಸಬೇಕು. ಕೃಷ್ಣಪಕ್ಷ ಪ್ರತಿಪತ್ತು (ಪಾಡ್ಯವು) ಯಾವಾಗಲೂ ದ್ವಿತೀಯೆಯಿಂದ ಕೂಡಿದ್ದೇ ಗ್ರಾಹ್ಯವು ಉಪವಾಸ ವಿಷಯದಲ್ಲಿ ಮಾತ್ರ ಅಮಾವಾಸ್ಯಾಯುಕ್ತವಾದ ಪ್ರತಿಪತ್ತನ್ನೇ ಶುಕ್ಲಪಕ್ಷದಲ್ಲಿಯೂ, ಕೃಷ್ಣಪಕ್ಷದಲ್ಲಿಯೂ ಸಹ ಅಂಗೀಕರಿಸಬೇಕು. ಅಪರಾಹ್ಣವ್ಯಾಪ್ತಿ ಇರುವ ಪ್ರತಿಪತ್ತಿನಲ್ಲಿ ಮಾಡಬೇಕಾದ ಉಪವಾಸ ಮೊದಲಾದವುಗಳಿಗೆ ಪ್ರಾತಃಕಾಲದಲ್ಲಿಯೇ ಸಂಕಲ್ಪವನ್ನು

ಮಾಡಬೇಕು. ಸಂಕಲ್ಪಮಾಡುವಕಾಲಕ್ಕೆ ಪ್ರತಿಪತ್ತು ಮೊದಲಾದ ತಿಥಿ ಇನ್ನೂ ಬಾರದಿದ್ದಾಗ್ಯೂ, ಪ್ರತಿಪತ್ತು ಮೊದಲಾದವುಗಳನ್ನೇ ಸಂಕಲ್ಪದಲ್ಲಿ ಹೇಳಿಕೊಳ್ಳಬೇಕು. ಅಮಾವಾಸ್ಯೆ ಮೊದಲಾದ ತತ್ಕಾಲದ ತಿಥಿಗಳನ್ನು ಹೇಳಕೂಡದು. ಹೀಗೆಯೇ "ಉಪೋಷ್ಯಾದ್ವಾದಶೀ ಶುದ್ಧಾ" ಎಂದರೆ-ಶುದ್ಧದ್ವಾದಶಿಯು, (ಇತರ ತಿಥಿಯ ವೇಧೆಯಿಲ್ಲದದ್ವಾದಶಿಯು) ಉಪವಾಸಾರ್ಹವಾದದ್ದು. ಇತ್ಯಾದಿಸ್ಥಳದಲ್ಲಿ ಏಕಾದಶೀ ಪ್ರಯುಕ್ತಸಂಕಲ್ಪ ಪೂಜಾದಿಗಳಲ್ಲಿ ಏಕಾದಶಿಯನ್ನೇ ಹೇಳಬೇಕು. ದ್ವಾದಶಿಯನ್ನು ಹೇಳಕೂಡದು. ಸಂಧ್ಯಾವಂದನೆ 'ಅಗ್ನಿಹೋತ್ರ, ಮೊದಲಾದ ನಿತ್ಯಕರ್ಮಗಳಲ್ಲಿ ಆಯಾಕರ್ಮಗಳನ್ನು ಮಾಡುವ ಕಾಲದಲ್ಲಿ ಯಾವತಿಥಿಯು ಇರುತ್ತದೆಯೋ ಅದೇ ತಿಥಿಯನ್ನೇ ಸಂಕಲ್ಪದಲ್ಲಿ ಹೇಳಬೇಕೆಂಬುವುದು ಗ್ರಂಥಕಾರನ ಅಭಿಪ್ರಾಯವು. ಸಂಕಲ್ಪಮಾಡುವುದಕ್ಕೆ ಸೂರ್ಯೋದಯಕ್ಕಿಂತ ಮುಂಚೆ, ಉಷಃ ಕಾಲದಲ್ಲಿಯೂ ಸೂರ್ಯೋದಯವಾದ ಮೇಲೆ, ಪ್ರಾತಃಕಾಲವೆಂದು ಹೇಳಿಸಿಕೊಳ್ಳುವ ಮೂರು ಮುಹೂರ್ತ ಅಥವಾ ಆರುಗಳಿಗೆಯ ಕಾಲದಲ್ಲಿ ಮೊದಲನೆಯ ಎರಡು ಮುಹೂರ್ತ ಅಂದರೆ ನಾಲ್ಕುಗಳಿಗೆಗಳ ಕಾಲವೂ ಪ್ರಶಸ್ತವಾದದ್ದು. ಮೂರನೆಯ ಮುಹೂರ್ತವು ಸಂಕಲ್ಪಕ್ಕೆ ಸರಿಯಾದಕಾಲವಲ್ಲವೆಂದು ತಿಳಿಯಬೇಕು. ಇಂತು ಪ್ರತಿಪನ್ನಿರ್ಣಯವೆಂಬ ಏಳನೆಯ ಉದ್ದೇಶವು.

## (೧೦) ದ್ವಿತೀಯಾ ನಿರ್ಣಯವು.

(೧೦) ದ್ವಿತೀಯಾನಿರ್ಣಯವು, ಶುಕ್ಲಪಕ್ಷದ ದ್ವಿತೀಯಾ [ಬಿದಿಗೆ] ತಿಥಿಯು ತೃತೀಯೆಯಿಂದ ಕೂಡಿರಬೇಕು. ಕೃಷ್ಣಪಕ್ಷದಲ್ಲಿ ಯಾದರೋ ಅಹಃ ಪ್ರಮಾಣಗಳಿಗೆಗಳನ್ನು ಎರಡು ಸಮಭಾಗಮಾಡುವುದರಿಂದಾಗುವ ಮೊದಲನೆಯಭಾಗವಾದ ಪೂರ್ವಾಹ್ಣಕ್ಕೆ ಬಿದಿಗೆಯ ವ್ಯಾಪ್ತಿ ಇದ್ದರೆ ಪ್ರತಿಪತ್ತಿನಿಂದ ಕೂಡಿದ ದ್ವಿತೀಯೆಯನ್ನು ಗ್ರಹಿಸಬೇಕು. ಹಾಗಿಲ್ಲದಿದ್ದರೆ ಕೃಷ್ಣಪಕ್ಷದಲ್ಲಿಯೂ ತೃತೀಯೆಯಿಂದ ಕೂಡಿದ ದ್ವಿತೀಯೆಯನ್ನು ಗ್ರಹಿಸಬೇಕು. ಇಂತು ದ್ವಿತೀಯಾ ನಿರ್ಣಯವೆಂಬ ಎಂಟನೆಯ ಉದ್ದೇಶವು.

[೧೧] ತೃತೀಯಾ ನಿರ್ಣಯವು

(೧೧) ತೃತೀಯೆ (ತದಿಗೆ) ಯ ನಿರ್ಣಯವು ರಂಭಾವ್ರತದಲ್ಲಿ ದ್ವಿತೀಯೆಯಿಂದ ಕೂಡಿದ ತೃತೀಯೆಯು ಗ್ರಾಹ್ಯವಾದದ್ದು. ಉಳಿದ ವ್ರತಗಳಲ್ಲಿ ಮೂರು ಮುಹೂರ್ತ ಕಾಲ ದ್ವಿತೀಯೆ ಇದ್ದು ಆ ಮೇಲೆ ಬಂದ ತೃತೀಯೆಯನ್ನು ಬಿಟ್ಟು ಎರಡನೆಯ ದಿನ ಮೂರು ಮುಹೂರ್ತ ಕಾಲವಿರುವ ತೃತೀಯೆಯನ್ನು ಗ್ರಹಿಸಬೇಕು. ಪೂರ್ವದಿವಸದಲ್ಲಿ ಮೂರು ಮುಹೂರ್ತಕ್ಕೆ ಕಡಿಮೆಯಾಗಿ ದ್ವಿತೀಯೆ ಇದ್ದು ಆಮೇಲೆ ತೃತೀಯೆ ಬಂದು ಎರಡನೆಯ ದಿನ ಮೂರು ಮೂಹೂರ್ತಕಾಲ ತೃತೀಯೆ ಇಲ್ಲದೆ ಹೋದರೆ ಬಿದಿಗೆಯಿಂದ ಕೂಡಿದ ತೃತೀಯೆಯನ್ನು ಗ್ರಹಿಸಬೇಕು. ಪೂರ್ವದಿವಸದಲ್ಲಿ ಮೂರು ಮುಹೂರ್ತ ಕಾಲವಿರುವ ಬಿದಿಗೆಯಿಂದ ವೇಧೆಯುಂಟಾಗಿದ್ದರೆ, ಎರಡನೆಯ ದಿನ ಮೂರು ಮುಹೂರ್ತಕ್ಕಿಂತ ಕಡಿಮೆಯಾಗಿ ತೃತೀಯೆ ಇದ್ದಾಗ್ಯೂ ಅದನ್ನೇ ಗ್ರಹಿಸಬೇಕು. ಗೌರೀವ್ರತ ವಿಷಯದಲ್ಲಿ ಕಲಾಕಾಷ್ಠಾ ಮೊದಲಾದ ಅಲ್ಪಕಾಲದ ದ್ವಿತೀಯಾ ವೇಧೆ ಇದ್ದಾಗ್ಯೂ ತೃತೀಯೆಯನ್ನು ಬಿಡಬೇಕು. ಮಾರನೆಯ ದಿನದಲ್ಲಿ ಕಲಾ, ಕಾಷ್ಠಾ ಮೊದಲಾದ ಸ್ವಲ್ಪಕಾಲ ತೃತೀಯೆ ಇದ್ದಾಗ್ಯೂ ಅದನ್ನು ಪರಿಗ್ರಹಿಸಬೇಕು. ಕ್ಷಯದಿವಸವಾದಾಗ ಎರಡನೆಯ ದಿನ ಚತುರ್ಥಿಯಿಂದ ಕೂಡಿದ ತೃತೀಯೆಯು ಸ್ವಲ್ಪವೂ ಇಲ್ಲದೆ ಪೂರ್ವದಿನದಲ್ಲಿ ದ್ವಿತೀಯೆಯ ವೇಧೆಯೂ ಇದ್ದರೆ, ಆಗ ದ್ವಿತೀಯಾಯುಕ್ತವಾದ ತೃತೀಯೆಯನ್ನೇ ಗ್ರಹಿಸಬೇಕು. ಅಲ್ಲದೆ ದಿವಸಕ್ಕೆ ವೃದ್ಧಿಯುಂಟಾದ ಕಾಲದಲ್ಲಿ ಪೂರ್ವದಿನದಲ್ಲಿ ತೃತೀಯೆಯು ೬೦ ಗಳಿಗೆ ಇದ್ದು ಎರಡನೆಯ ದಿವಸ ೧ ಗಳಿಗೆ ತೃತೀಯೆ ಇದ್ದರೆ ಗೌರೀವ್ರತ ವಿಷಯದಲ್ಲಿ ಪೂರ್ವದಿವಸದಲ್ಲಿ ಶುದ್ಧವಾದ ೬೦ಗಳಿಗೆಯುಳ್ಳ ತೃತೀಯೆಯನ್ನು ಬಿಟ್ಟು ಎರಡನೇ ದಿನ ಚತುರ್ಥೀಯುಕ್ತವಾದ ತೃತೀಯೆಯನ್ನೇ ಗ್ರಹಿಸಬೇಕು. ಇಂತು ತೃತೀಯಾ ನಿರ್ಣಯವೆಂಬ ಒಂಭತ್ತನೆಯ ಉದ್ದೇಶವು.

[೧೨] ಚತುರ್ಥೀನಿರ್ಣಯವು.

[೧೨] ಚತುರ್ಥೀ (ಚೌತಿ) ನಿರ್ಣಯವು. ಗಣೇಶವ್ರತವನ್ನುಳಿದ ಉಪವಾಸದವಿಷಯದಲ್ಲಿ ಪಂಚಮಿಯಿಂದ ಕೂಡಿದ ಚೌತಿಯನ್ನು ಗ್ರಹಿ

ಸಬೇಕು, ಗೌರಿ ಮತ್ತು ವಿನಾಯಕ ವ್ರತಗಳಿಗೆ ಮಧ್ಯಾಹ್ನವ್ಯಾಪ್ತಿ ಇರುವತಿಥಿಯು ಗ್ರಾಹ್ಯವಾದದ್ದು. ಎರಡನೆಯದಿನದಲ್ಲಿಯೇ ಮಧ್ಯಾಹ್ನವ್ಯಾಪ್ತಿ ಇದ್ದರೆ ಎರಡನೆಯ ತಿಥಿಯೇ ಗ್ರಾಹ್ಯವು. ತೃತೀಯಾಯೋಗಪ್ರಾಶಸ್ತ್ಯ ವಿರುವದರಿಂದ ಎರಡು ದಿವಸಗಳಲ್ಲಿಯೂ ತಿಥಿಗೆ ಮಧ್ಯಾಹ್ನ ವ್ಯಾಪ್ತಿ ಇದ್ದರೂ,ಅಥವಾ ಎರಡುದಿನಗಳಲ್ಲಿ ತಿಥಿಗೆ ಮಧ್ಯಾಹ್ನವ್ಯಾಪ್ತಿ ಇಲ್ಲದಿದ್ದರೂ ಎರಡುದಿನಗಳಲ್ಲಿಯೂ ತಿಥಿಗೆ ಸಮಾನಕಾಲ ವ್ಯಾಪ್ತಿ ಇದ್ದರೂ ಅಥವಾ ಸ್ವಲ್ಪ ಹೆಚ್ಚುಕಡಮೆಯ ಕಾಲ ವ್ಯಾಪ್ತಿ ಇದ್ದರೂ ಮೊದಲನೆಯದಿವಸದ ಚತುರ್ಥಿಯೇ ಯೋಗ್ಯವಾದದ್ದು. ನಾಗವ್ರತದಲ್ಲಿ ಯಾದರೋ ಪೂರ್ವದಿನದಲ್ಲಿಯೇ ಮಧ್ಯಾಹ್ನವ್ಯಾಪ್ತಿಯು ಚತುರ್ಥಿಗೆ ಇದ್ದರೆ ಪೂರ್ವದಿನವೇ ಗ್ರಾಹ್ಯವು, ಎರಡು ದಿನಗಳಲ್ಲಿಯೂ ಮಧ್ಯಾಹ್ನ ವ್ಯಾಪ್ತಿ ಇರುವುದು ಮೊದಲಾದ ಹಿಂದೆಹೇಳಿದ ನಾಲ್ಕು ಸಂದರ್ಭಗಳಲ್ಲಿಯೂ (ಪಕ್ಷಗಳಲ್ಲಿಯೂ) ಪಂಚಮೀಯುಕ್ತವಾದದ್ದನ್ನೇ ಗ್ರಹಿಸಬೇಕು,ಸಂಕಷ್ಟ ಚತುರ್ಥಿಯಾದರೋ ಚಂದ್ರೋದಯವ್ಯಾಪ್ತಿ ಯುಳ್ಳದ್ದಾಗಿರಬೇಕು. ಅಂದರೆ ತೃತೀಯೆಯಿಂದ ಕೂಡಿದ ಚೌತಿಗೆ ಚಂದ್ರೋದಯವಾಪ್ತಿ ಇದ್ದರೆ ಅದನ್ನು ಗ್ರಹಿಸಬೇಕು. ಪರದಿನದಲ್ಲಿ ಚಂದ್ರೋದಯ ವ್ಯಾಪ್ತಿಯಿದ್ದರೆ ಪರತಿಥಿಯೇ ಗ್ರಾಹ್ಯವು. ಎರಡುದಿನಗಳಲ್ಲಿಯೂ ಚಂದ್ರೋದಯವ್ಯಾಪ್ತಿಯು ಚತುರ್ಥಿ ಗಿದ್ದರೆ ತೃತಿಯೆಯಿಂದ ಕೂಡಿದ ಚತುರ್ಥಿಯನ್ನೇ ಗ್ರಹಿಸಬೇಕು. ಎರಡುದಿನಗಳಲ್ಲಿಯೂ ಚಂದ್ರೋದಯಕಾಲಕ್ಕೆ ವಾಪ್ತಿ ಇಲ್ಲದಿದ್ದರೆ ಪಂಚಮೀಯುತವಾದ ಚತುರ್ಥಿಯೇ ಗ್ರಾಹ್ಯ ವಾದದ್ದು. ಇಂತು ಚತುರ್ಥೀನಿರ್ಣಯವೆಂಬ ಹತ್ತನೆಯ ಉದ್ದೇಶವು.

## (೧೧) ಪಂಚಮೀನಿರ್ಣಯವು.

(೧೧) ಪಂಚಮೀನಿರ್ಣಯವು. ಶುಕ್ಲಪಕ್ಷದಲ್ಲಾಗಲೀ, ಕೃಷ್ಣಪಕ್ಷದಲ್ಲಾಗಲೀ, ನಿತ್ಯನೈಮಿತ್ತಿಕ ಕರ್ಮಗಳಿಗೆ ಚತುರ್ಥಿಯ ವೇಧೆಯುಳ್ಳ ಪಂಚಮಿಯು ಯೋಗ್ಯವಾದದ್ದು. ನಾಗವ್ರತದಲ್ಲಿ ಷಷ್ಠಿಯಿಂದ ಕೂಡಿದ ಪಂಚಮಿಯು ಉತ್ತಮವಾದದ್ದು. ಎರಡನೆಯ ದಿವಸ ಮೂರು ಮುಹೂರ್ತಕ್ಕಿಂತಲೂ ಕಡಮೆಯಾಗಿ ಪಂಚಮಿಯಿದ್ದು, ಮೊದಲನೆಯದಿ

ನದಲ್ಲಿ ಮೂರು ಮುಹೂರ್ತಕ್ಕಿಂತ ಕಡಮೆಯಾಗಿರುವ ಚತುರ್ಥಿಯಿಂದ ಕೂಡಿದ್ದರೆ, ಆಗ ಚತುರ್ಥೀವಿದ್ಧವಾದ ಪಂಚಮಿಯು ಗ್ರಾಹ್ಯವು. ಮೂರುಮುಹೂರ್ತಕ್ಕಿಂತ ಹೆಚ್ಚಾಗಿರುವ ಚತುರ್ಥಿಯಿಂದ ಕೂಡಿದ್ದರೆ ಎರಡನೆಯದಿವಸ ಎರಡು ಮುಹೂರ್ತಕಾಲ ಪಂಚಮಿ ಇದ್ದಾಗ್ಯೂ ಎರಡನೆಯ ದಿವಸದ ಪಂಚಮಿಯೇ ಗ್ರಾಹ್ಯವಾದದ್ದು. ಇಂತು ಪಂಚಮಿಯು ನಿರ್ಣಯ ವೆಂಬ ಹನ್ನೊಂದನೆಯ ಉದ್ದೇಶವು.

(೧೪) ಷಷ್ಠೀ ನಿರ್ಣಯವು.

(೧೪) ಷಷ್ಠೀನಿರ್ಣಯವು. ಸ್ಕಂದವ್ರತದಲ್ಲಿ ಪಂಚಮೀಯುಕ್ತವಾಗಿಯೂ, ಇತರವ್ರತಗಳಲ್ಲಿ ಸಪ್ತಮೀ ಯುಕ್ತವಾಗಿಯೂ ಇರುವಷಷ್ಠಿಯನ್ನೇ ಗ್ರಹಿಸ ಬೇಕು. ಮೊಧಲನೆಯದಿವಸದಲ್ಲಿ ಆರು ಮುಹೂರ್ತಕ್ಕಿಂತ ಕಡಮೆಯಾಗಿ ಪಂಚಮಿ ಇದ್ದರೆ ಆದಿನದ ಷಷ್ಠಿಯನ್ನು ಗ್ರಹಿಸಬಹುದು. ಭಾನುವಾರದದಿವಸದಲ್ಲಿ ಷಷ್ಠೀ ಸಪ್ತಮೀಗಳು ಕೂಡಿದ್ದರೆ ಪದ್ಮಕ ಯೋಗವೆಂದು ಹೇಳಿಸಿಕೊಳ್ಳುತ್ತದೆ. ಇಂತು ಷಷ್ಠೀನಿರ್ಣಯವೆಂಬ ಹನ್ನೆರಡನೆಯ ಉದ್ದೇಶವು.

(೧೫) ಸಪ್ತಮೀ ನಿರ್ಣಯವು.

(೧೫) ಸಪ್ತಮೀನಿರ್ಣಯವು. ಎಲ್ಲಾಕರ್ಮಗಳಿಗೂ ಷಷ್ಠೀಯುಕ್ತವಾದ ಸಪ್ತಮಿಯೇ ಯೋಗ್ಯವಾದದ್ದು. ಆದರೆ ಪೂರ್ವದಿನದಲ್ಲಿ ಸೂರ್ಯಾಸ್ತಕಾಲದವರೆಗೂ ಷಷ್ಠಿಯು ಇದ್ದು, ಆಮೇಲೆ ಸಪ್ತಮಿಯು ಬರು ವದರಿಂದ ಹಗಲು ಷಷ್ಠಿಯ ವೇಧೆಯು ಬರದೆಹೋದಾಗಮಾತ್ರ ಎರಡನೆಯದಿನದ ಸಪ್ತಮಿಗೆ ಅಷ್ಟಮೀ ವೇಧೆ ಇದ್ದಾಗ್ಯೂ ಎರಡನೆಯ ದಿವಸದ ಸಪ್ತಮಿಯೇ ಯೋಗ್ಯವಾದದ್ದು. ಇಂತು ಸಪ್ತಮೀನಿರ್ಣಯ ವೆಂಬ ಹದಿಮೂರನೆಯ ಉದ್ದೇಶವು.

(೧೬) ಅಷ್ಟಮೀನಿರ್ಣಯವು

(೧೬) ಅಷ್ಟಮೀನಿರ್ಣಯವು. ಯಾವ ವ್ರತಕ್ಕಾಗಲೀ ಶುಕ್ಲಪಕ್ಷದಲ್ಲಿ ಎರಡನೆಯ ಅಷ್ಟಮಿಯೇ ಗ್ರಾಹ್ಯವು, ಕೃಷ್ಣಪಕ್ಷದಲ್ಲಿ ಮೊದಲನೆಯ ಅಷ್ಟಮಿಯನ್ನು ಗ್ರಹಿಸಬೇಕು. ಪಾರ್ವತೀ ಪರಮೇಶ್ವರರಿಬ್ಬರನ್ನೂ ಉದ್ದೇಶಿಸಿ ಆಚರಿಸುವ ಉತ್ಸವದಲ್ಲಿ ಕೃಷ್ಣಪಕ್ಷದಲ್ಲಿ ಆದ

ರೂ ಎರಡನೆಯ ಅಷ್ಟಮಿಯೇ ಗ್ರಾಹ್ಯವಾದದ್ದು. ಶುಕ್ಲಪಕ್ಷದಲ್ಲಿ ಬುಧವಾರಕ್ಕೆ ಪ್ರಾತಃಕಾಲ ಮೊದಲ್ಗೊಂಡು ಅಪರಾಹ್ಣದವರೆಗೆ ಒಂದು ಮುಹೂರ್ತಕಾಲವಾದರೂ ಅಷ್ಟಮಿಯ ಸಂಬಂಧವಿದ್ದರೆ ಆ ಬುಧವಾರದಿಂದೊಡಗೂಡಿದ ಅಷ್ಟಮಿಯನ್ನು ಗ್ರಹಿಸಬೇಕು. ಆದರೆ ಅಪರಾಹ್ಣವನ್ನು ಮೀರಿ ಸಾಯಾಹ್ನ ಕಾಲಕ್ಕೆ ಅಷ್ಟಮಿಬಂದರೂ, ಅಥವಾ ಚೈತ್ರ, ಶ್ರಾವಣ, ಭಾದ್ರಪದ, ಆಶ್ವಯುಜ, ಕಾರ್ತ್ತಿಕ ಮಾಸಗಳಲ್ಲಾದರೂ ಇಲ್ಲದೆ ಕೃಷ್ಣಪಕ್ಷದಲ್ಲಾದರೂ, ಮೇಲೆ ಹೇಳಿದಂತೆ ಬುಧವಾರ ಯೋಗವನ್ನು ಮುಖ್ಯವೆಂದೆಣಿಸಿ ಆ ದಿನದಲ್ಲಿ ಅಷ್ಟಮಿಯೆಂದು ಭಾವಿಸಕೂಡದು. ಕೆಲವರು ಪ್ರತಿಯೊಂದು ಕೃಷ್ಣಪಕ್ಷದ ಅಷ್ಟಮಿಯಲ್ಲಿಯೂ ಕಾಲಭೈರವನನ್ನು ಉದ್ದೇಶಿಸಿ ಉಪವಾಸಮಾಡುವರು. ಹಾಗೆ ಮಾಡುವುದರಲ್ಲಿ ಮಾರ್ಗಶೀರ್ಷಬಹುಳ ಅಷ್ಟಮಿಯ ದಿವಸ ಭೈರವಜಯಂತಿ ಬರುವುದರಿಂದ ಅದಕ್ಕೆ ಯೋಗ್ಯವಾದ ಕಾಲವನ್ನು ನಿರ್ಣಯಿಸುವುದರಲ್ಲಿ ಮಧ್ಯಾಹ್ನವ್ಯಾಪ್ತಿಯು ಅಷ್ಟಮಿಗೆ ಇರಬೇಕು. ಎರಡು ದಿನಗಳಲ್ಲಿ ಅಷ್ಟಮಿಗೆ ಮಧ್ಯಾಹ್ನವ್ಯಾಪ್ತಿ ಇದ್ದರೆ ಮೊದಲನೆಯ ಅಷ್ಟಮಿಯೇ ಯೋಗ್ಯವಾದದ್ದು. ಕೌಸ್ತುಭವೆಂಬ ಗ್ರಂಥದಲ್ಲಿ ಪ್ರದೋಷಕಾಲಕ್ಕೆ ಅಷ್ಟಮೀ ವ್ಯಾಪ್ತಿ ಇರಬೇಕೆಂದು ಹೇಳಿದೆ. ಆದ್ದರಿಂದ ಎರಡು ದಿನಗಳಲ್ಲಿಯೂ ಅಷ್ಟಮೀ ವ್ಯಾಪ್ತಿಯು ಪ್ರದೋಷಕ್ಕೆ ಇದ್ದರೆ ಮೇಲೆ ಕಂಡ ಎರಡುವಚನಗಳಿಗೂ ವಿರೋಧಬಾರದಂತಿರುವುದಕ್ಕಾಗಿ ನವಮಿಯಿಂದ ಕೂಡಿದ ಅಷ್ಟಮಿಯನ್ನೇ ಗ್ರಹಿಸಬೇಕು. ಪೂರ್ವದಿನದಲ್ಲಿ ಪ್ರದೋಷಕಾಲಕ್ಕೆ ಅಷ್ಟಮೀ ವ್ಯಾಪ್ತಿಯೂ, ಎರಡನೆಯ ದಿನದಲ್ಲಿ ಮಧ್ಯಾಹ್ನಕ್ಕೆ ವ್ಯಾಪ್ತಿಯೂ, ಇದ್ದರೆ ಬಹುಮಂದಿ ಶಿಷ್ಟರು ಆಚರಣೆಗೆ ತಂದಿರುವ ಪ್ರಕಾರವಾಗಿ ಪ್ರದೋಷವ್ಯಾಪ್ತಿ ಇರುವ ಮೊದಲ ಅಷ್ಟಮಿಯನ್ನೇ ಗ್ರಹಿಸಬೇಕು. ಅಲ್ಲದೆ "ಅರ್ಕಪರ್ವದ್ವಯೇ ರಾತ್ರೌ ಚತುರ್ದಶ್ಯಷ್ಟಮೀದಿವಾ" ಅಂದರೆ ಭಾನುವಾರ, ಪೂರ್ಣಿಮಾ, ಅಮಾವಾಸ್ಯೆ, ಈ ದಿವಸಗಳಲ್ಲಿ ರಾತ್ರಿಯಲ್ಲಿಯೂ, ಚತುರ್ದಶಿ, ಅಷ್ಟಮಿಗಳಲ್ಲಿ ಹಗಲೂ, ಭೋಜನ ಮಾಡಕೂಡದು, ಎಂದು ಹೇಳುವ ವಚನ ಪ್ರಕಾರವಾಗಿ ಹಗಲು ಊಟಮಾಡಕೂಡದೆಂಬನಿಯಮವನ್ನು ಮಾತ್ರ

ಹೇಳಿದ ಹಾಗಾಯ್ತಲ್ಲದೆ, ಮತ್ತೆಯಾವ ವ್ರತನಿಯಮವನ್ನೂ ಹೇಳಿಲ್ಲ. "ನಿಷೇಧಸ್ತು ನಿವೃತ್ಯಾತ್ಮಾ ಕಾಲ ಮಾತ್ರಮ ಪೇಕ್ಷತೇ" ಮಾಡಕೂಡ ದೆಂದು ಹೇಳುವ ನಿಷೇಧವಚನವು ಕಾಲವನ್ನು ಮಾತ್ರ ಅಪೇಕ್ಷಿಸುತ್ತ ದೆ; ಎಂಬ ವಚನಪ್ರಕಾರವಾಗಿ ಇಲ್ಲಿ ಊಟಮಾಡಕೂಡದೆಂದು ಹೇ ಳುವವಚನಕ್ಕೆ ಆ ತಿಥಿಯು ಇರುವ ಕಾಲದಲ್ಲಿ ಊಟಮಾಡಕೂಡದೆಂಬ ಅರ್ಥವನ್ನು ಸೂಚಿಸುವುದು. ಆದಕಾರಣ ಅಷ್ಟಮಿ ಇರುವ ಕಾಲ ದಲ್ಲಿ ಊಟಮಾಡದೆ ಅಷ್ಟಮಿ ಬರುವುದಕ್ಕಿಂತ ಮುಂಚೆ ಅದೇ ದಿನದ ಲ್ಲಿ ಸಪ್ತಮಿ ಇರುವ ಕಾಲದಲ್ಲಾಗಲಿ ಮಾರನೇ ದಿವಸ ಅಷ್ಟಮಿಯು ಕಳೆದಮೇಲೆ ಬರುವ ನವಮಿಯಲ್ಲಾಗಲಿ ಊಟಮಾಡಬಹುದೆಂದು ತೋ ರುವುದು. ಹೀಗೆ ಮಾಡತಕ್ಕದ್ದು ಯೋಗ್ಯವೋ ಅಲ್ಲವೋ ಎಂಬು ದನ್ನು ತಿಳಿದವರು ಗೊತ್ತುಮಾಡಬೇಕು. ಇಂತು ಅಷ್ಟಮೀನಿರ್ಣಯ ವೆಂಬ ಹದಿನಾಲ್ಕನೆಯ ಉದ್ದೇಶವು.

## (೧೫) ನವಮೀನಿರ್ಣಯವು

(೧೫) ನವಮೀನಿರ್ಣಯವು. ಅಷ್ಟಮೀಯುಕ್ತವಾದ ನವಮಿಯೇ ಕರ್ಮಕ್ಕೆ (ವ್ರತೋಪವಾಸ ಮೊದಲಾದ್ದಕ್ಕೆ) ಯೋಗ್ಯವಾದದ್ದು. ಮಾ ರನೆಯ ದಿವಸ ಉಳಿದ ನವಮಿಯನ್ನು ಗ್ರಹಿಸಕೂಡದು. ಇಂತು ನವಮೀ ನಿರ್ಣಯವೆಂಬ ಹದಿನೈದನೆಯ ಉದ್ದೇಶವು.

## (೧೬) ದಶಮೀನಿರ್ಣಯವು

ಉಪವಾಸ ಮೊದಲಾದವುಗಳಿಗೆ ನವಮೀಯುಕ್ತವಾದ ದಶಮಿ ಯೇ ಗ್ರಾಹ್ಯವಾದದ್ದು. ನವಮಿಯ ವೇಧೆಯುಳ್ಳ ದಶಮಿಯು ಸಿಕ್ಕ ದಿದ್ದರೆ ಏಕಾದಶಿಯಿಂದ ಕೂಡಿದ ದಶಮಿಯನ್ನೂ ಗ್ರಹಿಸಬಹುದು. ಇಂ ತು ದಶಮೀನಿರ್ಣಯವೆಂಬ ಹದಿನಾರನೆಯ ಉದ್ದೇಶವು.

## (೧೭) ಏಕಾದಶೀ ನಿರ್ಣಯವು.

(೧೭) ಏಕಾದಶೀ ನಿರ್ಣಯವು. ಏಕಾದಶಿಯು ಉಪವಾಸವೆಂ ಬುದು ಭೋಜನ ಮಾಡಕೂಡದೆಂಬ ನಿಷೇಧ ಪರಿಪಾಲನ ರೂಪವೆಂ ತಲೂ, ಬಂದಾನೊಂದು ವ್ರತ ಸ್ವರೂಪವೆಂತಲೂ, ಎರಡು ವಿಧ. ಮೊದ ಲನೆಯ ವಿಭಾಗದಲ್ಲಿ ಪುತ್ರವಂತರಾದ ಗೃಹಸ್ಥರೇ ಮೊದಲಾದವರಿಗ

ಕೃಷ್ಣಪಕ್ಷದಲ್ಲಿಯೂ ಅಧಿಕಾರವುಂಟು. ವ್ರತಸ್ವರೂಪವಾದ ಉಪವಾಸವಾದರೋ ಮಕ್ಕಳೊಂದಿಗರಾದ ಗೃಹಸ್ಥರು ಕೃಷ್ಣಪಕ್ಷದಲ್ಲಿ ಆಚರಿಸಕೂಡದು. ಆದರೆ ಆ ದಿವಸದಲ್ಲಿ ಸಮಂತ್ರಕವಾಗಿ ವ್ರತಸಂಕಲ್ಪಮಾಡದೆ ಅನ್ನವನ್ನು ಮಾತ್ರ ಬಿಟ್ಟು ತಮ್ಮ ಶಕ್ತ್ಯನುಸಾರವಾಗಿ ಇತರ ವಿಧವಾದ ಆಹಾರವನ್ನು ಕಲ್ಪಿಸಿ ಕೊಂಡು ಉಪವಾಸ ಮಾಡಬಹುದು. ಹೀಗೆಯೇ ಕ್ಷಯತಿಥಿಯಾಗಿರುವ ಶುಕ್ಲಪಕ್ಷೈಕಾದಶಿಯಲ್ಲಿಯೂ ನಡೆಯಿಸಬೇಕು. ಶಯನ್ಯೈಕಾದಶಿ ಬೋಧನ್ಯೈಕಾದಶಿಗಳ ಮಧ್ಯದಲ್ಲಿ ಬರುವ ಕೃಷ್ಣೈಕಾದಶಿಗಳಲ್ಲಿ ಪುತ್ರವಂತರಾದ ಗೃಹಸ್ಥರು ಮೊದಲಾಗಿ ಸರ್ವರಿಗೂ ಉಪವಾಸಾಧಿಕಾರವುಂಟು. ವಿಷ್ಣುಸಾಯುಜ್ಯವನ್ನೂ, ಆಯುಷ್ಯವನ್ನೂ, ಮಕ್ಕಳನ್ನೂ, ಬಯಸತಕ್ಕವರು ಕಾಮ್ಯ ವ್ರತವನ್ನು ಪಕ್ಷದ್ವಯದಲ್ಲಿಯೂ ಆಚರಿಸಬೇಕು. ಹಾಗೆ ಆಚರಿಸುವ ವಿಷಯದಲ್ಲಿ ಯಾವ ನಿಷೇಧವೂ ಇಲ್ಲ. ಆಚರಿಸದಿದ್ದರೆ ಪ್ರಬಲವಾದ ಪ್ರತ್ಯವಾಯವು ಸಂಭವಿಸುವದೆಂದು ಹೇಳಿರುವಕಾರಣ ವೈಷ್ಣವಗೃಹಸ್ಥರಿಗೆ ಕೃಷ್ಣೈಕಾದಶಿಯಲ್ಲೂ ಉಪವಾಸವು ನಿತ್ಯವಾದದ್ದು. ಅಲ್ಲದೆ ಈ ಏಕಾದಶೀ ವ್ರತವು ಶೈವ, ವೈಷ್ಣವ, ಸೌರ ಮೊದಲಾದ ಎಲ್ಲಜನಗಳಿಗೂ ನಿತ್ಯವಾದದ್ದು. ಮತ್ತು ಈ ವ್ರತಾಚರಣೆಯಿಂದ ಸಂಪತ್ಪ್ರಾಪ್ತಿ ಮೊದಲಾದ ಫಲವು ಹೇಳಲ್ಪಟ್ಟಿರುವುದರಿಂದ ಕಾಮ್ಯವ್ರತವಾಗಿಯೂ ಇದೆ. ಕೆಲವರು ಒಂದು ಮುಹೂರ್ತಕಾಲ ಮೊದಲಾದ ಪ್ರಮಾಣವುಳ್ಳ ದಶಮಿ ಇದ್ದರೆ ದಶಮಿಯಲ್ಲಿಯೇ ಭೋಜನ ಮಾಡಬೇಕೆಂತಲೂ, ಸೂರ್ಯೋದಯಕ್ಕಿಂತ ಮುಂಚೆಯೇ ಪ್ರಾರಂಭವಾದ ಶುದ್ಧಾಧಿಕ ದ್ವಾದಶಿಯಲ್ಲಿ ಒಟ್ಟಿಗೆ ಎರಡು ಉಪವಾಸಗಳನ್ನು ಮಾಡಬೇಕೆಂತಲೂ, ತಿಥಿ ನಿರ್ಣಯವನ್ನು ಹೇಳುತ್ತಾರೆ. ಅದು ಸರಿಯಲ್ಲವು. ಎಂಟು ವರ್ಷ ವಯಸ್ಸಾದಮೇಲೆ ಎಂಭತ್ತು ವರ್ಷಗಳ ವಯಸ್ಸಾಗುವವರೆಗೂ ಏಕಾದಶೀ ವ್ರತವನ್ನು ಮಾಡಬಹುದು. ಆಮೇಲೂ ಶಕ್ತಿ ಇದ್ದರೆ ಮಾಡಬಹುದು. ಸುವಾಸಿನಿಯರು ಪತಿಯ ಆಜ್ಞೆಯನ್ನಾಗಲಿ, ತಂದೆ ಮೊದಲಾದವರ ಅನುಜ್ಞೆಯನ್ನಾಗಲಿ ಪಡೆಯದೆ ವ್ರತೋಪವಾಸಾದಿಗಳನ್ನು ಮಾಡಿದರೆ, ವ್ರತಾದಿಗಳು

ನಿಷ್ಫಲವಾಗುವುದಲ್ಲದೆ ಪ್ರತ್ಯವಾಯವು ಸಂಭವಿಸಿ ಪತಿಗೆ ಆಯುಸ್ಸು ಕ್ಷೀಣವಾಗುವುದು. ತಮಗೆನರಕಪ್ರಾಪ್ತಿಯಾಗುವದು. ಉಪವಾಸ ಮಾಡುವದಕ್ಕೆ ಶಕ್ತಿಯಿಲ್ಲದವರಿಗೆ

ನಕ್ತಂ ಹವಿಷ್ಯಾನ್ನ ಮನೌದನಂ ವಾ ಫಲಂ ತಿಲಾಃ ಕ್ಷೀರ ಮ
ಥಾಂಬು ಚಾ ಜ್ಯಂ । ಯತ್ಪಂಚಗವ್ಯಂ ಯದಿ ಚಾ ಪಿ ವಾಯುಃ
ಪ್ರಶಸ್ತಮತ್ರೋತ್ತರ ಮುತ್ತರಂಚ ॥ ೧ ॥

ನಕ್ತಮಾಡುವುದು, ಅನ್ನವಲ್ಲದ ಹವಿಷ್ಯಪದಾರ್ಥವನ್ನು ತೆಗೆದುಕೊಳ್ಳು ವುದು, ಹಣ್ಣು, ಎಳ್ಳು, ಹಾಲು, ನೀರು, ತುಪ್ಪ, ಪಂಚಗವ್ಯ, ವಾಯು ಇವುಗಳಲ್ಲೊಂದರಿಂದ ಹಸಿವನ್ನಡಗಿಸಿಕೊಳ್ಳುವುದು ಸರಿಯಾದದ್ದು. ಇವುಗಳಲ್ಲಿ ಮೊದಲಿನಿಂದ ಕ್ರಮವಾಗಿ ಒಂದಕ್ಕಿಂತ ಮತ್ತೊಂದು ಶ್ರೇಷ್ಠವಾದದ್ದು ॥೧॥

ಈರೀತಿಯಾಗಿ ಯಾವುದಾದರೂ ಒಂದು ಬಗೆಯಿಂದ ಉಪವಾಸ ಮಾಡಬೇಕಲ್ಲದೆ ಏಕಾದಶಿಯನ್ನೇ ಬಿಡಕೂಡದು. ಮರೆತು ಅಥವಾ ತಿಳಿಯದೆ ಏಕಾದಶಿಯ ಉಪವಾಸವನ್ನು ಮಾಡುವುದು ತಪ್ಪಿಹೋದರೆ ದ್ವಾದಶಿಯಲ್ಲಿಯಾದರೂ ಉಪವಾಸ ಮಾಡಬೇಕು. ದ್ವಾದಶಿಯಲ್ಲಿ ಯೂ ಮಾಡದಿದ್ದರೆ ಯವಮಧ್ಯ ಚಾಂದ್ರಾಯಣವನ್ನು ಪ್ರಾಯಶ್ಚಿತ್ತ ರೂಪವಾಗಿ ಮಾಡಬೇಕು. ನಾಸ್ತಿಕತೆಯಿಂದ ಮಾಡದಿದ್ದರೆ ಪಿಪೀ ಲಿಕಾ ಮಧ್ಯಚಾಂದ್ರಾಯಣವೇ ಪ್ರಾಯಶ್ಚಿತ್ತವು. ಉಪವಾಸಮಾಡು ವುದಕ್ಕೆ ಶಕ್ತಿ ಯಿಲ್ಲದ ಪತಿ,ತಂದೆ,ಮೊದಲಾದವರಿಗೆ ಬದಲಾಗಿಹೆಂಡತಿ, ಮಗ, ಅತ್ತಿಗೆ, ಸಹೋದರ, ಮೊದಲಾದವರಿಂದ ಮಾಡಿಸಿದರೆ ನೂರು ಅಶ್ವಮೇಧಯಾಗವನ್ನು ಮಾಡಿದಷ್ಟು ಪುಣ್ಯವುಂಟಾಗುವುದು.

(೨೧) ವ್ರತಮಾಡಬೇಕಾದ ದಿನದ ನಿರ್ಣಯವು.

(೨೦) ವ್ರತದಿನ ನಿರ್ಣಯವು, ವ್ರತಮಾಡುವದಕ್ಕೆ ವೈಷ್ಣವರೆಂ ತಲೂ, ಸ್ಮಾರ್ತರೆಂತಲೂ, ಎರಡುವಿಧವಾದ ಅಧಿಕಾರಿಗಳುಂಟು. ಅವ ರಲ್ಲಿ ಪ್ರಾಯಶಃ "ಯಸ್ಯದೀಕ್ಷಾಸ್ತಿವೈಷ್ಣವೀ" ಎಂಬ ವಚನಾನು ಸಾರವಾಗಿ ವಿಷ್ಣುದೀಕ್ಷೆಯನ್ನು ವಹಿಸಿರುವವರು ವೈಷ್ಣವರೆಂತಲೂ, ಉಳಿದವರು ಸ್ಮಾರ್ತರೆಂತಲೂ ಮಹಾ ನಿಬಂಧಗಳಲ್ಲಿ ಹೇಳಿದೆ. ಆದರೂ

“ ವಂಶಪಾರಂಪರ್ಯವಾಗಿ ಯಾರು ವೈಷ್ಣವರೆಂತಲೂ, ಸ್ಮಾರ್ತರೆಂತಲೂ, ಆಚರಣೆ ಬಂದಿದೆಯೋ ಅವರೇ ವೈಷ್ಣವರೆಂತಲೂ,ಸ್ಮಾರ್ತರೆಂತಲೂ ಹೇಳಿಸಿಕೊಳ್ಳುವರೆಂದು ದೊಡ್ಡವರು ಹೇಳುತ್ತಾರೆ ” ಎಂದು ಹೇಳುವ ‘ಸಿಂಧು’ ಕಾರನ ಅಭಿಪ್ರಾಯವನ್ನೇ ಎಲ್ಲಾದೇಶಗಳಲ್ಲಿಯೂ, ಶಿಷ್ಟರು ಪರಿಗ್ರಹಿಸಿರುವರು. ವೇಧೆಯೂ ಸಹ ಸೂರ್ಯೋದಯ ಕಾಲದವರೆಗೂ ದಶಮಿ ಇರುವುದೆಂತಲೂ, ಅರುಣೋದಯದವರೆಗೂ ದಶಮಿ ಇರುವದೆಂತಲೂ, ಎರಡು ವಿಧವಾಗಿದೆ. ಸೂರ್ಯೋದಯಕ್ಕಿಂತ ನಾಲ್ಕುಗಳಿಗೆ ಮುಂಚೆ ಅರುಣೋದಯಕಾಲವು. ಹಿಂದಣದಿವಸವು ಸಂಪೂರ್ಣವಾಗಿ ಮುಗಿದಮೇಲೆ ಎಂದರೆ ೬೦ ಗಳಿಗೆಯಾದಮೇಲೆ ಬರುವ ಕಾಲವೇ ಸೂರ್ಯೋದಯ ಕಾಲವು. (ಎಂದರೆ ಸೂರ್ಯನು ಕಾಣಿಸುವಿಕೆ) ಆದ್ದರಿಂದ ಹಿಂದಣ ದಿವಸದಲ್ಲಿ ೫೬ ಗಳಿಗೆ ಕಳೆದಮೇಲೆ ದಶಮಿಯು ೧ ವಿಘಳಿಗೆ ಇದ್ದಾಗ್ಯೂ ಆದಿವಸದಲ್ಲಿ ಅರುಣೋದಯವೇಧೆಯು ಏಕಾದಶಿಗೆ ಬರುವುದು. ಇದು ವೈಷ್ಣವರ ವಿಷಯದಲ್ಲಿ ಮಾತ್ರ ಎಣಿಸಲ್ಪಡತಕ್ಕದ್ದು. ೬೦ ಗಳಿಗೆ ಕಳೆದ ಮೇಲಿನ ಸೂರ್ಯೋದಯ ಕಾಲದಲ್ಲಿ ೧ ವಿಘಳಿಗೆಯು ಕಾಲ ದಶಮಿ ಇದ್ದಾಗ್ಯೂ ಸೂರ್ಯೋದಯ ವೇಧೆ ಯೆನಿಸುವುದು. ಇದು ಸ್ಮಾರ್ತಸಂಪ್ರದಾಯಕ್ಕೆ ಸಂಬಂಧಪಟ್ಟದ್ದು. ಜೋಯಿಸರುಗಳ ಚರ್ಚೆಯಿಂದ ವೇಧೆಯಲ್ಲಿ ಸಂದೇಹವುಂಟಾದರೆ—

ಬಹುವಾಕ್ಯವಿರೋಧೇನ ಬ್ರಾಹ್ಮಣೇಷು ವಿವಾದಿಷು ।
ಏಕಾದಶೀಂ ಪರಿತ್ಯಜ್ಯ ದ್ವಾದಶೀಂ ಸಮುಪೋಷಯೇತ್ ॥೧॥

ಎಂಬ ವಚನಪ್ರಕಾರವಾಗಿ ದಶಮಿಯ ವೇಧೆಯ ವಿಷಯವು ಅನುಮಾನಾಸ್ಪದವಾಗಿದ್ದರೆ ಅಂತಹ ಏಕಾದಶಿಯನ್ನು ಬಿಟ್ಟು ದ್ವಾದಶಿಯ ದಿನವೇ ಉಪವಾಸ ಮಾಡಬಹುದು॥೧॥ ಹೀಗೆ ಏಕಾದಶಿ, ಶುದ್ಧವಾದದ್ದೆಂತಲೂ, ವಿದ್ಧವಾದದ್ದೆಂತಲೂ, ಎರಡುವಿಧವಾಗಿದೆ. ಅರುಣೋದಯಕಾಲಕ್ಕೆ ದಶಮಿ ಇದ್ದರೆ ಆ ಏಕಾದಶಿಯು ವಿದ್ಧವೆನಿಸುವದು. ವೈಷ್ಣವರು ಆ ಏಕಾದಶಿಯನ್ನು ಬಿಟ್ಟು ದ್ವಾದಶಿಯಲ್ಲಿ ಉಪವಾಸ ಮಾಡಬೇಕು. ಅರುಣೋದಯವೇಧೆಯಿಲ್ಲದ್ದು ಶುದ್ಧವೆನಿಸುವುದು. ಈ ಶುದ್ಧೈಕಾದಶಿಯು

ಏಕಾದಶಿಮಾತ್ರ ಹೆಚ್ಚಾಗಿರುವದೆಂತಲೂ, ದ್ವಾದಶಿಮಾತ್ರ ಹೆಚ್ಚಾಗಿರುವುದೆಂತಲೂ, ಎರಡೂ ಹೆಚ್ಚಾಗಿರುವುದೆಂತಲೂ, ಎರಡೂ ಹೆಚ್ಚಾಗಿಲ್ಲದಿರುವುದೆಂತಲೂ, ನಾಲ್ಕುವಿಧವಾಗಿರುವುದು. ಹೆಚ್ಚಾಗಿರುವುದೆಂದರೆ ಸೂರ್ಯೋದಯವಾದಮೇಲೆ ಇರುವ ಗಳಿಗೆಗಳ ವ್ಯಾಪ್ತಿ ಇರುವುದೆಂದು ತಿಳಿಯಬೇಕು.

ವೈಷ್ಣವ (ಭಾಗವತೈಕಾದಶಿಗೆ) ಉದಾಹರಣೆಗಳು:—
ದಶಮಿ ೫೫ ಗಳಿಗೆ, ಏಕಾದಶಿ ೬೦ ಗಳಿಗೆ, ೧ ವಿಘಳಿಗೆ, ದ್ವಾದಶಿ(ಕ್ಷಯ ದಿವಸವಾದ್ದರಿಂದ) ೫೮ ಗಳಿಗೆ ಹೀಗಿದ್ದರೆ ಏಕಾದಶಿ ಮಾತ್ರ ಹೆಚ್ಚಾಗಿರುವ ಶುದ್ಧೈಕಾದಶಿಯಾಗುವುದು. ಇಲ್ಲಿ ವೈಷ್ಣವರು ದ್ವಾದಶಿಯಲ್ಲಿ ಉಪವಾಸಮಾಡಬೇಕು. ಸ್ಮಾರ್ತ್ತರು ಏಕಾದಶಿಯಲ್ಲಿಯೇ ಉಪವಾಸ ಮಾಡಬೇಕು. ದಶಮಿ ೫೫ ಏಕಾದಶಿ ೫೮, ದ್ವಾದಶಿ ೬೦, ೧ ಇದು ದ್ವಾದಶಿಮಾತ್ರ ಹೆಚ್ಚಾಗಿರುವ ಶುದ್ಧೈಕಾದಶಿ,ಇಲ್ಲಿಯೂ ವೈಷ್ಣವರು ದ್ವಾದಶಿಯಲ್ಲಿಯೂ ಸ್ಮಾರ್ತ್ತರು ಏಕಾದಶಿಯಲ್ಲಿಯೂ ಉಪವಾಸಮಾಡಬೇಕು. ದಶಮಿ೫೫ಏಕಾದಶಿ ೬೦, ೧ದ್ವಾದಶಿ ೫, ಇದು ಉಭಯಾಧಿಕ ಶುದ್ಧೈಕಾದಶಿ,ವೈಷ್ಣವರೂ ಸ್ಮಾರ್ತರೂ ಎರಡನೆಯಏಕಾದಶಿಯನ್ನೇ ಮಾಡಬೇಕು. ದಶಮಿ ೫೫, ಏಕಾದಶಿ ೫೭,ದ್ವಾದಶಿ ೫೮,ಇದು ಎರಡೂ ಹೆಚ್ಚಾಗಿಲ್ಲದ್ದು, ವೈಷ್ಣವರೂ ಸ್ಮಾರ್ತರೂ ಮೊದಲ ಏಕಾದಶಿಯನ್ನೇ ಗ್ರಹಿಸಬೇಕು.ಇಂತು ಸಂಕ್ಷೇಪವಾದ ವೈಷ್ಣವೈಕಾದಶಿಯನಿರ್ಣಯವು.

ಸ್ಮಾರ್ತೈಕಾದಶಿಗೆ ಉದಾಹರಣೆಗಳು: —
ಸೂರ್ಯೋದಯ ಕಾಲಕ್ಕೆ ದಶಮಿಯ ವೇಧೆಯಿದ್ದರೆ ವಿದ್ಧೈಕಾದಶಿಯೆಂತಲೂ, ಹಾಗಿಲ್ಲದಿದ್ದರೆ ಶುದ್ಧೈಕಾದಶಿ ಯೆಂತಲೂ, ಏಕಾದಶಿಯು ಎರಡು ವಿಧವಾಗಿದೆ. ಈ ಎರಡೂ ಏಕಾದಶೀಮಾತ್ರಾಧಿಕ್ಯ, ದ್ವಾದಶೀ ಮಾತ್ರಾಧಿಕ್ಯ, ಉಭಯಾಧಿಕ್ಯ, ಅನುಭಯಾಧಿಕ್ಯ (ಎರಡೂ ಹೆಚ್ಚಿಲ್ಲದ್ದು) ವೆಂಬ ನಾಲ್ಕುಭೇದಗಳನ್ನು ಹೊಂದಿರುವದು, ಎಂದರೆ ಒಟ್ಟು ಎಂಟು ವಿಧಗಳಾಗುವುದು-ಉದಾಹರಣೆ:—ದಶಮಿ ೫೮, ಏಕಾದಶಿ ೬೦, ೧, ದ್ವಾದಶಿ ಕ್ಷಯದಿಂದ ೫೮, ಇದು ಏಕಾದಶಿ ಮಾತ್ರ ಹೆಚ್ಚಾಗಿ ಉಳ್ಳ ಶುದ್ಧೈಕಾದಶಿಯು, ದಶಮಿ ೪,ಏಕಾದಶಿ ೨,

ದ್ವಾದಶಿಕ್ಷಯದಿಂದ ೫೯,ಇದು ಏಕಾದಶಿಮಾತ್ರ ಹೆಚ್ಚಾಗಿರುವವಿದ್ಧೈ ಕಾದಶಿ, ಈ ಎರಡು ಸಂದರ್ಭಗಳಲ್ಲಿಯೂ ಸ್ಮಾರ್ತಗೃಹಸ್ಥರು ಮೊದಲ ನೆಯ ಏಕಾದಶಿಯನ್ನೂ, ಸ್ಮಾರ್ತರಯತಿಗಳೂ, ಮೋಕ್ಷಾಪೇಕ್ಷೆ ಯುಳ್ಳ ಗೃಹಸ್ಥರೂ, ವಾನಪ್ರಸ್ಥರೂ, ವಿಧವೆಯರೂ, ಮತ್ತು ವೈಷ್ಣ ವರೂ ಎರಡನೆಯ ಏಕಾದಶಿಯಲ್ಲಿ ಉಪೋಷ್ಯ ಮಾಡಬೇಕು. ವಿಷ್ಣು ಪ್ರೀತ್ಯರ್ಥವಾಗಿ ಉಪವಾಸಮಾಡತಕ್ಕ ಸ್ಮಾರ್ತಗೃಹಸ್ಥರು ಎರಡು ಉಪವಾಸಗಳನ್ನು ಮಾಡಬೇಕೆಂದು ಕೆಲವರು ಹೇಳುತ್ತಾರೆ. ದಶಮಿ ೫೯, ಏಕಾದಶಿ ೬೦, ೧, ದ್ವಾದಶಿ ೪, ಇದು ಏಕಾದಶಿ ದ್ವಾದಶಿ ಇವು ಗಳೆರಡೂ ಹೆಚ್ಚಾಗಿರುವ ಶುದ್ಧೈಕಾದಶಿ, ದಶಮಿ ೨, ಏಕಾದಶಿ ೩, ದ್ವಾದಶಿ ೪, ಇದು ಉಭಯಾಧಿಕ್ಯವುಳ್ಳ ವಿದ್ಧೈಕಾದಶಿ. ಈ ಎರಡು ಸಂದರ್ಭಗಳಲ್ಲಿಯೂ, ಸ್ಮಾರ್ತ, ವೈಷ್ಣವರೆಲ್ಲರೂ ಉಳಿದ ಎರಡನೆಯ ಏಕಾದಶಿಯಲ್ಲಿಯೇ ಉಪವಾಸಮಾಡಬೇಕು. ದಶಮಿ ೫೯, ಏಕಾದಶಿ ೫೮,ದ್ವಾದಶಿ೬೦,೧,ಇದುದ್ವಾದಶಿಮಾತ್ರ ಹೆಚ್ಚಾಗಿರುವ ಶುದ್ಧೈಕಾದಶಿ ಇಲ್ಲಿ ಸ್ಮಾರ್ತರಿಗೆ ಏಕಾದಶಿಯಲ್ಲಿಯೇ ಉಪವಾಸವೆಂದು ಮಾಧವಾ ಚಾರ್ಯರ ಅಭಿಪ್ರಾಯವಿದೆ. ಹೇಮಾದ್ರಿಮತದಂತೆ ಎಲ್ಲರೂ ದ್ವಾದಶಿಯ ದಿನವೇ ಉಪವಾಸ ಮಾಡಬೇಕು. ಮೋಕ್ಷಾಪೇಕ್ಷೆಯುಳ್ಳ ಸ್ಮಾರ್ತ ಗೃಹಸ್ಥರು ದ್ವಾದಶಿಯ ದಿವಸದಲ್ಲಿ ಉಪವಾಸಮಾಡಬೇಕೆಂದುಕೆಲವರು ಹೇಳುವರು. ದಶಮಿ ೧, ಏಕಾದಶಿ ಕ್ಷಯತಿಥಿಯಾದಾಗ ೫೯, ದ್ವಾದಶಿ ವೃದ್ಧತಿಥಿ ೬೦, ೧, ಇದು ದ್ವಾದಶಿಮಾತ್ರ ಹೆಚ್ಚಾಗಿರುವ ವಿದ್ಧೈಕಾದ ಶಿಯು. ಇಲ್ಲಿ ವಿದ್ಧವಾದ್ದರಿಂದ ಸ್ಮಾರ್ತರಿಗೂ ಉಪವಾಸವು ದ್ವಾದಶಿ ಯಲ್ಲಿಯೇ ಆಗಬೇಕು. ಅಂತು ಎರಡೂ ಹೆಚ್ಚಾಗಿದ್ದರೆ ಅಥವಾ ದ್ವಾ ದಶಿಮಾತ್ರ ಹೆಚ್ಚಾಗಿದ್ದರೆ ಸ್ಮಾರ್ತರು ವಿದ್ಧೈಕಾದಶಿಯನ್ನು ಬಿಡಬೇ ಕಲ್ಲದೆ ಬೇರೆ ಸಂದರ್ಭದಲ್ಲಿ ಬಿಡಕೂಡದು. ಮೇಲೆ ಹೇಳಿದ ಆರು ವಿಧದ ಆಧಿಕ್ಯವುಳ್ಳ ಏಕಾದಶಿಗಳನ್ನೂ ಬಿಟ್ಟು ವೈಷ್ಣವರು ದ್ವಾದಶಿಯ ದಿನದಲ್ಲಿ ಉಪವಾಸ ಮಾಡಬೇಕು. ಎರಡೂ ಹೆಚ್ಚಾಗಿಲ್ಲದ ಶುದ್ಧೈ ಕಾದಶಿ ಯಾವುದೆಂದರೆ—ದಶಮಿ ೫೩, ಏಕಾದಶಿ ೫೯, ದ್ವಾದಶಿ ೫೮; ಇದು, ಇಲ್ಲಿ ಸ್ಮಾರ್ತರಿಗೆ ಶುದ್ಧವಾದ್ದರಿಂದ ಮೊದಲ ಏಕಾದಶಿಯೂ,

ವಿದ್ಧವಾದ್ದರಿಂದ ವೈಷ್ಣವರಿಗೆ ದ್ವಾದಶಿಯೂ, ಉಪವಾಸಕಾಲಗಳು. ದಶಮಿ ೨, ಏಕಾದಶಿ ಕ್ಷಯತಿಥಿ ೫೬, ದ್ವಾದಶಿ ೫೫; ಇದು ಎರಡೂ ಹೆಚ್ಚಾಗಿಲ್ಲದ ವಿದ್ಧೈಕಾದಶಿ, ಇಲ್ಲಿಯೂ ಸ್ಮಾರ್ತರಿಗೆ ಏಕಾದಶಿಯೂ, ವೈಷ್ಣವರಿಗೆ ದ್ವಾದಶಿಯೂ ಉಪವಾಸ ಮಾಡತಕ್ಕ ಕಾಲಗಳಾಗಿವೆ. ಏಕಾದಶಿ, ದ್ವಾದಶಿ ಇವೆರಡೂ ಹೆಚ್ಚಾಗಿಲ್ಲದ ವಿದ್ಧೈಕಾದಶಿ ಎಂಬ ಈ ಕಡೆಯ ಭೇದಕ್ಕೂ, ಮೊದಲಿನ ಎರಡು ಭೇದಗಳಿಗೂ ಹೋಲಿಕೆ ಯಿರುವುದರಿಂದ, ಮೊದಲ ಎರಡು ಭೇದಗಳಂತೆ ಇಲ್ಲಿಯೂ, ಯತಿಗಳೂ, ಮೋಕ್ಷಾಪೇಕ್ಷೆಯುಳ್ಳವರೂ, ವಿಧವೆಯರೂ, ಎರಡನೆಯ ಏಕಾದಶಿಯ ಲ್ಲಿಯೇ ಉಪವಾಸಮಾಡಬೇಕೆಂತಲೂ, ವಿಷ್ಣುಪ್ರೀತಿಗಾಗಿ ಮಾಡುವವ ರು ಎರಡು ಉಪವಾಸಗಳನ್ನು ಮಾಡಬೇಕೆಂತಲೂ ತೋರುವುದು. ಈಗ ಶಿಷ್ಟರೆಲ್ಲರೂ ಹೇಮಾದ್ರಿಯ ಅಭಿಪ್ರಾಯವನ್ನೂ, ಮೋಕ್ಷಾಪೇಕ್ಷೆಮೊ ದಲಾದುವನ್ನೂ ಒಪ್ಪದೆ, ಮಾಧವ ಮತಾನುಸಾರವಾಗಿಯೇ ಸ್ಮಾರ್ತ ರೆಲ್ಲರಿಗೂ ಒಂದೇ ಸಮವಾಗಿ ನಿರ್ಣಯಿಸುತ್ತಾರೆ. ಎರಡು ಉಪವಾ ಸಗಳನ್ನಾಗಲಿ, ಶುದ್ಧಾಧಿಕದ್ವಾದಶಿಯಲ್ಲಿ ಎಲ್ಲರಿಗೂ ಎರಡನೆಯ ದಿನದ ಉಪವಾಸವನ್ನಾಗಲಿ, ಎಲ್ಲಿಯೂ ಹೇಳುವುದಿಲ್ಲ. ಆದ್ದರಿಂದ ಎಲ್ಲದೇ ಶಗಳಲ್ಲಿಯೂ ಮಾಧವಾಚಾರ್ಯರ ಅಭಿಪ್ರಾಯದಂತೆಯೇ ಆಚರಣೆಯಲ್ಲಿ ದೆ ಎಂದು ತಿಳಿಯಬೇಕು. ಈ ವರೆಗೆ ಹೇಳಿದ್ದರಲ್ಲಿ ೧೮ ಸ್ಮಾರ್ತೈ ಕಾದಶಿಯ ಭೇದಗಳನ್ನೂ, ೧೮ ವೈಷ್ಣವೈಕಾದಶಿಯ ಭೇದಗಳ ನ್ನೂ ತಿಳಿಸಿದಂತಾಯಿತೆಂದು ತಿಳಿಯಬೇಕು. ಇನ್ನೂ ವಿಶದವಾಗಿ ತಿಳಿ ಯಬೇಕಾದರೆ ದೊಡ್ಡಗ್ರಂಥಗಳನ್ನು ನೋಡಿ ತಿಳಿದುಕೊಳ್ಳಬೇಕು. ಇಲ್ಲಿ ೧೮ ಭೇದಗಳಿಗೂ ಬೇರೆ ಬೇರೆ ಉದಾಹರಣೆಗಳನ್ನು ಹೇಳಿದ ರೆ ಸಾಮಾನ್ಯರಿಗೆ ಭ್ರಾಂತಿಯುಂಟಾದೀತೆಂದು ನಿರ್ಣಯ ಸಹಿತವಾಗಿ ಬೇರೆಪಟ್ಟಿಯನ್ನು ಮುಂದೆ ಬರೆದಿದೆ. ಅದನ್ನುನೋಡಿ ತಿಳಿದು ಕೊ ಳ್ಳಬಹುದು.

(ಮೂರನೆಯ ಉದ್ದೇಶದಲ್ಲಿ ಮುಂದೆ ಹೇಳುವೆವೆಂದು ಸೂಚಿ ಸಿದ್ದ, ಮಲಮಾಸದಲ್ಲಿ ಮಾಡಬೇಕಾದ ವ್ರತವಿಶೇಷವು)

(ಅಧಿಮಾಸೇತು ಸಂಪ್ರಾಪ್ತೇ ಗುಡಸರ್ಪಿರ್ಯುತಾನಿಚ ।
ತ್ರಯಸ್ತ್ರಿಂಶದಪೂಪಾನಿ ದಾತವ್ಯಾನಿ ದಿನೇದಿನೇ ॥೧॥
ಅಧಿಮಾಸೇತು ಸಂಪ್ರಾಪ್ತೇ ತ್ರಯಸ್ತ್ರಿಂಶತ್ತುದೇವತಾಃ ।
ಉದ್ದಿಶ್ಯಾಪೂಪದಾನೇನ ಪೃಥ್ವೀದಾನಫಲಂಲಭೇತ್ ॥೨॥
ತ್ರಯಸ್ತ್ರಿಂಶದಪೂಪಾನ್ನಂ ಕಾಂಸ್ಯಪಾತ್ರೇನಿಧಾಯಚ ।
ಸಘೃತಂ ಸಹಿರಣ್ಯಂಚ ಬ್ರಾಹ್ಮಣಾಯ ನಿವೇದಯೇತ್ ॥೩॥
ವಿಷ್ಣುರೂಪೀ ಸಹಸ್ರಾಂಶು ಸ್ಸರ್ವಪಾಪಪ್ರಣಾಶನಃ ।
ಅಪೂಪಾನ್ನಪ್ರದಾನೇನ ಮಮಪಾಪಂವ್ಯಪೋಹತು ॥೪॥
ನಾರಾಯಣ ಜಗದ್ಬೀಜ ಭಾಸ್ಕರಪ್ರತಿರೂಪಕ ।
ವ್ರತೇನಾನೇನಪುತ್ರಾಂಶ್ಚ ಸಂಪದಂಚಾಭಿವರ್ಧಯ ॥೫॥
ಯಸ್ಯಹಸ್ತೇಗದಾಚಕ್ರೇ ಗರುಡೋಯಸ್ಯವಾಹನಂ ।
ಶಂಖಃಕರತಲೇಯಸ್ಯಸಮೇ ವಿಷ್ಣುಃಪ್ರಸೀದತು ॥೬॥
ಕಲಾಕಾಷ್ಠಾದಿರೂಪೇಣ ನಿಮೇಷಘಟಿಕಾದಿನಾ ।
ಯೋವಂಚಯತಿ ಭೂತಾನಿ ತಸ್ಮೈಕಾಲಾತ್ಮನೇನಮಃ ॥೭॥
ಕುರುಕ್ಷೇತ್ರಮಯಂದೇಶಃ ಕಾಲಃ ಪರ್ವ ದ್ವಿಜೋಹರಿಃ।
ಪೃಥ್ವೀಸಮಮಿದಂದಾನಂ ಗೃಹಾಣ ಪುರುಷೋತ್ತಮ ॥೮॥
ಮಲಾನಾಂಚ ವಿಶುದ್ಧ್ಯರ್ಥಂ ಪಾಪಪ್ರಶಮನಾಯಚ ।
ಪುತ್ರಪೌತ್ರಾಭಿವೃದ್ಧ್ಯರ್ಥಂ ತುಭ್ಯಂದಾಸ್ಯಾಮಿ ಭಾಸ್ಕರ ॥೯॥
ಮಂತ್ರೇಣಾನೇನ ಯೋದದ್ಯಾತ್ ತ್ರಯಸ್ತ್ರಿಂಶದಪೂಪಕಾನ್ ।
ಪ್ರಾಪ್ನೋತಿ ವಿಪುಲಾಂ ಲಕ್ಷ್ಮೀಂ ಪುತ್ರಪೌತ್ರಾದಿಸಂಪದಃ ॥೧೦॥

(ಇತಿನಿರ್ಣಯಸಿಂಧುಃ) (ಅಧಿಕಮಾಸದಲ್ಲಿ ಬೆಲ್ಲ, ತುಪ್ಪ ಇವುಗಳಿಂದ ಮಾಡಿದ ಳಿಳಿಭಕ್ಷ್ಯಗಳನ್ನುಪ್ರತಿದಿನವೂ ದಾನಮಾಡಬೇಕು)॥೧॥ ಅಧಿಕಮಾಸದಲ್ಲಿ ಮೂವತ್ತು ಮೂರು ದೇವತೆಗಳನ್ನು ಉದ್ದೇಶಮಾಡಿ ಳಿಳಿ ಭಕ್ಷ್ಯಗಳನ್ನು ದಾನಮಾಡಿದರೆ ಭೂದಾನಮಾಡಿದ ಫಲವುಂಟಾಗುತ್ತದೆ॥೨॥ ಳಿಳಿ ಭಕ್ಷ್ಯಗಳನ್ನು ಕಂಚಿನಪಾತ್ರೆಯಲ್ಲಿ ತುಂಬಿ ತುಪ್ಪವನ್ನು ಹಾಕಿ ದಕ್ಷಿಣೆಯ ಸಹಿತವಾಗಿ ಬ್ರಾಹ್ಮಣನಿಗೆ ದಾನಮಾಡಬೇಕು ॥೩॥

ದಾನಕ್ಕೆ ಮಂತ್ರಗಳು :—ಸಮಸ್ತಪಾಪವನ್ನೂಪರಿಹಾರಮಾಡುವ, ವಿಷ್ಣುರೂಪನಾದ ಸೂರ್ಯನು ಈ ಭಕ್ಷ್ಯದಾನದಿಂದ ನನ್ನ ಪಾಪವನ್ನು ಹೋಗಲಾಡಿಸಲಿ ॥ ೪ ॥ ಸೂರ್ಯರೂಪನಾಗಿಯೂ, ಲೋಕಕ್ಕೆ ಮೂಲಕಾರಣನಾಗಿಯೂ, ಇರುವ ನಾರಾಯಣ ಮೂರ್ತಿಯೇ! ಈ ವ್ರತದಿಂದ ನನಗೆ ಪುತ್ರರನ್ನೂ, ಐಶ್ವರ್ಯವನ್ನೂ ಅನುಗ್ರಹಿಸು ॥೫॥ ಶಂಖಚಕ್ರಗದಾಪಾಣಿಯಾಗಿಯೂ, ಗರುಡವಾಹನನಾಗಿಯೂ, ಇರುವ ವಿಷ್ಣುವು ನನಗೆ ಪ್ರಸನ್ನನಾಗಲಿ ॥೬॥ ಕಲಾ, ಕಾಷ್ಠಾ, ನಿಮೇಷ, ಘಟಿಕಾ, ಮೊದಲಾದ ಕಾಲರೂಪನಾಗಿಯೂ ತಾನೇ ಇದ್ದುಕೊಂಡು ಸರ್ವಪ್ರಾಣಿಗಳಿಗೂ, ಭ್ರಾಂತಿಯನ್ನುಂಟುಮಾಡುತ್ತಿರುವ ವಿಷ್ಣುವಿಗೆ ನಮಸ್ಕಾರವು ॥೭॥ ಈ ಸ್ಥಳವೇ ಕುರುಕ್ಷೇತ್ರವು ಈ ಕಾಲವೇ ಚತುರ್ದಶೀ ಪೌರ್ಣಮಾಸ್ಯೆಯ ಮಧ್ಯದಲ್ಲಿರುವ ಪುಣ್ಯಕಾಲವು (ಪರ್ವಕಾಲವು) ಈ ಭಕ್ಷ್ಯದಾನವು ಭೂದಾನಕ್ಕೆ ಸಮಾನವಾದದ್ದು, ಮಹಾವಿಷ್ಣುವೇ! ತೆಗೆದುಕೊಂಡು ನನ್ನನ್ನು ಉದ್ಧಾರಮಾಡು ॥ ೮ ॥ ಎಲೈ ಸೂರ್ಯನೇ! ಮಾಲಿನ್ಯವನ್ನೂ, ಪಾಪವನ್ನೂ ಹೋಗಲಾಡಿಸಿ ಕೊಳ್ಳುವುದಕ್ಕೂ, ಪುತ್ರ, ಪೌತ್ರರ ಅಭಿವೃದ್ಧಿಗೂ ನಿನಗೆ ಇದನ್ನುದಾನವಾಗಿ ಕೊಡುತ್ತೇನೆ ॥೯॥ ಈ ಮಂತ್ರಗಳಿಂದ ೩೩ ಭಕ್ಷ್ಯಗಳನ್ನು ಅಧಿಕಮಾಸದಲ್ಲಿ ಪ್ರತಿದಿನವೂ ಯಾರು ದಾನಮಾಡುತ್ತಾರೆಯೋ ಅವರು ಅಪಾರವಾದ ಐಶ್ವರ್ಯವನ್ನೂ, ಪುತ್ರಪೌತ್ರಾಭಿವೃದ್ಧಿಯನ್ನೂ ಹೊಂದುವರು.)

ಏಕಾದಶೀ ಭೇದ ಮತ್ತು ಅವುಗಳ ನಿರ್ಣಯದ ಪಟ್ಟಿ :—

ಇಲ್ಲಿ 'ನ್ಯೂನ, ಎಂದರೆ ಸೂರ್ಯೋದಯ ಕಾಲಕ್ಕಿಂತ ಮುಂಚಿತವಾಗಿ ಮುಗಿಯುವುದೆಂತಲೂ, 'ಸಮ, ಎಂದರೆ ಸೂರ್ಯೋದಯ ಕಾಲಕ್ಕೆ ಸರಿಯಾಗಿ ಮುಗಿಯತಕ್ಕದ್ದೆಂತಲೂ, ಎಂದರೆ ೬೦ ಘಳಿಗೆಯುಳ್ಳದ್ದೆಂತಲೂ, 'ಅಧಿಕ, ಎಂದರೆ ಸೂರ್ಯೋದಯವಾದಮೇಲೂ ಇರತಕ್ಕದ್ದೆಂತಲೂ ತಿಳಿಯಬೇಕು. ಮತ್ತು ಉದಾಹರಣೆಯಲ್ಲಿ ತೋರಿಸಿರುವ ಘಳಿಗೆಗಳ ಸಂಖ್ಯೆಯಲ್ಲಿ ಮೊದಲನೆಯದನ್ನು ಈ ಗ್ರಂಥಕಾರನು ಉದಹರಿಸಿದ್ದೆಂತಲೂ, ಎರಡನೆಯದು ಧರ್ಮಾಬ್ಧಿಸಾರಕಾರನುಹೇಳಿರುವುದೆಂತಲೂ, ತಿಳಿಯಬೇಕು.

## (೧೧)ವೈಷ್ಣವ ಶುದ್ಧೈಕಾದಶಿಯ ಭೇದಗಳು.

| ಹೆಸರುಗಳು | ದಶಮಿ | | ಏಕಾದಶಿ | | ದ್ವಾದಶಿ | | ನಿರ್ಣಯ. |
|---|---|---|---|---|---|---|---|
| | ಘ | ಪ | ಘ | ಪ | ಘ | ಪ | |
| ನ್ಯೂನದ್ವಾದಶಿಯು | ೫೫ | ೫೯ | ೫೯ | ೫೯ | ೫೯ | ೫೯ | ಇದು ಏಕಾದಶಿ ದ್ವಾದಶಿಗಳೆರಡೂ ಅಧಿಕವಲ್ಲದ್ದು. ವೈಷ್ಣವರೂ |
| ಳ್ಳ ನ್ಯೂನೈಕಾದಶಿ | ೫೫ | ೦ | ೫೭ | ೦ | ೫೮ | ೦ | ಸ್ಮಾರ್ತರೂ ಏಕಾದಶಿಯಲ್ಲಿಯೇ ಉಪವಾಸಮಾಡಬೇಕು. |
| ಸಮದ್ವಾದಶಿಯು ಳ್ಳ | ೫೫ | ೫೯ | ೫೯ | ೫೯ | ೬೦ | ೦ | ಈ ಏಕಾದಶಿಯಲ್ಲಿಯೂ ಮೇಲೆಹೇಳಿರುವಂತೆಯೇ ಮಾಡತಕ್ಕದ್ದು. |
| ನ್ಯೂನೈಕಾದಶಿ | ೫೫ | ೦ | ೫೭ | ೦ | ೫೮ | ೦ | |
| ಅಧಿಕದ್ವಾದಶಿಯು | ೫೫ | ೫೯ | ೫೯ | ೫೯ | ೬೦ | ೧ | ದ್ವಾದಶಿಮಾತ್ರ ಅಧಿಕವುಳ್ಳದ್ದು. ಇಲ್ಲಿವೈಷ್ಣವರು ದ್ವಾದಶಿಯಲ್ಲಿಯೂ |
| ಳ್ಳ ನ್ಯೂನೈಕಾದಶಿ | ೫೫ | ೦ | ೫೮ | ೦ | ೬೦ | ೧ | ಸ್ಮಾರ್ತರು ಮೊದಲದಿನದಲ್ಲಿಯೂ ಉಪವಾಸಮಾಡಬೇಕು. |
| ನ್ಯೂನದ್ವಾದಶಿಯು | ೫೫ | ೫೯ | ೬೦ | ೦ | ೫೯ | ೫೯ | ಇಲ್ಲಿ ಎರಡೂ ಅಧಿಕವಿಲ್ಲದಏಕಾದಶಿ. ಇದರಲ್ಲಿ ಇಬ್ಬರೂಏಕಾದ |
| ಳ್ಳಸಮೈಕಾದಶಿ. | ೫೫ | ೦ | ೫೭ | ೦ | ೫೮ | ೦ | ಶಿಯಲ್ಲಿಯೇ ಉಪವಾಸಮಾಡಬೇಕು. |
| ಸಮದ್ವಾದಶಿಯುಳ್ಳ | ೫೫ | ೫೦ | ೬೦ | ೦ | ೬೦ | ೦ | ಇದರಲ್ಲಿ ಮೇಲೆ ಹೇಳಿರುವಂತೆಯೇ ಮಾಡಬೇಕು ಇದೂಮೇಲೆಹೇ |
| ಸಮೈಕಾದಶಿ. | ೫೫ | ೦ | ೫೭ | ೦ | ೫೮ | ೦ | ಳಿರುವಂಥದೇ. |
| ಅಧಿಕದ್ವಾದಶಿಯುಳ್ಳ | ೫೫ | ೫೯ | ೬೦ | ೦ | ೬೦ | ೧ | ಇದುದ್ವಾದಶಿಮಾತ್ರ ಅಧಿಕವುಳ್ಳದ್ದು ಇಲ್ಲಿ ವೈಷ್ಣವರುದ್ವಾದಶಿಯಲ್ಲಿ |
| ಸಮೈಕಾದಶಿ. | ೫೫ | ೦ | ೫೮ | ೦ | ೬೦ | ೧ | ಯೂ,ಸ್ಮಾರ್ತರುಏಕಾದಶಿಯಲ್ಲಿಯೂಉಪವಾಸಮಾಡಬೇಕು. |
| ನ್ಯೂನದ್ವಾದಶಿಯು | ೫೫ | ೫೯ | ೬೦ | ೧ | ೫೯ | ೫೮ | ಇದು ಏಕಾದಶಿ ಮಾತ್ರ ಅಧಿಕವುಳ್ಳದ್ದು. ಮೇಲೆಹೇಳಿದಂತೆಉಪ |
| ಳ್ಳಅಧಿಕೈಕಾದಶಿ. | ೫೫ | ೦ | ೬೦ | ೧ | ೫೮ | ಕ್ಷಯ | ವಾಸಮಾಡಬೇಕು. |
| ಸಮದ್ವಾದಶಿಯುಳ್ಳ | ೫೫ | ೫೯ | ೬೦ | ೧ | ೫೯ | ೫೯ | ಇದೂಮೇಲೆಹೇಳಿದಂಥದೇ ಮೇಲೆಹೇಳಿದಂತೆಯೇ ಇದರಲ್ಲಿಯೂ |
| ಅಧಿಕಏಕಾದಶಿ | ೫೫ | ೦ | ೬೦ | ೧ | ೫೮ | ಕ್ಷಯ | ಉಪವಾಸಮಾಡಬೇಕು. |
| ಅಧಿಕದ್ವಾದಶಿಯು | ೫೫ | ೫೯ | ೬೦ | ೧ | ೬೦ | ೧ | ಇದು ಎರಡೂ ಅಧಿಕವುಳ್ಳದ್ದು, ಇಲ್ಲಿ ಇಬ್ಬರೂ ಎರಡನೆಯಏಕಾದ |
| ಳ್ಳಅಧಿಕೈಕಾದಶಿ | ೫೫ | ೦ | ೬೦ | ೧ | ೫ | ೦ | ಶಿಯಲ್ಲಿಯೇ ಉಪವಾಸಮಾಡಬೇಕು. |

## (೨)ವೈಷ್ಣವ ವಿದ್ಧೈಕಾದಶಿಯ ಭೇದಗಳು.

| ಹೆಸರುಗಳು | ದಶಮಿ ಘ | ದಶಮಿ ಪ | ಏಕಾದಶಿ ಘ | ಏಕಾದಶಿ ಪ | ದ್ವಾದಶಿ ಘ | ದ್ವಾದಶಿ ಪ | ನಿರ್ಣಯ. |
|---|---|---|---|---|---|---|---|
| ನ್ಯೂನದ್ವಾದಶಿಯುು | ೫೬ | ೧ | ೫೯ | ೫೯ | ೫೯ | ೫೯ | (೧) ಇದು ಎರಡೂ ಅಧಿಕವಿಲ್ಲದವಿದ್ಧೈಕಾದಶಿ ಇಲ್ಲಿ ಸ್ಮಾರ್ತರುಏಕಾದಶಿ |
| ಳ್ಳ ನ್ಯೂನೈಕಾದಶಿ | ೫೭ | ೦ | ೫೮ | ೦ | ೫೯ | ೦ | ಯಲ್ಲಿಯೇ ಉಪವಾಸಮಾಡಬೇಕು.ದ್ವಾದಶಿಯಲ್ಲಿ ಮಾಡಕೂಡದು. ವೈಷ್ಣವ |
| ಸಮದ್ವಾದಶಿಯುಳ್ಳ | ೫೬ | ೧ | ೫೯ | ೫೯ | ೬೦ | ೦ | ರುವಿದ್ಧವಾದ್ದರಿಂದದ್ವಾದಶಿಯಲ್ಲಿಉಪವಾಸವಿರಬೇಕು. |
| ನ್ಯೂನೈಕಾದಶಿ | ೫೭ | ೦ | ೫೮ | ೦ | ೫೯ | ೦ | (೨)ಇದು ಮೇಲೆಹೇಳಿದಂತೆಯೇ ಇರುವುದರಿಂದ ಅದರಂತೆಯೇ ಆಚರಿಸಬೇಕು. |
| ಅಧಿಕದ್ವಾದಶಿಯು | ೫೬ | ೧ | ೫೯ | ೯ | ೬೦ | ೧ | (೩)ಇದುದ್ವಾದಶಿಮಾತ್ರಅಧಿಕವುಳ್ಳದ್ದುಸ್ಮಾರ್ತರುಇಲ್ಲಿಏಕಾದಶಿಯಲ್ಲಿಯೇ ಉ |
| ಳ್ಳ ನ್ಯೂನೈಕಾದಶಿ | ೫೮ | ೦ | ೫೯ | ೫೦ | ೬೦ | ೧ | ಪವಾಸಮಾಡಬೇಕುದ್ವಾದಶಿಯಲ್ಲಿಕೂಡದೆಂದುಮಾಧವನಅಭಿಪ್ರಾಯ.ಹೇಮಾ |
| ನ್ಯೂನದ್ವಾದಶಿಯು | ೫೬ | ೧ | ೬೦ | ೦ | ೫೯ | ೫೯ | ದ್ರಿಯುಎಲ್ಲರೂದ್ವಾದಶಿಯಲ್ಲಿಯೇಉಪವಾಸಮಾಡಬೇಕೆಂದು ಹೇಳುವನುಮು |
| ಳ್ಳಸಮೈಕಾದಶಿ. | ೫೩ | ೦ | ೫೮ | ೦ | ೫೯ | ೦ | ಮುಕ್ಷುಗಳಾದಸ್ಮಾರ್ತರುಎರಡನೆಯದರಲ್ಲಿಉಪವಾಸಮಾಡಬೇಕೆಂದು ಕೆಲವ |
| ಸಮದ್ವಾದಶಿಯುಳ್ಳ | ೫೬ | ೧ | ೬೦ | ೦ | ೬೦ | ೦ | ರಮತ(೪)ಎರಡೂಅಧಿಕವಿಲ್ಲದ್ದುಇಲ್ಲಿಸ್ಮಾರ್ತರುಮೊದಲನೆಯದನ್ನೂವೈಷ್ಣವ |
| ಸಮೈಕಾದಶಿ. | ೫೭ | ೦ | ೫೮ | ೦ | ೫೯ | ೦ | ರುಎರಡನೆಯದನ್ನೂ ಆಚರಿಸಬೇಕು (೫ ಇದುಮೇಲೆಹೇಳಿದಂತೆಯೇ ಇರುವುದ |
| ಅಧಿಕದ್ವಾದಶಿಯುಳ್ಳ | ೫೬ | ೧ | ೬೦ | ೦ | ೬೦ | ೧ | ರಿಂದಅದರಂತೆಯೇಉಪವಾಸಮಾಡಬೇಕು.(೬)ಇದುದ್ವಾದಶಿಮಾತ್ರಅಧಿಕವುಳ್ಳ |
| ಸಮೈಕಾದಶಿ. | ೫[illegible] | ೦ | ೫೯ | ೦ | ೬೦ | ೧ | ದ್ದುಇದುಅಧಿಕದ್ವಾದಶಿಯುಳ್ಳನ್ಯೂನೈಕಾದಶಿಯಂತಿರುವದರಿಂದಅದರಂತೆಯೇ |
| ನ್ಯೂನದ್ವಾದಶಿಯು | ೫೬ | ೧ | ೬೦ | ೧ | ೫೯ | ೫೮ | ಎಲ್ಲವನ್ನೂ ನಡೆಯಿಸಬೇಕು(೭) ಇದುಏಕಾದಶಿಮಾತ್ರಅಧಿಕವುಳ್ಳದ್ದುಸ್ಮಾರ್ತ |
| ಳ್ಳಅಧಿಕೈಕಾದಶಿ. | ೫೮ | ೦ | ೬೦ | ೧ | ೫೮ | ಕ್ಷಯ | ಗೃಹಸ್ಥರುಮೊದಲನೆಯದನ್ನೂನಿಷ್ಕಾಮರಾದಗೃಹಸ್ಥರೂ ವಾನಪ್ರಸ್ಥರೂ |
| ಸಮದ್ವಾದಶಿಯುಳ್ಳ | ೫೬ | ೧ | ೬೦ | ೧ | ೫೯ | ೫೯ | ವಿಧವೆಯರೂ,ವೈಷ್ಣವರೂ,ಎರಡನೆಯದನ್ನೂ ಗ್ರಹಿಸಬೇಕುವಿಷ್ಣುಪ್ರೀತಿಯಾ |
| ಅಧಿಕಏಕಾದಶಿ | ೫೮ | ೦ | ೬೦ | ೧ | ೫೮ | ಕ್ಷಯ | ಗಿಮಾಡುವಸ್ಮಾರ್ತರುಎರಡುಉಪವಾಸಗಳನ್ನೂ ಮಾಡಬೇಕು ೮) ಇದುಏಕಾ |
| ಅಧಿಕದ್ವಾದಶಿಯು | ೫೬ | ೧ | ೬೦ | ೧ | ೬೦ | ೧ | ದಶಿಮಾತ್ರಅಧಿಕವುಳ್ಳದ್ದುಮೇಲಣಉದಾಹರಣೆಯಂತೆಯೇಮಾಡಬೇಕು(೯) ಇ |
| ಳ್ಳಅಧಿಕೈಕಾದಶಿ | ೫೮ | ೦ | ೬೦ | ೧ | ೪ | ೦ | ದು ಎರಡೂ ಅಧಿಕವುಳ್ಳದ್ದು ಇಲ್ಲಿಸ್ಮಾರ್ತರೂ ವೈಷ್ಣವರೂ ಸಹಉಳಿದಎರ |
| | | | | | | | ಡನೆಯ ಏಕಾದಶಿಯಲ್ಲಿಯೇ ಉಪವಾಸಮಾಡಬೇಕು. |

## (೨೩) ಸ್ಮಾರ್ತ ಶುದ್ಧೈಕಾದಶಿಯ ಭೇದಗಳು

| ಹೆಸರು | ದಶಮಿ ಘ | ದಶಮಿ ಪ | ಏಕಾದಶಿ ಘ | ಏಕಾದಶಿ ಪ | ದ್ವಾದಶಿ ಘ | ದ್ವಾದಶಿ ಪ | ನಿರ್ಣಯ |
|---|---|---|---|---|---|---|---|
| ನ್ಯೂನದ್ವಾದಶಿಯುಳ್ಳ | ೫೯ | ೫೯ | ೫೯ | ೫೯ | ೫೯ | ೫೯ | ಇದು ಎರಡೂ ಅಧಿಕವಿಲ್ಲದ್ದು ಸ್ಮಾರ್ತರಿಗೆ ಏಕಾದಶಿಯುಲ್ಲ ಉಪವಾಸವು ದ್ವಾ |
| ನ್ಯೂನೈಕಾದಶಿ | ೫೮ | ೦ | ೫೭ | ೦ | ೫೯ | ೦ | ದಶಿಯಲ್ಲಿಲ್ಲ. ವೈಷ್ಣವರಿಗೆ ವಿದ್ಧವಾದ್ದರಿಂದ ದ್ವಾದಶಿಯಲ್ಲಿಯೇ ಉಪವಾಸವು |
| ಸಮದ್ವಾದಶಿ ಯುಳ್ಳ | ೫೯ | ೫೯ | ೫೯ | ೫೯ | ೬೦ | ೦ | ಇದನ್ನು ಮೇಲೆ ಹೇಳಿರುವ ಉದಾಹರಣೆಯಂತೆಯೇ ನಡೆಯಿಸಬೇಕು, |
| ನ್ಯೂನೈಕಾದಶಿ | ೫೮ | ೦ | ೫೭ | ೦ | ೫೯ | ೦ | ಇದು ದ್ವಾದಶಿ ಮಾತ್ರ ಅಧಿಕವುಳ್ಳದ್ದು, ಸ್ಮಾರ್ತರಿಗೆ ಶುದ್ಧವಾದ್ದರಿಂದ |
| ಅಧಿಕ ದ್ವಾದಶಿಯುಳ್ಳ | ೫೯ | ೫೯ | ೫೯ | ೫೯ | ೬೦ | ೧ | ಮೊದಲನೆಯದರಲ್ಲಿ ಉಪವಾಸ ಮಾಡಬೇಕು. ದ್ವಾದಶಿಯಲ್ಲಿ ಕೂಡದೆಂ |
| ನ್ಯೂನೈಕಾದಶಿ, | ೫೭ | ೦ | ೫೯ | ೦ | ೬೦ | ೧ | ದು ಮಾಧವಾಚಾರ್ಯನ ಮತ, ಹೇಮಾದ್ರಿಯು ಎಲ್ಲರಿಗೂ ದ್ವಾದಶಿಯಲ್ಲಿ |
| ನ್ಯೂನದ್ವಾದಶಿಯುಳ್ಳ | ೫೯ | ೫೯ | ೬೦ | ೦ | ೫೯ | ೫೯ | ಯೇ ಉಪವಾಸವೆಂದು ಹೇಳಿರುವನು. ಮುಮುಕ್ಷುಗಳಾದ ಸ್ಮಾರ್ತರು |
| ಸಮೈಕಾದಶಿ | ೫೮ | ೦ | ೫೭ | ೦ | ೫೯ | ೦ | ಎರಡನೆಯದರಲ್ಲಿ ಉಪವಾಸ ಮಾಡಬೇಕೆಂಬುದು ಕೆಲವರ ಮತ. |
| ಸಮದ್ವಾದಶಿ ಯುಳ್ಳ | ೫೯ | ೫೯ | ೬೦ | ೦ | ೬೦ | ೦ | ಇದು ನ್ಯೂನದ್ವಾದಶಿಯುಳ್ಳ ನ್ಯೂನೈಕಾದಶಿಯಂತಿರುವುದರಿಂದ ಅದರಂ |
| ಸಮೈಕಾದಶಿ | ೫೮ | ೦ | ೫೭ | ೦ | ೫೯ | ೦ | ತೆಯೇ ಉಪವಾಸವನ್ನು ಮಾಡಬೇಕು, |
| ಅಧಿಕದ್ವಾದಶಿಯುಳ್ಳ | ೫೯ | ೫೯ | ೬೦ | ೦ | ೬೦ | ೧ | ಇದರಲ್ಲಿಯೂ ಮೇಲಣ ಉದಾಹರಣೆಯಂತೆಯೇ ನಡೆಯಿಸಬೇಕು. |
| ಸಮೈಕಾದಶಿ | ೫೭ | ೦ | ೫೯ | ೦ | ೬೦ | ೧ | ಇದು ದ್ವಾದಶಿಮಾತ್ರ ಅಧಿಕವುಳ್ಳದ್ದು. ಅಧಿಕದ್ವಾದಶಿಯುಳ್ಳ ನ್ಯೂನೈಕಾ |
| ನ್ಯೂನ ದ್ವಾದಶಿಯು | ೫೯ | ೫೯ | ೬೦ | ೧ | ೫೯ | ೫೭ | ದಶಿಗೆ ಹೇಳಿರುವಂತೆ ಇದರಲ್ಲಿಯೂ ಆಚರಿಸಬೇಕು. |
| ಳ್ಳ ಅಧಿಕೈಕಾದಶಿ | ೫೭ | ೦ | ೬೦ | ೧ | ೫೭ | ಕ್ಷಯ | ಇದು ಏಕಾದಶಿ ಮಾತ್ರ ಅಧಿಕವುಳ್ಳದ್ದು, ಸ್ಮಾರ್ತಗೃಹಸ್ಥರು ಮೊದಲ |
| ಸಮದ್ವಾದಶಿ ಯುಳ್ಳ | ೫೯ | ೫೯ | ೬೦ | ೧ | ೫೯ | ೫೯ | ನೆಯದರಲ್ಲಿಯೂ, ಯತಿ, ವೈಷ್ಣವ ಮೊದಲಾದವರು ಎರಡನೆಯ ದಿನ |
| ಅಧಿಕೈಕಾದಶಿ | ೫೭ | ೦ | ೬೦ | ೧ | ೫೭ | ಕ್ಷಯ | ದಲ್ಲಿಯೂ ಉಪವಾಸ ಮಾಡಬೇಕು. (ಮೇಲಣ ಉದಾ॥ ಮಾಡಬೇಕು) |
| ಅಧಿಕ ದ್ವಾದಶಿಯುಳ್ಳ | ೫೯ | ೫೯ | ೬೦ | ೧ | ೬೦ | ೧ | ಇದು ಎರಡೂ ಅಧಿಕವುಳ್ಳದ್ದು. ಇಲ್ಲಿ ಸ್ಮಾರ್ತರೂ ವೈಷ್ಣವರೂ ಸಹಉ |
| ಅಧಿಕೈಕಾದಶಿ. | ೫೭ | ೦ | ೬೦ | ೧ | ೪ | ೦ | ಳಿದಿರುವ ಎರಡನೆಯ ಏಕಾದಶಿಯಲ್ಲಿಯೇ ಉಪವಾಸ ಮಾಡುವುದು. |

(೨೪) ಸ್ಮಾರ್ತವಿದ್ಧೈಕಾದಶಿಯಭೇದಗಳು

| ಹೆಸರು | ದಶಮಿ ಘ | ದಶಮಿ ಪ | ಏಕಾದಶಿ ಘ | ಏಕಾದಶಿ ಪ | ದ್ವಾದಶಿ ಘ | ದ್ವಾದಶಿ ಪ | ನಿರ್ಣಯ |
|---|---|---|---|---|---|---|---|
| ನ್ಯೂನದ್ವಾದಶಿಯುಳ್ಳ | ೬೦ | ೧ | ೫೯ | ೫೮ | ೫೯ | ೫೯ | ಇದು ಎರಡೂ ಹೆಚ್ಚಾಗಿಲ್ಲದ ವಿದ್ಧೈಕಾದಶಿ, ಇಲ್ಲಿ ಸ್ಮಾರ್ತರಿಗೆ ಏಕಾದಶಿ |
| ನ್ಯೂನೈಕಾದಶಿ | ೨ | ೦ | ೫೬ | ಕ್ಷಯ | ೫೫ | ೦ | ಯಲ್ಲಿಯೂ ವೈಷ್ಣವರಿಗೆ ದ್ವಾದಶಿಯಲ್ಲಿಯೂ ಉಪವಾಸ. |
| ಸಮದ್ವಾದಶಿ ಯುಳ್ಳ | ೬೦ | ೧ | ೫೯ | ೫೮ | ೬೦ | ೦ | ಇದರಲ್ಲಿಯೂ ಮೇಲೆಹೇಳಿರುವಂತೆ ನಡೆಯಬೇಕು. |
| ನ್ಯೂನೈಕಾದಶಿ | ೨ | ೦ | ೫೬ | ಕ್ಷಯ | ೫೫ | ೦ | ಇದು ದ್ವಾದಶಿಮಾತ್ರ ಅಧಿಕವುಳ್ಳದ್ದು, ಏಕಾದಶಿಯು ಇಲ್ಲಿ ವೇಧೆಯುಳ್ಳ |
| ಅಧಿಕದ್ವಾದಶಿ ಯುಳ್ಳ | ೬೦ | ೧ | ೫೯ | ೫೮ | ೬೦ | ೧ | ದ್ದಾದ್ದರಿಂದ ಸ್ಮಾರ್ತರಿಗೂ ದ್ವಾದಶಿಯಲ್ಲಿಯೇ ಉಪವಾಸವು |
| ನ್ಯೂನೈಕಾದಶಿ | ೧ | ೦ | ೫೮ | ಕ್ಷಯ | ೬೦ | ೧ | ಇದು ಎರಡೂ ಅಧಿಕವಿಲ್ಲದದ್ದು, ಇಲ್ಲಿ ಸ್ಮಾರ್ತರಿಗೆ ಏಕಾದಶಿಯಲ್ಲಿಯೂ |
| ನ್ಯೂನದ್ವಾದಶಿಯುಳ್ಳ | ೬೦ | ೧ | ೫೯ | ೫೯ | ೫೯ | ೫೯ | ವೈಷ್ಣವರಿಗೆ ದ್ವಾದಶಿಯಲ್ಲಿಯೂ ಉಪವಾಸವು. |
| ಸಮೈಕಾದಶಿ | ೨ | ೦ | ೫೬ | ಕ್ಷಯ | ೫೫ | ೦ | ಹೀಗಬಂದರೆ ಮೇಲಣ ಉದಾಹರಣೆಯಂತೆಯೇ ಮಾಡಬೇಕು. |
| ಸಮದ್ವಾದಶಿ ಯುಳ್ಳ | ೬೦ | ೧ | ೫೯ | ೫೯ | ೬೦ | ೦ | ಇದುದ್ವಾದಶಿಮಾತ್ರ ಅಧಿಕವುಳ್ಳದ್ದು. ಏಕಾದಶಿಗೆ ವೇಧೆ ಇರುವುದರಿಂದ |
| ಸಮೈಕಾದಶಿ | ೩ | ೦ | ೫೬ | ಕ್ಷಯ | ೫೫ | ೦ | ಸ್ಮಾರ್ತರಿಗೂ ದ್ವಾದಶಿಯಲ್ಲಿಯೇ ಉಪವಾಸ. |
| ಅಧಿಕದ್ವಾದಶಿ ಯುಳ್ಳ | ೬೦ | ೧ | ೫೯ | ೫೯ | ೬೦ | ೧ | ಇದು ಏಕಾದಶಿ ಮಾತ್ರ ಅಧಿಕವುಳ್ಳದ್ದು. ಇಲ್ಲಿ ಸ್ಮಾರ್ತಗೃಹಸ್ಥರು |
| ಸಮೈಕಾದಶಿ | ೧ | ೦ | ೫೮ | ಕ್ಷಯ | ೬೦ | ೧ | ಮೊದಲನೆಯದರಲ್ಲಿಯೂ, ಯತಿಗಳು ಮೊದಲಾದವರೂ, ವೈಷ್ಣವರೂ |
| ನ್ಯೂನದ್ವಾದಶಿಯುಳ್ಳ | ೬೦ | ೧ | ೬೦ | ೦ | ೫೯ | ೫೮ | ಎರಡನೆಯದರಲ್ಲಿಯೂ, ಉಪವಾಸಮಾಡಬೇಕು. ವಿಷ್ಣುಪ್ರೀತಿಯಾಗಿ |
| ಅಧಿಕೈಕಾದಶಿ | ೪ | ೦ | ೨ | ೦ | ೫೮ | ಕ್ಷಯ | ಮಾಡತಕ್ಕವರು ಎರಡುಪವಾಸಗಳನ್ನು ಮಾಡಬೇಕೆಂದು ಕೆಲವರು |
| ಸಮದ್ವಾದಶಿ ಯುಳ್ಳ | ೬೦ | ೩ | ೬೦ | ೧ | ೫೯ | ೫೯ | ಹೇಳುವರು. |
| ಅಧಿಕೈಕಾದಶಿ | ೪ | ೦ | ೨ | ೦ | ೫೮ | ಕ್ಷಯ | ಇದರಲ್ಲಿ ಮೇಲಣ ಉದಾಹರಣೆಯಂತೆಯೇ ಮಾಡಬೇಕು. |
| ಅಧಿಕದ್ವಾದಶಿ ಯುಳ್ಳ | ೬೦ | ೧ | ೬೦ | ೧ | ೬೦ | ೧ | ಇದುಎರಡೂಅಧಿಕ್ಯವುಳ್ಳದ್ದು.ಇದರಲ್ಲಿಸ್ಮಾರ್ತರೂವೈಷ್ಣವರೂ,ಎಲ್ಲರೂ |
| ಅಧಿಕೈಕಾದಶಿ | ೨ | ೦ | ೨ | ೦ | ೪ | ೦ | ಉಳಿದು ಇರುವಎರಡನೆಯ ಏಕಾದಶಿಯಲ್ಲಿಯೇಉಪವಾಸಮಾಡಬೇಕು. |

(೨೪)ಸಂಕ್ಷೇಪವಾದ,ವ್ರತದಿನನಿರ್ಣಯವು.

೨೪"ಸಂಕ್ಷೇಪವಾಗಿ, ವ್ರತದಿನನಿರ್ಣಯವು—ಜಯಂತೀವ್ರತವನ್ನಿತ್ಯಂ ಕಾಮ್ಯಂಚೈಕಾದಶೀವ್ರತಂ । ಅರುಣೋದಯ ವೇಧೋऽತ್ರ ವೇಧಃಸೂರ್ಯೋದಯೇತಥಾ ॥೧॥ ಉಕ್ತೌದ್ವಾದಶಮೀವೇಧೌ ವೈಷ್ಣವಸ್ಮಾರ್ತಯೋಃಕ್ರಮಾತ್ । ವಿದ್ಧಾತ್ಯಾಜ್ಯಾವೈಷ್ಣವೇನ ಶುದ್ಧಾಪ್ಯಾಧಿಕ್ಯಸಂಭವೇ ॥೨॥ ಏಕಾದಶೀ ದ್ವಾದಶೀವಾऽಧಿಕಾಚೇತ್ತ್ಯಜ್ಯತಾಂದಿನಂ।ಪೂರ್ವಾಗ್ರಾಹ್ಯಂತೂತ್ತರಂ ಸ್ಯಾದಿತಿವೈಷ್ಣವನಿರ್ಣಯಃ ॥

ಏಕಾದಶೀವ್ರತವನ್ನು ಮಾಡದೆ ಹೋಗುವದರಿಂದ ದೋಷವುಂಟೆಂದು ಹೇಳಿರುವದರಿಂದ ಜಯಂತೀವ್ರತದಂತೆ ನಿತ್ಯವಾದದ್ದಾಗಿಯೂ, ವ್ರತವನ್ನುಮಾಡುವದರಿಂದ ಐಶ್ವರ್ಯನೊದಲಾದ ಫಲಗಳುಂಟೆಂದು ಹೇಳುವುದರಿಂದ ಕಾಮ್ಯವಾಗಿಯೂ,ಹೀಗೆ ಏಕಾದಶೀವ್ರತವು ಕಾಮ್ಯವ್ರತವಾಗಿಯೂ ನಿತ್ಯವ್ರತವಾಗಿಯೂ ಇದೆ. ಈ ಏಕಾದಶೀ ತಿಥಿಗೆ ಅರುಣೋದಯ ದಶಮೀವೇಧೆಯೆಂತಲೂಸೂರ್ಯೋದಯ ದಶಮೀವೇಧೆಎಂತಲೂ,ವೇಧೆಗಳುಎರಡುಬಗೆಯಾಗಿವೆ.ಈವೇಧೆಗಳನ್ನುಕ್ರಮವಾಗಿವೈಷ್ಣವರೂಸ್ಮಾರ್ತರೂಎಣಿಸಬೇಕು.ಅಂದರೆವೈಷ್ಣವರು ಅರುಣೋದಯ ಕಾಲದಲ್ಲಿದಶಮಿಯಿಂದ ವೇಧೆಯನ್ನೂ, ಸ್ಮಾರ್ತರು ಸೂರ್ಯೋದಯ ಕಾಲದಲ್ಲಿ ದಶಮಿಯಿಂದ ವೇಧೆಯನ್ನೂಗ್ರಹಿಸ ಬೇಕು. ೫೬ಘಳಿಗೆಯಾದಮೇಲೆ ಅರುಣೋದಯಕಾಲವು. ಸೂರ್ಯನುಕಾಣಿಸುವುದೇಸೂರ್ಯೋದಯ ಕಾಲವು. ಪಾರಂಪರ್ಯವಾಗಿಯಾರುವೈಷ್ಣವರೆಂತಲೂ, ಸ್ಮಾರ್ತರೆಂತಲೂ ಆಚರಣೆಯಲ್ಲಿಬಂದಿದೆಯೋ, ಅವರೇ ಸ್ಮಾರ್ತರೆಂತಲೂ, ವೈಷ್ಣವರೆಂತಲೂ ಹೇಳಿಸಿಕೊಳ್ಳುವರೆಂದು ದೊಡ್ಡವರು ಹೇಳುವುದರಿಂದ ಅದೇರೀತಿಯನ್ನೇ ಗ್ರಹಿಸಬೇಕು. ವೈಷ್ಣವರು ಅರುಣೋದಯವೇಧೆಯುಳ್ಳ ಏಕಾದಶಿಯನ್ನು ಬಿಟ್ಟು ದ್ವಾದಶಿಯಲ್ಲಿ ಉಪವಾಸಮಾಡಬೇಕು. ಅಧಿಕ ತಿಥಿಯಾಗಿದ್ದರೆ ಅಂದರೆ (ಸೂರ್ಯೋದಯಾನಂತರದಲ್ಲಿಯೂ ಇರುವದಾಗಿದ್ದರೆ) ಏಕಾದಶಿ, ದ್ವಾದಶಿಗಳೆರಡೂ ಅಧಿಕವಾಗಿದ್ದರೆ,ಶುದ್ಧೈಕಾದಶಿಯಾಗಿದ್ದರೂ ಮೊದಲನೆಯದನ್ನು ಬಿಟ್ಟು ಎರಡನೆಯ ಏಕಾದಶಿಯಲ್ಲಿ ಉಪವಾಸಮಾಡಬೇಕು. ಇದರಂತೆ ಏಕಾದ

ಶಿಯೊಂದೇ ಅಧಿಕವಾಗಿದ್ದರೂ ಅಥವಾ ದ್ವಾದಶಿಯೊಂದೇ ಅಧಿಕವಾಗಿದ್ದರೂ ಮೊದಲನೆಯದನ್ನು ಬಿಟ್ಟು ಎರಡನೆಯ ಏಕಾದಶಿಯಲ್ಲಿಯೇ ವೈಷ್ಣವರು ಉಪವಾಸಮಾಡಬೇಕು. ಇಂತು ವೈಷ್ಣವನಿರ್ಣಯವು. ಸ್ಮಾರ್ತನಿರ್ಣಯವನ್ನು ಹೇಳುತ್ತಾನೆ —ಏಕಾದಶೀ ದ್ವಾದಶೀ ಚೇತ್ಯುಭಯಂ ವರ್ಧತೇಯದಾ । ತದಾ ಪೂರ್ವಂ ದಿನಂ ತ್ಯಾಜ್ಯಂ ಸ್ಮಾರ್ತೈರ್ಗ್ರಾಹ್ಯಂ ಪರಂದಿನಂ ॥೧॥ಏಕಾದಶೀ ಮಾತ್ರವೃದ್ಧೌ ಗೃಹಿಯತ್ಯೋರ್ವ್ಯವಸ್ಥಿತಿಃ । ಉಪೋಷ್ಯಾ ಗೃಹಿಭಿಃ ಪೂರ್ವಾಯತಿಭಿಶ್ಚೋತ್ತರಾತಿಥಿಃ ॥೨॥ ದ್ವಾದಶೀಮಾತ್ರವೃದ್ಧೌತು ಶುದ್ಧಾವಿದ್ಧೇವ್ಯವಸ್ಥಿತೇ । ಶುದ್ಧಾಪೂರ್ವೋತ್ತರಾ ವಿದ್ಧಾ ಸ್ಮಾರ್ತನಿರ್ಣಯ ಈದೃಶಃ ॥೩॥

ಏಕಾದಶಿ, ದ್ವಾದಶಿಗಳೆರಡೂ ವೃದ್ಧತಿಥಿಗಳಾಗಿದ್ದರೆ ಅಂದರೆ ಸೂರ್ಯೋದಯಾನಂತರದಲ್ಲಿ ಇದ್ದರೆ, ಶುದ್ಧವಾದದ್ದಾದರೂ ಮೊದಲಏಕಾದಶಿಯನ್ನು ಬಿಟ್ಟು ಎರಡನೆಯದರಲ್ಲಿಯೇ ಸ್ಮಾರ್ತರು ಉಪವಾಸ ಮಾಡಬೇಕು. ಏಕಾದಶಿಯೊಂದೇ ವೃದ್ಧತಿಥಿಯಾಗಿದ್ದರೆ ಗೃಹಸ್ಥರಾದ ಸ್ಮಾರ್ತರು ಮೊದಲನೆಯ ಏಕಾದಶಿಯನ್ನೂ ಯತಿಗಳು ಮೊದಲಾದವರು ಎರಡನೆಯದನ್ನೂ ಗ್ರಹಿಸಬೇಕು. ದ್ವಾದಶಿ ಮಾತ್ರವೃದ್ಧತಿಥಿಯಾಗಿದ್ದರೆ,ಶುದ್ಧೈಕಾದಶಿಯಾದರೆ ಮೊದಲನೆಯದನ್ನೂ, ವಿದ್ಧೈಕಾದಶಿಯಾದರೆ ಎರಡನೆಯದನ್ನೂ ಗ್ರಹಿಸಬೇಕು. ಅಂತುಸ್ಮಾರ್ತರುಎರಡೂ ಅಧಿಕವಾಗಿದ್ದಾಗಲೂ,ಅಥವಾ ದ್ವಾದಶಿಯೊಂದೇಅಧಿಕವಾಗಿದ್ದಾಗಲೂ, ಮಾತ್ರ ವಿದ್ಧೈಕಾದಶಿಯನ್ನು ಬಿಡಬೇಕಲ್ಲದೆ ಮತ್ತೆಯಾವ ಸಂದರ್ಭದಲ್ಲಿಯೂ ಬಿಡಕೂಡದು. ಇಂತು ಸ್ಮಾರ್ತನಿರ್ಣಯವು.

## (೨೬) ವೇಧಭೇದಗಳು.

(೨೬) ವೇಧಭೇದಗಳು-ಅರ್ಧರಾತ್ರಿಯಾದ ಮೇಲೆ ದಶಮಿ ಇದ್ದರೆ 'ಕಪಾಲವೇಧೆ' ಎಂತಲೂ ; ೫೨ ಘಳಿಗೆ ಯವರಿಗೆ ಇದ್ದರೆ 'ಛಾಯಾ ವೇಧೆ' ಎಂತಲೂ, ೫೩ ಘಳಿಗೆ ಯವರಿಗೆ ದಶಮಿ ಇದ್ದರೆ 'ಗ್ರಸ್ತವೇಧೆ' ಎಂತಲೂ ; ೫೪ ಘಳಿಗೆಯವರಿಗೆ ಇದ್ದರೆ 'ಸಂಪೂರ್ಣ' ವೆಂತಲೂ ; ೫೫ ಘಳಿಗೆ ಯವರಿಗಿದ್ದರೆ 'ವೇಧೆ' ಎಂತಲೂ, ೫೬ ಘಳಿಗೆ ಇದ್ದರೆ 'ಮಹಾ ವೇಧೆ' ಎಂತಲೂ ; ೫೭ ರವರಿಗಿದ್ದರೆ 'ಪ್ರಳಯ' ವೆಂತಲೂ ; ೫೮ವರಿಗೆ

ದಶಮಿ ಇದ್ದರೆ 'ಮಹಾಪ್ರಲಯ' ಎಂತಲೂ ; ೫೯ ರವರಿಗೂ ಇದ್ದರೆ 'ಘೋರ' ವೆಂತಲೂ ೬೦ ಘಳಿಗೆ ಯವರಿಗಿದ್ದರೆ 'ರಾಕ್ಷಸ' ವೆಂತಲೂ ನಾರದರು ವೇಧಗಳಲ್ಲಿ ಭೇದವನ್ನು ಹೇಳಿರುವರು. ಮಾಧ್ವರೇ ಮೊದಲಾದ ಕೆಲವು ಮತಗಳ ಜನರಲ್ಲಿ ಕೆಲವರು ಮಾತ್ರ ಈ ಭೇದಗಳನ್ನು ಅನುಸರಿಸುವರು, ೫೬ ಘಳಿಗೆಯಲ್ಲಿರುವ ವೇಧೆಯನ್ನೇ, ಮಾಧವಾಚಾರ್ಯನೇ ಮೊದಲಾದ ಸರ್ವರೂ ಸಮ್ಮತಿಸಿರುವರೆಂದು ತಿಳಿಯಬೇಕು. ಉಪವಾಸವನ್ನುಳಿದ ಏಕಾದಶೀವ್ರತ ವಿಷಯದಲ್ಲಿಯೂ, ವ್ರತಾಂಗವಾದ ಸಂಕಲ್ಪ. ಪೂಜೆ, ಇವುಗಳ ವಿಷಯದಲ್ಲಿಯೂ, ೧೫ ಘಳಿಗೆಯವರಿಗೆ ದಶಮಿ ಇದ್ದು ಅನಂತರದಲ್ಲಿ ಬರುವ ಏಕಾದಶಿಯನ್ನು ಬಿಡಬೇಕು ; ಎಂದು ಹೇಳಿರುವುದು. ಅವುಗಳಲ್ಲಿಯೂ ಅಂತಹ ಏಕಾದಶಿಯನ್ನೇ ಸಂಪೂರ್ಣವಾಗಿ ಈ ದೋಷದಿಂದ ಬಿಡಬೇಕೆಂದು ಅರ್ಥವಲ್ಲ. ಆದರೆ ಬೆಳಗ್ಗೆ ಮಾಡಬೇಕಾದ ಸಂಕಲ್ಪ, ಪೂಜೆ, ಮೊದಲಾದದ್ದನ್ನು ಮಧ್ಯಾಹ್ನದ ಮೇಲೆ ಮಾಡಬೇಕೆಂದು ತಿಳಿಯಬೇಕು.

(೨೭) ವ್ರತಪ್ರಯೋಗ (ವಿಧಿ)

(೨೭) ವ್ರತಪ್ರಯೋಗ-ಉಪವಾಸ ದಿನದ ಪೂರ್ವದಿನದಲ್ಲಿ ಪ್ರಾತಃಕಾಲದಲ್ಲಿ ಉಪವಾಸ ಮಾಡುವವರು, ಸ್ನಾನಾದಿ ನಿತ್ಯಕರ್ಮವನ್ನು ಮಾಡಿ ಅನಂತರದಲ್ಲಿ,

ದಶಮೀ ದಿನಮಾರಭ್ಯ ಕರಿಷ್ಯೇಽಹಂ ವ್ರತಂತವ ।
ತ್ರಿದಿನಂ ದೇವದೇವೇಶ ನಿರ್ವಿಘ್ನಂ ಕುರು ಕೇಶವ ॥೧॥

ಅಂದರೆ ಎಲೈ ಮಹಾವಿಷ್ಣುವೇ ನಾನು ದಶಮಿ ಮೊದಲು ಮಾಡಿಕೊಂಡು ಮೂರು ದಿನಗಳ ವರೆಗೂ ನಿನ್ನವ್ರತವನ್ನು ಮಾಡುವೆನು,ನಿರ್ವಿಘ್ನವಾಗಿ ಈ ವ್ರತವನ್ನು ನೆರವೇರಿಸುವಂತೆ ಮಾಡು ॥೧॥ ಎಂದು ಸಂಕಲ್ಪಮಾಡಿಕೊಂಡು, ಮಧ್ಯಾಹ್ನದಲ್ಲಿ ಏಕಭಕ್ತವನ್ನು ಮಾಡಬೇಕು. ಏಕಭಕ್ತ ವಿಷಯದಲ್ಲಿ ನಿಯಮವೇನಂದರೆ-ಕಂಚಿನ ಪಾತ್ರೆ, ಮಾಂಸ, ಕಿರುಗಡಲೆ, ಹಗಲು ನಿದ್ರಿಸುವದು, ಮಿತಿಮೀರಿ ಊಟಮಾಡುವುದು, ಹೆಚ್ಚಾಗಿ ನೀರನ್ನು ಕುಡಿಯುವುದು, ಪುನಃ(ಎರಡನೆಯಸಾರಿ) ಊಟಮಾಡುವುದು, ಸ್ತ್ರೀಸಂಗ, ಜೇನುತುಪ್ಪ, ಸುಳ್ಳು, ಕಡಲೆ, ಹಾರಕ,

ಸೊಪ್ಪು, ಪರಾನ್ನ, ಜೂಜು, ಎಣ್ಣೆ, ಚೆಗಳೆ, ತಾಂಬೂಲ ಇವುಗಳನ್ನು ಬಿಡುವುದೇ ಮೊದಲಾದ ನಿಯಮಗಳನ್ನನುಸರಿಸಬೇಕು. ಏಕಭಕ್ತವಾದಮೇಲೆ ಕಡ್ಡಿಯಿಂದ ಹಲ್ಲುಜ್ಜಿಕೊಳ್ಳಬೇಕು. ರಾತ್ರಿಯಲ್ಲಿ ಹಾಸಿಗೆಇಲ್ಲದೆ ನೆಲದಮೇಲೆಯೇ ಮಲಗಿದ್ದು ಬೆಳಗಾದಮೇಲೆ ಏಕಾದಶಿಯಲ್ಲಿ ಎಲೆ ಮೊದಲಾದವುಗಳಿಂದ ಹಲ್ಲನ್ನುಜ್ಜಿಕೊಳ್ಳಬೇಕು. ಕಡ್ಡಿಯಿಂದ ಕೂಡದು, (ಉಪವಾಸೇ ತಥಾಶ್ರಾದ್ಧೇನ ಕುರ್ಯಾದ್ದಂತ ಧಾವನಂ। ದನ್ತಾನಾಂ ಕಾಷ್ಠಸಂಯೋಗೋ ದಹತ್ಯಾಸಪ್ತಮಂ ಕುಲಂ ॥೧॥ ಅಂದರೆ ಉಪವಾಸ ದಿನಗಳಲ್ಲಿಯೂ, ಶ್ರಾದ್ಧ ದಿವಸಗಳಲ್ಲಿಯೂ ಕರ್ತೃವುಕಡ್ಡಿಯಿಂದ ಹಲ್ಲುಜ್ಜಿಕೊಂಡರೆ ಹಿಂದಣ ಏಳು ತಲೆಯುವರಿಗಿನ ಪಿತೃಗಳಿಗೆ ದುರ್ಗತಿ ಯುಂಟಾಗುವುದೆಂದರ್ಥವು ॥೧॥ ಕಡ್ಡಿಯೊಂದನ್ನು ನಿಷೇಧಿಸಿರುವುದರಿಂದ, ಮಣ್ಣು, ಹೆಂಟೆ, ಮೊದಲಾದವುಗಳಿಂದ ಹಲ್ಲುಜ್ಜಿಕೊಂಡರೆ ದೋಷವಿಲ್ಲವೆಂದು 'ಕಾಷ್ಠಗ್ರಹಣಾ ನ್ಮೃಲ್ಲೋಷ್ಠಾದ್ಯನಿಷೇಧಇತಿ ಹೇಮಾದ್ರಿಃ' ಹೇಮಾದ್ರಿಯ ಅಭಿಪ್ರಾಯವು, ಎಂದು ವಿಷ್ಣು ರಹಸ್ಯದಲ್ಲಿ ಹೇಳಿದೆ. ಮತ್ತು "ಶ್ರಾದ್ಧೋಪವಾಸ ದಿವಸೇಖಾದಿತ್ವಾ ದಂತಧಾವನಂ।ಗಾಯತ್ರ್ಯಾಶತ ಸಂಪೂತಮಂಬು ಪ್ರಾಶ್ಯವಿಶುದ್ಧ್ಯತಿ" ॥ ಇತಿ ಸಿಂಧುಃ ॥ ಎಂದರೆ ಶ್ರಾದ್ಧೋಪವಾಸಗಳಲ್ಲಿ ಕಡ್ಡಿಯಿಂದ ಹಲ್ಲುಜ್ಜಿಕೊಂಡದ್ದರಿಂದುಂಟಾದ ದೋಷವು, ನೂರು ಗಾಯತ್ರಿಯಿಂದ ಅಭಿಮಂತ್ರಿತವಾದ ನೀರನ್ನು ಕುಡಿವುದರಿಂದ (ಈ ಪ್ರಾಯಶ್ಚಿತ್ತದಿಂದ) ನಿವಾರಣೆ ಯಾಗುವುದೆಂದು, ಸಿಂಧುಕಾರನು ಹೇಳಿರುವನು.) ಹೀಗೆ ಹಲ್ಲುಜ್ಜಿಕೊಂಡು ಸ್ನಾನ ಮಾಡಿದಮೇಲೆ ನಿತ್ಯಕರ್ಮವನ್ನು ಮಾಡಿಕೊಂಡು, ಪವಿತ್ರವನ್ನು ಇಟ್ಟುಕೊಂಡು (ಪವಿತ್ರಪಾಣಿಯಾಗಿ) ಉತ್ತರಾಭಿಮುಖನಾಗಿ ಕುಳಿತು, ಕೈಯಲ್ಲಿ, ನೀರು ತುಂಬಿದ ತಾಮ್ರಪಾತ್ರೆಯನ್ನು ತಗೆದುಕೊಂಡು, ಸಂಕಲ್ಪವನ್ನು ಮಾಡಬೇಕು ಅಥವಾ_

ಏಕಾದಶ್ಯಾಂ ನಿರಾಹಾರೋ ಭೂತ್ವಾಹ ಮಪರೇಹನಿ। ಭೋಕ್ಷ್ಯೇವಿಪುಂಡರೀಕಾಕ್ಷ ಶರಣಂ ಮೇಭವಾಚ್ಯುತ ॥೧॥ ಅಂದರೆ-ಎಲೈ ಕಮಲನೇತ್ರನಾದ ವಿಷ್ಣುವೇ ! ನಾನು ಏಕಾದಶೀದಿನದಲ್ಲಿ ನಿರಾಹಾರ ಮಾಡಿ (ಉಪವಾಸ) ಎರಡನೆಯ ದಿನದಲ್ಲಿ (ದ್ವಾದಶಿಯಲ್ಲಿ) ಊಟಮಾ

ಡುವೆನು. ನನ್ನನ್ನು ಉದ್ಧಾರಮಾಡು ॥೧॥ ಎಂಬ ಈ ಮಂತ್ರದಿಂದ ಪುಷ್ಪಾಂಜಲಿಯನ್ನಾದರೂ ಸಮರ್ಪಿಸಬೇಕು. ಏಕಾದಶಿಯಲ್ಲಿ ಉಪವಾಸಮಾಡುವುದಕ್ಕೆ ಶಕ್ತಿ ಇಲ್ಲದವರು ' ಏಕಾದಶ್ಯಾಂಜಲಾಹಾರಃ ' ' ಏಕಾದಶ್ಯಾಂಕ್ಷೀರಭಕ್ಷಃ ' ' ಏಕಾದಶ್ಯಾಂಫಲಾಹಾರಃ ' 'ಏಕಾದಶ್ಯಾಂನಕ್ತಭೋಜೀ ' ಎಂದರೆ ನೀರನ್ನು ಕುಡಿದು ಉಪವಾಸಮಾಡುವುದು, ಅಥವಾ ಕ್ಷೀರಪಾನದಿಂದಿರುವುದು, ಇಲ್ಲವೇ ಫಲಾಹಾರಮಾಡುವುದು, ಮತ್ತು ನಕ್ತಭೋಜನಮಾಡುವುದು, ಎಂಬಿವುಗಳಲ್ಲಿ ತಮ್ಮ ಶಕ್ತ್ಯನುಸಾರವಾಗಿ ಯಾವುದು ಸಾಧ್ಯವೆಂದು ತೋರುವುದೋ ಆ ಪರ್ಯಾಯವನ್ನಿಟ್ಟುಕೊಂಡು ಸಂಕಲ್ಪವನ್ನೂ ಅದೇರೀತಿಯಲ್ಲಿ ಮಾಡಬೇಕು. ಶೈವರು ರುದ್ರಗಾಯತ್ರಿಯಿಂದ ಸಂಕಲ್ಪಮಾಡಬೇಕು. ಸೌರರು ನಿತ್ಯಗಾಯತ್ರಿಯಿಂದಲಾಗಲಿ ಸೂರ್ಯಗಾಯತ್ರಿಯಿಂದಾಗಲಿ ಸಂಕಲ್ಪಮಾಡಬೇಕು. ಸೂರ್ಯೋದಯಾನಂತರದಲ್ಲಿಯೂ ದಶಮಿ ಇದ್ದರೆ ಈ ಸಂಕಲ್ಪವನ್ನು ಏಕಾದಶಿಯದಿನ ರಾತ್ರಿಯಲ್ಲಿ ಮಾಡಬೇಕು. ಅರ್ಧರಾತ್ರಿಯಿಂದೀಚೆಗೆ ದಶಮಿಯು ಇದ್ದರೆ ಎಲ್ಲರೂ ಏಕಾದಶಿಯ ಮಧ್ಯಾಹ್ನದ ಮೇಲೆ ಸಂಕಲ್ಪಮಾಡಬೇಕು. (ದಶಮ್ಯಾಃ ಸಂಗದೋಷೇಣಅರ್ಧರಾತ್ರಾತ್ಪರೇಣತು । ವರ್ಜಯೇಚ್ಚತುರೋಯಾಮಾನ್ ಸಂಕಲ್ಪಾರ್ಚನಯೋಸ್ತದಾ ॥ ಇತಿಸಿಂಧುಃ॥) (ಅರ್ಧರಾತ್ರಿಯಿಂದೀಚೆಗೆ ದಶಮಿಯು ವೇಧೆ ಇದ್ದರೆ ಸಂಕಲ್ಪ, ಪೂಜೆ, ಇವುಗಳಿಗೆ ನಾಲ್ಕು ಯಾಮಗಳನ್ನು ಬಿಡಬೇಕು, ಎಂದು ಸಿಂಧುಕಾರನು ಹೇಳಿದ್ದಾನೆ). ಸಂಕಲ್ಪಮಾಡಿದ ಮೇಲೆ ನಾರಾಯಣ ಅಷ್ಟಾಕ್ಷರಿಯ ಮಂತ್ರದಿಂದ ಅಭಿಮಂತ್ರಿತವಾದ ಜಲವನ್ನು ಪಾನಮಾಡಬೇಕು. ಅನಂತರದಲ್ಲಿ ಹೂವಿನ ಮಂಟಪವನ್ನು ಮಾಡಿ ಅದರಲ್ಲಿ--

ಪುಷ್ಪೈರ್ಗಂಧೈಸ್ತಥಾಧೂಪೈ ರ್ದೀಪೈ ರ್ನೈವೇದ್ಯಕೈಃ ಪರೈಃ ।
ಸ್ತೋತ್ರೈರ್ನಾನಾವಿಧೈರ್ದಿವ್ಯೈ ರ್ಗೀತವಾದ್ಯೈರ್ಮನೋಹರೈಃ ॥೧॥
ದಂಡವತ್ಪ್ರಣಿಪಾತೈಶ್ಚ ಜಯಶಬ್ದೈ ಸ್ತಥೋತ್ತಮೈಃ ।
ಹರಿಂ ಸಂಪೂಜ್ಯವಿಧಿವದ್ರಾತ್ರೌಕುರ್ಯಾತ್ಪ್ರಜಾಗರಂ ॥೧॥

ಗಂಧ, ಪುಷ್ಪ, ಧೂಪ, ದೀಪ, ನೈವೇದ್ಯಗಳಿಂದಲೂ, ನಾನಾ ವಿಧವಾದ ಸ್ತೋತ್ರಗಳಿಂದಲೂ, ಶ್ರೇಷ್ಠವಾಗಿಯೂ, ಇಂಪಾಗಿಯೂ ಇರುವ ಸಂಗೀತ, ವಾದ್ಯಗಳಿಂದಲೂ, ॥೧॥ ದಂಡಪ್ರಣಾಮಗಳಿಂದಲೂ (ಅಡ್ಡ ಬೀಳುವುದು) ಉತ್ತಮವಾದ 'ಜಯ' ಮೊದಲಾದ ಹೊಗಳಿಕೆಯಿಂದಲೂ, ವಿಧಿಪ್ರಕಾರವಾಗಿ ಮಹಾವಿಷ್ಣುವನ್ನು ಪೂಜೆ ಮಾಡಿ ರಾತ್ರಿಜಾಗರ (ಜಾಗರಣೆ) ವನ್ನು ಮಾಡಬೇಕು ॥೧॥ ಏಕಾದಶಿಯ ನಿಯಮಗಳು-ಪಾಷಂಡಿಗಳ (ವೇದಬಾಹ್ಯರ) ಮುಖವನ್ನು ನೋಡುವುದು, ಅವರೊಡನೆ ಮಾತನಾಡುವುದು, ಅವರನ್ನು ಮುಟ್ಟುವುದು, ಇವುಗಳನ್ನು ಬಿಡಬೇಕು. ಬ್ರಹ್ಮಚರ್ಯ, ಸತ್ಯವಾಕ್ಯ, ಹಗಲಿನಲ್ಲಿ ನಿದ್ರೆಮಾಡದಿರುವುದು. ಮೊದಲಾದ ಹಿಂದೆ ವ್ರತನಿಯಮದಲ್ಲಿ (ಪರಿಭಾಷೆಯಲ್ಲಿ) ಹೇಳಿರುವಂತೆ ಎಲ್ಲವನ್ನೂ ಅನುಸರಿಸಬೇಕು.

ಪಾಷಣ್ಡಿದರ್ಶನಾದೌತು ಸೂರ್ಯಂಪಶ್ಯೇತ್ತತಃ ಶುಚಿಃ ।
ಸಂಸ್ಪರ್ಶೇತು ಬುಧಃ ಸ್ನಾಯಾಚ್ಛುಚಿ ರಾದಿತ್ಯ ದರ್ಶನಾತ್ ॥
ಸಂಭಾಷ್ಯ ತಾನ್ ಶುಚಿಷದಂ ಚಿಂತಯೇದಚ್ಯುತಂಬುಧಃ ॥ ಇತ್ಯಾದಿ ಪ್ರಾಯಶ್ಚಿತ್ತಂ ॥

ಇತ್ಯಾದಿ ಎಂಬುದರಿಂದ, ರಜಸ್ವಲೆ, ಚಂಡಾಲ, ರಜಕ. ಸೂತಿಕಾ (ಬಾಣಂತಿ ಇವರುಗಳು) ವ್ರತದಿನದಲ್ಲಿ ಪಾಷಂಡಿಮೊದಲಾದವರನ್ನು ನೋಡಿದರೆ ಸೂರ್ಯನನ್ನು ದರ್ಶನಮಾಡುವುದರಿಂದ ಶುದ್ಧಿಯುಂಟಾಗುವುದು. ಅವರನ್ನು ಮುಟ್ಟಿದ್ದರೆ ಸ್ನಾನಮಾಡಿ ಸೂರ್ಯದರ್ಶನ ಮಾಡುವುದರಿಂದ ಶುಚಿತ್ವಉಂಟಾಗುವುದು ॥೧॥ ಅವರೊಡನೆ ಮಾತನಾಡುವುದರಿಂದುಂಟಾದ ದೋಷವು, ಅತ್ಯಂತ ಪರಿಶುದ್ಧನಾದ ಮಹಾವಿಷ್ಣುವನ್ನು ಧ್ಯಾನಿಸುವುದರಿಂದ ಪರಿಹಾರವಾಗುವುದು॥ ಇವೇ ಪ್ರಾಯಶ್ಚಿತ್ತಗಳು.

## ಉಪವಾಸ ದಿನದಲ್ಲಿ ಶ್ರಾದ್ಧಾದಿಗಳು ಬಂದರೆನಡೆದುಕೊಳ್ಳುವ ಕ್ರಮ.

ಉಪವಾಸದಿನಗಳಲ್ಲಿ ಪಿತೃದಿನಬಂದರೆ ಶ್ರಾದ್ಧವನ್ನು ಮಾಡಿ ಉಳಿದ ಅನ್ನ ಮೊದಲಾದ ಎಲ್ಲಾ ಪದಾರ್ಥಗಳನ್ನೂ ಒಂದು ಪಾತ್ರೆಯಲ್ಲಿ ಬಡಿಸಿ, ಆ ಅನ್ನವನ್ನೆಲ್ಲಾ ಆಘ್ರಾಣಿಸಿ (ಮೂಸಿನೋಡಿ) ಅದನ್ನು ಗೋವು ಮುಂತಾದುವುಗಳಿಗೆ ಕೊಟ್ಟು ಬಿಡಬೇಕು. ಶ್ರಾದ್ಧಕರ್ತೃವು ತನ್ನ

ಶಕ್ತ್ಯನುಸಾರವಾಗಿ ಕಂದ, ಮೂಲ, ಫಲ, ಮೊದಲಾದ ಯಾವುದ ನ್ನಾದರೂ ತನ್ನ ಆಹಾರಾರ್ಥವಾಗಿ ಕಲ್ಪಿಸಿಕೊಂಡು ಬ್ರಾಹ್ಮಣರ ಎಲೆ ಗಳಿಗೆ ಮೊದಲೇ ಅವುಗಳನ್ನು ಬಡಿಸಿದ್ದು, ಉಳಿದದ್ದನ್ನು ತಾನು ಆಹಾ ರಮಾಡಬೇಕು.

ಏಕಾದಶ್ಯಾಂ ಯದಾ ಭೂಪ ಮೃತಾಹಃ ಸ್ಯಾತ್ಕದಾಚನ ।
ತದ್ದಿನಂ ತು ಪರಿತ್ಯಜ್ಯ ದ್ವಾದಶ್ಯಾಮೇವ ಕಾರಯೇತ್ ॥೧॥

ಯಾವಾಗಲಾದರೂ ಒಂದುವೇಳೆ ಏಕಾದಶಿಯ ದಿವಸದಲ್ಲಿ ಪಿತೃ ಶ್ರಾದ್ಧವು ಬಂದರೆ ಆದಿವಸಬಿಟ್ಟು ಆ ಶ್ರಾದ್ಧವನ್ನು ದ್ವಾದಶಿಯಲ್ಲಿಯೇ, ಮಾಡಬೇಕು ॥೧॥ ಈ ಮೊದಲಾದ ವಚನಗಳು ವೈಷ್ಣವರಿಗೆ ಆಚಾರ ರೂಪವಾಗಿಹೇಳಿದವುಗಳು. ವೈಷ್ಣವರು,ಹದಿನಾರು ಮಹಾಲಯಗಳನ್ನು ಮಾಡಬೇಕಾದ ಸಂದರ್ಭದಲ್ಲಿ ಏಕಾದಶಿಯಲ್ಲಿಯೂ, ದ್ವಾದಶಿಯಲ್ಲಿ ಯೂ,ಮಾಡಬೇಕಾದ ಎರಡು ಮಹಾಲಯಗಳನ್ನೂ ತಂತ್ರದಿಂದ ಮಾ ಡುತ್ತೇನೆಂದು ಸಂಕಲ್ಪಮಾಡಿಕೊಂಡು ಎರಡನ್ನೂ ದ್ವಾದಶಿಯಲ್ಲಿಯೇ ಮಾಡಬೇಕು ಕಾಮ್ಯವ್ರತೋಪವಾಸಾದಿಗಳಲ್ಲಿ ಜಾತಾಶೌಚವು ಬಂ ದರೆ ದೇಹಸಂಬಂಧವಾದ ನಿಯಮಗಳನ್ನು(ಉಪವಾಸಾದಿಗಳನ್ನು) ಮಾ ತ್ರ ತಾವುಮಾಡಿ ಪೂಜೆ, ಹೋಮ, ಬ್ರಾಹ್ಮಣ ಭೋಜನಾದಿಗಳನ್ನು ಾಶೌಚನಿವೃತ್ತ್ಯನಂತರದಲ್ಲಿ ಮಾಡಬೇಕು. ನಿತ್ಯೋಪವಾಸದಲ್ಲಿ ಜಾ ತಾಶೌಚಾದಿಗಳು ಸಂಭವಿಸಿದರೆ ಕರ್ತೃವು, ಸ್ನಾನಮಾಡಿ ವಿಷ್ಣುವಿಗೆ ನಮಸ್ಕಾರಮಾಡಿ, ಉಪವಾಸ ಮೊದಲಾದ ದೇಹನಿಯಮಗಳನ್ನು ತಾ ನು ನಡೆಯಿಸಿ ಪೂಜಾದಿಗಳನ್ನು ಬ್ರಾಹ್ಮಣರಿಂದ ಮಾಡಿಸಬೇಕು. ಸೂ ತಕ ನಿವೃತ್ತ್ಯನಂತರದಲ್ಲಿ ಮಾಡಬೇಕೆಂಬ ನಿರ್ಬಂಧ ವಿಲ್ಲದ್ದರಿಂದ ದಾ ನಾದಿಗಳನ್ನು ಮಾಡಬೇಕಾದ್ದಿಲ್ಲ. ಸ್ತ್ರೀಯರು, ಇಂತಹ ಸಂದರ್ಭ ಗ ಳಲ್ಲಿ ರಜಸ್ವಲೆಯರಾದರೆ ತಾವುಮಾಡಬೇಕಾದ ವ್ರತೋಪವಾಸಗಳಲ್ಲಿ ಯೂ ಹೀಗೆಯೇ ನಡೆಯಿಸಬೇಕು. ದ್ವಾದಶಿಯದಿನ ಪ್ರಾತಃಕಾಲದಲ್ಲಿ ನಿತ್ಯ ಪೂಜೆಯನ್ನುಮಾಡಿ,ಭಗವಂತನಲ್ಲಿ ವ್ರತವನ್ನು ಸಮರ್ಪಿಸಬೇಕು.

ಅಜ್ಞಾನ ತಿಮಿರಾನ್ಧಸ್ಯ ವ್ರತೇನಾನೇನ ಕೇಶವ ।
ಪ್ರಸೀದ ಸುಮುಖೋನಾಥ ಜ್ಞಾನ ದೃಷ್ಟಿಪ್ರದೋಭವ ॥೧॥

ಸ್ವಾಮಿಯಾದ ಮಹಾವಿಷ್ಣುವೇ ! ನಾನುಮಾಡಿದ ಈ ವ್ರತವನ್ನು ಸ್ವೀಕರಿಸಿ, ತೃಪ್ತಿಪಟ್ಟು ಪ್ರಸನ್ನನಾಗು. ಅಜ್ಞಾನವೆಂಬ ಕತ್ತಲೆಯಿಂದ ಕುರುಡನಾಗಿರುವ ನನಗೆ ಜ್ಞಾನವೆಂಬ ಕಣ್ಣನ್ನು (ದೃಷ್ಟಿ) ಕೊಡುವವನಾಗು ॥೧॥ ಇದೇ ವ್ರತ ಸಮರ್ಪಣೆಗೆ ಮಂತ್ರವು. ದಶಮಿ ಮೊದಲಾದ ನಿಯಮದಿನಗಳಲ್ಲಿ ಹೇಳಲ್ಪಟ್ಟಿರುವ ನಿಯಮಗಳಿಗೆ ಲೋಪ ಬಂದರೆ, ಹಗಲು ನಿದ್ರಿಸುವದು, ಅನೇಕಾವೃತ್ತಿ ನೀರನ್ನು ಕುಡಿವುದು, ಸುಳ್ಳನ್ನು ಹೇಳುವುದು, ಮೊದಲಾದವುಗಳು ಸಂಭವಿಸಿದರೆ ಆಯಾನಿಯಮಗಳಿಗೆ ಭಂಗವುಂಟಾದದ್ದಕ್ಕಾಗಿ, ನಾರಾಯಣಾಷ್ಟಾಕ್ಷರೀ ಮಂತ್ರ ಜಪವನ್ನು ೧೦೮ ಸಾರಿ ಮಾಡಬೇಕು. ಸ್ವಲ್ಪವಾದ ದೋಷವುಂಟಾಗಿದ್ದರೆ, ವಿಷ್ಣುತ್ರಿಶತಿಯ ಜಪವನ್ನು ಮಾಡಬೇಕು. ವ್ರತವನ್ನು ಮಾಡುತ್ತಿರುವ ಕಾಲದಲ್ಲಿ, ರಜಸ್ವಲೆ, ಚಂಡಾಲ, ರಜಕ, ಸೂತಿಕಾ, ಮೊದಲಾದವರ ಧ್ವನಿಕೇಳ ಬಾದರೆ ೧೦೦೮ ಗಾಯತ್ರೀ ಜಪಮಾಡಬೇಕು. ಅನಂತರದಲ್ಲಿ ನೈವೇದ್ಯ (ಪ್ರಸಾದ) ತುಲಸಿಯಿಂದ ಕೂಡಿದ ಅನ್ನವನ್ನು ಪಾರಣೆಯಲ್ಲಿ ಊಟಮಾಡಬೇಕು. ಪಾರಣೆಯಲ್ಲಿ ನೆಲ್ಲಿಯಕಾಯನ್ನು ತಿಂದರೆ ಅಶುದ್ಧರೊಡನೆ ಮಾತನಾಡಿದ್ದು (ಅಸಂಭಾಷ್ಯಭಾಷಣ) ಮೊದಲಾದ ದೋಷಗಳು ನಿವಾರಣೆಯಾಗುವವು.

## ಪಾರಣನಿರ್ಣಯವು

ಪಾರಣೆಯಕಾಲಕ್ಕೆ ದ್ವಾದಶಿಯು ಕಳೆದು ಹೋಗಿದ್ದರೆ ಹೆಚ್ಚಾದ ದೋಷವು ಪ್ರಾಪ್ತವಾಗುವುದರಿಂದ, ದ್ವಾದಶಿಯ ಮಧ್ಯದಲ್ಲಿಯೇ (ದ್ವಾದಶಿ ಇರುವಷ್ಟರೊಳಗಾಗಿ) ಪಾರಣೆಯನ್ನು ಮಾಡಬೇಕು. ಹಿಂದಣ ರಾತ್ರಿಯಲ್ಲಿ, ದ್ವಾದಶಿಯು ಹೆಚ್ಚಾಗಿ ಕಳೆದುಹೋಗಿ ಸ್ವಲ್ಪಕಾಲ ಮಾತ್ರ ಉಳಿದಿದ್ದರೆ, ದ್ವಾದಶಿಯ ಮಧ್ಯಾಹ್ನದ ಕೊನೆಯವರಗೂ ಮಾಡಬೇಕಾದ ಎಲ್ಲ ಕರ್ಮಗಳನ್ನೂ ಅಪಕರ್ಷಣೆಯನ್ನು ಮಾಡಿಕೊಂಡು ಬೆಳಗಿನಲ್ಲಿಯೇ ಮಾಡಬೇಕು. ಅಗ್ನಿಹೋತ್ರ ಹೋಮವನ್ನು ಅಪಕರ್ಷಣೆಯಿಂದ ಮಾಡಕೂಡದೆಂದು ಕೆಲವರು ಹೇಳುತ್ತಾರೆ, ರಾತ್ರಿಯಲ್ಲಿ ಶ್ರಾದ್ಧವು ಶಾಸ್ತ್ರ ನಿಷಿದ್ಧವಾದ್ದರಿಂದ ಶ್ರಾದ್ಧವನ್ನೂ ಅಪಕರ್ಷಿಸಿ

ಮಾಡಕೂಡದು. ಹೀಗೆ ಶ್ರಾದ್ಧಕ್ಕೆ ಅವಕಾಶವಿಲ್ಲದೆ ಸಂಕಟವು ಪ್ರಾಪ್ತವಾದರೆ, ಈಸಂದರ್ಭದಲ್ಲಿಯೂ, ಪ್ರದೋಷಾದಿ ವ್ರತಗಳಲ್ಲಿಯೂ ಸಹ ತೀರ್ಥ ಜಲದಿಂದ ಪಾರಣೆಯನ್ನು ಮಾಡಬೇಕು. ದ್ವಾದಶಿಯು ಹೆಚ್ಚಾಗಿದ್ದರೆ ದ್ವಾದಶಿಯ ಮೊದಲನೆಯ ಪಾದವು ಹರಿವಾಸರವೆನ್ನಿಸಿಕೊಳ್ಳುವುದಾದ್ದರಿಂದ ಆ ಕಾಲವು ಕಳೆದಮೇಲೆ ಪಾರಣೆಯನ್ನು ಮಾಡಬೇಕು. ದ್ವಾದಶಿಯು ಕಲಾಮಾತ್ರವೂ ಇಲ್ಲದೆ ಇದ್ದರೆ ತ್ರಯೋದಶಿಯಲ್ಲಿಯೇ ಪಾರಣೆಯನ್ನು ಮಾಡಬೇಕು. ದ್ವಾದಶಿಯು ಮಧ್ಯಾಹ್ನವು ಕಳೆದ ಮೇಲೂ ಇದ್ದರೆ ಪ್ರಾತಃಕಾಲದ ಮೂರು ಮುಹೂರ್ತಗಳೊಳಗಾಗಿ (೬ಗಳಿಗೆ) ಯೇ ಪಾರಣೆ ಮಾಡಬೇಕಲ್ಲದೆ ಮಧ್ಯಾಹ್ನಮೊದಲಾದ ಕಾಲಗಳಲ್ಲಿ ಮಾಡಕೂಡದು ಎಂದು ಬಹು ಜನಗಳು ಅಭಿಪ್ರಾಯ ಪಡುವರು. ಮೂರು ಮುಹೂರ್ತಗಳೊಳಗಾಗಿ ಪಾರಣೆಮಾಡುವುದರಿಂದ ಅನೇಕ ಕರ್ಮಕಾಲಗಳಿಗೆ ಬಾಧೆಯುಂಟಾಗುವುದರಿಂದ ಅಪರಾಹ್ಣದಲ್ಲಿಯೇ ಪಾರಣೆಮಾಡಬೇಕೆಂದು ಕೆಲರು ಹೇಳುತ್ತಾರೆ. ಎಲ್ಲಮಾಸಗಳಲ್ಲಿಯೂ,ಶುಕ್ಲ ಮತ್ತು ಕೃಷ್ಣ ಪಕ್ಷಗಳ ದ್ವಾದಶಿಗಳಿಗೆ ಶ್ರವಣ ನಕ್ಷತ್ರ ಯೋಗವಿದ್ದರೆ ಶಕ್ತಿಯುಳ್ಳವರು, ಏಕಾದಶಿ, ದ್ವಾದಶಿ ಇವುಗಳೆರಡರಲ್ಲಿಯೂ ಉಪವಾಸ ಮಾಡಬೇಕು. ಅಶಕ್ತರು ಏಕಾದಶಿಯಲ್ಲಿ ಫಲಾಹಾರಮೊದಲಾದ ಅನುಕಲ್ಪವನ್ನಾಚರಿಸಿ ಶ್ರವಣ ದ್ವಾದಶಿಯಲ್ಲಿ ಉಪವಾಸ ಮಾಡಬೇಕು. ವಿಷ್ಣುಶೃಂಖಲ ಯೋಗವಿದ್ದರೆ ಶ್ರವಣ ದ್ವಾದಶೀ ಪ್ರಯುಕ್ತವಾದ ಉಪವಾಸವನ್ನೂ, ಏಕಾದಶಿಯಲ್ಲಿಯೇ ಮಾಡಿ ದ್ವಾದಶಿಯ ದಿವಸ ಶ್ರವಣ ನಕ್ಷತ್ರವು ಕಳೆದ ಮೇಲೆ ಪಾರಣೆಯನ್ನು ಮಾಡಬೇಕು. ದ್ವಾದಶಿಯು ಶ್ರವಣನಕ್ಷತ್ರಕ್ಕಿಂತಲೂ ಕಡಮೆಯಾದ ಕಾಲವಿರುವುದಾಗಿದ್ದರೆ, ದ್ವಾದಶಿಯು ಪಾರಣೆಯಕಾಲಕ್ಕೆ ಕಳೆದು ಹೋಗುವುದಾದ್ದರಿಂದ ದೋಷವುಂಟಾಗುವುದಾದಕಾರಣ, ಶ್ರವಣದಿಂದ ಕೂಡಿದ್ದಾಗಿದ್ದಾಗ್ಯಾದರೂ, ದ್ವಾದಶಿಯು ಇರುವ ಕಾಲದಲ್ಲಿಯೇ ಪಾರಣೆ ಮಾಡಬೇಕು. ವಿಷ್ಣುಶೃಂಖಲಯೋಗ ಮೊದಲಾದುವುಗಳ ನಿರ್ಣಯವನ್ನು ಭಾದ್ರಪದ ಮಾಸದಲ್ಲಿ ಬರುವ ಶ್ರವಣದ್ವಾದಶಿಯವಿಚಾರವನ್ನು ತಿಳಿಸುವ ಸ್ಥಳದಲ್ಲಿ ಹೇಳುವೆವು.-

ದಿವಾ ನಿದ್ರಾಂ ಪರಾನ್ನಂ ಚ ಪುನರ್ಭೋಜನ ಮೈಥುನೇ ।
ಕ್ಷೌದ್ರಂಕಾಂಸ್ಯಾಮಿಷಂತೈಲಂದ್ವಾದಶ್ಯಾಮಷ್ಟವರ್ಜಯೇತ್॥

ಹಗಲು ನಿದ್ರೆಮಾಡುವುದು, ಪರಾನ್ನಭೋಜನ, ಎರಡನೆಯ ಸಾರಿ ಊಟಮಾಡುವುದು, ಸ್ತ್ರೀಸಂಗ, ಜೇನುತುಪ್ಪ, ಕಂಚಿನಪಾತ್ರೆ, ಮಾಂಸ, ಎಣ್ಣೆ? ಇವುಗಳನ್ನು ದ್ವಾದಶಿಯಲ್ಲಿ ಬಿಡಬೇಕು. ॥೧॥ ಮತ್ತು ಜೂಜು, ಕೋಪಿಸುವುದು, ಕಡಲೆ, ಹಾರಕ, ಉದ್ದು, ಚೆಗಳ, ಕಿರುಗಡಲೆ, ಕಣ್ಣುಕಪ್ಪು, ಸುಳ್ಳಾಡುವುದು, ಆಸೆಪಡುವುದು. (ಲುಬ್ಧತ್ವ) ಕಷ್ಟಕಾರ್ಯ, ಪರಸ್ಥಳಪ್ರಯಾಣ, ಹೆಚ್ಚು ಭಾರವನ್ನು ಹೊರುವುದು, ಪಾಠವನ್ನು ಓದುವುದು, ಅಳುವುದು, ತಾಂಬೂಲ ಮೊದಲಾದವುಗಳನ್ನೂ ಬಿಡಬೇಕು, ಈ ನಿಯಮಗಳು ಕಾಮ್ಯವ್ರತಗಳಲ್ಲಿ ಅವಶ್ಯಕವಾದವುಗಳು, ನಿತ್ಯವ್ರತಗಳಲ್ಲಿಯಾದರೆ.—

ಶಕ್ತಿಮಾಂಸ್ತು ಪುಮಾನ್ ಕುರ್ಯಾನ್ನಿಯಮಂ ಸವಿಶೇಷಣಂ ।
ವಿಶೇಷ ನಿಯಮಾಶಕ್ತೋಽಹೋರಾತ್ರಂ ಭುಜಿ ವರ್ಜಿತಃ ॥೧॥
ನಿಗೃಹೀತೇಂದ್ರಿಯಃ ಶ್ರದ್ಧಾಸಹಾಯೋ ವಿಷ್ಣುತತ್ಪರಃ ।
ಉಪೋಷ್ಯೈಕಾದಶೀಂ ಪಾಪಾನ್ಮುಚ್ಯತೇ ನಾತ್ರಸಂಶಯಃ ॥
ಅನ್ಯಂಭುಙ್ಕ್ಷ್ವೇತಿಯೋಬ್ರೂಯಾದ್ಭುಙ್ಕ್ತೇವಾಯಃಸನಾರಕೀ ।
ಏಕಾದಶೀ ವ್ರತಾದ್ವಿಷ್ಣು ಸಾಯುಜ್ಯಂ ಲಭತೇಽಶ್ರಿಯಂ ॥೩॥

ಶಕ್ತಿಯುಳ್ಳವನಾಗಿದ್ದರೆ ಎಲ್ಲನಿಯಮಗಳನ್ನೂ ಸಂಪೂರ್ಣವಾಗಿ ಆಚರಿಸಬೇಕು. ಹೆಚ್ಚು ನಿಯಮಗಳನ್ನು ನಡೆಯಿಸುವುದಕ್ಕೆ ಶಕ್ತಿಯಿಲ್ಲದವನಾಗಿದ್ದರೆ ಹಗಲು ರಾತ್ರಿಗಳಲ್ಲಿ ಊಟವನ್ನು ಬಿಟ್ಟು ॥೧॥ ಜಿತೇಂದ್ರಿಯನಾಗಿ, ಆಸ್ತಿಕ್ಯ ಬುದ್ಧಿಯುಳ್ಳವನಾಗಿ, ವಿಷ್ಣುಭಕ್ತಿಯುಕ್ತನಾಗಿ,ಏಕಾದಶಿಯಲ್ಲಿ ಉಪೋಷ್ಯಮಾಡಿದರೆ ಸಮಸ್ತಪಾಪಗಳೂ ನಿವಾರಣೆಯಾಗುತ್ತವೆ. ಈ ವಿಷಯದಲ್ಲಿ ಸ್ವಲ್ಪವೂ ಸಂದೇಹವಿಲ್ಲ ॥೨॥ ಏಕಾದಶಿಯಲ್ಲಿ ಊಟಮಾಡುವವನೂ, ಮತ್ತೊಬ್ಬರಿಗೆ ಊಟಮಾಡೆಂದು ಹೇಳುವವನೂ, ನರಕವನ್ನು ಹೊಂದುತ್ತಾರೆ. ಏಕಾದಶೀವ್ರತವನ್ನು ಭಕ್ತಿಯಿಂದ ಆಚರಿಸುವವನು ಇಹದಲ್ಲಿ ಸಂಪತ್ತನ್ನು ಪಡೆಯುವನಲ್ಲದೆ ದೇಹಾನಂತರದಲ್ಲಿ, ವಿಷ್ಣುಸಾಯುಜ್ಯವನ್ನು ಪಡೆಯುತ್ತಾನೆ ॥೩॥ ಇಂ

ತು ಏಕಾದಶೀ ವ್ರತನಿರ್ಣಯವು-ಉಳಿದ ಕಾರ್ಯಗಳಲ್ಲಿ ದ್ವಾದಶಿಯಿಂದ ಕೂಡಿರುವ ಏಕಾದಶಿಯನ್ನೇ ಗ್ರಹಿಸಬೇಕು, ಇಂತು ಏಕಾದಶೀ ನಿರ್ಣಯವೆಂಬ ಹದಿನೇಳನೆಯ ಉದ್ದೇಶವು—

(೨೮) ದ್ವಾದಶೀನಿರ್ಣಯವು.

(೨೮) ದ್ವಾದಶಿಯ ನಿರ್ಣಯವು:— ಏಕಾದಶಿಯಿಂದ ವಿದ್ಧವಾದ ದ್ವಾದಶಿಯನ್ನುಗ್ರಹಿಸಬೇಕು. ೮ವಿಧವಾದ ಮಹಾದ್ವಾದಶಿಗಳು ಯಾವುವೆಂದರೆ—ಶುದ್ಧಾಧಿಕ್ಯೈಕಾದಶಿಯಿಂದ ಕೂಡಿದ್ದು ಉನ್ಮೀಲಿನೀ ದ್ವಾದಶಿಯೆಂತಲೂ, ಶುದ್ಧದ್ವಾದಶಿಯೇ ಅಧಿಕವಾಗಿ ವೃದ್ಧಿಯಾಗಿದ್ದರೆ ವಂಜುಳೀಎಂತಲೂ, ಸೂರ್ಯೋದಯಕಾಲದಲ್ಲಿ ಏಕಾದಶಿ ಇದ್ದು ಅನಂತರದಲ್ಲಿ ಕ್ಷಯತಿಥಿಯಾಗಿ ದ್ವಾದಶಿ ಬಂದು ಎರಡನೆಯ ಸೂರ್ಯೋದಯಕ್ಕೆ ತ್ರಯೋದಶಿ ಇದ್ದರೆ ಒಂದೇ ಹಗಲು ರಾತ್ರಿಗೆ ಮೂರುತಿಥಿಗಳ ಸ್ಪರ್ಶ (ಸಂಬಂಧ) ವುಂಟಾದ್ದರಿಂದ ತ್ರಿಸ್ಪರ್ಶಾಎಂತಲೂ, ದ್ವಾದಶಿಯಿಂದಾಚೆಗೆ ಬರತಕ್ಕ ಅಮಾವಾಸ್ಯೆಗಾಗಲಿ, ಪೂರ್ಣಿಮೆಗಾಗಲಿ, ಅಹಸ್ಸು ವೃದ್ಧಿಯಾದರೆ ಪಕ್ಷವರ್ಧಿನಿ, ಎಂತಲೂ, ಪುಷ್ಯನಕ್ಷತ್ರದಿಂದ ಕೂಡಿದ್ದರೆ ಜಯಾ, ಎಂತಲೂ, ಶ್ರವಣನಕ್ಷತ್ರದಿಂದ ಕೂಡಿದ್ದರೆ ವಿಜಯಾ, ಎಂತಲೂ, ಪುನರ್ವಸುಯುಕ್ತವಾಗಿದ್ದರೆ ಜಯನ್ತೀ ಎಂತಲೂ, ರೋಹಿಣೀ ನಕ್ಷತ್ರ ಯುಕ್ತವಾದದ್ದಕ್ಕೆ ಪಾಪನಾಶಿನಿ ಎಂತಲೂ, ಹೀಗೆ ೮ ಬಗೆಯ ಮಹಾದ್ವಾದಶಿಗಳುಂಟು. ಇವುಗಳಲ್ಲಿ ಪಾಪಕ್ಷಯವನ್ನು ಹೊಂದಿ ಮುಕ್ತಿಯನ್ನು ಪಡೆಯಬೇಕೆಂಬ ಅಪೇಕ್ಷೆಯುಳ್ಳವರು ಉಪವಾಸಮಾಡಬೇಕು. ಶ್ರವಣಯುಕ್ತವಾದ ದ್ವಾದಶಿಯು ಮಾತ್ರ ಏಕಾದಶಿಯಂತೆಯೇ ನಿತ್ಯವಾದದ್ದು, ಅಂದರೆ ಎಲ್ಲರೂ ಉಪವಾಸವನ್ನು ಮಾಡಲೇಬೇಕು. ಈ ಎಂಟರಲ್ಲಿ ಯಾವುದಾದರೂ ಏಕಾದಶಿಯೊಡನೆ ಸೇರಿ ಬರುವುದಾದರೆ ತಂತ್ರದಿಂದ (ಫಲಾಹಾರ) ದ್ವಾದಶಿಯ ಉಪವಾಸವನ್ನು ಮಾಡಬೇಕು. ಬೇರೆ ಬಂದರೆ ಉಪವಾಸಮಾಡುವ ಶಕ್ತಿಯುಳ್ಳವರು ಎರಡುಪವಾಸಗಳನ್ನೇ ಮಾಡಬೇಕು. ಯಾರು ಏಕಾದಶಿ ಮತ್ತು ದ್ವಾದಶಿ ವ್ರತಗಳೆರಡನ್ನೂ ಮಾಡುತ್ತಿರುವವರಾಗಿದ್ದು ಎರಡು ಉಪವಾಸಗಳನ್ನು ಮಾಡುವುದಕ್ಕೆ ಶಕ್ತಿಯಿಲ್ಲದವರಾಗಿರುತ್ತಾರೆಯೋ

ಅಂಥವರಿಗೆ ದ್ವಾದಶಿಯಲ್ಲಿ ಮಾತ್ರವೇ ಉಪವಾಸಮಾಡುವುದರಿಂದಲೇ ಏಕಾದಶಿ ಮತ್ತು ದ್ವಾದಶಿವ್ರತಗಳೆರಡರ ಪುಣ್ಯವೂ ಪ್ರಾಪ್ತವಾಗುವುದು. ದ್ವಾದಶಿಗೆ ಶ್ರವಣನಕ್ಷತ್ರಯೋಗವು ಒಂದು ಮುಹೂರ್ತವಿದ್ದರೂ (ಎರಡುಗಳಿಗೆ) ಶ್ರವಣದ್ವಾದಶಿಯೆಂದು ಗ್ರಹಿಸಬೇಕು. ಪುಷ್ಯಾದಿನಕ್ಷತ್ರಗಳ ಯೋಗವು ಸೂರ್ಯೋದಯಕಾಲದಿಂದ ಸೂರ್ಯಾಸ್ತಕಾಲಪರ್ಯಂತವೂ ಇದ್ದರೆ ಉಪವಾಸಮಾಡಬೇಕು. ತಿಥಿ ಮತ್ತು ನಕ್ಷತ್ರಸಂಯೋಗದಿಂದ ಮಾಡಬೇಕಾದ ಉಪವಾಸಗಳಿಗೆ (ಪುಷ್ಯಯುಕ್ತದ್ವಾದಶಿ, ರೋಹಿಣೀಯುತದ್ವಾದಶಿ ಮೊದಲಾದವುಗಳು) ತಿಥಿನಕ್ಷತ್ರಗಳೆರಡರ ಕೊನೆಯಲ್ಲಾಗಲಿ, ಅಥವಾ ತಿಥಿಯ ಕೊನೆಯಲ್ಲಾಗಲಿ ಇಲ್ಲವೇ ನಕ್ಷತ್ರದಕೊನೆಯಲ್ಲಾಗಲಿ ಪಾರಣೆಯನ್ನು ಮಾಡಬೇಕೆಂಬುದೇ ಎಲ್ಲಕ್ಕೂ ಸಾಮಾನ್ಯ ನಿರ್ಣಯವು. ಇಂತು ದ್ವಾದಶೀ ನಿರ್ಣಯವೆಂಬ ಹದಿನೆಂಟನೆಯ ಉದ್ದೇಶವು.

(೨೯) ತ್ರಯೋದಶೀ ನಿರ್ಣಯವು.

(೨೯)ತ್ರಯೋದಶಿಯ ನಿರ್ಣಯವು--ಶುಕ್ಲಪಕ್ಷದಲ್ಲಿ ಮೊದಲನೆಯ ತ್ರಯೋದಶಿಯನ್ನೂ, ಕೃಷ್ಣಪಕ್ಷದಲ್ಲಿ ಎರಡನೆಯದನ್ನೂ ಗ್ರಹಿಸಬೇಕು. ಶನಿವಾರದಿಂದ ಕೂಡಿದ ಯಾವುದಾದರೂ ಒಂದು ಶುಕ್ಲಪಕ್ಷ ತ್ರಯೋದಶಿಯನ್ನು ಮೊದಲು ಮಾಡಿಕೊಂಡು ಒಂದು ಸಂವತ್ಸರದ ಪರ್ಯಂತವೂ ಶನಿವಾರಯುಕ್ತವಾದ ಉಭಯಪಕ್ಷತ್ರಯೋದಶಿಗಳಲ್ಲಿಯೂ, ಅಥವಾ ಇಪ್ಪತ್ತು ನಾಲ್ಕು ಶುಕ್ಲತ್ರಯೋದಶಿಗಳಲ್ಲಿಯೂ, ಪ್ರದೋಷಕಾಲಗಲ್ಲಿ ಶಿವಪೂಜೆಯನ್ನೂ, ಏಕಭಕ್ತವನ್ನೂ ಮಾಡಿ, ನಡೆಯಿಸಬೇಕಾದ ಪ್ರದೋಷವ್ರತವೆಂಬ ಒಂದು ವ್ರತವುಂಟು, ಆ ವ್ರತವಿಷಯದಲ್ಲಿ ಸೂರ್ಯಾಸ್ತಮಯಾನಂತರ ಮೂರು ಮುಹೂರ್ತಕಾಲ (ಪ್ರದೋಷ) ವ್ಯಾಪ್ತಿಯುಳ್ಳ ತ್ರಯೋದಶಿಯನ್ನು ಗ್ರಹಿಸಬೇಕು. ಆ ತ್ರಯೋದಶಿಗೆ ಎರಡುದಿನಗಳಲ್ಲಿಯೂ ಪ್ರದೋಷವ್ಯಾಪ್ತಿಯಿದ್ದರೆ ಎರಡು ದಿನಗಳಲ್ಲಿಯೂ ಸಮಾನವಾಗಿ ಪ್ರದೋಷವ್ಯಾಪ್ತಿ ಯಿದ್ದರೂ ಏಕದೇಶ ಸ್ಪರ್ಶವಿದ್ದರೂಸಹ ಎರಡನೆಯ ತ್ರಯೋದಶಿಯನ್ನೇ ಗ್ರಹಿಸಬೇಕು. ಎರಡುದಿನಗಳಲ್ಲಿಯೂ ತ್ರಯೋದಶಿಗೆ ಪ್ರದೋಷವ್ಯಾಪ್ತಿಯು ಹೆಚ್ಚು

ಕಡಿಮೆಯಾಗಿದ್ದರೆ ದೇವತಾಪೂಜೆ ಭೋಜನ ಮೊದಲಾದ ಕಾರ್ಯಗಳನ್ನು ಮಾಡುವುದಕ್ಕೆ ಸಾಕಾಗುವಷ್ಟು ಪ್ರದೋಷವ್ಯಾಪ್ತಿಯು ಪೂರ್ವದಿನದ ತ್ರಯೋದಶಿಗೆ ಇದ್ದರೆ ಪೂರ್ವದಿನದ ತ್ರಯೋದಶಿಯನ್ನೂ ಗ್ರಹಿಸಬಹುದು. ಹಾಗೆ ತಕ್ಕಷ್ಟುಕಾಲ ಪ್ರದೋಷವ್ಯಾಪ್ತಿಯು ಹೆಚ್ಚಾಗಿ ಪೂರ್ವದಿನದ ತ್ರಯೋದಶಿಗೆ ಇಲ್ಲದ ಪಕ್ಷದಲ್ಲಿ ಸಮಾನಕಾಲ ಪ್ರದೋಷವ್ಯಾಪ್ತಿ ಯಿದ್ದರೆ ಹೇಗೋ, ಹಾಗೆಯೇ ಭಾವಿಸಿ ಎರಡನೆಯ ತ್ರಯೋದಶಿಯನ್ನೇ ಗ್ರಹಿಸಬೇಕು. ಎರಡುದಿನಗಳಿಗೂ ಪ್ರದೋಷವ್ಯಾಪ್ತಿಯು ಸ್ವಲ್ಪವೂ ಇಲ್ಲದಿದ್ದಾಗ್ಯೂ ಎರಡನೆಯದನ್ನೇ ಗ್ರಹಿಸಬೇಕು. (ಈ ವಿಷಯದಲ್ಲಿ ಹಗಲನ್ನು ಅದರೆ ಅಹಃ ಪ್ರಮಾಣದ ಘಳಿಗೆಯನ್ನು ಎಂಟುಸಮಭಾಗಮಾಡಿ ಕೊನೆಯ ೪ ಭಾಗದ ಕಾಲದಲ್ಲಿ ಪೂಜೆ, ಭೋಜನ, ಇವುಗಳನ್ನು ಮಾಡಬೇಕೆಂದು ನಕ್ತನಿರ್ಣಯದಲ್ಲಿ ಹೇಳಿದೆ) ಇಂತು ತ್ರಯೋದಶೀ ನಿರ್ಣಯವೆಂಬ ಹತ್ತೊಂಭತ್ತನೆಯ ಉದ್ದೇಶವು.

(೨೦) ಚತುರ್ದಶೀ ನಿರ್ಣಯವು—

(೨೦)ಚತುರ್ದಶೀನಿರ್ಣಯವು—ಶುಕ್ಲಪಕ್ಷದಲ್ಲಿ ಎರಡನೆಯದನ್ನೂ, ಕೃಷ್ಣಪಕ್ಷದಲ್ಲಿ ಮೊದಲನೆಯದನ್ನೂ ಗ್ರಹಿಸಬೇಕು. ಆದರೆ ಪ್ರತಿಮಾಸದಲ್ಲಿಯೂ, ಕೃಷ್ಣಚತುರ್ದಶಿಯಲ್ಲಿ ಶಿವರಾತ್ರಿ ಎಂಬ ಕಾಮ್ಯವ್ರತವನ್ನು ಆಚರಿಸತಕ್ಕವರು ಮಹಾ ಶಿವರಾತ್ರಿಯಂತೆ ಅರ್ಧರಾತ್ರವ್ಯಾಪ್ತಿಯುಳ್ಳ ಚತುರ್ದಶಿಯನ್ನೇ ಗ್ರಹಿಸಬೇಕು.ಎರಡು ದಿನಗಳಿಗೂ ಅರ್ಧರಾತ್ರವ್ಯಾಪ್ತಿ ಯಿದ್ದರೆ ಎರಡನೆಯದನ್ನು ಗ್ರಹಿಸಬೇಕು. ಪ್ರದೋಷವ್ಯಾಪ್ತಿಯು ಶ್ರೇಷ್ಠವಾದದ್ದೆಂದು ಕೆಲವರು ಪ್ರದೋಷ ವ್ಯಾಪ್ತಿಮಾತ್ರವೇ ಇರುವ ಚತುರ್ದಶಿಯನ್ನು ಗ್ರಹಿಸುತ್ತಾರೆ. ಅದಕ್ಕೆ ಆಧಾರವೇನೋ ! ಗೊತ್ತಿಲ್ಲ. ಚತುರ್ದಶಿಯಲ್ಲಿ ಹಗಲು ಭೋಜನವನ್ನು ಮಾಡಕೂಡದೆಂಬ ನಿಷೇಧವನ್ನೇ ನಿತ್ಯವಾಗಿಟ್ಟುಕೊಂಡು ಆಚರಿಸುವವರು ಈ ವಿಷಯದಲ್ಲಿ ಚತುರ್ದಶಿಯ ವ್ಯಾಪ್ತಿ ಯಿರುವಕಾಲದಲ್ಲಿ ಭೋಜನ ಮಾಡದೆ, ತ್ರಯೋದಶಿಯಲ್ಲಾಗಲಿ, ಪೌರ್ಣಮಾಸ್ಯೆಯಲ್ಲಾಗಲಿ ಭೋಜನಮಾಡಬೇಕು. ಶಿವರಾತ್ರಿ ವ್ರತವನ್ನಾಚರಿಸುವವರು, ಚತುರ್ದಶಿಯಲ್ಲಿಯೇ ಪಾರಣೆಯನ್ನು ಮಾಡಬೇಕು. 'ವಿಧಿಯಿಂದ ಆಚರಿಸಬೇಕಾದ

ದ್ದನ್ನು ನಿಷೇಧವು ಬಾಧಿಸಲಾರದು, ಎಂಬನ್ಯಾಯದಂತೆ ಚತುರ್ದಶಿ ಯಲ್ಲಿಯೇ ಪಾರಣೆಯನ್ನು ಮಾಡಬೇಕೆಂಬ ವಿಧಿಗೆ ಚತುರ್ದಶಿಯಲ್ಲಿ ಹಗಲು ಭೋಜನಮಾಡಕೂಡದೆಂಬ ನಿಷೇಧವು ಬಾಧಕವಾಗುವದಿಲ್ಲ ವಾದಕಾರಣ " ಚತುರ್ದಶ್ಯಷ್ಟಮೀದಿವಾ " ಎಂಬ ವಚನಪ್ರಕಾರ ವಾಗಿ ಇಲ್ಲಿ ಭೋಜನವನ್ನು ಬಿಡಕೂಡದು. ಇಂತು ಚತುರ್ದಶೀನಿರ್ಣ ಯವೆಂಬ ಇಪ್ಪತ್ತನೆಯ ಉದ್ದೇಶವು.

(೩೧) ಪೂರ್ಣಿಮೆ ಮತ್ತು ಅಮಾವಾಸ್ಯೆಗಳ ನಿರ್ಣಯವು-

(೩೧) ಪೂರ್ಣಿಮಾಮಾವಾಸ್ಯೆಗಳ ನಿರ್ಣಯವು- ಸಾವಿತ್ರೀವ್ರತಕ್ಕೆ ಹೊರತು, ಉಳಿದ ಕರ್ಮಗಳಿಗೆಲ್ಲಾ ಎರಡನೆಯ ಪೌರ್ಣಮಿ, ಅಮಾವಾ ಸ್ಯೆಗಳನ್ನೇ ಗ್ರಹಿಸಬೇಕು. ಆದರೆ ಕೆಲವರು,ಕುಲಧರ್ಮಾದಿಗಳ ವಿಷಯ ದಲ್ಲಿ (ದೇವಕಾರ್ಯವೆಂದು ವಂಶಪಾರಂಪರ್ಯವಾಗಿ ಆಯಾಮನೆತನದ ವರು ಲೋಕದಲ್ಲಿ ರೂಢಿಯಾಗಿ ನಡೆಯಿಸುತ್ತಿರುವ ದೇವತಾಪೂಜೆ ಮೊದಲಾದದ್ದು) ಶ್ರಾವಣಕಾರ್ತಿಕ ಶುದ್ಧ ಪೌರ್ಣಮಿಗಳನ್ನು ಮಾತ್ರ ಚತುರ್ದಶೀ ವಿದ್ಧವಾದವುಗಳನ್ನು ಗ್ರಹಿಸಬಹುದೆಂದು ಹೇಳಿರುವ ವಚ ನವನ್ನು ಆಧಾರವಾಗಿಟ್ಟುಕೊಂಡು ಕುಲಧರ್ಮಾದಿಗಳಲ್ಲಿ, ಎಲ್ಲಾ ಪೌರ್ಣ ಮಿಗಳನ್ನೂ, ಮೊದಲನೆಯವುಗಳನ್ನೇ (ಚತುರ್ದಶೀವಿದ್ಧ) ಗ್ರಹಿಸುತ್ತಾ ರೆ. ಅದಕ್ಕೇನು ಆಧಾರವೋ ಗೊತ್ತಿಲ್ಲ. ೧೮ ಘಳಿಗೆಗಳಿಗಿಂತಲೂ ಕಡ ಮೆಯಾಗಿ ಚತುರ್ದಶಿಯಿದ್ದರೆ,ಅಂತಹ ಚತುರ್ದಶಿಯವೇಧೆಯಿಂದ 'ಭೂ ತೋಷ್ಟಾದಶನಾಡೀಭಿಃ, ಎಂಬವಚನಾನುಸಾರವಾಗಿ ದೋಷವಿಲ್ಲವೆಂದು ಆಚರಣೆಗೆ ಬಂದಿರುವುದರಿಂದ, ಅಂಥ ಸಂದರ್ಭದಲ್ಲಿ, ಕುಲಧರ್ಮಾದಿಗ ಳಲ್ಲಿ ಪೂರ್ವಪೌರ್ಣಮಿಯನ್ನು ಗ್ರಹಿಸುವುದು ಯೋಗ್ಯವಾದದ್ದಾದರೂ ಆಗಬಹುದು. ೧೮ ಘಳಿಗೆಗಿಂತಲೂ ಹೆಚ್ಚಾದ ಚತುರ್ದಶಿಯವೇಧೆ ಯಿ ದ್ದಲ್ಲಿ,ಚತುರ್ದಶಿಯವೇಧೆ ಯಿರುವ ಪೂರ್ಣಿಮೆಯನ್ನು ಗ್ರಹಿಸುವುದುಸ ರಿಯಲ್ಲವೆಂದು ನನಗೆ (ಮೂಲಕಾರ) ತೋರುವುದು. ಸೋಮವಾರ,ಮಂ ಗಳವಾರಗಳಿಂದ ಕೂಡಿದ ಅಮಾವಾಸ್ಯೆಯಲ್ಲಿ, ಸ್ನಾನ, ದಾನಮೊದಲಾದ ವುಗಳನ್ನು ಮಾಡುವುದು, ಬಹಳ ಪುಣ್ಯಪ್ರದವಾದದ್ದು, ಹೀಗೆಯೇ ಭಾನು ವಾರದಿಂದ ಕೂಡಿದ ಸಪ್ತಮಿಯೂ,ಮಂಗಳವಾರದಿಂದ ಸೇರಿದ ಚತುರ್ಥಿ

ಯೂ, ಸಹ ಶ್ಲಾಘ್ಯವಾದವುಗಳಾಗಿವೆ, ಅಮಾವಾಸ್ಯೆಯಿಂದ ಕೂಡಿದ ಸೋಮವಾರದಲ್ಲಿ, ಅಶ್ವತ್ಥಪೂಜಾದಿಗಳನ್ನು ಮಾಡಬೇಕಾದ ಅಮಾ ಸೋಮವಾರ ವ್ರತವಿಷಯದಲ್ಲಿ, ಅಪರಾಹ್ಣದವರೆಗೂ ಒಂದು ಮುಹೂರ್ತಕಾಲ ಯೋಗವಿದ್ದಾಗ್ಯೂ ವ್ರತವನ್ನಾಚರಿಸಬೇಕು. ಹಗಲಿನ ಕೊನೆಯಭಾಗದ ಆರುಗಳಿಗೆಗಳೆಂಬ ಸಾಯಾಹ್ನಕ್ಕಾಗಲಿ, ರಾತ್ರಿಗಾಗಲಿ ಅಮಾವಾಸ್ಯೆಯ ವ್ಯಾಪ್ತಿಯಿದ್ದರೆ ವ್ರತವನ್ನು ಮಾಡಕೂಡದೆಂಬುದು ಶಿಷ್ಟರ ಆಚಾರವಾಗಿದೆ. ಯತಿಗಳಿಗೆ ಕ್ಷೌರ ಮೊದಲಾದ ವಿಷಯಗಳಲ್ಲಿ ಸೂರ್ಯೋದಯಾನಂತರದಲ್ಲಿ ಮೂರು ಮುಹೂರ್ತಕಾಲದ ವರೆಗೂ ಇರುವ ಪೌರ್ಣಮಿಯನ್ನು ಗ್ರಹಿಸಬೇಕು. ಮೂರನೆಯ ಮುಹೂರ್ತಕ್ಕೆ ಪೌರ್ಣಮಿಯ ವ್ಯಾಪ್ತಿಯಿಲ್ಲದಿದ್ದರೆ ಅಂತಹ ಪೌರ್ಣಮಿಯನ್ನು ಬಿಟ್ಟು ಚತುರ್ದಶೀಯುಕ್ತವಾದದ್ದನ್ನು ಗ್ರಹಿಸಬೇಕು. ಇಂತು ಪಂಚದಶೀ ನಿರ್ಣಯೋದ್ದೇಶವು ॥೨೧॥

(೩೨) ಇಷ್ಟಿಕಾಲವು.

(೩೨) ಇಷ್ಟಿ (ಯಜ್ಞ) ಕಾಲವು-ಪಕ್ಷಗಳಕೊನೆಗಳಾದ ಪೌರ್ಣಮಾ, ಮತ್ತು ಅಮಾವಾಸ್ಯೆಗಳಲ್ಲಿ ಉಪವಾಸ (ಅನ್ವಾಧಾನ) ವನ್ನೂ ಪಕ್ಷಗಳಿಗೆ ಆದಿಗಳಾದ ಶುಕ್ಲ ಕೃಷ್ಣ ಪ್ರತಿಪತ್ತುಗಳಲ್ಲಿ ಯಜ್ಞವನ್ನೂ ಮಾಡಬೇಕು.

> ಪರ್ವಣೋಯಶ್ಚತುರ್ಥಾಂಶ ಆದ್ಯಾಃ ಪ್ರತಿಪದಸ್ತ್ರಯಃ ।
> ಯಾಗಕಾಲಸ್ಸವಿಜ್ಞೇಯಃ ಪ್ರಾತರುಕ್ತೋ ಮನೀಷಿಭಿಃ ॥೧॥
> ಪ್ರತಿಪತ್ತುರ್ಯಚರಣೋ ನಯಷ್ಟವ್ಯಮಿತಿಸ್ಥಿತಿಃ ॥

ಅಂದರೆ-ಪರ್ವಕಾಲದ ಕೊನೆಯ ನಾಲ್ಕನೇ ಒಂದುಭಾಗದ ಕಾಲದಲ್ಲಾಗಲಿ, ಪ್ರತಿಪತ್ತುಗಳ ಮೊದಲಿನ ಮೂರುಭಾಗದ ಕಾಲದಲ್ಲಾಗಲಿ, ಪ್ರಾತಃಕಾಲದಲ್ಲಿಯಜ್ಞವನ್ನು ಮಾಡಬೇಕೆಂದು ಪ್ರಾಜ್ಞರು ಹೇಳುವರು ॥೧॥ ಪ್ರತಿಪತ್ತಿನ ಕೊನೆಯಪಾದ (ನಾಲ್ಕನೇ ಒಂದುಭಾಗದಕಾಲ) ದಲ್ಲಿ ಯಾಗವನ್ನು ಮಾಡಕೂಡದು. ಎಂದು ತಾತ್ಪರ್ಯವು. ಪರ್ವವೂ (ಪೌರ್ಣಮೀ, ಅಮಾವಾಸ್ಯೆ) ಪ್ರತಿಪತ್ತೂ ; ಪೂರ್ಣತಿಥಿಗಳಾಗಿದ್ದರೆ, ಪರ್ವದಲ್ಲಿ ಅನ್ವಾಧಾನಕ್ಕೆ ಸರಿಯಾದ ಕಾಲವೂ (ಉಕ್ತಕಾಲ) ಪ್ರತಿಪತ್ತಿನಲ್ಲಿ ಯಾಗಕ್ಕೆ

ಕ್ಲ್ಲಪ್ತವಾದ ಕಾಲವೂ ಅನುಕೂಲವಾಗಿ ಸಿಕ್ಕುವುದಾದ್ದರಿಂದ ಆ ಸಂದರ್ಭದಲ್ಲಿ ಯಾವ ಅನುಮಾನವೂ, ಇಲ್ಲ. ಪರ್ವವು ಖಂಡತಿಥಿಯಾಗಿದ್ದರೆ ಪರ್ವಕ್ಕಿಂತಲೂ ಪ್ರತಿಪತ್ತಿನಲ್ಲಿ, ಹೆಚ್ಚು ಅಥವಾ ಕಡಮೆ (ಕ್ಷಯ, ವೃದ್ಧಿ) ಯಾಗಿರುವ ಘಳಿಗೆಗಳನ್ನು ಗೊತ್ತುಮಾಡಿ, ಅದನ್ನು ಎರಡುಸಮಭಾಗಮಾಡಿ, ಪ್ರತಿಪತ್ತು ಕಡಮೆಯಾಗಿದ್ದರೆ ಪರ್ವದ ಗಳಿಗೆಗಳಲ್ಲಿ ಕಡಮೆಮಾಡಬೇಕು. ಪರ್ವಕ್ಕಿಂತಲೂ ಹೆಚ್ಚಾಗಿದ್ದರೆ ಪರ್ವಗಳಿಗೆ ಸೇರಿಸಬೇಕು. ಹೀಗೆಮಾಡಿ ಪರ್ವಕ್ಕೂ, ಪ್ರತಿಪತ್ತಿಗೂ ಇರುವ ಸಂಧಿ ಮಧ್ಯಕಾಲವನ್ನು ನಿರ್ಣಯಿಸಬೇಕು. ಕ್ಷಯ ವೃದ್ಧಿಗಳಿಲ್ಲದ ಸಂದರ್ಭದಲ್ಲಿ ಇದ್ದಹಾಗೆಯೇ ಇರುವುದರಿಂದ ಸಂಧಿಕಾಲವು ಸ್ಪಷ್ಟವಾಗಿ ಗೊತ್ತೇ ಇರುವುದು.

—ಪರ್ವಪ್ರತಿಪತ್ತುಗಳ ಸಂಧಿ ನಿರ್ಣಯವು—

ಪರ್ವಪ್ರತಿಪತ್ತುಗಳ ಸಂಧಿಯು ಪೂರ್ವಾಹ್ಣಸಂಧಿ, ಮಧ್ಯಾಹ್ನ ಸಂಧಿ, ಅಪರಾಹ್ಣಸಂಧಿ, ರಾತ್ರಿಸಂಧಿ, ಎಂದು ಸಂಧಿಯು ನಾಲ್ಕುಬಗೆಯಾಗಿದೆ. ಅಹಃ ಪ್ರಮಾಣದ ಕಾಲವನ್ನು ಎರಡು ಸಮಭಾಗಮಾಡಿದರೆ ಮೊದಲಿನ ಅರ್ಧಭಾಗಕ್ಕೆ ಪೂರ್ವಾಹ್ಣವೆಂತಲೂ, ಎರಡನೆಯ ಅರ್ಧಕ್ಕೆ ಅಪರಾಹ್ಣವೆಂತಲೂ ಹೆಸರು. ಪೂರ್ವಾಹ್ಣ ಮತ್ತು ಅಪರಾಹ್ಣಗಳ ಮಧ್ಯಕಾಲವಾದ (ಸಂಧಿ) ಎರಡುಗಳಿಗೆಗಳುಳ್ಳ ಮುಹೂರ್ತವೇ ಮಧ್ಯಾಹ್ನವು. ಕೌಸ್ತುಭಕಾರನು ಆವರ್ತನವೆಂಬ ಮತ್ತೊಂದು ಹೆಸರು ಈ ಮಧ್ಯಾಹ್ನಕ್ಕೆ ಉಂಟೆಂದು ಹೇಳಿರುವನು, ಪರ್ವಪ್ರತಿಪತ್ತುಗಳ ಸಂಧಿಯಾದ ಒಂದು ಪಲ (ವಿಘಳಿಗೆ) ಪ್ರಮಾಣಕಾಲವು ಮಾತ್ರವೇ ಮಧ್ಯಾಹ್ನವೆಂತಲೂ, ಎರಡುಗಳಿಗೆಗಳ ಕಾಲವಲ್ಲವೆಂತಲೂ, ಪ್ರಾಯಶಃ ಈಗಿನ ಶಿಷ್ಟಾಚಾರವಿರುವುದು. ಹಿಂದೆ ಹೇಳಿದಂತೆ ಕ್ಷಯ, ವೃದ್ಧಿ ಇವುಗಳ ಕಾಲಪ್ರಮಾಣದ ಅರ್ಧವನ್ನು ಕಳೆಯುವುದು, ಮತ್ತು ಕೂಡುವುದು, ಇವುಗಳಿಂದ ನಿರ್ಣಯಿಸಿದ ಪರ್ವಪ್ರತಿಪತ್ತುಗಳ ಸಂಧಿಯು ಪೂರ್ವಾಹ್ಣ ಅಥವಾ ಮಧ್ಯಾಹ್ನದಲ್ಲಾದರೆ ಸಂಧಿಯುಳ್ಳ ದಿನದ ಪೂರ್ವದಿನದಲ್ಲಿ ಅನ್ವಾಧಾನವನ್ನೂ, ಸಂಧಿದಿನದಲ್ಲಿ ಯಾಗವನ್ನೂ ಮಾಡಬೇಕು. ಅಪರಾಹ್ಣದಲ್ಲಿಯಾಗಲಿ, ರಾತ್ರಿಯಲ್ಲಾಗಲಿ ಸಂಧಿಯುಂಟಾದರೆ ಸಂಧಿದಿನದಲ್ಲಿ ಅನ್ವಾಧಾನವನ್ನೂ, ಎರಡನೆ

ಯ (ಪರ) ದಿನದಲ್ಲಿ ಯಜ್ಞವನ್ನೂ ನಡೆಯಿಸಬೇಕು.ಉದಾಹರಣೆ-ಪರ್ವವು ೧೭ ಘಳಿಗೆಯೂ, ಪ್ರತಿ ಪತ್ತು ೧೧ ಘಳಿಗೆಯೂ ಇದ್ದರೆ ಪ್ರತಿಪತ್ತಿಗೆ ೬ಘಳಿಗೆ ಕ್ಷಯವಾಗುವುದು. ಅದರ ಅರ್ಧಭಾಗಕ್ಕೆ ೩ ಗಳಿಗೆಯಾಯ್ತು. ಪರ್ವಕಾಲ ಪ್ರಮಾಣವಾದ ೧೭ ಘಳಿಗೆಯಲ್ಲಿ ಆ ಮೂರುಗಳಿಗೆಯನ್ನು ಕಳೆದರೆ ಬರುವ ೧೪ ಗಳಿಗೆಗೆ ಸರಿಯಾದ ಕಾಲವೇ ಸಂಧಿಕಾಲವೆನಿಸುವುದು. ಈ ಸಂಧಿಯು ೩೦ಗಳಿಗೆಗಳ ಅಹಃ ಪ್ರಮಾಣವಿರುವ ದಿನದಲ್ಲಾದರೆ ಪೂರ್ವಾಹ್ಣ ಸಂಧಿಯಾಗುವುದು. ೨೮ ಘಳಿಗೆ ಅಹಃ ಪ್ರಮಾಣವುಳ್ಳ ದಿನದಲ್ಲಾದರೆ ಮಧ್ಯಾಹ್ನ ಸಂಧಿಯೆನಿಸುವುದು. ಈ ಸಂದರ್ಭದಲ್ಲಿ ಸಂಧಿ ದಿನದಲ್ಲಿ ಯಾಗವೂ, ಪೂರ್ವದಿನದಲ್ಲಿ ಅನ್ವಾಧಾನವೂ ನಡೆಯಬೇಕು.ಪರ್ವವು ೧೪ ಘಳಿಗೆ,ಪ್ರತಿಪತ್ತು ೧೯ ಘಳಿಗೆ ಇದ್ದರೆ ೫ ಘಳಿಗೆಗಳು ವೃದ್ಧಿಯೆನಿಸುವುದು. ಅದರ ಅರ್ಧವಾದ ೨॥ ಘಳಿಗೆಯನ್ನು ಪರ್ವಪ್ರಮಾಣಕ್ಕೆ ಸೇರಿಸುವುದರಿಂದಾಗುವ ೧೬॥ ಘಳಿಗೆಯ ಕಾಲವೇ ಸಂಧಿಯಾಗುವುದು.ಇದು ಅಪರಾಹ್ಣಸಂಧಿಯಾದ್ದರಿಂದ ಸಂಧಿದಿನದಲ್ಲಿ ಅನ್ವಾಧಾನವೂ, ಪರದಿನದಲ್ಲಿ ಯಾಗವೂ ನಡೆಯಬೇಕೆಂದು ತಿಳಿಯತಕ್ಕದ್ದು.

—ಬೇರೊಂದು ಬಗೆಯಾದ ಸಂಧಿನಿರ್ಣಯವು—

ಬಾಲಕರಿಗೂ ತಿಳವಳಿಕೆ ಯುಂಟಾಗುವಂತೆ ಮತ್ತೊಂದು ಬಗೆಯಿಂದ ಸಂಧಿಯನ್ನು ಸೂಚಿಸುತ್ತಾನೆ:-ಸೂರ್ಯೋದಯಾನಂತರದಲ್ಲಿರುವ ಪರ್ವದ ಗಳಿಗೆಗಳನ್ನೂ ಪ್ರತಿಪತ್ತಿನ ಗಳಿಗೆಗಳನ್ನೂ ಕೂಡಿಸಬೇಕು. ಆ ಮೊತ್ತವು ಅಹಃಪ್ರಮಾಣದ ಗಳಿಗೆಗಳಿಗಿಂತಲೂ ಕಡಮೆಯಾದರೆ ಪೂರ್ವಾಹ್ಣ ಸಂಧಿ ಎಂತಲೂ, ಅಹಃಪ್ರಮಾಣದ ಗಳಿಗೆಗಳಷ್ಟೇ ಇದ್ದರೆ ಮಧ್ಯಾಹ್ನ ಸಂಧಿ ಎಂತಲೂ,ಅಹಃಪ್ರಮಾಣ ಸಂಖ್ಯೆಗೆ ಮೀರಿದರೆ ಅಪರಾಹ್ಣಸಂಧಿ,ಎಂತಲೂ ತಿಳಿಯಬೇಕು. ಹೀಗೆ ಸೂರ್ಯೋದಯಾನಂತರದಲ್ಲಿರುವ ಪರ್ವ ಮತ್ತು ಪ್ರತಿಪತ್ತುಗಳ ಕ್ಷಯವೃದ್ಧಿಗಳಿಂದಲೇ ಸಂಧಿಯನ್ನು ನಿಷ್ಕರ್ಷಿಸತಕ್ಕದ್ದು ಎಲ್ಲಾಸ್ಥಳಗಳಲ್ಲಿಯೂ ಈಗ ಶಿಷ್ಟಾಚಾರವಾಗಿದೆ.

—ಕೌಸ್ತುಭಾದಿಗಳ ಅಭಿಪ್ರಾಯವು—

ಕೌಸ್ತುಭಾದಿವಚನಗಳಲ್ಲಿ ಹೇಳಿರುವ ಕ್ರಮವು- ಪರ್ವತಿಥಿ

ಯಲ್ಲಿ, ಸೂರ್ಯೋದಯಾತ್ಪೂರ್ವವಾಗಿ ಚತುರ್ದಶೀ ದಿನಕ್ಕೆ ಸೇರಿ ಕಳೆದುಹೋಗಿರುವ ಗಳಿಗೆಗಳನ್ನೂ, ಸೂರ್ಯೋದಯಾನಂತರ ಉಳಿದು ಇರುವ ಪರ್ವದ ಗಳಿಗೆಗಳನ್ನೂ ಕೂಡಿಸಬೇಕು. ಹೀಗೆಯೇ ಪ್ರತಿಪತ್ತಿಥಿಯಲ್ಲಿ ಹಿಂದಣ ದಿವಸದಿಂದ ಕಳೆದುಹೋಗಿರುವ ಗಳಿಗೆಗಳನ್ನೂ,ಮುಂದೆ ಉಳಿದು ಇರುವ ಗಳಿಗೆಗಳನ್ನೂ ಕೂಡಿಸಬೇಕು. ಈ ಎರಡು ಮೊತ್ತಗಳ ವ್ಯತ್ಯಾಸದಿಂದ ಪರ್ವಕ್ಕಿಂತ ಪ್ರತಿಪತ್ತಿಗೆ ಇರುವ ವೃದ್ಧಿಯನ್ನೂ ಕ್ಷಯವನ್ನೂ ತಿಳಿಯಬೇಕು. ಹೇಗೆಂದರೆ—ಚತುರ್ದಶಿ ೨೨ ಪರ್ವ ೧೭ ಚತುರ್ದಶೀದಿನದಲ್ಲಿ ಕಳೆದುಹೋದ ಪರ್ವದ ಗಳಿಗೆಗಳು ೩೮ ಎರಡನೆಯ ದಿನದಲ್ಲಿರುವ ಪರ್ವದ ಗಳಿಗೆಗಳು ೧೭ ಎರಡರ ಬಟ್ಟು (೩೮ + ೧೭) ೫೫ ; ಪರ್ವದಿನದಲ್ಲಿ ಕಳೆದುಹೋದ ಪ್ರತಿಪತ್ತಿನ ಗಳಿಗೆಗಳು ೪೩ ಪರ್ವದಿನದಲ್ಲಿ ಉಳಿದಿರುವ ಪ್ರತಿಪತ್ತಿನ ಗಳಿಗೆಗಳು ೧೧ ಎರಡರ ಬಟ್ಟು ೫೪, ಆದ್ದರಿಂದ ಪ್ರತಿಪತ್ತಿನ ಕ್ಷಯವು ೧ ಘಳಿಗೆ ಅದರ ಅರ್ಧವಾದ ॥ ಗಳಿಗೆಯನ್ನು ಪರ್ವದ ಗಳಿಗೆಗಳಲ್ಲಿ ಕಳೆವುದರಿಂದಾಗುವ ಸಂಧಿಕಾಲವು ೧೬॥ ಘಳಿಗೆಗಳು. ಇದು ಅಪರಾಹ್ಣಸಂಧಿಯು. ಮೊದಲು ಹೇಳಿರುವ ರೀತಿಯಲ್ಲಿ ಇದು ಪೂರ್ವಾಹ್ಣಸಂಧಿಯೆನ್ನಿಸುವುದು. ಹಾಗೆಯೇ ಚತುರ್ದಶಿ ೨೪ ಪರ್ವ ೧೭ ಪೂರ್ವದಿನದಲ್ಲಿ ಕಳೆದು ಹೋಗಿರುವ ಪರ್ವದ ಗಳಿಗೆಗಳಾದ ೩೬ ನ್ನು ಕೂಡಿಸುವುದರಿಂದ ೫೩ ಘಳಿಗೆ ಯಾಗುವುದು.ಪ್ರತಿಪತ್ತು ೧೧ ಹಿಂದಣದಿವಸದಲ್ಲಿ ಕಳೆದು ಹೋಗಿರುವುದು ೪೩ ಬಟ್ಟು ೫೪, ಇಲ್ಲಿ ಮೊದಲು ಹೇಳಿರುವ ಕ್ಷಯೋದಾಹರಣೆಯ ಹಾಗೆಯೇ ೧ ಘಳಿಗೆ ವೃದ್ಧಿ ಬಂತು. ಅದರ ಅರ್ಧವನ್ನು ಪರ್ವಪ್ರಮಾಣಕ್ಕೆ ಸೇರಿಸುವುದರಿಂದ ಆಗುವ ೧೭॥ ಘಳಿಗೆಯೇ ಸಂಧಿಯಾಗುವುದು, ಇದು ಅಪರಾಹ್ಣಸಂಧಿ, ವೃದ್ಧಿ ಕ್ಷಯಾದಿ ಸಕಲ ವಿಷಯಗಳಲ್ಲಿಯೂ ಪೂರ್ವದಲ್ಲಿ ಹೇಳಿರುವ ರೀತಿಗೂ, ಈ ರೀತಿಗೂ ವ್ಯತ್ಯಾಸವು ತೋರುವುದರಿಂದ ಪೂರ್ವಮತಕ್ಕೂ, ಈ ಮತಕ್ಕೂ ಸಂಪೂರ್ಣವಿರೋಧವುಂಟಾಗಿದೆ. ಈ ಕೌಸ್ತುಭಮತರೀತ್ಯಾ ಎರಡು ಗಳಿಗೆಗಳಿಗಿಂತಲೂ ಹೆಚ್ಚಾಗಿ ವೃದ್ಧಿಯಾಗಲಿ, ಕ್ಷಯವಾಗಲಿ ಉಂಟಾಗಲಾರದಾದ ಕಾರಣ "ಪರೇಹ್ನಿ ಘಟಿಕಾನ್ಯೂನಾಸ್ತಥೈವಾಭ್ಯಧಿಕಾಶ್ಚಯಾಃ" ಅಂದರೆ ಪರದಿನದಲ್ಲಿ ಕಡಿಮೆ

ಯಾಗುವ (ಎರಡಕ್ಕಿಂತ ಹೆಚ್ಚಾದ) ಗಳಿಗೆಗಳೂ,ಅಥವಾ ಹೆಚ್ಚಾಗುವ ಗಳಿಗೆಗಳೂ, ಎಂದು ಬಹುವಚನವನ್ನು ಹೇಳಿರುವುದು ಅಸಂಗತವಾದದ್ದೆಂದು 'ಪುರುಷಾರ್ಥ ಚಿಂತಾಮಣಿ, ಎಂಬ ಗ್ರಂಥವು ದೂಷಿಸುವುದೆಂದು ತಿಳಿಯಬೇಕು.

—ಯಾಗಕಾಲ ವಿಶೇಷವು.—

ಪೌರ್ಣಮಾಸ್ಯೆಯಲ್ಲಿ ವಿಶೇಷವೇನೆಂದರೆ-ಸಙ್ಗವಕಾಲಾನಂತರದಲ್ಲಿ ೧೩ ನೇ ಘಳಿಗೆ ಮೊದಲು ಮಾಡಿಕೊಂಡು ಮಧ್ಯಾಹ್ನ ದೊಳಗಾಗಿ ಸಂಧಿಯುಂಟಾದರೆ (ಪೌರ್ಣಮಿ ಪ್ರತಿಪತ್ತುಗಳಿಗೆ) ಆ ಪೌರ್ಣಮಿಯು ಸದ್ಯಸ್ಕಾಲವೆನಿಸುವುದು ಈ ಪೂರ್ಣಿಮೆಯಲ್ಲಿ ಸಂಧಿ ದಿನದಲ್ಲಿಯೇ ಅನ್ವಾಧಾನವನ್ನೂ, ಯಾಗವನ್ನೂ,ಸಹ ಮಾಡಬಹುದು. ಪೌರ್ಣಮಾಸ್ಯೆಯಲ್ಲಿ ಈ ಸದ್ಯಸ್ಕಾಲತ್ವವು ವಿಕಲ್ಪವಾದದ್ದೆಂದು ಕೆಲವರು ಹೇಳುವರು. ಅಮಾವಾಸ್ಯೆಯಲ್ಲಿ ಯಾವಾಗಲೂ,ದ್ವ್ಯಹಕಾಲ(ಎರಡುದಿನಗಳ ಗಣನೆಯ ಮೂಲಕ ನಿರ್ಣಯಿಸುವುದು) ತ್ವವಲ್ಲದೆ ಸದ್ಯಸ್ಕಾಲತ್ವವು ಎಲ್ಲಿಯೂ ಇಲ್ಲ. ಪೂರ್ಣಿಮೆಯಲ್ಲಾಗಲಿ ಅಮಾವಾಸ್ಯೆಯಲ್ಲಾಗಲಿ ಅಪರಾಹ್ಣ ಸಂಧಿಯುಂಟಾದರೆ ಪ್ರತಿಪತ್ತಿನ ನಾಲ್ಕನೆಯ ಪಾದದಲ್ಲಿ (ಕೊನೆಯ ನಾಲ್ಕನೇ ಒಂದು ಭಾಗದ ಕಾಲ) ಯಾಗಮಾಡುವುದು ದೋಷಾವಹವಾದದ್ದಲ್ಲ. ಅಮಾವಾಸ್ಯೆಯಲ್ಲಿ ಅಪರಾಹ್ಣ ಸಂಧಿಯಾದಾಗ್ಯೂ, ಪ್ರತಿಪತ್ತಿಗೆ ಮೂರು ಮುಹೂರ್ತಕ್ಕಿಂತ ಹೆಚ್ಚಾದ ಕಾಲದ ಯೋಗವಿದ್ದರೆ ಚಂದ್ರ ದರ್ಶನಕ್ಕೆ ಅವಕಾಶ ವಿರುವುದರಿಂದಲೂ, ಚಂದ್ರದರ್ಶನವಾಗುವ (ಚಂದ್ರನು ಕಾಣಬರುವ) ದಿನಗಳಲ್ಲಿ ಯಾಗ ಮಾಡಕೂಡದೆಂಬ ವಿಧಿಯಿರುವುದರಿಂದಲೂ ಬೌಧಾಯನಾದಿಗಳಿಗೆ (ಬೋಧಾಯನ ಸೂತ್ರವುಳ್ಳವರು) ಅಮಾವಾಸ್ಯೆಯಲ್ಲಿಯೇ ಯಾಗವು ನಡೆಯಬೇಕು ಅನ್ವಾಧಾನವು ಚತುರ್ದಶಿಯಲ್ಲಿ ಆಗಬೇಕಾಗುವುದು. ಅಮಾವಾಸ್ಯೆಯಲ್ಲಿ ಏಳು ಘಳಿಗೆಗಳ ಕಾಲವುಳ್ಳ ಪ್ರತಿಪತ್ತು ಇಲ್ಲದೆ ಹೋದರೆ ಚಂದ್ರದರ್ಶನವಾಗುವುದಾಗಿದ್ದರೂ, ಬೌಧಾಯನರು ಪ್ರತಿಪತ್ತಿನಲ್ಲಿಯೇ ಯಜ್ಞವನ್ನು ಮಾಡಬೇಕು.ಆಶ್ವಲಾಯನ ಮತ್ತು ಆಪಸ್ತಂಬಾದಿಗಳಿಗೆ ಚಂದ್ರ ದರ್ಶನವಾಗಕೂಡದೆಂಬ ನಿಷೇಧವು ಇಲ್ಲದ್ದರಿಂದ ಅವರು ಪ್ರ

ತಿಪತ್ತಿನಲ್ಲಿಯೇ ಯಾಗಮಾಡಬೇಕು. ಸಂಧಿ ದಿನದಲ್ಲಿ ಮಾಡಬೇಕಾಗಿ ಬರುವ ಯಜ್ಞವನ್ನು ಪ್ರತಿ ಪತ್ತಿನಲ್ಲಿಯೇ ಮುಗಿಸಬೇಕಲ್ಲದೆ ಪರ್ವ್ವದಲ್ಲಿ ಪೂರಯಿಸ ಕೂಡದು. ಪರ್ವ್ವದಲ್ಲಿಯಾಗವು ಮುಗಿದರೆ ಪುನಃ ಯಾಗ ಮಾಡಬೇಕಾಗಿಬರುವುದು ಹೀಗೆಯೇ ಸ್ಮಾರ್ತ್ತ ಕರ್ಮಕ್ಕಾಗಿ ಪರ್ವ್ವದಲ್ಲಿ ಮಾಡಬೇಕಾದ ಸ್ಥಾಲೀಪಾಕಕ್ಕೂ ನಿರ್ಣಯವು,

—ಸ್ಥಾಲೀಪಾಕ ಕಾಲವು—

ಆದರೆ ಕೆಲವರು "ಸ್ಮಾರ್ತ್ತ ಕರ್ಮಕ್ಕಾಗಿ ಮಾಡುವ ಸ್ಥಾಲೀಪಾಕವನ್ನು ಪ್ರತಿಪತ್ತಿನಲ್ಲಿಯೇ ಮುಗಿಸಬೇಕೆಂಬ ನಿಯಮವಿಲ್ಲ. ಪೂರ್ವಾಹ್ಣದಲ್ಲಿಯೇ ಸ್ಥಾಲೀಪಾಕವನ್ನು ಪೂರಯಿಸಿ, ಸಂಧಿಯ ಅನಂತರದಲ್ಲಿ, ಪ್ರತಿಪತ್ತಿನಲ್ಲಿ ಬ್ರಾಹ್ಮಣ ಭೋಜನವನ್ನು ಮಾತ್ರವೇ ಮಾಡಿಸಬೇಕು. ಜಯಂತನೂ ಕೂಡ ಸಂಧಿಗೆ ಸಮೀಪವಾಗಿರುವ ಪ್ರಾತಃಕಾಲದಲ್ಲಿಯೇ ಸ್ಥಾಲೀಪಾಕ ಮಾಡಬಹುದೆಂದು ಹೇಳಿದ್ದಾನೆ" ಎಂಬ ವಿಶೇಷವನ್ನು ಹೇಳುವರು. ಶ್ರೌತಕರ್ಮದಲ್ಲಿಯೂ ಸಹ "ಬ್ರಾಹ್ಮಣ ಭೋಜನವನ್ನು ಮಾತ್ರ ಪ್ರತಿಪತ್ತಿನಲ್ಲಿ ಮಾಡಿಸಬೇಕು. ಉಳಿದ ತಂತ್ರ (ಪ್ರಯೋಗ) ವನ್ನೆಲ್ಲಾ ಪೂರ್ವಾಹ್ಣದಲ್ಲಿಯೇ ಮುಗಿಸಬೇಕು. ಪ್ರತಿಪತ್ತನ್ನು ಅಪೇಕ್ಷಿಸಬೇಕಾದ್ದಿಲ್ಲ"ಎಂದು'ಪುರುಷಾರ್ಥ ಚಿಂತಾಮಣಿಯಲ್ಲಿ' ಹೇಳಿಇದೆ.ಕಾತ್ಯಾಯನರುಗಳಿಗೆ ಪೌರ್ಣಮಾಸ್ಯೇಷ್ಟಿಯಲ್ಲಿ ಹಿಂದೆ ಹೇಳಿರುವಂತೆ ಸಾಮಾನ್ಯ ನಿಯಮವಿಲ್ಲದೆ ವಿಶೇಷವೇನೂ ಇಲ್ಲವೆಂಬುದು ಧರ್ಮಸಿಂಧು ಮೊದಲಾದ ಅನೇಕಗ್ರಂಥಗಳಿಂದ ಅಂಗೀಕೃತವಾಗಿದೆ. ಇತರರಾದ ಕೆಲವರು ಪೂರ್ವಾಹ್ಣ ಸಂಧಿಯಾದರೆ ಸಂಧಿದಿನದಲ್ಲಿ ಕಾತ್ಯಾಯನರು (ಕಾತೀಯರು) ಅನ್ವಾಧಾನವನ್ನೂ, ಪರದಿನದಲ್ಲಿ ಯಾಗವನ್ನೂ ಮಾಡಬೇಕೆಂದು ಕಾತೀಯರಿಗೆ ವಿಶೇಷವನ್ನು ಹೇಳಿರುವರು ॥

(೩೩) ಅಮಾವಾಸ್ಯೆಯಲ್ಲಿ ಕಾತೀಯರಿಗೆ ಹೇಳಿರುವ ವಿಶೇಷವು.

(೩೩) ಅಮಾವಾಸ್ಯೆಯ ವಿಷಯದಲ್ಲಿ ಅಹಃ ಪ್ರಮಾಣದ ಗಳಿಗೆಗಳನ್ನು ಮೂರು ಸಮಭಾಗ ಮಾಡಿದರೆ ಮೊದಲನೆಯ ಭಾಗವು ಪೂರ್ವಾಹ್ಣವು. ಎರಡನೆಯದೇ ಮಧ್ಯಾಹ್ನವಾಗುವುದು. ಮೂರನೆಯ ಭಾಗಕ್ಕೆ ಅಪರಾಹ್ಣವೆಂಬ ಹೆಸರು. ಆದರಲ್ಲಿ ರಾತ್ರಿ ಸಂಧಿಯಾದರೆ ಪ್ರತಿಪತ್ತಿ

ನಲ್ಲಿ ಚಂದ್ರದರ್ಶನವಾದಾಗ್ಯೂ, ಕಾತ್ಯಾಯನರಿಗೂ ಸಹ ಇತರರಂತೆಯೇ ಸಂಧಿದಿನದಲ್ಲಿಯೇ ಪಿಣ್ಡಪಿತೃಯಜ್ಞವೂ ಅನ್ವಾಧಾನವೂ ಪರದಿನದಲ್ಲಿಯೇ ಯಾಗವೂ ನಡೆಯ ಬೇಕೆಂಬ ವಿಷಯದಲ್ಲಿ ಯಾವವಿವಾದವೂ ಇಲ್ಲ. ಪೂರ್ವಾಹ್ಣದಲ್ಲಿಯಾಗಲಿ ಹಗಲಿನ ಎರಡನೆಯ ಭಾಗವೆನಿಸುವ ಮಧ್ಯಾಹ್ನದಲ್ಲಿ ಯಾಗಲಿ ಸಂಧಿಯಾದರೆ ಪೂರ್ವದಿನದಲ್ಲಿ ಅನ್ವಾಧಾನಪಿಂಡ ಪಿತೃಯಜ್ಞಗಳು ಸಂಧಿ ದಿನದಲ್ಲಿಯೇ ಯಾಗವೂ ನಡೆಯಬೇಕು. ಚತುರ್ದಶಿಯಲ್ಲಿ ಅಮಾವಾಸ್ಯೆಯ, ದಿನದ ಮೂರನೆಯ ಭಾಗವೆಂಬ ಅಪರಾಹ್ಣವು ಇರುವುದರಿಂದ ಪೂರ್ಣವ್ಯಾಪ್ತಿಯುಂಟಾಗಿದ್ದರೆ ಅಮಾವಾಸ್ಯಾಯುಕ್ತವಾಗಿರುವ ಅಪರಾಹ್ಣದಲ್ಲಿಯೇ ಪಿಂಡ ಪಿತೃಯಜ್ಞವನ್ನು ಮಾಡಬೇಕೆಂಬ ವಿಷಯದಲ್ಲಿ ಯಾವ ಅನುಮಾನವೂ ಇಲ್ಲ. ಮೂರನೆಯ ಭಾಗವಾದ ಅಪರಾಹ್ಣದ ಕೊನೆಯಲ್ಲಿ ಅಪರಾಹ್ಣದ ಒಂದು ಭಾಗಕ್ಕೆ ಅಮಾವಾಸ್ಯಾ ವ್ಯಾಪ್ತಿ ಇದ್ದರೆ, ಅಮಾವಾಸ್ಯೆಯು ಅಪರಾಹ್ಣದಲ್ಲಿದ್ದಾಗ್ಯೂ ಅಂತಹ ಚತುರ್ದಶಿಯಲ್ಲಿ ಪಿಂಡ ಪಿತೃಯಜ್ಞವನ್ನು ಮಾಡಕೂಡದೆಂಬುವುದೊಂದು ಪಕ್ಷವು. ಚಂದ್ರನು ಬಹಳ ಕ್ಷೀಣನಾಗಿರುವುದರಿಂದ ಚತುರ್ದಶಿಯ ಕೊನೆಯಭಾಗದಲ್ಲಿ ಪಿಂಡಪಿತೃಯಜ್ಞವನ್ನು ಮಾಡಬಹುದೆಂಬುದು ಮತ್ತೊಂದು ಪಕ್ಷವು, ಅಪರಾಹ್ಣಸಂಧಿಯಲ್ಲಿ ನಾಲ್ಕುಪಕ್ಷಗಳು (ಮತ) ಇವೆ. ಸಂಧಿದಿನದಲ್ಲಿಯೇ ದಿನದ ಮೂರನೆಯ ಭಾಗವೆಂಬ ಅಪರಾಹ್ಣಕ್ಕೆ ಸಂಪೂರ್ಣವಾಗಿ ಅಮಾವಾಸ್ಯೆಯ ವ್ಯಾಪ್ತಿಯಿರುವುದೆಂಬುದು ಮೊದಲನೆಯ ಪಕ್ಷವು ಹೇಗೆಂದರೆ-ಚತುರ್ದಶೀ ೨೯ ಅಮಾವಾಸ್ಯೆ ೬೦. ಪ್ರತಿಪತ್ತು ೨೯. ಅಹಃಪ್ರಮಾಣ ೬೦ ಹೀಗಿದ್ದರೆ ಸಂಧಿದಿನದಲ್ಲಿ ಅನ್ವಾಧಾನವೂ, ಪಿಣ್ಡಪಿತೃಯಜ್ಞವೂ, ಪರದಿನದಲ್ಲಿ ಯಾಗವೂ ನಡೆಯಬೇಕು.॥ ಸಂಧಿದಿನದ ಹಿಂದಣ ದಿವಸದಲ್ಲಿಯೇ ಅಪರಾಹ್ಣಕ್ಕೆ ಅಮಾವಾಸ್ಯೆಯ ಪೂರ್ಣವ್ಯಾಪ್ತಿಯಿರುವುದೆಂಬುದು ಎರಡನೆಯ ಪಕ್ಷವು ಉದಾಹರಣೆ—ಚತುರ್ದಶಿ ೨೦ ಅಮಾವಾಸ್ಯೆ ೨೨, ಪ್ರತಿಪತ್ ೨೪ ಅಹಃ ೬೦ ಹೀಗಿರುವಾಗ ಸಂಧಿಯ ಮೂರನೆಯ ದಿನದಲ್ಲಿ ಮೂರುಮುಹೂರ್ತವೆಂಬ ಪ್ರಾತಃಕಾಲದಲ್ಲಿಯೇ ಪ್ರತಿಪತ್ತಿನ ಮೂರುಪಾದದಷ್ಟು ಕಾಲವು ಯಾಗಕ್ಕೆ ಅನುಕೂಲವಾಗಿ ಸಿಕ್ಕುವುದರಿಂದ

ಸಂಧಿದಿನದಲ್ಲಿ ಅನ್ವಾಧಾನ, ಪಿತೃಯಜ್ಞಗಳೂ, ಎರಡನೆಯದಿನದಲ್ಲಿ ಯಾಗವೂ ನಡೆಯಬೇಕೆಂಬುದು ಕೌಸ್ತುಭಮತವು.

ತ್ರಿಮುಹೂರ್ತಾ ದ್ವಿತೀಯಾ ಚೇ ತ್ಪ್ರತಿಪ ಚ್ಚಾಪರಾಹ್ಣಿಕೀ ।
ಅನ್ವಾಧಾನಂ ಚತುರ್ದಶ್ಯಾಂ ಪರತ ಸ್ಸೋಮದರ್ಶನಾತ್ ॥೧॥

ಅಂದರೆ ದ್ವಿತೀಯೆಯು ಮೂರು ಮುಹೂರ್ತಗಳಕಾಲವಿದ್ದು ಅಪರಾಹ್ಣದಲ್ಲಿ ಪ್ರತಿಪತ್ತು ಇದ್ದರೆ, ಚತುರ್ದಶಿಯಲ್ಲಿಯೇ ಅನ್ವಾಧಾನವಾಗಬೇಕು. ಹಾಗಿಲ್ಲದಿದ್ದರೆ ಪ್ರತಿಪತ್ತಿನ ದಿನದಲ್ಲಿ ಚಂದ್ರದರ್ಶನವಾಗುವುದರಿಂದ ಯಾಗಕ್ಕೆ ಸರಿಯಾದಕಾಲವು ಸಿಕ್ಕದೆ ಹೋಗುವುದು ಎಂದು ತಾತ್ಪರ್ಯವು. ಈ ವಚನಾನುಸಾರವಾಗಿ ಚತುರ್ದಶಿಯಲ್ಲಿ ಪಿಣ್ಡಪಿತೃಯಜ್ಞವೂ, ಉಪವಾಸವೂ (ಅನ್ವಾಧಾನ) ಸಂಧಿದಿನದಲ್ಲಿ ಯಜ್ಞವೂ ನಡೆಯಬೇಕೆಂಬುದು ಮತ್ತೊಂದು ಪಕ್ಷವು. ಈ ಎರಡನೆಯ ಪಕ್ಷಕ್ಕೆ ಮತ್ತೊಂದುದಾಹರಣೆ-ಚತುರ್ದಶಿ ೧೮ ಅಮಾ ೬೮ ಪ್ರತಿಪತ್ ೧೯ ಹಗಲು ೩೩ ಇಲ್ಲಿ ಪ್ರತಿಪತ್ತಿನ ಪ್ರಾತಃಕಾಲದಲ್ಲಿ ಮೂರು ಪಾದದಷ್ಟು ಕಾಲವು ಯಾಗಕ್ಕೆ ದೊರೆಯದಿರುವುದರಿಂದ, ಸಂಧಿದಿನದಲ್ಲಿಯೇ ಕಾತ್ಯಾಯನರಿಗೆ ಯಾಗಕಾಲವೆಂಬುದು ಸರ್ವಸಮ್ಮತವಾದದ್ದು. ಪೂರ್ವದಿನದಲ್ಲಿ ಪಿತೃಯಜ್ಞವೂ ಉಪವಾಸವೂ ನಡೆಯಬೇಕು ಮತ್ತು ಎರಡುದಿನಗಳಲ್ಲಿ ಸಮವಾಗಿ ಯಾಗಲಿ ಹೆಚ್ಚುಕಡಿಮೆಯಾಗಿಯಾಗಲೀ,ಒಂದು ಭಾಗಕ್ಕೆ ವ್ಯಾಪ್ತಿಇರುವಿಕೆ, ಎಂಬುದು ಮೂರನೆಯ ಪಕ್ಷವು ಅಂದರೆ-ಚ-೨೫, ಅಮಾ-೨೫, ಪ್ರತಿ-೨೪, ಅಹಸ್ಸು-೩೦ ಇದು ಸಮವಾದ ಅಪರಾಹ್ಣವ್ಯಾಪ್ತಿ. ಇಲ್ಲಿ ಕೌಸ್ತುಭೆ ಮತದಂತೆಯೂ ಇತರ ಮತದಂತೆಯೂ ಹೀಗೆ ಎರಡುವಿಧವಾಗಿ ನಿರ್ಣಯಿಸಬೇಕು. ಹೇಗೆಂದರೆ-ಚ-೨೫, ಅ-೨೦,ಪ್ರ-೧೭ ದಿನ-೨೭, ಇದೂಸಹ ಸಾಮ್ಯದಿಂದ ಒಂದು ಭಾಗದ ವ್ಯಾಪ್ತಿ. ಹೀಗಿದ್ದಾಗ ಎಲ್ಲ ಮತಗಳಿಂದಲೂ, ಕಾತೀಯರಿಗೆ ಸಂಧಿದಿನದಲ್ಲಿಯೇ ಯಾಗವು. ಪೂರ್ವದಿನದಲ್ಲಿಯೇ ಪಿತೃಯಜ್ಞೋಪವಾಸಗಳು. ಚ-೨೫ ಅಮಾ-೨೭ ಪ್ರ-೨೭ ಅಹಃ-೩೦ ಇದುವಿಷಮವಾಗಿ ಒಂದು ಭಾಗಕ್ಕೆ ವ್ಯಾಪ್ತಿ. ಇಲ್ಲಿಯೂ ಹಿಂದೆ ಹೇಳಿರುವ ಮತಗಳಂತೆ ಎರಡುವಿಧ ನಿರ್ಣಯವು. ಉದಾಹರಣೆ ಚ-೨೫, ಅ-೨೨, ಪ್ರ-೧೮, ಅಹಃ-೩೦. ಇದೂ ವಿಷಮವಾದ ಕಾ

ಲದೊಂದು ಭಾಗದ ವ್ಯಾಪ್ತಿ. ಇಲ್ಲಿಯೂ ಸರ್ವಮತಗಳಿಂದಲೂ, ಸಂಧಿ ದಿನದಲ್ಲಿಯೇ ಕಾತ್ಯಾಯನರಿಗೆ ಯಜ್ಞ ಕಾಲವು.ಚತುರ್ದಶಿಯಲ್ಲಿಯೇ ಆನ್ವಾಧಾನ ಪಿಣ್ಡಪಿತೃಯಜ್ಞವು ಮತ್ತೊಂದು ಬಗೆ- ಚ-೫೪, ಅ-೨೭, ಪ್ರ-೫೯, ಅಹಃ-೩೦. ಇಲ್ಲಿ ಸಂಧಿದಿನದಲ್ಲಿಯೇ ಅನ್ವಾಧಾನವೂ ಪಿತೃಯಜ್ಞವೂ, ಪ್ರತಿಪತ್ತಿನಲ್ಲಿ ಯಾಗವೂ ನಡಯಬೇಕು. ಸಂಧಿ ದಿನದಲ್ಲಿಯೇ ಒಂದು ಭಾಗಕ್ಕೆ ವ್ಯಾಪ್ತಿ ಇರುವುದು ನಾಲ್ಕನೆಯ ಪಕ್ಷವು.ಹೇಗೆಂದರೆ- ಚ-೩೧, ಅ-೨೬, ಪ್ರ-೨೩, ಅಹಸ್ಸು ೩೦, ಮತ್ತು ಚ-೨೮-ಅ-೨೨, ಪ್ರ-೧೭, ಅಹಃ-೨೭, ಇವೆರಡುಬಗೆಯಲ್ಲಿಯೂ ಸಂಧಿ ದಿನದಲ್ಲಿಯೇ, ಪಿಣ್ಡಪಿತೃಯಜ್ಞವೂ, ಅನ್ವಾಧಾನವೂ, ಎರಡನೆಯ ದಿನ ಪ್ರತಿಪತ್ತಿನಲ್ಲಿ ಯಾಗವೂ ನಡೆಯಬೇಕು. ಏವಂಚ ಕಾತ್ಯಾಯನ ಮತಪ್ರಕಾರ ಎಲ್ಲ ಉದಾಹರಣೆಗಳಲ್ಲಿಯೂ, ಚಂದ್ರದರ್ಶನವು ಕೂಡದೆಂಬುವ ನಿಯಮವನ್ನನುಸರಿಸುವುದಕ್ಕಾಗುವುದಿಲ್ಲ.ಆದರೆ ಕೆಲವು ಸ್ಥಳಗಳಲ್ಲಿ ಚಂದ್ರದರ್ಶನ ನಿಷೇಧದಲ್ಲಿ ದೃಷ್ಟಿಯಿಟ್ಟು ಪೂರ್ವದಿನದಲ್ಲಿ ಯಾಗವನ್ನು ಮಾಡುವುದೂ, ಮತ್ತೆ ಕೆಲವೆಡೆಗಳಲ್ಲಿ ಚಂದ್ರದರ್ಶನವಾಗುವದಿನಗಳಲ್ಲಿಯೇ ಮಾಡುವುದೂ ಉಂಟು. ಪಿಣ್ಡಪಿತೃಯಜ್ಞವೂ ಇದರಂತೆಯೇ, ಎಂದು ತಿಳಿಯಬೇಕು. ದರ್ಶಶ್ರಾದ್ಧ ಮಾಡುವುದಕ್ಕಾಗಿ ಅಮಾವಾಸ್ಯೆಯ ನಿರ್ಣಯವು ಎಲ್ಲರಿಗೂ ಸಾಮಾನ್ಯವಾಗಿದುವುದರಿಂದ ಮುಂದೆ ಬೇರೆಯಾಗಿಯೇ ಹೇಳುತ್ತೇವೆ.

—ಸಾಮಶಾಖೆಯವರಿಗೆ ಯಜ್ಞಕಾಲನಿರ್ಣಯವು—

ಸಾಮಕರಿಗೆ ಪೌರ್ಣಮಿಯವಿಷಯವು ಸಾಮಾನ್ಯವಾಗಿ ಹಿಂದೆಹೇಳಿದಂತೆಯೇ. ಅಮಾವಾಸ್ಯೆಯ ವಿಷಯದಲ್ಲಿ, ರಾತ್ರಿಸಂಧಿಯಾದರೆ ಚಂದ್ರದರ್ಶನವಾಗುವುದಾಗಿದ್ದರೂ ಪ್ರತಿಪತ್ತಿನಲ್ಲಿಯೇಯಾಗವು ನಡೆಯಬೇಕು. ಅಪರಾಹ್ಣಸಂಧಿಯಾದರೆ ಬೆಳಗ್ಗೆ ೬ ಘಳಿಗೆಗಳುಳ್ಳ ಪ್ರತಿಪತ್ತಿನವೊದಲ ಮೂರು ಪಾದದಷ್ಟು ಯಾಗಕಾಲವು ಸಿಕ್ಕುವ ಹಾಗಿದ್ದರೆ ಚಂದ್ರದರ್ಶನವಾಗುವ ಹಾಗಿದ್ದರೂ ಪ್ರತಿಪತ್ತಿನಲ್ಲಿಯೇ ಯಾಗವೂ ಸಂಧಿದಿನದಲ್ಲಿ ಉಪವಾಸ,ಪಿತೃಯಜ್ಞಗಳೂ ನಡೆಯಬೇಕು.ಬೇಕಾದಷ್ಟು ಯಾಗಕಾಲವು ಸಿಕ್ಕದೆಹೋದರೆ ಸಂಧಿದಿನದಲ್ಲಿಯೇ ಯಾಗವೂ ಪೂರ್ವದಿನವಚ

ತುರ್ದಶಿಯಲ್ಲಿಯೇ ಪಿತೃಯಜ್ಞೋಪವಾಸಗಳೂ ನಡೆಯಬೇಕಾವುಗು ದು. ಅಂತು ಸಾಮಕರೂ ಸಹ ಚಂದ್ರದರ್ಶನ ನಿಷೇಧವನ್ನು ಕಾತ್ಯಾಯ ನರಂತೆಯೇ ಸಂದರ್ಭಾನುಸಾರವಾಗಿ ಅನುಸರಿಸಬೇಕು. ಹೀಗೆ ಸಾ ಮಕರಿಗೆ ನಿರ್ಣಯವು. ಇಂತು ಯಾಗಕಾಲ ನಿರ್ಣಯೋದ್ದೇಶವು ॥೨೩॥

(೨೪) ಪಿಣ್ಡಪಿತೃಯಜ್ಞಕಾಲವು.

(೨೪) ಪಿಣ್ಡಪಿತೃಯಜ್ಞಕಾಲವು-ಈ ವಿಷಯದಲ್ಲಿ ಆಶ್ವಲಾಯನ ರು, ಯಾವದಿನದ ಹಗಲು ಅಥವಾರಾತ್ರಿಯಲ್ಲಿ ಅಮಾವಾಸ್ಯಾ ಪ್ರತಿಪ ತ್ತುಗಳಿಗೆ ಸಂಧಿಯುಂಟಾಗುವುದೋ ಆದಿನದ ಅಪರಾಹ್ಣದಲ್ಲಿ ಅಹಃ ಪ್ರಮಾಣದಗಳಿಗೆಗಳನ್ನು ಐದು ಸಮಭಾಗಮಾಡುವುದರಿಂದ ಬಂದ ನಾ ಲ್ಕನೆಯ ಭಾಗದಲ್ಲಿ (ಅಹಃಪ್ರಮಾಣದ ನಾಲ್ಕನೆಯ $\frac{1}{5}$ ಭಾಗದಕಾಲ ದಲ್ಲಿ) ಪಿಂಡಪಿತೃಯಜ್ಞವನ್ನು ಮಾಡಬೇಕು. ಅಪರಾಹ್ಣಸಂಧಿಯಲ್ಲಿ ಇದು ಅನ್ವಾಧಾನ ದಿನದಲ್ಲಿಯೇ ನಡೆಯಬೇಕು. ಮಧ್ಯಾಹ್ನ ಅಥವಾ ಪೂರ್ವಾಹ್ಣದಲ್ಲಿಸಂಧಿಯಾದರೆ ಯಾಗದಿನದಲ್ಲಿ ಯಾಗಾನಂತರ ಅಪರಾಹ್ಣ ದಲ್ಲಿ ಆಗುತ್ತದೆ. ಅಹೋರಾತ್ರಿಗಳಸಂಧಿಕಾಲದಲ್ಲಿ ತಿಥಿಸಂಧಿಯಾದರೆ ಆ ಗ ಅನ್ವಾಧಾನದಿನದಲ್ಲಿಯೇ ಪಿಣ್ಡಪಿತೃಯಜ್ಞವು. ಹೀಗೆ ಆಪಸ್ತಂಬ, ಹಿ ರಣ್ಯಕೇಶಿಮತಾನುಸಾರಿಗಳಿಗೂಕೂಡ ಸಂಧಿದಿನದಲ್ಲಿಯೇ ಪಿತೃಯಜ್ಞ ವು. ಅದನ್ನು ಅಪರಾಹ್ಣದಲ್ಲಾಗಲಿ, ಸೂರ್ಯನುಗಿಡಗಳ ಮೇಲ್ಭಾಗಕ್ಕೆ ಬಂ ದಿರುವಕಾಲದಲ್ಲಾಗಲಿ (ಮಧ್ಯಾಹ್ನ) ಮಾಡಬೇಕು. ಹಗಲನ್ನು ಐದು ಸ ಮಭಾಗಮಾಡಿದರೆ ಅದರ ನಾಲ್ಕನೆಯಭಾಗವಾಗಲಿ (ಅಹಸ್ಸಿನ $\frac{4}{5}$) ಹಗಲನ್ನು ೯ ಭಾಗಮಾಡಿ ತೆಗೆದುಕೊಂಡ ಏಳನೆಯ ಭಾಗವಾಗಲಿ (ಹ ಗಲ $\frac{7}{9}$) ಅಪರಾಹ್ಣವೆನಿಸುವುದು. ಸಾಙ್ಖ್ಯಾಯನ, ಕಾತ್ಯಾಯ ನ, ಸಾಮಕರು ಅನ್ವಾಧಾನದಿನದಲ್ಲಿಯೇ ಪಿಣ್ಡಪಿತೃಯಜ್ಞವನ್ನು ಮಾ ಡಬೇಕೆಂದು ಹಿಂದೆಯೇ ಹೇಳಿದೆ. ಅದನ್ನು ಅಹಃ ಪ್ರಮಾಣದ $\frac{2}{3}$ ಭಾಗದಕಾಲದಲ್ಲಿ ಅಪರಾಹ್ಣದಲ್ಲಿ ಮಾಡಬೇಕು. ಗೃಹ್ಯಾಗ್ನಿ (ಧಾರ್ಯಾ ಗ್ನಿ) ಯುಳ್ಳ ಋಕ್ಶಾಖೆಯವರು, ದರ್ಶಶ್ರಾದ್ಧ ಪಿಣ್ಡಪಿತೃಯಜ್ಞಗಳೆ ರಡೂ ಒಂದೇದಿನದಲ್ಲಿ ನಡೆಯಬೇಕಾಗಿದ್ದಾಗ ಎರಡಕ್ಕೂ (ವ್ಯತಿಷ ಙ್ಗ)ಬಟ್ಟಾಗಿ ಪ್ರಯೋಗ ನಡೆಯಿಸಬೇಕು.ಖಂಡತಿಥಿಯುಳ್ಳ ಪರ್ವದಲ್ಲಾ

ದರೆ ಮೊದಲನೆಯ ದಿನ ದರ್ಶಶ್ರಾದ್ಧವನ್ನು ಮಾತ್ರ ಮಾಡಬೇಕು. ಎರಡನೆಯ ದಿನದಲ್ಲಿ ಪಿಣ್ಡಪಿತೃಯಜ್ಞವೊಂದನ್ನೇ ಮಾಡಬೇಕು. ಶ್ರೌತಾಗ್ನಿಯುಳ್ಳವರಾದರೆ ದಕ್ಷಿಣಾಗ್ನಿಯಲ್ಲಿ ಪಿಣ್ಡಪಿತೃಯಜ್ಞವನ್ನು ಮಾಡಬೇಕು. ವ್ಯತಿಷಙ್ಗದಿಂದ ಎರಡನ್ನೂ ಒಟ್ಟಿಗೆ ಮಾಡಕೂಡದು. ದರ್ಶವು ಸಂಪೂರ್ಣವಾಗಿದ್ದರೆ ಪ್ರಾರಂಭದಲ್ಲಿ ಅನ್ವಾಧಾನವೂ ಅನಂತರದಲ್ಲಿ ವೈಶ್ವದೇವವೂ ಆ ಮೇಲೆ ಪಿಣ್ಡಪಿತೃಯಜ್ಞವೂ, ತರುವಾಯ ದರ್ಶಶ್ರಾದ್ಧವೂ ಕ್ರಮವಾಗಿ ನಡೆಯಬೇಕು. ಈ ಕಾಲದಲ್ಲಿಯೇ ಜೀವತ್ಪಿತೃಕನೂ, ಹೋಮಾನಂತರದಲ್ಲಿ ಅಗ್ನಿಯುಳ್ಳವನೂ, ತಂದೆಯ ತಂದೆ ಮೊದಲಾದ ಮೂರು ಜನವನ್ನುದ್ದೇಶಿಸಿ ಪಿಣ್ಡಪಿತೃಯಜ್ಞವನ್ನು ಮಾಡಬೇಕು. ಇಲ್ಲದಿದ್ದರೆ ಪಿಣ್ಡಪಿತೃಯಜ್ಞವನ್ನಾರಂಭಿಸಲೇ ಕೂಡದು. ಯಜ್ಞಲೋಪವಾದರೆ ಪಾದಕೃಚ್ಛ್ರ (ಕೃಚ್ಛ್ರದ ¼) ವನ್ನು ಮಾಡುವುದೇ ಪ್ರಾಯಶ್ಚಿತ್ತವು. ಎರಡು ಇಷ್ಟಿಗಳು ಲೋಪವಾದರೆ ಅರ್ಧಕೃಚ್ಛ್ರವೂ, ಮೂರು ಯಾಗಗಳು ನಡೆಯದಿದ್ದರೆ ಅಗ್ನಿ ನಷ್ಟವಾಗುವುದರಿಂದ ಪುನಃ ಅಗ್ನ್ಯಾಧಾನವನ್ನು ಮಾಡುವುದೂ ಪ್ರಾಯಶ್ಚಿತ್ತವು. ಪಿಣ್ಡಪಿತೃಯಜ್ಞವು ಲೋಪವಾದರೆ ವೈಶ್ವಾನರೇಷ್ಟಿಯೇ ಪ್ರಾಯಶ್ಚಿತ್ತವೆನಿಸುವುದು ಅಥವಾ ಇಷ್ಟಿಸ್ಥಾನದಲ್ಲಿ (ಪ್ರತ್ಯಾಮ್ನಾಯ) ಸಪ್ತಹೋತೃ ಹೋಮವನ್ನು ಮಾಡುತ್ತೇನೆಂದು ಸಂಕಲ್ಪಮಾಡಿಕೊಂಡು ಆ ಮಂತ್ರದಿಂದ ನಾಲ್ಕಾವೃತ್ತಿ ಆಜ್ಯಾವದಾನ ಮಾಡಿಕೊಂಡು ಪೂರ್ಣಾಹುತಿಯನ್ನಾದರೂ ಮಾಡಬೇಕು. ಇಂತು ಪಿಂಡಪಿತೃಯಜ್ಞೋದ್ದೇಶವು.॥ ೨೩॥

(೨೪) ಶ್ರಾದ್ಧವಿಷಯದಲ್ಲಿ ಅಮಾವಾಸ್ಯಾ ನಿರ್ಣಯವು.

(೨೪) ದರ್ಶಶ್ರಾದ್ಧಾರ್ಥವಾಗಿ ಅಮಾವಾಸ್ಯೆಯ ನಿರ್ಣಯವು—ಅಹಃ ಪ್ರಮಾಣಸಂಖ್ಯೆಯನ್ನು ೫ ಭಾಗಮಾಡಿ ನಾಲ್ಕನೆಯ ಭಾಗವೆನಿಸುವ ಅಪರಾಹ್ಣಕ್ಕೆ ವ್ಯಾಪ್ತಿಯಿರುವ ಅಮಾವಾಸ್ಯೆಯನ್ನು ದರ್ಶಶ್ರಾದ್ಧದಲ್ಲಿ ಗ್ರಹಿಸಬೇಕು. ಪೂರ್ವದಿನದಲ್ಲಾಗಲಿ ಪರದಿನದಲ್ಲಾಗಲಿ ಪೂರ್ಣವಾಗಿಯಾಗಲಿ ಏಕದೇಶಕ್ಕಾಗಲಿ ವ್ಯಾಪ್ತಿಯಿರುವುದನ್ನೇ ಗ್ರಹಣಮಾಡಬೇಕು. ಎರಡುದಿನಗಳಲ್ಲಿಯೂ ಅಪರಾಹ್ಣಕ್ಕೆ ವಿಷಮ (ಹೆಚ್ಚುಕಡಮೆ) ವ್ಯಾಪ್ತಿಯು ಅಮಾವಾಸ್ಯೆಗಿದ್ದರೆ ಯಾವುದಕ್ಕೆ ಹೆಚ್ಚುವ್ಯಾಪ್ತಿ ಯಿರು

ವುದೋ ಅದನ್ನೇ ಗ್ರಹಿಸಬೇಕು. ಎರಡುದಿನಗಳಲ್ಲಿ ಸಮಾನವಾಗಿ ಏಕದೇಶವ್ಯಾಪ್ತಿಯಿದ್ದರೆ ಕ್ಷಯತಿಥಿಯಲ್ಲಿ ಮೊದಲನೆಯದನ್ನೂ, ಸಮ, ಅಥವಾ ವೃದ್ಧ ತಿಥಿಗಳಲ್ಲಿ ಎರಡನೆಯದನ್ನೂ ಗ್ರಹಿಸಬೇಕು. ಅದರಲ್ಲಿ ಸಮಾನವ್ಯಾಪ್ತಿ ಯಿರುವಾಗ ತಿಥಿಯ ವೃದ್ಧಿ,ಕ್ಷಯ, ಸಮತ್ವ, ವಿಷಯದಲ್ಲಿ ಉದಾಹರಣೆ—ಚ ೧೯, ಅ-೨೪, ಅಹಃ-೩೦, ಇಲ್ಲಿ ಎರಡು ದಿನಗಳಲ್ಲಿಯೂ, ೫ ಗಳಿಗೆಗಳ ಸಮವಾದ ವ್ಯಾಪ್ತಿಯಿರುವುದು ಚತುರ್ದಶಿಗಿಂತಲೂ ಅಮಾವಾಸ್ಯೆಗಳ ಘಳಿಗೆಗಳ ವೃದ್ಧಿ ಯಿರುವುದರಿಂದ ಎರಡನೆಯ ಅಮಾವಾಸ್ಯೆಯನ್ನೇ ಗ್ರಹಿಸಬೇಕು ಹಾಗೆಯೇ ಚ-೨೪,ಅ-೧೯, ಯಿಲ್ಲಿ ಎರಡುದಿನಗಳಲ್ಲಿಯೂ ಸಮವಾಗಿ ಒಂದುಗಳಿಗೆಯ ವ್ಯಾಪ್ತಿ ಇದೆ ೪ ಗಳಿಗೆಗಳು ತಿಥಿ ಕ್ಷಯವಾದ್ದರಿಂದ ಪೂರ್ವದಿನವನ್ನೇ ಗ್ರಹಿಸಬೇಕು ಮತ್ತು ಚ-೨೧ ಅಮಾ-೨೧,ಇಲ್ಲಿ ಎರಡುದಿನಗಳಲ್ಲಿ ಮೂರುಮೂರುಗಳಿಗೆಗಳ ಸಮವ್ಯಾಪ್ತಿಯಿರುವುದು ತಿಥಿಗೆ ವೃದ್ಧಿಕ್ಷಯಗಳಿಲ್ಲದ್ದರಿಂದ,ಸಮತ್ವವುಂಟಾಗಿರುವ ಕಾರಣ ಎರಡನೆಯದನ್ನು ಗ್ರಹಿಸಬೇಕು.ಎರಡುದಿನಗಳಲ್ಲಿಯೂ ಅಪರಾಹ್ಣ ವ್ಯಾಪ್ತಿಯಿಲ್ಲದೆ ಹೋದರೆಗೃಹ್ಯಾಗ್ನಿಯುಳ್ಳವರೂ,ಶ್ರೌತಾಗ್ನಿಯುಳ್ಳವರೂ ಸಹ ಸಿನೀವಾಲಿ,ಎಂಬ ಹೆಸರುಳ್ಳ ಚತುರ್ದಶಿಯಿಂದ ಕೂಡಿದ ಪೂರ್ವದ ಅಮಾವಾಸ್ಯೆಯನ್ನೂ, ಗೃಹ್ಯಾಗ್ನಿಯಿಲ್ಲದವರೂ, ಸ್ತ್ರೀಯರೂ, ಶೂದ್ರರು ಮೊದಲಾದವರೂ 'ಕುಹೂ' ಎಂಬ ಹೆಸರುಳ್ಳ, ಪ್ರತಿಪತ್ತಿನಿಂದ ಕೂಡಿದ ಎರಡನೆಯ ಅಮಾವಾಸ್ಯೆಯನ್ನೂ ಗ್ರಹಿಸಬೇಕೆಂದು ಹೇಳುವ ಮಾಧವಾಚಾರ್ಯರ ಮತದಂತೆಯೇ, ದರ್ಶನಿರ್ಣಯವನ್ನು ಶಿಷ್ಟರೆಲ್ಲರೂ ಪ್ರಾಯಶಃ ಅನುಸರಿಸುತ್ತಾರೆ.

### ಮತಾಂತರವು

ಪುರುಷಾರ್ಥಚಿಂತಾಮಣಿ, ಎಂಬಗ್ರಂಥದಲ್ಲಿ—" ಋಕ್ಶಾಖೆಯವರೂ, ತೈತ್ತಿರೀಯರೂ ಸಹ ಗೃಹ್ಯಾಗ್ನಿಯುಳ್ಳವರು, ಅಪರಾಹ್ಣ ವ್ಯಾಪ್ತಿಯಿಲ್ಲದಿದ್ದಾಗ್ಯೂ ಯಾಗದಿನದ ಪೂರ್ವದಿನದಲ್ಲಿಯೇ ದರ್ಶ ಶ್ರಾದ್ಧ ಮಾಡಬೇಕು. ಹಾಗೆಯೇ ಎರಡು ದಿನಗಳಲ್ಲಿಯೂ ಸಂಪೂರ್ಣವಾಗಿ ಅಪರಾಹ್ಣವ್ಯಾಪ್ತಿಯಿದ್ದರೆ ಎರಡನೆಯದಿನದಲ್ಲಿಯೇ ದರ್ಶವು. ಅಪರಾಹ್ಣದ ಏಕದೇಶಕ್ಕೆ ವ್ಯಾಪ್ತಿಯಿದ್ದರೆ ಪ್ರತಿಪತ್ತು ವೃದ್ಧತಿಥಿಯಾದಾಗ ಪ್ರತಿಪತ್ತಿನಲ್ಲಿ ಇಷ್ಟಿಯಾಗುವುದರಿಂದ ಪರದಿನದಲ್ಲಿಯೇದರ್ಶವು. ಎರಡ

ನೆಯ ದಿನದಲ್ಲಿಯೇ ಅಪರಾಹ್ಣವ್ಯಾಪ್ತಿ ಯಿದ್ದು ಪ್ರತಿಪತ್ತಿನ ಕ್ಷಯದಿಂದ ದರ್ಶದಿನದಲ್ಲಿ ಇಷ್ಟಿಯಾಗಬೇಕಾಗಿಬಂದರೆ, ಆಶ್ವಲಾಯನರು ಸಿನೀವಾಲಿಯನ್ನೂ, ತೈತ್ತಿರೀಯರು ಕುಹುವನ್ನೂ ಗ್ರಹಿಸಬೇಕು (ಈ ಮತವು ಹೇಗೆಸರಿಯಾದದ್ದೋ ಗೊತ್ತಿಲ್ಲ) ಸಾಮಕರು ವಿಕಲ್ಪದಿಂದ ಎರಡನ್ನೂ ಗ್ರಹಿಸಬಹುದು, ಪೂರ್ವದಿನದ ಅಪರಾಹ್ಣಕ್ಕೆ ಹೆಚ್ಚಾಗಿ ವ್ಯಾಪ್ತಿಯಿದ್ದು, ಎರಡನೆಯ ದಿನದ ಅಪರಾಹ್ಣಕ್ಕೆ ಕಡಿಮೆಯಾಗಿದ್ದರೆ ಸಾಮಕರಿಗೆ ಪೂರ್ವದಿನವೂ, ತೈತ್ತಿರೀಯರಿಗೆ ಪರದಿನವೂ ಗ್ರಾಹ್ಯಗಳು ಎರಡು ದಿನಗಳಲ್ಲಿಯೂ ಅಪರಾಹ್ಣವ್ಯಾಪ್ತಿ ಯಿಲ್ಲದಿರುವಾಗಲೂ ಸಾಮಕರು ಪೂರ್ವದಿನವನ್ನೂ ತೈತ್ತಿರೀಯರು ಪರದಿನವನ್ನೂ ಗ್ರಹಿಸಬೇಕು." ಇದೇ ಮೊದಲಾದ ವಿಷಯಗಳನ್ನು ಹೇಳಿದೆ.

(ಕಾತೀಯರು ಪಿಣ್ಡಪಿತೃಯಜ್ಞದಿನದಲ್ಲಿಯೇ ದರ್ಶಶ್ರಾದ್ಧಮಾಡಬೇಕೆಂದು ಹೇಳುತ್ತದೆ) ದರ್ಶದಿನದಲ್ಲಿ, ದರ್ಶಶ್ರಾದ್ಧವರ್ಷಶ್ರಾದ್ಧಗಳೂ ದರ್ಶಶ್ರಾದ್ಧಮಾಸಿಕಗಳೂ, ದರ್ಶಶ್ರಾದ್ಧ ಉದಕುಂಭಶ್ರಾದ್ಧಗಳೂ ಎರಡೆರಡು ಬಂದರೆ ಬೇರೆ ಬೇರೆ ದೇವತೆಗಳಾದ್ದರಿಂದ ಎರಡು ಶ್ರಾದ್ದಗಳನ್ನೂ ಬೇರೆಬೇರೆ ಮಾಡಬೇಕು. ಅವುಗಳಲ್ಲಿ ಮಾಸಿಕ ಅಥವಾ ಆಬ್ದಿಕವೊದಲಾದ ಶ್ರಾದ್ಧಗಳನ್ನು ಮೊದಲುಮಾಡಿ, ಬೇರೆ ಅಡಿಗೆಯಿಂದ ದರ್ಶಶ್ರಾದ್ಧವನ್ನು ಮಾಡಬೇಕು ಆಬ್ದಿಕ ಮೊದಲಾದ ಶ್ರಾದ್ಧಶೇಷಾನ್ನದಿಂದಲಾಗಲಿ ಬೇರೆಅಡಿಗೆಯಿಂದಾಗಲಿ ದರ್ಶಶ್ರಾದ್ಧಕ್ಕಿಂತ ಪೂರ್ವದಲ್ಲಿ ವೈಶ್ವದೇವವನ್ನು ಮಾಡಬೇಕು. ಕರ್ತೃವು ಆಹಿತಾಗ್ನಿಯಾಗಿದ್ದರೆ ವೈಶ್ವದೇವವನ್ನೂ, ಪಿಣ್ಡಪಿತೃಯಜ್ಞವನ್ನೂ ಮಾಡಿ, ಆ ಮೇಲೆ ಆಬ್ದಿಕವನ್ನು ಮಾಡಬೇಕು. ದರ್ಶಶ್ರಾದ್ಧವನ್ನು ಉಪನಯನವಿಲ್ಲದವನೂ, ವಿಧುರನೂ ಪರಸ್ಥಳಕ್ಕೆ ಹೋಗಿರುವವನೂ ಸಹ ಮಾಡಬೇಕು. ಅಮಾಶ್ರಾದ್ಧವನ್ನು ಮಾಡದೆ ತಪ್ಪಿದರೆ'ನ್ಯೂಷುವಾಚಂ' ಎಂಬ ಋಕ್ಕನ್ನು ಒಂದು ನೂರು ಸಾರಿಜಪಿಸಬೇಕು. ಇಂತುದರ್ಶನಿರ್ಣಯೋದ್ದೇಶವು ॥೨೪॥

(೨೫) ಇಷ್ಟ್ಯಾದಿಗಳ ಪ್ರಾರಂಭ ನಿರ್ಣಯವು.

(೨೫) ಇಷ್ಟಿಮೊದಲಾದವುಗಳ ಪ್ರಾರಂಭನಿರ್ಣಯವು:- ಇಷ್ಟಿ, ಸ್ಥಾಲೀಪಾಕ ಇವುಗಳನ್ನು ಪೌರ್ಣಮಿಯಲ್ಲಿಯೇ ಪ್ರಾರಂಭಿಸಬೇಕು.

ದರ್ಶದಲ್ಲಿ ಆರಂಭಿಸಕೂಡದು. ಅಗ್ನ್ಯಾಧಾನ, ಗೃಹಪ್ರವೇಶ ಹೋಮವನ್ನು ಮಾಡಿದ ಕೂಡಲೆ ಪೌರ್ಣಮಾಸ್ಯೆಯಲ್ಲಿ ದರ್ಶಪೌರ್ಣಮಾಸಗಳನ್ನು ಆರಂಭಮಾಡಿದರೆ, ಮಲಮಾಸ (ಅಧಿಕ) ಪುಷ್ಯಮಾಸ, ಶುಕ್ರಾಸ್ತ ಮೊದಲಾದ ದೋಷಗಳಿಲ್ಲ. ಆ ಕಾಲವನ್ನು ಅತಿಕ್ರಮಿಸಿದರೆ, ಶುದ್ಧಮಾಸಮೊದಲಾದವುಗಳನ್ನು ನಿರೀಕ್ಷಣೆಮಾಡಬೇಕೆಂದು ಕೆಲವರೂ, ಹೇಗಾದರೂ ಶುದ್ಧಮಾಸಮೊದಲಾದುವನ್ನು ನೋಡಿಯೇ ಮಾಡಬೇಕೆಂದು ಇತರರೂ ಹೇಳುವರು. ಇಂತು ಇಷ್ಟ್ಯಾದಿ ಪ್ರಾರಂಭನಿರ್ಣಯೋದ್ದೇಶವು ॥೨೫॥

## (೨೬) ವಿಕೃತಿಕಾಲವು.

(೨೬) ವಿಕೃತಿಯ ಕಾಲವು:-ಆಗ್ರಯಣ ಚಾತುರ್ಮಾಸ್ಯ ಮೊದಲಾದವು ನಿತ್ಯವೆಂತಲೂ, ಜಾತೇಷ್ಟಿಮೊದಲಾದವು ನೈಮಿತ್ತಿಕಗಳೆಂತಲೂ ಸೌರ್ಯಮೊದಲಾದವು ಕಾಮ್ಯಗಳೆಂತಲೂ ಹೀಗೆ ವಿಕೃತಿಯು ಮೂರುಬಗೆಯಾಗಿರುವುದು. ಸೌರ್ಯಾದಿಗಳು ಪುರುಷಾರ್ಥ ಫಲಪ್ರದಗಳಾಗಿವೆ. ಹೀಗೆಯೇ ಯಜ್ಞಾಂಗಗಳಲ್ಲಿಯೂನಿತ್ಯ,ನೈಮಿತ್ತಿಗಳೆಂಬೆರಡು ಭೇದಗಳುಂಟು. ವಿಕೃತಿಗಳಲ್ಲಿ ಸದ್ಯಸ್ಕಾಲತ್ವದ್ವ್ಯಹ (ಎರಡು ದಿನಗಳಿಂದಾಗುವದು) ಕಾಲತ್ವವೆಂಬ ಭೇದಗಳು (ವಿಕಲ್ಪ) ಇವೆ. ಹೀಗೆಯೇ ಪರ್ವದಲ್ಲಾಗಲಿ ಶುಕ್ಲಪಕ್ಷದ ದೇವ ನಕ್ಷತ್ರಗಳಲ್ಲಾಗಲಿ ಮಾಡಬಹುದೆಂಬ ವಿಕಲ್ಪವುಂಟು. ಹಾಗೆ ಪರ್ವದಲ್ಲಿ ಮಾಡುವುದಾದರೆ ಅಪರಾಹ್ಣಮೊದಲಾದ ಸಂಧಿಗಳಾದಾಗ ಸಂಧಿದಿನದಲ್ಲಿ ಸದ್ಯಸ್ಕಾಲ,ದ್ವ್ಯಹಕಾಲವುಳ್ಳದ್ದಾಗಿ ವಿಕೃತಿಯನ್ನು ಮಾಡಿ, ಪ್ರಕೃತಿಗೆ ಅನ್ವಾಧಾನಮಾಡಬೇಕು. ಮಧ್ಯಾಹ್ನ ಅಥವಾ ಪೂರ್ವಾಹ್ಣ ಸಂಧಿಯಾದರೆ ಸಂಧಿ ದಿನದಲ್ಲಿ ಪ್ರಕೃತಿಯನ್ನು ಪೂರಯಿಸಿ ಸದ್ಯಸ್ಕಾಲವುಳ್ಳದ್ದನ್ನಾಗಿ ವಿಕೃತಿಯನ್ನು ಮಾಡಬೇಕು. ಕೃತ್ತಿಕೆ ಮೊದಲ್ಗೊಂಡು ೧೪ ನಕ್ಷತ್ರಗಳು (ಅನೂರಾಧೆಯವರಿಗೆ)ದೇವನಕ್ಷತ್ರಗಳೆನ್ನಿಸಿಕೊಳ್ಳುವುವು. ಆಗ್ರಯಣದ ವಿಷಯದಲ್ಲಿ ಹೆಚ್ಚು ಸಂಗತಿಗಳನ್ನು ಎರಡನೆಯ ಪರಿಚ್ಛೇದದಲ್ಲಿ ಹೇಳುತ್ತೇವೆ. ಅನ್ವಾರಂಭಣೇಷ್ಟಿಯನ್ನು ಚತುರ್ದಶಿಯಲ್ಲಿ ಮಾಡಬೇಕು. ಇಂತು ವಿಕೃತಿ ಸಾಮಾನ್ಯ ನಿರ್ಣಯೋದ್ದೇಶವು ॥೨೬॥

(೨೭)ಪಶುಯಾಗವು.

(೨೭) ಪಶುಯಾಗಕಾಲವು:-ಪಶುಯಾಗವನ್ನು ದಕ್ಷಿಣಾಯನದಲ್ಲಿ, ವರ್ಷಋತುವಿನಲ್ಲಿ ಶ್ರಾವಣಶುದ್ಧ ಪೌರ್ಣಮಿಮೊದಲು ನಾಲ್ಕುಪರ್ವಗಳಲ್ಲಾಗಲಿ ಉತ್ತರಾಯಣದಿನಗಳಲ್ಲಾಗಲಿ, ಉತ್ತರಾಯಣದಿನಗಳಲ್ಲಾಗಲಿ ಮಾಡಬೇಕು. ಈ ವಿಷಯದಲ್ಲಿ ಪರ್ವವು ಖಂಡತಿಥಿಯಾಗಿದ್ದರೆ ವಿಕೃತಿಯಾಗಕ್ಕೆ ಸಾಮಾನ್ಯವಾಗಿ ಹೇಳಿರುವಂತೆಯೇ ಪರ್ವನಿರ್ಣಯವನ್ನು ಅನುಸರಿಸಬೇಕು. ಇಂತು ಪಶುಯಾಗೋದ್ದೇಶವು ॥೨೭॥

(೨೮) ಚಾತುರ್ಮಾಸ್ಯಕಾಲವು.

(೨೮) ಚಾತುರ್ಮಾಸ್ಯಕಾಲ ನಿರ್ಣಯದಲ್ಲಿ, ಯಾವಜ್ಜೀವಪಕ್ಷವೆಂತಲೂ, ಸಾಂವತ್ಸರಪಕ್ಷವೆಂತಲೂ, ದ್ವಾದಶಾಹಪಕ್ಷವೆಂತಲೂ ಯಥಾಪ್ರಯೋಗಪಕ್ಷವೆಂತಲೂ ನಾಲ್ಕು ಬಗೆಗಳುಂಟು.ಫಾಲ್ಗುಣ ಅಥವಾ ಚೈತ್ರಶುದ್ಧಪೌರ್ಣಮಿಯಲ್ಲಿ ವೈಶ್ವದೇವ ಪರ್ವವನ್ನು ಮಾಡಿ ಆಷಾಢಮೊದಲಾದ ನಾಲ್ಕು ನಾಲ್ಕು ತಿಂಗಳುಗಳಿಗೊಂದೊಂದು ಪರ್ವವೆಂಬ ಲೆಕ್ಕವನ್ನಿಟ್ಟುಕೊಂಡು ತಾನು ಬದುಕಿರುವವರೆಗೂ ನಡೆಯಿಸತಕ್ಕದ್ದು ಯಾವಜ್ಜೀವಪಕ್ಷವು. ಮೇಲೆ ಹೇಳಿದಂತೆ ಬಂದು ಸಂವತ್ಸರವು ಪೂರ್ತಿಯಾಗುವವರೆಗೂ ಮಾಡಿ ಸವನೇಷ್ಟಿಯಿಂದಾಗಲಿ ಪಶುಯಾಗದಿಂದಾಗಲಿ ಸೋಮಯಾಗದಿಂದಲಾಗಲಿ ಪೂರಯಿಸುವುದು ಸಾಂವತ್ಸರಪಕ್ಷವು. ಮೊದಲದಿನದಲ್ಲಿ ವೈಶ್ವದೇವ ಪರ್ವವನ್ನೂ, ನಾಲ್ಕನೆಯ ದಿನಗಳಲ್ಲಿ ವರುಣ ಪ್ರಘಾಸ ಪರ್ವವನ್ನೂ, ಎಂಟೊಂಭತ್ತನೆಯ ದಿನಗಳಲ್ಲಿ ಅಶ್ವಮೇಧ ಪರ್ವವನ್ನೂ ಹನ್ನೆರಡನೆಯ ದಿನದಲ್ಲಿ ಶುನಾಸೀರೀಯ ಪರ್ವವನ್ನೂ ನಡೆಯಿಸಿ ಮುಗಿಸುವುದು ದ್ವಾದಶಾಹಪಕ್ಷವು, ಐದುದಿನಗಳಲ್ಲಿ ಪೂರಯಿಸುವುದು ಯಥಾಪ್ರಯೋಗ ಪಕ್ಷವು. ದ್ವಾದಶಾಹ ಮತ್ತು ಯಥಾಪ್ರಯೋಗಪಕ್ಷಗಳಲ್ಲಿ, ಉತ್ತರಾಯಣ, ಶುಕ್ಲಪಕ್ಷ ದೇವನಕ್ಷತ್ರಗಳಲ್ಲಿಯೇ ಆರಂಭಿಸಿ ಶುಕ್ಲಪಕ್ಷದಲ್ಲಿಯೇ ಮುಗಿಯಿಸಬೇಕೆಂಬುದು ಅನೇಕರಮತವು. ಕೃಷ್ಣಪಕ್ಷದಲ್ಲಾದರೂ ಮುಗಿಸಬಹುದೆಂದು ಕೆಲವರು ಹೇಳುವರು, ಹನ್ನೆರಡುದಿನ ಐದುದಿನಗಳಿಂದ ಪೂರಯಿಸುವ ಪಕ್ಷದಲ್ಲಿ ; ಸವನೇಷ್ಟಿಮೊದಲಾದವುಗಳನ್ನು ಮಾಡಿಮುಗಿಸುವುದಾದರೆ ಬಂದು ಸಾರಿ ಮಾಡಿದರೆ ಸಾಕು.

ಹಾಗಿಲ್ಲದಿದ್ದರೆ ಪ್ರತಿವರ್ಷದಲ್ಲಿಯೂ ಆಚರಿಸಬೇಕು. ಕೆಲವೆಡೆಗಳಲ್ಲಿ ಐಕಾಹಿಕಪ್ರಯೋಗ (ಒಂದೇದಿವಸದಲ್ಲಿ ಪೂರೈಸುವ ಪ್ರಯೋಗ) ಪಕ್ಷವೂ ಹೇಳಿದೆ. ಆ ಪ್ರಯೋಗವು ಚೈತ್ರವೊದಲಾದ ನಾಲ್ಕು ತಿಂಗಳುಗಳ ಯಾವುದಾದರೂ ಒಂದು ಪೌರ್ಣಮಿಯಲ್ಲಿ ನಡೆಯಬೇಕು. ಮತ್ತೆ ಕೆಲವು ಸ್ಥಳಗಳಲ್ಲಿ ಸಪ್ತಾಹ (ಏಳುದಿನಗಳಲ್ಲಿ ಮುಗಿವ) ಪಕ್ಷವೂ ಉಂಟು, ಹೇಗೆಂದರೆ-ಮೊದಲ ಎರಡು ದಿನಗಳಲ್ಲಿ ವೈಶ್ವದೇವಪರ್ವವೂ, ಮೂರನೆಯ ದಿವಸದಲ್ಲಿ ವರುಣಪ್ರಘಾಸಪರ್ವವೂ, ನಾಲ್ಕನೆಯ ದಿವಸದಲ್ಲಿ ಗೃಹಮೇಧೀಯ ಪರ್ವವೂ, ಐದನೆಯ ದಿವಸದಲ್ಲಿ ಮಹಾಹವಿಸ್ಸುಗಳೂ, ಆರನೆಯ ದಿನದಲ್ಲಿ ಪಿತೃಯಜ್ಞವೊದಲಾದ ಸಾಕಮೇಧ ಪರ್ವಶೇಷವೂ, ಏಳನೆಯ ದಿನದಲ್ಲಿ ಶುನಾಸೀರೀಯಪರ್ವವೂ ನಡೆಯಬೇಕು. ಇದಕ್ಕೆ ಪಂಚಾಹಪಕ್ಷದಲ್ಲಿ ಹೇಳಿರುವ ಶುಕ್ಲಪಕ್ಷವೇ ಮೊದಲಾದ ಎಲ್ಲಾ ಕಾಲ ವಿಷಯಗಳನ್ನೂ ನೋಡಿ ನಡೆಯಿಸಬೇಕು. ಇಂತು ಚಾತುರ್ಮಾಸ್ಯಕಾಲನಿರ್ಣಯೋದ್ದೇಶವು ॥೨೮॥

(೨೯) ಕಾಮ್ಯ, ನೈಮಿತ್ತಿಕವೊದಲಾದ ಇಷ್ಟಿಗಳ ನಿರ್ಣಯವು.

(೨೯) ಕಾಮ್ಯನೈಮಿತ್ತಿಕಾದಿ ಇಷ್ಟಿನಿರ್ಣಯವು—ಕಾಮ್ಯೇಷ್ಟಿಗಳನ್ನು ವಿಕೃತಿಯಾಗಕ್ಕೆ ಸಾಮಾನ್ಯವಾಗಿ ಹೇಳಿರುವ ನಿರ್ಣಯದಂತೆ ಪರ್ವಕಾಲಗಳಲ್ಲಿ ನಡೆಯಿಸಬೇಕು. ಅಥವಾ ಶುಕ್ಲಪಕ್ಷದ ದೇವನಕ್ಷತ್ರಗಳಲ್ಲಾದರೂ ನಡೆಯಿಸಬೇಕು. ಜಾತೇಷ್ಟಿಯನ್ನಾದರೋ! ಹೆಂಡತಿಗೆ ಇಪ್ಪತ್ತು ರಾತ್ರಿಗಳವರೆಗೂ ಶ್ರೌತಸ್ಮಾರ್ತಕರ್ಮಗಳಲ್ಲಿ ಅಧಿಕಾರವಿಲ್ಲವೆಂದು ಹೇಳಿಸಿಕೊಳ್ಳುವ ಆಶೌಚವು ಕಳೆದ ಮೇಲೆ ಪರ್ವದಲ್ಲಿ ಮಾಡಬೇಕು. ಗೃಹದಾಹೇಷ್ಟಿ(ಮನೆಯು ಸುಟ್ಟುಹೋದದ್ದಕ್ಕಾಗಿ ಶಾಂತಿರೂಪವಾಗಿಮಾಡಬೇಕಾದದ್ದು)ಮೊದಲಾದ ನೈಮಿತ್ತಿಕಯಾಗಗಳನ್ನು ನಿಮಿತ್ತವು(ಕಾರಣವು)ಒದಗಿದ ಅನಂತರದಲ್ಲಿ ಮಾಡತಕ್ಕ ವಿಷಯದಲ್ಲಿ ಪರ್ವ ಮೊದಲಾದ ಕಾಲಗಳನ್ನು ನಿರೀಕ್ಷಿಸಬೇಕಾದದ್ದಿಲ್ಲ. ಹಾಗಿಲ್ಲದೆ ಮನೆಸುಡುವುದು ಮೊದಲಾದ ನಿಮಿತ್ತಗಳು ಪ್ರಾಪ್ತವಾದ ಕೆಲವು ಕಾಲಾನಂತರದಲ್ಲಿ ಮಾಡುವ ಪಕ್ಷದಲ್ಲಿ ಪರ್ವದಲ್ಲಿಯೇ ಮಾಡಬೇಕಾಗುವುದು. ಕ್ರತ್ವರ್ಥವಾಗಿ ಅಥವಾ ಒಂದು ಯಾಗಕ್ಕೆ ಸೇರಿದುದಾಗಿ ಮಾಡಬೇಕಾದ ನಿತ್ಯ

ವಾದ ಹೋಮಾದಿಗಳನ್ನು ಆಯಾ ಕ್ರತುಗಳೊಡನೆಯೇ ಮಾಡಬೇಕು. ಅದಕ್ಕೆ ಬೇರೆ ಕಾಲವನ್ನು ನಿರೀಕ್ಷಿಸಬೇಕಾಗಿಲ್ಲ. ಹವಿರ್ದೋಷ (ಹವಿರ್ದ್ರವ್ಯ ಹೋಮಾದಿಲೋಪ) ಮೊದಲಾದವುಗಳನ್ನುದ್ದೇಶಿಸಿ ಮಾಡಬೇಕಾದ ಕೃತ್ವರ್ಥವಾದ ಹೋಮಗಳ ವಿಷಯದಲ್ಲಿ ಸ್ವಿಷ್ಟಕೃದ್ಧೋಮಾನಂತರದಲ್ಲಿ ಸಂಸ್ರಾವಹೋಮಮಾಡುವುದರೊಳಗಾಗಿ, ನಿಮಿತ್ತವು ಜ್ಞಾಪಕಕ್ಕೆ ಬಂದರೆ ಆಗಲೇ ಅದಕ್ಕೆ ಮಾಡಬೇಕಾದ ಸಂಸ್ಕಾರಗಳನ್ನು ಮಾಡಿ ಹೋಮಮಾಡಿ ಪ್ರಣೀತಾವೋಕ್ಷಣಮೊದಲಾದುವುಗಳನ್ನು ಮಾಡಬೇಕು. ಸಂಸ್ರಾವಹೋಮವಾದಮೇಲೆ ಜ್ಞಾಪಕಕ್ಕೆ ಬಂದರೆ ಆ ಪ್ರಯೋಗವನ್ನು ಪೂರಯಿಸಿ ಬೇರೆ ಅನ್ವಾಧಾನ ಮತ್ತು ಅಗ್ನಿಮುಖಗಳನ್ನು ಮಾಡಿಕೊಂಡು ಹೋಮಮಾಡಿ ಪೂರಯಿಸಬೇಕು. ಇಂತು ಕಾಮ್ಯನೈಮಿತ್ತಿಕಾದೀಷ್ಟಿನಿರ್ಣಯೋದ್ದೇಶವು ॥೨೯॥

(೩೦) ಆಧಾನ ಕಾಲವು.

(೩೦) ಆಧಾನಕಾಲವು--ಅಗ್ನ್ಯಾಧಾನವನ್ನು ಪರ್ವದಲ್ಲಿಯೂ ಉಕ್ತನಕ್ಷತ್ರಗಳಲ್ಲಿಯೂ ಮಾಡಬೇಕು. ಇಲ್ಲಿ ಸಂಕಲ್ಪಮಾಡಿದ್ದನ್ನು ಮೊದಲು ಮಾಡಿಕೊಂಡು ಪೂರ್ಣಾಹುತಿಯಾಗುವವರೆಗೂ ಇರಬಹುದಾದ ಪರ್ವವನ್ನು ಗ್ರಹಿಸಬೇಕು. ಅಷ್ಟು ಹೊತ್ತಿನವರೆಗೂ ಇರುವ ಪರ್ವವು ಸಿಕ್ಕದಿದ್ದರೆ ಗಾರ್ಹಪತ್ಯಾಧಾನಮಾಡಿದ್ದನ್ನು ಮೊದಲು ಮಾಡಿಕೊಂಡು ಆಹವನೀಯಾಧಾನಮಾಡುವವರೆಗಾದರೂ ಇರುವ ಪರ್ವವನ್ನು ಗ್ರಹಿಸಬೇಕು. ನಕ್ಷತ್ರವೂ ಸಹ ಇದರಂತೆ ತಕ್ಕಷ್ಟು ಕಾಲವಿರಬಹುದಾದದ್ದಾಗಿರಬೇಕು. ಎರಡುದಿನಗಳಲ್ಲಿ ಕರ್ಮಕ್ಕೆ ಸಾಕಾಗುವಷ್ಟು ಕಾಲದ ವ್ಯಾಪ್ತಿಯುಳ್ಳ ಪರ್ವವು ಇದ್ದರೆ ಉಕ್ತವಾದ ನಕ್ಷತ್ರದ ಯೋಗವು ಎಂದಿಗಿದೆಯೋ ಆ ದಿನವನ್ನು ಗ್ರಹಿಸಬೇಕು. ವಸಂತ ಋತುವೂ ಪರ್ವವೂ, ಉಕ್ತನಕ್ಷತ್ರವೂ, ಈ ಮೂರೂ ಸೇರಿದರೆ ಅತ್ಯುತ್ತಮವು. ಋತುವು ಮಾತ್ರ ಸೇರದೇಹೋದರೆ ಮಧ್ಯಮವು. ಉಕ್ತನಕ್ಷತ್ರವೊಂದರಲ್ಲಾಗಲಿ ಪರ್ವವೊಂದರಲ್ಲಾಗಲಿ ಮಾಡುವುದು ಅಧಮಪಕ್ಷವು, ಕೃತ್ತಿಕಾ, ರೋಹಿಣಿ, ವಿಶಾಖಾ, ಪೂರ್ವಾಫಲ್ಗುನಿ, ಉತ್ತರಾಫಲ್ಗುನಿ, ಮೃಗಶೀರ್ಷ, ಉತ್ತರಾಭಾದ್ರಪದೆ, ಈ ಏಳು ನಕ್ಷತ್ರಗಳು ತಕ್ಕವೆಂದು

ಆಶ್ವಲಾಯನಸೂತ್ರದಲ್ಲಿ ಹೇಳಿದೆ. ಕೃತ್ತಿಕಾ, ರೋಹಿಣಿ, ಉತ್ತರ, ಉತ್ತರಾಷಾಢ, ಉತ್ತರಾ ಭಾದ್ರಪದೆ, ಮೃಗಶೀರ್ಷ, ಪುನರ್ವಸು, ಪುಷ್ಯ, ಪೂರ್ವಾಫಲ್ಗುನಿ, ಪೂರ್ವಾಷಾಢ, ಹಸ್ತ, ಚಿತ್ರಾ, ವಿಶಾಖಾ, ಅನೂರಾಧ, ಶ್ರವಣ, ಜ್ಯೇಷ್ಠಾ, ರೇವತಿ ಈ ನಕ್ಷತ್ರಗಳೆಲ್ಲವೂ ಪ್ರಶಸ್ತಗಳೆಂದು ಬೇರೆಸೂತ್ರಗಳಲ್ಲಿ ಹೇಳಿರುತ್ತದೆ. ಸೋಮಪೂರ್ವಕವಾದ ಆಧಾನದಲ್ಲಾದರೆ, 'ನರ್ತುಂಪೃಚ್ಛೇನ್ನನಕ್ಷತ್ರಂ' ಎಂಬ ವಚನಾನುಸಾರವಾಗಿ ಸೋಮಕಾಲವನ್ನು ಅನುಸರಿಸಿಯೇ ಆಧಾನವನ್ನು ಮಾಡಬಹುದು. ಋತು, ನಕ್ಷತ್ರ, ಇವುಗಳನ್ನು ವಿಮರ್ಶೆಮಾಡಬೇಕಾದ್ದಿಲ್ಲ. ಆದ್ದರಿಂದ ಆಧಾನಕ್ಕೆ ಬೇರೆ ಕಾಲವಿಚಾರವನ್ನು ಮಾಡಲವಶ್ಯಕವಿಲ್ಲ. ಇಂತು ಆಧಾನಕಾಲೋದ್ದೇಶವು. ॥೩೦॥

## (೩೧) ಗ್ರಹಣನಿರ್ಣಯವು.

(೩೧)ಗ್ರಹಣನಿರ್ಣಯವು-ಚಂದ್ರಗ್ರಹಣವಾಗಲಿ, ಸೂರ್ಯಗ್ರಹಣವಾಗಲಿ, ಎಷ್ಟುಕಾಲ ಕಣ್ಣಿಗೆ ಕಾಣಿಸುತ್ತಿರುವುದೋ ಅಷ್ಟುಕಾಲಮಾತ್ರವೇ ಪುಣ್ಯಕಾಲವಾಗುವುದು. ಅಂದರೆ ಸೂರ್ಯಚಂದ್ರರು ಗ್ರಸ್ತಾಸ್ತವನ್ನು ಹೊಂದಿ ಅನಂತರದಲ್ಲಿ ದ್ವೀಪಾಂತರದಲ್ಲಿ (ಬೇರೆ ದೇಶಗಳಲ್ಲಿ) ಗ್ರಹಣವನ್ನು ಪಡೆದಿದ್ದಾಗ್ಯೂ, ದೃಷ್ಟಿಗೆ ಗೋಚರವಾಗದಿರುವುದರಿಂದ ಪುಣ್ಯಕಾಲವಿಲ್ಲ.

### —ಗ್ರಹಣಪರ್ವಕಾಲವು—

ಸೂರ್ಯಚಂದ್ರರಿಗೆ ಮೇಘ ಮೊದಲಾದವು ಅಡ್ಡವಾಗಿ ಮುಚ್ಚಿಕೊಂಡು ಗ್ರಹಣವು ಕಾಣಿಸದಿದ್ದರೆ ಶಾಸ್ತ್ರಸಿದ್ಧಾಂತಗಳಿಂದ ಸ್ಪರ್ಶಕಾಲ ಮೋಕ್ಷಕಾಲಗಳನ್ನು ನಿಶ್ಚಯಿಸಿ ಆಯಾ ಕಾಲಗಳಲ್ಲಿ ಸ್ನಾನ, ದಾನಾದಿಗಳನ್ನು ನಡೆಯಿಸಬೇಕು. ಭಾನುವಾರದಲ್ಲಿ ಸೂರ್ಯಗ್ರಹಣವೂ, ಸೋಮವಾರದಲ್ಲಿ ಚಂದ್ರಗ್ರಹಣವೂ ಆದರೆ 'ಚೂಡಾಮಣಿ' ಯೆನಿಸಿಕೊಳ್ಳುವುದು. ಆಗ ಮಾಡುವ ದಾನಾದಿಗಳಿಂದ ಅಪರಿಮಿತವಾದ ಪುಣ್ಯವು ಲಭಿಸುವುದು. ಗ್ರಹಣದಲ್ಲಿ ಸ್ಪರ್ಶಕಾಲದಲ್ಲಿ (ಹಿಡಿವಾಗ) ಸ್ನಾನಮಾಡಬೇಕು. ಮಧ್ಯಕಾಲದಲ್ಲಿ ಹೋಮ, ದೇವತಾಪೂಜೆ, ಶ್ರಾದ್ಧ, ಇವುಗಳನ್ನು ಮಾಡತಕ್ಕದ್ದು. ಬಿಡುವುದಕ್ಕೆ ಪ್ರಾರಂಭವಾದಾಗ, ದಾನಾದಿಗ

ಳನ್ನೂ, ಬಿಟ್ಟಮೇಲೆ (ಮೋಕ್ಷವಾದಮೇಲೆ) ಸ್ನಾನವನ್ನೂ ಕ್ರಮವಾಗಿ ಮಾಡಬೇಕು. ಸ್ನಾನಮಾಡುವ ಜಲಗಳಲ್ಲಿ ತಾರತಮ್ಯವುಂಟು. ಹೇಗಂದರೆ—

ಶೀತ ಮುಷ್ಣೋದಕಾತ್ಪುಣ್ಯ ಮಪಾರಕ್ಯಂ ಪರೋದಕಾತ್।
ಭೂಮಿಷ್ಠಮುದ್ಧೃತಾ ತ್ಪುಣ್ಯಂ ತತಃ ಪ್ರಸ್ರವಣೋದಕಂ ॥೧॥
ತತೋಽಪಿಸಾರಸಂ ಪುಣ್ಯಂ ತತಃ ಪುಣ್ಯಂನದೀಜಲಂ ।
ತತಸ್ತೀರ್ಥನದೀಗಂಗಾ ಪುಣ್ಯಾ ಪುಣ್ಯಸ್ತತೋಽಂಬುಧಿಃ ॥೨॥

ಅಂದರೆ—ಬಿಸಿನೀರಿಗಿಂತಲೂ ತಣ್ಣೀರು ಗ್ರಹಣಸ್ನಾನಕ್ಕೆ ಉತ್ತಮವಾದದ್ದು, ಬೇರೊಬ್ಬರ ಮನೆಯ ನೀರಿಗಿಂತಲೂ ತಮ್ಮ ತಮ್ಮ ಮನೆಯ ನೀರು ಶ್ರೇಷ್ಠವಾದದ್ದು. ಪಾತ್ರೆಯಲ್ಲಿ ತುಂಬಿಕೊಂಡು ಸ್ನಾನಮಾಡುವುದಕ್ಕಿಂತಲೂ ನೆಲದಲ್ಲಿ ನಿಂತಿರುವುದರಲ್ಲಿ ಸ್ನಾನವು ಪ್ರಶಸ್ತವಾದದ್ದು. ಅದಕ್ಕಿಂತಲೂ ಹರಿವನೀರು ಯೋಗ್ಯವಾದದ್ದು ॥ ೧ ॥ ಅದಕ್ಕಿಂತಲೂ ಸರೋವರದ (ಕೆರೆ) ನೀರುಶುದ್ಧವಾದದ್ದು. ಅದಕ್ಕಿಂತಲೂ ನದಿಯ ನೀರು ಪುಣ್ಯತಮವಾದದ್ದು. ಅದರಲ್ಲಿಯೂ (ನದಿಗಳಲ್ಲಿ) ಗಂಗಾನದಿಯ ಜಲವು ಅತ್ಯುತ್ತಮವಾದದ್ದು. ಅದಕ್ಕಿಂತಲೂ ಸಮುದ್ರೋದಕವು ಅತ್ಯಂತಶ್ರೇಷ್ಠವಾದದ್ದು. ॥೨॥

## ಸ್ನಾನನಿರ್ಣಯವು.

ಗ್ರಹಣಕಾಲದಲ್ಲಿ ಸಚೈಲಸ್ನಾನವನ್ನು (ಉಟ್ಟ ಹೊದೆದ ಬಟ್ಟೆಗಳನ್ನು ತೆಗೆದು ಬೇರೆಬಟ್ಟೆಗಳನ್ನು ಸುತ್ತಿಕೊಳ್ಳದೆ) ಮಾಡಬೇಕು. ಸಚೇಲಸ್ನಾನವು ಮೋಕ್ಷಕಾಲದಲ್ಲಿ ಮಾಡಬೇಕಾದದ್ದೆಂದು ಕೆಲವರು. ಮೋಕ್ಷಸ್ನಾನವನ್ನು ಮಾಡದಿದ್ದರೆ ಸೂತಕಿತ್ವವು (ಮೈಲಿಗೆ) ಹೋಗುವುದಿಲ್ಲ. ಗ್ರಹಣದಲ್ಲಿ ಅಮಂತ್ರಕವಾಗಿ (ವಾರುಣಾದಿ ಮಂತ್ರೋಚ್ಚಾರಣೆಮಾಡದೆ) ಸ್ನಾನಮಾಡಬೇಕು. ಸುವಾಸಿನಿಯರು ಶಿರಸ್ಸ್ನಾನಮಾಡಬೇಕಾದ್ದಿಲ್ಲ ಕಂಠಸ್ನಾನಮಾಡಿದರೂ ಮಾಡಬಹುದು, ಆದರೆ ಯೋಗ್ಯರಾದ ಸ್ತ್ರೀಯರು ಗ್ರಹಣಕಾಲದಲ್ಲಿ ಶಿರಸ್ಸ್ನಾನವನ್ನು ಮಾಡುತ್ತಾರೆ. ಜಾತಾಶೌಚಮೃತಾ ಶೌಚಗಳಲ್ಲಿ ಗ್ರಹಣ ನಿಮಿತ್ತವಾದ ಸ್ನಾನ, ದಾನ, ಶ್ರಾದ್ಧಾದಿಗಳನ್ನು ಮಾಡಲೇ ಬೇಕು.

ಸ್ನಾನೇ ನೈಮಿತ್ತಿಕೇ ಪ್ರಾಪ್ತೇ ನಾರೀ ಯದಿರಜಸ್ವಲಾ ।
ಪಾತ್ರಾನ್ತರಿತತೋಯೇನ ಸ್ನಾನಂ ಕೃತ್ವಾವ್ರತಂಚರೇತ್ ॥೧॥
ನವಸ್ತ್ರಪೀಡನಂಕುರ್ಯಾನ್ನಾನ್ಯದ್ವಾಸಶ್ಚಧಾರಯೇತ್ ॥

ಎಂದರೆ—ಗ್ರಹಣವೊದಲಾದ ನಿಮಿತ್ತ (ಕಾರಣ)ಗಳಿಂದ ಸ್ನಾನ ಮಾಡಬೇಕಾಗಿ ಬಂದಕಾಲಗಳಲ್ಲಿ ಸ್ತ್ರೀಯು ರಜಸ್ವಲೆಯಾಗಿದ್ದರೆ ಪಾತ್ರೆಯಲ್ಲಿ ತುಂಬಿದ ನೀರಿನಲ್ಲಿ ಸ್ನಾನಮಾಡಿ (ಭೂಸ್ಪರ್ಶವುಳ್ಳ ನೀರಿನಲ್ಲಿ ಸ್ನಾನಮಾಡದೆ) ಉಪವಾಸಾದಿ ವ್ರತಗಳನ್ನು ಮಾಡಬೇಕು ॥೧॥ ತನ್ನ ಬಟ್ಟೆಗಳನ್ನು ಹಿಂಡಲೂ ಕೂಡದು, ಬೇರೆ ಬಟ್ಟೆಗಳನ್ನು ಧರಿಸಲೂ ಕೂಡದು ॥ ಮೂರುರಾತ್ರಿಗಳು ಅಥವಾ ಒಂದುರಾತ್ರಿ ಉಪವಾಸಮಾಡಿ ಗ್ರಹಣದಲ್ಲಿ ಸ್ನಾನದಾನಾದಿಗಳನ್ನು ಆಚರಿಸಿದರೆ ಮಹಾಫಲವು ಪ್ರಾಪ್ತವಾಗುವುದು. ಒಂದುರಾತ್ರಿ ಉಪವಾಸಮಾಡಬೇಕಾದರೆ ಗ್ರಹಣವಾಗುವ ದಿನದ ಪೂರ್ವದಿನದಲ್ಲಿ ಮಾಡಬೇಕೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಗ್ರಹಣಕ್ಕೆ ಸೇರಿದ ಒಂದು ಹಗಲುರಾತ್ರಿಗಳಲ್ಲಿ ಉಪವಾಸವೆಂದು ಮತ್ತೆ ಕೆಲವರು ಹೇಳುವರು. ಪುತ್ರವಂತನಾದ ಗೃಹಸ್ಥನಿಗೆ ಗ್ರಹಣ ಸಂಕ್ರಾನ್ತಿವೊದಲಾದುವುಗಳಲ್ಲಿ ಉಪವಾಸವಿಲ್ಲ. ಪುತ್ರವಂತನೆಂಬುದರಿಂದ ಹೆಣ್ಣುಮಕ್ಕಳುಳ್ಳವನೂ ಉಪವಾಸಮಾಡಕೂಡದೆಂದು ಕೆಲವರು. ಗ್ರಹಣಕಾಲದಲ್ಲಿ ದೇವತರ್ಪಣ, ಪಿತೃತರ್ಪಣಗಳನ್ನು ಮಾಡಬೇಕೆಂಬುದು ಕೆಲವರ ಮತವು. 'ಸರ್ವೇಷಾಮೇವವರ್ಣಾನಾಂ ಸೂತಕಂರಾಹುದರ್ಶನೆ' ಎಂದರೆ-ಗ್ರಹಣವನ್ನು ನೋಡುವುದರಿಂದ ಎಲ್ಲಜಾತಿಯುವರಿಗೂ ಅಶುಚಿತ್ವವು (ಮೈಲಿಗೆ) ಉಂಟು, ಆದ್ದರಿಂದ ಗ್ರಹಣಕಾಲದಲ್ಲಿ ತಾವು ಮುಟ್ಟಿಕೊಂಡಿದ್ದ ಬಟ್ಟೆವೊದಲಾದವನ್ನು ಒಗೆವುದು ವೊದಲಾದ್ದರಿಂದ ಶುದ್ಧಿಮಾಡಬೇಕು, ಗ್ರಹಣದಲ್ಲಿ ಗೋದಾನ, ಭೂದಾನ, ಸುವರ್ಣದಾನ ವೊದಲಾದ ದಾನಗಳನ್ನು ಮಾಡಿದರೆ ಬಹಳ ಪುಣ್ಯವುಂಟು. ತಪಸ್ಸೂ, ಜ್ಞಾನವೂ,ಇವೆರಡೂ ಉಳ್ಳ ಪಾತ್ರವು ದಾನಕ್ಕೆ ಯೋಗ್ಯವಾದದ್ದು ಸತ್ಪಾತ್ರದಲ್ಲಿ ಮಾಡಿದ ದಾನವು ಅತಿಶಯವಾದ ಪುಣ್ಯವನ್ನುಂಟುಮಾಡುವುದು.

ಸರ್ವಂಗಂಗಾಸಮಂತೋಯಂ ಸರ್ವೆವ್ಯಾಸಸಮಾದ್ವಿಜಾಃ ॥
ಸರ್ವಂಭೂಮಿಸಮಂದಾನಂ ಗ್ರಹಣೇಚಂದ್ರಸೂರ್ಯಯೋಃ॥೧॥

ಎಂದರೆ—ಚಂದ್ರ ಸೂರ್ಯಗ್ರಹಣಕಾಲದಲ್ಲಿ ಸ್ನಾನವಿಷಯದಲ್ಲಿ ಎಲ್ಲಾ ಉದಕಗಳೂ ಗಂಗಾನದಿಗೆ ಸಮಾನವಾದ ಮಹಿಮೆಯುಳ್ಳವು. ಎಲ್ಲಾ ಬ್ರಾಹ್ಮಣರೂ ವ್ಯಾಸಮಹರ್ಷಿಗಳಿಗೆ ಸಮಾನವಾದ ಯೋಗ್ಯವಾದ ದಾನಪಾತ್ರಗಳು,ಸಾಮಾನ್ಯವಾದ ದಾನಗಳೂ ಭೂದಾನಕ್ಕೆ ಸದೃಶವಾದ ಫಲವನ್ನೇ ಕೊಡುವುವು. ಎಂದುಭಾವವು ॥೧॥ ಹೀಗೆ ಹೇಳಿರುವುದು ಮುಖ್ಯವಾಗಿ ಗ್ರಹಣಕಾಲದಲ್ಲಿ ಮಾಡುವ ಸ್ನಾನದಾನಾದಿಗಳು ಪುಣ್ಯವನ್ನುಂಟು ಮಾಡತಕ್ಕವೆಂದು ಸೂಚಿಸುವುದಕ್ಕೆಂದು ತಿಳಿಯತಕ್ಕದ್ದು. ಆದಕಾರಣ

### ದಾನಪಾತ್ರವಿಚಾರವು.

ಸಮ ಮಬ್ರಾಹ್ಮಣೇದಾನಂ ದ್ವಿಗುಣಂ ಬ್ರಾಹ್ಮಣಬ್ರುವೇ ।
ಶ್ರೋತ್ರಿಯೇಶತಸಾಹಸ್ರಂ ಪಾತ್ರೇತ್ವಾನಂತ್ಯಮಶ್ನುತೇ ॥೧॥

ಎಂದರೆ—ಬ್ರಾಹ್ಮಣಜಾತಿಯಲ್ಲಿ ಮಾತ್ರಹುಟ್ಟಿ ಗರ್ಭಾಧಾನಾದಿ ಸಂಸ್ಕಾರಹೀನನಾದ ಬ್ರಾಹಣನಲ್ಲಿ ಮಾಡಿದದಾನಕ್ಕೆ ಅದಕ್ಕೆ ತಕ್ಕಷ್ಟೇ ಫಲವುಂಟಾಗುವುದು. ಸಂಸ್ಕಾರಗಳನ್ನು ಮಾತ್ರಪಡೆದು ವೇದಾಧ್ಯಯನ ಮಾಡದ ಸಾಮಾನ್ಯನಾದ ಬ್ರಾಹ್ಮಣನಲ್ಲಿ ಮಾಡಿದ ದಾನಕ್ಕೆ ಎರಡರಷ್ಟು ಫಲವುಂಟು. ವೇದಾಧ್ಯಯನ ಸಂಪನ್ನನಾದ ಬ್ರಾಹ್ಮಣನಿಗೆ ಮಾಡಿದ ದಾನವು ಒಂದಕ್ಕೆ ಲಕ್ಷಪಾಲಿನಷ್ಟು ಫಲವನ್ನು ಕೊಡುವುದು, ಸತ್ಪಾತ್ರದಲ್ಲಿ ಮಾಡಿದ ದಾನವು ಅಪರಿಮಿತವಾದ ಫಲವನ್ನುಕಲ್ಪಿಸುವುದು ಎಂದರ್ಥ. ಹೀಗೆ ಪಾತ್ರಕ್ಕೆತಕ್ಕಂತೆ ಹೆಚ್ಚುಕಡಮೆ ಫಲಗಳನ್ನು ಕೊಡುವುದೆಂದುತಿಳಿಯಬೇಕು. ಗ್ರಹಣಕಾಲದಲ್ಲಿ ಆಮಶ್ರಾದ್ಧ(ಬೇಯಿಸದೆಹಸಿಯುದಾಗಿರುವ ಅಕ್ಕಿ ಮೊದಲಾದುವುಗಳಿಂದ ಮಾಡುವುದು) ವನ್ನಾಗಲಿ, ಹಿರಣ್ಯಶ್ರಾದ್ಧವನ್ನಾಗಲಿ ಮಾಡಬೇಕು ಶಕ್ತಿಯುಳ್ಳವನು ಅನ್ನಶ್ರಾದ್ಧವನ್ನು ಮಾಡಬೇಕು. ಸೂರ್ಯಗ್ರಹಣಕಾಲದಲ್ಲಿ ತೀರ್ಥಯಾತ್ರಾರ್ಥವಾದ ಶ್ರಾದ್ಧದಂತೆ ಘೃತಪ್ರಧಾನ(ಹೆಚ್ಚಾದ ತುಪ್ಪದಿಂದಕೂಡಿದ) ವಾದ ಅನ್ನದಿಂದ ಶ್ರಾದ್ಧಮಾಡಬೇಕು. ಗ್ರಹಣಕಾಲದಲ್ಲಿ ಶ್ರಾದ್ಧ ಭೋಜನಮಾಡುವವನಿಗೆ ಪ್ರಬಲವಾದ ದೋಷವು ಪ್ರಾಪ್ತವಾಗುವದು. ಯೋಗ್ಯತೆಯುಳ್ಳ

ವರುಗ್ರಹಣಕಾಲದಲ್ಲಿ ತುಲಾಭಾರವನ್ನು ತೂಗಿ ಬ್ರಾಹ್ಮಣರಿಗೆ ದಾನ ಮಾಡಬೇಕು.

ಮಂತ್ರೋಪದೇಶಾದಿಗಳ ವಿಚಾರವು.

ಚಂದ್ರಸೂರ್ಯಗ್ರಹೇ ತೀರ್ಥೇ ಮಹಾಪರ್ವಾದಿಕೇ ತಥಾ ।
ಮಂತ್ರದೀಕ್ಷಾಂ ಪ್ರಕುರ್ವಾಣೋಮಾಸಕ್ಷಾರ್ದೀನ್ನಶೋಧಯೇತ್

ಎಂದರೆ—ಚಂದ್ರಸೂರ್ಯಗ್ರಹಣಕಾಲಗಳಲ್ಲಿಯೂ, ಪುಣ್ಯತೀರ್ಥಗಳಲ್ಲಿಯೂ, ಮಹಾಪರ್ವದಿನಗಳಲ್ಲಿಯೂ, ಮಂತ್ರೋಪದೇಶವನ್ನೂ ಮಂತ್ರೋಚ್ಚಾರಣಾರ್ಥವಾದ ದೀಕ್ಷೆಯನ್ನೂ ಪಡೆಯತಕ್ಕವರು ಮಾಸ, ನಕ್ಷತ್ರ, ಇವೇ ಮೊದಲಾದುವನ್ನು ವಿಚಾರಿಸಬೇಕಾದದ್ದಿಲ್ಲ. ಮಂತ್ರದೀಕ್ಷಾದಿವಿಧಿಯನ್ನು ತಂತ್ರವನ್ನು ನೋಡಿ ತಿಳಿಯತಕ್ಕದ್ದು

ಯುಗೇಯುಗೇತು ದೀಕ್ಷಾಸೀದುಪದೇಶಃ ಕಲೌಯುಗೇ ।
ಚನ್ದ್ರಸೂರ್ಯಗ್ರಹೇತೀರ್ಥೇ ಸಿದ್ಧಕ್ಷೇತ್ರೇ ಶಿವಾಲಯೇ ॥೧॥

ಎಂದರೆ—ಕೃತಮೊದಲಾದ ಇತರಯುಗಗಳಲ್ಲಿ ಮಂತ್ರದೀಕ್ಷೆಗಳು ನಡೆದವು, ಕಲಿಯುಗದಲ್ಲಿ ಮಂತ್ರೋಪದೇಶಗಳು ನಡೆಯತಕ್ಕದ್ದು, ಈ ಮಂತ್ರೋಪದೇಶವು, ಚಂದ್ರಸೂರ್ಯರ ಗ್ರಹಣಕಾಲದಲ್ಲಿ ಪುಣ್ಯತೀರ್ಥಗಳಲ್ಲಿಯೂ, ಸಿದ್ಧರ ಪುಣ್ಯಕ್ಷೇತ್ರಗಳಲ್ಲಿಯೂ, ಶಿವದೇವಸ್ಥಾನಗಳಲ್ಲಿಯೂ ನಡೆಯಬೇಕೆಂದು ಭಾವವು॥೧॥ 'ಮಂತ್ರಮಾತ್ರ ಪ್ರಕಥನ ಮುಪದೇಶಸ್ಸಉಚ್ಯತೇ' ಮಂತ್ರವನ್ನು ಮಾತ್ರ ಹೇಳಿಕೊಡುವದು ಉಪದೇಶವೆನಿಸುವುದು, ಮಂತ್ರೋಪದೇಶವನ್ನು ಪಡೆವುದಕ್ಕೆ ಸೂರ್ಯಗ್ರಹಣಕಾಲವೇ ಮುಖ್ಯವಾದದ್ದು ಚಂದ್ರಗ್ರಹಣಕಾಲದಲ್ಲಿ ಉಪದೇಶವನ್ನು ತೆಗೆದುಕೊಳ್ಳುವುದರಿಂದ ದಾರಿದ್ರ್ಯಾದಿಗಳು ಸಂಭವಿಸುವುದೆಂದು ಕೆಲವರು ಹೇಳುತ್ತಾರೆ.

ಚಂದ್ರಸೂರ್ಯೋಪರಾಗೇಚಸ್ನಾತ್ವಾ ಪೂರ್ವಮುಪೋಷಿತಃ।
ಸ್ಪರ್ಶಾದಿ ಮೋಕ್ಷಪರ್ಯಂತಂ ಜಪೇನ್ಮಂತ್ರಂ ಸಮಾಹಿತಃ ॥೧॥
ಜಪಾದ್ದಶಾಂಶತೋಹೋಮ ಸ್ತಥಾ ಹೋಮಾಚ್ಚ ತರ್ಪಣಂ।
ಹೋಮಾಶಕ್ತೌ ಜಪಂಕುರ್ಯಾದ್ಧೋಮ ಸಂಖ್ಯಾಚತುರ್ಗುಣಂ॥೨

ಎಂದರೆ-ಚಂದ್ರಸೂರ್ಯಗ್ರಹಣದಿನದ ಪೂರ್ವದಿನದಲ್ಲಿ ಉಪವಾಸ

ಮಾಡಿಗ್ರಹಣದಿನದಲ್ಲಿ ಸ್ಪರ್ಶವಾದದ್ದು(ಹಿಡಿವುದಕ್ಕೆ ಪ್ರಾರಂಭವಾದದ್ದು) ಮೊದಲು ಮೋಕ್ಷವಾಗುವ (ಬಿಡುವ)ವರೆಗೂ ಶಾಂತಚಿತ್ತನಾಗಿ ಯಥಾಶಕ್ತಿ ಮಂತ್ರಜಪವನ್ನು ಮಾಡಬೇಕು. ॥೧॥ ಜಪವು ಪೂರೈಸಿದ ಮೇಲೆ ಜಪಸಂಖ್ಯೆಯ ಹತ್ತರಷ್ಟು ಹೋಮಗಳನ್ನೂ ಹೋಮದ ಹತ್ತರಷ್ಟು ತರ್ಪಣವನ್ನೂ ಮಾಡಬೇಕು. ಹೋಮಮಾಡುವಶಕ್ತಿ ಇಲ್ಲದಿದ್ದರೆ ಹೋಮಸಂಖ್ಯೆಯ ನಾಲ್ಕರಷ್ಟು ಜಪವನ್ನು ಮಾಡಬೇಕು. ॥೨॥ ಮೂಲಮಂತ್ರವನ್ನು ಉಚ್ಚಾರಣೆಮಾಡಿ, ಆ ಮಂತ್ರದ ಕೊನೆಯಲ್ಲಿ ದ್ವಿತೀಯಾಂತವಾಗಿ ಮಂತ್ರೋಕ್ತದೇವತೆಯ ನಾಮವನ್ನು ಉಚ್ಚರಿಸಿ (ಅಮುಕಾಂದೇವತಾಮಹಂತರ್ಪಯಾಮಿನಮಃ)ಈ ದೇವತೆಯನ್ನು ಕುರಿತುನಾನು ತರ್ಪಣಮಾಡುತ್ತೇನೆ, ನಮಸ್ಕಾರವು ಎಂಬದಾಗಿ ಯವಾಕ್ಷತೆಮೊದಲಾದವುಗಳಿಂದ ಕೂಡಿದ ಜಲಾಂಜಲಿಗಳಿಂದ, ಹೋಮದ ದಶಗುಣವಾಗಿ ತರ್ಪಣಮಾಡಬೇಕು. ಹೀಗೆ ನಮಶ್ಶಬ್ದವು ಕೊನೆಯಲ್ಲಿ ಬರುವಂತೆ ಮೂಲಮಂತ್ರೋಚ್ಚಾರಣೆ ಮಾಡಿ (ಅಮುಕಾಂದೇವತಾಮಹಮಭಿಷಿಂಚಾಮ್ಯನೇನ) ಈ ಉದಕದಿಂದ ಈ ದೇವತೆಯನ್ನು ನಾನು ಅಭಿಷೇಕಮಾಡುತ್ತೇನೆ ಎಂದು ಹೇಳಿ ನೀರನ್ನು ತನ್ನ ತಲೆಯಮೇಲೆ ಪ್ರೋಕ್ಷಿಸಿಕೊಳ್ಳಬೇಕು ಈ ಮಾರ್ಜನೆಯನ್ನು ತರ್ಪಣದ ಹತ್ತರಷ್ಟು ಮಾಡಿಕೊಳ್ಳಬೇಕು. ಮಾರ್ಜನ ಸಂಖ್ಯೆಯ ಹತ್ತರಷ್ಟು ಬ್ರಾಹ್ಮಣರಿಗೆ ಭೋಜನ ಮಾಡಿಸಬೇಕು. ಅಂತು ಮಂತ್ರಪುರಶ್ಚರಣೆಯು, ಜಪ, ಹೋಮ, ತರ್ಪಣ, ಮಾರ್ಜನ, ಬ್ರಾಹ್ಮಣಭೋಜನಗಳೆಂಬ ಐದು ಕರ್ಮಗಳಿಂದ ಕೂಡಿದ್ದು, ತರ್ಪಣಮೊದಲಾದವುಗಳನ್ನು ನಡೆಯಿಸುವುದಕ್ಕಾಗದ ಪಕ್ಷದಲ್ಲಿ ಆಯಾಕರ್ಮಗಳ ನಾಲ್ಕರಷ್ಟು ಜಪವನ್ನೇ ಮಾಡಬೇಕು ಗ್ರಹಣಕಾಲದಲ್ಲಿ ಮಾಡಬೇಕಾದ ಈ ಮಂತ್ರಪುರಶ್ಚರಣಕ್ರಮವು ಗ್ರಸ್ತೋದಯ ಗ್ರಸ್ತಾಸ್ತಗ್ರಹಣಗಳಲ್ಲಿ ನಡೆಯಲಾಗದು. ಪುರಶ್ಚರಣಾಂಗವಾದ ಉಪವಾಸವನ್ನು ಪುತ್ರವಂತರಾದ ಗೃಹಸ್ಥರೂ ಸಹ ಮಾಡಬೇಕು. ಪುರಶ್ಚರಣೆ ಮಾಡುವವನು ಗ್ರಹಣನಿಮಿತ್ತವಾದ ಸ್ನಾನ, ದಾನ, ಮೊದಲಾದುವನ್ನು ಬಿಡುವುದರಿಂದಲೂ ಪ್ರತ್ಯವಾಯುವುಂಟಾಗುವುದರಿಂದ ತನ್ನ ಹೆಂಡತಿ, ಮಗ, ಮೊದಲಾದ ಪ್ರತಿನಿಧಿಗಳಿಂದ (ಬದಲು) ಈ ನೈಮಿತ್ತಿಕಕರ್ಮಗಳನ್ನು ಮಾಡಿಸಬೇಕು.

## ಪುರಶ್ಚರಣವಿಧಿಯು.

ಪುರಶ್ಚರಣಮಾಡುವವನು, ಸ್ಪರ್ಶವಾಗುವುದಕ್ಕೆ ಮುಂಚೆ ಸ್ನಾನ ಮಾಡಿ, "ಇಂಥ ಗೋತ್ರದ ಇಂಥ ಹೆಸರುಳ್ಳ ನಾನು ಸೂರ್ಯ, ಅಥವಾ ಚಂದ್ರಗ್ರಹಣಕಾಲದಲ್ಲಿ, ಈ ದೇವತೆಯಿಂದ, ಈ ಮಂತ್ರಸಿದ್ಧಿಯುಂಟಾಗಬೇಕೆಂಬ ಅಪೇಕ್ಷೆಯುಳ್ಳವನಾಗಿ, ಗ್ರಾಸವಾಗುವುದಕ್ಕೆ ಪ್ರಾರಂಭವಾದದ್ದು ಮೊದಲು ಮೋಕ್ಷವಾಗುವವರೆಗೂ ಈ ಮಂತ್ರಜಪರೂಪವಾದ ಪುರಶ್ಚರಣೆಯನ್ನು ಮಾಡುತ್ತೇನೆ" ಎಂದು ಸಂಕಲ್ಪವನ್ನು ಮಾಡಿ ಆಸನ ಪ್ರಾಣಾಯಾಮಗಳನ್ನೂ, ಅಂಗನ್ಯಾಸಕರನ್ಯಾಸಗಳನ್ನೂ ಗ್ರಹಣ ಸ್ಪರ್ಶವಾಗುವುದಕ್ಕಿಂತ ಮುಂಚೆಯೇ ಮಾಡಿಕೊಂಡಿದ್ದು, ಸ್ಪರ್ಶವಾದದ್ದು ಮೊದಲು ಮೋಕ್ಷವಾಗುವವರೆಗೂ ಮೂಲಮಂತ್ರ ಜಪವನ್ನು ಮಾಡಬೇಕು. ಅನಂತರದಲ್ಲಿ ಮಾರನೆಯ ದಿನದಲ್ಲಿ ಸ್ನಾನಾದಿ ನಿತ್ಯಕರ್ಮಗಳನ್ನು ಮಾಡಿ, "ಈ ಮಂತ್ರ ಸಿದ್ಧಿಗಾಗಿ, ಈ ಮಂತ್ರೋಪದೇಶ ಕಾಲದಲ್ಲಿ ನಾನು ಮಾಡಿದ ಇಷ್ಟು ಸಂಖ್ಯೆಯುಳ್ಳ ಪುರಶ್ಚರಣರೂಪವಾದ ಜಪಗಳು ಸಾಂಗವಾಗುವುದಕ್ಕಾಗಿ, ಅದರ ಹತ್ತರಷ್ಟು ಹೋಮವನ್ನೂ, ಅದರ ಹತ್ತರಷ್ಟು ತರ್ಪಣಗಳನ್ನೂ, ಅದರ ಹತ್ತರಷ್ಟು ಮಾರ್ಜನೆಗಳನ್ನೂ, ಅದರ ಹತ್ತರಷ್ಟು ಬ್ರಾಹ್ಮಣ ಭೋಜನಗಳನ್ನೂ ನಡೆಯಿಸುತ್ತೇನೆ" ಎಂದು ಸಂಕಲ್ಪಮಾಡಿ ಹೋಮಾದಿಗಳನ್ನಾಗಲಿ, ಅಥವಾ ಆಯಾಕರ್ಮಗಳ ನಾಲ್ಕರಷ್ಟು ಇಲ್ಲವೇ ಎರಡರಷ್ಟು ಜಪವನ್ನಾಗಲೀ ಮಾಡಬೇಕು. ಗ್ರಹಣಕಾಲದಲ್ಲಿ, ಮಂತ್ರೋಪದೇಶವನ್ನು ಪಡೆದವನಿಂದ ನಿಯಮಿಸಲ್ಪಟ್ಟ ಪುತ್ರ ಮೊದಲಾದವನು "ಇಂಥ ಗೋತ್ರದವನಾದ, ಈ ಹೆಸರುಳ್ಳ ಇಂಥವನಿಗೆ ಗ್ರಹಣ ಸ್ಪರ್ಶಸ್ನಾನದಿಂದುಂಟಾಗುವ ಶ್ರೇಯಸ್ಸಿಗಾಗಿ ಸ್ಪರ್ಶಸ್ನಾನವನ್ನು ಮಾಡುತ್ತೇನೆ" ಮೊದಲಾದ ಸಂಕಲ್ಪಗಳನ್ನು ಮಾಡಿಕೊಂಡು ಪ್ರತಿನಿಧಿಯಾಗಿ ಸ್ನಾನ ದಾನಾದಿಗಳನ್ನು ಮಾಡಬೇಕು. ಪುರಶ್ಚರಣೆಯನ್ನು ಮಾಡದಿದ್ದವರೂ ಸಹ, ತಮಗೆ ಗುರೂಪದೇಶವಾಗಿರುವ ತಮ್ಮ ತಮ್ಮ ಇಷ್ಟದೇವತಾಮಂತ್ರಜಪವನ್ನೂ, ಗಾಯತ್ರೀ ಮಂತ್ರಜಪವನ್ನೂ, ಗ್ರಹಣಕಾಲದಲ್ಲಿ ಅವಶ್ಯವಾಗಿ ಮಾಡಬೇಕು. ಹಾಗಿಲ್ಲದಿದ್ದರೆ ಮಂತ್ರಕ್ಕೆ ಮಾಲಿನ್ಯವುಂಟಾಗುವುದು.

(ವೀರ್ಯವತ್ತಾಗಿರುವುದಿಲ್ಲ) ಗ್ರಹಣಕಾಲದಲ್ಲಿ ಮಲಗುವವನು ರೋಗ ಗ್ರಸ್ತನಾಗುವನು. ಮೂತ್ರೋತ್ಸರ್ಜನ ಮಾಡುವವನು, ದರಿದ್ರನಾಗುವನು. ಪುರೀಷೋತ್ಸರ್ಗಮಾಡಿದವನು ಕ್ರಿಮಿಯಾಗಿ ಹುಟ್ಟುವನು. ಸಂಭೋಗಮಾಡಿದವನು ಊರಹಂದಿಯಾಗುವನು. ಅಭ್ಯಂಜನಸ್ನಾನಮಾಡುವವನು ಕುಷ್ಟರೋಗಿ ಯಾಗುವನು, ಭೋಜನಮಾಡುವವನು ನರಕ ಭಾಜನನಾಗುವನು.

ಗ್ರಹಣಕಾಲದಲ್ಲಿ ಬಿಡಬೇಕಾದವುಗಳು.

ಗ್ರಹಣಕ್ಕೆ ಪೂರ್ವದಲ್ಲಿ ಅಟ್ಟ ಅನ್ನವನ್ನು ಗ್ರಹಣಾನಂತರದಲ್ಲಿ ಬಿಟ್ಟುಬಿಡಬೇಕು. ಹೀಗೆ ಗ್ರಹಣಕಾಲದಲ್ಲಿ ತಂಬಟ್ಟನೀರನ್ನು ಕುಡಿದರೆ ಪಾದಕೃಚ್ಛ್ರ (ಕೃಚ್ಛ್ರದ ¼ ಭಾಗ) ವನ್ನು ಪ್ರಾಯಶ್ಚಿತ್ತವಾಗಿ ಹೇಳಿರುವುದರಿಂದ ಅಂತಹ ನೀರನ್ನೂ ಬಿಡಬೇಕು. ಗಂಜಿ, ಮಜ್ಜಿಗೆ, ಎಣ್ಣೆ ತುಪ್ಪ ಇವುಗಳಿಂದ ಪಕ್ವಮಾಡಿದ್ದ ಅನ್ನ, ಹಾಲು; ಇವುಗಳನ್ನು ಗ್ರಹಣಕ್ಕಿಂತ ಪೂರ್ವದಲ್ಲಿ ಮಾಡಿಟ್ಟದ್ದಾಗ್ಯೂ ಗ್ರಹಣಾನಂತರದಲ್ಲಿ ಸ್ವೀಕರಿಸಬಹುದು. ಹಾಲು, ಮೊಸರು, ಮಜ್ಜಿಗೆ, ಮೊದಲಾದ ಗೋರಸಗಳಿಗೆ ಸ್ವಲ್ಪ ತುಪ್ಪವನ್ನು ಹಾಕಿ, ಗ್ರಹಣಕಾಲದಲ್ಲಿ ದರ್ಭೆಯಿಂದ ಮುಚ್ಚಿಟ್ಟು ಅನಂತರದಲ್ಲಿ ಉಪಯೋಗಿಸಬಹುದು.

ಗ್ರಹಣವೇಧ ವಿಚಾರವು.

ಸೂರ್ಯಗ್ರಹಣವಾದರೆ ಗ್ರಹಣಕಾಲದ ಹಿಂದಣ ನಾಲ್ಕು ಯಾಮಗಳಿಗೆ ವೇಧೆಯುಂಟಾಗುವುದು, ಚಂದ್ರಗ್ರಹಣದಲ್ಲಿ ಹಿಂದಿನ ಮೂರು ಯಾಮಗಳಿಗೆ ವೇಧೆಯುಂಟು. ಅಂದರೆ ಹಗಲಿನ ಮೊದಲನೆಯ ಯಾಮದಲ್ಲಿ ಸೂರ್ಯಗ್ರಹಣವಾದರೆ ಹಿಂದಣ ರಾತ್ರಿಯ ನಾಲ್ಕು ಯಾಮಗಳಲ್ಲಿ ಊಟಮಾಡಕೂಡದು. ಎರಡನೆಯ ಯಾಮದಲ್ಲಿ ಗ್ರಹಣವಾದರೆ ಹಿಂದಣ ರಾತ್ರಿಯ ಎರಡನೆಯ ಯಾಮ ಮೊದಲಾದುವುಗಳಲ್ಲಿ ಭೋಜನಮಾಡಕೂಡದು. ಹೀಗೆಯೇ ರಾತ್ರಿಯ ಮೊದಲ ಯಾಮದಲ್ಲಿ ಗ್ರಹಣವಾದರೆ ಹಗಲ ಎರಡನೆಯ ಯಾಮಾದಿಗಳಲ್ಲಿ ಭೋಜನವು ಕೂಡದು. ರಾತ್ರಿಯ ಎರಡನೆಯ ಯಾಮಾದಿಗಳಲ್ಲಿ ಗ್ರಹಣವಾದರೆ ಹಗಲಿನಮೂರನೆಯ ಯಾಮಾದಿಗಳಲ್ಲಿ ಭೋಜನವನ್ನು ಬಿಡಬೇಕು. ಬಾಲರು, ವೃದ್ಧರು, ರೋಗಿ

ಗಳು ಇವರ ವಿಷಯದಲ್ಲಿ ಒಂದೂವರೆ ಯಾಮವಾಗಲಿ, ಅಥವಾ ಮೂರು ಮುಹೂರ್ತಕಾಲವಾಗಲಿ ವೇಧೆಯು, ಶಕ್ತನಾದವನು ಗ್ರಹಣ ವೇಧೆಯುಳ್ಳ ಕಾಲದಲ್ಲಿ ಊಟಮಾಡಿದರೆ ಪ್ರಾಯಶ್ಚಿತ್ತರೂಪವಾಗಿ ಮೂರು ದಿನಗಳು ಉಪವಾಸಮಾಡಬೇಕು. ಗ್ರಹಣಕಾಲದಲ್ಲಿಯೇ ಭೋಜನ ಮಾಡಿದರೆ ಪ್ರಾಜಾಪತ್ಯಕೃಚ್ಛ್ರವೇ ಪ್ರಾಯಶ್ಚಿತ್ತವು. ಚಂದ್ರನಿಗೆ ಗ್ರಸ್ತೋದಯವುಂಟಾದರೆ ನಾಲ್ಕು ಯಾಮಗಳಿಗೆ ವೇಧೆಯುಂಟಾಗುವುದರಿಂದ ಆದಿನ ಹಗಲು ಊಟಮಾಡಕೂಡದು, ಪೂರ್ಣಗ್ರಾಸವಾದರೆ ನಾಲ್ಕು ಯಾಮಗಳಿಗೆ ವೇಧೆಯೂ, ಒಂದುಭಾಗ ಗ್ರಾಸವಾದರೆ ಮೂರು ಯಾಮಗಳಿಗೆ ವೇಧೆಯೆಂತಲೂ ಕೆಲವರು ಹೇಳುತ್ತಾರೆ.

ಗ್ರಸ್ತಾಸ್ತಾದಿ ವಿಷಯದಲ್ಲಿ ನಿರ್ಣಯವು.

ಗ್ರಸ್ತಾವೇವಾಸ್ತಮಾನಂತು ರವೀಂದೂ ಪ್ರಾಪ್ನುತೋಯದಿ ।
ಪರೇದ್ಯುರುದಯೇಸ್ನಾತ್ವಾ ಶುದ್ಧೋಭ್ಯವಹರೇನ್ನರಃ ॥೧॥

ಅಂದರೆ—ಸೂರ್ಯಚಂದ್ರರು ಗ್ರಹಣಮೋಕ್ಷವಿಲ್ಲದೆ ಗ್ರಸ್ತರಾಗಿಯೇ ಅಸ್ತವನ್ನು ಹೊಂದಿದರೆ ಎರಡನೆಯ ದಿನದ ಉದಯದಲ್ಲಿ ಸ್ನಾನ ಮಾಡಿ ಪರಿಶುದ್ಧನಾಗಿ ಊಟಮಾಡಬೇಕೆಂದು ಭಾವವು॥೧॥ ಇಲ್ಲಿ ಸ್ನಾನ ಮಾಡಿ ಶುದ್ಧನಾಗಬೇಕೆಂಬುದರಿಂದ ಸ್ನಾನಮಾಡುವುದಕ್ಕಿಂತ ಮುಂಚೆ ಅಶುದ್ಧನೆಂದು ತಿಳಿಯಬರುವುದರಿಂದ ನೀರತರುವದು, ಅಡಿಗೆ ಮಾಡುವುದು, ಇವುಗಳನ್ನು ಶುದ್ಧಬಿಂಬ ದರ್ಶನಾನಂತರದಲ್ಲಿ ಮಾಡಬೇಕಾದ ಸ್ನಾನಕ್ಕಿಂತ ಪೂರ್ವದಲ್ಲಿ ಮಾಡಕೂಡದೆಂದು ತೋರುವುದು. ಸೂರ್ಯಗ್ರಸ್ತಾದಿಗಳಲ್ಲಿ ಪುತ್ರವಂತನಾದ ಗೃಹಸ್ಥನು ಉಪವಾಸಮಾಡಕೂಡದಾದ್ದರಿಂದ, ಅಂಥವನು ಆರುಗಳಿಗೆಯ ವೇಧೆಯನ್ನು ಕಳೆದು ಗ್ರಹಣ ಕಾಲಕ್ಕಿಂತ ಪೂರ್ವದಲ್ಲಿ ಭೋಜನಮಾಡಬೇಕೆಂದು ಕೆಲವರು ಹೇಳುವರು. ಪುತ್ರವಂತನಾದ ಗೃಹಸ್ಥನಾದರೂ ಈ ವಿಷಯದಲ್ಲಿ ಉಪವಾಸವನ್ನೇ ಮಾಡಬೇಕೆಂದು ಹೇಳುವ ಮಾಧವಾಚಾರ್ಯನ ಮತವೇ ಶಿಷ್ಟಾಚಾರವಾಗಿಯೂ ಯುಕ್ತವಾಗಿಯೂ ಇದೆ. ಸೂರ್ಯನ ಗ್ರಸ್ತಾಸ್ತದಲ್ಲಿಯೂ, ಚಂದ್ರನ ಗ್ರಸ್ತೋದಯದಲ್ಲಿಯೂ ಸಹ ಆಹಿತಾಗ್ನಿಯಾದವನು ಅನ್ವಾಧಾನವನ್ನು ಮಾಡಿ ಉದಕದಿಂದ ವ್ರತವನ್ನು ಮಾಡಬೇಕಲ್ಲದೆ

ಊಟವನ್ನು ಮಾಡಕೂಡದು. ಚಂದ್ರನಿಗೆ ಗ್ರಸ್ತಾಸ್ತವುಂಟಾದಾಗ ಮಾರನೆಯದಿನ ಸಂಧ್ಯಾ ಹೋಮಾದಿಗಳನ್ನು ಮಾಡುವುದುದೋಷಾವಹ ವಾದದ್ದಲ್ಲ. ಆವಿಷಯದಲ್ಲಿ, ಶಾಸ್ತ್ರಸಿದ್ಧಾಂತದಿಂದ ಸ್ವಲ್ಪಕಾಲದಲ್ಲಿಯೇ ಗ್ರಹಣಮೋಕ್ಷ ವುಂಟಾಗುವುದೆಂಬುದನ್ನು ನಿಶ್ಚಯಿಸಿ ಮುಕ್ತಿಯಾದಮೇಲೆ (ಬಿಡುವುದು) ಸ್ನಾನ ಮಾಡಿ ಹೋಮಾದಿಗಳನ್ನು ಮಾಡಬೇಕು. ಬಹಳ ಹೊತ್ತಿನಮೇಲೆ ಮೋಕ್ಷವಾಗುವುದಾಗಿದ್ದರೆ, ಹೋಮಕಾಲವು ಅತಿಕ್ರಮಿಸಿ ಹೋಗುವುದಾದ್ದರಿಂದ ಗ್ರಸ್ತೋದಯದ ಹಾಗೆ ಗ್ರಹಣಮಧ್ಯದಲ್ಲಿಯೇ ಸಂಧ್ಯೆಯನ್ನೂ, ಹೋಮವನ್ನೂ ಮಾಡಿ, ಶಾಸ್ತ್ರದಿಂದ ಮೋಕ್ಷಕಾಲವನ್ನು ತಿಳಿದು ಸ್ನಾನಮಾಡಿ ಬ್ರಹ್ಮಯಜ್ಞಮೊದಲಾದ ನಿತ್ಯಕರ್ಮಗಳನ್ನು ಮಾಡಬೇಕೆಂದು ತೋರುವುದು. ದರ್ಶದಲ್ಲಿ ಗ್ರಹಣನಿಮಿತ್ತವಾಗಿ ಮಾಡುವ ಶ್ರಾದ್ಧದಿಂದಲೇ ದರ್ಶಶ್ರಾದ್ಧ, ಸಂಕ್ರಾಂತಿಶಾದ್ಧಗಳು ಚರಿತಾರ್ಥವಾಗುವುವು. (ಪ್ರಸಂಗಸಿದ್ಧಿಯುಳ್ಳವುಗಳಾಗುವವು) (ಪ್ರಸಂಗಸಿದ್ಧವಾದ ಶ್ರಾದ್ಧಗಳನ್ನು ಸಂಕಲ್ಪಾದಿಗಳಲ್ಲಿಯೂ ಉಚ್ಚಾರಣೆ ಮಾಡಬೇಕಾದ್ದಿಲ್ಲವಾದ್ದರಿಂದ ಪ್ರಸಂಗಸಿದ್ಧಿಯೆಂದರೆ ಲೋಪವೆಂದು ಭಾವವು) ಗ್ರಹಣದಿನದಲ್ಲಿ ತಂದೆ ಮೊದಲಾದವರ ಪ್ರತಿಸಾಂವತ್ಸರಿಕ ಶ್ರಾದ್ಧವು ಬಂದರೆ ಸಾಧ್ಯವಾದರೆ ಅನ್ನದಿಂದ ಮಾಡಬೇಕು ಬ್ರಾಹ್ಮಣರು ಮೊದಲಾದುವುಗಳು ದೊರಕದೆ ಅಸಾಧ್ಯವಾದರೆ ಆಮಶ್ರಾದ್ಧವನ್ನಾಗಲಿ ಹೇಮಶ್ರಾದ್ಧವನ್ನಾಗಲಿ ಮಾಡಬೇಕು. ಜನ್ಮರಾಶಿಗೆ ೩, ೬, ೧೧, ೧೧ನೇ ರಾಶಿಗಳಲ್ಲಿ ಗ್ರಹಣವುಂಟಾದರೆ ಶುಭಕರವಾದದ್ದು. ೨, ೭,೯, ೫ನೇ ರಾಶಿಗಳಲ್ಲಾದರೆ ಮಧ್ಯಮವು. ಜನ್ಮದಲ್ಲಿ ಮತ್ತು ೪, ೮, ೧೨ ನೇ ರಾಶಿಗಳಲ್ಲಿ ಆದ ಗ್ರಹಣವು ಅನಿಷ್ಟ ಫಲವನ್ನು ಕೊಡುವುದು. ಯಾವನಿಗೆ ಜನ್ಮರಾಶಿಯಲ್ಲಾಗಲಿ ಜನ್ಮನಕ್ಷತ್ರದಲ್ಲಾಗಲಿ ಗ್ರಹಣವುಂಟಾಗುವುದೋ ಅವನಿಗ ಬಹಳ ಅನಿಷ್ಟಫಲವುಂಟಾಗುವುದು. ಆದಕಾರಣ ಗರ್ಗಸ್ಮೃತಿ ಮೊದಲಾದುವುಗಳಲ್ಲಿ ಹೇಳಿರುವಂತೆ ಶಾಂತಿಯನ್ನು ಮಾಡಬೇಕು. ಅಥವಾ ಬಿಂಬದಾನವನ್ನು ಮಾಡಬೇಕು. ಅದು ಹೇಗೆಂದರೆ-- ಚಂದ್ರಗ್ರಹಣವಾದರೆ ಬೆಳ್ಳಿಯ ಚಂದ್ರಮಂಡಲವನ್ನೂ, ಚಿನ್ನದ ಸರ್ಪಬಿಂಬವನ್ನೂ ಮಾಡಿಸಬೇಕು, ಸೂರ್ಯಗ್ರಹಣವಾದರೆ ಚಿನ್ನದ ಸೂರ್ಯಮಣ್ಡ

ಲವನ್ನೂ, ಸರ್ಪಬಿಂಬವನ್ನೂ ಮಾಡಿಸಬೇಕು. ತಾಮ್ರ ಅಥವಾ ಕಂಚಿನ ಪಾತ್ರೆಯಲ್ಲಿ ತುಪ್ಪವನ್ನು ತುಂಬಿ, ಅದರಲ್ಲಿ ಪ್ರತಿಮೆಗಳನ್ನು ಹಾಕಿ, ಎಳ್ಳು, ವಸ್ತ್ರಗಳು, ದಕ್ಷಿಣೆ, ಇವುಗಳನ್ನೆಲ್ಲಾ ಸಿದ್ಧಮಾಡಿಕೊಂಡು, ದಾನಮಾಡಬೇಕು.

ಗ್ರಹಣದಲ್ಲಿ ಬಿಂಬದಾನಮಾಡುವ ವಿಧಾನವು.

"ನನ್ನ ಜನ್ಮರಾಶಿ ಅಥವಾ ಜನ್ಮನಕ್ಷತ್ರದಲ್ಲಿ ಉಂಟಾಗಿರುವ ಈ ಗ್ರಹಣದಿಂದ ಸಂಭವಿಸಬಹುದಾದ ಅನಿಷ್ಟಗಳೆಲ್ಲವನ್ನೂ ಹೋಗಲಾಡಿಸಿ ಹನ್ನೊಂದನೆಯ ರಾಶಿಯಲ್ಲಿ ಆದ ಗ್ರಹಣದಂತೆ ಶುಭಫಲವನ್ನುಂಟುಮಾಡುವುದಕ್ಕಾಗಿ ಬಿಂಬದಾನಮಾಡುತ್ತೇನೆ" ಎಂದು ಸಂಕಲ್ಪಮಾಡಿ, ಸೂರ್ಯ, ಚಂದ್ರ ರಾಹುಗಳನ್ನು ಧ್ಯಾನಿಸಿ, ನಮಸ್ಕಾರಮಾಡಿ.

ತಮೋಮಯ ಮಹಾಭೀಮ ಸೋಮಸೂರ್ಯ ವಿಮರ್ದನ ।
ಹೇಮತಾರಾಪ್ರದಾನೇನ ಮಮಶಾನ್ತಿಪ್ರದೋಭವ ॥೧॥
ವಿಧುಂತುದನಮಸ್ತುಭ್ಯಂ ಸಿಂಹಿಕಾನಂದನಾಚ್ಯುತ ।
ದಾನೇನಾನೇನನಾಗಸ್ಯ ರಕ್ಷಮಾಂ ವೇಧಜಾದ್ಭಯಾತ್ ॥೨॥

ಅಂದರೆ—ಅಂಧಕಾರಮಯವಾದ ದೇಹವುಳ್ಳವನಾಗಿಯೂ, ಬಹು ಭಯಂಕರನಾಗಿಯೂ, ಚಂದ್ರಸೂರ್ಯರನ್ನು ಹಿಂಸಿಸುವವನಾಗಿಯೂ ಇರುವ ರಾಹುವೇ! ನಾನು ಮಾಡುವ ಈ ಸುವರ್ಣ ಪ್ರತಿಮಾದಾನದಿಂದ ನನಗೆ ಸೌಖ್ಯವನ್ನುಂಟುಮಾಡು ॥೧॥ ಸಿಂಹಿಕೆಯ ಮಗನಾಗಿಯೂ, ನಾಶರಹಿತನಾಗಿಯೂ, ಚಂದ್ರಹಿಂಸಕನಾಗಿಯೂ ಇರುವ ರಾಹುವೇ ! ನಿನಗೆ ನಮಸ್ಕರಿಸುವೆನು, ನಾನುಮಾಡುವ ಈ ಸರ್ಪಪ್ರತಿಮಾದಾನವು, ನನಗೆ ಗ್ರಹಣವೇಧೆಯಿಂದ ಸಂಭವಿಸಿರುವ ದೋಷವನ್ನು ನಿವಾರಣೆಮಾಡಿ ಸಂರಕ್ಷಿಸುವಂತೆಮಾಡು ॥೨॥ ಎಂಬೀಮಂತ್ರವನ್ನು ಹೇಳಿ ಆ ಚಿನ್ನದ ರಾಹುಪ್ರತಿಮೆಯನ್ನೂ, ನಾಗಪ್ರತಿಮೆಯನ್ನೂ, ಚಿನ್ನದ ಸೂರ್ಯ ಬಿಂಬವನ್ನೂ ಅಥವಾ ಬೆಳ್ಳಿಯ ಚಂದ್ರಮಂಡಲವನ್ನಾಗಲಿ, ಕಂಚಿನಲ್ಲಿ ತುಪ್ಪವನ್ನು ತುಂಬಿ ಅದರಲ್ಲಿ ಹಾಕಿ ಶಕ್ತಿಗೆ ತಕ್ಕಷ್ಟು ಎಳ್ಳು, ವಸ್ತ್ರ, ದಕ್ಷಿಣೆ ಇವುಗಳೊಡನೆ "ಗ್ರಹಣದಿಂದುಂಟಾಗಿರುವ ದೋಷನಿವಾರಣಾರ್ಥವಾಗಿಯೂ, ಶುಭಫಲಪ್ರಾಪ್ತಿಗಾಗಿಯೂ, ನಾನು ನಿನಗೋಸ್ಕರದಾನಮಾಡುವೆನು" ಎಂ

ದು ದಾನವಾಕ್ಯವನ್ನು ಹೇಳಿ, ತಾನು ಪೂಜೆಮಾಡಿರುವ ಬ್ರಾಹ್ಮಣನಿಗೆ ದಾನಮಾಡಬೇಕು ಹೀಗೆ ನಾಲ್ಕನೆಯುಕಡೆಯೋ ಮೊದಲಾದ ಅಶುಭಸ್ಥಾನಗಳಲ್ಲಿಯೂ ದಾನಮಾಡಬೇಕೆಂದು ತೋರುವುದು, ಯಾವನ ಜನ್ಮರಾಶಿ ಮೊದಲಾದವುಗಳಲ್ಲಿ ಗ್ರಹಣಉಂಟಾಗುತ್ತದೆಯೋ ಅವನುಗ್ರಹಣದಿಂದ ಕೂಡಿದ ಸೂರ್ಯಚಂದ್ರ ಬಿಂಬಗಳನ್ನು ನೋಡಕೂಡದು. ಇತರರೂ ಸಹ ಬಟ್ಟೆ, ನೀರು, ಮೊದಲಾದವುಗಳನ್ನು ಅಡ್ಡಲಾಗಿಟ್ಟು (ಮರೆಮಾಡಿಕೊಂಡು) ಗ್ರಹಣವನ್ನು ನೋಡಬೇಕಲ್ಲದೆ ಸಾಕ್ಷಾತ್ತಾಗಿ ನೋಡಕೂಡದು.

—ಶುಭಕಾರ್ಯಗಳಿಗೆ ಬಿಡಬೇಕಾದ ದಿನಗಳು ಮೊದಲಾದವು.—

ಪೂರ್ಣಗ್ರಾಸವುಳ್ಳ ಚಂದ್ರಗ್ರಹಣವಾದರೆ ಶುಭಕಾರ್ಯಗಳಲ್ಲಿ ದ್ವಾದಶಿಮೊದಲು ತದಿಗೆಯು ಪೂರಯಿಸುವವರೆಗೂ ಅಂದರೆ ಏಳುದಿವಸಗಳನ್ನು ಬಿಡಬೇಕು ಸೂರ್ಯಗ್ರಹಣವು ಪೂರ್ಣಗ್ರಾಸವುಳ್ಳದ್ದಾದರೆ ಏಕಾದಶಿಮೊದಲು ಚೌತಿಯು ಮುಗಿಯುವವರೆಗೂ ಅಂದರೆ ಒಂಭತ್ತು ದಿನಗಳನ್ನು ಬಿಡಬೇಕು. ಖಂಡಗ್ರಹಣ (ಅಲ್ಪಭಾಗಗ್ರಾಸವುಳ್ಳದ್ದು) ವಾದರೆ ಚತುರ್ದಶಿಮೊದಲ್ಗೊಂಡು ಮೂರುದಿನಗಳನ್ನು ಬಿಡಬೇಕು. ಜ್ಯೋತಿರ್ನಿಬಂಧಗಳಲ್ಲಿ ಗ್ರಾಸಭಾಗದ ಹೆಚ್ಚುಕಡಿಮೆಯ ಪ್ರಕಾರವಾಗಿ ದಿನಗಳನ್ನು ಹೆಚ್ಚು ಕಡಿಮೆಮಾಡಬೇಕೆಂದು ಹೇಳಿದೆ. ಗ್ರಸ್ತಾಸ್ತವಾದರೆ ಮೊದಲ ಮೂರುದಿನಗಳನ್ನೂ ಗ್ರಸ್ತೋದಯವಾದರೆ ಗ್ರಹಣಾನಂತರದಲ್ಲಿ ಮೂರು ದಿನಗಳನ್ನೂ ಬಿಡಬೇಕು. ಪೂರ್ಣಗ್ರಾಸವುಳ್ಳ ಗ್ರಹಣದ ನಕ್ಷತ್ರವನ್ನು ಆರುತಿಂಗಳವರೆಗೂ ಶುಭಕಾರ್ಯಗಳಲ್ಲಿ ಬಿಡಬೇಕು ¼ ಭಾಗ (ಪಾದ) ಗ್ರಾಸಕ್ಕೆ ಒಂದೂವರೆತಿಂಗಳಂತೆ ಗ್ರಾಸಕ್ಕನುಸಾರವಾಗಿ ಕಾಲವನ್ನು ಹೆಚ್ಚಿಸಬೇಕು. ಮೊದಲು ಸಂಕಲ್ಪ ಮಾಡಿದ ಪದಾರ್ಥವನ್ನು ಗ್ರಹಣಾನಂತರದಲ್ಲಿ ದಾನಮಾಡಬೇಕಾದರೆ ಸಂಕಲ್ಪಿಸಿದ್ದವಸ್ತುವಿನಎರಡರಷ್ಟನ್ನು ದಾನಮಾಡಬೇಕು. ಇಂತು ಗ್ರಹಣನಿರ್ಣಯೋದ್ದೇಶವು ॥೩೧

(೩೨) ಸಮುದ್ರಸ್ನಾನ ನಿರ್ಣಯವು.

(೩೨) ಸಮುದ್ರಸ್ನಾನ ನಿರ್ಣಯವು-ಪೌರ್ಣಮಾಸ್ಯೆ ಅಮಾವಾಸ್ಯೆ ಮೊದಲಾದ ಪರ್ವಗಳಲ್ಲಿ ಸಮುದ್ರಸ್ನಾನಮಾಡಬೇಕು. ಶುಕ್ರವಾರ ಮಂ

ಗಳವಾರಗಳಲ್ಲಿ ಮಾಡಕೂಡದು.

ಅಶ್ವತ್ಥಸಾಗರೌಸೇವ್ಯೌ ನ ಸ್ಪರ್ಶಸ್ತುಕದಾಚನ ।
ಅಶ್ವತ್ಥಂ ಮಂದವಾರೇಚ ಸಾಗರಂ ಪರ್ವಣಿಸ್ಪೃಶೇತ್ ॥೧॥
ನಕಾಲನಿಯಮ ಸ್ನೇತೌ ಸಮುದ್ರಸ್ನಾನಕರ್ಮಣಿ ।

ಅಂದರೆ-ಅಶ್ವತ್ಥವೃಕ್ಷವನ್ನೂ ಸಮುದ್ರವನ್ನೂ ಸೇವಿಸಬೇಕು. ಆದರೆ ಮುಟ್ಟಕೂಡದು. ಅಶ್ವತ್ಥವೃಕ್ಷವನ್ನು ಶನಿವಾರದಲ್ಲಿಯೂ, ಸಮುದ್ರವನ್ನು ಪರ್ವಗಳಲ್ಲಿಯೂ ಮುಟ್ಟಬಹುದು ॥೧॥ ಸಮುದ್ರದಲ್ಲಿ ಸ್ನಾನವನ್ನು ಮಾಡುವುದರಲ್ಲಿ ಕಾಲವನ್ನು ನಿರೀಕ್ಷಿಸಬೇಕಾದದ್ದಿಲ್ಲ ॥

(ನಿರ್ಣಯ ಸಿಂಧುವಿನಲ್ಲಿ ಹೇಳಿರುವ ಸಮುದ್ರಸ್ನಾನ ವಿಧಿಯು)

ಪಿಪ್ಪಲಾದ ಸಮುತ್ಪನ್ನೇ ಕೃತ್ಯೇಲೋಕ ಭಯಂಕರೇ ।
ಪಾಷಾಣಸ್ತೇಮಯಾದತ್ತ ಆಹಾರಾರ್ಥಂ ಪ್ರಕಲ್ಪ್ಯತಾಂ ॥೧॥
ಇತಿಪಾಷಾಣಂನಿಕ್ಷಿಪ್ಯ ॥ ವಿಶ್ವಾಚೀಚಘೃತಾಚೀಚ ವಿಶ್ವಯೋನೇ ವಿಶಾಂಪತೇ । ಸಾನ್ನಿಧ್ಯಂಕುರುಮೇ ದೇವಸಾಗರೇ ಲವಣಾಮ್ಭಸಿ ॥೨॥
ನಮಸ್ತೇವಿಶ್ವಗುಪ್ತಾಯ ನಮೋ ವಿಷ್ಣೋ ಅಪಾಂಪತೇ ।
ನಮೋ ಜಲಧಿರೂಪಾಯ ನದೀನಾಂಪತಯೇ ನಮಃ ॥೩॥
ಸಮಸ್ತೆ ಜಗದಾಧಾರ ಶಂಖಚಕ್ರಗದಾಧರ ।
ದೇವ ದೇಹಿ ಮಮಾನುಜ್ಞಾಂ ತವ ತೀರ್ಥಾವಗಾಹನೇ ॥೪॥
ತ್ರಿತತ್ತ್ವಾತ್ಮಕ ಮೀಶಾನಂ ನಮೋ ವಿಷ್ಣು ಮುಮಾಪತಿಂ ।
ಸಾನ್ನಿಧ್ಯಂ ಕುರು ದೇವೇಶ ಸಾಗರೇಲವಣಾಮ್ಭಸಿ ॥೫॥
ಅಗ್ನಿಶ್ಚಯೋನಿರನಿಲಶ್ಚದೇಹೋರೇತೋಧಾ ವಿಷ್ಣುರಮೃತಸ್ಯನಾಭಿಃ ।
ಏತದ್ಬ್ರುವನ್ಪಾಣ್ಡವಸತ್ಯವಾಕ್ಯಂತತೋವಗಾಹೇತಪತಿಂನದೀನಾಂ॥೬॥
ಇತಿ ಭಾರತೋಕ್ತಮಂತ್ರಾನ್ಪಠಿತ್ವಾವಿಧಿವತ್ಸ್ನಾತ್ವಾ,
ಸರ್ವರತ್ನೋಭವಾನ್ ಶ್ರೀಮಾನ್ ಸರ್ವರತ್ನಾಕರೋ ಯತಃ ।
ಸರ್ವರತ್ನಪ್ರಧಾನ ಸ್ತ್ವಂ ಗೃಹಾಣಾರ್ಘ್ಯಂನಮೋಸ್ತುತೇ ॥೭॥
ಇತ್ಯರ್ಘ್ಯಂದತ್ವಾತರ್ಪಯೇತ್.
ಪಿಪ್ಪಲಾದಂ ವಿಕರ್ಣ್ಯಂಚಕೃತಾಂತಂ ಜೀವಕೇಶ್ವರಂ ।
ವಶಿಷ್ಠಂ ವಾಮದೇವಂಚ ಪರಾಶರ ಮುಮಾಪತಿಂ ॥೮॥

ವಾಲ್ಮೀಕಿಂ ನಾರದಂ ಚೈವ ವಾಲಖಿಲ್ಯಾಂ ಸ್ತಥೈವಚ
ನಲಂ ನೀಲಂ ಗವಾಕ್ಷಂಚ ಗವಯಂ ಗಂಧಮಾದನಂ ॥೯॥
ಜಾಂಬವನ್ತಂ ಹನೂಮನ್ತಂ ಸುಗ್ರೀವಂಚಾಂಗದಂತಥಾ ।
ವೈಂದಂಚ ದ್ವಿವಿದಂಚೈವ ಋಷಭಂಶರಭಂತಥಾ ॥೧೦॥
ರಾಮಂಚ ಲಕ್ಷ್ಮಣಂ ಚೈವ ಸೀತಾಂ ಚೈವಯಶಸ್ವಿನೀಂ ।
ಏತಾಂಸ್ತು ತರ್ಪಯೇದ್ವಿದ್ವಾನ್ ಜಲಮಧ್ಯೇವಿಶೇಷತಃ ॥
ಆಬ್ರಹ್ಮಸ್ತಂಬ ಪರ್ಯಂತಂ ಯತ್ಕಿಂಚಿತ್ಸಚರಾಚರಂ ।
ಮಯಾದತ್ತೇನತೋಯೇನತೃಪ್ತಿಮೇವಾಭಿಗಚ್ಛತು ॥೧೨॥ಇತಿ॥

ಅಂದರೆ— ಪಿಪ್ಪಲಾದನ ಪುತ್ರಿಯಾಗಿಯೂ, ಪ್ರಪಂಚಕ್ಕೆಲ್ಲಾ ಭಯಂಕರಳಾಗಿಯೂ ಇರುವ ದೇವತೆಯೇ ನಿನಗೆ ಕಲ್ಲನ್ನು ಕೊಟ್ಟಿದ್ದೇನೆ ಆಹಾರಕ್ಕಾಗಿ ಸ್ವೀಕರಿಸುವವಳಾಗು ॥೧॥ ಹೀಗೆಂದು ಕಲ್ಲನ್ನು ಸಮುದ್ರದಲ್ಲಿ ಹಾಕಬೇಕು ವಿಶ್ವಾಚಿ, ಘೃತಾಚಿಗಳೆಂಬ ಅಪ್ಸರರೂ, ಪ್ರಪಂಚಕ್ಕೆ ಉತ್ಪತ್ತಿಸ್ಥಾನನಾದ ಮಹಾವಿಷ್ಣುವೂ, ಸಹ ಈ ಸಮುದ್ರದ ಉಪ್ಪುನೀರಿನಲ್ಲಿ ಬಂದುಸೇರಿ ನನ್ನಸಮೀಪದಲ್ಲಿರುವವರಾಗಲಿ॥೨॥ ಲೋಕವನ್ನೆಲ್ಲಾ ರಕ್ಷಿಸತಕ್ಕವನಾಗಿಯೂ, ನೀರಿಗೆ ಒಡೆಯನಾಗಿಯೂ, ನದಿಗಳಿಗೆ ಪತಿಯಾಗಿಯೂ, ಸಮುದ್ರರೂಪನಾಗಿಯೂ, ಸರ್ವಾಂತರ್ಯಾಮಿಯಾಗಿಯೂ ಇರುವ ಮಹಾವಿಷ್ಣುವಿಗೆ ನಮಸ್ಕಾರವು ॥೩॥ ಎಲ್ಲ ಲೋಕಗಳಿಗೂ ಆಶ್ರಯನಾಗಿಯೂ, ಶಂಖ, ಚಕ್ರ, ಗದೆ, ಇವುಗಳನ್ನು ಧರಿಸಿರುವವನಾಗಿಯೂ, ಇರುವ ವಿಷ್ಣುವೇ ! ನಿನ್ನ ಸಂಬಂಧವಾದ ಈ ತೀರ್ಥದಲ್ಲಿ (ಸಮುದ್ರದಲ್ಲಿ) ಸ್ನಾನಮಾಡುವುದಕ್ಕೆ ನನಗೆ ಅಪ್ಪಣೆಯನ್ನು ಕೊಡು ॥೪॥ ತತ್ವತ್ರಯರೂಪನಾಗಿಯೂ, ಸರ್ವವ್ಯಾಪಕನಾಗಿಯೂ, ಪಾರ್ವತಿಗೆ ಪತಿಯಾಗಿಯೂ, ಇರುವ ಪರಮೇಶ್ವರನೇ! ನಿನಗೆ ನಮಸ್ಕಾರಮಾಡುತ್ತೇನೆ ಈ ಸಮುದ್ರದ ನೀರಿನಲ್ಲಿ ಬಂದು ನೆಲಸುವವನಾಗು॥೫॥ ಎಲೈ ಪಾಂಡುಪುತ್ರನಾದ ಧರ್ಮರಾಜನೇ ! ಕೇಳು "ಅಗ್ನಿಯೇ ಉತ್ಪತ್ತಿಸ್ಥಾನವು, ವಾಯುವೇ ದೇಹವು, ವಿಷ್ಣುವೇ ಬೀಜಾವಾಪ ಮಾಡಿದವನು, ಹೀಗಿರುವ ಜಲಾಶ್ರಯನಾದವನು ಸಮುದ್ರರಾಜನು" ಎಂಬ ಸತ್ಯವಾಕ್ಯನ್ನಾಡಿ ಅನಂತರದಲ್ಲಿ ಸಮುದ್ರಸ್ನಾನವನ್ನು ಮಾಡಬೇಕು.

॥೬॥ಎಂಬದಾಗಿಭಾರತದಲ್ಲಿ ಹೇಳಿರುವಮಂತ್ರಗಳನ್ನುಚ್ಚರಿಸಿ ವಿಧಿಪ್ರಕಾರವಾಗಿ ಸ್ನಾನಮಾಡಬೇಕು. ನವರತ್ನಗಳಿಗೂ ಆಕರನಾಗಿರುವುದರಿಂದ ಎಲೈ ಸಮುದ್ರರಾಜನೇ! ನೀನು ಎಲ್ಲ ವಸ್ತುಗಳಿಗೂ ರತ್ನಪ್ರಾಯನಾಗಿದ್ದೀಯೆ, ಲೋಕದಲ್ಲಿರುವ ಶ್ರೇಷ್ಠವಸ್ತುಗಳೆಲ್ಲಕ್ಕಿಂತಲೂ ಮಹಾಶ್ರೇಷ್ಠನಾಗಿದ್ದೀಯೆ, ನಿನಗೆ ಅರ್ಘ್ಯವನ್ನು ಕೊಡುವೆನು. ಅದನ್ನು ಸ್ವೀಕರಿಸು, ನಿನಗೆ ನಮಸ್ಕರಿಸುವೆನು ॥೭॥ ಹೀಗೆಹೇಳಿ ಅರ್ಘ್ಯವನ್ನು ಕೊಟ್ಟು ತರ್ಪಣ ಮಾಡಬೇಕು. ಪಿಪ್ಪಲಾದನನ್ನೂ, ವಿಕಣ್ವನನ್ನೂ, ಯಮ, ಜೀವಕೇಶ್ವರ, ವಸಿಷ್ಠ, ವಾಮದೇವ, ಪರಾಶರ, ಈಶ್ವರ, ॥೮॥ ವಾಲ್ಮೀಕಿ, ನಾರದ, ವಾಲಖಿಲ್ಯರು, ನಲ, ನೀಲ, ಗವಾಕ್ಷ, ಗವಯ, ಗಂಧಮಾದನ ॥೯॥ ಜಾಂಬವಂತ, ಹನುಮಂತ,ಸುಗ್ರೀವ, ಅಂಗದ, ಮೈಂದ, ದ್ವಿವಿದ, ಋಷಭ, ಶರಭ, ॥೧೦॥ ರಾಮ, ಲಕ್ಷ್ಮಣ, ಸೀ[illegible], ಇವರನ್ನು ಕುರಿತೂ, ವಿವೇಕಿಯಾದವನು ತರ್ಪಣವನ್ನು ಕೊಡಬೇಕು. ನೀರಿನ ಮಧ್ಯದಲ್ಲಿನಿಂತು ಇವರಿಗೆ ಅರ್ಘ್ಯಪ್ರದಾನಮಾಡುವುದು ಮತ್ತಷ್ಟುವಿಶೇಷವಾದದ್ದು ॥ ೧೧ ॥ ಬ್ರಹ್ಮನನ್ನು ಮೊದಲುಮಾಡಿಕೊಂಡು ಒಂದು ಸಣ್ಣ ಕಡ್ಡಿಯವರೆಗೂ ಲೋಕದಲ್ಲಿರುವ ಚರಾಚರ ಪ್ರಾಣಿಗಳೆಲ್ಲವೂ, ನಾನು ಕೊಟ್ಟ ಜಲತರ್ಪಣದಿಂದ ತೃಪ್ತಿಯನ್ನುಹೊಂದಲಿ ॥೧೨॥ಎಂದು ಹೇಳಿ ತರ್ಪಣಮಾಡಬೇಕು. ಇಂತು ಸಮುದ್ರ ಸ್ನಾನೋದ್ದೇಶವು

(೩೩) ಕ್ಲುಪ್ತತಿಥಿವಾರನಕ್ಷತ್ರಗಳಲ್ಲಿನ ಕರ್ತವ್ಯಾಕರ್ತವ್ಯಗಳು—

(೩೩) ಕ್ಲುಪ್ತತಿಥ್ಯಾದಿಗಳಲ್ಲಿ ವಿಧಿನಿಷೇಧಗಳು—“ಸಪ್ತಮ್ಯಾಂ ನಸ್ಪೃಶೇ ತ್ತೈಲಂ ನೀಲವಸ್ತ್ರಂ ನ ಧಾರಯೇತ್ । ನಚಾಪ್ಯಾಮಲಕೈಃ ಸ್ನಾನಂ ನ ಕುರ್ಯಾತ್ಕಲಹಂ ನರಃ ॥೧॥ ಸಪ್ತಮ್ಯಾಂ ನೈವಕುರ್ವೀತ ತಾಮ್ರ ಪಾತ್ರೇಣ ಭೋಜನಂ ॥ ಅಂದರೆ—ಸಪ್ತಮಿಯಲ್ಲಿಎಣ್ಣೆಯನ್ನು ಮುಟ್ಟಕೂಡದು. ಕರೀಬಟ್ಟೆಯನ್ನು ಧರಿಸಕೂಡದು. ನೆಲ್ಲಿಯ ಚಟ್ಟೆನಿಂದ ಸ್ನಾನಮಾಡಕೂಡದು. ಕಲಹವನ್ನು ಮಾಡಬಾರದು ॥೧॥ ಮತ್ತು ತಾಮ್ರಪಾತ್ರೆಯಲ್ಲಿ ಊಟಮಾಡಕೂಡದು. ನಂದಾತಿಥಿಗಳಲ್ಲಿ ಅಭ್ಯಂಗ ಸ್ನಾನವನ್ನೂ, ರಿಕ್ತತಿಥಿಗಳಲ್ಲಿ ಕ್ಷೌರವನ್ನೂ ಬಿಡಬೇಕು. ಶೂದ್ರರು ಮೊದಲಾದವರು ಜಯಾತಿಥಿಗಳಲ್ಲಿ ಮಾಂಸಾಹಾರ ಮಾಡಕೂಡದು.

ಪೂರ್ಣಾತಿಥಿಗಳಲ್ಲಿ ಸ್ತ್ರೀಸಂಗವು ಕೂಡದು. ಭಾನುವಾರದಲ್ಲಿ ಅಭ್ಯಂಜನ ಸ್ನಾನವನ್ನೂ, ಮಂಗಳವಾರದಲ್ಲಿ ಕ್ಷೌರವನ್ನೂ, ಬುಧವಾರದಲ್ಲಿ ಸ್ತ್ರೀಸಂಗವನ್ನೂ ಬಿಡಬೇಕು. ಚಿತ್ರಾ, ಹಸ್ತ, ಶ್ರವಣ, ನಕ್ಷತ್ರಗಳಲ್ಲಿ ಎಣ್ಣೆಯನ್ನು ಬಿಡಬೇಕು. ವಿಶಾಖೆಯಲ್ಲಿಯೂ, ಪ್ರತಿಪತ್ತಿನಲ್ಲಿಯೂ ಕ್ಷೌರವು ಕೂಡದು. ಮಘಾ, ಕೃತ್ತಿಕಾ, ಉತ್ತರಾ, ಉತ್ತರಾಷಾಢ, ಉತ್ತರಾಭಾದ್ರೆಗಳಲ್ಲಿ ಸ್ತ್ರೀಸಂಗಮವು ಯೋಗ್ಯವಾದದ್ದಲ್ಲ. ತಿಲತರ್ಪಣವೂ ತಿಲಭಕ್ಷ್ಯಗಳೂ, ಸಪ್ತಮಿಯಲ್ಲಿ ತಕ್ಕದ್ದಲ್ಲ. ಅಷ್ಟಮಿಯಲ್ಲಿ ತೆಂಗಿನಕಾಯನ್ನೂ, ನವಮಿಯಲ್ಲಿ ಸೋರೆಯ ಕಾಯನ್ನೂ, ದಶಮಿಯಲ್ಲಿ ಪಡವಲಕಾಯನ್ನೂ, ಏಕಾದಶಿಯಲ್ಲಿ ಅವರೆಯ ಕಾಳನ್ನೂ, ದ್ವಾದಶಿಯಲ್ಲಿ ಕಿರುಗಡಲೆಯನ್ನೂ, ತ್ರಯೋದಶಿಯಲ್ಲಿ ಬದನೆಯ ಕಾಯನ್ನೂ ಸ್ವೀಕರಿಸಬಾರದು.

ಪೂರ್ಣಿಮಾದರ್ಶಸಂಕ್ರಾಂತಿ ಚತುರ್ದಶ್ಯಷ್ಟಮೀಷುಚ ।
ನರಶ್ಚಂಡಾಲಯೋನೌಸ್ಯಾತ್ತೈಲಸ್ತ್ರೀಮಾಂಸ ಸೇವನಾತ್॥೧॥

ಪೌರ್ಣಮಿ, ದರ್ಶ, ಸಂಕ್ರಾಂತಿ, ಚತುರ್ದಶಿ, ಅಷ್ಟಮಿಗಳಲ್ಲಿ, ಎಣ್ಣೆ, ಸ್ತ್ರೀ, ಮಾಂಸ, ಇವುಗಳನ್ನು ಸ್ವೀಕರಿಸುವವನು ಚಂಡಾಲನಾಗಿ ಹುಟ್ಟುವನು ॥೧॥ ಪೂರ್ಣಿಮಾ, ದರ್ಶ, ಸಂಕ್ರಾಂತಿ, ದ್ವಾದಶಿ, ಶ್ರಾದ್ಧದಿನಗಳು,ಇವುಗಳಲ್ಲಿ ಹೊಸಬಟ್ಟೆಗಳನ್ನು,ಹಿಂಡಕೂಡದು,ರಾತ್ರಿಯಲ್ಲಿ ಮಣ್ಣು, ಸಗಣಿ, ನೀರು ; ಇವುಗಳನ್ನು ತೆಗೆದುಕೊಂಡು ಬರಬಾರದು. ಸಂಜೆಯಲ್ಲಿ ಗೋಮೂತ್ರವನ್ನು ತರಬಾರದು, ಅಮಾವಾಸ್ಯೆ ಮೊದಲಾದ ಪರ್ವಗಳಲ್ಲಿ ಶಾನ್ತ್ಯರ್ಥವಾಗಿ ತಿಲಹೋಮವನ್ನು ಅವಶ್ಯಕವಾಗಿ ಮಾಡಬೇಕು. ಪೀಡಾ ಪರಿಹಾರಾರ್ಥವಾಗಿಯೂ, ಸ್ವರಕ್ಷಣೆಗಾಗಿಯೂ ದಾನಗಳನ್ನುಮಾಡಬೇಕು. ಪರ್ವಕಾಲಗಳಲ್ಲಿ ವೇದಾಧ್ಯಯನ ಮಾಡಬಾರದು. ಮೃತ್ತಿಕಾ ಶೌಚ, ಆಚಮನ, ಬ್ರಹ್ಮಚರ್ಯವ್ರತ, ಮೊದಲಾದವುಗಳನ್ನು ಮಾಡಬೇಕು. ಪ್ರತಿಪತ್ತು, ದರ್ಶ,ಷಷ್ಠಿ,ನವಮಿ, ಈತಿಥಿಗಳಲ್ಲಿಯೂ, ಪಿತೃದಿನದಲ್ಲಿಯೂ, ಜನ್ಮತಿಥಿಯಲ್ಲಿಯೂ, ವ್ರತ, ಉಪವಾಸ, ಇವುಗಳಲ್ಲಿಯೂ, ಭಾನುವಾರದಲ್ಲಿಯೂ, ಮಧ್ಯಾಹ್ನದ ಸ್ನಾನ ಮಾಡುವಾಗಲೂ, ಕಡ್ಡಿಯಿಂದ ಹಲ್ಲುಜ್ಜಬಾರದು.

ಅಲಾಭೇ ದಂತಕಾಷ್ಠಾನಾಂ ನಿಷಿದ್ಧೇಪಿ ದಿನೇ ತಥಾ ।
ಅಪಾಂದ್ವಾದಶಗಂಡೂಷೈಃ ಪತ್ರೈರ್ವಾಶೋಧಯೇನ್ಮುಖಂ ॥೧॥

ಅಂದರೆ-ಹಲ್ಲುಜ್ಜುವುದಕ್ಕೆ ಕಡ್ಡಿದೊರೆಯದಿರುವಾಗಲೂ, ದಂತಧಾವನಕ್ಕೆ ನಿಷಿದ್ಧ ದಿನಗಳಲ್ಲಿಯೂ, ನೀರಿನಿಂದ ಹನ್ನೆರಡುಸಾರಿ ಬಾಯಿಮುಕ್ಕಳಿಸುವುದರಿಂದಾಗಲಿ, ಎಲೆಯಿಂದ ಹಲ್ಲುಜ್ಜಿಕೊಳ್ಳುವುದರಿಂದಾಗಲಿ, ಮುಖವನ್ನು ತೊಳೆದುಕೊಳ್ಳಬೇಕು ॥೧॥ ಮೇಲೆ ನಿಷೇಧಿಸುವಕಾರ್ಯಗಳಿಗೆ ಆಯಾಕಾರ್ಯಗಳನ್ನು ಮಾಡುವಕಾಲಕ್ಕೆ ವ್ಯಾಪ್ತಿಯುಳ್ಳತಿಥಿಗಳನ್ನು ಗ್ರಹಿಸಬೇಕು. ಅಂದರೆ ಯಾವಕಾರ್ಯಗಳನ್ನು ಯಾವತಿಥಿಮೊದಲಾದ ಕಾಲಗಳಲ್ಲಿ ಮಾಡಕೂಡದೆಂದು ನಿಷೇಧಮಾಡಿದೆಯೋ ಆ ಕಾರ್ಯಗಳನ್ನು ಮಾಡುವಕಾಲದಲ್ಲಿ ಮಾತ್ರ ಆತಿಥಿಮೊದಲಾದವುಗಳ ವ್ಯಾಪ್ತಿ ಇರಕೂಡದು. ಆ ಸಾ ಕಾರ್ಯಗಳ ಪೂರ್ವದಲ್ಲಿ ಅಥವಾ ಅನಂತರದಲ್ಲಿ ಆ ತಿಥಿ ಮೊದಲಾದವುಗಳ ವ್ಯಾಪ್ತಿ ಬಂದರೆ ಬಾಧಕವಿಲ್ಲವೆಂದು ಭಾವವು. ಇಂತುತಿಥ್ಯಾದಿಗಳಲ್ಲಿ ವಿಧಿನಿಷೇಧ ಸಂಕ್ಷೇಪವೆಂಬ ಉದ್ದೇಶವು ॥೩॥

ಮೀಮಾಂಸಾಧರ್ಮಶಾಸ್ತ್ರಜ್ಞಾಸ್ಸುಧಿಯೋ ನಲಸಾ ಬುಧಾಃ ।
ಕೃತಕಾರ್ಯಾಃಪ್ರಾಚ್ಯನಿಬಂಧೈಸ್ತದರ್ಥಂ ನಾಯಮುದ್ಯಮಃ ॥೧॥
ಯೇಽಪುನರ್ಮಂದಮತಯೋಽಲಸಾ ಅಜ್ಞಾಶ್ಚ ನಿರ್ಣಯಂ ।
ಧರ್ಮೆ ವೇದಿತುಮಿಚ್ಛಂತಿ ರಚಿತ ಸ್ತದಪೇಕ್ಷಯಾ ॥೨॥
ನಿಬನ್ಧೋಽಯಂ ಧರ್ಮಸಿನ್ಧುಸಾರನಾಮಾ ಸುಬೋಧನಃ ।
ಅಮುನಾಪ್ರೀಯತಾಂ ಶ್ರೀಮದ್ವಿಠ್ಠಲೋ ಭಕ್ತವತ್ಸಲಃ ॥೩॥
ಸರ್ವತ್ರಮೂಲವಚನಾ ನೀಹಜ್ಞೇಯಾನಿ ತದ್ವಿಚಾರಶ್ಚ ।
ಕೌಸ್ತುಭನಿರ್ಣಯಸಿನ್ಧುಶ್ರೀಮಾಧವಕೃತನಿಬಂಧೇಭ್ಯಃ ॥೪॥
ಪ್ರೇಮ್ಣಾಸದ್ಭಿರ್ಗ್ರಂಥಃ ಸೇವ್ಯಶ್ಶಬ್ದಾರ್ಥತಸ್ಸದೋಷೋಽಪಿ ।
ಸಂಶೋಧ್ಯವಾಪಿಹರಿಣಾ ಸುದಾಮಮುಸಿಕತುಷ ಪೃಥುಕಮುಷ್ಟಿರಿವ ॥೫॥

ಮೀಮಾಂಸೆ. ಧರ್ಮಶಾಸ್ತ್ರ ಇವುಗಳನ್ನು ತಿಳಿದು ವಿದ್ವಾಂಸರಾಗಿಯೂ ಆಲಸ್ಯರಹಿತರಾಗಿಯೂ ಇರುವ ಮಹನೀಯರೆಲ್ಲರೂ ಪೂರ್ವಗ್ರಂಥಗಳ ಪರಿಶೀಲನೆಯಿಂದಲೇ ಕೃತಕೃತ್ಯರಾಗಿರುವರು. ಅಂಥವರಿಗಾಗಿ

ಈಗ್ರಂಥವನ್ನು ಬರೆಯುವುದಿಲ್ಲ ||೧|| ಮೂಢಬುದ್ಧಿಯುಳ್ಳವರಾಗಿಯೂ, ಅಲ್ಪಜ್ಞರಾಗಿಯೂ, ಸೋಮಾರಿಗಳಾಗಿಯೂ, ಧರ್ಮಾಚಾರಗಳನ್ನು ತಿಳಿಯಬೇಕೆಂಬ ಅಪೇಕ್ಷೆಯುಳ್ಳಸಾಮಾನ್ಯಜನರಿಗಾಗಿ ಬರೆದಿದೆ||೨|| ಅಜ್ಞರಿಗೂ ಸುಲಭವಾಗಿ ತಿಳಿವಂತೆ ಬರೆದಿರುವ ಈ ಧರ್ಮಸಿಂಧುಸಾರದಿಂದ ಭಕ್ತರಕ್ಷಕನಾದ ಶ್ರೀಮಹಾವಿಷ್ಣುವು ಸಂತುಷ್ಟನಾಗಲಿ ||೩|| ಇದರಲ್ಲಿ ಬರೆದಿರುವ ಸಂಗತಿಗಳೆಲ್ಲವೂ ಮುಖ್ಯವಿಷಯಗಳನ್ನು ಮಾತ್ರತಿಳಿಸುತ್ತವೆ. ಹೆಚ್ಚಾದವಿವರಣೆಗಳನ್ನು ಕೌಸ್ತುಭ, ನಿರ್ಣಯಸಿಂಧು, ಮಾಧವೀಯ ಮೊದಲಾದ ಗ್ರಂಥಗಳಿಂದ ತಿಳಿಯಬಹುದು ||೪||ಈಗ್ರಂಥವು ಶಬ್ದದಿಂದ ಅಥವಾ ಅರ್ಥದಿಂದಲಾಗಲಿ ದೋಷಯುಕ್ತವಾಗಿದ್ದರೂಕೂಡ ಸುಜನರು ಆದೋಷಗಳನ್ನುತಿದ್ದಿ ಸರಿಪಡಿಸಿ, ಪ್ರೀತಿಯಿಂದ ಆ ಶ್ರೀಕೃಷ್ಣನು, ತನ್ನ ಭಕ್ತನೂ, ಸ್ನೇಹಿತನೂ ಆದ ಸುದಾಮನು ತಂದುಕೊಟ್ಟ ಹೊಟ್ಟು ಮೊದಲಾದವುಗಳಿಂದ ಬೆರದಿರುವ ಬಂದು ಹಿಡಿ ಅವಲಕ್ಕಿಯನ್ನು ಸ್ವೀಕರಿಸಿ ಸಂತುಷ್ಟನಾದಂತೆ, ಅನುಗ್ರಹಿಸಬೇಕು ||೫||

ಇಂತು ಭಾಷಾಮಯ ಧರ್ಮಸಿಂಧುಸಾರದಲ್ಲಿ
ಮೊದಲನೆಯ ಪರಿಚ್ಛೇದವು
ಮುಗಿದುದು.

ಶ್ರೀಃ.

—* ಎರಡನೆಯ ಪರಿಚ್ಛೇದವು. *—

ಮೊದಲನೆಯ ಪರಿಚ್ಛೇದದಲ್ಲಿ ಕಾಲಮೊದಲಾದುವುಗಳ ಸಾಮಾನ್ಯ ನಿರ್ಣಯವನ್ನು ಹೇಳಿ ಅದನ್ನೇ ವಿಸ್ತಾರವಾಗಿ ತಿಳಿಸುವುದಕ್ಕಾಗಿ ಪುನಃ ವಿಶೇಷನಿರ್ಣಯವನ್ನು ಹೇಳುತ್ತಾನೆ.

—ಚೈತ್ರಮಾಸಕೃತ್ಯವು—

(೧) ಚೈತ್ರಮಾಸಕೃತ್ಯವು:-ಮೊದಲನೆಯ ಪರಿಚ್ಛೇದದಲ್ಲಿ ಮಾಸ ಮೊದಲಾದ ವಿಶೇಷಗಳಿಲ್ಲದೆ ಸಾಮಾನ್ಯವಾದ ತಿಥಿ ಮೊದಲಾದವುಗಳ ನಿರ್ಣಯವನ್ನು ತಿಳಿಸಿ ಈ ಎರಡನೆಯ ಪರಿಚ್ಛೇದದಲ್ಲಿ ಚೈತ್ರಮೊದಲಾದ ಮಾಸಗಳನ್ನು ಮೊದಲುಮಾಡಿಕೊಂಡು ಪ್ರತಿಪತ್ತು ಮೊದಲಾದುವುಗಳಲ್ಲಿ ನಡೆಯಬೇಕಾದ ಸಂವತ್ಸರಕಾರ್ಯಗಳ ನಿರ್ಣಯವನ್ನು ಹೇಳುತ್ತಾರೆ.

ಈ ವಿಷಯದಲ್ಲಿ ದಕ್ಷಿಣದೇಶದವರು ಶುದ್ಧ ಪ್ರತಿಪತ್ತು ಮೊದಲ್ಗೊಂಡು ಅಮಾವಾಸ್ಯೆಯಾಗುವ ವರೆಗೂ ಇರುವ ತಿಥಿಗಳ ಎಣಿಕೆಯಿಂದಲೇ ಬಹುಶಃ ಮಾಸವೆಂಬುದನ್ನು ನಿಷ್ಕರ್ಷಿಸಿಕೊಂಡಿರುವುದರಿಂದ ಅದೇ ರೀತಿಯನ್ನೇ ಅನುಸರಿಸಿ ಮುಂದೆ ನಿರ್ಣಯವನ್ನು ಹೇಳುತ್ತೇವೆ. ಹಿಂದಣ ಪರಿಚ್ಛೇದದಲ್ಲಿ ಸೂಕ್ಷ್ಮವಾಗಿ ತಿಳಿಸಿರುವ ಸಂಗತಿಗಳನ್ನು ಈಗ ವಿಸ್ತಾರವಾಗಿ ತಿಳಿಸುವುದರಿಂದ ಅದನ್ನು ದೃಢಪಡಿಸುವುದಾದಕಾರಣ ಪುನರುಕ್ತಿಯೆಂದು ಭಾವಿಸಕೂಡದು.

ಮೇಷ ಸಂಕ್ರಾನ್ತಿಯಲ್ಲಿ ಸಂಕ್ರಮಣವಾಗುವ ಕಾಲದ ಹಿಂದಣ ಹತ್ತುಗಳಿಗೆಗಳೂ ಅನಂತರದಲ್ಲಿ ಹತ್ತುಗಳಿಗೆಗಳೂ ಪುಣ್ಯಕಾಲವಾಗುವುದು. ರಾತ್ರಿಯಲ್ಲಿ ಅರ್ಧರಾತ್ರಿಗೆ ಪೂರ್ವದಲ್ಲಿ ಸಂಕ್ರಮಣವಾದರೆ ಪೂರ್ವದಿನದ (ಹಗಲಿನ) ಎರಡನೆಯ ಅರ್ಧಭಾಗವು (ಅಹಃಪ್ರಮಾಣದ ಸಂಖ್ಯೆಯನ್ನು ಎರಡು ಸಮಭಾಗಮಾಡಿದರೆ ಮೊದಲಭಾಗವನ್ನುಳಿದದ್ದು) ಪುಣ್ಯಕಾಲವೆನಿಸುವುದು. ಅರ್ಧರಾತ್ರಿಯ ಮೇಲೆ ಸಂಕ್ರಮಣವಾದರೆ ಮಾರನೆಯ ದಿನದ ಮೊದಲನೆಯ ಅರ್ಧಭಾಗವು ಪುಣ್ಯಕಾಲವು. ಅರ್ಧರಾತ್ರಿಯಲ್ಲಿಯೇ ಸಂಕ್ರಮಣವಾದರೆ ಎರಡುದಿನಗಳಲ್ಲಿಯೂ ಪುಣ್ಯಕಾಲ.

ತಿಥಿನಿರ್ಣಯವು—ಚೈತ್ರಶುದ್ಧ ಪ್ರತಿಪತ್ತಿನಲ್ಲಿ ಸಂವತ್ಸರವು ಪ್ರಾ

ರಂಭವಾಗುವುದು. ಈ ವಿಷಯದಲ್ಲಿ ಸೂರ್ಯೋದಯಕಾಲಕ್ಕೆ ವ್ಯಾಪ್ತಿಯುಳ್ಳ ಪ್ರತಿಪತ್ತನ್ನು ಗ್ರಹಿಸಬೇಕು.

—ವತ್ಸರಾರಂಭ ನಿರ್ಣಯವು—

ಎರಡು ದಿನಗಳಿಗೆ ಉದಯವ್ಯಾಪ್ತಿಯಿದ್ದರೂ, ಅಥವಾ ಪ್ರತಿಪತ್ತಿಗೆ ಎರಡು ದಿನಗಳಲ್ಲಿಯೂ ಉದಯವ್ಯಾಪ್ತಿ ಇಲ್ಲದಿದ್ದಾಗ್ಯೂ, ಮೊದಲನೆಯ ಪ್ರತಿಪತ್ತನ್ನೇ ಗ್ರಹಿಸಬೇಕು. ಚೈತ್ರವು ಮಲಮಾಸ (ಅಧಿಕಮಾಸ) ವಾಗಿದ್ದರೆ ಹೊಸವರ್ಷದ ಪ್ರಾರಂಭದಿನವೆಂಬ ಉದ್ದೇಶದಿಂದ ಮಾಡಬೇಕಾದ ಅಭ್ಯಂಜನವನ್ನೂ, ಸಂಕಲ್ಪಾದಿಗಳಿಗೆ ಹೊಸಸಂವತ್ಸರವನ್ನು ಹೇಳಿಕೊಳ್ಳುವುದು ಮೊದಲಾದದ್ದನ್ನೂ, ಮಲಮಾಸದ ಪ್ರತಿಪತ್ತಿನಲ್ಲಿಯೇ ನಡೆಯಿಸಬೇಕು, ಮನೆಮನೆಗೂ ಧ್ವಜಗಳನ್ನೆತ್ತಿ ಕಟ್ಟುವುದು, ಬೇವಿನ ಚಿಗುರನ್ನು(ಬೇವು ಬೆಲ್ಲ)ತಿನ್ನುವುದು, ಯುಗಾದಿಫಲಗಳನ್ನು ಕೇಳುವುದು,ನವರಾತ್ರಿಯ ಆರಂಭವು, ನವರಾತ್ರಿ ನಿಮಿತ್ತವಾದ ಅಭ್ಯಂಗಸ್ನಾನವು ಇವೇ ಮೊದಲಾದುವನ್ನು ಶುದ್ಧಮಾಸ(ನಿಜಮಾಸ)ದಲ್ಲಿನ ಪ್ರತಿಪತ್ತಿನಲ್ಲಿಯೇ ಮಾಡಬೇಕೆಂದು'ಮಯೂಖ'ದಲ್ಲಿ ಹೇಳಿದೆ. ಈ ಪ್ರತಿಪತ್ತಿನಲ್ಲಿ ಅಭ್ಯಂಜನವು ನಿತ್ಯವಾದದ್ದು ಎಂದರೆ ಮಾಡದಿದ್ದರೆ ದೋಷವುಂಟಾಗುವುದು. ಈ ಪ್ರತಿಪತ್ತಿನಲ್ಲಿಯೇ ದೇವೀನವರಾತ್ರಿಯು ಆರಂಭವಾಗುವುದು. ಇದಕ್ಕೆ ಬಿದಿಗೆಯಿಂದ (ದ್ವಿತೀಯೆ) ಕೂಡಿದ ಪ್ರತಿಪತ್ತು ಒಂದು ಮುಹೂರ್ತ ಮಾತ್ರವಿದ್ದಾಗ್ಯೂ ಅದನ್ನೇ ಗ್ರಹಿಸಬೇಕು. ಮುಹೂರ್ತಪರಿಮಾಣವು—"ಮುಹೂರ್ತ ಮಹ್ನೋರಾತ್ರೇಶ್ಚ ಪ್ರೋಚುಃ ಪಂಚದಶಂ ಲವಂ |" ಎಂದರೆ ಹದಿನೈದು ಲವಗಳಿಗೆ ಹಗಲಿನಲ್ಲಾಗಲಿ ರಾತ್ರಿಯಲ್ಲಾಗಲಿ ಒಂದು ಮೂಹೂರ್ತವೆನಿಸಿಕೊಳ್ಳುವುದು, ಇದೇ ಪ್ರಮಾಣವನ್ನೇ ಎಲ್ಲ ಕಡೆಗಳಲ್ಲಿಯೂ ಎಣಿಸಬೇಕು, ಪಾರಣೆ ಮೊದಲಾದವುಗಳ ವಿಶೇಷನಿರ್ಣಯವು ಶರನ್ನವರಾತ್ರಿಗೆ ಹೇಳಿರುವಂತೆಯೇ ಎಂದು ತಿಳಿಯಬೇಕು. ಈ ಚೈತ್ರಮಾಸದಲ್ಲಿಯೇ ಅರವಟ್ಟಿಗೆಯನ್ನಿಡಿಸಬೇಕಾದ್ದು "ಅತೀತೇ ಫಾಲ್ಗುನೇ ಮಾಸಿ ಪ್ರಾಪ್ತೇ ಚೈತ್ರಮಹೋತ್ಸವೇ| ಪುಣ್ಯೇಹ್ನಿವಿಪ್ರಕಥಿತೇಪ್ರಪಾದಾನಂ ಸಮಾರಭೇತ್||ಇತ್ಯಾದಿನಿರ್ಣಯಸಿಂಧುಃ--ಅಂದರೆ ಫಾಲ್ಗುನಮಾಸವು ಕಳೆದು ಚೈತ್ರಮಾಸವು ಬರಲು ಬ್ರಾಹ್ಮಣರಿಂದ ಶುಭ

ದಿವಸವೊಂದನ್ನು ಗೊತ್ತುಮಾಡಿಕೊಂಡು ಅಂದಿನಿಂದ ಅರವಟ್ಟಿಗೆಯ ನ್ನಿಟ್ಟು ಉದಕಾದಿ ದಾನವನ್ನು ಮಾಡಲುಪಕ್ರಮಿಸಬೇಕು॥ ಎಂದು ಇ ದೇಮೊದಲಾದ ವಿಷಯಗಳನ್ನು ನಿರ್ಣಯಸಿಂಧುಕಾರನು ಹೇಳಿರುವನೆಂ ದರ್ಥವು)ಇದಕ್ಕೆಮಂತ್ರವು-"ಪ್ರಪೇಯಂ ಸರ್ವಸಾಮಾನ್ಯ ಭೂತೇಭ್ಯಃ ಪ್ರತಿಪಾದಿತಾ। ಅಸ್ಯಾಃಪ್ರದಾನಾತ್ಪಿತರಸ್ತೃಪ್ಯಂತು ಹಿಪಿತಾಮಹಾಃ॥" ಅಂದರೆ-ಪಾತ್ರಾಪಾತ್ರ ವಿವೇಚನೆ ಇಲ್ಲದೆ ಸರ್ವಸಾಮಾನ್ಯವಾಗಿ, ಭೂ ತಗಳ ತೃಪ್ತಿಗಾಗಿ ಈ ಅರವಟ್ಟಿಗೆಯನ್ನು ಇಡಿಸಿದ್ದೇನೆ. ಈಪ್ರಪಾ ದಾನದಿಂದ ಪಿತೃಗಳೆಲ್ಲರೂ ತೃಪ್ತರಾಗಲಿ, ॥೧॥ "ಅನಿವಾರ್ಯಂ ತತೋ ದೇಯಂ ಜಲಂಮಾಸಚತುಷ್ಟಯಂ" ಈ ರೀತಿಯಾಗಿ ಅರವಟ್ಟಿಗೆಯನ್ನಿ ಡಿಸಿ ಮಧ್ಯದಲ್ಲಿ ನಿಲ್ಲಿಸದಂತೆ ನಾಲ್ಕುತಿಂಗಳವರೆಗೂ ನಡೆಯಿಸಬೇಕು. ಅರವಟ್ಟಿಗೆಯನ್ನಿಡಿಸುವುದಕ್ಕೆ ಶಕ್ತಿಯಿಲ್ಲದಿದ್ದರೆ ಪ್ರತಿದಿನದಲ್ಲಿಯೂ ಒ ಬ್ಬಬ್ರಾಹ್ಮಣಶ್ರೇಷ್ಠನಮನೆಗೆ ಉದಕುಂಭವನ್ನು (ಒಂದು ಬಿಂದಿಗೆ ನೀ ರು) ಹಾಕುತ್ತಾಬರಬೇಕು ("ಪ್ರತ್ಯಹಂ ಧರ್ಮಘಟಕೋವಸ್ತ್ರ ಸಂವೇ ಷ್ಟಿತಾನನಃ। ಬ್ರಾಹ್ಮಣಸ್ಯ ಗೃಹೇದೇಯ" ಇತ್ಯಾದಿಸಿಂಧುಃ॥ ಪ್ರತಿದಿ ನದಲ್ಲಿಯೂ ಧರ್ಮಾರ್ಥವಾಗಿ ಒಂದುಬಿಂದಿಗೆ ನೀರನ್ನು ವಸ್ತ್ರದಿಂದ ಮು ಚ್ಚಿತಂದು ಬ್ರಾಹ್ಮಣನ ಮನೆಗೆ ಕೊಡಬೇಕು. ಇದೇ ಮೊದಲಾದ ವಿಷ ಯವನ್ನು ಸಿಂಧುಕಾರನು ಹೇಳಿದ್ದಾನೆ) ಇದಕ್ಕೆ ಮಂತ್ರವು-"ಏಷಧ ರ್ಮಘಟೋದತ್ತೋ ಬ್ರಹ್ಮವಿಷ್ಣು ಶಿವಾತ್ಮಕಃ। ಅಸ್ಯಪ್ರದಾನಾತ್ಸಕ ಲಾಮಮಸನ್ತು ಮನೋರಥಾಃ ॥೧॥" ಬ್ರಹ್ಮ ವಿಷ್ಣು ಮಹೇಶ್ವರರೆಂಬ ತ್ರಿಮೂರ್ತಿರೂಪವಾದ ಈ ಉದಕುಂಭವನ್ನು ಧರ್ಮಾರ್ಥವಾಗಿ ನಾನು ಬ್ರಾಹ್ಮಣನಿಗೆ ದಾನಮಾಡಿದೆನು. ಈದಾನದಿಂದ ನನ್ನ ಇಷ್ಟಾರ್ಥಗಳೆಲ್ಲಾ ನೆರವೇರಲಿ ॥೧॥ ಕಲ್ಪಾದಿಗಳು:- ಈ ಪ್ರತಿಪತ್ತಿಥಿಯೇ 'ಕಲ್ಪಾದಿ' ಯೆಂ ದು ಪ್ರಸಿದ್ಧವಾಗಿದೆ. ಹೀಗೆಯೇ ವೈಶಾಖಶುದ್ಧ ತೃತೀಯೆ, ಫಾಲ್ಗುಣ ಕೃಷ್ಣತೃತೀಯೆ, ಚೈತ್ರಶುದ್ಧ ಪಂಚಮಿ, ಮಾಘದಲ್ಲಿ ತ್ರಯೋದಶಿ, ಕಾರ್ತ್ತಿಕದಲ್ಲಿ ಸಪ್ತಮಿ, ಮಾರ್ಗಶೀರ್ಷದಲ್ಲಿ ನವಮಿ, ಇವುಗಳೆಲ್ಲವೂ, ಕಲ್ಪಾದಿಗಳೆಂದು ತಿಳಿಯಬೇಕು. ಈ ಕಲ್ಪಾದಿ ದಿನಗಳಲ್ಲಿ ಶ್ರಾದ್ಧ ಮಾಡುವುದರಿಂದ ಪಿತೃಗಳಿಗೆ ತೃಪ್ತಿಯುಂಟಾಗುವುದು. ಚೈತ್ರಶುದ್ಧ

ಪ್ರತಿಪತ್ತನ್ನು ಮತ್ಸ್ಯಜಯಂತಿ ಎಂದು ಕೆಲವರು ಹೇಳುತ್ತಾರೆ. ಚೈತ್ರ ಮಾಸದಲ್ಲಿ ಹಾಲು, ಮೊಸರು, ತುಪ್ಪ, ಜೇನುತುಪ್ಪ ಇವುಗಳನ್ನು ಸ್ವೀಕರಿಸದೆ ದಂಪತಿಪೂಜೆಯನ್ನು ಮಾಡಿ ಗೌರೀವ್ರತವನ್ನು ಮಾಡತಕ್ಕದ್ದುಂಟು,ಚೈತ್ರಶುದ್ಧ ಬಿದಿಗೆಯ ಸಾಯಂಕಾಲದಲ್ಲಿ ಬಾಲೇಂದು(ಎಳೆಯ ಚಂದ್ರ)ಪೂಜೆಯನ್ನು ಮಾಡಬೇಕಾದ ಚಂದ್ರವ್ರತವೆಂಬುದೊಂದುಂಟು. ಈ ದಿನದಲ್ಲಿಯೇ ದವನದಿಂದಪಾರ್ವತೀ ಪರಮೇಶ್ವರರನ್ನು ಪೂಜಿಸತಕ್ಕದ್ದು. ಚೈತ್ರಶುದ್ಧ ತದಿಗೆಯಲ್ಲಿ ಈಶ್ವರನೊಂದಿಗೆ ಗೌರಿಯನ್ನು ಪೂಜಿಸಿ ಆಂದೋಳನವ್ರತ(ಡೋಲಾಗೌರೀ)ವನ್ನು ಒಂದುತಿಂಗಳ ವರೆಗೂ ಮಾಡಬೇಕು. ಇದರಲ್ಲಿ ಒಂದು ಮುಹೂರ್ತಮಾತ್ರನಿದ್ದಾಗ್ಯೂ ಎರಡನೆಯ ತೃತೀಯೆಯನ್ನು ಗ್ರಹಿಸಬೇಕು. ಬಿದಿಗೆಯಿಂದ ಕೂಡಿದ್ದನ್ನು ಗ್ರಹಿಸಕೂಡದು. ಚತುರ್ಥಿಯಿಂದ ಕೂಡಿದ ತೃತೀಯೆಯು ವೈಧೃತಿ ಮೊದಲಾದವುಗಳಿಂದ ಕೂಡಿದ್ದಾಗ್ಯೂ ದ್ವಿತೀಯಾಯುಕ್ತವಾದ ತೃತಿಯೆಯು ಕೂಡದೆಂಬ ನಿಷೇಧವು ಬಲವತ್ತರವಾದುದರಿಂದ ಅದನ್ನೇ ಆಚರಿಸಬೇಕು, ಈ ತೃತೀಯೆಯಲ್ಲಿಯೇ ಶ್ರೀರಾಮಚಂದ್ರನಿಗೆ ಡೋಲೋತ್ಸವಕ್ಕೆ ಆರಂಭಿಸಿ ಒಂದು ತಿಂಗಳವರೆಗೂ ಪೂಜಾದಿಗಳನ್ನು ನಡೆಯಿಸಿ ಆಂದೋಳನ (ತೂಗುಮಣೆಯ ಮೂಲಕ ತೂಗುವುದು) ವನ್ನು ಮಾಡಬೇಕು. ಹೀಗೆಯೇ ಇತರ ಎಲ್ಲಾ ದೇವರುಗಳಿಗೂ ಮಾಡಬಹುದು. ಈ ತೃತೀಯೆಯೇ ಮನ್ವಾದಿಯಾಗಿದೆ.

—ಮನ್ವಾದಿಗಳು—

ಇಲ್ಲಿಯೇ ಎಲ್ಲಾ ಮನ್ವಾದಿಗಳನ್ನೂ ಹೇಳುವೆವು. ೧ ಚೈತ್ರ ಶುದ್ಧ ತದಿಗೆ, ೨ ಪೌರ್ಣಮಿ, ೩ ಜ್ಯೇಷ್ಠ ಶುದ್ಧ ಪೌರ್ಣಮಿ, ೪ ಆಷಾಢ ಶುದ್ಧ ದಶಮಿ, ೫ ಪೌರ್ಣಮಿ, ೬ ಶ್ರಾವಣ ಬಹುಳ ಅಷ್ಟಮಿ, ೭ ಆಶ್ವಯುಜ ಶುದ್ಧನವಮಿ ೮ ಕಾರ್ತಿಕಶುದ್ಧ ದ್ವಾದಶಿ, ೯ ಪೌರ್ಣಮಿ, ೧೦ ಪುಷ್ಯಶುದ್ಧ ಏಕಾದಶಿ, ೧೧ ಮಾಘ ಶುದ್ಧ ಸಪ್ತಮಿ, ೧೨ ಫಾಲ್ಗುಣದ ಪೂರ್ಣಿಮೆ,೧೩ ಅಮಾವಾಸ್ಯೆ, ೧೪ ಭಾದ್ರಪದ ಶುದ್ಧತೃತೀಯಾ ಈ ಹದಿನಾಲ್ಕೂ ಮನ್ವಾದಿಗಳೆಂದು ತಿಳಿಯತಕ್ಕದ್ದು. ಇವುಗಳಲ್ಲಿ, ಶುಕ್ಲಪಕ್ಷದಲ್ಲಿ ದೇವಕಾರ್ಯ, ಪಿತೃಕಾರ್ಯಗಳಿಗೆ ಪೂರ್ವಾಹ್ಣವ್ಯಾಪ್ತಿಯುಳ್ಳ ಮನ್ವಾದಿಗಳನ್ನೇ

ಗ್ರಹಿಸ ಬೇಕು. ಪೂರ್ವಾಹ್ಣವೆಂದರೆ ಅಹಃಪ್ರಮಾಣ ಸಂಖ್ಯೆಯನ್ನು ಅರ್ಧಿಸಿದರೆ ಬರುವ ಮೊದಲನೆಯ ಭಾಗದ ಗಳಿಗೆಗಳೆಂದರ್ಥವು. ಆಕಾಲದಲ್ಲಿಯೇ ಶ್ರಾದ್ಧಾದಿಗಳನ್ನು ಮಾಡಬೇಕೆಂಬ ವಿಧಿ ಇರುವುದರಿಂದ ಆಪೂರ್ವಾಹ್ಣವ್ಯಾಪ್ತಿಯುಳ್ಳದ್ದನ್ನೇತೆಗೆದುಕೊಳ್ಳಬೇಕು, ದೈವವಶಾತ್ ಅಥವಾ ಮನುಷ್ಯಯತ್ನದಿಂದಾಗಲಿ ಪೂರ್ವಾಹ್ಣದಲ್ಲಿ ಶ್ರಾದ್ಧಾದಿಗಳನ್ನು ಮಾಡುವುದಕ್ಕೆ ಸಾಧ್ಯವಲ್ಲದೆ ಹೋದರೆ ಅಪರಾಹ್ಣವ್ಯಾಪ್ತಿಯುಳ್ಳ ಮನ್ವಾದಿಗಳನ್ನು ಗ್ರಹಿಸಬೇಕು. ದಿನದ ಪೂರ್ವಾರ್ಧದಲ್ಲಿ ಅಪರಾಹ್ಣವ್ಯಾಪ್ತಿಬಂದಿರುವ ಕಾಲದಲ್ಲಿಯಾದರೂ ಶ್ರಾದ್ಧಾದಿಗಳನ್ನುಮಾಡಬಹುದು. ದಿನದ ಎರಡನೆಯ ಭಾಗದಲ್ಲಿ ಮಧ್ಯಾಹ್ನವಿರುವಾಗಲೂ ಮಾಡಕೂಡದೆಂದು ತಾತ್ಪರ್ಯವು. ಕೃಷ್ಣಪಕ್ಷದಲ್ಲಾದರೆ ದೇವಪಿತೃಕಾರ್ಯಗಳಿಗೆ ಅಹಃಪ್ರಮಾಣಸಂಖ್ಯೆಯನ್ನುಐದು ಭಾಗಮಾಡಿ ನಾಲ್ಕನೆಯ ಭಾಗವಾದ ಅಪರಾಹ್ಣವೆಂಬ ಕಾಲದ ವ್ಯಾಪ್ತಿಯುಳ್ಳ ಮನ್ವಾದಿಗಳನ್ನು ಗ್ರಹಿಸಬೇಕು. ಮನ್ವಾದಿಗಳಲ್ಲಿ ಪಿಂಡಪ್ರದಾನವಿಲ್ಲದೆ (ಸಂಕಲ್ಪಶ್ರಾದ್ಧ)ಶ್ರಾದ್ಧಮಾಡಬೇಕು ಮನ್ವಾದಿಗಳಲ್ಲಿಶ್ರಾದ್ಧಮಾಡಿದರೆ ಎರಡುಸಹಸ್ರ ವರುಷಗಳವರೆಗೂ ಪಿತೃಗಳಿಗೆ ತೃಪ್ತಿಯುಂಟಾಗುವುದು. ಈ ಮನ್ವಾದಿ ಶ್ರಾದ್ಧಗಳೂ ನಿತ್ಯವಾದವುಗಳು. ಇವುಗಳನ್ನು ಮಾಡದೆಹೋದರೆ 'ತ್ವಾಂಭುವಃ ಪ್ರತಿಮಾನಂ' ಎಂಬ ಋಙ್ಮಂತ್ರವನ್ನು ನೀರಿನಲ್ಲಿ ಸಿಂತು ನೂರುಸಾರಿ ಜಪಮಾಡಿ ಪ್ರಾಯಶ್ಚಿತ್ತಮಾಡಿಕೊಳ್ಳಬೇಕು. ಹೀಗೆಯೇ ಷಣ್ಣವತಿ ಶ್ರಾದ್ಧಗಳೂ (ತೊಂಭತ್ತಾರು) ನಿತ್ಯವಾದವುಗಳೇ. ಅವುಗಳು ಯಾವುವೆಂದರೆ:—

—ಷಣ್ಣವತಿಶ್ರಾದ್ಧಗಳು—

"ಅಮಾಯುಗಮನುಕ್ರಾನ್ತಿ ಧೃತಿಪಾತಮಹಾಲಯಾಃ। ಪೂರ್ವೇದ್ಯುರಷ್ಟಕಾನ್ವಷ್ಟಕಾ ಶ್ರಾದ್ಧೈರ್ನವತಿಶ್ಚ ಷಟ್॥" ಅಮಾವಾಸ್ಯೆಗಳು ೧೨ ಯುಗಗಳು ೪. ಮನುಗಳು ೧೪.ಸಂಕ್ರಮಣಗಳು ೧೨. ಧೃತಿಗಳು ೧೨. ಪಾತಗಳು ೧೨.ಮಹಾಲಯಗಳು೧೫. ಅಷ್ಟಕಗಳು೫.ಅನ್ವಷ್ಟಕಗಳು ೫. (ಮಾರ್ಗಶೀರ್ಷಾದಿ ಮಾಸಗಳಲ್ಲಿ ಕೃಷ್ಣಾಷ್ಟಮಿ ಮೊದಲಾದವುಗಳಲ್ಲಿ ಅಷ್ಟಕಾದಿ ಶ್ರಾದ್ಧಗಳನ್ನು ಮಾಡಬೇಕು. ಅವುಗಳ ನಿರ್ಣಯವನ್ನು ಅಷ್ಟಕಾದಿ ಶ್ರಾದ್ಧಪ್ರಕರಣದಲ್ಲಿ ಹೇಳಿದೆ) ಪೂರ್ವೇದ್ಯುಗಳು ೫.

ಹೀಗೆ ಒಟ್ಟು ೯೬ ಷಣ್ಣವತಿ ಶ್ರಾದ್ಧಗಳು ಎಂದು ತಿಳಿಯಬೇಕು. ದಶಾವತಾರ ಜಯಂತಿಗಳು:-(೧) ಚೈತ್ರಶುದ್ಧ ೩ ಅಪರಾಹ್ಣದಲ್ಲಿ ಮತ್ಸ್ಯಾವತಾರವು (೨) ವೈಶಾಖ ಪೌರ್ಣಿಮಾ ಸಾಯಂಕಾಲದಲ್ಲಿ ಕೂರ್ಮಾವತಾರವು. (೩) ಭಾದ್ರಪದ ಶುದ್ಧ ೩ ಅಪರಾಹ್ಣದಲ್ಲಿ ವರಾಹಾವತಾರವು. (೪) ವೈಶಾಖಶುದ್ಧ ೧೪ ಸಾಯಂಕಾಲದಲ್ಲಿ ನೃಸಿಂಹಾವತಾರವು (೫) ಭಾದ್ರಪದ ಶುಕ್ಲ ೧೨ ಮಧ್ಯಾಹ್ನದಲ್ಲಿ ವಾಮನೋತ್ಪತ್ತಿ (೬) ವೈಶಾಖಶುದ್ಧ ೩ ಮಧ್ಯಾಹ್ನದಲ್ಲಿ ಪರಶುರಾಮಾವತಾರವು (ಪ್ರದೋಷಕಾಲದಲ್ಲೆಂದು ಅನೇಕರು) (೭) ಚೈತ್ರಶುದ್ಧ ೯ ಮಧ್ಯಾಹ್ನಗಲ್ಲಿ ಶ್ರೀರಾಮಾವತಾರವು. (೮) ಶ್ರಾವಣಬಹುಳ ೮ ರಾತ್ರಿಯಲ್ಲಿ ಕೃಷ್ಣಾವತಾರವು (೯) ಆಶ್ವಯುಜಶುದ್ಧ ೧೦ ಸಾಯಂಕಾಲದಲ್ಲಿ ಬೌದ್ಧಾವತಾರವು (೧೦) ಶ್ರಾವಣ ಶುದ್ಧ ೬ ಸಾಯಂಕಾಲದಲ್ಲಿ ಕಲ್ಕಿಯ ಅವತಾರವು. ಹೀಗೆ ಆಯಾಕಾಲಾನುಸಾರವ್ಯಾಪ್ತಿಯುಳ್ಳವುಗಳನ್ನು ಗ್ರಹಿಸಬೇಕು. ಇಲ್ಲಿ ಮತ್ಸ್ಯ, ಕೂರ್ಮ, ವರಾಹ, ಬೌದ್ಧ, ಕಲ್ಕಿಗಳ ಅವತಾರವಿಷಯದಲ್ಲಿ ಆಷಾಢಾದಿ ಮಾಸಭೇದಗಳನ್ನೂ, ಏಕಾದಶೀ ಮೊದಲಾದ ಬೇರೆ ಬೇರೆ ತಿಥಿಗಳನ್ನೂ, ಪ್ರಾತಃಕಾಲಮೊದಲಾದ ಕಾಲಭೇದಗಳನ್ನೂ, ಬೇರೆ ಕೆಲವು ವಚನಗಳಲ್ಲಿ ಹೇಳಿದೆ. ಕಲ್ಪಗಳಿಗಿರುವ ಭೇದಗಳಿಂದ ಅವುಗಳನ್ನು ನಿರ್ಣಯಿಸಬೇಕು. ತಾವು ತಾವು ಹಿಡಿದಿರುವ ಪದ್ಧತಿಯಂತೆ ಆಯಾ ಉಪಾಸಕರು ಉಪವಾಸಮೊದಲಾದವುಗಳನ್ನು ಮಾಡಬೇಕು. ಶ್ರೀರಾಮ ಕೃಷ್ಣ ನೃಸಿಂಹ ಜಯಂತಿಗಳು ಮಾತ್ರವೇ ನಿತ್ಯಗಳಾದ್ದರಿಂದ ಎಲ್ಲರೂ ಉಪವಾಸಮಾಡಬೇಕು.

## —ದಮನಕಾರೋಪಣಾದಿಗಳು.—

ದಮನದಿಂದ ಪೂಜಿಸುವುದು ಮೊದಲಾದದ್ದು-ಚೈತ್ರಶುದ್ಧ ಚತುರ್ಥಿಗೆ ಮಧ್ಯಾಹ್ನ ವ್ಯಾಪ್ತಿ ಇರುವಾಗ ಎಳ್ಳುಂಡೆ ಮೊದಲಾದ ಉಂಡೆಗಳನ್ನು ಮಾಡಿ ಗಣೇಶನನ್ನು ಪೂಜಿಸಿ ದಮನದಿಂದ ಅಲಂಕಾರಮಾಡಬೇಕು. ಇದರಿಂದ ವಿಘ್ನಪರಿಹಾರವೂ, ಇಷ್ಟಾರ್ಥಸಿದ್ಧಿಯೂ ಉಂಟಾಗುವುದು. ಚೈತ್ರಶುದ್ಧ ೫ ಯಲ್ಲಿ ಅನಂತ ಮೊದಲಾದ ಸರ್ಪಗಳನ್ನು ಪೂಜೆಮಾಡಿ ಹಾಲು, ತುಪ್ಪಗಳನ್ನು ನಿವೇದನಮಾಡಬೇಕು ಈಪಂಚಮಿಯಲ್ಲಿ

ಯೇ ಲಕ್ಷ್ಮೀಪೂಜೆಯನ್ನು ಮಾಡಬೇಕು. ಈ ದಿನದಲ್ಲಿ ಉಚ್ಚೈಶ್ಶ್ರವಸ್ಸೆಂಬ ಇಂದ್ರನ ಕುದುರೆಯನ್ನು ಪೂಜಿಸಬೇಕಾದ ಹಯವ್ರತವು ನಡೆಯತಕ್ಕದ್ದು. ಇವುಗಳಿಗೆಲ್ಲಾ ಪಂಚಮೀ ಸಾಮಾನ್ಯ ನಿರ್ಣಯದಲ್ಲಿ ಹೇಳಿರುವಂತೆಯೇ ಪಂಚಮಿಯನ್ನು ಗ್ರಹಿಸಬೇಕು. ಇದರಂತೆ ಮುಂದೆಯೂ ಯಾವ ವಿಷಯಗಳಲ್ಲಿ ವಿಶೇಷ ನಿರ್ಣಯವನ್ನು ಹೇಳದೆ ಇರುತ್ತದೆಯೋ ಅವುಗಳಿಗೆಲ್ಲಾ ಮೊದಲನೆಯ ಪರಿಚ್ಛೇದದಲ್ಲಿ ಹೇಳಿರುವಂತೆಯೇ ನಿರ್ಣಯವೆಂದು ತಿಳಿದುಕೊಳ್ಳಬೇಕು. ಷಷ್ಠಿಯಲ್ಲಿ ಸ್ಕಂದನಿಗೆ ದವನದ ಅಲಂಕಾರಮಾಡುವುದು, ಸಪ್ತಮಿಯಲ್ಲಿ ಸೂರ್ಯನನ್ನು ದವನದಿಂದ ಪೂಜಿಸುವುದು, ನವಮಿಯಲ್ಲಿ ದೇವಿಗೆ (ಶಕ್ತಿಗೆ) ಪೂರ್ಣಿಮೆಯಲ್ಲಿ ಎಲ್ಲ ದೇವತೆಗಳಿಗೂ, ದವನದಿಂದ ಪೂಜೆಯನ್ನು ಮಾಡಬೇಕು. ಈ ವಿಷಯವನ್ನು ಬೇರೆಕಡೆಯಲ್ಲಿ ವಿಸ್ತರಿಸಿದೆ. ಚೈತ್ರಶುದ್ಧ ಅಷ್ಟಮಿಯಲ್ಲಿ ಭವಾನಿಯು ಹುಟ್ಟಿದ್ದು. ಅದಕ್ಕೆ ನವಮಿಯಿಂದ ಯುಕ್ತವಾದ ೮ ಯನ್ನು ಗ್ರಹಿಸಬೇಕು. ಈ ಅಷ್ಟಮಿಯಲ್ಲಿ ಪುನರ್ವಸೂನಕ್ಷತ್ರ ಬಂದರೆ ಅಶೋಕೆಯ ಮೊಗ್ಗುಗಳನ್ನು ಪ್ರಾಶನಮಾಡಬೇಕು (ಮೊಗ್ಗಿನೊಡನೆ ವಿಷ್ಣು ಪಾದೋದಕವನ್ನು ಪಾನಮಾಡಬೇಕು) "ತ್ವಾಮಶೋಕನರಾಭೀಷ್ಟಮಧುಮಾಸಸಮುದ್ಭವ। ಪಿಬಾಮಿಶೋಕಸಂತಪ್ತೋ ಮಾಮಶೋಕಂ ಸದಾಕುರು ॥೧॥" ಚೈತ್ರಮಾಸದಲ್ಲಿ ಹುಟ್ಟಿ ಜನಗಳ ಕೋರಿಕೆಯನ್ನು ನೆರವೇರಿಸುವ ಅಶೋಕವೇ! ದುಃಖದಿಂದ ಸಂತಾಪಪಡುತ್ತಿರುವೆನಾದಕಾರಣ ನಿನ್ನನ್ನು ಪಾನಮಾಡುತ್ತೇನೆ. ನನ್ನನ್ನು ನೀನು ಯಾವಾಗಲೂ ದುಃಖರಹಿತನಾಗಿರುವಂತೆ ಮಾಡು ॥೧॥ ಎಂಬುದೇ ಪ್ರಾಶನೆಗೆ ಮಂತ್ರವು.

—ರಾಮನವಮೀ ನಿರ್ಣಯವು.—

ಚೈತ್ರಶುದ್ಧ ನವಮಿಯೇ ರಾಮನವಮಿಯು. ಚೈತ್ರಶುದ್ಧ ನವಮಿಯ ಮಧ್ಯಾಹ್ನದಲ್ಲಿ ಪುನರ್ವಸೂ ನಕ್ಷತ್ರದಲ್ಲಿ, ಕರ್ಕಾಟಕಲಗ್ನದಲ್ಲಿ ಸೂರ್ಯನು ಮೇಷರಾಶಿಯಲ್ಲಿರುವಾಗ ಸೂರ್ಯಾದಿ ಐದುಗ್ರಹಗಳು ಉಚ್ಚಸ್ಥಾನಗಳಲ್ಲಿರುವ ಸಮಯದಲ್ಲಿ, ಶ್ರೀರಾಮನು ಹುಟ್ಟಿದನೆಂದು ಪ್ರಸಿದ್ಧಿಯು. ಆದ್ದರಿಂದ ಮಧ್ಯಾಹ್ನ ವ್ಯಾಪ್ತಿಯುಳ್ಳ ಈ ನವಮಿಯಲ್ಲಿ ಉಪವಾಸ ಮಾಡಬೇಕು. ಪೂರ್ವದಿನದಲ್ಲಿಯೇ ನವಮಿಗೆ ಮಧ್ಯಾಹ್ನವ್ಯಾಪ್ತಿ

ಇದ್ದರೆ ಅದನ್ನೇ ಗ್ರಹಿಸಬೇಕು. ಎರಡು ದಿನಗಳಲ್ಲಿಯೂ ಮಧ್ಯಾಹ್ನ ವ್ಯಾಪ್ತಿ ಇದ್ದರೂ, ಇಲ್ಲದಿದ್ದರೂ ಎರಡನೆಯದನ್ನು ಗ್ರಹಿಸಬೇಕು. ಅಷ್ಟಮೀ ವಿದ್ಧವಾದ ನವಮಿಯು ಯೋಗ್ಯವಾದದ್ದಲ್ಲ. ಆದ್ದರಿಂದ ಮೊದಲದಿನದಲ್ಲಿ ಸಂಪೂರ್ಣವಾಗಿ ಮಧ್ಯಾಹ್ನವ್ಯಾಪ್ತಿ ಇದ್ದಾಗ್ಯೂ ಅದನ್ನು ಬಿಟ್ಟು ಮಧ್ಯಾಹ್ನದ ಒಂದುಭಾಗಕ್ಕೆ ವ್ಯಾಪ್ತಿ ಇದ್ದಾಗ್ಯೂ, ಎರಡನೆಯದನ್ನೇ ಗ್ರಹಿಸಬೇಕು. ಕೆಲವರು "ಅಷ್ಟಮಿಯಿಂದ ಕೂಡಿ ಮಧ್ಯಾಹ್ನವ್ಯಾಪ್ತಿಯುಳ್ಳದ್ದಾಗಿರುವ ನವಮಿಯು ಪುನರ್ವಸೂನಕ್ಷತ್ರದಿಂದ ಕೂಡಿದ್ದಾಗ್ಯೂ ಬಿಟ್ಟು ಎರಡನೆಯದಿನ ಮೂರುಮುಹೂರ್ತ ಕಾಲ ನವಮಿ ಇದ್ದಾಗ್ಯೂ ಆದಿನವೇ ಎಲ್ಲರೂ ಉಪವಾಸಮಾಡಬೇಕು. ದಶಮಿಯು ಕ್ಷಯತಿಥಿಯಾಗುವುದರಿಂದ ಸ್ಮಾರ್ತರಿಗೆ ಪಾರಣೆಯದಿನಕ್ಕೆ ಏಕಾದಶಿಯ ವ್ರತವು ಪ್ರಾಪ್ತವಾಗುವಂತಾದರೆ ಅವರು ಅಷ್ಟಮೀ ವಿದ್ಧವಾದ ನವಮಿಯನ್ನೇ ಗ್ರಹಿಸಬೇಕು. ವೈಷ್ಣವರು ಮೂರುಮುಹೂರ್ತಕಾಲವಿರುವ ಪರದಿನದ ನವಮಿಯನ್ನೇ ಗ್ರಹಿಸಬೇಕು. ಶುದ್ಧನವಮಿಯು ದೊರೆಯದೆ ಇದ್ದು, ಎರಡನೆದಿಸದಲ್ಲಿ ಮೂರುಮುಹೂರ್ತಕ್ಕಿಂತ ಕಡಿಮೆಯಾಗಿದ್ದರೆ ಎಲ್ಲರೂ ಅಷ್ಟಮೀ ವಿದ್ಧವಾದ ನವಮಿಯಲ್ಲಿಯೇ ಉಪವಾಸ ಮಾಡಬೇಕು." ಎಂದು ಅಭಿಪ್ರಾಯ ಪಡುತ್ತಾರೆ. ಈ ರಾಮನವಮಿಯು ನಿತ್ಯವೂ, ಕಾಮ್ಯವೂ, ಆಗಿದೆ.

—ನವಮೀ ಪ್ರಯೋಗವು.—

ನವಮೀ ವ್ರತಪ್ರಯೋಗವು—ಅಷ್ಟಮಿಯಲ್ಲಿ ಆಚಾರ್ಯ ಪೂಜೆಯನ್ನು ಮಾಡಬೇಕು. "ಶ್ರೀರಾಮ ಪ್ರತಿಮಾದಾನಂ ಕರಿಷ್ಯೇಹಂ ದ್ವಿಜೋತ್ತಮ ತತ್ರಾಚಾರ್ಯೋ ಭವಪ್ರೀತಃ ಶ್ರೀರಾಮೋಸಿತ್ವಮೇವಮೇ" ಇತಿಪ್ರಾರ್ಥ್ಯ-ಎಲೈ ಬ್ರಾಹ್ಮಣಶ್ರೇಷ್ಠನೇ ! ನೀನು ಶ್ರೀರಾಮಚಂದ್ರ ಸ್ವರೂಪನಾಗಿದ್ದೀಯೆ, ನಾನು ನಿನಿಗೆ ರಾಮಪ್ರತಿಮೆಯನ್ನು ದಾನ ಮಾಡುತ್ತೇನೆ. ಈ ವ್ರತದಲ್ಲಿ ನನ್ನಮೇಲೆ ಪ್ರೀತಿಯಿಟ್ಟು ನೀನು ಆಚಾರ್ಯನಾಗಿರು ॥೧॥ ಎಂದು ಪ್ರಾರ್ಥಿಸಿ "ನವಮ್ಯಾಅಂಗಭೂತೇನ ಏಕಭಕ್ತೇನರಾಘವ। ಇಕ್ಷ್ವಾಕುವಂಶತಿಲಕ ಪ್ರೀತೋಭವಭವಪ್ರಿಯ ॥೧॥" ಇತ್ಯೇಕಭಕ್ತಂ ಸಂಕಲ್ಪ್ಯ; ಎಲೈ ಇಕ್ಷ್ವಾಕುಕುಲತಿಲಕನಾದ ಶ್ರೀ

ರಾವನೇ ! ನವಮೀವ್ರತಕ್ಕೆ ಅಂಗಭೂತ(ಕಾರಣ)ವಾಗಿನಾನುಮಾಡುವ ಏಕಭಕ್ತ್ಯಕ್ಕೆ ನೀನುಸುಪ್ರೀತನಾಗು ॥ ೧ ॥ಎಂದು ಹೇಳಿ ಏಕಭಕ್ತಕ್ಕಾಗಿ ಸಂಕಲ್ಪ ಮಾಡಿ ಆಚಾರ್ಯನೊಡನೆ ಹವಿಷ್ಯ ಪದಾರ್ಥಗಳನ್ನು ಭೋಜನಮಾಡಿ ಪೂಜಾ ಮಂಡಪವನ್ನು ನಿರ್ಮಿಸಿ ಅದರಲ್ಲಿ ವೇದಿಕೆಯನ್ನು ಮಾಡಬೇಕು. ನವಮಿಯ "ಬೆಳಗಿನಲ್ಲಿ "ಉಪೋಷ್ಯೇನವಮ್ಯಾಂತ್ವದ್ಯ ಯಾಮೇಷ್ವಷ್ಟಸು ರಾಘವ । ತೇನಪ್ರೀತೋಭವ ತ್ವಂಮೇ ಸಂಸಾರಾತ್ರಾಹಿ ಮಾಂಹರೇ॥೧॥" ಎಲೈರಾಮನೇ! ಈ ನವಮಿಯ ಎಂಟುಯಾಮಗಳಲ್ಲಿಯೂ ನಾನು ಉಪೋಷ್ಯಮಾಡುತ್ತೇನೆ. ನೀನು ನನ್ನಲ್ಲಿ ಸಂತುಷ್ಟನಾಗಿ ನನ್ನನ್ನು ಈ ಸಂಸಾರ ಬಂಧದಿಂದ ಬಿಡುಗಡೆ ಮಾಡಿ ರಕ್ಷಿಸು ॥೧॥ ಎಂದು ಉಪೋಷ್ಯ ಸಂಕಲ್ಪಮಾಡಿ-"ಇಮಾಂ ಸ್ವರ್ಣಮಯೀಂ ರಾಮಪ್ರತಿಮಾಂ ಸ್ವಾಂ ಪ್ರಯತ್ನತಃ । ಶ್ರೀರಾಮಪ್ರೀತ ಯೇದಾಸ್ಯೇ ರಾಮಭಕ್ತಾಯಧೀಮತೇ ॥೧॥" ನಾನು ಮಾಡಿಸಿರುವ ಈ ಚಿನ್ನದ ರಾಮಪ್ರತಿಮೆಯನ್ನು, ಶ್ರೀರಾಮ ಪ್ರೀತ್ಯರ್ಥವಾಗಿ ರಾಮ ಭಕ್ತನಾದ ಬ್ರಾಹ್ಮಣ ಶ್ರೇಷ್ಠನಿಗೆ ದಾನಮಾಡುತ್ತೇನೆ ॥ ೧॥ ಎಂದು ದಾನಕ್ಕೆ ಸಂಕಲ್ಪ ಮಾಡಬೇಕು. ಶ್ರೀ ರಾಮನವಮೀ ವ್ರತಾಂಗವಾಗಿ ಶ್ರೀರಾಮನಿಗೆ ಷೋಡಶೋಪಚಾರ ಪೂಜೆಯನ್ನು ಮಾಡುತ್ತೇನೆ, ಎಂದು ಸಂಕಲ್ಪಮಾಡಿ,ವೇದಿಕೆಯಲ್ಲಿ(ಜಗುಲಿ)ಸರ್ವತೋ ಭದ್ರ ಮಂಡಲದಲ್ಲಿ ಪೂರ್ಣಕಲಶವನ್ನು ವಸ್ತ್ರಸಹಿತವಾಗಿಟ್ಟು, ಪ್ರತಿಮಾಶುದ್ಧಿ ಪೂರ್ವಕವಾಗಿ ಕಲಶದಲ್ಲಿ ಪ್ರತಿಮೆಯನ್ನು ಹಾಕಿ ಆಪ್ರತಿಮೆಯಲ್ಲಿ ಶ್ರೀ ರಾಮನನ್ನು ಆವಾಹನೆಮಾಡಿ ಪುರುಷ ಸೂಕ್ತವಿಧಾನದಿಂದ ಷೋಡಶೋಪಚಾರಪೂಜೆಯನ್ನು ಮಾಡಿ, ಅನಂತರದಲ್ಲಿ "ರಾಮಸ್ಯಜನನೀ ಚಾಸಿ ರಾಮಾತ್ಮಕಮಿದಂಜಗತ್,॥ ಅತಸ್ತ್ವಾಂ ಪೂಜಯಿಷ್ಯಾಮಿ ಲೋಕಮಾತರ್ನಮೋಸ್ತುತೇ ॥೧॥" ಪ್ರಪಂಚವು ರಾಮ ಸ್ವರೂಪವಾಗಿರುವುದು,ಅಂತಹರಾಮನಿಗೆ ನೀನು ತಾಯಿಯಾದ್ದರಿಂದ ಲೋಕಮಾತೆಯಾದ ನಿನ್ನನ್ನು ನಾನು ಪೂಜಿಸುತ್ತೇನೆ, ನಿನಗೆ ನಮಸ್ಕಾರವು ॥ ೧ ॥ ಎಂದು ಕೌಸಲ್ಯಾದೇವಿಯನ್ನು ಪೂಜಿಸಿ 'ಓಂನಮೋದಶರಥಾಯ' ಎಂದು ದಶರಥನಿಗೂ ಪೂಜೆ ಮಾಡಿ ಪೂಜೆಗಳೆಲ್ಲವೂ ಆದಮೇಲೆ ಮಧ್ಯಾಹ್ನದಲ್ಲಿ ಫಲಪುಷ್ಪ ಜಲಸಹಿ

ತವಾಗಿ ಶಂಖದಿಂದ ಅರ್ಘ್ಯವನ್ನು ಕೊಡಬೇಕು. "ದಶಾನನ ವಧಾರ್ಥಾಯ ಧರ್ಮಸಂಸ್ಥಾಪನಾಯಚ । ದಾನವಾನಾಂ ವಿನಾಶಾಯ ದೈತ್ಯಾನಾಂ ನಿಧನಾಯಚ ॥೧॥ ಪರಿತ್ರಾಣಾಯ ಸಾಧೂನಾಂ ಜಾತೋ ರಾಮಃ ಸ್ವಯಂಹರಿಃ । ಗೃಹಾಣಾರ್ಘ್ಯಂ ಮಯಾದತ್ತಂ ಭ್ರಾತೃಭಿಸ್ಸಹಿತೋನಘ ॥ ೨ ॥" ಎಲೈರಾಮನೇ! ನೀನು ರಾವಣ ಸಂಹಾರಕ್ಕಾಗಿಯೂ, ಧರ್ಮಸ್ಥಾಪನೆ ಮಾಡುವುದಕ್ಕಾಗಿಯೂ, ದೈತ್ಯದಾನವರನ್ನು ಕೊಂದು ಸುಜನರನ್ನು ರಕ್ಷಿಸುವುದಕ್ಕಾಗಿಯೂ ಹುಟ್ಟಿದ ಮಹಾವಿಷ್ಣುವಾಗಿದ್ದಿ, ಆದ್ದರಿಂದ ಸಹೋದರರೊಡನೆ ಕೂಡಿದ ನಿನಗೆ ಫಲಪುಷ್ಪಾಕ್ಷತೆ ಗಳಿಂದ ಯುಕ್ತವಾದ ಅರ್ಘ್ಯವನ್ನು ಕೊಡುತ್ತೇನೆ ತೆಗೆದುಕೊಳ್ಳುವವನಾಗು ॥ ೨ ॥ ಎಂಬುದೇ ಅರ್ಘ್ಯಮಂತ್ರವು. ಅನಂತರದಲ್ಲಿ ರಾತ್ರಿಜಾಗರಣೆಯನ್ನು ಮಾಡಿ,ಬೆಳಗ್ಗೆ ನಿತ್ಯ ಪೂಜೆಯನ್ನುಮಾಡಿ, ಮೂಲಮಂತ್ರದಿಂದ ನೂರೆಂಟು (ಅಷ್ಟೋತ್ತರಶತ) ಪಾಯಸದ ಆಹುತಿಯನ್ನು ಕೊಟ್ಟು ಪುನಃ ಪೂಜೆಮಾಡಿ ವಿಸರ್ಜನೆ ಮಾಡಿ ಆಚಾರ್ಯರಿಗೆ ಕಲಶ ವಸ್ತ್ರ ಪ್ರತಿಮಾದಾನ ಮಾಡಬೇಕು. ಅದಕ್ಕೆಮಂತ್ರವು"ಇಮಾಂ ಸ್ವರ್ಣಮಯೀಂ ರಾಮ ಪ್ರತಿಮಾಂ ಸಮಲಂಕೃತಾಂ । ಶುಚಿವಸ್ತ್ರ ಯುಗಚ್ಛನ್ನಾಂ ರಾಮೋಹಂ ರಾಘವಾಯತೇ ॥ ೧ ॥ ಶ್ರೀ ರಾಮ ಪ್ರೀತಯೇದಾಸ್ಯೇತುಷ್ಟೋ ಭವತುರಾಘವಃ॥" ವಸ್ತ್ರ ಯುಗ್ಮದಿಂದಲೂ, ಗಂಧಪುಷ್ಪಾಕ್ಷತೆಗಳಿಂದಲೂ, ಅಲಂಕೃತವಾಗಿರುವ ಈ ಸುವರ್ಣಮಯವಾದ ರಾಮ ಪ್ರತಿಮೆಯನ್ನು, ರಾಮನಾದ ನಾನು ರಾಮರೂಪನಾಗಿರುವ ನಿನಗೆ ರಾಮ ಪ್ರೀತ್ಯರ್ಥವಾಗಿ ದಾನಮಾಡುವೆನು. ಶ್ರೀ ರಾಮನು ಸಂತುಷ್ಟನಾಗಲಿ,ಈ ಮಂತ್ರದಿಂದ ಪ್ರತಿಮಾದಾನಮಾಡಿ-"ತವಪ್ರಸಾದಂ ಸ್ವೀಕೃತ್ಯಕ್ರಿಯತೇಪಾರಣಾಮಯಾ ! ವ್ರತೇನಾನೇನಸಂತುಷ್ಟಃ ಸ್ವಾಮಿನ್ ಭಕ್ತಿಂ ಪ್ರಯಚ್ಛಮೇ ॥೧॥" ಎಲೈ ರಾಮಚಂದ್ರನೇ! ನಿನ್ನ ಪ್ರಸಾದವನ್ನು ಸ್ವೀಕರಿಸಿ ಪಾರಣೆಯನ್ನು ಮಾಡುತ್ತೇನೆ. ನಾನು ಮಾಡಿದ ಈ ವ್ರತದಿಂದ ಸಂತುಷ್ಟನಾಗಿ ಸರ್ವದಾ ನಿನ್ನಲ್ಲಿ ನನಗೆ ಭಕ್ತಿಯುಂಟಾಗುವಂತೆ ಮಾಡು॥೧॥ ಎಂದು ಪ್ರಾರ್ಥನೆಮಾಡಿ ನವಮಿಯ ಕೊನೆಯಲ್ಲಿ ಪಾರಣೆಯನ್ನು ಮಾಡಬೇಕು ಈ ವ್ರತವನ್ನು ಮಲಮಾಸದಲ್ಲಿ ಮಾಡಕೂಡ

ಡದು. ಹೀಗೆಯೇ ಜನ್ಮಾಷ್ಟಮಿ ಮೊದಲಾದ ವ್ರತವನ್ನೂ ಮಾಡಕೂಡದು. ಈ ನವಮಿಯಲ್ಲಿಯೇ ದೇವೀ ನವರಾತ್ರಿಯನ್ನು ಪೂರ್ತಿಮಾಡಬೇಕು. ಈ ದೇವೀನವರಾತ್ರಿಗೆ ಆಶ್ವಯುಜ ಮಾಸದಲ್ಲಿ ಮಾಡುವ ಶರನ್ನವರಾತ್ರಿಯಂತೆಯೇ ನಿರ್ಣಯವು. ಚೈತ್ರಶುದ್ಧ ಏಕಾದಶಿಯಲ್ಲಿ ಶ್ರೀ ಕೃಷ್ಣನಿಗೆ ಆಂದೋಳ ನೋತ್ಸವವು. "ಡೋಲಾರೂಢಂ ಪ್ರಪಶ್ಯಂತಿ ಕೃಷ್ಣಂಕಲಿಮಲಾಪಹಂ। ಅಪರಾಧಸಹಸ್ರೈಸ್ತು ಮುಕ್ತಾಸ್ತೇಧೂನನೇ ಕೃತೇ ।೧।" ಕಲಿದೋಷ ನಿವಾರಕನಾದ ಶ್ರೀ ಕೃಷ್ಣನಡೋಲೋತ್ಸವವನ್ನು ನೋಡಿದವರಿಗೆ ಸಾವಿರಾರು ದೋಷಗಳು ನಿವಾರಣೆಯಾಗುವವು. ॥೧॥ "ತಾವತ್ತಿಷ್ಠನ್ತಿ ಪಾಪಾನಿಜನ್ಮಕೋಟಿ ಕೃತಾನ್ಯಪಿ। ಕ್ರೀಡಂತೇ ವಿಷ್ಣುನಾಸಾರ್ಧಂವೈಕುಂಠೇದೇವ ಪೂಜಿತಾಃ ॥೧॥" ಶ್ರೀಕೃಷ್ಣನ ಡೋಲೋತ್ಸವದಲ್ಲಿ ತೂಗಿದವರಿಗೆ (ಹರಿಬಿಡುವುದು) ಕೋಟಿ ಜನ್ಮಗಳಿಂದುಂಟಾಗಿದ್ದ ಪಾಪಗಳೆಲ್ಲವೂ ನಾಶವಾಗುವುವು, ದೇವತೆಗಳಿಂದಲೂ ಅವರು ಸತ್ಕೃತರಾಗಿ ವಿಷ್ಣುವಿನೊಡನೆ ವೈಕುಂಠದಲ್ಲಿ ಕ್ರೀಡಿಸುವರು. ಇವು ಕೃಷ್ಣಡೋಲೋತ್ಸವ ಮಹಿಮೆಗಳು.

### ವಿಷ್ಣುವಿನ ದಮನೋತ್ಸವವು.

ಚೈತ್ರಶುದ್ಧ ದ್ವಾದಶಿಯಲ್ಲಿ ಶ್ರೀ ಮಹಾವಿಷ್ಣುಗೆ ದವನದಉತ್ಸವವು ನಡೆಯಬೇಕು. ಅದು ಪಾರಣೆಯ ದವಸದಲ್ಲಿಯೇ ಆಗಬೇಕು. "ಪಾರಣಾಹೇನಲಭ್ಯೇತ ದ್ವಾದಶೀ ಘಟಿಕಾಪಿಚೇತ್ । ತದಾತ್ರಯೋದಶೀಗ್ರಾಹ್ಯಾ ಪವಿತ್ರದಮನಾರ್ಪಣೇ ॥೧॥" ಪಾರಣೆಯ ದಿನದಲ್ಲಿ ದ್ವಾದಶಿಯು ಒಂದುಗಳಿಗೆ ಯಾದರೂ ಇಲ್ಲದ ಪಕ್ಷದಲ್ಲಿ ದವನವನ್ನು ಅರ್ಪಿಸುವುದಕ್ಕೆತ್ರಯೋದಶಿಯನ್ನು ಗ್ರಹಿಸಬೇಕು ಎಂದು ಹೇಳಿದೆ ॥೧॥ ಈಶ್ವರನಿಗೆ ಚತುರ್ದಶಿಯಲ್ಲಿ ದವನದ ಅಲಂಕಾರಮಾಡಬೇಕು. ಅದಕ್ಕೆ ವಿಧಿ:—ಉಪವಾಸದಿನದಲ್ಲಿ ನಿತ್ಯಾರ್ಚನೆಯನ್ನು ತೀರಿಸಿಕೊಂಡು ದವನವು ಬೆಳದಿರುವ ಸ್ಥಳಕ್ಕೆ ಹೋಗಿ ಅದನ್ನು ಕ್ರಯಕ್ಕೆ ತೆಗೆದುಕೊಂಡು ಚಂದನ ಗಂಧಾದಿಗಳಿಂದ ಪೂಜಿಸಿ ಶ್ರೀ ಕೃಷ್ಣನನ್ನು ಪೂಜಿಸುವುದಕ್ಕಾಗಿ ನಿನ್ನನ್ನುತೆಗೆದುಕೊಂಡು ಹೋಗುವೆನು,ಎಂದು ಪ್ರಾರ್ಥನೆಮಾಡಿ ನಮಸ್ಕರಿಸಬೇಕು. ಬೇರೆ ದೇವತೆಗಳನ್ನು ಪೂಜಿಸಬೇಕಾಗಿದ್ದರೆ ಆ

ಯಾದೇವತೆಗಳೆಂದು ಹೇಳಿಕೊಳ್ಳಬೇಕು. ಅನಂತರದಲ್ಲಿ ಆ ದವನವನ್ನು ಕಿತ್ತು ಮನೆಗೆತಂದು, ಪಂಚಗವ್ಯದಿಂದಲೂ, ಶುದ್ಧೋದಕದಿಂದಲೂ ತೊಳೆದು ದೇವರ ಎದುರಿಗೆ ಇಟ್ಟು ಅದರಲ್ಲಿ ಅಶೋಕ, ಕಾಲ, ವಸನ್ತ, ಕಾಮ ; ಇವರುಗಳನ್ನು ಆ ವಾಹನೆಮಾಡಿ, ಅಥವಾ-ಕಾಮದೇವನೊಬ್ಬನನ್ನಾದರೂ ಆವಾಹನೆಮಾಡಿ ಗಂಧಾದಿಗಳಿಂದ ಪೂಜಿಸಬೇಕು ॥ "ನಮೋಸ್ತು ಪುಷ್ಪಬಾಣಾಯ ಜಗದಾಹ್ಲಾದಕಾರಿಣೇ। ಮನ್ಮಥಾಯಃಜಗನ್ನೇತ್ರೇರತಿ ಪ್ರೀತಿಪ್ರಿಯಾಯತೇ॥೧॥" ಹೂಬಾಣಗಳುಳ್ಳವನಾಗಿಯೂ ಲೋಕಕ್ಕೆಲ್ಲಾ ಸಂತೋಷವನ್ನುಂಟುಮಾಡುವವನಾಗಿಯೂ, ಜಗನ್ನಿಯಾಮಕನಾಗಿಯೂ, ರತಿದೇವಿಯ ಪ್ರೀತಿಪಾತ್ರನಾಗಿಯೂ, ಇರುವ ಮನ್ಮಥನೇ ! ನಿನಗೆ ನಮಸ್ಕಾರವು ॥೧॥ ಎಂಬ ಮಂತ್ರದಿಂದ ಕಾಮನನ್ನು ಆವಾಹನೆ ಮಾಡಬೇಕು "ಕಾಮಭಸ್ಮಸಮುದ್ಭೂತ ರತಿಬಾಷ್ಪಪರಿಪ್ಲುತ। ಋಷಿಗಂಧರ್ವದೇವಾದಿ ವಿಮೋಹಕನಮೋಸ್ತುತೇ।" ದಗ್ಧನಾದ ಮನ್ಮಥನ ಭಸ್ಮದಿಂದ ಹುಟ್ಟಿ ರತಿಯ ಕಣ್ಣೀರಿನಲ್ಲಿ ನೆನದು, ಋಷಿಗಳು ಗಂಧರ್ವರು, ದೇವತೆಗಳು ಮೊದಲಾದವರನ್ನೆಲ್ಲಾ ಮೋಹಗೊಳಿಸುವ ದಮನನೇ! ನಿನಗೆ ನಮಸ್ಕಾರವು॥೧॥ ಎಂದು ದವನವನ್ನು ಪ್ರಾರ್ಥಿಸಿ 'ಓಂಕಾಮಾಯ ನಮಃ' ಎಂಬ ಮಂತ್ರದಿಂದ, ಪರಿವಾರಸಹಿತನಾದ ಕಾಮರೂಪಿಯಾದ ದಮನನಿಗೆ (ದವನಕ್ಕೆ) ಗಂಧಾದಿಗಳಿಂದ ಪೂಜೆಮಾಡಬೇಕು. ಅನಂತರ ರಾತ್ರಿಯಲ್ಲಿ ದೇವರನ್ನು ಪೂಜಿಸಿ ಅಧಿವಾಸಮಾಡಿಸಬೇಕು. ದೇವರ ಎದುರಿಗೆ ಸರ್ವತೋಭದ್ರಮಂಡಲವನ್ನು ರಚಿಸಿ ಅಲ್ಲಿ ಕಲಶ ಸ್ಥಾಪನೆಮಾಡಿ ಅಲ್ಲಿ ಬಿದಿರು ಬುಟ್ಟಿಯಲ್ಲಿ ದವನವನ್ನು ಇಟ್ಟು ಬಗೆದ ಬಟ್ಟೆಯಿಂದ ಮುಚ್ಚಿ ಇರಿಸಬೇಕು. "ಪೂಜಾರ್ಥಂದೇವದೇವಸ್ಯ ವಿಷ್ಣೋರ್ಲಕ್ಷ್ಮೀಪತೇಃ ಪ್ರಭೋ। ದಮನತ್ವಮಿಹಾಗಚ್ಛ ಸಾನ್ನಿಧ್ಯಂಕುರುತೇನಮಃ॥೧॥" ದೇವೋತ್ತಮನಾಗಿಯೂ,ಲಕ್ಷ್ಮೀಪತಿಯಾಗಿಯೂ,ವಿಷ್ಣುವನ್ನು ಪೂಜಿಸಬೇಕಾಗಿರುವುದರಿಂದ ಎಲೈದವನನೇ ! ನೀನು ಇಲ್ಲಿ ಬಂದು ಸೇರಿರುವನಾಗು, ನಿನಗೆ ನಮಸ್ಕರಿಸುವೆನು ॥೧॥ ಎಂಬದಾಗಿದ ಮನಕದೇವತೆಯನ್ನಾವಾಹನೆಮಾಡಿ ಪೂರ್ವವೇ ಮೊದಲಾದ ಎಂಟು ದಿಕ್ಕುಗಳಲ್ಲಿ, (೧)ಕ್ಲೀಂ-ಕಾಮದೇವಾಯನಮಃ

ಹ್ರೀಂ-ರತ್ಯೈನಮಃ (೨) ಕ್ಲೀಂ-ಭಸ್ಮಶರೀರಾಯನಮಃ. ಹ್ರೀಂ-ರತ್ಯೈನಮಃ (೩) ಕ್ಲೀಂ-ಅನಂಗಾಯನಮಃ. ಹ್ರೀಂ-ರತ್ಯೈನಮಃ (೪)ಕ್ಲೀಂ ಮನ್ಮಥಾಯನಮಃ. ಹ್ರೀಂ-ರತ್ಯೈನಮಃ (೫) ಕ್ಲೀಂ-ವಸನ್ತಸಖಾಯನಮಃ, ಹ್ರೀಂರತ್ಯೈನಮಃ (೬) ಕ್ಲೀಂ-ಸ್ಮರಾಯನಮಃ. ಹ್ರೀಂ-ರತ್ಯೈನಮಃ (೭) ಕ್ಲೀಂ-ಇಕ್ಷುಚಾಪಾಯನಮಃ. ಹ್ರೀಂ-ರತ್ಯೈನಮಃ. (೮) ಕ್ಲೀಂ-ಪುಷ್ಪಬಾಣಾಸ್ತ್ರಾಯನಮಃ. ಹ್ರೀಂ, ರತ್ಯೈನಮಃ; ಎಂಬದಾಗಿ ಪೂಜಿಸಬೇಕು. "ತತ್ಪುರುಷಾಯ. ವಿದ್ಮಹೇ ಕಾಮದೇವಾಯ ಧೀಮಹಿ । ತನ್ನೋಽನಂಗಃ ಪ್ರಚೋದಯಾತ್ ॥" ಎಂಬ ಕಾಮಗಾಯತ್ರೀ ಮಂತ್ರದಿಂದ ದಮನವನ್ನು ನೂರೆಂಟುಸಾರಿ ಅಭಿಮಂತ್ರಿಸಿ ಗಂಧಾದಿಗಳಿಂದ ಪೂಜೆಮಾಡಿ ಹ್ರೀಂ, ನಮಃ, ಎಂದು ಪುಷ್ಪಾಂಜಲಿಯನ್ನು ಕೊಟ್ಟು "ನಮೋಽಸ್ತು ಪುಷ್ಪಬಾಣಾಯ" ಎಂಬ ಪೂರ್ವದಲ್ಲಿ ಆವಾಹನೆಗೆ ಹೇಳಿದ ಮಂತ್ರದಿಂದ ನಮಸ್ಕಾರಮಾಡಬೇಕು. ಆಮೇಲೆ "ಕ್ಷೀರೋದಧಿಮಹಾನಾಗಶಯ್ಯಾವಸ್ಥಿತವಿಗ್ರಹ । ಪ್ರಾತಸ್ತ್ವಾಂಪೂಜಯಿಷ್ಯಾಮಿ ಸನ್ನಿಧೌಭವತೇನಮಃ॥೧॥" ಕ್ಷೀರಸಮುದ್ರದಲ್ಲಿ ಆದಿಶೇಷನನ್ನು ಹಾಸಿಗೆಯಾಗಿಮಾಡಿಕೊಂಡು ಮಲಗಿರುವ ಶ್ರೀ ಮಹಾವಿಷ್ಣುವೇ! ನಾಳೆ ಬೆಳಗಿನಲ್ಲಿ ನಿನ್ನನ್ನು ಪೂಜಿಸುವೆನು. ನನ್ನ ಸಮೀಪಕ್ಕೆ ಬರುವವನಾಗು, ನಿನಗೆ ನಮಸ್ಕಾರವು, ಎಂದು ಪ್ರಾರ್ಥಿಸಿ ಪುಷ್ಪಾಂಜಲಿಯನ್ನು ಸಮರ್ಪಿಸಿ ಆ ಏಕಾದಶಿಯ ರಾತ್ರಿಯಲ್ಲಿ ಜಾಗರಣೆಮಾಡಬೇಕು. ಪ್ರಾತಃಕಾಲದಲ್ಲಿ ನಿತ್ಯಪೂಜೆಮಾಡಿದಮೇಲೆ ಪುನಃ ದೇವರನ್ನು ಪೂಜಿಸಿ (ಪುನಃಪೂಜೆಮಾಡಿ) ಗರಿಕೆ, ಗಂಧ, ಅಕ್ಷತೆಗಳಿಂದ ಕೂಡಿದ ದವನದ ಕುಚ್ಚನ್ನು ತೆಗೆದುಕೊಂಡು, ಮೂಲಮಂತ್ರವನ್ನು ಹೇಳಿ,

"ದೇವದೇವಜಗನ್ನಾಥವಾಂಛಿತಾರ್ಥಪ್ರದಾಯಕ । ಹೃತ್ಸ್ಥಾನ್ ಪೂರಯಮೇವಿಷ್ಣೋ ಕಾಮಾನ್ ಕಾಮೇಶ್ವರೀಪ್ರಿಯ ॥೧॥ ಇದಂದಮನಕಂದೇವಗೃಹಾಣಮದನುಗ್ರಹಾತ್ । ಇಮಾಂಸಾಂವತ್ಸರೀಂಪೂಜಾಂ ಭಗವನ್ ಪರಿಪೂರಯ ॥೨॥"

ದೇವೋತ್ತಮನಾಗಿಯೂ, ಜಗದೊಡೆಯನಾಗಿಯೂ ಭಕ್ತರಮನೋಽಭೀಷ್ಟಗಳನ್ನು ನೆರವೇರಿಸುವವನಾಗಿಯೂ, ಇರುವ ಶ್ರೀ ವಾಸು

ದೇವನೇ ನನ್ನ ಮನಸ್ಸಿನಲ್ಲಿನ ಕೋರಿಕೆಯನ್ನು ನೆರವೇರಿಸು॥೧॥ ಮತ್ತು ನನ್ನಲ್ಲಿ ಅನುಗ್ರಹಮಾಡಿ ಈ ದವನವನ್ನು ಸ್ವೀಕರಿಸಿ ನಾನು ಸಂವತ್ಸರ ಪೂರ್ತಿಯಾಗುವ ವರೆಗೂ ಮಾಡುವ ಪೂಜೆಯನ್ನು ನಿರ್ವಿಘ್ನವಾಗಿ ನೆರವೇರುವಂತೆ ಮಾಡು ॥೨॥ ಎಂದುಹೇಳಿ ಪುನಃ ಮೂಲಮಂತ್ರವನ್ನು ಪಠಿಸಿ ದೇವರಿಗೆ ದವನವನ್ನು ಪೂಜಿಸಬೇಕು. ಅನಂತರದಲ್ಲಿ ಚೆನ್ನಾಗಿ ಅಲಂಕಾರಮಾಡಬೇಕು. ಆಮೇಲೆ ಅಂಗದೇವತೆಗಳಿಗೆ ಪೂಜೆಮಾಡಿ ವಿಷ್ಣುವನ್ನು ಪ್ರಾರ್ಥಿಸಬೇಕು. "ಮಣಿವಿದ್ರುಮಮಾಲಾಭಿರ್ಮಂದಾರಕುಸುಮಾದಿಭಿಃ ಇಯಂಸಾಂವತ್ಸರೀಪೂಜಾ ತವಾಸ್ತು ಗರುಡಧ್ವಜ ॥೧॥ ವನಮಾಲಾಂ ಯಥಾದೇವ ಕೌಸ್ತುಭಂಸತತಂಹೃದಿ।ತದ್ವದ್ದಾಮನಕೀಂಮಾಲಾಂ ಪೂಜಾಂ ಚ ಹೃದಯೇವಹ॥೨॥ ಜಾನತಾಜಾನತಾವಾಪಿ ನಕೃತಂಯತ್ತವಾರ್ಚನಂ । ತತ್ಸರ್ವಂಪೂರ್ಣತಾಂಯಾತುತ್ವತ್ಪ್ರಸಾದಾದ್ರಮಾಪತೇ ॥೩॥ ಜಿತಂತೇಪುಣ್ಡರೀಕಾಕ್ಷ ನಮಸ್ತೇವಿಶ್ವಭಾವನ । ಹೃಷೀಕೇಶನಮಸ್ತೇಸ್ತು ಮಹಾಪುರುಷ ಪೂರ್ವಜ ॥೪॥" ಎಲೈ ಹರಿಯೇ! ಹವಳ, ರತ್ನ ಇವುಗಳ ಮಾಲೆಗಳಿಂದಲೂ, ಮಂದಾರಪುಷ್ಪ ಮೊದಲಾದುವುಗಳಿಂದಲೂ ನಿನ್ನಪೂಜೆಯು ಸಂವತ್ಸರದವರೆಗೂ ನಿರ್ವಿಘ್ನವಾಗಿ ನಡೆಯಲಿ ॥೧॥ ನೀನು ವನಮಾಲೆಯನ್ನೂ, ಕೌಸ್ತುಭವನ್ನೂ ಹೃದಯದಲ್ಲಿ ಸರ್ವದಾ ಧರಿಸಿರುವಂತೆಯೇ ನಾನು ಅರ್ಪಿಸಿದ ದವನದಮಾಲೆಯನ್ನೂ ಧರಿಸುವವನಾಗು ॥೨॥ ಎಲೈ ರಮಾಪತಿಯಾದ ವಿಷ್ಣುವೇ! ನಾನು ತಿಳಿದಾಗಲಿ, ತಿಳಿಯದೆ ಆದರೂ ನಿನ್ನ ಪೂಜೆಮಾಡುವುದರಲ್ಲಿ ಯಾವುದಾದರೂ ನ್ಯೂನತೆಯುಂಟಾಗಿದ್ದಲ್ಲಿ ನಿನ್ನ ಅನುಗ್ರಹದಿಂದ ಅದೆಲ್ಲವೂ ಪೂರ್ಣವಾಗಲಿ ॥೩॥ ಜಯಶಾಲಿಯಾಗಿಯೂ, ಕಮಲಾಕ್ಷನಾಗಿಯೂ, ವಿಶ್ವರೂಪನಾಗಿಯೂ, ಭೂತಪತಿಯಾಗಿಯೂ, ಪುರಾಣ ಪುರುಷನಾಗಿಯೂ, ಇರುವನಿನಗೆ ನಮಸ್ಕಾರಮಾಡುತ್ತೇನೆ ॥೪॥ ಇವುಗಳಿಂದಲೂ, 'ಮಂತ್ರಹೀನಂ ಕ್ರಿಯಾಹೀನಂ' ಇವುಗಳಿಂದಲೂ ಪ್ರಾರ್ಥನೆಮಾಡಿ ಪಂಚೋಪಚಾರಪೂಜೆಮಾಡಿ, ಉತ್ತರ ನಿರಾಜನಮಾಡಿ, ಬ್ರಾಹ್ಮಣರಿಗೆ ದವನವನ್ನು ಕೊಟ್ಟು ತಾನೂ ಪ್ರಸಾದವನ್ನು ಧರಿಸಿ, ಇಷ್ಟಬಂಧುಮಿತ್ರರೊಡನೆ ಪಾರಣೆಯನ್ನು ಮಾಡಬೇಕು. ಮಂತ್ರದೀಕ್ಷೆಯನ್ನು ವಹಿಸದಿದ್ದವರು ನಾಮಮಂ

ತ್ರಗಳಿಂದ ದವನವನ್ನು ಅರ್ಪಿಸಬೇಕು. ಈ ವ್ರತಕ್ಕೆ ಗೌಣಕಾಲವು (ಮುಖ್ಯವಲ್ಲದೆ ಸಾಧಾರಣವಾದದ್ದು) ಶ್ರಾವಣಮಾಸದವರೆಗೂ ಉಂಟು, ಇದನ್ನು ಮಲಮಾಸದಲ್ಲಿ ಮಾಡಕೂಡದು. ಶುಕ್ರಾಸ್ತಾದಿಗಳಲ್ಲಿ ಮಾಡಬಹುದು. ಇಂತು ದಮನಾರೋಪವಿಣಧಿಯು.

— ವಿಶೇಷ —

"ಅಹೋರಾತ್ರೇಣದ್ವಾದಶ್ಯಾಂ ಚೈತ್ರೇವಿಷ್ಣುರಿತಿಸ್ಮರನ್। ಪೌಣ್ಡರೀಕಮವಾಪ್ನೋತಿ ದೇವಲೋಕಂಚಗಚ್ಛತಿ॥೧॥" ಚೈತ್ರಮಾಸದ ದ್ವಾದಶಿಯಲ್ಲಿ, ಹಗಲು ರಾತ್ರಿಗಳಲ್ಲಿಯೂ, ಯಾರು ವಿಷ್ಣುಸ್ಮರಣೆ ಮಾಡುತ್ತಾರೋ, ಅವರಿಗೆ ಪೌಣ್ಡರೀಕ ಯಜ್ಞದ ಫಲವು ಪ್ರಾಪ್ತವಾಗುವುದಲ್ಲದೆ ಅವರು ಸ್ವರ್ಗವನ್ನು ಪಡೆಯುತ್ತಾರೆ ॥ ಎಂದು ಭಾರತದಲ್ಲಿ ಹೇಳಿದೆ. ಚೈತ್ರಶುದ್ಧ ತ್ರಯೋದಶಿಯಲ್ಲಿ ಅನಂಗಪೂಜೆ, ಎಂಬ ವ್ರತವು. ಇದರಲ್ಲಿ ದ್ವಾದಶೀ ವಿದ್ಧವಾದ ತ್ರಯೋದಶಿಯನ್ನು ಗ್ರಹಿಸಬೇಕು. ಈ ಶುದ್ಧ ಚತುರ್ದಶಿಯಲ್ಲಿ ನರಸಿಂಹಸ್ವಾಮಿಗೆ ಡೋಲೋತ್ಸವವು. ಈ ದಿನದಲ್ಲಿಯೇ ಶಿವನಿಗೂ, ಏಕವೀರಾದೇವಿಗೂ (ಶಕ್ತಿ) ಭೈರವನಿಗೂ ದವನದ ಪೂಜೆಮಾಡತಕ್ಕದ್ದು. ಇದರಲ್ಲಿ ತ್ರಯೋದಶೀ ವಿದ್ಧವಾಗಿಯೂ,ಅಪರಾಹ್ಣ ವ್ಯಾಪ್ತಿಯುಳ್ಳದ್ದಾಗಿಯೂ,ಇರುವ ಚತುರ್ದಶಿಯನ್ನೇ ಗ್ರಹಿಸಬೇಕು. ಅಪರಾಹ್ಣ ವ್ಯಾಪ್ತಿಯಿಲ್ಲದೆ ಹೋದರೆ ಅಪರಾಹ್ಣದ ಸ್ಪರ್ಶಮಾತ್ರವಾದರೂ ಇರುವ ಮೊದಲನೆಯ ಚತುರ್ದಶಿಯನ್ನು ಗ್ರಹಿಸಬೇಕು. ಹಾಗೂ ಸಿಕ್ಕದಿದ್ದರೆ ಎರಡನೆಯದನ್ನು ಗ್ರಹಿಸಬಹುದು. ಚೈತ್ರಪೂರ್ಣಿಮೆಯನ್ನು ಸಾಮಾನ್ಯ ನಿರ್ಣಯದಂತೆ ಎರಡನೆಯದನ್ನು ಗ್ರಹಿಸಬೇಕು. ಪೂರ್ವದಲ್ಲಿ ಹೇಳಿದಂತೆ ಆಯಾ ದಿನಗಳಲ್ಲಿ ದವನದ ಪೂಜೆಯನ್ನು ಮಾಡದಿದ್ದರೆ ಈ ಪೌರ್ಣಿಮಾದಿನದಲ್ಲಿ ಎಲ್ಲ ದೇವತೆಗಳಿಗೂ ದವನದ ಪೂಜೆಯನ್ನು ಮಾಡಬಹುದು. ಚಿತ್ರಾನಕ್ಷತ್ರ ಯುಕ್ತವಾದ ಚೈತ್ರಪೌರ್ಣಿಮೆಯಲ್ಲಿ ಚಿತ್ರವರ್ಣವುಳ್ಳ ವಸ್ತ್ರವನ್ನು ದಾನಮಾಡುವುದರಿಂದ ಸಂಪತ್ತುಂಟಾಗುವುದು. ಭಾನು, ಗುರು, ಶನಿವಾರಗಳುಳ್ಳ ಚೈತ್ರಮಾಸ ಪೌರ್ಣಿಮೆಯಲ್ಲಿ ಸ್ನಾನ, ಶ್ರಾದ್ಧಾದಿಗಳನ್ನು ಮಾಡುವದರಿಂದ ಅಶ್ವಮೇಧಯಾಗದ ಫಲವುಂಟಾಗುವುದು.

## ವೈಶಾಖ ಸ್ನಾನವು.

ಚೈತ್ರಶುದ್ಧ ಏಕಾದಶಿ, ಅಥವಾ ಪೌರ್ಣಮಿ, ಇಲ್ಲವೇ ಮೇಷ ಸಂಕ್ರಮಣವಾದ ದಿವಸದಿಂದ ಪ್ರಾರಂಭಮಾಡಿ ವೈಶಾಖ ಸ್ನಾನವನ್ನು ಮಾಡಬೇಕು.

ವೈಶಾಖಂಸಕಲಂಮಾಸಂ ಮೇಷಸಂಕ್ರಮಣೇರವೇಃ ।
ಪ್ರಾತಃಸನಿಯಮಃ ಸ್ನಾಸ್ಯೇಪ್ರೀಯತಾಂ ಮಧುಸೂದನಃ ॥೧॥
ಮಧುಹಂತುಃಪ್ರಸಾದೇನ ಬ್ರಾಹ್ಮಣಾನಾಮನುಗ್ರಹಾತ್ ।
ನಿರ್ವಿಘ್ನಮಸ್ತುಮೇ ಪುಣ್ಯಂವೈಶಾಖಸ್ನಾನಮನ್ವಹಂ ॥೨॥
ಮಾಧವೇ ಮೇಷಗೇಭಾನೌ ಮುರಾರೇಮಧುಸೂದನ ।
ಪ್ರಾತಃಸ್ನಾನೇನಮೇನಾಥ ಫಲದೋಭವಪಾಪಹ ॥೩॥

ಮೇಷಸಂಕ್ರಾಂತಿ ಮೊದಲು ವೈಶಾಖ ಮಾಸವು ಪೂರ್ತಿಯಾಗುವ ವರೆಗೂ ನಿಯಮದಿಂದ ಪ್ರಾತಃಸ್ನಾನ ಮಾಡುತ್ತೇನೆ. ವಿಷ್ಣುವು ಸುಪ್ರೀತನಾಗಲಿ ॥೧॥ ಮಧುವೈರಿಯಾದ ವಿಷ್ಣುವಿನ ಪ್ರಸಾದದಿಂದಲೂ, ಬ್ರಾಹ್ಮಣರ ಅನುಗ್ರಹದಿಂದಲೂ ನಾನುಮಾಡುವ ಪುಣ್ಯಕರವಾದ ವೈಶಾಖಸ್ನಾನವು ಪ್ರತಿ ದಿನವೂ ವಿಘ್ನವಿಲ್ಲದೆ ನಡೆಯಲಿ ॥೨॥ ಎಲೈ ಪಾಪ ನಿವಾರಕನಾಗಿಯೂ, ಮುರಾರಿಯಾಗಿಯೂ ಇರುವ ಮಧುಸೂದನನೇ ! ವೈಶಾಖದಲ್ಲಿ ಸೂರ್ಯನು ಮೇಷರಾಶಿಗೆ ಬಂದದ್ದನ್ನು ಮೊದಲು ಮಾಡಿಕೊಂಡು ನಾನು ಮಾಡುವ ಪ್ರಾತಃಸ್ನಾನದಿಂದ ನೀನು ಸಂತುಷ್ಟನಾಗಿ ಒಳ್ಳೆಯ ಫಲವನ್ನುಂಟು ಮಾಡುವನಾಗು ॥ ೩ ॥ ಎಂಬುದೇಮಂತ್ರ.

ಸ್ನಾನ ಮಾಡುವವರು ತಾವು ಸ್ನಾನಮಾಡುವ ತೀರ್ಥಗಳ ಹೆಸರುಗಳನ್ನು ಸಂಕಲ್ಪದಲ್ಲಿ ಹೇಳಬೇಕು. ಆ ಹೆಸರುಗಳು ಗೊತ್ತಿಲ್ಲದೆ ಹೋಗುವ ಸಂದರ್ಭದಲ್ಲಿ 'ತೀರ್ಥಸ್ಯದೇವತಾವಿಷ್ಣುಃ ಸರ್ವತ್ರಾಪಿನ ಸಂಶಯಃ' ಅಂದರೆ ಎಲ್ಲಾ ತೀರ್ಥಗಳಿಗೂ ವಿಷ್ಣುವೇ ಅಧಿದೇವತೆಯು, ಈ ವಿಷಯದಲ್ಲಿ ಸಂದೇಹವಿಲ್ಲ, ಎಂಬ ನಿರ್ಣಯ ಸಿಂಧುಕಾರನ ಆಶಯದಂತೆ, (ವಿಷ್ಣುತೀರ್ಥವೆಂಬ ಹೆಸರನ್ನು ಸಂಕಲ್ಪದಲ್ಲಿ ಹೇಳಬೇಕು) ಈ ಸ್ನಾನ ಮಾಡುವವರು, ಹವಿಷ್ಯಾನ್ನವನ್ನು ಭುಂಜಿಸಬೇಕು, ಬ್ರಹ್ಮ

ಚರ್ಯ ಮೊದಲಾದ ನಿಯಮಗಳನ್ನು ನಡೆಯಿಸಬೇಕು. ಹೀಗೆ ಕಡೆಯವರೆಗೂ ಸಂಪೂರ್ಣವಾಗಿ ಸ್ನಾನಮಾಡುವುದಕ್ಕೆ ಶಕ್ತಿಯಿಲ್ಲ ದಿದ್ದರೆ ಕೊನೆಯಲ್ಲಿ ತ್ರಯೋದಶಿ ಮೊದಲು ಪೌರ್ಣಮಿಾವರೆಗೆ ಮೂರು ದಿನಗಳಾದರೂ ಸ್ನಾನ ಮಾಡಬೇಕು. ಈ ಪೌರ್ಣಮಾಸ್ಯೆಯು ಮನ್ವಾದಿಯೆಂದು ಮೊದಲಿನಲ್ಲಿಯೇ ತಿಳಿಸಿದೆ. ಚೈತ್ರಬಹುಳ ತ್ರಯೋದಶಿಯು ಶತಭಿಷಾ ನಕ್ಷತ್ರದೊಡನೆ ಸೇರಿದ್ದರೆ'ವಾರುಣೀ' ಎಂಬ ಹೆಸರು. ಆಗ ಸ್ನಾನಾದಿಗಳನ್ನು ಮಾಡುವುದರಿಂದ ಗ್ರಹಣ ಮೊದಲಾದ ಪರ್ವಕಾಲ ಗಳಲ್ಲಿ ಸ್ನಾನದಾನಾದಿಗಳನ್ನು ಮಾಡುವುದರಿಂದುಂಟಾಗುವ ಫಲವು ಬರ ವುದು. ಶನಿವಾರವು ಈ ದಿನದಲ್ಲಿ ಸೇರಿದರೆ ' ಮಹಾವಾರುಣಿ ಎಂತ ಲೂ, ಶುಭಯೋಗವೂ, ಶನಿವಾರವೂ, ಶತಭಿಷೆಯೂ,ಒಟ್ಟಾಗಿ ಸೇರಿದರೆ 'ಮಹಾಮಹಾವಾರುಣೀ' ಎಂತಲೂ ಹೆಸರು. ವಾರುಣೀ ಯೋಗದಲ್ಲಿ ಬಹುಳ ಪ್ರತಿಪತ್ತು ಮೊದಲ್ಗೊಂಡು ಪೌರ್ಣಮಿಾವರೆಗೆ ತಿಂಗಳಾಗು ವುದು. ಅಮಾವಾಸ್ಯೆಗೆ ತಿಂಗಳು ಪೂರಯಿಸಬೇಕಾದರೆ ಫಾಲ್ಗುಣ ಕೃಷ್ಣ ತ್ರಯೋದಶಿಯನ್ನು ಗ್ರಹಿಸಬೇಕು. ಚೈತ್ರ ಬಹುಳ ಚತುರ್ದಶಿ ಯಲ್ಲಿ ಈಶ್ವರಸನ್ನಿಧಿಯಲ್ಲಿ ಸ್ನಾನಮಾಡಿದರೂ, ಅದೇ ದಿನದಲ್ಲಿ ಮಂಗಳ ವಾರವು ಸೇರಿದಾಗ ಗಂಗಾನದಿಯಲ್ಲಿ ಸ್ನಾನಮಾಡಿದರೂ, ಪಿಶಾಚತ್ವವು (ಹಿಡಿದಪಿಶಾಚವು) ನಿವಾರಣೆಯಾಗುವುದು. ಇಂತು ಚೈತ್ರಮಾಸ ಕೃತ್ಯ ನಿರ್ಣಯೋದ್ದೇಶವು ಮುಗಿದುದು ||೧||

## (೨) ವೈಶಾಖಮಾಸವು.

(೨) ವೈಶಾಖಮಾಸವು-ಈ ಮಾಸದಲ್ಲಿ ಆಗುವ ವೃಷಭ ಸಂಕ್ರಮಣಕ್ಕೆ ಪೂರ್ವದಲ್ಲಿ ಹದಿನಾರುಗಳಿಗೆಗಳು ಪುಣ್ಯಕಾಲವು. ರಾತ್ರಿಯಲ್ಲಿ ಸಂಕ್ರಮಣವಾದಾಗ್ಯೂ ಮೊದಲ ೧೬ ಗಳಿಗೆಗಳೇ ಪುಣ್ಯಕಾಲವು. ಪುಣ್ಯಕಾಲದಲ್ಲಿ ಪ್ರಾತಃಕಾಲದ ಸ್ನಾನವನ್ನೂ, ಪಿತೃಗಳಿಗೆ ತಿಲೋದಕ ತರ್ಪಣವನ್ನೂ, ಧರ್ಮ ಸಂಪಾದನೆಗಾಗಿ ಉದಕುಂಭದಾನವನ್ನೂ ಮಾಡಬೇಕು. ಈ ದಿನದಲ್ಲಿ ವಸಂತಪೂಜೆ ಮಾಡಿ ಬ್ರಾಹ್ಮಣರಿಗೆ ಗಂಧ, ಹೂ,ಪಾನಕ, ಪನಿವಾರಗಳನ್ನು ಕೊಟ್ಟು ತೃಪ್ತಿಪಡಿಸಬೇಕು.

—ವಿಷ್ಣು ಜಲಾಧಿ ವಾಸಾದಿಗಳು—

ವೈಶಾಖದಲ್ಲಾಗಲಿ, ಜ್ಯೇಷ್ಠದಲ್ಲಾಗಲಿ ಯಾವ ಮಾಸದಲ್ಲಿ ಬಿಸಿಲ ಜಳವು ಹೆಚ್ಚಾಗಿರುವುದೋ ಆ ತಿಂಗಳಲ್ಲಿ ಬೆಳಗಿನಲ್ಲಿವಿಷ್ಣುವಿಗೆ ನಿತ್ಯಪೂಜೆಮಾಡಿ ಗಂಧೋದಕದಿಂದ ತುಂಬಿದ ಪಾತ್ರೆಯಲ್ಲಿಟ್ಟು, ಪಂಚೋಪಚಾರಗಳಿಂದ ಪೂಜೆಮಾಡಿ, ಆ ನೀರಿನಲ್ಲಿಯೇ ಸೂರ್ಯಾಸ್ತವಾಗುವವರೆಗೂ ಇಟ್ಟಿದ್ದು ರಾತ್ರಿಯಲ್ಲಿ ಸ್ವಸ್ಥಾನದಲ್ಲಿಟ್ಟು ಪಂಚೋಪಚಾರದಿಂದ (ಗಂಧ, ಪುಷ್ಪ, ಧೂಪ, ದೀಪ, ನೈವೇದ್ಯ) ಪೂಜಿಸಬೇಕು. ಆ ತೀರ್ಥೋದಕವನ್ನು ಮನೆ, ಹೆಂಡತಿ, ಮಕ್ಕಳ ಸಹಿತವಾಗಿ ತಾನೂ ಪ್ರೋಕ್ಷಿಸಿಕೊಳ್ಳಬೇಕು. ಇದನ್ನು ದ್ವಾದಶಿಯ ಹಗಲಿನಲ್ಲಿ ಮಾಡಕೂಡದು. ರಾತ್ರಿಯಲ್ಲಿ ಸ್ವಲ್ಪ ಹೊತ್ತು ವಿಷ್ಣುವನ್ನು ನೀರಿನಲ್ಲಿ ಇಟ್ಟಿದ್ದು ಪೂಜೆಮಾಡಿ ಸ್ವಸ್ಥಾನವನ್ನು ಸೇರಿಸಬೇಕು. ಈ ಮಾಸದಲ್ಲಿ ಶ್ರೀ ತುಲಸಿ, ಕೃಷ್ಣ ತುಲಸಿಗಳಿಂದ ವಿಷ್ಣುವಿಗೆ ತ್ರಿಕಾಲಾರ್ಚನೆ (ಬೆಳಗ್ಗೆ, ಮಧ್ಯಾಹ್ನ, ಸಾಯಂಕಾಲ) ಯನ್ನು ಮಾಡಿದರೆ ಮುಕ್ತಿಯುಂಟಾಗುವುದು. ಪ್ರಾತಃಕಾಲದಲ್ಲಿ ಸ್ನಾನ ಮಾಡಿ ಅಶ್ವತ್ಥ (ಅರಳಿ) ವೃಕ್ಷದ ಬುಡಕ್ಕೆ ಹೆಚ್ಚಾಗಿ ನೀರನ್ನೆರೆದು, ಪ್ರದಕ್ಷಿಣೆಯನ್ನು ಮಾಡುವುದರಿಂದ ಅನೇಕ ಕುಲಗಳು ಪವಿತ್ರವಾಗುವವು. ಹಸುಗಳನ್ನು ತುರಿಸಿ ನವೆಯನ್ನು ಅಡಗಿಸುವುದರಿಂದಲೂ ಈ ಫಲವೇ ಉಂಟಾಗುವುದು. ಈ ಮಾಸದಲ್ಲಿ ಏಕ ಭಕ್ತವನ್ನೂ, ನಕ್ತವನ್ನೂ, ಯಾಚನೆಯನ್ನು ಬಿಡುವುದನ್ನೂ, ಇವುಗಳಲ್ಲೊಂದನ್ನಾಗಲಿ ಮಾಡುವುದರಿಂದ ಇಷ್ಟಾರ್ಥ ಸಿದ್ಧಿಯಾಗುವುದು. ಈ ತಿಂಗಳಲ್ಲಿ ಅರವಟ್ಟಿಗೆಗಳನ್ನಿಡಿಸುವುದು, ದೇವರಿಗೆ ಸೋಮಸೂತ್ರವನ್ನು ಕಟ್ಟಿ ಅಭಿಷೇಕ ಮಾಡುವುದು, ಬೀಸಣಿಗೆ, ಕೊಡೆ, ಪಾದರಕ್ಷೆ, ಚಂದನ, ಮೊದಲಾದವುಗಳನ್ನು ದಾನ ಮಾಡುವುದು, ಇವುಗಳಿಂದ ಮಹಾ ಪುಣ್ಯವುಂಟಾಗುವುದು. (ಸೂಕ್ಷ್ಮವಸ್ತ್ರಗಳು [ಮಲ್ಲುಬಟ್ಟೆ] ಚಂಬು, ಪಂಚಪಾತ್ರೆ ಮೊದಲಾದ ನೀರಿನ ಪಾತ್ರೆಗಳು, ಹೂದೋಟಗಳು, ದ್ರಾಕ್ಷೆ, ಬಾಳೆ ಹಣ್ಣು, ಪಾನಕಗಳು ಇವುಗಳನ್ನೆಲ್ಲಾದಾನ ಮಾಡಬೇಕೆಂದು ನಿರ್ಣಯ ಸಿಂಧುವಿನಲ್ಲಿ ಹೇಳಿದೆ.) ವೈಶಾಖವು ಮಲಮಾಸವಾಗಿದ್ದರೆ, ಕಾಮ್ಯ ವ್ರತಗಳನ್ನು ಮಲಮಾಸದಲ್ಲಿ ಪೂರ್ತಿ

ಮಾಡ ಕೂಡದೆಂಬ ನಿಷೇಧವಿರುವುದರಿಂದ, ಎರಡು ಮಾಸಗಳಲ್ಲಿಯೂ, ವೈಶಾಖ ಸ್ನಾನ, ಹವಿಷ್ಯಾನ್ನ ಭೋಜನ ಮೊದಲಾದ ನಿಯಮಗಳನ್ನೆಲ್ಲಾ ನಡೆಯಿಸ ಬೇಕು. ಚಾಂದ್ರಾಯಣಾದಿ ವ್ರತಗಳನ್ನು ಮಲಮಾಸವಾದಾಗ್ಯೂ ಪೂರೈಯಿಸ ಬೇಕು. ವೈಶಾಖ ಶುದ್ಧ ತೃತೀಯೆಯಲ್ಲಿ ಗಂಗಾ ಸ್ನಾನವೂ, ಯವೆ (ಗೋಧಿಯಲ್ಲೊಂದು ಬಗೆ) ಯಿಂದ ಹೋಮ ಮಾಡುವುದೂ, ಸಕಲ ಪಾಪ ಪರಿಹಾರಕವಾದದ್ದು.

—ಅಕ್ಷಯ್ಯ ತೃತೀಯಾ—

ಯಃಕರೋತಿ ತೃತೀಯಾಯಾಂ ಕೃಷ್ಣಂ ಚಂದನ ಭೂಷಿತಂ ।
ವೈಶಾಖಸ್ಯ ಸಿತೇ ಪಕ್ಷೇ ಸಯಾತ್ಯಚ್ಯುತಮಂದಿರಂ ॥೧॥

ಯಾವನು ವೈಶಾಖ ಶುದ್ಧ ತದಿಗೆಯಲ್ಲಿ ಶ್ರೀ ಕೃಷ್ಣನಿಗೆ ಚಂದನ ಗಂಧವನ್ನು ಲೇಪಿಸಿ ಪೂಜಿಸುವನೋ! ಅವನು ವೈಕುಂಠ ಲೋಕವನ್ನು ಸೇರುವನು. ॥೧॥ ಇದಕ್ಕೆ ಅಕ್ಷಯ್ಯ ತೃತೀಯೆ, ಎಂಬ ಹೆಸರು. (ಈ ತೃತೀಯೆಗೆ ಪೂರ್ವಾಹ್ಣವ್ಯಾಪ್ತಿ ಇರಬೇಕು. ಪೂರ್ವಾಹ್ಣವೆಂದರೆ ಎರಡಾಗಿ ಭಾಗಿಸಿದ ಅಹಃಪ್ರಮಾಣ ಸಂಖ್ಯೆಯ ಮೊದಲ ಭಾಗವು. ಎರಡು ದಿನಗಳಿಗೆ ಪೂರ್ವಾಹ್ಣ ವ್ಯಾಪ್ತಿ ಇದ್ದಾಗ್ಯೂ ಎರಡನೆಯದನ್ನು ಗ್ರಹಿಸಬೇಕು. ಯುಗಾದಿಯಲ್ಲಿಯೂ ಹೀಗೆಯೇ. ಶ್ರಾದ್ಧದಲ್ಲಿಯೂ ಪೂರ್ವಾಹ್ಣ ವ್ಯಾಪ್ತಿಯುಳ್ಳ ತದಿಗೆಯನ್ನೇ ಗ್ರಹಿಸಬೇಕು.

ಪೂರ್ವಾಹ್ಣೇತು ಸದಾ ಕಾರ್ಯಾಃಶುಕ್ಲಾಮನು ಯುಗಾದಯಃ ।
ದೈವೇ ಕರ್ಮಣಿ ಪಿತ್ರ್ಯೇಚ ಕೃಷ್ಣೇಚೈವಾ ಪರಾಹ್ಣಿಕಾಃ ॥

ಶುಕ್ಲಪಕ್ಷದಲ್ಲಿ ನಡೆಯಬೇಕಾದ ಮನ್ವಾದಿ, ಯುಗಾದಿ, ಮೊದಲಾದ ದೇವ ಕರ್ಮಗಳನ್ನು, ಪಿತೃ ಕಾರ್ಯಗಳನ್ನೂ, ಪೂರ್ವಾಹ್ಣವ್ಯಾಪ್ತಿಯುಳ್ಳ ತಿಥಿಗಳಲ್ಲಿಯೂ, ಕೃಷ್ಣ ಪಕ್ಷದಲ್ಲಿ ನಡೆಯುವ ಮೇಲ್ಕಂಡ ಕಾರ್ಯಗಳನ್ನು ಅಪರಾಹ್ಣವ್ಯಾಪ್ತಿಯುಳ್ಳ ತಿಥಿಗಳಲ್ಲಿಯೂ ಮಾಡಬೇಕು. ॥

ವೈಶಾಖಸ್ಯ ತೃತೀಯಾಂಚ ಪೂರ್ವವಿದ್ಧಾಂಕರೋತಿವೈ ।
ಹವ್ಯಂದೇವಾ ನಗೃಹ್ಣಂತಿ ಕವ್ಯಂಚ ಪಿತರಸ್ತಥಾ ॥

ವೈಶಾಖ ಶುದ್ಧ ತದಿಗ (ಅಕ್ಷಯ್ಯ ತೃತೀಯೆ) ಯನ್ನು ಪೂರ್ವಾವಿದ್ಧವಾದ (ದ್ವಿತೀಯಾ ವೇಧೆಯುಳ್ಳ, ಅಥವಾ ಅಪರಾಹ್ಣವ್ಯಾಪ್ತಿಯುಳ್ಳ)

ತಿಥಿಯಲ್ಲಿ ಮಾಡಿದ್ದೇ ಆದರೆ ಅಂತಹ ತಿಥಿಯಲ್ಲಿ ಮಾಡಿದ ದೇವ ಕಾರ್ಯ ವನ್ನು ದೇವತೆಗಳೂ,ಶ್ರಾದ್ಧಾದಿಗಳನ್ನು ಪಿತೃಗಳೂ ಸ್ವೀಕರಿಸುವುದಿಲ್ಲ. (ಎಂದು ವ್ರತರಾಜ ಮತ್ತು ನಿರ್ಣಯ ಸಿಂಧುಗಳಲ್ಲಿ ಹೇಳಿದೆ.)

ಈ ದಿನದಲ್ಲಿ ಜಪ, ಹೋಮ, ಪಿತೃತರ್ಪಣ, ದಾನ ಮೊದಲಾದು ವುಗಳನ್ನು ಅಲ್ಪವಾಗಿ ಮಾಡಿದಾಗ್ಯೂ ಅಕ್ಷಯವಾಗುವುದು. ಈ ದಿನದ ಲ್ಲಿ ರೋಹಿಣೀ ನಕ್ಷತ್ರವೂ, ಬುಧವಾರವೂ ಕೂಡಿದರೆ ಮಹಾಪುಣ್ಯಪ್ರ ದವಾದದ್ದು. ಈ ದಿವಸದಲ್ಲಿ ಮಾಡಬೇಕಾದ, ಜಪ, ಹೋಮಾದಿಗಳಿಗೆ, ಮುಂದೆ ಹೇಳಹೋಗುವ, ಯುಗಾದಿಯಂತೆಯೇ ನಿರ್ಣಯವು, ಈ ತಿ ಥಿಯು ಕೃತಯುಗಕ್ಕೆ ಮೊದಲನೆಯದು. ಈ ದಿನದಲ್ಲಿ ಯುಗಾದಿ ಪ್ರ ಯುಕ್ತವಾಗಿ ಸಂಕಲ್ಪಶ್ರಾದ್ಧವನ್ನು ಮಾಡಬೇಕು· ಶ್ರಾದ್ಧವನ್ನು ಮಾಡ ದಪಕ್ಷದಲ್ಲಿ ತಿಲತರ್ಪಣವನ್ನು ಮಾಡಬೇಕು, ಇಲ್ಲಿ ಶುಕ್ಲಯುಗಾದಿ ಕಾರ್ಯವನ್ನು ಪೂರ್ವಾಹ್ಣದಲ್ಲಿ ಮಾಡಬೇಕು, ಆಗ ಮಾಡುವುದಕ್ಕಾಗದಿ ದ್ದರೆ ಅಪರಾಹ್ಣದಲ್ಲಾದರೂ ಮಾಡಬಹುದು. ಕೃಷ್ಣಯುಗಾದಿ ಕಾರ್ಯ ವನ್ನು ಅಪರಾಹ್ಣದಲ್ಲಿ ಮಾಡಬೇಕೆಂಬುದೇ ಮೊದಲಾದ ಮನ್ವಾದಿಯ ಲ್ಲಿ ಹೇಳಿರುವದೇ ಇದಕ್ಕೂ ನಿರ್ಣಯವು. ಎರಡುಭಾಗವಾಗಿ ಭಾಗಿಸಿದ ಅಹಃಪ್ರಮಾಣದ ಗಳಿಗೆಯ ಒಂದು ಭಾಗಕ್ಕೆ ವ್ಯಾಪ್ತಿಯು ಎರಡುದಿನ ಗಳಿಗೂ ಇದ್ದರೆ ಮೂರುಮುಹೂರ್ತಕ್ಕಿಂತ ಹೆಚ್ಚಾದ ವ್ಯಾಪ್ತಿಯಿದ್ದರೆ ಎರಡನೆಯ ತಿಥಿಯನ್ನೂ, ಅದಕ್ಕೆ ಕಡಿಮೆಯಾಗಿದ್ದಲ್ಲಿ ಮೊದಲನೆಯದ ನ್ನೂ ಗ್ರಹಿಸಬೇಕು.

ಮನ್ವಾದೌಚಯುಗಾದೌ ಚ ಗ್ರಹಣೇ ಚಂದ್ರಸೂರ್ಯಯೋಃ ।
ವ್ಯತೀಪಾತೇವೈಧೃತೌಚ ತತ್ಕಾಲವ್ಯಾಪಿನೀಕ್ರಿಯಾ ॥೧॥

ಮನ್ವಾದಿ, ಯುಗಾದಿ, ಚಂದ್ರಸೂರ್ಯ ಗ್ರಹಣ, ವ್ಯತೀಪಾತ, ವೈಧೃತಿ, ಇವುಗಳಲ್ಲಿ ಮಾಡಬೇಕಾದ ಕರ್ಮಗಳಿಗೆ ಕರ್ಮಕಾಲವ್ಯಾಪ್ತಿ ಯಿರುವುದನ್ನು ನೋಡಿಕೊಂಡು ಆಯಾ ಕರ್ಮವನ್ನು ಮಾಡಬೇಕು॥೧॥ ಎಂಬ ವಚನದಿಂದ ಸಂಪೂರ್ಣವ್ಯಾಪ್ತಿ ಇರಬೇಕೆಂದು ಹೇಳುವವಾಕ್ಯಗ ಳಿಗೆ ಅಪವಾದವು (ತಿರಸ್ಕಾರ) ವುಂಟಾಗುವುದರಿಂದ ಶ್ರಾದ್ಧಾದಿಗಳನ್ನು ತೃತಿಯಾತಿಥಿಯ ಮಧ್ಯಭಾಗದಲ್ಲಿಯೇ ಮಾಡಬೇಕು. ' ಪುರುಷಾರ್ಥ

ಚಿನ್ತಾಮಣಿ, ಎಂಬ ಗ್ರಂಥದಲ್ಲಿ ಹೇಳಿರುವ ಪ್ರಕಾರವಾಗಿ ಗಾಂಧರ್ವ್ವ, ಕುತುಪ, ರೌಹಿಣವೆಂಬ ಹೆಸರುಳ್ಳ ದಿನದ ಏಳು, ಎಂಟು, ಒಂಭತ್ತನೆಯ ಮುಹೂರ್ತಗಳು ಕ್ರಮವಾಗಿ (೧೪, ೧೬, ೧೮, ಗಳಿಗೆಗಳು) ಯುಗಾದಿಶ್ರಾದ್ಧಕ್ಕೆ ಕಾಲವಾಗಿರುವುದರಿಂದ, ಶುಕ್ಲಪಕ್ಷದಲ್ಲಾದರೆ ಮಧ್ಯಾಹ್ನದಲ್ಲಿ ಹದಿಮೂರನೆಯ ಗಳಿಗೆ ಮೊದಲ್ಗೊಂಡು ಹದಿನೈದನೆಯ ಗಳಿಗೆಯು ಮುಗಿಯುವ ವರೆಗೆ (೩ಗಳಿಗೆ) ವ್ಯಾಪ್ತಿಯುಳ್ಳ ತಿಥಿಯಲ್ಲಿ ಶ್ರಾದ್ಧ ಮಾಡಬೇಕು. ಕೃಷ್ಣಪಕ್ಷದಲ್ಲಾದರೆ ಹದಿನಾರನೆಯ ಗಳಿಗೆ ಮೊದಲ್ಗೊಂಡು ಮೂರುಳಿಗೆಗಳ ವ್ಯಾಪ್ತಿಯುಳ್ಳ ತಿಥಿಯನ್ನು ಗ್ರಹಿಸಬೇಕು. ಈ ಎರಡು ಸಂದರ್ಭಗಳಲ್ಲಿಯೂ ಮೇಲೆ ಹೇಳಿದ ಮೂರು ಗಳಿಗೆಗಳ ವ್ಯಾಪ್ತಿಇದ್ದರೂ ಇಲ್ಲದಿದ್ದರೂ ಶುಕ್ಲಪಕ್ಷದಲ್ಲಿ ಎರಡನೆಯ ತೃತೀಯೆಯನ್ನೇ ಗ್ರಹಿಸಬೇಕು ಒಂದುವೇಳೆ ಎರಡನೆಯ ದಿನದಲ್ಲಿ ಹದಿಮೂರು ಗಳಿಗೆಗಳಿಗಿಂತ ಮುಂಚೆಯೇ ತೃತೀಯೆಯು ಮುಗಿದು ಹೋಗುವುದಾಗಿಯೂ, ಮೊದಲ ದಿನದಲ್ಲಿ ಹದಿಮೂರನೆಯ ಗಳಿಗೆ ಮೊದಲ್ಗೊಂಡು ಮೂರುಗಳಿಗೆಗಳಾಗಲಿ ಅಥವಾ ಒಂದು ಭಾಗಕ್ಕಾಗಲಿ ವ್ಯಾಪ್ತಿಯುಳ್ಳದ್ದಾಗಿಯೂ ಇರುವುದಾದರೆ, ಆಗ ಕರ್ಮಕಾಲವ್ಯಾಪ್ತಿಯೇ ಮುಖ್ಯವೆಂದು ಹೇಳುತ್ತಿರುವ ವಚನಗಳು ಹೆಚ್ಚಾಗಿರುವುದರಿಂದ ಮೊದಲನೆಯದನ್ನೇ ಗ್ರಹಿಸಬೇಕೆಂದು ಹೇಳಿದ್ದಾಯ್ತು. ಇದೇ ಯುಕ್ತವಾದದ್ದೆಂದು ತೋರುವುದು.

## ಉದಕುಂಭದಾನವು.

ಈ ದಿನದಲ್ಲಿದೇವತೆಗಳನ್ನಾಗಲಿ, ಪಿತೃಗಳನ್ನಾಗಲಿ ಉದ್ದೇಶಿಸಿ ಉದಕುಂಭದಾನ ಮಾಡಬೇಕೆಂದು ಹೇಳಿದೆ. ಅದಕ್ಕೆ ಶ್ರೀಪರಮೇಶ್ವರನು ಸುಪ್ರೀತನಾಗಿ ಉದಕುಂಭದಾನ ಕಲ್ಪದಲ್ಲಿ ಹೇಳಿರುವ ಫಲವು ಲಭ್ಯವಾಗುವುದಕ್ಕೋಸ್ಕರವಾಗಿ ಬ್ರಾಹ್ಮಣನಿಗೆ ಉದಕುಂಭದಾನ ಮಾಡುತ್ತೇನೆಂದು ಸಂಕಲ್ಪಮಾಡಿ, ದಾರವನ್ನು ಸುತ್ತಿ ಗಂಧ ಪುಷ್ಪ ಫಲ, ಯವೆ, ಇವುಗಳಿಂದ ಕೂಡಿದ ಕಲಶವನ್ನೂ, ಬ್ರಾಹ್ಮಣನನ್ನೂ ಪೂಜಿಸಿ "ಏಷಧರ್ಮಘಟೋದತ್ತೋ ಬ್ರಹ್ಮವಿಷ್ಣುಶಿವಾತ್ಮಕಃ । ಅಸ್ಯಪ್ರದಾನಾತ್ಸಕಲಾ ಮಮಸಂತು ಮನೋರಥಾಃ ॥೧॥" ಬ್ರಹ್ಮ, ವಿಷ್ಣು, ಮಹೇಶ್ವರರೆಂಬ

ತ್ರಿಮೂರ್ತಿಗಳ ಸ್ವರೂಪವಾಗಿರುವ ಈ ಉದಕುಂಭವನ್ನು ಧರ್ಮಾರ್ಥವಾಗಿ ನಾನು ದಾನಮಾಡುತ್ತೇನೆ, ಇದರಿಂದ ನನ್ನ ಇಷ್ಟಾರ್ಥಗಳೆಲ್ಲವೂ ಸಿದ್ಧಿಸಲಿ ||೧|| ಎಂಬ ಮಂತ್ರವನ್ನು ಹೇಳಿ ದಾನಮಾಡಬೇಕು. ಪಿತೃಗಳನ್ನುದ್ದೇಶಿಸಿ ದಾನಮಾಡುವುದಾದರೆ ಪಿತೃಗಳಿಗೆ ಅಕ್ಷಯ್ಯತೃಪ್ತಿಯುಂಟಾಗಲಿ. ಉದಕುಂಭದಾನಮಾಡುತ್ತೇನೆ ಎಂದು ಸಂಕಲ್ಪಮಾಡಿ ಪೂರ್ವದಲ್ಲಿ ಹೇಳಿದಂತೆಯೇ, ಕುಂಭವನ್ನೂ, ಬ್ರಾಹ್ಮಣನನ್ನೂ ಪೂಜೆಮಾಡಿ, ಉದಕುಂಭದಲ್ಲಿ ಗಂಧ,ತಿಲ (ಎಳ್ಳು) ಫಲ, ಇವುಗಳನ್ನಿಟ್ಟು "ಏಷಧರ್ಮಘಟೋದತ್ತೋ ಬ್ರಹ್ಮವಿಷ್ಣುಶಿವಾತ್ಮಕಃ । ಅಸ್ಯಪ್ರದಾನಾತ್ತೃಪ್ಯಂತು ಪಿತರೋಪಿಪಿತಾಮಹಾಃ||೧||ಗಂಧೋದಕತಿಲೈರ್ಮಿಶ್ರಂ ಸಾನ್ನಂ ಕುಂಭಂಫಲಾನ್ವಿತಂ।ಪಿತೃಭ್ಯಸ್ಸಂಪ್ರದಾಸ್ಯಾಮಿಹ್ಯಕ್ಷಯ್ಯ ಮುಪತಿಷ್ಠತು||" ತ್ರಿಮೂರ್ತಿರೂಪವಾದ ಈ ಉದಕುಂಭವನ್ನು ನಾನು ಧರ್ಮಾರ್ಥವಾಗಿ ಕೊಟ್ಟೆನು, ಈ ದಾನದಿಂದ ನಮ್ಮ ಪಿತೃವರ್ಗದವರೂ,ಪಿತಾಮಹವರ್ಗದವರೂ ತೃಪ್ತರಾಗಲಿ ||೧|| ಗಂಧ,ತಿಲ,ಉದಕ,ಅನ್ನ, ಇವುಗಳಿಂದ ಯುಕ್ತವಾಗಿ ಫಲಸಹಿತವಾಗಿರುವ ಈ ಉದಕುಂಭವನ್ನು ಪಿತೃಗಳನ್ನುದ್ದೇಶಿಸಿ ದಾನಮಾಡುತ್ತೇನೆ. ಇದರಿಂದ ಅವರೆಲ್ಲರೂ ಶಾಶ್ವತವಾದ ಗತಿಯನ್ನು ಪಡೆಯಲಿ ||೨|| ಎಂಬ ಮಂತ್ರಗಳಿಂದ ಕೊಡಬೇಕು. ಯುಗಾದಿಯಲ್ಲಿ ಸಮುದ್ರಸ್ನಾನವನ್ನು ಮಾಡುವುದು ಪುಣ್ಯಪ್ರದವಾದದ್ದು, ವೈಶಾಖದಲ್ಲಿ ಅಧಿಕಮಾಸವಾದರೆ ಎರಡುಮಾಸಗಳಲ್ಲಿಯೂ ಯುಗಾದಿಶ್ರಾದ್ಧವನ್ನು ಮಾಡಬೇಕು. ಯುಗಾದಿಗಳಲ್ಲಿ ಉಪವಾಸಮಾಡುವುದರಿಂದ ಬಹಳ ಪುಣ್ಯವುಂಟು, ಯುಗಾದಿ, ಮನ್ವಾದಿಗಳಲ್ಲಿ ರಾತ್ರಿಭೋಜನಮಾಡಿದರೆ ಪ್ರಾಯಶ್ಚಿತ್ತರೂಪವಾಗಿ 'ಅಭಿಸ್ವವೃಷ್ಟಿಂ'ಎಂಬ ಋಕ್ಕನ್ನು ಜಪಮಾಡಬೇಕು. ಯುಗಾದಿ ಶ್ರಾದ್ಧವು ಲೋಪವಾದರೆ ಯುಗಾದಿಶ್ರಾದ್ಧಲೋಪದಿಂದುಂಟಾದ ದೋಷಪರಿಹಾರಕ್ಕಾಗಿ 'ಋಗ್ವಿಧಾನದಲ್ಲಿ' ಹೇಳಿರುವಂತೆ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುತ್ತೇನೆ, ಎಂದು ಸಂಕಲ್ಪಮಾಡಿ 'ನಯಸ್ಯದ್ಯಾವಾ' ಎಂಬ ಋಕ್ಕನ್ನು ನೂರುಸಾರಿ ಜಪಮಾಡಬೇಕು. ಎಲ್ಲಾ ಯುಗಾದಿಗಳಿಗೂ ಇದೇ ನಿರ್ಣಯವೆಂದು ತಿಳಿಯಬೇಕು.

ಇಂತು ಅಕ್ಷಯ್ಯ ತೃತೀಯಾ ನಿರ್ಣಯವು.

—ಪರಶುರಾಮಜಯಂತೀ—

ಈ ತೃತೀಯೇಯಲ್ಲಿಯೇ ಪರಶುರಾಮಜಯಂತಿಯು, ಇದಕ್ಕೆ ರಾತ್ರಿಯ ಮೊದಲನೆಯ ಯಾಮದ ವ್ಯಾಪ್ತಿಯುಳ್ಳ ತಿಥಿಯನ್ನೇ ಗ್ರಹಿಸಬೇಕು. ಮೊದಲನೆಯ ದಿನಕ್ಕೇನೇ ಮೊದಲ ಯಾಮದವ್ಯಾಪ್ತಿ ಇದ್ದರೆ ಮೊದಲನೆಯ ತಿಥಿಯನ್ನು ಗ್ರಹಿಸಬೇಕು. ಎರಡು ದಿನಗಳಲ್ಲಿಯೂ ರಾತ್ರಿಯ ಮೊದಲನೆಯ ಯಾಮವ್ಯಾಪ್ತಿಯು ಒಂದೇಸಮನಾಗಿ ಅಥವಾ ಹೆಚ್ಚು ಕಡಿಮೆಯಾಗಿದ್ದಾಗ್ಯೂ ಎರಡನೆಯದನ್ನು ಗ್ರಹಿಸಬೇಕು. ಈ ದಿನದ ಪ್ರದೋಷಕಾಲದಲ್ಲಿ ಪರಶುರಾಮನನ್ನು ಪೂಜಿಸಿ, ಅರ್ಘ್ಯವನ್ನು ಕೊಡಬೇಕು. "ಜಮದಗ್ನೇಃಪುತ್ರವೀರಕ್ಷತ್ರಿಯಾಂತಕರಪ್ರಭೋ। ಗೃಹಾಣಾರ್ಘ್ಯಂಮಯಾದತ್ತಂ ಕೃಪಯಾಪರಮೇಶ್ವರ॥೧॥" ಜಮದಗ್ನಿಋಷಿಯ ಮಗನಾಗಿಯೂ, ಪರಾಕ್ರಮಶಾಲಿಯಾಗಿಯೂ, ಕ್ಷತ್ರಿಯಸಂಹಾರಕನಾಗಿಯೂ, ಪ್ರಭುವಾಗಿಯೂ ಇರುವ ಪರಶುರಾಮನೇ ! ನಾನುಕೊಡುವ ಅರ್ಘ್ಯವನ್ನು ದಯೆಮಾಡಿ ತೆಗೆದುಕೊಳ್ಳುವವನಾಗು॥೧॥ ಎಂಬುದು ಮಂತ್ರವು. ವೈಶಾಖ ಶುದ್ಧ ಸಪ್ತಮಿಯಲ್ಲಿ ಗಂಗೋತ್ಪತ್ತಿಯು. ಮಧ್ಯಾಹ್ನವ್ಯಾಪ್ತಿಯುಳ್ಳ ಈ ಸಪ್ತಮಿಯಲ್ಲಿ ಗಂಗೆಯನ್ನು ಪೂಜಿಸಬೇಕು. ಎರಡು ದಿನಗಳಲ್ಲಿಯೂ ಮಧ್ಯಾಹ್ನವ್ಯಾಪ್ತಿ ಇದ್ದರೆ ಮೊದಲನೆಯದನ್ನು ಗ್ರಹಿಸಬೇಕು. (ಈ ಸಪ್ತಮಿಗೆ ಮಧ್ಯಾಹ್ನವ್ಯಾಪ್ತಿ ಇರಬೇಕು. ಎರಡು ದಿನಗಳಲ್ಲಿಯೂ ಮಧ್ಯಾಹ್ನವ್ಯಾಪ್ತಿ ಇದ್ದರೂ, ಎರಡುದಿನಗಳಲ್ಲಿಯೂ ಇಲ್ಲದಿದ್ದರೂ, ಎರಡು ದಿನಗಳಲ್ಲಿಯೂ ಸಮವಾಗಿ ಅಥವಾ ಹೆಚ್ಚು ಕಡಿಮೆ ಒಂದುಭಾಗಕ್ಕಾದರೂ ವ್ಯಾಪ್ತಿ ಇದ್ದಾಗ್ಯೂ ಯುಗ್ಮವಾಕ್ಯದಿಂದ ಮೊದಲನೆಯದನ್ನೇ ಗ್ರಹಿಸಬೇಕು. ಎಂದು ನಿರ್ಣಯಸಿಂಧುವಿನಲ್ಲಿ ಹೇಳಿದೆ.) "ವೈಶಾಖಮಾಸೇದ್ವಾದಶ್ಯಾಂ ಪೂಜಯೇನ್ಮಧುಸೂದನಂ । ಅಗ್ನಿಷ್ಟೋಮಮವಾಪ್ನೋತಿಸೋಮಲೋಕಂಚಗಚ್ಛತಿ ॥೧॥" ವೈಶಾಖಶುದ್ಧ ದ್ವಾದಶಿಯಲ್ಲಿ ವಿಷ್ಣುವನ್ನು ಪೂಜಿಸಿದರೆ ಅಗ್ನಿಷ್ಟೋಮಫಲವನ್ನು ಹೊಂದುವುದಲ್ಲದೆ ಚಂದ್ರಲೋಕವನ್ನು ಪಡೆವನು. ॥೧॥ (ವೈಶಾಖಶುದ್ಧ ದ್ವಾದಶಿಯಲ್ಲಿ ಯೋಗವಿಶೇಷವೊಂದುಂಟೆಂದು ಹೇಮಾದ್ರಿಯಲ್ಲಿ ಹೇಳಿದೆ. "ಪಂಚಾನನಸ್ಥೌಗುರುಭೂಮಿಪುತ್ರೌ ಮೇಷೇರವಿಸ್ಸ್ಯಾದ್ಯದಿಶುಕ್ಲಪಕ್ಷೇ । ಪಾ

ಶಾಭಿಧಾನಾಕರಭೇಣ ಯುಕ್ತಾತಿಥಿರ್ವ್ಯತೀಪಾತ ಇತೀಹಯೋಗಃ ॥ ಅಸ್ಮಿಂಸ್ತುಗೋಭೂಮಿ ಹಿರಣ್ಯವಸ್ತ್ರದಾನೇನ ಸರ್ವಂಪರಿಹಾಯಪಾಪಂ। ಸುರತ್ವಮಿಂದ್ರತ್ವಮನಾಮಯತ್ವಂ ಮರ್ತ್ಯಾಧಿಪತ್ಯಂಲಭತೇ ಮನುಷ್ಯಃ॥'' ವೈಶಾಖಶುದ್ಧ ತದಿಗೆಯಲ್ಲಿ ಸಿಂಹರಾಶಿಯಲ್ಲಿ ಗುರುವೂ,ಅಂಗಾರಕನೂ, ಮೇಷರಾಶಿಯಲ್ಲಿ ಸೂರ್ಯನೂ ಇದ್ದು, ಹಸ್ತನಕ್ಷತ್ರವೂ, ವ್ಯತೀಪಾತಯೋಗವೂ ಸೇರಿದರೆ 'ಪಾಶಯೋಗ' ವೆಂಬ ಯೋಗವಿಶೇಷವುಂಟಾಗುವುದು ॥೧॥ ಈ ದಿನದಲ್ಲಿ ಗೋದಾನ, ಭೂದಾನ, ಹಿರಣ್ಯದಾನ, ವಸ್ತ್ರದಾನ, ಇವುಗಳನ್ನು ಮಾಡುವುದರಿಂದ ಮನುಷ್ಯನು ದೇವತ್ವವನ್ನೂ, ಇಂದ್ರತ್ವನನ್ನೂ, ರೋಗಪರಿಹಾರವನ್ನೂ, ರಾಜತ್ವವನ್ನೂ, ಪಡೆವನು ಎಂಬದಾಗಿ ಹೇಮಾದ್ರಿಯಲ್ಲಿ ಹೇಳಿದೆ ಎಂದು ನಿರ್ಣಯಸಿಂಧುಕಾರನು ಹೇಳಿರುವನು).

## —ನೃಸಿಂಹಜಯಂತೀಪ್ರಯೋಗವು—

ವೈಶಾಖಶುದ್ಧಚತುರ್ದಶಿಯು ನೃಸಿಂಹಜಯಂತಿ. ಇದಕ್ಕೆ ಸೂರ್ಯಾಸ್ತಮಯಕಾಲದ ವ್ಯಾಪ್ತಿ ಇರಬೇಕು. ಎರಡುದಿನಗಳಲ್ಲಿ ಆವ್ಯಾಪ್ತಿ ಇದ್ದರೂ, ಅಥವಾ ಎರಡುದಿನಗಳಲ್ಲಿಯೂ ಇಲ್ಲದಿದ್ದರೂ, ಎರಡನೆಯ ಚತುರ್ದಶಿಯನ್ನೇ ಗ್ರಹಿಸಬೇಕು. (ಎರಡುದಿನಗಳಲ್ಲಿ ಸಮಾನಕಾಲವ್ಯಾಪ್ತಿ ಇದ್ದರೂ ಪರದಿನವನ್ನೇ ಗ್ರಹಿಸಬೇಕು. ವ್ಯತ್ಯಾಸಕಾಲವುಳ್ಳ ವ್ಯಾಪ್ತಿ ಇದ್ದರೆ ಹೆಚ್ಚಾದ ಕಾಲವ್ಯಾಪ್ತಿ ಎಂದಿಗೆ ಇದ್ದರೆ ಆ ದಿನವನ್ನು ಗ್ರಹಿಸಬೇಕು. ಎರಡು ದಿನಗಳಲ್ಲಿಯೂ ವ್ಯಾಪ್ತಿ ಇಲ್ಲದಿದ್ದರೆ ಎರಡನೆಯ ದಿನದಲ್ಲಿ ಮುಖ್ಯಕಾಲಕ್ಕಲ್ಲದಿದ್ದರೆ ಗೌಣಕಾಲಕ್ಕಾದರೂ ವ್ಯಾಪ್ತಿ ಇರುವುದರಿಂದಲೂ, ಮೊದಲಿನ ದಿನದಲ್ಲಿಇಲ್ಲದ್ದರಿಂದಲೂ ಪರದಿನವನ್ನೇಗ್ರಹಿಸಬೇಕು.ಎಂದು ವ್ರತರಾಜಾದಿಗ್ರಂಥಗಳಲ್ಲಿ ಹೇಳಿದೆ.)ಈದಿನದಲ್ಲಿ ಸ್ವಾತೀನಕ್ಷತ್ರ,ಶನಿವಾರ,ಮೊದಲಾದವುಗಳು ಸೇರಿದ್ದರೆಬಹಳ ಪ್ರಶಸ್ತವಾದದ್ದು. (ಅಂದರೆ ಈದಿನದಲ್ಲಿ ಸಿದ್ಧ, ಸೌಭಾಗ್ಯ, ಯೋಗಗಳೂ, ವಣಿಜವೆಂಬ ಕರಣವೂ, ಸೇರಬೇಕಾದರೆ ಮನುಷ್ಯನಿಗೆ ದೈವಯೋಗವಿರಬೇಕಲ್ಲದೆ ಸಾಮಾನ್ಯವಾಗಿ ಸಿಕ್ಕಲಾರದು. ಎರಬಿದೇ ಮೊದಲಾಗಿ ನಿರ್ಣಯಸಿಂಧುಕಾರನು ಹೇಳಿರುವಂತೆ ಗ್ರಹಿಸತಕ್ಕದ್ದು.) ವ್ರತಪ್ರಯೋಗವು—

ತ್ರಯೋದಶಿಯಲ್ಲಿ ಏಕಭಕ್ತ ಮಾಡಿ ಚತುರ್ದಶಿಯ ಮಧ್ಯಾಹ್ನದಲ್ಲಿ ಎಳ್ಳಿನಿಂದಲೂ, ನೆಲ್ಲಿಯ ಚಟ್ಟನಿಂದಲೂ ಸ್ನಾನಮಾಡಿ, "ಉಪೋಷ್ಯೇಹಂ ನಾರಸಿಂಹ ಭುಕ್ತಿಮುಕ್ತಿಫಲಪ್ರದ । ಶರಣಂ ತ್ವಾಂ ಪ್ರಪನ್ನೋಸ್ಮಿ ಭಕ್ತಿಂ ಮೇ ನೃಹರೇ ದಿಶ ॥೧॥" ಭುಕ್ತಿಮುಕ್ತಿಗಳನ್ನು ಕೊಡತಕ್ಕ ಎಲೈ ನರಸಿಂಹಸ್ವಾಮಿಯೇ ! ನಾನು ಈದಿನ ಉಪವಾಸಮಾಡುತ್ತೇನೆ. ನಿನ್ನನ್ನು ಮರೆಹೊಕ್ಕಿರುವ ನನಗೆ ನಿನ್ನಲ್ಲಿ ದೃಢವಾದ ಭಕ್ತಿಯನ್ನುಂಟುಮಾಡು ॥ ೧ ॥ ಎಂಬ ಈಮಂತ್ರದಿಂದ ವ್ರತಕ್ಕೆ ಸಂಕಲ್ಪಮಾಡಿ, ಆಚಾರ್ಯನಿಗೆ ವರಣ ಕೊಟ್ಟು, ಧಾನ್ಯರಾಶಿಯನ್ನು ಮಾಡಿ, ಅದರ ಮೇಲೆ ಜಲಪೂರ್ಣಕುಂಭವನ್ನು ಸ್ಥಾಪನೆಮಾಡಿ, ಅದರಲ್ಲಿ ಚಿನ್ನದ ಲಕ್ಷ್ಮೀನರಸಿಂಹಪ್ರತಿಮೆಯನ್ನು ಹಾಕಿ ಅದರಲ್ಲಿ ದೇವರನ್ನು ಆವಾಹನೆಮಾಡಿ, ಷೋಡಶೋಪಚಾರಪೂಜೆಮಾಡಿ, ಅರ್ಘ್ಯವನ್ನು ಕೊಡಬೇಕು. "ಪರಿತ್ರಾಣಾಯ ಸಾಧೂನಾಂ ಜಾತೋ ವಿಷ್ಣೋ ನೃಕೇಸರೀ। ಗೃಹಾಣಾರ್ಘ್ಯಂ ಮಯಾ ದತ್ತಂ ಸಲಕ್ಷ್ಮೀರ್ನೃಹರಿ ಸ್ಸ್ವಯಂ ॥೧॥" ಎಲೈ ಮಹಾವಿಷ್ಣುವೇ ! ನೀನು ಸಜ್ಜನರನ್ನು ಪರಿಪಾಲಿಸುವುದಕ್ಕಾಗಿ ಅವತಾರಮಾಡುವವನಾಗಿದ್ದೀಯೆ. ಲಕ್ಷ್ಮೀಸಮೇತನಾಗಿರುವ ನಿನಗೆ ನಾನು ಅರ್ಘ್ಯಪ್ರದಾನಮಾಡುವೆನು ಸ್ವೀಕರಿಸು ॥ ೧ ॥ ಎಂಬ ಮಂತ್ರದಿಂದ ಅರ್ಘ್ಯವನ್ನು ಕೊಡಬೇಕು. ರಾತ್ರಿಯಲ್ಲಿ ಜಾಗರಣೆಯನ್ನು ಮಾಡಿ ಬೆಳಗಿನಲ್ಲಿ ದೇವರಿಗೆ ಪೂಜೆಯನ್ನು ಮಾಡಿ, ವಿಸರ್ಜನೆಮಾಡಿ, ಆಚಾರ್ಯರಿಗೆ ಗೋದಾನಸಹಿತವಾಗಿ ಪ್ರತಿಮಾದಾನವನ್ನು ಮಾಡಬೇಕು. ದಾನಮಂತ್ರವು—"ನರಸಿಂಹಾಚ್ಯುತಗೋವಿಂದ ಲಕ್ಷ್ಮೀಕಾಂತ ಜಗತ್ಪತೇ । ಅನೇನಾರ್ಚಾಪ್ರದಾನೇನ ಸಫಲಾಃಸ್ಯುರ್ಮನೋರಥಾಃ ॥೧॥" ಶಾಶ್ವತನಾಗಿಯೂ, ವೇದವೇದ್ಯನಾಗಿಯೂ, ಲಕ್ಷ್ಮೀಪತಿಯಾಗಿಯೂ, ಜಗದೊಡೆಯನಾಗಿಯೂ, ಇರುವ ನರಸಿಂಹಸ್ವಾಮಿಯೆ! ಈ ಪ್ರತಿಮಾದಾನದಿಂದ ನನ್ನ ಇಷ್ಟಾರ್ಥಗಳೆಲ್ಲವೂ ಕೈಗೂಡಲಿ ॥ ೧ ॥ ಪ್ರಾರ್ಥನೆಯು—"ಮದ್ವಂಶೇ ಯೇ ನರಾ ಜಾತಾ ಯೇ ಜನಿಷ್ಯಂತಿ ಚಾಪರೇ । ತಾಂಸ್ತ್ವಮುದ್ಧರ ದೇವೇಶ ದುಸ್ತರಾದ್ಭವಸಾಗರಾತ್ ॥೧॥ ಪಾತಕಾರ್ಣವಮಗ್ನಸ್ಯ ವ್ಯಾಧಿದುಃಖಾಂಬುವಾರಿಧೇಃ । ನೀಚೈಶ್ಚ ಪರಿ

ಭೂತಸ್ಯ ಮಹಾದುಃಖಾಗತಸ್ಯ ಮೇ ‖ ೨ ‖ ಕರಾವಲಂಬನಂ ದೇಹಿ ಶೇಷಶಾಯಿನ್ ಜಗತ್ಪತೇ । ಶ್ರೀನೃಸಿಂಹ ರಮಾಕಾಂತ ಭಕ್ತಾನಾಂ ಭಯನಾಶನ ‖ ೩ ‖ ಕ್ಷೀರಾಂಬುಧಿನಿವಾಸಸ್ತ್ವಂ ಚಕ್ರಪಾಣೇ ಜನಾರ್ದನ । ವ್ರತೇನಾನೇನ ದೇವೇಶ ಭುಕ್ತಿಮುಕ್ತಿಪ್ರದೋ ಭವ ‖ ೪ ‖ ಎಲೈ ದೇವದೇವನಾದ ನರಸಿಂಹನೇ ! ನಮ್ಮ ವಂಶದಲ್ಲಿ ಈಗ ಹುಟ್ಟಿರುವ ಜನಗಳನ್ನೂ, ಮುಂದೆ ಹುಟ್ಟುವ ಜನಗಳನ್ನೂ, ಈ ಸಂಸಾರವೆಂಬ ವಿಸ್ತಾರವಾದ ಸಮುದ್ರದಿಂದ ದಾಟಿಸುವವನಾಗು ‖೧‖ ಪಾಪಸಮುದ್ರದಲ್ಲಿ ಮುಳುಗಿದವನಾಗಿಯೂ, ರೋಗದುಃಖಗಳೆಂಬ ನೀರುಳ್ಳ ಸಮುದ್ರದಂತಿರುವನಾಗಿಯೂ, ಅಲ್ಪರಿಂದ ತಿರಸ್ಕಾರವನ್ನು ಪಡೆದವನಾಗಿಯೂ, ಸಂಕಟಪಡುತ್ತಿರುವ ನನಗೆ ‖ ೨ ‖ ಶೇಷಶಾಯಿಯಾಗಿಯೂ, ಜಗತ್ಪತಿಯಾಗಿಯೂ, ಲಕ್ಷ್ಮೀಪತಿಯಾಗಿಯೂ, ಭಕ್ತರಿಗುಂಟಾಗುವ ಭೀತಿಗಳನ್ನು ನಿವಾರಣೆಮಾಡುವವನಾಗಿಯೂ, ನರಸಿಂಹನಾಗಿಯೂ ಇರುವ ನೀನು ಕಯ್ಯೂಡನ್ನು ಕೊಡುವವನಾಗು ‖೩‖ ಚಕ್ರವನ್ನು ಧರಿಸಿ ದುಷ್ಟಸಂಹಾರಕನಾಗಿ ಕ್ಷೀರಸಮುದ್ರದಲ್ಲಿ ವಾಸಮಾಡುತ್ತಿರುವ ದೇವೋತ್ತಮನಾದ ನರಸಿಂಹನೇ ! ನಾನು ಮಾಡುವ ವ್ರತದಿಂದ ಸಂತುಷ್ಟನಾಗಿ, ಇಹಪರಲೋಕಗಳ ಸುಖಗಳನ್ನು ಕೊಟ್ಟು ಕಾಪಾಡು ‖ ೪ ‖ ಎಂದು ಪ್ರಾರ್ಥನೆಮಾಡಬೇಕು. ಅನಂತರದಲ್ಲಿ ತಿಥಿಯ ಕೊನೆಯ ಭಾಗದಲ್ಲಿ ಬ್ರಾಹ್ಮಣರೊಡನೆ ಪಾರಣೆಯನ್ನು ಮಾಡಬೇಕು. ಮೂರು ಯಾಮಗಳಮೇಲೆ ಬರುವ ಚತುರ್ದಶಿಯಾಗಿದ್ದರೆ ಪೂರ್ವಾಹ್ಣದಲ್ಲಿ (ಬೆಳಗಿನಲ್ಲಿ) ಯೇ ಪಾರಣೆಮಾಡಬೇಕು. ಪೌರ್ಣಮಿಯಲ್ಲಿ ಅನ್ನದೊಡನೆ ಉದಕುಂಭದಾನಮಾಡಿದರೆ ಗೋದಾನಫಲವುಂಟಾಗುವುದು. ಚಿನ್ನ, ಎಳ್ಳು, ಇವುಗಳೊಡನೆ ಹನ್ನೆರಡು ಉದಕುಂಭದಾನ ಮಾಡಿದರೆ ಬ್ರಹ್ಮಹತ್ಯಾದೋಷವು ಪರಿಹಾರವಾಗುವುದು. ಮತ್ತು ವಿಧ್ಯುಕ್ತವಾಗಿ ಕೃಷ್ಣಾಜಿನ ದಾನಮಾಡಿದರೆ ಭೂದಾನಫಲವುಂಟು.

—ತಿಲಾಜಿನಾದಿ ದಾನಗಳು—

ಚಿನ್ನ, ಎಳ್ಳು, ಜೇನುತುಪ್ಪ, ತುಪ್ಪ, ಇವುಗಳೊಡನೆ ಕೃಷ್ಣಾಜಿನ ದಾನಮಾಡಿದರೆ ಸಮಸ್ತ ಪಾಪಗಳೂ ಪರಿಹಾರವಾಗುವುವು. ಈ ದಿನ

ದಲ್ಲಿ ಎಳ್ಳನ್ನು ತಿರುವಿ ತಲೆಗೆ ಹಾಕಿಕೊಂಡು ಸ್ನಾನಮಾಡುವುದು. ಎಳ್ಳಿನಿಂದ ಹೋಮಮಾಡುವುದು, ಎಳ್ಳುತುಂಬಿದ ಪಾತ್ರೆಯನ್ನು ದಾನಮಾಡುವುದು, ಎಳ್ಳೆಣ್ಣೆಯದೀಪ ದಾನಮಾಡುವುದು, ಪಿತೃಗಳಿಗೆ ತಿಲತರ್ಪಣಮಾಡುವುದು. ಜೇನುತುಪ್ಪದೊಡನೆ ಎಳ್ಳನ್ನು ದಾನಮಾಡುವುದು. ಇವೆಲ್ಲವೂ ಮಹಾಫಲವನ್ನುಂಟುಮಾಡತಕ್ಕವು. ತಿಲದಾನಕ್ಕೆ ಮಂತ್ರವು- "ತಿಲಾವೈಸೋಮದೈವತ್ಯಾಃ ಸುರೈಃಸೃಷ್ಟಾಸ್ತುಗೋಸವೇ । ಸ್ವರ್ಗಪ್ರದಾಸ್ಸ್ವತಂತ್ರಾಶ್ಚತೇಮಾಂ ರಕ್ಷಂತುನಿತ್ಯಶಃ ॥೧॥" ದೇವತೆಗಳು ಗೋಯಜ್ಞಾರ್ಥವಾಗಿ ಸೃಷ್ಟಿಸಿರುವ ಸೋಮದೇವತಾಕವಾಗಿಯೂ, ಸ್ವಾತಂತ್ರ್ಯವುಳ್ಳದ್ದಾಗಿಯೂ, ಸ್ವರ್ಗಲೋಕವನ್ನು ಕಲ್ಪಿಸಿಕೊಡುವುದಾಗಿಯೂ ಇರುವ ಈ ಎಳ್ಳು ಸರ್ವದಾ ನನ್ನನ್ನು ಕಾಪಾಡಲಿ॥೧॥ವೈಶಾಖಶುದ್ಧ ದ್ವಾದಶಿ ಅಥವಾ ಪೌರ್ಣಮಿಯಲ್ಲಿ ವೈಶಾಖಸ್ನಾನವನ್ನೂ, ಉದ್ಯಾಪನೆಯನ್ನೂ ಮಾಡಬೇಕು. ಏಕಾದಶಿ ಅಥವಾ ಪೌರ್ಣಮಿಯಲ್ಲಿ ಉಪೋಷ್ಯಮಾಡಿ ಕಲಶಸ್ಥಾಪನೆಮಾಡಿ ಅದರಲ್ಲಿ ಚಿನ್ನದ ಲಕ್ಷ್ಮೀನಾರಾಯಣ ಪ್ರತಿಮೆಯನ್ನಿಟ್ಟು ಪೂಜೆಮಾಡಿ ರಾತ್ರಿಯಲ್ಲಿ ಜಾಗರಣೆಮಾಡಿ ಬೆಳಗಿನಲ್ಲಿ ನವಗ್ರಹಾರಾಧನೆಮಾಡಿ ಪಾಯಸದಿಂದಾಗಲಿ, ತಿಲಾಜ್ಯಗಳಿಂದಾಗಲಿ, ಯವೆಯಿಂದಾಗಲಿ ನೂರೆಂಟುಹೋಮಗಳನ್ನು ಮಾಡಬೇಕು. 'ಪ್ರತದ್ವಿಷ್ಣುಃ' ಅಥವಾ 'ಇದಂವಿಷ್ಣುಃ' ಎಂಬುದೇ ಹೋಮಮಂತ್ರವು. ಹೋಮವು ಸಾಂಗವಾಗುವುದಕ್ಕಾಗಿ ಗೋದಾನ, ಎಕ್ಕಡ, ಜೋಡು, ಛತ್ರ, ಬೀಸಣಿಗೆ, ಉದಕುಂಭ, ಶಯ್ಯಾ, ಮೊದಲಾದ ದಾನಗಳನ್ನೂ ಮಾಡಬೇಕು. ಇಷ್ಟು ಮಾಡುವುದಕ್ಕೆ ಶಕ್ತಿ ಇಲ್ಲದಿದ್ದರೆ ಎಳ್ಳನ್ನಮೊದಲಾದ ಅನ್ನಗಳಿಂದ ಹತ್ತು ಜನ ಬ್ರಾಹ್ಮಣರಿಗೆ ಭೋಜನ ಮಾಡಿಸಬೇಕು. ಈ ಪೌರ್ಣಮಾಸ್ಯ ಮೊದಲ್ಗೊಂಡು ಜ್ಯೇಷ್ಠಶುದ್ಧ ಏಕಾದಶಿಯವರೆಗೆ ಜಲಾಧಿವಾಸಮಾಡಿಸಿ ವಿಷ್ಣುವಿಗೆ ಪೂಜೆಯನ್ನೂ, ಉತ್ಸವವನ್ನೂ ಮಾಡಬೇಕು. ವೈಶಾಖದ ಅಮಾವಾಸ್ಯೆಗೆ 'ಭಾವುಕಾ' ಎಂಬ ಹೆಸರು. ಮರುದಿನಕ್ಕೆ 'ಕರಿ' ಎಂಬಹೆಸರು. ಈ ಎರಡುದಿನಗಳಲ್ಲಿಯೂ ಶುಭಕಾರ್ಯಗಳೊಂದನ್ನೂ ಮಾಡಕೂಡದು. ಇಂತು ವೈಶಾಖಮಾಸಕೃತ್ಯೋದ್ದೇಶವು.

ಷ್ಟವಾಗಿರುವ ಮೂರು ವಿಧವಾದ ಕಾಯಿಕ (ದೇಹಸಂಬಂಧ), ನಾಲು ಬಗೆಯಾದ ವಾಚಕ (ಮಾತಿನ ಸಂಬಂಧ), ಮೂರು ಮಾನಸಿಕ (ಮನಸ್ಸಿನಲ್ಲಿ ಎಣಿಸಿದ್ದು) ಗಳೆಂಬ, ಸ್ಕಾಂದಪುರಾಣದಲ್ಲಿ ಹೇಳಿರುವ ಪ್ರಕಾರವಾದ ಹತ್ತು ವಿಧವಾದ ಪಾಪಗಳು ನಿವಾರಣೆಯಾಗಿ, ಮೂರು ಸಾವಿರದ ಮುನ್ನೂರುಮಂದಿ (ತ್ರಯಸ್ತ್ರಿಂಶಚ್ಛತ) ನಮ್ಮ ಪಿತೃಗಳು ಮುಕ್ತರಾಗಿ, ಬ್ರಹ್ಮಲೋಕವನ್ನು ಹೊಂದಬೇಕು. ಎಂಬಿದೇ ಮೊದಲಾದ ಸತ್ಫಲವನ್ನು ಪಡೆಯುವುದಕ್ಕಾಗಿ, ಜ್ಯೇಷ್ಠಶುದ್ಧ ದಶಮೀ ಬುಧವಾರ ಹಸ್ತನಕ್ಷತ್ರ, ಗರಕರಣ, ವ್ಯತೀಪಾತ, ಆನಂದಯೋಗ, ಕನ್ಯಾರಾಶಿಗತ ಚಂದ್ರ, ವೃಷಭರಾಶಿಗತ ಸೂರ್ಯ, ಇವುಗಳೆಂಬ ಹತ್ತು ಬಗೆಯ ಯೋಗಗಳುಳ್ಳ ಈ ಪರ್ವಕಾಲದಲ್ಲಿ, ನಾನು ಈ ಮಹಾನದಿಯಲ್ಲಿ ಯಥಾಶಕ್ತಿಯಾಗಿ, ಸ್ನಾನ, ತೀರ್ಥಪೂಜೆ, ಪ್ರತಿಮೆಯಲ್ಲಿ ಜಾಹ್ನವೀಪೂಜೆ, ತಿಲಾದಿದಾನಗಳು, ಮೂಲಮಂತ್ರಜಪ, ಆಜ್ಯಹೋಮ, ಇವುಗಳನ್ನು ಮಾಡುತ್ತೇನೆ, ಎಂದು ಸಂಕಲ್ಪಮಾಡಿ, ವಿಧ್ಯುಕ್ತವಾಗಿ ಹತ್ತು ಸಾರಿ ಸ್ನಾನಮಾಡಿ, ನೀರಿನಲ್ಲಿ ನಿಂತು ಮುಂದೆ ಹೇಳಿರುವ ಗಂಗಾಸ್ತೋತ್ರವನ್ನು ಹತ್ತುಸಾರಿ ಅಥವಾ ಒಂದು ಸಾರಿಯಾದರೂ ಪಾರಾಯಣಮಾಡಿ ಧೌತವಸ್ತ್ರವನ್ನು ಧರಿಸಿ, ಪಿತೃತರ್ಪಣದವರೆಗಿನ ನಿತ್ಯಕರ್ಮವನ್ನು ಮಾಡಿ, ತೀರ್ಥಪೂಜೆಯನ್ನು ಮಾಡಿ, ತುಪ್ಪದಲ್ಲಿ ಕಲಸಿದ ಹತ್ತು ಸೇರಕರಿಯ ಎಳ್ಳನ್ನು,ಬೊಗಸೆಯಲ್ಲಿ ತೆಗೆದುಕೊಂಡು ತೀರ್ಥದಲ್ಲಿ ಹಾಕಿ, ಅನಂತರದಲ್ಲಿ ಅಕ್ಕಿಯ ಹಿಟ್ಟಿಗೆ ಬೆಲ್ಲವನ್ನುಹಾಕಿ ಕಲಸಿ ಉಂಡೆಮಾಡಿ, ಹತ್ತು ಉಂಡೆಗಳನ್ನು ತೀರ್ಥದಲ್ಲಿ ಹಾಕಬೇಕು. ಆಮೇಲೆ ಗಂಗಾನದಿಯ ದಡದಲ್ಲಿ ತಾಮ್ರದ, ಅಥವಾ ಮಣ್ಣಿನ, ಕಲಶವನ್ನು ಇಟ್ಟು, ಅದರಲ್ಲಿ ಚಿನ್ನದ ಪ್ರತಿಮೆಯನ್ನು ಹಾಕಿ, ಅದರಲ್ಲಿ ಗಂಗೆಯನ್ನು ಆವಾಹನೆ ಮಾಡಬೇಕು. ಅದಕ್ಕೆಮಂತ್ರವು ಭಗವತ್ಯೈನಮಃ,ದಶಪಾಪಹರಾಯೈನಮಃ,ಗಂಗಾಯೈನಮಃ, ನಾರಾಯಣ್ಯೈನಮಃ,ರೇವತ್ಯೈನಮಃ,ಶಿವಾಯೈನಮಃ, ದಕ್ಷಾಯೈನಮಃ,ಅಮೃತಾಯೈನಮಃ,ವಿಶ್ವರೂಪಿಣ್ಯೈನಮಃ,ನಂದಿನ್ಯೈನಮಃ. ಇದುಸ್ತ್ರೀಯರೇ ಮೊದಲಾದ ಎಲ್ಲರಿಗೂ ಸಾಮಾನ್ಯವಾದಮಂತ್ರವು,ಬ್ರಾಹ್ಮಣನಿಗೆ ಮಾತ್ರವಾದರೆ ಓಂ ನಮಶ್ಶಿವಾಯೈ, ನಾರಾಯಣ್ಯೈ,ದಶಹರಾ

ಯೈ, ಗಂಗಾಯೈ ಸ್ವಾಹಾ ಎಂಬ ಇಪ್ಪತ್ತು ಅಕ್ಷರಗಳುಳ್ಳ ಮಂತ್ರವನ್ನೂ ಹೇಳಿ, ಗಂಗೆಯನ್ನು ಆವಾಹನೆ ಮಾಡಬೇಕು. ಮತ್ತು ಅದರಲ್ಲಿ ವಿಷ್ಣುವನ್ನೂ, ಈಶ್ವರನನ್ನೂ, ಬ್ರಹ್ಮನನ್ನೂ, ಸೂರ್ಯನನ್ನೂ, ಭಗೀರಥನನ್ನೂ, ಹಿಮಾಲಯವನ್ನೂ, ನಾಮಮಂತ್ರಗಳಿಂದ ಆವಾಹನೆ ಮಾಡಬೇಕು, ಹಿಂದೆ ಹೇಳಿದ ಮೂಲಮಂತ್ರವನ್ನು ಹೇಳಿ, ನಾರಾಯಣ, ರುದ್ರ, ಬ್ರಹ್ಮ, ಸೂರ್ಯ, ಭಗೀರಥ, ಹಿಮಾಚಲ ಗಳಿಂದ ಸಹಿತಳಾದ ಗಂಗೆಗೆ ಆಸನವನ್ನು ಸಮರ್ಪಿಸುವೆನು. ಎಂಬುದೇ ಮೊದಲಾದ ಷೋಡಶೋಪಚಾರದಿಂದ ಪೂಜೆಯನ್ನು ಮಾಡಬೇಕು. ಹತ್ತುಬಗೆಯ ಹೂಗಳಿಂದ ಪೂಜಿಸಿ ದಶಾಂಗ ಧೂಪವನ್ನೂ, ಹತ್ತು ದೀಪಗಳನ್ನೂ, ಹತ್ತುವಿಧದ ನೈವೇದ್ಯಗಳನ್ನೂ, ತಾಂಬೂಲವನ್ನೂ, ದಕ್ಷಿಣೆಗಳನ್ನೂ ಸಮರ್ಪಿಸಿ, ಹತ್ತು ಹಣ್ಣುಗಳನ್ನು ಅರ್ಪಣೆಮಾಡಬೇಕು. ಪೂಜೆಯು ಮುಗಿದ ಮೇಲೆ ಹತ್ತು ಮಂದಿ ಬ್ರಾಹ್ಮಣರಿಗೆ ಪ್ರತಿಒಬ್ಬರಿಗೂ ಹದಿನಾರು ಮುಷ್ಟಿ (ಹಿಡಿ) ಎಳ್ಳನ್ನೂ, ಯವೆಯನ್ನೂ, ದಕ್ಷಿಣೆ ಸಹಿತವಾಗಿ ದಾನಮಾಡಬೇಕು. ಆಮೇಲೆ ಹತ್ತು ಗೋವುಗಳನ್ನು ಅಥವಾ ಒಂದು ಗೋವನ್ನಾದರೂ ದಾನಮಾಡಬೇಕು. ಚಿನ್ನದಿಂದಾಗಲಿ, ಬೆಳ್ಳಿಯಿಂದಾಗಲಿ, ಅಥವಾ ಹಿಟ್ಟನಿಂದಾಗಲಿ, ಮೀನು, ಏಡಿ, ಕಪ್ಪೆ ಇವುಗಳನ್ನು ಮಾಡಿ ಪೂಜಿಸಿ ತೀರ್ಥದಲ್ಲಿ ಬಿಡಬೇಕು. ಹೀಗೆಯೇ ನೀರಮೇಲೆ ದೀಪಗಳನ್ನು ತೇಲಬಿಡಬೇಕು. ಜಪಗಳನ್ನೂ, ಹೋಮವನ್ನೂ ಮಾಡಬೇಕೆಂಬ ಅಪೇಕ್ಷೆಯಿದ್ದರೆ ಹಿಂದೆ ಹೇಳಿರುವ ಮೂಲಮಂತ್ರವನ್ನು ಐದು ಸಾವಿರಸಾರಿ ಜಪಮಾಡಬೇಕು. ಜಪದ ಹತ್ತರಷ್ಟು ಹೋಮವನ್ನು ಮಾಡಬೇಕು. ಅಥವಾ ಶಕ್ತ್ಯನುಸಾರವಾಗಿಯಾದರೂ ಜಪವನ್ನೂ ಹೋಮವನ್ನೂ ಮಾಡಬೇಕು. ದಶಹರಾವ್ರತಾಙ್ಗವಾಗಿ ಹೋಮವನ್ನು ಮಾಡುತ್ತೇನೆಂದು ಸಂಕಲ್ಪಮಾಡಿ, ಸ್ಥಂಡಿಲದಲ್ಲಿ ಅಗ್ನಿಪ್ರತಿಷ್ಠಾಪನೆ ಮಾಡಿ, ಅನ್ವಾಧಾನದಲ್ಲಿ 'ಅಗ್ನೀಷೋಮೌಚಕ್ಷುಷೀ ಆಜ್ಯೇನ' ಎಂಬುವವರೆಗೂ ಹೇಳಿ, "ಶ್ರೀಗಂಗಾಂ ಅಮುಕಸಂಖ್ಯಯಾ ಆಜ್ಯೇನ ನಾರಾಯಣಾದಿ ಷಡ್ದೇವತಾಃ ಏಕೈಕಯಾ ಆಜ್ಯಾಹುತ್ಯಾ" ಅಂದರೆ ಗಂಗೆಯನ್ನು ಕುರಿತು ಇಷ್ಟು ಸಂಖ್ಯೆಗಳುಳ್ಳ ಆಜ್ಯಾಹುತಿಯನ್ನೂ, ನಾರಾಯಣ ಮೊದಲಾದ

ಆರು ಜನದೇವತೆಗಳನ್ನು ಕುರಿತು ಒಂದೊಂದು ಆಜ್ಯಾಹುತಿಗಳಿಂದಲೂ (ಹೋಮಮಾಡುತ್ತೇನೆಂದು ಹೇಳಿ) "ಶೇಷೇಣಸ್ವಿಷ್ಟಕೃತಮಿಧ್ಮಸನ್ನಹನೇನ" ಮೊದಲಾಗಿ ಅನ್ವಾಧಾನವನ್ನು ಪೂರಯಿಸಿ, ಪ್ರೋಕ್ಷಣ್ಯಾದಿ ಆರುಪಾತ್ರೆಗಳನ್ನು ಆಸಾದನೆಮಾಡಿ, ಆಜ್ಯಸಂಸ್ಕಾರಮಾಡಿ, ಅನ್ವಾಧಾನದಂತೆ ಹೋಮಗಳನ್ನೆಲ್ಲಾ ಮಾಡಿ ಪೂರಯಿಸಬೇಕು. ಹತ್ತುಜನ ಬ್ರಾಹ್ಮಣರಿಗೂ, ಸುವಾಸಿನಿಯರಿಗೂ ಭೋಜನಮಾಡಿಸಬೇಕು. ಪ್ರತಿಪತ್ತನ್ನು ಮೊದಲುಮಾಡಿಕೊಂಡು ಸ್ನಾನಾದಿಯಾಗಿ ಪೂಜೆಯು ಪೂರಯಿಸುವವರೆಗೂ ಯಥಾ ವಿಧಿಯಾಗಿ ಮಾಡಬೇಕೆಂದು ಕೆಲವರು. ಸ್ಕಾಂದಪುರಾಣದಲ್ಲಿ ಹೇಳಿರುವ ಸ್ತೋತ್ರವು ಯಾವುದೆಂದರೆ

—ಗಂಗಾಸ್ತೋತ್ರವು.—

ಬ್ರಹ್ಮೋವಾಚ-ನಮಶ್ಶಿವಾಯೈ ಗಂಗಾಯೈ ಶಿವದಾಯೈ ನಮೋನಮಃ । ನಮಸ್ತೇರುದ್ರರೂಪಿಣ್ಯೈಶಾಂಕರ್ಯೈತೇನಮೋನಮಃ ॥೧॥ ನಮಸ್ತೇವಿಶ್ವರೂಪಿಣ್ಯೈಬ್ರಹ್ಮಮೂರ್ತ್ಯೈನಮೋನಮಃ । ಸರ್ವದೇವಸ್ವರೂಪಿಣ್ಯೈ ನಮೋಭೇಷಜಮೂರ್ತಯೇ ॥೨॥ ಸರ್ವಸ್ಯ ಸರ್ವವ್ಯಾಧೀನಾಂಭಿಷಕ್ ಶ್ರೇಷ್ಠ್ಯೈನಮೋಸ್ತುತೇ । ಸ್ಥಾಣುಜಂಗಮಸಂಭೂತವಿಷಹನ್ತ್ರ್ಯೈನಮೋನಮಃ ॥೩॥ ಭೋಗೋಪಭೋಗದಾಯಿನ್ಯೈ ಭೋಗವತ್ಯೈನಮೋನಮಃ । ಮಂದಾಕಿನ್ಯೈನಮಸ್ತೇಸ್ತು ಸ್ವರ್ಗದಾಯೈನಮಸ್ಸದಾ ॥೪॥ ನಮಸ್ತ್ರೈಲೋಕ್ಯಭೂಷಾಯೈಜಗದ್ಧಾತ್ರ್ಯೈ ನಮೋನಮಃ । ನಮಸ್ತ್ರಿಶುಕ್ಲಸಂಸ್ಥಾಯೈ ತೇಜೋವತ್ಯೈನಮೋನಮಃ ॥೫॥ ನಂದಾಯೈಲಿಂಗಧಾರಿಣ್ಯೈ ನಾರಾಯಣ್ಯೈ ನಮೋನಮಃ । ನಮಸ್ತೇ ವಿಶ್ವಮುಖ್ಯಾಯೈರೇವತ್ಯೈತೇ ನಮೋನಮಃ ॥೬॥ ಬೃಹತ್ಯೈತೇನಮಸ್ತೇಸ್ತು ಲೋಕಧಾತ್ರ್ಯೈನಮೋನಮಃ । ನಮಸ್ತೇವಿಶ್ವಮಿತ್ರಾಯೈನಂದಿನ್ಯೈತೇ ನಮೋನಮಃ ॥೭॥ ಪೃಥ್ವ್ಯೈ ಶಿವಾಮೃತಾಯೈಚ ಸುವೃಷಾಯೈನಮೋನಮಃ । ಶಾನ್ತಾಯೈಚವರಿಷ್ಠಾಯೈ ವರದಾಯೈ ನಮೋನಮಃ ॥೮॥ ಉಸ್ರಾಯೈ ಸುಖದೋಗ್ಧ್ರ್ಯೈಚಸಂಜೀವಿನ್ಯೈನಮೋನಮಃ । ಬ್ರಹ್ಮಿಷ್ಠಾಯೈ ಬ್ರಹ್ಮದಾಯೈ ದುರಿತಘ್ನ್ಯೈ ನಮೋನಮಃ ॥೯॥ ಪ್ರಣತಾರ್ತಿಪ್ರಭಂಜನ್ಯೈಜಗನ್ಮಾತ್ರೇ ನಮೋಸ್ತು

ತೇ । ಸರ್ವಾಪತ್ಪ್ರತಿಪಕ್ಷಾಯೈ ಮಙ್ಗಲಾಯೈ ನಮೋನಮಃ ॥೧೦॥
ಶರಣಾಗತದೀನಾರ್ತಪರಿತ್ರಾಣಪರಾಯಣೇ । ಸರ್ವಸ್ಯಾರ್ತಿಹರೇದೇವಿ
ನಾರಾಯಣಿನಮೋಸ್ತುತೇ ॥೧೧॥ ನಿರ್ಲೇಪಾಯೈ ದುರ್ಗಹನ್ತ್ರ್ಯೈದಕ್ಷಾ
ಯೈತೇನಮೋನಮಃ । ಪರಾತ್ಪರತರೇತುಭ್ಯಂ ನಮಸ್ತೇಮೋಕ್ಷದೇ
ಸದಾ ॥೧೨॥ ಗಙ್ಗೇಮಮಾಗ್ರತೋಭೂಯಾಃಗಂಗೇಮೇದೇವಿಪೃಷ್ಠ
ತಃ । ಗಂಗೇಮೇಪಾರ್ಶ್ವಯೋರೇಹಿ ತ್ವಯಿ ಗಂಗೇಸ್ತುಮೇಸ್ಥಿತಿಃ॥೧೩॥
ಆದೌತ್ವಮಂತೇಮಧ್ಯೇಚ ಸರ್ವಂತ್ವಂಗಾಂಗತೇಶಿವೇ । ತ್ವಮೇವಮೂ
ಲಪ್ರಕೃತಿಸ್ತ್ವಂಹಿನಾರಾಯಣಃ ಪರಃ ॥೧೪॥ ಗಂಗೇತ್ವಂಪರಮಾತ್ಮಾ
ಚಶಿವಸ್ತುಭ್ಯಂನಮಶ್ಶಿವೇ । ಯಇದಂಪಠತಿಸ್ತೋತ್ರಂ ಭಕ್ತ್ಯಾನಿತ್ಯಂ
ನರೋಪಿಯಃ ॥೧೫॥ ಶೃಣುಯಾಚ್ಛ್ರದ್ಧಯಾಯುಕ್ತಃ ಕಾಯವಾ
ಕ್ಚಿತ್ತಸಂಭವೈಃ । ದಶಧಾಸಂಸ್ಥಿತೈರ್ದೋಷೈಃ ಸರ್ವೈರೇವಪ್ರಮುಚ್ಯ
ತೇ ॥೧೬॥ ಸರ್ವಾನ್ಕಾಮಾನವಾಪ್ನೋತಿಪ್ರೇತ್ಯಬ್ರಹ್ಮಣಿಲೀಯತೇ ।
ಜ್ಯೇಷ್ಠೇಮಾಸಿ ಸಿತೇಪಕ್ಷೇದಶಮೀಹಸ್ತಸಂಯುತಾ ॥೧೭॥ ತಸ್ಯಾಂ
ದಶಮ್ಯಾಮೇತಚ್ಚಸ್ತೋತ್ರಂಗಂಗಾಜಲೇಸ್ಥಿತಃ । ಯಃಪಠೇದ್ದಶಕೃತ್ವ
ಸ್ತು ದರಿದ್ರೋವಾಪಿಚಾಕ್ಷಮಃ ॥೧೮॥ ಸೋಪಿತತ್ಫಲಮಾಪ್ನೋತಿ ಗಂ
ಗಾಂ ಸಂಪೂಜ್ಯಯತ್ನತಃ । ಅದತ್ತಾನಾಮುಪಾದಾನಂ ಹಿಂಸಾ ಚೈವವಿ
ಧಾನತಃ ॥೧೯॥ ಪರದಾರೋಪಸೇವಾಚಕಾಯಿಕಂತ್ರಿ ವಿಧಂಸ್ಮೃತಂ ।
ಪಾರುಷ್ಯಮನೃತಂ ಚೈವಪೈಶುನ್ಯಂ ಚಾಪಿಸರ್ವಶಃ ॥೨೦॥ ಅಸಂಬ
ದ್ಧಪ್ರಲಾಪಶ್ಚವಾಙ್ಮಯಂ ಸ್ಯಾಚ್ಚತುರ್ವಿಧಂ । ಪರದ್ರವ್ಯೇಷ್ವಭಿಧ್ಯಾ
ನಂ ಮನಸಾನಿಷ್ಟಚಿಂತನಂ ॥೨೧॥ ವಿತಥಾಭಿನಿವೇಶಶ್ಚಮಾನ ಸಂತ್ರಿ
ವಿಧಂಸ್ಮೃತಂ । ಏತಾನಿದಶಪಾಪಾನಿಹರತ್ವಂ ಮಮಜಾಹ್ನವಿ ॥೨೨॥
ದಶಪಾಪಹರಾಯಸ್ಮಾತ್ತಸ್ಮಾದ್ದಶಹರಾಸ್ಮೃತಾ । ತ್ರಯಸ್ತ್ರಿಂಶಚ್ಛತಂ
ಪೂರ್ವಾನ್ಪಿತೄನಥಪಿತಾಮಹಾನ್ ॥ ೨೩ ॥ ಉದ್ಧರತ್ಯೇವ ಸಂಸಾರಾ
ನ್ಮಂತ್ರೇಣಾನೇನ ಪೂಜಿತಾ । ನಮೋಭಗವತ್ಯೈದಶಪಾಪಹಾರಾಯೈ,
ಗಂಗಾಯೈ, ನಾರಾಯಣ್ಯೈ, ರೇವತ್ಯೈ, ಶಿವಾಯೈ, ದಕ್ಷಾಯೈ,
ಅಮೃತಾಯೈ, ವಿಶ್ವರೂಪಿಣ್ಯೈ, ನಂದಿನ್ಯೈ ನಮೋನಮಃ ॥ ಸಿ
ತಮಕರನಿಷಣ್ಣಾಂಶುಭ್ರವರ್ಣಾಂತ್ರಿಣೇತ್ರಾಂ ಕರಧೃತಕಲಶೋದ್ಯತ್ಸೋ

ತ್ಪಲಾವುತ್ಯ ಭೀಷ್ಮಾಂ । ವಿಧಿಹರಿಹರರೂಪಾಂಸೇಂದುಕೋಟೀರಜು ಷ್ಟಾಂಕಲಿತಸಿತದುಕೂಲಾಂ ಜಾಹ್ನವೀಂತಾಂನಮಾಮಿ ॥೧॥ ಆದಾವಾದಿ ಪಿತಾಮಹಸ್ಯನಿಗಮವ್ಯಾಪಾರಪಾತ್ರೇಜಲಂ ಪಶ್ಚಾತ್ಪನ್ನಗಶಾಯಿನೋ ಭಗವತಃ ಪಾದೋದಕಂಪಾವನಂ । ಭೂಯಶ್ಶಂಭುಜಟಾ ವಿಭೂಷಣಮಣಿರ್ಜಹ್ನೋರ್ಮಹರ್ಷೇರಿಯಂ ದೇವೀ ಕಲ್ಮಷನಾಶಿನೀ ಭಗವತೀ ಭಾಗೀರಥೀದೃಶ್ಯತೇ ॥೨॥ ಗಂಗಾಗಂಗೇತಿಯೋ ಬ್ರೂಯಾದ್ಯೋಜನಾನಾಂಶತೈರಪಿ । ಮುಚ್ಯತೇ ಸರ್ವಪಾಪೇಭ್ಯೋ ವಿಷ್ಣುಲೋಕಂಸಗಚ್ಛತಿ ॥೩॥ ಇಂತು ಗಂಗಾಸ್ತೋತ್ರವು ಸಂಪೂರ್ಣವು ॥ ಈ ಸ್ತೋತ್ರದಿಂದಸ್ತುತಿಸಿ ಹೋಮವಮಾಡಿದ ಅನಂತರದಲ್ಲಿ ಪ್ರತಿಮೆಗೆ ಉತ್ತರಪೂಜೆಯನ್ನು ಮಾಡಿ,ವಿಸರ್ಜನೆಮಾಡಿ,ಮೂಲಮಂತ್ರದಿಂದಆಚಾರ್ಯನಿಗೆ ಕೊಡಬೇಕು. ಇಂತುದಶಹರಾವಿಧಿಯು.

ಜ್ಯೇಷ್ಠಶುದ್ಧೈಕಾದಶಿಗೆ 'ನಿರ್ಜಲೈಕಾದಶಿ' ಎಂದು ಹೆಸರು. ಈ ಏಕಾದಶಿಯಲ್ಲಿ ನಿತ್ಯಾಚಮನವನ್ನು ಹೊರತು ಉಳಿದ ಸಂದರ್ಭಗಳಲ್ಲಿ ನೀರನ್ನು ಕುಡಿಯದಂತೆ ಇದ್ದು ಉಪವಾಸಮಾಡಿದರೆ ಹನ್ನೆರಡು ಏಕಾದಶಿಗಳಲ್ಲಿ ಉಪವಾಸಮಾಡಿದಷ್ಟು ಫಲವುಂಟಾಗುವುದು. ನಿರ್ಜಲವಾಗಿ ಉಪವಾಸಮಾಡಿದ ಏಕಾದಶೀ ವ್ರತಾಂಗವಾಗಿ ಹಿರಣ್ಯಶರ್ಕರಾಸಹಿತವಾದ ಉದಕುಂಭದಾನವನ್ನು ಮಾಡುತ್ತೇನೆಂದು ದ್ವಾದಶಿಯಲ್ಲಿ ಸಂಕಲ್ಪಮಾಡಿ "ದೇವದೇವ ಹೃಷೀಕೇಶ ಸಂಸಾರಾರ್ಣವ ತಾರಕ। ಉದಕುಂಭ ಪ್ರದಾನೇನ ಯಾಸ್ಯಾಮಿ ಪರಮಾಂ ಗತಿ" ॥೧॥ ಸಮಸ್ತವಾದ ಇಂದ್ರಿಯಗಳಿಗೂ ಅಧಿಪತಿಯಾಗಿಯೂ ದೇವೋತ್ತಮನಾಗಿಯೂ ಇರುವ ಮಹಾವಿಷ್ಣುವೇ ! ಸಂಸಾರ ಸಮುದ್ರವನ್ನು ದಾಟಿಸತಕ್ಕವನೇ ! ನಾನು ಈ ಉದಕುಂಭದಾನ ಮಾಡುವುದರಿಂದ ಉತ್ತಮವಾದ ಗತಿಯನ್ನು ಹೊಂದುವೆನು ॥೧॥ ಎಂಬ ಮಂತ್ರದಿಂದ ಆ ಉದಕುಂಭವನ್ನು ದಾನಮಾಡಬೇಕು. ಜ್ಯೇಷ್ಠ ಶುದ್ಧ ದ್ವಾದಶಿಯ ಹಗಲು ರಾತ್ರಿಗಳಲ್ಲಿ ತ್ರಿವಿಕ್ರಮನನ್ನು ಪೂಜಿಸುವುದರಿಂದ "ಗವಾಮಯನ"ವೆಂಬ ಯಜ್ಞವನ್ನು ಮಾಡಿದ ಫಲವುಂಟಾಗುವುದು. ಜ್ಯೇಷ್ಠಪೌರ್ಣಮಿಯಲ್ಲಿ ತಿಲದಾನ ಮಾಡುವುದರಿಂದ ಅಶ್ವಮೇಧದ ಫಲವು ಪ್ರಾಪ್ತವಾ

ಗುವುದು. ಜ್ಯೇಷ್ಠಾನಕ್ಷತ್ರದಿಂದ ಕೂಡಿದ ಜ್ಯೇಷ್ಠಪೌರ್ಣಮಿಯ ಲ್ಲಿ, ಕೊಡೆ, ಪಾದರಕ್ಷೆ ಇವುಗಳನ್ನು ದಾನಮಾಡುವುದರಿಂದ ದೊರೆತನ ವುಂಟಾಗುವುದು. ಈ ಪೌರ್ಣಮಿಯಲ್ಲಿ ಬಿಲ್ವತ್ರಿರಾತ್ರಿವ್ರತವನ್ನು ಮಾ ಡಬೇಕು. ಇದಕ್ಕೆ ಚತುರ್ದಶೀ ವೇಧೆಯುಳ್ಳ ಪೌರ್ಣಮಿಯನ್ನು ಗ್ರ ಹಿಸಬೇಕು.

—ವಟಸಾವಿತ್ರೀ ವ್ರತವು—

ಈ ದಿನದಲ್ಲಿಯೇ ವಟಸಾವಿತ್ರೀ ವ್ರತವು ನಡೆಯಬೇಕು. ಈ ವ್ರತದಲ್ಲಿ ತ್ರಯೋದಶಿಮೊದಲ್ಗೊಂಡು ಮೂರುದಿನಗಳಲ್ಲಿ ಉಪವಾಸ ವನ್ನು ಮಾಡಬೇಕು. ಉಪವಾಸಮಾಡುವುದಕ್ಕೆ ಶಕ್ತಿಯಿಲ್ಲದವರು ತ್ರ ಯೋದಶಿಯಲ್ಲಿನಕ್ತವನ್ನೂ, ಚತುರ್ದಶಿಯಲ್ಲಿ ಅಯಾಚಿತವೃತ್ತಿಯನ್ನೂ (ಒಂದುಸಾರಿ ಬಡಿಸಿದುದನ್ನು ಭೋಜನಮಾಡಿ ಎರಡನೆಯ ಸಾರಿ ಕೇ ಳದಿರುವುದು) ಪೌರ್ಣಮಿಯಲ್ಲಿ ಉಪವಾಸವನ್ನೂ ಮಾಡಬಹುದು, ಇಲ್ಲಿ ಪೌರ್ಣಮಾಸ್ಯಾಸಿರ್ಣಯಕ್ಕೆ ತಕ್ಕಂತೆ ಹೇಗೆ ಮೂರುರಾತ್ರಿಗಳಾಗುವು ದೋ ಹಾಗೆ ತ್ರಯೋದಶಿ ಮೊದಲಾದ ಮೂರುದಿನಗಳನ್ನು ಗ್ರಹಿಸಬೇ ಕು. ಇಲ್ಲಿ ಸೂರ್ಯಾಸ್ತಕ್ಕಿಂತ ಮುಂಚೆ ಮೂರುಮುಹೂರ್ತ ಕಾಲಕ್ಕಿಂತ ಲೂ ಹೆಚ್ಚಾದ ವ್ಯಾಪ್ತಿಯುಳ್ಳದ್ದಾಗಿಯೂ ಚತುರ್ದಶೀ ವೇಧೆಯುಳ್ಳ ದ್ದಾಗಿಯೂ ಇರುವ ಪೌರ್ಣಮಿಯನ್ನು ಗ್ರಹಿಸಬೇಕು. ಮೂರುಮು ಹೂರ್ತಕ್ಕಿಂತ ಕಡಿಮೆಯಾದ ವ್ಯಾಪ್ತಿ ಇರುವುದಾದರೆ ಮೊದಲದನ್ನು ಬಿ ಟ್ಟು ಎರಡನೆಯ ಪೌರ್ಣಮಾಸ್ಯೆಯನ್ನು ಗ್ರಹಿಸಬೇಕು. 'ಭೂತೋಷ್ಟಾ ದಶನಾಡೀಭಿರ್ದೂಷಯತ್ಯುತ್ತರಾಂತಿಥಿಂ' ಅಂದರೆ ಹಗಲಿನಲ್ಲಿ ೧೮ ಗಳಿ ಗೆಗಳು ಕಳೆದಮೇಲೆ ಬರುವ ತಿಥಿಯು ಅಯೋಗ್ಯವಾದದ್ದು ಎಂಬ ವಚ ನವು ಸಾವಿತ್ರೀ ವ್ರತವನ್ನುಳಿದ ಬೇರೆ ವ್ರತಗಳ ವಿಷಯದಲ್ಲಿ ಅನ್ವಯಿಸ ತಕ್ಕದ್ದೆಂದು ತಿಳಿಯಬೇಕು. ಈ ಸಾವಿತ್ರೀವ್ರತೋಪವಾಸಕ್ಕೆ ೧೮ಗ ಳಿಗೆಗಳ ವೇಧೆಯುಳ್ಳ ತಿಥಿಯನ್ನೂ ಗ್ರಹಿಸಬಹುದೆಂದು ವಿಧಿಯಿರುವು ದು. ಆದರೆ ಉಪವಾಸಮಾಡದೆ ಪೂಜೆಯನ್ನು ಮಾತ್ರ ಮಾಡುವ ಸಾವಿ ತ್ರೀವ್ರತವನ್ನು ಎಲ್ಲ ಕಡೆಗಳಲ್ಲಿಯೂ ಸ್ತ್ರೀಯರೇ ಮಾಡುತ್ತಾರೆ. ಆ ವಿ ಷಯದಲ್ಲಿ 'ಭೂತೋಷ್ಟಾದಶ' ಎಂಬ ಮೇಲೆಹೇಳಿರುವ ವೇಧೆಯು ವ್ರತ,

ಪೂಜೆ, ದಾನ,ಮೊದಲಾದುವುಗಳಿಗಲ್ಲದೆ ಉಪವಾಸಕ್ಕಲ್ಲವೆಂದು ನಿರ್ಣಯ ಸಿಂಧುಕಾರನು ಬರೆದಿರುವ ಮಾಧವಾಚಾರ್ಯರ ಅಭಿಪ್ರಾಯದಂತೆ ೧೮ಗ ಳಿಗೆಗಳ ಚತುರ್ದಶಿಯೂ ಇದ್ದರೆ ಪೂಜಾವ್ರತಕ್ಕೆ ಎರಡನೆಯ ಪೌರ್ಣಮಿ ಯನ್ನೇ ಗ್ರಹಿಸಬೇಕು,ಉಪವಾಸಕ್ಕೆ ಪೂರ್ವದಿನವನ್ನೇ ಗ್ರಹಿಸಬೇಕೆಂದು ತೋರುವುದು. ಈ ಉಪವಾಸಕ್ಕೆ ಪೂರ್ಣಿಮಾನಂತರದಲ್ಲಿ ಪಾರಣೆಯನ್ನು ಮಾಡಬೇಕು. ಸ್ತ್ರೀಯರು ರಜಸ್ವಲಾದಿ ದೋಷಗಳುಳ್ಳವರಾಗಿದ್ದರೆ ಪೂ ಜೆಮೊದಲಾದುವನ್ನು ಬ್ರಾಹ್ಮಣರ ಮೂಲಕವಾಗಿ ಮಾಡಿಸಬೇಕು. ಉ ಪವಾಸ ಮೊದಲಾದ ದೇಹನಿಯಮಗಳನ್ನು ತಾವೇ ಮಾಡಬೇಕು. ಈ ಸ್ತ್ರೀವ್ರತವಿಶೇಷವನ್ನು ಮೊದಲನೆಯ ಪರಿಚ್ಛೇದದಲ್ಲಿ ಹೇಳಿದೆ. ಈ ವ್ರತ ಕಲ್ಪವೂ ಉದ್ಯಾಪನವಿಧಿಯೂ, ವ್ರತಗ್ರಂಥದಲ್ಲಿ ಹೇಳಲ್ಪಟ್ಟಿದೆ. ಜ್ಯೇಷ್ಠ ಶುದ್ಧ ಪೌರ್ಣಮಿಯಲ್ಲಿ ಜ್ಯೇಷ್ಠಾನಕ್ಷತ್ರದಲ್ಲಿ ಗುರುವೂ, ಚಂದ್ರನೂ, ರೋಹಿಣೀನಕ್ಷತ್ರದಲ್ಲಿ ಸೂರ್ಯನೂ ಇದ್ದರೆ 'ಮಹಾಜ್ಯೈಷ್ಠೀ' ಎಂಬ ಯೋಗವೆನ್ನಿಸಿಕೊಳ್ಳುವುದು, ಆಗ ಸ್ನಾನ, ದಾನಾದಿ ಪುಣ್ಯಕರ್ಮಗಳನ್ನು ಮಾಡಬೇಕು. ಈ ಪೌರ್ಣಮಾಸ್ಯೆಯು ಮನ್ವಾದಿಯಲ್ಲಿ ಸೇರಿದುದಾದ್ದ ರಿಂದ ಪಿಂಡರಹಿತವಾಗಿ ಶ್ರಾದ್ಧವನ್ನು ಮಾಡಬೇಕು. ಇದರ ನಿರ್ಣಯವು ಚೈತ್ರಮಾಸನಿರ್ಣಯದಲ್ಲಿದೆ. ಈ ಮಾಸದಲ್ಲಿ ಗಂಧ, ಬೀಸಣಿಗೆ,ಉದಕುಂ ಭ, ಮೊದಲಾದವುಗಳನ್ನು ತ್ರಿವಿಕ್ರಮಪ್ರೀತ್ಯರ್ಥವಾಗಿ ಬ್ರಾಹ್ಮಣರಿಗೆ ದಾನಮಾಡಬೇಕು. ಇಂತು ಜ್ಯೇಷ್ಠಮಾಸನಿರ್ಣಯೋದ್ದೇಶವು ॥೩॥

(೪) ಆಷಾಢಮಾಸ ನಿರ್ಣಯವು

(೪) ಆಷಾಢಮಾಸ ನಿರ್ಣಯವು:—ಆಷಾಢಮಾಸದಲ್ಲಿ ದಕ್ಷಿಣಾಯ ನವೆಂಬ ಹೆಸರುಳ್ಳಕರ್ಕಾಟಕ (ಕರ್ಕ) ಸಂಕ್ರಾಂತಿಯು ಬರುವುದು. ಈ ಸಂಕ್ರಮಣದಲ್ಲಿ ಸಂಕ್ರಮಣವಾಗುವುದಕ್ಕಿಂತ ಮುಂಚೆ ೩೦ ಗಳಿಗೆ ಗಳು ಪುಣ್ಯಕಾಲವು. ಅದರಲ್ಲಿಯೂ ಸಂಕ್ರಾಂತಿಗೆ ಸಮೀಪವಾಗಿರುವ ಪೂರ್ವಕಾಲವು ಬಹಳ ಶ್ರೇಷ್ಠವಾದದ್ದು, ರಾತ್ರಿಯಲ್ಲಿ ಅರ್ಧರಾತ್ರಿಗಿಂ ತಮುಂಚೆ ಅಥವಾ ಅರ್ಧರಾತ್ರಿಯು ಕಳೆದಮೇಲೆ ಸಂಕ್ರಮಣವಾದರೂ ಪೂರ್ವದಿನದಲ್ಲಿಯೇ ಪುಣ್ಯಕಾಲವು. ಮಧ್ಯಾಹ್ನವು ಕಳೆದಮೇಲಣಕಾ ಲವು ಬಹಳ ಪುಣ್ಯಪ್ರದವಾದದ್ದು.ಸೂರ್ಯನು ಉದಯಿಸಿದ ಮೇಲೆ ಎರಡು

ಗಳಿಗೆಗಳೊಳಗಾಗಿ ಸಂಕ್ರಮಣವಾದರೆ ಸಂಕ್ರಮಣಾನಂತರದಲ್ಲಿಯೇ ಪು ಣ್ಯಕಾಲವು, ಸೂರ್ಯೋದಯವಾಗುವುದಕ್ಕಿಂತಲೂ ಮುಂಚಿನ ಸಂಧ್ಯಾ ಕಾಲವೆಂಬ ಮೂರುಗಳಿಗೆಗಳಲ್ಲಿ ಈ ಕರ್ಕಸಂಕ್ರಮಣವಾದಾಗ್ಯೂ ಪರದಿನವೇ ಪುಣ್ಯಕಾಲವೆಂದು ಜ್ಯೋತಿಷಗ್ರಂಥದಲ್ಲಿ ಹೇಳಿದೆ ಈ ಕಾ ಲದಲ್ಲಿ ಮಾಡಬೇಕಾದ ದಾನ, ಮತ್ತು ಉಪವಾಸಗಳನ್ನು ಪ್ರಥಮಪರಿ ಚ್ಛೇದದಲ್ಲಿ ಹೇಳಿದೆ. ಕರ್ಕಾಟಕ, ಕನ್ಯಾ, ಧನುಸ್ಸು, ಕುಂಭ ಈ ರಾಶಿಗಳಲ್ಲಿ ಸೂರ್ಯನಿರುವ ಕಾಲದಲ್ಲಿ ಕೇಶಖಂಡನ (ಜುಟ್ಟುಬಿಡಿಸುವು ದು) ಮೊದಲಾದ ಶುಭಕರ್ಮಗಳನ್ನು ಮಾಡಕೂಡದು, ಆಷಾಢಮಾಸದಲ್ಲಿ ಏಕಭಕ್ತವ್ರತವನ್ನು ಮಾಡಲು ಧನಧಾನ್ಯ ಪುತ್ರಾಭಿವೃದ್ಧಿಯುಂಟಾಗು ವುದು.ಈ ಮಾಸದಲ್ಲಿ ವಾಮನ ಪ್ರೀತ್ಯರ್ಥವಾಗಿ ಪಾದರಕ್ಷೆ, ಕೊಡೆ, ಉ ಪ್ಪು, ನೆಲ್ಲಿಯಕಾಯಿ ಇವುಗಳನ್ನು ದಾನಮಾಡಬೇಕು, ಆಷಾಢ ಶುದ್ಧ ದ್ವಿತೀಯೆಯಲ್ಲಿ ಪುಷ್ಯನಕ್ಷತ್ರವು ಬಂದರೂ, ಇಲ್ಲದಿದ್ದರೂ ಶ್ರೀ ರಾ ಮನಿಗೆ ರಥೋತ್ಸವವನ್ನು ನಡೆಯಿಸಬೇಕು. ಅದರ ನಿರ್ಣಯವು ಹಿಂದೆ ಯೇ ಉಕ್ತವಾಗಿದೆ.

—ವಿಷ್ಣುಶಯನೋತ್ಸವವು—

ಆಷಾಢಶುದ್ಧ ಏಕಾದಶಿಯಲ್ಲಿ ವಿಷ್ಣುವಿಗೆ ಶಯನೋತ್ಸವವ ನ್ನು ಮಾಡಬೇಕು, ಈ ದಿವಸದಲ್ಲಿ ಸಕಲ ಸಾಮಗ್ರಿಗಳಿಂದ ಕೂಡಿದ ಮಂಚವನ್ನು ಪುಷ್ಪಾದಿಗಳಿಂದಲಂಕರಿಸಿ, ಅದರಮೇಲೆ ವಿಷ್ಣುಪ್ರತಿಮೆ ಯನ್ನು ಶಙ್ಖ ಮೊದಲಾದ ನಾಲ್ಕು ಆಯುಧಗಳನ್ನು ಧರಿಸಿರುವಂತೆಯೂ, ಲಕ್ಷ್ಮೀದೇವಿಯು ಪಾದಸೇವೆಯನ್ನು (ಕಾಲೊತ್ತುವುದು) ಮಾಡುತ್ತಿ ರುವಂತೆಯೂ, ಇರುವಹಾಗೆ ಮಾಡಿ ಮಲಗಿಸಿ ಷೋಡಶೋಪಚಾರಗ ಳಿಂದ ಪೂಜಿಸಬೇಕು.

ಸುಪ್ತೇತ್ವಯಿಜಗನ್ನಾಥೇ ಜಗತ್ಸುಪ್ತಂ ಭವೇದಿದಂ ।
ವಿಬುದ್ಧೇತ್ವಯಿ ಬುದ್ಧ್ಯೇತ ತತ್ಸರ್ವಂ ಸಚರಾಚರಂ ॥೧॥

ಅಂದರೆ—ಎಲೈ ಜಗನ್ನಾಯಕನಾದ ಮಹಾವಿಷ್ಣುವೇ ! ನೀನು ಮಲಗಿ ನಿದ್ರಿಸುತ್ತಿದ್ದರೆ ಈ ಪ್ರಪಂಚವೆಲ್ಲವೂ ನಿದ್ರಿಸುತ್ತಿರುವುದು. ನೀ ನು ಎಚ್ಚತ್ತರೆ ಚರಾಚರಾತ್ಮಕವಾದ ಈ ಜಗತ್ತೆಲ್ಲವೂ ಎಚ್ಚರಗೊಂಡು

ರುವುದು ಎಂದು ಪ್ರಾರ್ಥಿಸಬೇಕು. ಅನಂತರದಲ್ಲಿ ಉಪವಾಸವಮಾಡಿ ಆ ದಿನರಾತ್ರಿ ಜಾಗರಣೆಮಾಡಿ ದ್ವಾದಶಿಯಲ್ಲಿಪುನಃ ಪೂಜೆಮಾಡಿ ತ್ರಯೋದಶಿಯಲ್ಲಿ ನೃತ್ತ ಗೀತ ವಾದ್ಯಗಳಿಂದ ಉಪಚರಿಸಬೇಕು. ಹೀಗೆ ಈ ವ್ರತವು ಮೂರುದಿನಗಳಿಂದ ನೆರವೇರಿಸತಕ್ಕದ್ದಾಗಿದೆ. ವೈಷ್ಣವರೂ ಸ್ಮಾರ್ತರೂ ತಮ್ಮತಮ್ಮ ಏಕಾದಶೀ ದಿವಸಗಳಲ್ಲಿ ಈ ಶಯನವ್ರತವನ್ನು ಪ್ರಾರಂಭಿಸಬೇಕು. ರಾತ್ರಿಯಲ್ಲಿ ಶಯನೋತ್ಸವವನ್ನೂ, ಹಗಲಿನಲ್ಲಿ ಪ್ರಬೋಧೋತ್ಸವ (ಎಚ್ಚರಗೊಳಿಸುವುದು)ವನ್ನೂ ಮಾಡಬೇಕು. ದ್ವಾದಶಿಯಲ್ಲಿ ಪಾರಣೆಯ ದಿನದಲ್ಲಿಯೇ ಶಯನೋತ್ಸವ, ಪ್ರಬೋಧೋತ್ಸವಳೆರಡನ್ನೂ ಮಾಡಬೇಕೆಂದು ಕೆಲವರು. ಈ ವಿಷಯದಲ್ಲಿ ಆಯಾದೇಶಾಚಾರಗಳಂತೆಯೇ ನಿರ್ಣಯಿಸಿಕೊಳ್ಳಬೇಕು. ಮಲಮಾಸದಲ್ಲಿ ಈ ವ್ರತವನ್ನು ಮಾಡಕೂಡದು. ಆಷಾಢಶುದ್ಧ ದ್ವಾದಶಿಯಲ್ಲಿ ಅನೂರಾಧಾನಕ್ಷತ್ರದ ಯೋಗವಿಲ್ಲದ ಕಾಲದಲ್ಲಿ ಪಾರಣೆಯನ್ನು ಮಾಡಬೇಕು. ಅದರಲ್ಲಿಯೂ ಅನೂರಾಧಾನಕ್ಷತ್ರದ ಮೊದಲನೆಯ ಪಾದದ ಯೋಗವು ಮಾತ್ರವೇ ಪಾರಣೆಗೆ ತಕ್ಕದ್ದಲ್ಲವಾದ್ದರಿಂದ ಅದನ್ನು ಬಿಡಬೇಕು. ಆದರೆ ದ್ವಾದಶಿಯು ಸ್ವಲ್ಪಕಾಲವೇ ಇರುವುದಾಗಿಯೂ,ವರ್ಜ್ಯವಾದ ನಕ್ಷತ್ರಭಾಗವು ದ್ವಾದಶಿಗಿಂತಲೂ ಹೆಚ್ಚಾಗಿರುವುದಾಗಿಯೂ ಇದ್ದರೆ ಅನೂರಾಧಾನಕ್ಷತ್ರದ ಮೊದಲನೆಯ ಪಾದವನ್ನು ಬಿಡಬೇಕೆಂಬ ನಿಷೇಧವನ್ನು ಎಣಿಸದೆ ಆ ದ್ವಾದಶಿಯಲ್ಲಿಯೇ ಪಾರಣೆಯನ್ನು ಮಾಡಬೇಕೆಂದು ಕೌಸ್ತುಭದಲ್ಲಿ ಹೇಳಿದೆ. ಸಙ್ಗವಕಾಲವನ್ನು ಬಿಟ್ಟು ಪ್ರಾತಃಕಾಲದಲ್ಲಾಗಲಿ, ಮಧ್ಯಾಹ್ನಕಾಲದಲ್ಲಾಗಲಿ ಊಟಮಾಡಬೇಕೆಂದು ಪುರುಷಾರ್ಥಚಿಂತಾಮಣಿಯಲ್ಲಿ ಹೇಳಿದೆ. ದ್ವಾದಶಿಯಲ್ಲಿ ಪಾರಣೆಯನ್ನು ಮಾಡಿದಮೇಲೆ ಸಾಯಂಕಾಲದ ಪೂಜೆಯನ್ನು ಮಾಡಿ ಚಾತುರ್ಮಾಸ್ಯವ್ರತಕ್ಕೆ ಸಂಕಲ್ಪವನ್ನು ಮಾಡಬೇಕೆಂದು ಕೌಸ್ತುಭದಲ್ಲಿ ಹೇಳಿದೆ. ಏಕಾದಶಿಯಲ್ಲಿಯೇ ಮಾಡಬೇಕೆಂದು ನಿರ್ಣಯ ಸಿಂಧುಕಾರನು ಹೇಳಿರುವನು.

—ಚಾತುರ್ಮಾಸ್ಯವ್ರತಾರಂಭವು—

ಚಾತುರ್ಮಾಸ್ಯ ವ್ರತವನ್ನು ಹೊಸದಾಗಿ ಆರಂಭಿಸುವವರು-(ಹಿಡಿಯುವವರು) ಗುರು, ಶುಕ್ರರ ಅಸ್ತಕಾಲದಲ್ಲಿಯೂ, ಆಶೌಚವೇಮೊದ

ಲಾದ ಪೈಲಿಗೆಯಲ್ಲಿಯೂ ಮಾಡಕೂಡದು, ಎರಡನೆಯ ಸಾರಿಯಿಂದ ಗುರುಶುಕ್ರಾಸ್ತಗಳನ್ನೂ, ಆಶೌಚವನ್ನೂ ನೋಡಬೇಕಾದುದಿಲ್ಲ. ಚಾತುರ್ಮಾಸ್ಯವ್ರತವನ್ನು ಶೈವಮತದವರೇ ಮೊದಲಾಗಿ ಎಲ್ಲರೂ ಮಾಡಬಹುದು.

ವ್ರತವನ್ನು ಹಿಡಿವ ಬಗೆ-ವಿಷ್ಣುವನ್ನು ಜಾಜಿಮೊದಲಾದ ಹೂಗಳಿಂದ ಮಹಾಪೂಜೆಮಾಡಿ "ಸುಪ್ತೇತ್ವಯಿಜಗನ್ನಾಥ ಜಗತ್ಸುಪ್ತಂಭವೇದಿದಂ। ವಿಬುದ್ಧೇತ್ವಯಿಬುದ್ಧ್ಯೇತ ಪ್ರಸನ್ನೋಮೇಭವಾಚ್ಯುತ ॥೧॥" ಎಂದು ಪ್ರಾರ್ಥಿಸಿ ದೇವರೆದುರಿಗೆ ಅಂಜಲಿಬದ್ಧನಾಗಿನಿಂತು "ಚತುರೋವಾರ್ಷಿಕಾನ್ಮಾಸಾನ್ದೇವಸ್ಯೋತ್ಥಾಪನಾವಧಿ। ಶ್ರಾವಣೇವರ್ಜಯೇ ಶಾಕಂ ದಧಿ ಭಾದ್ರಪದೇತಥಾ ॥೧॥ ದುಗ್ಧಮಾಶ್ವಯುಜೇಮಾಸಿ ಕಾರ್ತಿಕೇದ್ವಿದಳಂ ತಥಾ । ಇಮಂಕರಿಷ್ಯೇನಿಯಮಂನಿರ್ವಿಘ್ನಂ ಕುರುಮೇ ಚ್ಯುತ॥೨॥ಇದಂವ್ರತಂ ಮಯಾದೇವಗೃಹೀತಂ ಪುರತಸ್ತವ । ನಿರ್ವಿಘ್ನಂಸಿದ್ಧಿಮಾಯಾತು ಪ್ರಸಾದಾತ್ತೇರಮಾಪತೇ ॥೩॥ ಗೃಹೀತೇಸ್ಮಿನ್ವ್ರತೇ ದೇವ ಪಂಚತ್ವಂ ಯದಿಮೇಭವೇತ್ । ತದಾ ಭವತು ಸಂಪೂರ್ಣಂಪ್ರಸಾದಾತ್ತೇಜನಾರ್ದನ ॥೪॥" ಎಲೈ ಭಗವಂತನೇ! ನೀನು ಮಲಗಿ ಏಳುವವರೆಗೆ ಅಂದರೆ ಈವರ್ಷಾಕಾಲದಲ್ಲಿ ಶ್ರಾವಣ ಮೊದಲ್ಗೊಂಡು ಕಾರ್ತಿಕ ಮಾಸದವರಿಗೆ ನಾಲ್ಕು ತಿಂಗಳುಗಳ ಕಾಲದಲ್ಲಿ (ಆಷಾಢಶುದ್ಧ ಏಕಾದಶಿ ಅಥವಾ ದ್ವಾದಶಿಯಿಂದ ಶ್ರಾವಣ ಶುದ್ಧ ಏಕಾದಶಿ ಅಥವಾ ದ್ವಾದಶಿಯವರಿಗೆ ಒಂದು ತಿಗಳೆಂದೆಣಿಸಬೇಕು. ಹೀಗೆ ಎಣಿಸುವುದರಿಂದ ಕಾರ್ತಿಕ ಶುದ್ಧೈಕಾದಶಿ ಅಥವಾ ದ್ವಾದಶಿಯವರಿಗೆ ನಾಲ್ಕುತಿಂಗಳುಗಳಾಗುವುವು) ನಾನುವ್ರತವನ್ನು ಕೈಕೊಳ್ಳುವೆನು. ಅದಕ್ಕಾಗಿ ಶ್ರಾವಣದಲ್ಲಿ ಕಾಯಿಪಲ್ಯಗಳನ್ನೂ, ಭಾದ್ರಪದದಲ್ಲಿಮೊಸರನ್ನೂ ಬಿಡುವೆನು॥೧॥ಆಶ್ವಯುಜಮಾಸದಲ್ಲಿಹಾಲನ್ನೂ, ಕಾರ್ತಿಕದಲ್ಲಿ ದ್ವಿದಳಧಾನ್ಯಗಳನ್ನೂ (ತೊಗರಿ, ಕಡಲೆ, ಹೆಸರು ಮೊದಲಾದದ್ದು) ಬಿಡುವೆನು. ಎಲೈ ಶ್ರೀ ಕೃಷ್ಣನೇ! ನಾನುಮಾಡುವ ಈನಿಯಮಗಳನ್ನು ನಿರ್ವಿಘ್ನವಾಗಿ ನೆರವೇರಿಸು ॥೨॥ ಲಕ್ಷ್ಮೀಪತಿಯಾದ ಶ್ರೀಹರಿಯೇ ! ನಿನ್ನೆದುರಿಗೆ ನಾನು ಹಿಡಿದ ವ್ರತವು ನಿನ್ನ ಅನುಗ್ರಹದಿಂದ ಸಾಂಗವಾಗಿ ನಡೆದು ನನಗೆ ಸಿದಿಸಲಿ ॥೩॥ ಎಲೈಜನಾರ್ದನ

ನೇ ! ನಾನು ಈವ್ರತವನ್ನು ನಡೆಯಿಸುವ ಕಾಲದಲ್ಲಿ, ಪೂರಯಿಸುವಷ್ಟ ರಲ್ಲಿಯೇ ಮರಣವನ್ನು ಹೊಂದಿದಾಗ್ಯೂ ನಿನ್ನ ಪ್ರಸಾದದಿಂದ ಸಂಪೂರ್ಣವಾಗಲಿ. ॥೪॥ ಹೀಗೆಂದು ಪ್ರಾರ್ಥಿಸಿ ಶಂಖೋದಕದಿಂದ ದೇವರಿಗೆ ಅರ್ಘ್ಯವನ್ನು ಕೊಡಬೇಕು. ಮೇಲ್ಕಂಡ ನಾಲ್ಕುವ್ರತಗಳನ್ನೂ ನಿತ್ಯವಾಗಿಮಾಡಲೇಬೇಕು. ಹವಿಷ್ಯಪದಾರ್ಥಭೋಜನವೇ ಮೊದಲಾದ ಬೇರೆ ವ್ರತಗಳನ್ನೂ ಮಾಡಬೇಕೆಂಬ ಅಪೇಕ್ಷೆಯುಂಟಾಗಿದ್ದಲ್ಲಿ "ಹವಿಷ್ಯಾನ್ನಂ ಭಕ್ಷಯಿಷ್ಯೇದೇವಾಹಂ ಪ್ರೀತಯೇತವ" ಎಂಬುದನ್ನು "ಶ್ರಾವಣೇವರ್ಜಯೇಶಾಕಂ" ಎಂಬಶ್ಲೋಕವನ್ನು ಹೇಳಬೇಕಾದ ಸ್ಥಳದಲ್ಲಿ ಹೇಳಿಕೊಳ್ಳಬೇಕು. ಶಾಕವ್ರತದಲ್ಲಿಯೂ, ಇತರವ್ರತಗಳಲ್ಲಿಯೂ ಎರಡನ್ನೂ ಒಟ್ಟಾಗಿ ಮಾಡುತ್ತೇನೆಂದು (ಸಮುಚ್ಚಯ) ಸಂಕಲ್ಪಮಾಡಕೂಡದು. ಆಶ್ಲೋಕವನ್ನು ಹೇಳಿ ಇತರವ್ರತಮಂತ್ರವನ್ನು ಹೇಳಬೇಕು. ಹೀಗೆಬೆಲ್ಲವನ್ನು ಬಿಡುವುದು ಮೊದಲಾದ ಧಾರಣಾಪಾರಣಾದಿ ವ್ರತಗಳಲ್ಲಿ "ವರ್ಜಯಿಷ್ಯೇ ಗುಡಂದೇವ ಮಧುರಸ್ವರಸಿದ್ಧಯೇ। ವರ್ಜಯಿಷ್ಯೇತೈಲಮಹಂಸುಂದರಾಂಗಸ್ಯ ಸಿದ್ಧಯೇ ॥೧॥ ಯೋಗಾಭ್ಯಾಸೀಭವಿಷ್ಯಾಮಿ ಪ್ರಾಪ್ತುಂ ಬ್ರಹ್ಮಪರಂಪದಂ। ಮೌನವ್ರತೀಭವಿಷ್ಯಾಮಿ ಸ್ವಾಜ್ಞಾಪಾಲನಸಿದ್ಧಯೇ ॥೨॥ ಏಕಾಂತರೋಪವಾಸೀಚ ಪ್ರಾಪ್ತುಂ ಬ್ರಹ್ಮಪುರಂಪರಂ ॥" ಎಲೈ ಸ್ವಾಮಿಯೇ! ಮಧುರಧ್ವನಿಯುಳ್ಳವನಾಗುವುದಕ್ಕಾಗಿ ಬೆಲ್ಲವನ್ನೂ, ಮನೋಹರವಾದ ಅಂಗಗಳುಳ್ಳವನಾಗುವುದಕ್ಕಾಗಿ ಎಣ್ಣೆಯನ್ನೂ ಬಿಡುವೆನು ॥೧॥ ಮೋಕ್ಷವನ್ನು ಪಡೆಯುವುದಕ್ಕೆ ಯೋಗಾಭ್ಯಾಸವಮಾಡುವೆನು. ಎಲ್ಲರನ್ನೂ ನನಗೆ ಆಜ್ಞಾಧಾರಕರನ್ನಾಗಿ ಮಾಡಿಕೊಳ್ಳುವುದಕ್ಕಾಗಿ ಮೌನವ್ರತವನ್ನು ವಹಿಸುವೆನು ॥೨॥ ಬ್ರಹ್ಮಲೋಕವನ್ನು ಪಡೆಯುವುದಕ್ಕಾಗಿ (ದಿನಬಿಟ್ಟು ದಿನ) ಏರಡು ದಿನಕ್ಕೊಂದಾವೃತ್ತಿ ಭೋಜನ ಮಾಡುವೆನು॥ ಇದೇ ಮೊದಲಾದ ರೀತಿಯಾಗಿ ಹೇಳಿಕೊಳ್ಳಬೇಕು. ನಿಷಿದ್ಧವಸ್ತುಗಳನ್ನು ಮಾತ್ರವೇ ಬಿಡಬೇಕೆಂಬ ಇಚ್ಛೆಯುಂಟಾದರೆ 'ವೃಂತಾಕಾದಿ ನಿಷಿದ್ಧಾನಿ ಹರೇಸರ್ವಾಣಿವರ್ಜಯೇ' ಎಲೈ ಹರಿಯೇ! ಬದನೆಯಕಾಯಿ ಮೊದಲಾದ ನಿಷಿದ್ಧ ಪದಾರ್ಥಗಳೆಲ್ಲವನ್ನೂ ಬಿಡುತ್ತೇನೆ ಎಂದು ಸಂಕಲ್ಪಮಾಡಬೇಕು. ಚಾತುರ್ಮಾಸ್ಯದಲ್ಲಿ ಅವುಗಳನ್ನೂ ನಿಷೇಧಿಸಬೇಕು.

## —ನಿಷೇಧವುಳ್ಳ ಪದಾರ್ಥಗಳು—

ಕಪ್ಪೆಯ ಚಿಪ್ಪಿನ ಸುಣ್ಣ, ಚರ್ಮದಚೀಲದಲ್ಲಿನ ನೀರು, ನಿಂಬೆಯ ಹಣ್ಣು, ಮಾದಳದಹಣ್ಣು, ಯಜ್ಞ ಶೇಷವಲ್ಲದ.ವಿಷ್ಣುವಿಗೆ ನಿವೇದನಮಾಡದಿರುವ ಅನ್ನ, ಸೀದುಹೋದ ಅನ್ನ (ಅನ್ನದ ಸೀಕು) ಕಿರುಗಡಲೆ, ಮಾಂಸ, ಈ ಎಂಟು ವಿಧವಾದ ಆಹಾರವನು ಬಿಡಬೇಕು. ಅವರೆ ಹಲಸಂದೆ, ಲವಣ ಶಾಕ,ಬದನೆಯಕಾಯಿ, ಕಲಿಙ್ಗಫಲ (ಕೊಡಸಿಗೆಯ ಹಣ್ಣು) ಸೀಬೆಯ ಹಣ್ಣು, ಬಾಳೆಯಹಣ್ಣು, ಮೂಲಂಗಿ, ಕೆಂಪು ಮೂಲಂಗಿ, ಕುಂಬಳಕಾಯಿ, ಕಬ್ಬು, ಎಲಚಿ, ನೆಲ್ಲಿ ಹಣ್ಣುಗಳು, ಹುಣಿಸೆ ಹಣ್ಣು ಇವುಗಳನ್ನೂ, ಮಂಚವೊದಲಾದ ಹಾಸಿಗೆಗಳನ್ನೂ, ಋತುಕಾಲವಲ್ಲದ ಸಮಯಗಳಲ್ಲಿ ಪತ್ನೀಸಂಗವನ್ನೂ, ಪರಾನ್ನ, ಜೇನುತುಪ್ಪ, ಪಡವಲ ಕಾಯಿ, ಉದ್ದು, ಹುರುಳಿ, ಬಿಳಿಯ ಸಾಸುವೆ, ಇವುಗಳನ್ನೂ ಬಿಡಬೇಕು. ವೈಷ್ಣವರು-ಬದನೆಯಕಾಯಿ, ಬಿಲ್ವಪತ್ರೆಯಕಾಯಿ ಅತ್ತಿಯಹಣ್ಣು, ಕಲಿಂಗಫಲ, ಸೀದುಹೋದ ಅನ್ನ, ಇವುಗಳನ್ನು ಎಲ್ಲ ಮಾಸಗಳಲ್ಲಿಯೂ ಬಿಡಬೇಕು. ಹಸು, ಮೇಕೆ, ಎಮ್ಮೆ, ಇವುಗಳಲ್ಲದೆ ಬೇರೆ ಪಶುಗಳಿಂದ ಕರೆದ ಹಾಲು, ತಂಗಳನ್ನ, ಬ್ರಾಹ್ಮಣರಿಂದ ಕ್ರಯಕ್ಕೆತೆಗೆದುಕೊಂಡ ಷಡ್ರಸಪದಾರ್ಥಗಳು, ಉಪ್ಪಿನ ಮೆಳೆಯಲ್ಲಿ ಮಾಡಿದ ಉಪ್ಪು, ತಾಮ್ರ ಪಾತ್ರೆಯಲ್ಲಿಟ್ಟ ಹಸುವಿನ ಹಾಲುಮೊದಲಾದದ್ದು, ಸಣ್ಣಕುಂಟೆ (ಹಳ್ಳ) ಯನೀರು, ತನ್ನೊಬ್ಬನಿಗಾಗಿ ಅಟ್ಟ ಅನ್ನ, ಈ ಪದಾರ್ಥಗಳನ್ನು ಬಿಡಬೇಕೆಂದು ಮತ್ತೊಂದು ಸ್ಥಳದಲ್ಲಿ ಹೇಳಿದೆ 'ಚತುಷ್ಟಾಪಿಚಮಾಸೇಷು ಹವಿಷ್ಯಾಶೀ ನಪಾಪಭಾಕ್' ಅಂದರೆ ಈಚಾತುರ್ಮಾಸ್ಯ ನಾಲ್ಕುತಿಂಗಳುಗಳಲ್ಲಿಯೂ ಹವಿಷ್ಯಾನ್ನವನ್ನು ಭೋಜನಮಾಡಿರುವವನು ಪಾಪಕ್ಕೆ ಗುರಿಯಾಗುವುದಿಲ್ಲವೆಂದು ಶಾಸ್ತ್ರವಿರುವುದರಿಂದ ಹವಿಷ್ಯಪದಾರ್ಥವನ್ನೇ ಭುಂಜಿಸಬೇಕು.

## —ಹವಿಷ್ಯವಸ್ತುಗಳು—

ಬತ್ತ, ಹೆಸರು, ಯವೆ, ಎಳ್ಳು, ನವಣೆ, ನೆಲಗಡಲೆ, ಸಾವೆ, ಗೋಧಿ, ಈ ಧಾನ್ಯಗಳು, ಬಿಳಿ ಮೂಲಂಗಿ, ಸೂರಣದ ಗಡ್ಡೆ, ಸೈಂಧವಲವಣ ಸಮುದ್ರಲವಣ, ಹಸುವಿನಹಾಲು, ಮೊಸರು, ತುಪ್ಪ, ಹಲಸು, ಮಾವು,

ಈ ಹಣ್ಣುಗಳು, ತೆಂಗಿನಕಾಯಿ, ಅಳಲೆಕಾಯಿ, ಹಿಪ್ಪಲಿ, ಜೀರಿಗೆ, ಶುಂಠಿ, ಹುಣಿಸೆ, ಬಾಳೆ, ಲವಲಿ, ನೆಲ್ಲಿ, ಹಣ್ಣುಗಳು, ಬೆಲ್ಲವಲ್ಲದೆ ಕಬ್ಬಿನಿಂದಾಗುವ ಪದಾರ್ಥಗಳು (ಕಲ್ಲುಸಕ್ಕರೆ ಮೊದಲಾದದ್ದು) ಎಣ್ಣೆಯಿಂದ ಬೇಯಿಸಿದ ಪದಾರ್ಥಗಳು, ಕೆಲವು ಸಂದರ್ಭಗಳಲ್ಲಿ ಹಸುವಿನ ಮಜ್ಜಿಗೆ ಮತ್ತು ಎಮ್ಮೆಯ ತುಪ್ಪವು, ಇವೆಲ್ಲ ಹವಿಷ್ಯವಸ್ತುಗಳು.

—ಕಾಮ್ಯವ್ರತಗಳು—

ಬೆಲ್ಲವನ್ನು ಬಿಡುವುದರಿಂದ ಧ್ವನಿಯು ಇಂಪಾಗುವದು, ಎಣ್ಣೆಯನ್ನು ಬಿಟ್ಟರೆ ಸೌಂದರ್ಯವುಂಟಾಗುವುದು, ಯೋಗಾಭ್ಯಾಸಮಾಡುವವನು ಬ್ರಹ್ಮಲೋಕವನ್ನು ಪಡೆವನು, ತಾಂಬೂಲವನ್ನು ಬಿಡುವುದರಿಂದ ಭೋಗಿಯಾಗುವನು, ದಿವ್ಯವಾಗಶಾರೀರವುಂಟಾಗುವುದು, ತುಪ್ಪವನ್ನು ಬಿಡುವುದರಿಂದ ದೇಹಕಾಂತಿಯು ವೃದ್ಧಿಹೊಂದುವುದು, ಕಾಯಿಪಲ್ಯವನ್ನು ಬಿಡುವವನು ಮೃಷ್ಟಾನ್ನವನ್ನು ಹೊಂದುವನು. ಅಭ್ಯಂಜನಸ್ನಾನಮಾಡುವಾಗ ಕಾಲುಗಳಿಗೆ ಎಣ್ಣೆಯನ್ನು ಹಚ್ಚಿಕೊಳ್ಳದೆ ಬಿಟ್ಟರೆ ದೇಹವು ಸುವಾಸನೆಯುಳ್ಳದ್ದಾಗುವುದು. ಮೊಸರು, ಹಾಲು, ಮಜ್ಜಿಗೆ ಇವುಗಳನ್ನು ಬಿಟ್ಟರೆ ವಿಷ್ಣುಲೋಕಪ್ರಾಪ್ತಿಯಾಗುವದು, ಪಾತ್ರೆಯಲ್ಲಿ ಅಟ್ಟ ಅನ್ನವನ್ನು ಭೋಜನಮಾಡದಿದ್ದರೆ ದೀರ್ಘಾಯುಷ್ಯವುಳ್ಳ ಮಕ್ಕಳು ಹುಟ್ಟುವವು, ನೆಲದಮೇಲೆ ದರ್ಭೆಗಳನ್ನು ಹಾಸಿಕೊಂಡು ಮಲಗುವವನು ವಿಷ್ಣುದಾಸನಾಗುವನು, ನೆಲವನ್ನು ಸಾರಿಸಿ ಅದರಲ್ಲಿ ಊಟಮಾಡುವುದರಿಂದ ದೊರೆತನವು ಬರುವುದು, ಮಧು, ಮಾಂಸಗಳನ್ನು ಬಿಟ್ಟವನು ಋಷಿಯಾಗುವನು, ದಿನ ಬಿಟ್ಟುದಿನ (ಎರಡುದಿನಕ್ಕೊಂದುಸಾರಿ) ಊಟಮಾಡುವವನು ಬ್ರಹ್ಮಲೋಕವನ್ನು ಹೊಂದುವನು, ತಲೆಯನ್ನೂ ಉಗುರುಗಳನ್ನೂ ಬೆಳೆಯಬಿಡುವುದರಿಂದ ಸರ್ವದಾ ಗಂಗಾಸ್ನಾನ ಫಲವು ಬರವದು, ಮೌನವನ್ನು ಮಾಡುವುದರಿಂದ ಆಜ್ಞಾಶಕ್ತಿಯುಂಟಾಗುವುದು, ವಿಷ್ಣುವಿಗೆ ನಮಸ್ಕಾರಮಾಡುವುದರಿಂದ ಗೋದಾನದ ಫಲವು ಬರುವುದು, ವಿಷ್ಣುಪಾದವನ್ನು ಮುಟ್ಟುವುದರಿಂದ ಕೃತಾರ್ಥತೆಯುಂಟಾಗುವುದು, ವಿಷ್ಣುದೇವಾಲಯದಲ್ಲಿ ಗುಡಿಸುವುದು ಸಾರಿಸುವುದು ಇವುಗಳಿಂದ ರಾಜ್ಯಪ್ರಾಪ್ತಿ, ನೂರುಪ್ರದಕ್ಷಿಣೆಗಳನ್ನು ಮಾಡಿದರೆ ವಿಷ್ಣುಲೋಕಪ್ರಾ

ಪ್ತಿ, ಏಕಭುಕ್ತವನ್ನು ಮಾಡುವುದರಿಂದ ಅಗ್ನಿಹೋತ್ರದ ಫಲವುಂಟು, ಅ ಯಾಚಿತವಾಗಿ ಭೋಜನಮಾಡಿದರೆ ಕೊಳ, ಬಾವಿ, ಇವುಗಳನ್ನು ಕಟ್ಟಿಸಿದ ಫಲವು, ಪ್ರತಿದಿನದಲ್ಲಿಯೂ ಹಗಲಿನ ಆರನೇಭಾಗದಲ್ಲಿ (೪ಘಂಟೆಯಮೇಲೆ) ಊಟಮಾಡುತ್ತಾ ಬಂದರೆ ಬಹಳಕಾಲ ಸ್ವರ್ಗಸುಖವುಂಟಾಗುವುದು. ಎಲೆಗಳಲ್ಲಿ ಭೋಜನಮಾಡಿದರೆ ಕುರುಕ್ಷೇತ್ರದಲ್ಲಿ ವಾಸಮಾಡಿದಷ್ಟು ಫಲವು, ಕಲ್ಲಿನಮೇಲೆ ಊಟಮಾಡಿದರೆ ಪ್ರಯಾಗದಲ್ಲಿ ಸ್ನಾನಮಾಡಿದ ಫಲವುಂಟು. ಈ ರೀತಿಯಾಗಿ ನಾಲ್ಕುತಿಂಗಳ ಕಾಲದಿಂದ ಪೂರಯಿಸುವ ಈ ವ್ರತಕ್ಕೆ ಏಕಾದಶೀ ಅಥವಾ ದ್ವಾದಶಿಯಲ್ಲಿ ಸಂಕಲ್ಪಮಾಡಿ ಶ್ರಾವಣಮಾಸದಲ್ಲಿ ಮಾಡಬೇಕಾದ ವ್ರತ ವಿಷಯದಲ್ಲಿ ಈಗಲೇ ಸಂಕಲ್ಪಮಾಡಬೇಕು, ಹೇಗೆಂದರೆ-'ಅಹಂಶಾಕಂವರ್ಜಯಿಷ್ಯೇ ಶ್ರಾವಣೇಮಾಸಿಮಾಧವ' ಎಲೈ ಲಕ್ಷ್ಮೀಪತಿಯಾದ ವಿಷ್ಣುವೇ! ನಾನು ಶ್ರಾವಣಮಾಸದಲ್ಲಿ ಶಾಕಗಳನ್ನು ಬಿಡುವೆನು ಎಂದು. ಶಾಕವೆಂದರೆ-ಲೋಕದಲ್ಲಿ ಪ್ರಸಿದ್ಧವಾದ ಹಣ್ಣು, ಬೇರು, ಹೂ, ಎಲೆ, ಮೊಳಕೆ, ಕಾಂಡ, ತೊಗಟೆ, ಮೊದಲಾದ ಎಲ್ಲಾ ಸಸ್ಯಸಂಬಂಧವಾದ ವಸ್ತುಗಳನ್ನೂ ಬಿಡಬೇಕಲ್ಲದೆ ಕಾಯಿಪಲ್ಯಗಳನ್ನು ಮಾತ್ರ ಬಿಡುವುದೆಂದರ್ಥವಲ್ಲ. ಶುಂಠಿ, ಅರಿಸಿನ, ಜೀರಿಗೆ ಮೊದಲಾದುವನ್ನೂ ಬಿಡಬೇಕು. ಆಕಾಲದಲ್ಲಿ ಹುಟ್ಟಿದ(ಬೆಳೆದ) ಪದಾರ್ಥಗಳನ್ನೂ, ಕೆಲವು ದಿನಗಳ ಹಿಂದೆ ಬೆಳೆದ ವಸ್ತುಗಳನ್ನೂ, ಬಿಸಿಲಿನಲ್ಲಿ ಒಣಗಿಸಿಟ್ಟಿರುವದನ್ನೂ (ಬಾಳಕ ಮೊದಲಾದದ್ದು) ಸಹ ಬಿಡಬೇಕು. ಈ ಚಾತುರ್ಮಾಸ್ಯವ್ರತಗಳು ಪೂರಯಿಸಿದಮೇಲೆ ಕಾರ್ತಿಕಮಾಸದಲ್ಲಿ ಮಾಡಬೇಕಾದ ದಾನಾದಿಗಳನ್ನು ಕಾರ್ತಿಕಮಾಸ ಪ್ರಕರಣದಲ್ಲಿ ಹೇಳಲಾಗುವುದು. ಶಯನೀ, ಬೋಧಿನೀ, ಏಕಾದಶಿಗಳಲ್ಲಿ ತಪ್ತಮುದ್ರಾಧಾರಣೆಯನ್ನು ಮಾಡಿಕೊಳ್ಳಬೇಕೆಂದು ರಾಮಾರ್ಚನ ಚಂದ್ರಿಕೆ ಎಂಬ ಗ್ರಂಥದಲ್ಲಿ ಹೇಳಿದೆ, ಈ ವಿಷಯದಲ್ಲಿ ತಪ್ತಮುದ್ರಾಧಾರಣೆಯು ಶ್ರೇಷ್ಠವಾದದ್ದರಿಂದ ಮಾಡಿಕೊಳ್ಳಬೇಕು ಎಂಬುದಕ್ಕೂ, ಇದು ಅಯುಕ್ತವಾದದ್ದಾದಕಾರಣ ಮಾಡಿಕೊಳ್ಳಕೂಡದೆಂಬುದಕ್ಕೂ ಅನೇಕವಚನಗಳು ಸಿಕ್ಕುತ್ತವೆ, ಅವರವರಶಿಷ್ಟಾಚಾರ ಪ್ರಕಾರವಾಗಿ ಇದನ್ನು ನಿರ್ಣಯಿಸಿಕೊಳ್ಳಬೇಕು, ಯಾರವಂಶದಲ್ಲಿ ಪಾರಂಪರ್ಯವಾಗಿ ತಪ್ತಮುದ್ರಾ

ಧಾರಣೆಯು ಆಚರಣೆಗೆ ಬಂದಿದೆಯೋ ಅವರು ಅದನ್ನು ಆಚರಿಸಬೇಕು, ಯಾರವಂಶದಲ್ಲಿ ಪೂರ್ವಿಕರೊಬ್ಬರೂ ಆಚರಿಸದಿರುವರೋ ಅಂತವರು ತಮ್ಮ ಮನಸ್ಸಿಗೆ ಯೋಗ್ಯವೆಂದು ಕಂಡು ಬಂದಾಗ್ಯೂ ಅದು ದೋಷಾವಹವಾದದ್ದೆಂಬ ವಚನದಂತೆಯೇ ಅದನ್ನು ಬಿಡಬೇಕು ಎಂದು ತಾತ್ಪರ್ಯವು. ಆಷಾಢಶುದ್ಧ ದ್ವಾದಶಿಯಲ್ಲಿ ವಾಮನನನ್ನು ಪೂಜಿಸಿದರೆ ನರಪಶುವಿನಿಂದ ಯಜ್ಞ ಮಾಡಿದಷ್ಟು ಫಲವು. ಪೂರ್ವಾಷಾಢನಕ್ಷತ್ರಯುಕ್ತವಾದ ಪೂರ್ಣಿಮೆಯಲ್ಲಿ ಅನ್ನೋದಕಾದಿಗಳನ್ನು ದಾನಮಾಡುವುದರಿಂದ ಅಕ್ಷಯ್ಯವಾದ ಅನ್ನಾದಿಗಳು ಪ್ರಾಪ್ತವಾಗುವವು. ಪ್ರದೋಷವ್ಯಾಪ್ತಿಯುಳ್ಳ ಈ ಪೌರ್ಣಮಿಯಲ್ಲಿಯೇ ಈಶ್ವರನಿಗೆ ಶಯನೋತ್ಸವವು ನಡೆಯಬೇಕು. ಈ ದಿನದಲ್ಲಿಯೇ ಕೋಕಿಲಾವ್ರತವನ್ನು ಮಾಡಬೇಕು.

—ಕೋಕಿಲಾ ವ್ರತವು—

"ಸ್ನಾನಂಕರಿಷ್ಯೇನಿಯತಾ ಬ್ರಹ್ಮಚರ್ಯೇಸ್ಥಿತಾಸತೀ। ಭೋಕ್ಷ್ಯಾಮಿನಕ್ತಂ ಭೂಶಯ್ಯಾ ಕರಿಷ್ಯೇಪ್ರಾಣಿ ನಾಂದಯಾಂ ॥೧॥ ಪುನಃ ಪೂರ್ವಕವಾಗಿ ಸ್ನಾನವನ್ನು ಮಾಡುವೆನು, ಬ್ರಹ್ಮಚರ್ಯವ್ರತದಲ್ಲಿರುವೆನು, ನಕ್ತಭೋಜನವನ್ನು ಮಾಡುವೆನು, ಹಾಸಿಗೆಯನ್ನು ಬಿಟ್ಟು ನೆಲದಲ್ಲಿಯೇ ಮಲಗುವೆನು, ಭೂತದಯಾಪರಳಾಗುವೆನು ॥೧॥ ಎಂಬದಾಗಿ ಸ್ತ್ರೀಯು ಮಾಸಕಾಲದಲ್ಲಿ ಮಾಡಬೇಕಾದ ಈ ವ್ರತಕ್ಕೆ ಸಂಕಲ್ಪಮಾಡಬೇಕು. ಯಾವವರ್ಷದಲ್ಲಿ ಅಧಿಕಾಷಾಢವು ಬರುವುದೋ ಆವರ್ಷದ ಶುದ್ಧಆಷಾಢದಲ್ಲಿಈ ವ್ರತವನ್ನು ಮಾಡಬೇಕೆಂಬ ಆಚಾರವಿರುವುದು. ಅದಕ್ಕೆ ಯಾವ ಆಧಾರವೂ ಇಲ್ಲ. ಆಷಾಢ ಅಥವಾ ಶ್ರಾವಣಮಾಸದ ಪೌರ್ಣಮಿ ಅಥವಾ ಚತುರ್ದಶಿ ಇಲ್ಲವೇ ಅಷ್ಟಮಿಯಲ್ಲಿ ಪರಮೇಶ್ವರನಿಗೆ ಪವಿತ್ರಾರೋಪಣವು ನಡೆಯಬೇಕು, ಈ ಪೌರ್ಣಮಾಸ್ಯೆಯಲ್ಲಿ ಸಂನ್ಯಾಸಿಗಳು ಒಂದೇ ಕಡೆಯಲ್ಲಿ ನಾಲ್ಕುತಿಂಗಳು ವಾಸಮಾಡುವುದಕ್ಕಾಗಿ ಮಾಡುವ ಚಾತುರ್ಮಾಸ್ಯ ಸಂಕಲ್ಪಕ್ಕೆ ಅಂಗವಾಗಿ ಕ್ಷೌರವನ್ನೂ, ವ್ಯಾಸಪೂಜೆಯನ್ನೂ ನಡೆಯಿಸಬೇಕು. ಈ ಕರ್ಮಕ್ಕೆ ಉದಯಕಾಲದಲ್ಲಿ ಮೂರುಗಳಿಗೆಗಳ ವ್ಯಾಪ್ತಿಯುಳ್ಳ ಪೂರ್ಣಿಮೆಯನ್ನು ಗ್ರಹಿಸಬೇಕು.

"ಚಾತುರ್ಮಾಸ್ಯಸ್ಯಮಧ್ಯೇತುವಪನಂವರ್ಜಯೇದ್ಯತಿಃ । ಚಾತುರ್ಮಾಸಂದ್ವಿಮಾಸಂವಾಸದೈಕತ್ರೈವಸಂವಸೇತ್ ॥೧॥" ಸಂನ್ಯಾಸಿಯು ಚಾತುರ್ಮಾಸ್ಯಮಧ್ಯದಲ್ಲಿ ವಪನವನ್ನು ಮಾಡಿಸಿಕೊಳ್ಳಕೂಡದು. ಈ ನಾಲ್ಕು ತಿಂಗಳು, ಅಥವಾ ಎರಡು ತಿಂಗಳುಗಳಾದರೂ ಒಂದೇ ಸ್ಥಳದಲ್ಲಿ ವಾಸಮಾಡುತ್ತಿರಬೇಕು ॥೧॥

ಮೊದಲು ಕ್ಷೌರಮಾಡಿಸಿಕೊಂಡು ಹನ್ನೆರಡು ಮೃತ್ತಿಕಾಸ್ನಾನಗಳನ್ನೂ, ಪ್ರಾಣಾಯಾಮವಿಧಿಗಳನ್ನೂ ಮಾಡಿ, ಅನಂತರದಲ್ಲಿ ವ್ಯಾಸಪೂಜೆಯನ್ನು ಮಾಡಬೇಕು. ಸಂಕ್ಷೇಪವಾಗಿ ಅದಕ್ಕೆ ವಿಧಿಯು—ದೇಶಕಾಲಗಳನ್ನು ಹೇಳಿಕೊಂಡು "ಚಾತುರ್ಮಾಸಕ್ಕಾಗಿ ಸಂಕಲ್ಪವನ್ನು ಮಾಡುವುದಕ್ಕೆ ಶ್ರೀಕೃಷ್ಣ,ವ್ಯಾಸ,ಭಾಷ್ಯಕಾರರನ್ನು ಪರಿವಾರದೊಡನೆ ಪೂಜಿಸುವೆನು" ಎಂದು ಸಂಕಲ್ಪಮಾಡಿ ಮಧ್ಯದಲ್ಲಿ ಶ್ರೀ ಕೃಷ್ಣನನ್ನೂ, ಅದಕ್ಕೆ ಪೂರ್ವದಿಕ್ಕಿನಲ್ಲಿ ಪ್ರದಕ್ಷಿಣಾ ಕಾರವಾಗಿ ವಾಸುದೇವ, ಸಂಕರ್ಷಣ, ಅನಿರುದ್ಧ, ಪ್ರದ್ಯುಮ್ನ ಇವರುಗಳನ್ನೂ ಆ ವಾಹನೆಮಾಡಬೇಕು. ಈ ಕೃಷ್ಣಪಂಚಕ (ಐದು ಮಂದಿ) ದಕ್ಷಿಣ ದಿಕ್ಕಿನಲ್ಲಿ ವ್ಯಾಸರನ್ನೂ, ಅದಕ್ಕೆ ಪೂರ್ವದಿಕ್ಕಿನಲ್ಲಿ ಪ್ರದಕ್ಷಿಣಾಕಾರವಾಗಿ, ಸುಮಂತು, ಜೈಮಿನಿ,ವೈಶಂಪಾಯನ, ಪೈಲ, ಈ ವ್ಯಾಸಪಂಚಕವನ್ನೂ ಅವಾಹನೆ ಮಾಡಬೇಕು. ಕೃಷ್ಣಪಂಚಕದ ಎಡಭಾಗದಲ್ಲಿ ಭಾಷ್ಯಕಾರರಾದ ಶಂಕರಾಚಾರ್ಯರನ್ನೂ, ಅದರ ಪೂರ್ವಭಾಗದಲ್ಲಿ ಪ್ರದಕ್ಷಿಣಾಕಾರವಾಗಿ, ಪದ್ಮಪಾದ ವಿಶ್ವರೂಪ, ತ್ರೋಟಕ, ಹಸ್ತಾಮಲಕಾ ಚಾರ್ಯರನ್ನೂ, ಆವಾಹಿಸಬೇಕು. ಕೃಷ್ಣಪಂಚಕದಲ್ಲಿ ಕೃಷ್ಣನ ಉಭಯಪಾರ್ಶ್ವದಲ್ಲಿ ಬ್ರಹ್ಮನನ್ನೂ, ಈಶ್ವರನನ್ನೂ, ಪೂರ್ವ ಮೊದಲಾದ ನಾಲ್ಕುದಿಕ್ಕುಗಳಲ್ಲಿ ಕ್ರಮವಾಗಿ ಸನಕಾದಿಗಳನ್ನೂ, ಕೃಷ್ಣಪಂಚಕದಎದುರಿಗೆ, ಗುರು, ಪರಮಗುರು, ಪರಮೇಷ್ಠಿಗುರುಗಳನ್ನೂ, ಬ್ರಹ್ಮನಿಷ್ಠರಾದ, ಬ್ರಹ್ಮ, ವಸಿಷ್ಠ, ಶಕ್ತಿ, ಪರಾಶರ, ವ್ಯಾಸ, ಶುಕ, ಗೌಡಪಾದ, ಗೋವಿಂದ ಪಾದ, ಶಂಕರಾಚಾರ್ಯರನ್ನೂ, ಆವಾಹನೆ ಮಾಡಬೇಕು. ಈ ಮೂರು ಪಂಚಕಗಳ ಆಗ್ನೇಯದಿಕ್ಕಿನಲ್ಲಿ ಗಣೇಶನನ್ನೂ, ಈಶಾನ್ಯದಲ್ಲಿ ಕ್ಷೇತ್ರಪಾಲನನ್ನೂ ವಾಯುವ್ಯದಲ್ಲಿ ದುರ್ಗೆಯನ್ನೂ, ನೈಋತ್ಯದಲ್ಲಿ ಸರಸ್ವತಿಯನ್ನೂ, ಪೂ

ರ್ವಾದಿಯಾದ ಎಂಟು ದಿಕ್ಕುಗಳಲ್ಲಿಯೂ, ಇಂದ್ರಾದ್ಯಷ್ಟ ದಿಕ್ಪಾಲಕರನ್ನೂ, ಆವಾಹನೆ ಮಾಡಿ ಪೂಜಿಸಬೇಕು. ಶ್ರೀ ಕೃಷ್ಣನನ್ನು ನಾರಾಯಣಾಷ್ಟಾಕ್ಷರದಿಂದಲೂ, ಇತರರನ್ನು ಓಂಕಾರಾದಿಯಾಗಿ ನಮಃ ಶಬ್ದವೇ ಅಂತವಾಗಿ ಉಳ್ಳ (ಓಂನಮಃ) ಆಯಾ ನಾಮಮಂತ್ರಗಳಿಂದಲೂ ಪೂಜಿಸಬೇಕು. ಪೂಜಾನಂತರದಲ್ಲಿ ತೊಂದರೆ ಯಿಲ್ಲದ ಪಕ್ಷದಲ್ಲಿ,''ಈ ಮಳೆಗಾಲದ ನಾಲ್ಕು ತಿಂಗಳು ಇಲ್ಲಿಯೇ ನಾನು ವಾಸಮಾಡುತ್ತೇನೆ, ಎಂದು ಮನಸ್ಸಿನಲ್ಲಿ ಸಂಕಲ್ಪ ಮಾಡಿಕೊಂಡು.

''ಅಹಂತಾವನ್ನಿವತ್ಸ್ಯಾಮಿ ಸರ್ವಭೂತಹಿತಾಯವೈ । ಪ್ರಾಯೇಣ ಪ್ರಾವೃಷಿಪ್ರಾಣಿಸಂಕುಲಂ ವರ್ತ್ಮದೃಶ್ಯತೇ ॥ ೧ ॥ ಅತಸ್ತೇಷಾ ಮಹಿಂಸಾರ್ಥಂ ಪಕ್ಷಾನ್ವೈಶ್ರುತಿ ಸಂಶ್ರಯಾನ್ । ಸ್ಥಾಸ್ಯಾಮಶ್ಚತುರೋ ಮಾಸಾನತ್ರೈವಾ ಸತಿಬಾಧಕೇ॥೨॥'' ಸಕಲಪ್ರಾಣಿಗಳಿಗೂ ಹಿತವನ್ನುಂಟು ಮಾಡುವುದಕ್ಕಾಗಿಯೇ ನಾನಿರುವುದು. ಮಳೆಗಾಲದಲ್ಲಿ ಪ್ರಾಯಶಃ ದಾರಿಯಲ್ಲೆಲ್ಲಾ ಕ್ರಿಮಿಕೀಟಾದಿ ಸಣ್ಣಸಣ್ಣ ಪ್ರಾಣಿಗಳು ತುಂಬಿರುವುವು॥೧॥ ಆದ್ದರಿಂದ ಅವುಗಳಿಗೆ ಬಾಧೆಯುಂಟಾಗದಂತಿರುವುದಕ್ಕಾಗಿ ಸಂಚಾರ ಮಾಡದೆ ಇಲ್ಲಿಯೇ ನಾಲ್ಕು ಪಕ್ಷಗಳ ಕಾಲವಾಗಲಿ, ತೊಂದರೆಯುಂಟಾಗದಿದ್ದರೆ ನಾಲ್ಕು ಮಾಸಗಳ ಕಾಲವಾಗಲಿ ವಾಸಮಾಡುವೆವು॥೨॥ ಎಂದು ಬಾಯಿಯಿಂದ ಹೇಳಿ ಸಂಕಲ್ಪಮಾಡಬೇಕು. ಅನಂತರದಲ್ಲಿ ಗೃಹಸ್ಥರು ಪ್ರತಿ ವಚನವನ್ನು ಹೇಳುವರು ಏನೆಂದರೆ:—

''ನಿವಸಂತುಸುಖೇನಾತ್ರಗಮಿಷ್ಯಾಮಃಕೃತಾರ್ಥತಾಂ । ಯಥಾಶಕ್ತಿ ಚ ಶುಶ್ರೂಷಾಂ ಕರಿಷ್ಯಾಮೋವಯಂಮುದಾ॥೧॥''ಸುಖವಾಗಿ ನೀವು ಇಲ್ಲಿ ವಾಸಮಾಡಿಕೊಂಡಿರಿ,ನಾವು ಕೃತಾರ್ಥರಾಗುವೆವು. ನಾವು ಸಂತೋಷದಿಂದ ನಮ್ಮ ಕೈಯಲ್ಲಾದಮಟ್ಟಿಗೂ ನಿಮ್ಮ ಸೇವೆಯನ್ನು ಮಾಡುವೆವು॥ ಹೀಗೆ ಹೇಳಿದ ಮೇಲೆ, ಗೃಹಸ್ಥರೂ, ಯತಿಗಳೂ ಸಹ, ವೃದ್ಧಾನುಕ್ರಮದಿಂದ (ವಯಸ್ಸಿಗನುಸಾರವಾಗಿ) ಯತಿಗಳಿಗೆ ನಮಸ್ಕರಿಸಬೇಕು. ಈ ಕಾರ್ಯವನ್ನು ಪೌರ್ಣಮಿಯಲ್ಲಿ ಮಾಡುವುದಕ್ಕೆ ಅನುಕೂಲವಾಗದಿದ್ದರೆ ದ್ವಾದಶಿಯಲ್ಲಿ ಮಾಡಬಹುದು.

—ಅಶೂನ್ಯಶಯನ (ದಾಂಪತ್ಯಸುಖಕರ) ವ್ರತವು—

ಆಷಾಢ ಬಹುಳ ದ್ವಿತೀಯೆಯಲ್ಲಿ ಅಶೂನ್ಯಶಯನವ್ರತವು ಲಕ್ಷ್ಮೀ ಸಮೇತನಾದ ವಿಷ್ಣುವನ್ನು ಮಂಚದಲ್ಲಿ ಪೂಜಿಸಿ "ಪತ್ನೀಭರ್ತೃವಿಯೋಗಂಚ ಭರ್ತಾಭಾರ್ಯಾಸಮುದ್ಭವಂ। ನಾಪ್ನುವಂತಿಯಥಾದುಃಖಂ ದಾಂಪತ್ಯಾನಿತಥಾಕುರು॥೧॥"ದಂಪತಿಗಳು ಒಬ್ಬರನ್ನೊಬ್ಬರು ಅಗಲದಿರುವಂತೆಯೂ,ಒಬ್ಬರಿಗೊಬ್ಬರಿಗೆ ಮನಸ್ತಾಪಗಳಿಂದ ದು:ಖವುಂಟಾಗದಂತೆಯೂ ಇರುವ ಸ್ಥಿರಪ್ರೇಮವುಳ್ಳದಾಂಪತ್ಯವನ್ನು ಕೊಡುವವನಾಗು ॥೧॥ ಇದೇ ಮೊದಲಾದ ದಾಂಪತ್ಯಕ್ಕೆ ಭಂಗಬಾರದಿರುವಂತೆ ಕೇಳಿಕೊಳ್ಳುವ ಮಂತ್ರಗಳಿಂದ ಪ್ರಾರ್ಥಿಸಬೇಕು. ಅನಂತರದಲ್ಲಿ ಚಂದ್ರನಿಗೆ ಅರ್ಘ್ಯವನ್ನು ಕೊಟ್ಟು ನಕ್ತಭೋಜನವನ್ನು ಮಾಡಬೇಕು. ಹೀಗೆ ನಾಲ್ಕು ತಿಂಗಳಲ್ಲಿಯೂ ಬಹುಳ ಬಿದಿಗೆಯಲ್ಲಿ ಪೂಜಿಸಿ ಸಪತ್ನೀಕನಾದ ಬ್ರಾಹ್ಮಣನಿಗೆ ಶಯ್ಯಾದಾನವನ್ನು ಮಾಡಿ, ಆ ಪ್ರತಿಮೆಯನ್ನು ಸಕಲ ಸಾಮಗ್ರಿಯೊಡನೆ ದಾನ ಮಾಡಬೇಕು. ಈ ವ್ರತಪ್ರಭಾವದಿಂದ ಏಳು ಜನ್ಮಗಳಲ್ಲಿ ಶಾಶ್ವತವಾದ ದಾಂಪತ್ಯಾನುಕೂಲವೂ ಪುತ್ರ, ಧನ, ಮೊದಲಾದುವುಗಳ,ಗೃಹಸ್ಥಾಶ್ರಮದ ವಿಯೋಗವುಂಟಾಗುವುದಿಲ್ಲ. ಚಂದ್ರೋದಯಕಾಲದಲ್ಲಿಯೇ ಪೂಜೆ ಮೊದಲಾದವನ್ನು ಮಾಡಬೇಕೆಂದು ಹೇಳಿರುವ ಕಾರಣ ಈವ್ರತಕ್ಕೆ ಚಂದ್ರೋದಯವ್ಯಾಪ್ತಿಯುಳ್ಳ ತಿಥಿಯನ್ನು ಗ್ರಹಿಸಬೇಕು. ಎರಡುದಿನಗಳಗೂ ಚಂದ್ರೋದಯವ್ಯಾಪ್ತಿ ಇದ್ದರೂ ಅಥವಾ ಇಲ್ಲದಿದ್ದರೂ ಎರಡನೆಯ ತಿಥಿಯನ್ನೇ ಗ್ರಹಿಸಬೇಕು ಇಂತು ಆಷಾಢಮಾಸ ನಿರ್ಣಯವು ॥೪॥

(೫) —ಶ್ರಾವಣಮಾಸ ನಿರ್ಣಯವು—

(೫) ಶ್ರಾವಣಮಾಸನಿರ್ಣಯವು— ಸಿಂಹ ಸಂಕ್ರಮಣದಲ್ಲಿ ಸಂಕ್ರಮಣಾನಂತರ ಹದಿನಾರುಗಳಿಗೆಗಳು ಪುಣ್ಯಕಾಲವು. ರಾತ್ರಿಯಲ್ಲಿ ಸಂಕ್ರಮಣವಾದರೆ ಪೂರ್ವದಲ್ಲಿ ಹೇಳಿರುವಂತೆಯೇ ಪುಣ್ಯಕಾಲವು. ಈ ಮಾಸದಲ್ಲಿ ನಕ್ತವನ್ನೂ, ಏಕಭಕ್ತವನ್ನೂ ಮಾಡಬೇಕು. ವಿಷ್ಣು ಈಶ್ವರ ಮೊದಲಾದ ದೇವತೆಗಳಿಗೆ ಅಭಿಷೇಕಮಾಡಬೇಕು. ಸೂರ್ಯನು ಸಿಂಹರಾಶಿಯಲ್ಲಿರುವ ಕಾಲದಲ್ಲಿ ಯಾರ ಹಸುವು ಈಯ್ಯುವುದೋ ಅವನು ತುಷ್ಟದಲ್ಲಿ

ನೆನಸಿದ ಸಾಸುವೆಗಳಿಂದ ಹತ್ತು ಸಾವಿರ ಹೋಮಗಳನ್ನು ವ್ಯಾಹೃತಿ ಮಂತ್ರಗಳಿಂದ ಮಾಡಿ ಆ ಹಸುವನ್ನು ದಾನಮಾಡಬೇಕು. ಹೀಗೆ ಅರ್ಧರಾತ್ರಿಯಲ್ಲಿ ಹಸುವು ಅಳುವಂತೆ ಕೂಗಿಕೊಂಡರೂ, ಮೃತ್ಯುಂಜಯ ಮಂತ್ರಗಳಿಂದ ಹೋಮಮಾಡಿ ಶಾಂತಿಯನ್ನು ಮಾಡಿಕೊಳ್ಳಬೇಕು. ಶ್ರಾವಣಮಾಸದಲ್ಲಿ ಹಗಲು ಕುದುರೆಯು ಮರಿಯನ್ನು ಹಾಕುವುದೂ ತಕ್ಕದ್ದಲ್ಲ. "ಮಾಘೇಬುಧೇಚಮಹಿಷೀ ಶ್ರಾವಣೇಬಡಬಾ ದಿವಾ । ಸಿಂಹೇಗಾವಃ ಪ್ರಸೂಯಂತೆ ಸ್ವಾಮಿನೋಮೃತ್ಯು ದಾಯಕಾಃ ॥೧॥" ಮಾಘಮಾಸ ಬುಧವಾರದಲ್ಲಿ ಎಮ್ಮೆಯು,ಶ್ರಾವಣದಲ್ಲಿ ಹಗಲುಕದುರೆಯೂ, ಸಿಂಹ ಸಂಕ್ರಮಣದಲ್ಲಿ ಹಸುವೂ ಈದರೆ ಯಜಮಾನನಿಗೆ ಹಾನಿಕರವು ॥೧॥ ಎಂದು ಹೇಳಿರುವುದರಿಂದ ಇದಕ್ಕೂ ಶಾಂತಿಯುಂಟು.ಅದರ ವಿಧಿಯನ್ನು ಶಾಂತಿ ಗಂಥಗಳಿಂದ ತಿಳಿಯಬೇಕು."ಸೋಮವಾರವ್ರತಂಕಾರ್ಯಂ ಶ್ರಾವಣೇವೈ ಯಥಾವಿಧಿ।ಶಕ್ತೇನೋಪೋಷಣಂ ಕಾರ್ಯಮಥವಾ ನಿಶಿಭೋಜನಂ॥೧॥" ಶ್ರಾವಣ ಸೋಮವಾರದಲ್ಲಿ ವಿಧಿಪ್ರಕಾರವಾಗಿ ವ್ರತವನ್ನು ಮಾಡಬೇಕು. ಶಕ್ತಿಇದ್ದವರು ಉಪವಾಸಮಾಡಬೇಕು ಇಲ್ಲದವರು ನಕ್ತಭೋಜನವನ್ನು ಮಾಡಬಹುದು ॥೧॥ ಹೀಗೆಯೇ.ಶ್ರಾವಣಮಂಗಳವಾರದಲ್ಲಿ ಗೌರೀ ಪೂಜೆಯನ್ನೂ ಮಾಡಬೇಕು. ಶ್ರಾವಣ ಶುದ್ಧ ಚತುರ್ಥಿಯು ತೃತೀಯಾ ವೇಧೆಯುಳ್ಳದ್ದಾಗಿಯೂ, ಮಧ್ಯಾಹ್ನವ್ಯಾಪ್ತಿಯುಳ್ಳದ್ದಾಗಿಯೂ ಇರಬೇಕು. ಶುದ್ಧ ಪಂಚಮಿಯು ನಾಗಪಂಚಮಿ ಎಂಬ ಹೆಸರುಳ್ಳದ್ದು. ಸೂರ್ಯೋದಯ ಕಾಲದಲ್ಲಿ ಮೂರುಮುಹೂರ್ತ ವ್ಯಾಪ್ತಿಯುಳ್ಳದ್ದಾಗಿಯೂ, ಷಷ್ಠಿಯವೇಧೆಯುಳ್ಳದ್ದಾಗಿಯೂ ಇರುವ ತಿಥಿಯನ್ನು ಗ್ರಹಿಸಬೇಕು. ಎರಡನೆಯ ದಿನದಲ್ಲಿ ಮೂರುಮುಹೂರ್ತಗಳಿಗಿಂತ ಕಡಿಮೆಯಾಗಿಯೂ, ಮೊದಲದಿನದಲ್ಲಿ ಮೂರುಮುಹೂರ್ತಕ್ಕಿಂತ ಕಡಿಮೆಯಾದ ಚತುರ್ಥಿಯಿಂದ ವೇಧೆಯುಳ್ಳದ್ದಾಗಿಯೂ ಪಂಚಮಿ ಇದ್ದರೆ ಮೊದಲನೆಯದನ್ನೇ ಗ್ರಹಿಸಬೇಕು. ಮೂರುಮುಹೂರ್ತಕ್ಕಿಂತ ಹೆಚ್ಚಾದ ಚತುರ್ಥಿಯ ವೇಧೆಯುಳ್ಳ ಪಂಚಮೀತಿಥಿಯು ಎರಡು ಮುಹೂರ್ತಗಳ ಕಾಲವಿದ್ದಾಗ್ಯೂ ಎರಡನೆಯದನ್ನೇ ಗ್ರಹಿಸಬೇಕು. ಒಂದೇ ಮುಹೂರ್ತಕಾಲಮಾತ್ರವೇ ಪಂಚಮಿಯು ಇರುವುದಾಗಿದ್ದರೆ ಅಂಥದನ್ನು ಗ್ರಹಿಸಕೂಡದೆಂದು ತೋರುತ್ತದೆ. ಈ ದಿನದಲ್ಲಿ

ಅವರವರ ವೃದ್ಧಾಚಾರಾನುಸಾರವಾಗಿ ಗೋಡೆಯಮೇಲೆ ಬರೆದಿರುವ ಅಥವಾ ಮಣ್ಣಿನಿಂದ ಮಾಡಿದ ಸರ್ಪಗಳನ್ನು ಪೂಜಿಸಬೇಕು. ಶ್ರಾವಣಶುದ್ಧ ದ್ವಾದಶಿಯಲ್ಲಿ ಒಂದುತಿಂಗಳಿಂದಮಾಡಿದ ಶಾಕವ್ರತವು ಸಾಂಗವಾಗುವದಕ್ಕಾಗಿ ಬ್ರಾಹ್ಮಣನಿಗೆ ಶಾಕದಾನವನ್ನು ಮಾಡುತ್ತೇನೆಂದು ಸಂಕಲ್ಪಮಾಡಿ ಬ್ರಾಹ್ಮಣ ಪೂಜೆಯನ್ನುಮಾಡಿ 'ಉಪಾಯನಮಿದಂದೇವ ವ್ರತಸಂಪೂರ್ಣಹೇತವೇ। ಶಾಕಂತುದ್ವಿಜವರ್ಯಾಯ ಸಹಿರಣ್ಯಂದದಾಮ್ಯಹಂ ॥೧॥' ಎಲೈ ಸ್ವಾಮಿಯೆ! ನಾನು ಮಾಡಿರುವ ಶಾಕವ್ರತವು ಸಂಪೂರ್ಣವಾಗುವುದಕ್ಕಾಗಿ ದಕ್ಷಿಣೆಯೊಡನೆ ಬ್ರಾಹ್ಮಣನಿಗೆ ಈ ಶಾಕವನ್ನು ದಾನಮಾಡುತ್ತೇನೆ॥೧॥ ಎಂಬ ಮಂತ್ರದಿಂದ ಬೇಯಿಸಿದ ಅಥವಾ ಹಸಿಯಾದ ಕಾಯಿಪಲ್ಯಗಳನ್ನು ದಾನಮಾಡಬೇಕು. ಅನಂತರದಲ್ಲಿ 'ದಧಿಭಾದ್ರಪದೇಮಾಸೇ ವರ್ಜಯಿಷ್ಯೇ ಸದಾಹರೇ॥' ಎಲೈ ಮಹಾವಿಷ್ಣುವೇ! ಭಾದ್ರಪದಮಾಸದಲ್ಲೆಲ್ಲಾ ನಾನು ಮೊಸರನ್ನು ಬಿಡುವೆನು ಎಂದು ದಧಿವ್ರತಕ್ಕೆ ಸಂಕಲ್ಪಮಾಡಬೇಕು. ಇಲ್ಲಿ ಮೊಸರನ್ನು ಮಾತ್ರ ಬಿಡಬೇಕಲ್ಲದೆ ಮಜ್ಜಿಗೆ ಮೊದಲಾದುವುಗಳನ್ನು ಬಿಡಬೇಕಾದದ್ದಿಲ್ಲ. ಪಾರಣೆಯದಿನದ್ವಾದಶಿಯಲ್ಲಿ ವಿಷ್ಣುವಿಗೆ ಪವಿತ್ರಾರೋಪಣವು ನಡೆಯಬೇಕು.

—ಪವಿತ್ರಾರೋಪಣವು—

ಪಾರಣೆಯ ದಿನದಲ್ಲಿ ದ್ವಾದಶಿಯು ಇಲ್ಲದಿದ್ದರೆ ತ್ರಯೋದಶಿಯ ಪಾರಣೆಯ ದಿನದಲ್ಲಿಯೂ, ಆಗಲೂ ನಡೆಯದಿದ್ದರೆ, ಶ್ರವಣನಕ್ಷತ್ರದಲ್ಲಿ ಪೂರ್ಣಿಮೆಯಲ್ಲಾದರೂ ನಡೆಯಿಸಬೇಕು. ಈಶ್ವರನಿಗೆ ಚತುರ್ದಶಿ, ಅಷ್ಟಮಿ, ಪೌರ್ಣಮಾಸ್ಯೆ ಇವುಗಳೊಂದರಲ್ಲಿ ಪವಿತ್ರಾರೋಪಣವನ್ನು ಮಾಡಬೇಕು. ಹೀಗೆಯೇ ತಮ್ಮ ತಮ್ಮ ಮನೆತನದ ಪದ್ಧತಿಯ ಪ್ರಕಾರವಾಗಿ, ದೇವಿ, ಗಣೇಶ, ದುರ್ಗಾದಿಗಳಿಗೆ, ಚತುರ್ದಶಿ, ಚತುರ್ಥಿ, ತೃತೀಯೆ, ನವಮಿ ಮೊದಲಾದ ತಿಥಿಗಳಲ್ಲಿ ಪವಿತ್ರಾರೋಪಣವು. ಆಯಾತಿಥಿಗಳಲ್ಲಿ ಮಾಡುವುದಕ್ಕವಕಾಶವಿಲ್ಲದಿದ್ದರೆ ಎಲ್ಲಾದೇವತೆಗಳಿಗೂ ಶ್ರಾವಣಪೌರ್ಣಮಿಯಲ್ಲಿ ಮಾಡಬಹುದು. ಆಗಲೂ ನಡೆಯದಿದ್ದರೆ ಕಾರ್ತಿಕಪೌರ್ಣಮಿಯವರಿಗೂ ಗೌಣಕಾಲವು (ಮುಖ್ಯಕಾಲವಲ್ಲದ ಸಾಮಾನ್ಯಕಾಲ) ಉಂಟು, 'ಅಕುರ್ವಾಣೋವ್ರಜತ್ಯಧಃ' ತಸ್ಯಸಾಂವತ್ಸರೀಪೂ

ಜಾನಿಷ್ಫಲಾ, 'ಮಾಡದಿರುವವನು ನರಕಭಾಜನನಾಗುತ್ತಾನೆ' 'ಅವನು ಸಂವತ್ಸರದಿಂದ ಮಾಡಿದ ದೇವತಾ ಪೂಜೆಯೆಲ್ಲವೂ ವ್ಯರ್ಥವಾಗಿ ಹೋಗುವುದು' ಎಂದು ವಚನವಿರುವುದರಿಂದ ಇದು ನಿತ್ಯವ್ರತವಾಗಿರುವುದು. ಗೌಣಕಾಲದಲ್ಲಿಯೂ ಮಾಡದಿದ್ದರೆ 'ತದಾಯುತಂಜಪೇನ್ಮಂತ್ರಂ ಸ್ತೋತ್ರಂವಾಪಿಸಮಾಹಿತಃ' ಆಯಾದೇವತೆಯ ಮಂತ್ರವನ್ನಾಗಲಿ, ಸ್ತೋತ್ರವನ್ನಾಗಲಿ, ಭಕ್ತಿಯಿಂದ ಅಯುತಸಂಖ್ಯೆಯುಳ್ಳ ಜಪವನ್ನು ಮಾಡುವುದೇ ಪ್ರಾಯಶ್ಚಿತ್ತವು. ಸಂಕ್ಷೇಪವಾಗಿ ಪವಿತ್ರಾರೋಪಣ ಪ್ರಯೋಗವು:-ದಾರದ ಎಳೆಯನ್ನು ಒಂಭತ್ತು ಎಳೆಯುಳ್ಳದ್ದನ್ನಾಗಿ ಮಾಡಿ, ಈ ಒಂಭತ್ತು ಎಳೆಯ ದಾರಗಳು ನೂರೆಂಟನ್ನು ತೆಗೆದುಕೊಂಡು ಇಪ್ಪತ್ತು ನಾಲ್ಕು ಗಂಟುಗಳನ್ನು ಹಾಕಿ ದೇವರಮೊಣಕಾಲವರೆಗೂ ಬರುವಷ್ಟು ಉದ್ದವಾಗಿರುವ ಹಾಗೆ ಉತ್ತಮ ಪವಿತ್ರವನ್ನೂ, ಒಂಭತ್ತೆಳೆಯ ಐವತ್ತು ನಾಲ್ಕು ದಾರಗಳಿಗೆ ಹನ್ನೆರಡು ಗಂಟುಗಳನ್ನು ಹಾಕಿ ದೇವರತೊಡೆಯವರಿಗೂ ಬರುವಂತೆ ಮಧ್ಯಮ ಪವಿತ್ರವನ್ನೂ, ಒಂಭತ್ತೆಳೆಯ ಇಪ್ಪತ್ತೇಳು ದಾರಗಳಿಗೆ ಎಂಟು ಗಂಟುಗಳನ್ನು ಹಾಕಿ ದೇವರನಾಭಿಯವರಿಗೂ ಬರುವಂತೆ ಕನಿಷ್ಠ ಪವಿತ್ರವನ್ನೂ, ಮಾಡಬೇಕು. ನೂರಿಪ್ಪತ್ತಾಗಲಿ, ಎಪ್ಪತ್ತಾಗಲಿ, ಒಂಭತ್ತೆಳೆಯ ದಾರಗಳನ್ನು ತೆಗೆದುಕೊಂಡು ೧೦೮ ಅಥವಾ ೨೪ ಗಂಟುಗಳನ್ನು ಹಾಕಿ ದೇವರ ಪಾದದವರಿಗೂ ಇರುವಂತೆ ವನಮಾಲಿಕೆಯನ್ನು ಮಾಡಿ, ೧೨ ಒಂಭತ್ತೆಳೆಯ ದಾರಗಳಿಂದ ೧೨ ಗಂಟುಗಳುಳ್ಳ ಗಂಧಪವಿತ್ರವನ್ನೂ, ೨೭ ಒಂಭತ್ತೆಳೆಯ ದಾರಗಳಿಂದ ಗುರುಪವಿತ್ರವನ್ನೂ, ೪ ಒಂಭತ್ತೆಳೆಯ ದಾರಗಳಿಂದ ಅಂಗದೇವತಾಪವಿತ್ರಗಳನ್ನೂ ಮಾಡಬೇಕು. ಲಿಂಗದ ವಿಸ್ತಾರಕ್ಕೆ ತಕ್ಕಂತೆ ಶಿವಪವಿತ್ರಗಳನ್ನು ಮಾಡಬೇಕು,

ಎಲ್ಲಾ ಪವಿತ್ರಗಳನ್ನೂ ಪಂಚಗವ್ಯದಿಂದ ಪ್ರೋಕ್ಷಿಸಿ, ಪ್ರಣವ ಮಂತ್ರದಿಂದ ತೊಳೆದು, ಆಯಾ ದೇವತಾಕವಾದ ಮೂಲಮಂತ್ರಗಳಿಂದ ನೂರೆಂಟು ಸಾರಿ ಅಭಿಮಂತ್ರಿಸಿ, ಗ್ರಂಥಿಗಳನ್ನು ಕುಂಕುಮದಿಂದ ಸವರಿ, ಪವಿತ್ರಗಳೆಲ್ಲವನ್ನೂ ಬಿದಿರು ಪಾತ್ರೆಯಲ್ಲಿಟ್ಟು, ಬಟ್ಟೆಯಿಂದ ಮುಚ್ಚಿ, ದೇವರ ಸಮೀಪದಲ್ಲಿಟ್ಟು "ಕ್ರಿಯಾಲೋಪವಿಧಾನಾರ್ಥಂ ಯತ್ತ್ವಯಾವಿಹಿ

ತಂ ಪ್ರಭೋ । ಮಯ್ಯೈತತ್ಕ್ರಿಯತೇ ದೇವತವತುಷ್ಟ್ಯೈಪವಿತ್ರಕಂ ॥೧॥ ನಮೇವಿಘ್ನೋಭವೇದ್ದೇವ ಕುರುನಾಥದಯಾಂಮಯಿ।ಸರ್ವಥಾ ಸರ್ವದಾ ವಿಷ್ಣೋಮಮತ್ವಂ ಪರಮಾಗತಿಃ ॥೨॥'' ಕರ್ಮಲೋಪವುಂಟಾದ್ದಕ್ಕೆ ನೀನು ಹೇಳಿರುವ ಪ್ರತೀಕಾರವನ್ನು ಮಾಡುವುದಕ್ಕೆ, ಎಲೈ ಸ್ವಾಮಿಯೇ! ನಿನ್ನ ತೃಪ್ತಿಗಾಗಿ ಈಪವಿತ್ರವನ್ನು ಮಾಡುತ್ತೇನೆ ॥೧॥ ಎಲೈ ಪರಮಾತ್ಮನೇ ! ನಾನು ಮಾಡುವಕಾರ್ಯಗಳಿಗೆ ವಿಘ್ನವುಂಟಾಗದ ಹಾಗೆ ನನ್ನಲ್ಲಿ ಕೃಪೆ ಮಾಡು. ಸರ್ವದಾ ನೀನೇ ನನಗೆ ದಿಕ್ಕಲ್ಲದೆಬೇರೊಬ್ಬರೂ ಇಲ್ಲ॥ ಎಂದು ಪ್ರಾರ್ಥನೆಮಾಡಿ ಅಧಿವಾಸ ಮಾಡಿಸಬೇಕು. ಇದಕ್ಕಾಗಿ, 'ಸಂವತ್ಸರದಿಂದಲೂ ನಾನು ಮಾಡಿರುವ ಪೂಜೆಯಫಲವು ಲಭ್ಯವಾಗುವುದಕ್ಕೂ, ಆಯಾದೇವತೆಗಳ ಪ್ರೀತ್ಯರ್ಥವಾಗಿಯೂ, ಅಧಿವಾಸವಿಧಿಪೂರ್ವಕವಾಗಿ ಪವಿತ್ರಾರೋಪಣವನ್ನು ಮಾಡುತ್ತೇನೆ, ಎಂದು ಸಂಕಲ್ಪಮಾಡಿ ದೇವರೆದುರಾಗಿ ಸರ್ವತೋಭದ್ರಮಂಡಲದಮೇಲೆ ಜಲಪೂರಿತವಾದ ಕುಂಭವನ್ನು ಇಟ್ಟು,ಅದರಮೇಲೆ ಆ ಬಿದಿರಪಾತ್ರೆಯನ್ನೂ,ಅದರಲ್ಲಿ ಪವಿತ್ರಗಳನ್ನೂ ಇಟ್ಟು, ಅವುಗಳಲ್ಲಿ "ಸಂವತ್ಸರಸ್ಯಯಾಗಸ್ಯ ಪವಿತ್ರೀಕರಣಾಯಭೋಃ।ವಿಷ್ಣು ಲೋಕಾತ್ಪವಿತ್ರಾದ್ಯಆಗಚ್ಛೇಹನಮೋಸ್ತುತೇ॥ ॥''ಎಲೈ ಪವಿತ್ರವೇ!ನಾನುಸಂವತ್ಸರದಲ್ಲಿ ಮಾಡಿದ ಯಾಗದ(ಪೂಜೆ ಮು)ಸಂಪೂರ್ತಿಗಾಗಿ ನೀನು ವಿಷ್ಣುಲೋಕದಿಂದ ಇಲ್ಲಿಗೆ ಈಗಬರುವವನಾಗು, ನಿನಗೆ ನಮಸ್ಕಾರವು॥೧॥ ಈ ಮಂತ್ರದಿಂದಲೂ, ಮೂಲ ಮಂತ್ರದಿಂದಲೂ ಆವಾಹನೆಮಾಡಬೇಕು. ಮೂರು ದಾರಗಳ ಪವಿತ್ರದಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರರನ್ನೂ, ಒಂಭತ್ತುದಾರಗಳ ಪವಿತ್ರದಲ್ಲಿ, ಓಂಕಾರ. ಚಂದ್ರ, ಅಗ್ನಿ, ಬ್ರಹ್ಮ, ನಾಗ, ಈಶ್ವರ, ಸೂರ್ಯ, ವಿಷ್ಣು, ವಿಶ್ವೇದೇವರುಗಳನ್ನೂ, ಉತ್ತಮ, ಮಧ್ಯಮ, ಕನಿಷ್ಠ ಪವಿತ್ರಗಳಲ್ಲಿ ಬ್ರಹ್ಮ, ವಿಷ್ಣು, ರುದ್ರರನ್ನೂ, ಸತ್ವ, ರಜಸ್ತಮೋಗುಣಗಳನ್ನೂ, ವನಮಾಲೆಯಲ್ಲಿ ಪ್ರಕೃತಿಯನ್ನೂ ಆವಾಹನಮಾಡಬೇಕು.ಮೂಲಮಂತ್ರದಿಂದ, "ಶ್ರೀಪವಿತ್ರಾದ್ಯಾವಾಹಿತ ದೇವತಾಭ್ಯೋನಮಃ, ಎಂಬದಾಗಿ ಹೇಳಿ,ಗಂಧಾದ್ಯುಪಚಾರಗಳಿಂದ ಪೂಜಿಸಬೇಕು. ಅನಂತರದಲ್ಲಿ ಮೊದಲುಮಾಡಿಟ್ಟದ್ದ ೧೨ ಅಂಗುಲ ಉದ್ದವುಳ್ಳದ್ದಾಗಿಯೂ, ೧೨ ಗಂಟುಗಳುಳ್ಳದ್ದಾಗಿಯೂ ಇರುವ ಗಂಧಪವಿತ್ರ

ವನ್ನು ತೆಗೆದುಕೊಂಡು "ವಿಷ್ಣು ತೇಜೋದ್ಭವಂರಮ್ಯಂ ಸರ್ವಪಾತಕನಾಶನಂ । ಸರ್ವಕಾಮಪ್ರದಂ ದೇವತಾವಾಙ್ಗೇಧಾರಯಾಮ್ಯಹಂ॥೧॥" ವಿಷ್ಣು ತೇಜಸ್ಸಿನಿಂದ ಹುಟ್ಟಿದ್ದಾಗಿಯೂ, ಮನೋಹರವಾಗಿಯೂ, ಸಕಲಪಾಪಗಳನ್ನೂ ಪರಿಹಾರಮಾಡತಕ್ಕದ್ದಾಗಿಯೂ, ಇಷ್ಟಾರ್ಥಸಿದ್ಧಿಯನ್ನುಂಟುಮಾಡುವುದಾಗಿಯೂ ಇರುವ ಈ ಪವಿತ್ರವನ್ನು ನಿನ್ನ ದೇಹದಲ್ಲಿ ಧಾರಣೆಮಾಡಿಸುವೆನು ॥೧॥ ಈ ಮಂತ್ರದಿಂದಲೂ, ಮೂಲಮಂತ್ರದಿಂದಲೂ ದೇವರ ಪಾದಗಳಲ್ಲಿ ಸಮರ್ಪಿಸಬೇಕು. ದೇವರ ಕೈಗೆ ಕಟ್ಟಬೇಕೆಂದು ಕೆಲವರು ಹೇಳುತ್ತಾರೆ ಅನಂತರದಲ್ಲಿ ಪಂಚೋಪಚಾರಗಳಿಂದ ದೇವರನ್ನು ಪೂಜಿಸಿ ಪ್ರಾರ್ಥಿಸಬೇಕು. "ಆಮಂತ್ರಿತೋಸಿದೇವೇಶ ಪುರಾಣ ಪುರುಷೋತ್ತಮ । ಪ್ರಾತಸ್ತ್ವಾಂ ಪೂಜಯಿಷ್ಯಾಮಿ ಸಾನ್ನಿಧ್ಯಂ ಕುರುಕೇಶವ ॥ ಕ್ಷೀರೋದಧಿಮಹಾನಾಗಶಯ್ಯಾವಸ್ಥಿತವಿಗ್ರಹ । ಪ್ರಾತಸ್ತ್ವಾಂಪೂಜಯಿಷ್ಯಾಮಿ ಸನ್ನಿಧೌಭವತೇನಮಃ॥೨॥" ಆದಿಪುರುಷನಾಗಿಯೂ ದೇವೋತ್ತಮನಾಗಿಯೂ ಇರುವಕೇಶವನೇ ! ನಾನು ನಿನ್ನನ್ನು ಬರಬೇಕೆಂದು ಪ್ರಾರ್ಥಿಸಿಕೊಂಡಿದ್ದೇನೆ. ಬೆಳಗ್ಗೆ ನಿನ್ನನ್ನು ಪೂಜೆಮಾಡುತ್ತೇನೆ. ಇಲ್ಲಿ ಬಂದು ನೆಲಸುವವನಾಗು ॥೧॥ ಕ್ಷೀರಸಮುದ್ರದಲ್ಲಿ ಶೇಷಶಾಯಿಯಾಗಿರುವ ಪರಮಾತ್ಮನೇ ! ನಿನ್ನನ್ನು ಪ್ರಾತಃಕಾಲದಲ್ಲಿ ನಾನು ಪೂಜಿಸುವೆನು. ಅದಕ್ಕಾಗಿ ನನ್ನ ಸಮೀಪದಲ್ಲಿ ಇರುವವನಾಗು. ನಿನಗೆ ನಮಸ್ಕರಿಸುವೆನು ॥ ಎಂದು ಹೇಳಿ ಸಾಷ್ಟಾಂಗ ನಮಸ್ಕಾರಮಾಡಿ ಪುಷ್ಪಾಂಜಲಿಯನ್ನು ಸಮರ್ಪಿಸಬೇಕು. ಇಂತು ಅಧಿವಾಸನವು. ಇಲ್ಲಿ ಎಲ್ಲಾ ಸಂದರ್ಭಗಳಲ್ಲಿಯೂ, ಗುರುವಿನಿಂದುಪದೇಶವಾಗಿರುವ, ಅಥವಾ ತಾಂತ್ರಿಕ (ಕಲ್ಪಿತ) ವಾದ, ಇಲ್ಲವೇ, ವೇದದಲ್ಲಿ ಹೇಳಿರುವ, ಇಲ್ಲದಿದ್ದರೆ ದೇವಗಾಯತ್ರೀ ರೂಪವಾದ, ಮೂಲಮಂತ್ರವನ್ನು ಉಪಯೋಗಿಸಿಕೊಳ್ಳಬಹುದು. ರಾತ್ರಿಯಲ್ಲಿ ಸತ್ಕಥೆಗಳನ್ನು ಕೇಳುತ್ತಾ ಎಚ್ಚರದಿಂದಿದ್ದು ಬೆಳಗ್ಗೆ, ತತ್ಕಾಲದಲ್ಲಿ ಅಧಿವಾಸನಮಾಡಿಸುವುದಾಗಿದ್ದರೆ ಹಸುವನ್ನು ಕರೆಯುವಷ್ಟು ಕಾಲದ ಮೇಲೆ-'ಪವಿತ್ರಾರೋಪಣಾಂಗವಾಗಿ ದೇವರಪೂಜೆಯನ್ನೂ, ಪವಿತ್ರಪೂಜೆಯನ್ನೂ ಮಾಡುವೆನು' ಎಂದು ಸಂಕಲ್ಪಮಾಡಿ ದೇವರನ್ನೂ, ಪವಿತ್ರವನ್ನೂ, ಗಂಧ ಮೊದಲು, ಫಲ ನೈವೇದ್ಯದವರಿಗೆ ಉಪಚಾರಗಳಿಂದ

ಪೂಜಿಸಿ,ಗಂಧ, ದೂರ್ವೆ, ಅಕ್ಷತೆ ಇವುಗಳೊಡನೆ ಕನಿಷ್ಠ ಪವಿತ್ರವನ್ನು ತೆಗೆದುಕೊಂಡು, "ದೇವದೇವನಮಸ್ತುಭ್ಯಂ ಗೃಹಾಣೇದಂಪವಿತ್ರಕಂ । ಪವಿತ್ರೀಕರಣಾರ್ಥಾಯ ವರ್ಷಪೂಜಾಫಲಪ್ರದಂ ॥ ೧ ॥ ಪವಿತ್ರಕಂಕುರುಷ್ವಾದ್ಯಯನ್ಮಯಾದುಷ್ಕೃತಂಕೃತಂ । ಶುದ್ಧೋಭವಾಮ್ಯಹಂ ದೇವತ್ವತ್ಪ್ರಸಾದಾತ್ಸುರೇಶ್ವರ ॥೨॥" ಎಲೈ ದೇವೋತ್ತಮನಾದ ಭಗವಂತನೆ ! ನಿನ್ನನ್ನು ವಂದಿಸುವೆನು. ಸಂವತ್ಸರದಿಂದಲೂ ನಾನು ಮಾಡಿದ ಪೂಜೆಯು ಸಂಪೂರ್ಣವಾಗುವುದಕ್ಕೂ, ಅದರಿಂದ ಸತ್ಫಲವನ್ನುಂಟುಮಾಡುವುದಕ್ಕೂ ಸಹ ಈ ಪವಿತ್ರವನ್ನು ನೀನು ಸ್ವೀಕರಿಸುವವನಾಗು ॥ ೧ ॥ ದೇವಶ್ರೇಷ್ಠನಾದ ಪರಮಾತ್ಮನೆ ! ನಾನು ಮಾಡಿದ ಪಾಪವೆಲ್ಲವನ್ನೂ ಹೋಗಲಾಡಿಸು. ನಿನ್ನ ಅನುಗ್ರಹದಿಂದ ಪರಿಶುದ್ಧನಾಗುತ್ತೇನೆ ॥ ೨ ॥ ಈ ಮಂತ್ರವನ್ನು ಮೂಲಮಂತ್ರದೊಡನೆ ಹೇಳಿ ಸಮರ್ಪಿಸುವುದು. ಮಧ್ಯಮ, ಉತ್ತಮ ಪವಿತ್ರಗಳನ್ನೂ, ವನಮಾಲೆಯನ್ನೂ ಸಹ ಇದೇ ಮೇರಿಗೆ ಮಂತ್ರಗಳನ್ನು ಹೇಳಿ ಕೊಡಬೇಕು. ಅಂಗದೇವತೆಗಳಿಗೂ ನಾಮಮಂತ್ರಗಳಿಂದ ಸಮರ್ಪಣೆಮಾಡಿ ಮಹಾನೈವೇದ್ಯವನ್ನೂ, ಉತ್ತರ ನೀರಾಜನಗಳನ್ನೂ ಮಾಡಿ, "ಮಣಿವಿದ್ರುಮಮಾಲಾಭಿರ್ಮಂದಾರಕುಸುಮಾದಿಭಿಃ । ಇಯಂಸಾಂವತ್ಸರೀ ಪೂಜಾತವಾಸ್ತುಗರುಡಧ್ವಜ ॥೧॥ ವನಮಾಲಾಂ ಯಥಾದೇವಕೌಸ್ತುಭಂಸತತಂಹೃದಿ । ತದ್ವತ್ಪವಿತ್ರತಂತೂಂಸ್ತ್ವಂಪೂಜಾಂಚಹೃದಯೇವಹ ॥ ೨ ॥ ಜಾನತಾಜಾನತಾವಾಪಿ ಯತ್ಕೃತಂನತವಾರ್ಚನಂ । ಕೇನಚಿದ್ವಿಘ್ನದೋಷೇಣ ಪರಿಪೂರ್ಣಂತದಸ್ತುಮೇ ॥ ೩ ॥ ಮಂತ್ರಹೀನಂ ಕ್ರಿಯಾಹೀನಂ ಭಕ್ತಿಹೀನಂ ಸುರೇಶ್ವರ । ಯತ್ಪೂಜಿತಂಮಯಾದೇವ ಪರಿಪೂರ್ಣಂತದಸ್ತುಮೇ ॥ ೪ ॥ ಅಪರಾಧಸಹಸ್ರಾಣಿ ಕ್ರಿಯನ್ತೇಹರ್ನಿಶಂಮಯಾ । ದಾಸೋಯಮಿತಿಮಾಂಮತ್ವಾ ಕ್ಷಮಸ್ವಪರಮೇಶ್ವರ॥೫॥" ಎಲೈ ಗರುಡಧ್ವಜನೆ ! ನಾನು ಈಗ ಮಾಡುವ ಪೂಜೆಯು ಹವಳ ರತ್ನಗಳ, ಸರಗಳಿಂದಲೂ,ಮಂದಾರ ಪುಷ್ಪಗಳಿಂದಲೂ ಮಾಡಿದ ಸಂವತ್ಸರಪೂಜೆಯಂತೆ ನಿನಗಾಗಲಿ ॥ ೧ ॥ ಎಲೈ ಭಗವಂತನೆ ! ವನಮಾಲೆಯನ್ನೂ, ಕೌಸ್ತುಭಮಣಿಯನ್ನೂ ನೀನು ಸರ್ವದಾ ಹೃದಯದಲ್ಲಿ ಹೇಗೆ ಧರಿಸಿರುವೆಯೋ ಹಾಗೆಯೇ ಪವಿತ್ರತಂತು

ಗಳನ್ನೂ, ನಾನು ಮಾಡುವ ಪೂಜೆಯನ್ನೂ ಹೃದಯದಲ್ಲಿ ಧರಿಸುವವನಾಗು ॥ ೨ ॥ ನಾನು ಸಂವತ್ಸರದಿಂದ ಮಾಡಿರುವ ಪೂಜೆಯಲ್ಲಿ ತಿಳಿದೋ, ತಿಳಿಯದೆಯೋ, ಅಥವಾ ಯಾವುದಾದರೂ ಬಾಧು ಅಡ್ಡಿಬಂದದ್ದರಿಂದಲೋ, ಲೋಪವಾಗಿರುವುದೆಲ್ಲವೂ ಈಗ ಸಾಂಗವಾಗಿ ಪೂರ್ತಿಯಾಗುವಂತೆ ನನ್ನನ್ನು ಅನುಗ್ರಹಿಸು ॥೩॥ ಎಲೈ ಸುರಶ್ರೇಷ್ಠನಾದ ವಿಷ್ಣುವೇ ! ಮಂತ್ರವಿಲ್ಲದೆಯೂ, ತಂತ್ರವಿಲ್ಲದೆಯೂ, ಭಕ್ತಿಯಿಲ್ಲದೆಯೂ, ನಾನು ಪೂಜೆ ಮಾಡಿದ್ದರೂ ಅದೆಲ್ಲವೂ ಪೂರ್ತಿಯಾಗಲಿ ॥೪॥ ಎಲೈ ಪರಮೇಶ್ವರನೇ ! ನಾನು ಹಗಲು ರಾತ್ರಿಗಳಲ್ಲಿಯೂ [ಸರ್ವದಾ] ಅನೇಕ ತಪ್ಪುಗಳನ್ನು ಮಾಡುತ್ತಿರುವೆನು. ನನ್ನನ್ನು ನಿನ್ನ ಸೇವಕನೆಂದು ತಿಳಿದು ಅವೆಲ್ಲವನ್ನೂ ಮನ್ನಿಸುವವನಾಗು ॥೫॥ ಎಂದು ಪ್ರಾರ್ಥಿಸಬೇಕು. ಈಶ್ವರನೇ ಮೊದಲಾದ ದೇವತೆಗಳಿಗೆ 'ಗರುಡಧ್ವಜ' ಮೊದಲಾದ ಸ್ಥಳಗಳಲ್ಲಿ 'ವೃಷವಾಹನ' ಮೊದಲಾದ ಭೇದಗಳನ್ನು ಕಲ್ಪಿಸಿ ಹೇಳಿಕೊಳ್ಳಬೇಕು. 'ವನಮಾಲಾಂ' ಎಂಬ ಶ್ಲೋಕವನ್ನು ಬಿಟ್ಟುಬಿಡಬೇಕು. ದೇವಿಗಾದರೆ-'ದೇವದೇವಸುರೇಶ್ವರ' ಮೊದಲಾದ ಸ್ಥಳಗಳಲ್ಲಿ 'ದೇವಿದೇವಿಸುರೇಶ್ವರಿ' ಮೊದಲಾದ ಸ್ತ್ರೀಲಿಂಗ ಪದಗಳನ್ನು ಹೇಳಿಕೊಳ್ಳಬೇಕು. ಮಿಕ್ಕ ವಿಷಯಗಳೆಲ್ಲವೂ ಸಮಾನವಾಗಿವೆ. ಅನಂತರದಲ್ಲಿ ಗುರು ಪೂಜೆಯನ್ನುಮಾಡಿ ಪವಿತ್ರವನ್ನುಕೊಟ್ಟು,ಉಳಿದ ಬ್ರಾಹ್ಮಣರಿಗೂ ಸುವಾಸನಿಯರಿಗೂ ಬೇರೆ ಪವಿತ್ರವನ್ನು ಕೊಟ್ಟು ತಾನೂ ಸಹ ತಮ್ಮ ಮನೆಯಲ್ಲಿರುವರೆಲ್ಲರೊಡನೆಯೂ ಧರಿಸಬೇಕು. ಆಮೇಲೆ ಬ್ರಾಹ್ಮಣರೊಡನೆ ಭೋಜನಮಾಡಿ ಮೂರುರಾತ್ರಿಗಳು ಬ್ರಹ್ಮಚರ್ಯ ಮೊದಲಾದ ನಿಯಮಗಳುಳ್ಳವನಾಗಿ ದೇವರಿಗೆ ಪವಿತ್ರಗಳನ್ನು ಧರಿಸಬೇಕು. ದೇವರಿಗೆ ಸ್ನಾನ ಮೊದಲಾದ ಉಪಚಾರಗಳನ್ನು ಮಾಡುವಾಗ ಪವಿತ್ರಗಳನ್ನು ತೆಗೆದಿಡಬೇಕು. ಮೂರು ರಾತ್ರಿಗಳು ಕಳೆದಮೇಲೆ ದೇವರನ್ನುಪೂಜಿಸಿ, ಪವಿತ್ರಗಳನ್ನು ವಿಸರ್ಜನೆಮಾಡಬೇಕು. ಇಲ್ಲಿ ಈಶ್ವರನೇ ಮೊದಲಾದ ದೇವತೆಗಳಿಗೆ ಪವಿತ್ರಾರೋಪಣವನ್ನು ಮಾಡಬೇಕಾಗಿದ್ದರೆ, ಪೂರ್ವವಿದ್ಧವಾದ (ತ್ರಯೋದಶಿಯ ವೇಧೆಯುಳ್ಳ) ಚತುರ್ದಶಿಯನ್ನು ಗ್ರಹಿಸಬೇಕು. ಹೇಗೆಯೋ ಪೂರ್ವದಿನದ ವೇಧೆಯುಳ್ಳದ್ದಾಗಿ, ಮೂರು ಮು

ಹೂರ್ತಕಾಲದ ಸಾಯಾಹ್ನ ವ್ಯಾಪ್ತಿಯೂ ಉಳ್ಳ ಪೌರ್ಣಿಮೆಯನ್ನು ಗ್ರಹಿಸಬೇಕು. ಅಷ್ಟಮಿಯೇ ಮೊದಲಾದ ಉಳಿದ ತಿಥಿಗಳನ್ನೂ ಸಹ ಪವಿತ್ರಾರೋಪಣ ವಿಷಯದಲ್ಲಿ ಮೊದಲನೆಯ ಪರಿಚ್ಛೇದದಲ್ಲಿ ಹೇಳಿರುವ ಸಾಮಾನ್ಯ ತಿಥಿನಿರ್ಣಯದಂತೆಯೇ ಗ್ರಹಿಸಬೇಕು. ಇಂತು ಪವಿತ್ರಾರೋಪಣವು.

## —ಋಗ್ವೇದೋಪಾಕರ್ಮ.—

ಋಗ್ವೇದೊಪಾಕರ್ಮ:-ಋಗ್ವೇದಿಗಳಿಗೆ ಶ್ರಾವಣಶುದ್ಧದಲ್ಲಿ, ಶ್ರವಣ ನಕ್ಷತ್ರ ದಿನದಲ್ಲಿ, ಅಥವಾ ಪಂಚಮಿಯಲ್ಲಿ, ಇಲ್ಲವೆ ಹಸ್ತ ನಕ್ಷತ್ರದಲ್ಲಿ, ಈ ಮೂರು ಕಾಲಗಳೊಳಗೆ ಯಾವುದಾದರೂ ಒಂದು ಉಪಾಕರ್ಮಕ್ಕೆ ಯೋಗ್ಯವಾದದ್ದು, ಇವುಗಳಲ್ಲಿ ಶ್ರವಣ ನಕ್ಷತ್ರವೇ ಮುಖ್ಯಕಾಲವು. ಅದು ಸಿಕ್ಕದಿದ್ದರ ಪಂಚಮಿ ಮೊದಲಾದವುಗಳಲ್ಲಿ ಮಾಡಬೇಕು. ಆದರೆ ನಿಶ್ಚಯವಾದ ಕಾಲವನ್ನು ಸಿದ್ಧಾಂತ ಮಾಡುವ ವಿಷಯದಲ್ಲಿ ಸಂಗ್ರಹ ಕಾರಿಕೆಯಲ್ಲಿ ''ಪರ್ವಣಿಶ್ರವಣೇಕಾರ್ಯಂ ಗ್ರಹಸಂಕ್ರಾನ್ತ್ಯದೂಷಿತೇ। ಅಧ್ವರ್ಯುಭಿರ್ಬಹ್ವೃಚೈಶ್ಚ ಕಥಂಚಿತ್ತದಸಂಭವೇ ॥೧॥ ತತ್ರೈವಹಸ್ತೆ ಪಂಚಮ್ಯಾಂ ತಯೋಃಕೇವಲಯೋರಪಿ ॥'' ಅಂದರೆ- 'ಶ್ರಾವಣ ಶುದ್ಧ ಪೌರ್ಣಿಮೆಯಲ್ಲಿ, ಗ್ರಹಣ ಅಥವಾ ಸಂಕ್ರಮಣಗಳಿಲ್ಲದೇ ಹೋಗುವ ಪಕ್ಷದಲ್ಲಿ ಶ್ರವಣ ನಕ್ಷತ್ರದಲ್ಲಿ ಯಜುರ್ವೇದಿಗಳೂ, ಋಗ್ವೇದಿಗಳೂ ಸಹ ಉಪಾಕರ್ಮ ಮಾಡಬೇಕು ಒಂದುವೇಳೆ ಅದು ಅನುಕೂಲಿಸದಿದ್ದರೆ ॥೧॥ ಆ ಶ್ರಾವಣ ಶುದ್ಧದಲ್ಲಿ ಪಂಚಮೀದಿನ ಹಸ್ತ ನಕ್ಷತ್ರವಿದ್ದಲ್ಲಿ ಆ ದಿನದಲ್ಲಿ ಮಾಡಬಹುದು. ಅಥವಾ ಹಸ್ತ ನಕ್ಷತ್ರವೊಂದರಲ್ಲಿಯೇ ಆಗಲಿ, ಪಂಚಮೀ ತಿಥಿಯೊಂದನ್ನೇ ಗ್ರಹಿಸಿಯಾಗಲಿ ಮಾಡಬಹುದು ಎಂದರ್ಥವು '' ಎರಡು ದಿನಗಳಲ್ಲಿಯೂ ಶ್ರವಣ ನಕ್ಷತ್ರಕ್ಕೆ ವ್ಯಾಪ್ತಿಯಿದ್ದರೆ, ಪೂರ್ವದಿನದ ಸೂರ್ಯೋದಯವನ್ನು ಪ್ರಾರಂಭಿಸಿ, ಎರಡನೆಯ ದಿನದಲ್ಲಿ ಸೂರ್ಯೋದಯಾನಂತರವೂ ಮೂರು ಮುಹೂರ್ತಗಳವರೆಗೂ ಶ್ರವಣನಕ್ಷತ್ರವಿರುವ ಪಕ್ಷದಲ್ಲಿ ಧನಿಷ್ಠಾ ನಕ್ಷತ್ರಯೋಗವು ಉತ್ತಮವಾದ್ದರಿಂದ ಎರಡನೆಯ ದಿನದಲ್ಲಿಯೇ ಉಪಾಕರ್ಮವು. ಮೂರು ಮುಹೂರ್ತಕ್ಕಿಂತ ಕಡಿಮೆಯಾಗಿದ್ದರೆ ಪೂರ್ವದಿನದಲ್ಲಿಯೇ ನಡೆಯಬೇಕು. ಸಂಪೂರ್ಣವಾಗಿ

ಹಸ್ತನಕ್ಷತ್ರಯೋಗವಿರುವಾಗ,ಪೂರ್ವದಿನದಸೂರ್ಯೋದಯ ಕಾಲದಲ್ಲಿ ಇದಲ್ಲದೆಎರಡನೆಯದಿನದಸೂರ್ಯೋದಯಾನಂತರದಲ್ಲಿ ಎರಡುಮುಹೂರ್ತ ಕಾಲವಿದ್ದರೆ,ಉತ್ತರಾಷಾಢಯೋಗವು ಅಯುಕ್ತವಾದಕಾರಣ, ಎರಡನೆಯದಿನದಲ್ಲಿಯೇ ಆಗಬೇಕು ಎರಡನಯ ದಿನದಲ್ಲಿ ಎರಡು ಮುಹೂರ್ತಕ್ಕಿಂತ ಕಡಿಮೆಯಾಗಿ ಹಸ್ತನಕ್ಷತ್ರವಿದ್ದು, ಪೂರ್ವದಿನಕ್ಕೆ ಉತ್ತರಾಷಾಢಾನಕ್ಷತ್ರ ವೇಧೆಯುಂಟಾಗಿದ್ದರೆ ಪಂಚಮಿ ಮೊದಲಾದ ಕಾಲಗಳನ್ನು ಗ್ರಹಿಸಬೇಕು. ಪಂಚಮಿ, ಹಸ್ತ ಈ ಎರಡು ಕಾಲವಿಷಯದಲ್ಲಿ,ಸೂರ್ಯೋದಯಾನಂತರ ಮೂರು ಮುಹೂರ್ತಕಾಲದ ವ್ಯಾಪ್ತಿಯುಳ್ಳವುಗಳನ್ನು ಗ್ರಹಿಸಬೇಕು. ಹಾಗೆ ಸಿಕ್ಕದಿದ್ದರೆ, ಪೂರ್ವವೇಧೆಯುಳ್ಳದ್ದನ್ನೂ ಗ್ರಹಿಸಬಹುದು. ಹೀಗೆಯೇ ಭಾದ್ರಪದ ಶುದ್ಧದಲ್ಲಿಯೂ ಶ್ರವಣ, ಪಂಚಮಿ, ಹಸ್ತ ಈ ಮೂರು ಕಾಲಗಳ ನಿರ್ಣಯವು ಎಂದು ತಿಳಿಯಬೇಕು. ಋಗ್ವೇದಿಗಳು ಇವನ್ನು ಪೂರ್ವಾಹ್ಣದಲ್ಲಿ (ಬೆಳಗಿನಲ್ಲಿ) ಯೇ ಮಾಡಬೇಕು.

### ಯಜುರ್ವೇದೋಪಾಕರ್ಮ ನಿರ್ಣಯವು.

ಯಜುರ್ವೇದೋಪಾಕರ್ಮ.—ಋಗ್ವೇದಿಗಳಿಗೆ ಶ್ರವಣ ನಕ್ಷತ್ರವು ಹೇಗೆ ಮುಖ್ಯವೋ ಹಾಗೆ ಎಲ್ಲಾ ಯಜುರ್ವೇದಿಗಳಿಗೂ ಶ್ರಾವಣ ಪೌರ್ಣಮಾಸ್ಯೆಯು ಮುಖ್ಯವಾದ ಕಾಲವು. ಪೂರ್ಣಿಮೆಯು ಖಂಡತಿಥಿಯಾಗಿದ್ದರೆ, ಮೊದಲ ದಿನದಲ್ಲಿ ಒಂದು ಮುಹೂರ್ತ ಅಥವಾ ಹೆಚ್ಚು ಕಾಲವು ಕಳೆದಮೇಲೆ ಪೌರ್ಣಮಿಯು ಬರುವುದಾಗಿಯೂ, ಎರಡನೆಯ ದಿನದಲ್ಲಿ ಆರುಮುಹೂರ್ತದವರೆಗೂ ಇರುವಂತಿದ್ದಾಗ, ಯಜುರ್ವೇದಿಗಳು ಎರಡನೆಯ ತಿಥಿಯನ್ನೇ ಗ್ರಹಿಸಬೇಕು. ಹಾಗಿಲ್ಲದೆ ಶುದ್ಧಾಧಿಕತ್ವದಿಂದ ಎರಡು ದಿನಗಳಲ್ಲಿಯೂ ಸೂರ್ಯೋದಯ ವ್ಯಾಪ್ತಿಯುಳ್ಳುದಾಗಿದ್ದಲ್ಲಿ, ಎಲ್ಲಾ ಯಜುಶ್ಶಾಖೆಯವರಿಗೂ ಪೂರ್ವದಿನವೇ ಗ್ರಾಹ್ಯವು. ಪೂರ್ವದಿನದಲ್ಲಿ ಒಂದು ಮುಹೂರ್ತ ಅಥವಾ ಅದಕ್ಕಿಂತ ಹೆಚ್ಚು ಕಾಲಾನಂತರದಲ್ಲಿ ಪೌರ್ಣಮಿಯು ಪ್ರಾರಂಭವಾಗಿ ಎರಡನೆಯ ದಿನದಲ್ಲಿ ಎರಡೋ, ಮೂರೋ ಮುಹೂರ್ತಗಳ ಕಾಲವಿದ್ದು ಆರು ಮುಹೂರ್ತಕ್ಕಿಂತ ಕಡಿಮೆಯಾಗಿರುವ ಪಕ್ಷದಲ್ಲಿ ತೈತ್ತಿರೀಯ ಶಾಖೆಯವರು ಎರಡನೆಯ ತಿಥಿಯನ್ನು ಗ್ರಹಿಸ

ಬೇಕು. ತೈತ್ತಿರೀಯರನ್ನು ಉಳಿದ ಯಜುರ್ವೇದಿಗಳೆಲ್ಲರೂ ಪೂರ್ವತಿಥಿಯನ್ನು ಗ್ರಹಿಸಬೇಕು. ಒಂದುವೇಳೆ ಪೂರ್ವದಿನದಲ್ಲಿ ಒಂದು ಮುಹೂರ್ತಕಾಲವು ಕಳೆದಮೇಲೆ ಯಾವಾಗಲಾದರೂ ಪೌರ್ಣಮಿಯು ಪ್ರಾರಂಭವಾಗಿ, ಎರಡನೆಯ ದಿನದಲ್ಲಿ ಎರಡು ಮುಹೂರ್ತಕ್ಕಿಂತ ಕಡಿಮೆಯಾಗಿಯೋ ಕ್ಷಯತಿಥಿಯಾದಾಗ ಎರಡನೆಯ ದಿನದಲ್ಲಿ ಸ್ವಲ್ಪಕಾಲವೂ ಇಲ್ಲದೆ ಹೋಗುವಹಾಗೆಯೋ ಇರುವ ಪಕ್ಷದಲ್ಲಿ, ಎಲ್ಲಾ ಯಜುರ್ವೇದಿಗಳೂ ಪೂರ್ವತಿಥಿಯನ್ನೇ ಗ್ರಹಿಸಬೇಕು. ಹಿರಣ್ಯಕೇಶೀ ತೈತ್ತಿರೀಯರಿಗೆ ಶ್ರಾವಣ ಶುದ್ಧ ಪೌರ್ಣಮಾಸ್ಯೆಯು ಮುಖ್ಯಕಾಲವು. ಅದಲ್ಲದಿದ್ದರೆ ಶ್ರಾವಣ ಮಾಸದಲ್ಲಿ ಹಸ್ತನಕ್ಷತ್ರದ ದಿನವನ್ನು ಗ್ರಹಿಸಬಹುದು. ಶ್ರಾವಣ ಶುದ್ಧ ಪಂಚಮಿಯನ್ನು ಉಪಾಕರ್ಮಕ್ಕೆ ಆಯಾ ಶಾಖಾಸೂತ್ರಕಾರರು ಹೇಳಿಲ್ಲವಾದ್ದರಿಂದ ಅದನ್ನು ಗ್ರಹಿಸಕೂಡದು. ಭಾದ್ರಪದದಲ್ಲಿಯೂ, ಪೌರ್ಣಮಿ, ಹಸ್ತಗಳೆಂಬೀ ಎರಡುಕಾಲಗಳೇ ಯೋಗ್ಯವಾದುವುಗಳೆಂದು ತಿಳಿಯಬೇಕು. ಖಣ್ಡತಿಥಿಯಾಗುವ ಪಕ್ಷದಲ್ಲಿ ಪೂರ್ವದಲ್ಲಿ ಹೇಳಿರುವಂತೆಯೇ ನಿರ್ಣಯವು.ಹಸ್ತನಕ್ಷತ್ರವೂ ಸಹ ಉದಯಕಾಲ ಮೊದಲ್ಗೊಂಡು ಸಙ್ಗವಕಾಲದವರೆಗೂ ವ್ಯಾಪ್ತಿಯುಳ್ಳದ್ದಾಗಿರಬೇಕು.ಹಾಗಿಲ್ಲದಿದ್ದರೆ,ಉತ್ತರಾನಕ್ಷತ್ರವೇಧೆ ಇದ್ದಾಗ್ಯೂ ಪೂರ್ವದಿನವನ್ನೇಗ್ರಹಿಸಬೇಕು.ಆಪಸ್ತಂಬರಿಗೆ ಶ್ರಾವಣ ಶುದ್ಧ ಪೌರ್ಣಮಿಯು ಮುಖ್ಯವಾದದ್ದು,ಅದಲ್ಲದಿದ್ದರೆ ಭಾದ್ರಪದ ಶುದ್ಧ ಪೌರ್ಣಮಿಯು ಗ್ರಾಹ್ಯವು. ಬೌಧಾಯನರಿಗೆ ಶ್ರಾವಣ ಪೌರ್ಣಮಿಯು ಮುಖ್ಯವಾದದ್ದು. ಅನುಕೂಲವಾದ ಪೌರ್ಣಮಿಯು ಶ್ರಾವಣದಲ್ಲಿ ಸಿಕ್ಕದಿದ್ದರೆ ಆಷಾಢ ಶುದ್ಧ ಪೌರ್ಣಮಿಯನ್ನು ಗ್ರಹಿಸಬೇಕು. ಖಂಡತಿಥಿಯಾದರೆ ಇವರಿಗೂ ಪೂರ್ವದಲ್ಲಿ ಹೇಳಿರುವಂತೆಯೇ ನಿರ್ಣಯವು. ಕಾಣ್ವ, ಮಧ್ಯಂದಿನ ಮೊದಲಾದ ಕಾತ್ಯಾಯನರಿಗೆ ಶ್ರವಣ ನಕ್ಷತ್ರಯುಕ್ತವಾದ ಪೌರ್ಣಮಿಯಾಗಲೀ, ಪೌರ್ಣಿಮೀ ಮಾತ್ರವೇಆಗಲಿ, ಹಸ್ತನಕ್ಷತ್ರಯುಕ್ತವಾದ ಪಂಚಮಿ ಅಥವಾ ಕೇವಲ ಪಂಚಮಿಯಾಗಲಿ ಮುಖ್ಯಕಾಲವು. ಆದ್ದರಿಂದ ಶ್ರವಣನಕ್ಷತ್ರವೊಂದನ್ನಾಗಲಿ, ಹಸ್ತನಕ್ಷತ್ರವೊಂದನ್ನೇ ಆಗಲಿ ಗ್ರಹಿಸಕೂಡದು. ಶ್ರಾವಣಮಾಸದಲ್ಲಿ ತೊಂದರೆಯುಂಟಾಗುವುದಾಗಿದ್ದರೆ ಭಾದ್ರಪದ ಶುದ್ಧ ಪೌರ್ಣಮಿ,

ಪಂಚಮಿಗಳಲ್ಲಿ ಮಾಡಬಹುದು. ಖಣ್ಡತಿಥಿಯಾದರೆ ಆರು ಮುಹೂರ್ತಕ್ಕಿಂತ ಹೆಚ್ಚಾಗಿದ್ದರೆ ಎರಡನೆಯದನ್ನೂ, ಆರು ಮುಹೂರ್ತಕ್ಕಿಂತಲೂ ಕಡಮೆಯಾದರೆ ಮೊದಲನೆಯದನ್ನೂ ಗ್ರಹಿಸಬೇಕೆಂಬುದೇ ಮೊದಲಾದ ಪೂರ್ವದಲ್ಲಿ ಹೇಳಿರುವ ನಿರ್ಣಯವನ್ನೇ ಗ್ರಹಿಸಬೇಕು.

## ಸಾಮವೇದೋಪಾಕರ್ಮ.

ಸಾಮವೇದೋಪಾಕರ್ಮ.—ಸಾಮವೇದಿಗಳಿಗೆ ಭಾದ್ರಪದ ಶುದ್ಧದಲ್ಲಿ ಹಸ್ತನಕ್ಷತ್ರವೇ ಮುಖ್ಯಕಾಲವು. ಸಂಕ್ರಮಣಾದಿ ದೋಷಗಳಿಂದ ಆಗ ನಡೆಯದೇಹೋದರೆ, ಶ್ರಾವಣಮಾಸದ ಹಸ್ತನಕ್ಷತ್ರದಲ್ಲಿ ನಡೆಯಬೇಕೆಂದು ಸಿರಯಸಿನ್ಧುಕಾರನ ಮತವು. ಇತರರು ಭಾದ್ರಪದ ಹಸ್ತದಲ್ಲಿ ದೋಷಬಂದರೆ, ಶ್ರಾವಣ ಪೌರ್ಣಮಾಸ್ಯೆಯಲ್ಲಿ ಉಪಾಕರ್ಮವನ್ನು ಮಾಡಿ, ಭಾದ್ರಪದದ ಹಸ್ತದವರೆಗೂ ಅಧ್ಯಯನಮಾಡದೆ ಇದ್ದು ಅನಂತರದಲ್ಲಿ ಪಾಠಮಾಡಬಹುದೆಂದು ಹೇಳುವರು. ಹಸ್ತನಕ್ಷತ್ರವು ಖಂಡವಾಗಿದ್ದಾಗ ಎರಡು ದಿನಗಳಲ್ಲಿ ಸಂಪೂರ್ಣವಾಗಿ ಅಪರಾಹ್ಣವ್ಯಾಪ್ತಿಯಿದ್ದರೂ, ಅಪರಾಹ್ಣದ ಒಂದು ಭಾಗಕ್ಕೆ ವ್ಯಾಪ್ತಿ ಇದ್ದಾಗ್ಯೂ ಎರಡನೆಯ ದಿನವೇ ಉಪಾಕರ್ಮವು. ಸಾಮಗರಿಗೆ ಎಲ್ಲಾ ಸ್ಥಳಗಳಲ್ಲಿಯೂ ಅಪರಾಹ್ಣವನ್ನೇ ಉಪಾಕರ್ಮಕ್ಕೆ ಮುಖ್ಯಕಾಲವನ್ನಾಗಿ ಹೇಳಿರುವುದರಿಂದ, ಪೂರ್ವದಿನದಲ್ಲಿಯೇ ಅಪರಾಹ್ಣಕಾಲವೆಲ್ಲಕ್ಕೂ ವ್ಯಾಪ್ತಿ ಇದ್ದರೆ ಪೂರ್ವದಿನವನ್ನೇ ಗ್ರಹಿಸಬೇಕು. ಪೂರ್ವದಿನದಲ್ಲಿಯೇ ಅಪರಾಹ್ಣದ ಒಂದು ಭಾಗಕ್ಕೆ ವ್ಯಾಪ್ತಿ ಇದ್ದರೂ, ಎರಡು ದಿನಗಳಲ್ಲಿಯೂ ಅಪರಾಹ್ಣಕ್ಕೆ ವ್ಯಾಪಿಸದಿದ್ದರೂ, ಎರಡನೆಯ ದಿನವನ್ನೇ ಗ್ರಹಿಸಬೇಕು. ಯಾವ ಸಾಮವೇದಿಗಳಿಗೆ ಪ್ರಾತಃಕಾಲ ಸಂಗವಕಾಲಗಳನ್ನು ಕರ್ಮಕಾಲವೆಂದು ಹೇಳಿದೆಯೋ ಅವರಿಗೆ ಪೂರ್ವದಲ್ಲಿ ಅಪರಾಹ್ಣ ವ್ಯಾಪ್ತಿಯನ್ನು ಬಿಟ್ಟು, ಎರಡನೆಯ ದಿನದಲ್ಲಿ ಸಂಗವಕಾಲಾನಂತರದಲ್ಲಿರುವ ಹಸ್ತನಕ್ಷತ್ರವನ್ನು ಗ್ರಹಿಸಬೇಕು. ಸೂರ್ಯನು ಸಿಂಹರಾಶಿಗತನಾಗಿರುವ ಸಂದರ್ಭದಲ್ಲಿ ಉಪಾಕರ್ಮವೆಂತೆಂದರೆ:—ಶ್ರಾವಣ ಮಾಸದ ಪೂರ್ಣಿಮೆಯಾಗಲಿ, ಹಸ್ತನಕ್ಷತ್ರವಾಗಲಿ, ಸೂರ್ಯನು ಸಿಂಹರಾಶಿಯಲ್ಲಿರುವಾಗ ಬಂದರೆ ಆ ಕಾಲದಲ್ಲಿ (ಆ ಪೂರ್ಣಿಮಾ, ಹಸ್ತಗಳಲ್ಲಿ) ಉಪಾಕರ್ಮವನ್ನು ಮಾಡಬಹು

ದು. ಕರ್ಕಾಟಕದಲ್ಲಿ ಸೂರ್ಯನಿರುವಾಗ ಶ್ರಾವಣ ಮಾಸದ ಹಸ್ತ ಮತ್ತು ಪೌರ್ಣಮಿಗಳಲ್ಲಿ ಉಪಾಕರ್ಮ ಮಾಡಕೂಡದೆಂಬ ವಿಷಯವು ಸಾಮಕರ ವಿಷಯಕವಾದ ವ್ಯವಸ್ಥೆಯು, ಇತರ ಶಾಖೆಯವರಿಗೆ ಸೂರ್ಯನು ಸಿಂಹರಾಶಿಗತನಾದಾಗ ಮಾಡಬಹುದು ಅಥವಾ ಮಾಡಬಾರದೆಂಬ ವಿಚಾರವಿಲ್ಲವು. ಅಥರ್ವಣವೇದಿಗಳಿಗಂತು ಶ್ರಾವಣ ಅಥವಾ ಭಾದ್ರಪದ ಮಾಸದ ಪೌರ್ಣಮಿಯಲ್ಲಿ ಉಪಾಕರ್ಮವು ನಡೆಯಬೇಕು. ಖಣ್ಡತಿಥಿಯಾದರೆ ಉದಯ ಕಾಲದಿಂದ ಸಙ್ಗವಕಾಲವು ಪೂರ್ತಿಯಾಗುವವರೆಗೂ ವ್ಯಾಪ್ತಿಯುಳ್ಳ ತಿಥಿಯನ್ನು ಗ್ರಹಿಸಬೇಕು ಎಲ್ಲಾ ಶಾಖೆಯವರೂ ಶ್ರಾವಣ, ಭಾದ್ರಪದ ಮಾಸದಲ್ಲಿ ತಮ್ಮತಮ್ಮ ಗೃಹ್ಯೋಕ್ತ ಕಾಲಗಳಲ್ಲಿ ಗ್ರಹಣ, ಸಂಕ್ರಮಣ, ಆಶೌಚಾದಿ ದೋಷಗಳಿಂದ ಕರ್ಮ ಲೋಪವಾಗುವಂತೆಯೇ ತೋರಿಬಂದರೆ, ಇತರ ಶಾಖೆಯವರಿಗೆ ಉಕ್ತವಾಗಿರುವ ಕಾಲವನ್ನೇ ತಾವೂ ಅವಶ್ಯಕವಾಗಿ ಗ್ರಹಿಸಬೇಕು.

### ಸರ್ವಸಾಧಾರಣ ನಿರ್ಣಯವು.

ಎಲ್ಲ ಶಾಖೆಯವರಿಗೂ ಸಾಮಾನ್ಯ ನಿರ್ಣಯವು—ಆಗ-ಆಪಸ್ತಂಬ, ಬೌಧಾಯನ, ಸಾಮಕ ಮೊದಲಾದವರು ಶ್ರಾವಣ, ಭಾದ್ರಪದ ಮಾಸಗಳಲ್ಲಿನ ಪಂಚಮೀ, ಪೂರ್ಣಿಮಾ ಮೊದಲಾದ ತಿಥಿಗಳನ್ನು ತಾರತಮ್ಯವಿಲ್ಲದೆ ಗ್ರಹಿಸಬೇಕಾಗಿಬಂದರೆ, ನರ್ಮದಾನದಿಯ ಉತ್ತರ ಭಾಗದ ದೇಶದವರು ಸೂರ್ಯನು ಸಿಂಹರಾಶಿಯಲ್ಲಿರುವ ಕಾಲದ ಪಂಚಮಿ ಮೊದಲಾದುವನ್ನೂ,ನರ್ಮದೆಯ ದಕ್ಷಿಣ ಭಾಗದ ದೇಶದಲ್ಲಿರುವವರು, ಸೂರ್ಯನು ಕರ್ಕಾಟಕದಲ್ಲಿರುವಾಗ ಶ್ರಾವಣ ಪಂಚಮೀ ಮೊದಲಾದುವನ್ನೂ ಗ್ರಹಿಸಬೇಕೆಂಬ ವ್ಯವಸ್ಥೆಯನ್ನು ಕೌಸ್ತುಭಕಾರನು ಹೇಳಿರುವನು. ಆದ್ದರಿಂದ ಋಗ್ವೇದಿಗಳೂ ಸಹ ಸರ್ವಥಾ ಕರ್ಮಲೋಪವುಂಟಾಗುವ ಸಂದರ್ಭದಲ್ಲಿ ಸಿಂಹಮಾಸ, ಕರ್ಕಾಟಕ ಮಾಸವೆಂಬ ವ್ಯವಸ್ಥೆಯಿಂದ ಪೌರ್ಣಮಿಯನ್ನೂ ಗ್ರಹಿಸಬಹುದೆಂದು ತೋರುವುದು. ಮುಖ್ಯಕಾಲವಾದ ಶ್ರಾವಣ ಮಾಸದಲ್ಲಿ ಮಳೆಯಿಲ್ಲದ್ದರಿಂದ ಭತ್ತ ಮೊದಲಾದವುಗಳ ಪೈರು ಬೆಳೆಯುವ ಕಾಲದಲ್ಲಿಯೂ, ಆಶೌಚಾದಿಗಳಲ್ಲಿಯೂ ಎಲ್ಲ ಶಾಖೆಯವರೂ ಭಾದ್ರಪದದಶ್ರವಣ ನಕ್ಷತ್ರವೊದಲಾದವುಗ

ಳಲ್ಲಿ ಮಾಡಬೇಕು. ಪೈರು ಬಾರದಿದ್ದಾಗ್ಯೂ ಶ್ರಾವಣ ಮಾಸದಲ್ಲಿಯೇ ಮಾಡಬೇಕೆಂದು ಕರ್ಕಾದಿಗಳ ಅಭಿಪ್ರಾಯವು. ಎಲ್ಲಾ ಶಾಖೆಯವರೂ ತಮ್ಮ ತಮ್ಮ ಗೃಹ್ಯಸೂತ್ರದಲ್ಲಿ ಹೇಳಿರುವ ಮುಖ್ಯ ಕಾಲಗಳಲ್ಲಿ ಗ್ರಹಣ ಸಂಕ್ರಮಣಾದಿಗಳುಂಟಾದರೆ, ಗ್ರಹಣ ಸಂಕ್ರಮಣಾದಿಗಳಿಲ್ಲದ ಪಂಚಮಿ ಮೊದಲಾದವುಗಳಲ್ಲಿ ಮಾಡಬೇಕು. ಉಪಾಕರ್ಮಕ್ಕೆ ಸಂಬಂಧಪಟ್ಟ ಹಗಲು-ರಾತ್ರಿಗಳೆಂಬ ಎಂಟು ಯಾಮಗಳುಳ್ಳ ಒಂದು ದಿವಸದಲ್ಲಿ ಅಂದರೆ, ಹಿಂದಣ ದಿನದ ಅರ್ಧರಾತ್ರಿಯನ್ನು ಮೊದಲುಮಾಡಿಕೊಂಡು ಈ ದಿನದ ಅರ್ಧರಾತ್ರಿಯವರೆಗಿನ ಕಾಲದಲ್ಲಿ ಇರುವ ಶ್ರವಣ ನಕ್ಷತ್ರ ಅಥವಾ ಪೌರ್ಣಮಿ ಮೊದಲಾದ ತಿಥಿಗಳಿಗೆ ಸಂಕ್ರಮಣ, ಗ್ರಹಣ ಇವುಗಳ ಯೋಗವಿಲ್ಲದಿದ್ದಾಗ್ಯೂ ಈ ಎಂಟು ಯಾಮಗಳ ಮಧ್ಯದಲ್ಲಿ ಗ್ರಹಣ ಅಥವಾ ಸಂಕ್ರಮಣಗಳುಂಟಾದಮಾತ್ರಕ್ಕೆ ಉಪಾಕರ್ಮವನ್ನು ಮಾಡಕೂಡದು. ಈ ಎಂಟು ಯಾಮಗಳ ಹಿಂದಣ ಅಥವಾ ಮುಂದಿನ ಕಾಲದಲ್ಲಾದರೂ ಉಪಾಕರ್ಮಕ್ಕೆ ಉಕ್ತವಾದ ಶ್ರವಣಾದಿ ನಕ್ಷತ್ರ ಅಥವಾ ಪೂರ್ಣಿಮಾದಿ ತಿಥಿಗಳಿಗೆ ಗ್ರಹಣ ಸಂಕ್ರಾಂತಿ ಇವುಗಳ ಯೋಗವುಂಟಾದರೆ ಉಪಾಕರ್ಮವನ್ನು ಮಾಡಕೂಡದೆಂದು ಕೆಲವರ ಅಭಿಪ್ರಾಯವು. ಹೊಸದಾಗಿ ಉಪನಯನವಾದ ವಟುಗಳಿಗೆ ಪ್ರಥಮೋಪಾಕರ್ಮವನ್ನು ಗುರು, ಶುಕ್ರರ ಅಸ್ತಕಾಲದಲ್ಲಿಯೂ, ಮಲಮಾಸಾದಿಗಳಲ್ಲಿಯೂ, ಸೂರ್ಯನು ಸಿಂಹರಾಶಿಯಲ್ಲಿರುವಾಗಲೂ ಮಾಡಕೂಡದು. ಪ್ರಥಮೋಪಾಕರ್ಮವನ್ನುಳಿದ ಉಪಾಕರ್ಮಗಳನ್ನು ಶುಕ್ರಾಸ್ತಾದಿಗಳಲ್ಲಿಯೂ ಮಾಡಲೇಬೇಕು. ಮಲಮಾಸದಲ್ಲಿ ಮಾತ್ರ ಎರಡನೇ ಮೊದಲಾದ ಯಾವ ಉಪಾಕರ್ಮವನ್ನೂ ಮಾಡಕೂಡದು. ನೂತನ ವಟುಗಳಿಗೆ ಶ್ರಾವಣ ಮಾಸದ ಪಂಚಮೀ, ಹಸ್ತ, ಶ್ರವಣ ನಕ್ಷತ್ರಗಳಲ್ಲಿ ಮಾಡುವುದಕ್ಕೆ ಗುರ್ವಸ್ತಾದಿಗಳಿಂದ ತೊಂದರೆಯುಂಟಾದರೆ, ಭಾದ್ರಪದ ಮಾಸದ ಪಂಚಮೀ ಶ್ರವಣ ಮೊದಲಾದುವನ್ನು ಗ್ರಹಿಸಬೇಕು. ಪ್ರಥಮೋಪಾಕರ್ಮವನ್ನು ಸ್ವಸ್ತಿವಾಚನ, ನಾಂದೀಪುರಸ್ಸರವಾಗಿ ಮಾಡಬೇಕು. "ಮೌಂಜೀಂ ಯಜ್ಞೋಪವೀತಂಚ ನವಂ ದಣ್ಡಂಚ ಧಾರಯೇತ್ । ಅಜಿನಂ ಕಟಿಸೂತ್ರಂಚ ನವಂ ವಸ್ತ್ರಂ ತಥೈವಚ ॥೧॥"

ಹೊಸದಾದ ಮೌಂಜಿ, ಯಜ್ಞೋಪವೀತ, ದಣ್ಡ, ಅಜಿನ (ಚರ್ಮ) ಕಟಿಸೂತ್ರ (ಉಡಿದಾರ) ವಸ್ತ್ರ ಇವುಗಳನ್ನು ಧಾರಣೆಮಾಡಬೇಕು. ಎಂಬದಾಗಿ ಪ್ರತಿ ವರ್ಷದಲ್ಲಿಯೂ ಬ್ರಹ್ಮಚಾರಿಗಳಿಗೆ ನಿಯಮವುಂಟು. ಉಪಾಕರ್ಮ, ಉತ್ಸರ್ಜನೆ ಇವೆರಡನ್ನೂ ಬ್ರಹ್ಮಚಾರಿ, ಸಮಾವೃತ, ಗೃಹಸ್ಥ, ವಾನಪ್ರಸ್ಥ ಇವರೆಲ್ಲರೂ ಮಾಡಬೇಕು. 'ಉಪಾಕರ್ಮದಿನೇಥವಾ' ಎಂಬ ವಚನಾನುಸಾರವಾಗಿ ಈಗ ಎಲ್ಲರೂ ಉಪಾಕರ್ಮದಿನದಲ್ಲಿಯೇ ಉತ್ಸರ್ಜನೆಯನ್ನೂ ಮಾಡುತ್ತಿರುವುದರಿಂದ ಉತ್ಸರ್ಜನೆಯ ಕಾಲನಿರ್ಣಯವು ಅನುಪಯೋಗವಾದ್ದರಿಂದ ಅದರ ಕಾಲವಿಚಾರವನ್ನು ಇಲ್ಲಿ ವಿಸ್ತರಿಸಲಿಲ್ಲ. ಎಲ್ಲರೂ ಇತರ ಬ್ರಾಹ್ಮಣರೊಡನೆ ಸೇರಿ, ಉತ್ಸರ್ಜನೋಪಾಕರ್ಮಗಳನ್ನು ಮಾಡುವ ಪಕ್ಷದಲ್ಲಿ ಲೌಕಿಕಾಗ್ನಿಯಿಂದ ಮಾಡಬೇಕು, ಒಬ್ಬೊಬ್ಬರೇ ಮಾಡುವುದಾದರೆ ತಮ್ಮತಮ್ಮ ಗೃಹ್ಯಾಗ್ನಿಯಲ್ಲಿ ಮಾಡಬೇಕು. ಕಾತ್ಯಾಯನರು ಮಾತ್ರ 'ಔಪವಸಥ್ಯಾಗ್ನಿ' (ಗೃಹ್ಯಾಗ್ನಿ) ಯಲ್ಲಿಯೇ ಮಾಡಬೇಕಲ್ಲದೆ, ಲೌಕಿಕಾಗ್ನಿಯಲ್ಲಿ ಮಾಡಕೂಡದು, ಋಗ್ವೇದಿ ಮೊದಲಾದವನು ತಾನು ಚತುರವತ್ತಿಯಾಗಿ ಅನೇಕಚತುರವತ್ತಿಗಳೊಡನೆ ಉಪಾಕರ್ಮಾದಿಗಳನ್ನು ಮಾಡುತ್ತಿರುವಾಗ ಯಾವನಾದರೂ ಜಾಮದಗ್ನ್ಯನಾದ (ಜಮದಗ್ನಿ ಗೋತ್ರೋತ್ಪನ್ನ) ಪಂಚಾವತ್ತಿಯು ಇರುವ ಪಕ್ಷದಲ್ಲಿ, ಚತುರವತ್ತಿಗಳಿಗೂ ಪಂಚಾವತ್ತಿತ್ವವನ್ನು ವಿಕಲ್ಪವಾಗಿ ಹೇಳಿರೋಣದರಿಂದ, ಅವನ ಉದ್ದೇಶದಿಂದ ಪಂಚಾವತ್ತಿತ್ವವನ್ನೇ ಮಾಡಬಹುದು. ಇದರಿಂದ ಚತುರವತ್ತಿಗಳಿಗೆ ಕರ್ಮವು ಸಾದ್ಗುಣ್ಯವಾಗದೇ ಹೋಗುವುದಿಲ್ಲ. ಉಪಾಕರ್ಮೋತ್ಸರ್ಜನೆಗಳನ್ನು ಮಾಡದಿದ್ದರೆ ದೋಷವುಂಟಾಗುವುದಾದ್ದರಿಂದ ಇವೆರಡನ್ನೂ ಪ್ರತಿವರ್ಷವೂ ಮಾಡಬೇಕು. ಇವುಗಳನ್ನು ಮಾಡದಿದ್ದರೆ ಪ್ರಾಯಶ್ಚಿತ್ತರೂಪವಾಗಿ ಪ್ರಾಜಾಪ್ರತ್ಯ ಕೃಚ್ಛ್ರವನ್ನಾಗಲೀ, ಉಪವಾಸವನ್ನಾಗಲೀ ಮಾಡಬೇಕೆಂದು ನಿರ್ಣಯಸಿಂಧುವೊಂದರಲ್ಲಿ ಹೇಳಿದೆ. ಎಲ್ಲಾ ಗ್ರಂಥಗಳಲ್ಲಿಯೂ ಹೇಳಿಲ್ಲ. ಉಪಾಕರ್ಮದಲ್ಲಿಯೂ, ಉತ್ಸರ್ಜನೆಯಲ್ಲಿಯೂ ಋಷಿಪೂಜೆಯನ್ನು ಮಾಡಬೇಕು. ಉತ್ಸರ್ಜನೆಯೊಂದರಲ್ಲಿಯೇ ಋಷ್ಯಾದಿತರ್ಪಣವು. ಇಲ್ಲಿ ವಿವಾಹವಾದವರು ತಿಲತರ್ಪಣ ಮಾಡುವುದರಿಂದ

ದೋಷವಿಲ್ಲ. ಇಲ್ಲಿ 'ಅಧೀತಾನಾಂ ಛಂದಸಾಮಾಪ್ಯಾಯನದ್ವಾರಾ ಶ್ರೀಪರಮೇಶ್ವರಪ್ರೀತ್ಯರ್ಥಂ ಉಪಾಕರ್ಮದಿನೇ ಅದ್ಯ ಉತ್ಸರ್ಜನಾಖ್ಯಂ ಕರ್ಮ ಕರಿಷ್ಯೇ' ಕಲ್ತಿರತಕ್ಕ ವೇದಭಾಗಕ್ಕೆ ಬಲವುಂಟಾಗಿ ಪರಮೇಶ್ವರನಿಗೆ ಪ್ರೀತಿಯುಂಟಾಗುವುದಕ್ಕಾಗಿ ಈ ಉಪಾಕರ್ಮದಿನದಲ್ಲಿ ಉತ್ಸರ್ಜನೆಯನ್ನು ಮಾಡುವೆನು. ಎಂದು ಸಂಕಲ್ಪವನ್ನು ಮಾಡಬೇಕು.

ಉಪಾಕರ್ಮದಲ್ಲಿ 'ಅಧೀತಾನಾಂ ಅಧ್ಯೇಷ್ಯಮಾಣಾನಾಂ ಛಂದಸಾಂ ಯಾತಯಾಮತಾನಿರಾಸೇನ ಆಪ್ಯಾಯನದ್ವಾರಾ ಶ್ರೀಪರಮೇಶ್ವರ ಪ್ರೀತ್ಯರ್ಥಂ' ಈಗ ಕಲ್ತಿರುವ, ಮುಂದೆ ಕಲಿವ ವೇದಭಾಗಗಳಿಗೆ ಕಾಲವನ್ನು ಕಳೆದದ್ದರಿಂದುಂಟಾದ ದೋಷವು ನಿವಾರಣೆಯಾಗಿ, ವೀರ್ಯವತ್ತುಂಟಾಗುವುದರ ಮೂಲಕ ಪರಮೇಶ್ವರನಿಗೆ ಪ್ರೀತಿಯಾಗಲಿ, ಎಂದು ಸಂಕಲ್ಪವು. ಉಳಿದ ಪ್ರಯೋಗವು ಅವರವರ ಶಾಖಾಗೃಹ್ಯಸೂತ್ರದಂತೆ ನಡೆಯಬೇಕು. ಈ ಕಾಲದಲ್ಲಿ ನದಿಗಳಿಗೆ ರಜೋದೋಷವಿಲ್ಲ. ಬ್ರಹ್ಮಾದಿದೇವತೆಗಳೂ, ಋಷಿಗಳೂ ನೀರಿನಲ್ಲಿ ವಾಸಿಸುತ್ತಿರುವುದರಿಂದ ಸ್ನಾನಮಾಡಿದರೆ ಎಲ್ಲ ದೋಷಗಳೂ ನಿವಾರಣೆಯಾಗುವುವು. ಋಷಿಪೂಜೆಯನ್ನು ಮಾಡಿದ ಸ್ಥಳದಲ್ಲಿರುವ ನೀರಿನಲ್ಲಿ ಸ್ನಾನ ಮಾಡುವುದರಿಂದಲೂ, ಪಾನಮಾಡುವುದರಿಂದಲೂ ಇಷ್ಟಾರ್ಥಗಳೆಲ್ಲವೂ ಕೈಗೂಡುವವು. ಇಂತು ಎಲ್ಲ ಶಾಖೆಯವರಿಗೂ ಸಾಮಾನ್ಯ ನಿರ್ಣಯವು.

### ರಕ್ಷಾಬಂಧನವು.

ರಕ್ಷಾಬಂಧನವು.—ಈ ಪೌರ್ಣಮಿಯು ಭದ್ರಾತಿಥಿಯಲ್ಲದಿರುವಾಗ ಉದಯಾರಭ್ಯ ಮೂರುಮುಹೂರ್ತ ವ್ಯಾಪ್ತಿ ಇದ್ದರೆ, ಅಪರಾಹ್ಣದಲ್ಲಾಗಲೀ, ಪ್ರದೋಷದಲ್ಲಾಗಲೀ ರಕ್ಷಾಬಂಧನವನ್ನು ಮಾಡಬೇಕು. ಸೂರ್ಯೋದಯಾನಂತರದಲ್ಲಿ ಮೂರುಮುಹೂರ್ತಕ್ಕಿಂತ ಕಡಮೆಯಾಗಿದ್ದರೆ, ಭದ್ರಾತಿಥಿಯಲ್ಲದ ಪೂರ್ವದಿನದಲ್ಲಿ ಪ್ರದೋಷ ಮೊದಲಾದ ಕಾಲದಲ್ಲಿ ಮಾಡಬೇಕು. ಇದನ್ನು ಗ್ರಹಣ ಅಥವಾ ಸಂಕ್ರಾಂತಿ ದಿನದಲ್ಲಾದರೂ ಮಾಡಲೇಬೇಕು. 'ಯೇನ ಬದ್ಧೋ ಬಲೀ ರಾಜಾ ದಾನವೇಂದ್ರೋ ಮಹಾಬಲಃ। ತೇನತ್ವಾಮಭಿಬಧ್ನಾಮಿರಕ್ಷೇಮಾಚಲಮಾಚಲ॥೧॥' ಬಹು ಬಲಿಷ್ಠನಾಗಿಯೂ, ರಾಕ್ಷಸಶ್ರೇಷ್ಠನಾಗಿಯೂ ಇದ್ದ ಬಲಿಚಕ್ರ

ವರ್ತಿಯು ಯಾವ ನಿನ್ನಿಂದ ಕಟ್ಟಲ್ಪಟ್ಟನೋ ಅಂತಹ ನಿನ್ನನ್ನು ನಾನು ಕಟ್ಟಿಕೊಳ್ಳುತ್ತೇನೆ. ಎಲೈ ರಕ್ಷೆಯೇ ! ನೀನು ಚಲಿಸದೆ ಸ್ಥಿರವಾಗಿರು॥೧॥ ಎಂಬುದೇ ಮಂತ್ರವು. ಈ ಪೌರ್ಣಮಿಯಲ್ಲಿಯೇ ಹಯಗ್ರೀವೋತ್ಪತ್ತಿಯು. ಶ್ರಾವಣ ಪೌರ್ಣಮಿಯು ವೃದ್ಧಾಚಾರ ಪ್ರಕಾರವಾಗಿ ಮೂರುಮುಹೂರ್ತ ಸಾಯಾಹ್ನ ವ್ಯಾಪ್ತಿಯುಳ್ಳದ್ದಾಗಿಯೂ, ಪೂರ್ವತಿಥಿಯ ವೇಧೆಯುಳ್ಳದ್ದಾಗಿಯೂ ಇರಬೇಕು. ಮೂರು ಮುಹೂರ್ತಕ್ಕಿಂತ ಕಡಮೆಯಾಗಿ ಸಾಯಾಹ್ನಕ್ಕೆ ವ್ಯಾಪ್ತಿ ಇದ್ದರೆ ಎರಡನೆಯ ತಿಥಿಯನ್ನು ಗ್ರಹಿಸಬೇಕು. ,ಈ ಪೌರ್ಣಮಿಯಲ್ಲಿಯೇ ಆಶ್ವಲಾಯನರು ಶ್ರವಣಾಕರ್ಮವನ್ನೂ, ಸರ್ಪಬಲಿಯನ್ನೂ ರಾತ್ರಿಯಲ್ಲಿ ಮಾಡಬೇಕೆಂದು ಹೇಳಿದೆ ತೈತ್ತಿರೀಯರಿಗೆ ಸರ್ಪಬಲಿಯನ್ನೊಂದನ್ನೇ ಹೇಳಿದೆ. ಕಾತ್ಯಾಯನರೂ, ಸಾಮಕರೂ, ಶ್ರವಣಾಕರ್ಮ ಸರ್ಪಬಲಿಗಳೆರಡನ್ನೂ ಮಾಡಬೇಕು. ಶ್ರವಣಾಕರ್ಮ, ಸರ್ಪಬಲಿ, ಆಶ್ವಯುಜೀ, ಪ್ರತ್ಯವರೋಹಣ ಮೊದಲಾದ ಪಾಕಗಳನ್ನು ಮಾಡುವವರು ಆಯಾ ಕಾಲಗಳಲ್ಲಿ ಮಾಡದೇಹೋದರೆ ಪ್ರಾಜಾಪತ್ಯ ಕೃಚ್ಛ್ರವನ್ನು ಪ್ರಾಯಶ್ಚಿತ್ತವಾಗಿ ಮಾಡಬೇಕು. ಅದನ್ನು ಬೇರೆ ಕಾಲಗಳಲ್ಲಿ ಮಾಡಕೂಡದು: ಶ್ರವಣಾಕರ್ಮಾದಿಗಳನ್ನು ಮಾಡುವವರು ಹೆಂಡತಿಯು ರಜಸ್ವಲೆಯಾಗಿದ್ದಾಗ್ಯೂ ಮಾಡಬೇಕು. ಹೊಸದಾಗಿ ಪ್ರಾರಂಭಿಸುವವರು ಮಾತ್ರ ಈ ಸಂದರ್ಭದಲ್ಲಿ ಮಾಡಕೂಡದು. ಇಲ್ಲಿ ಸೂರ್ಯಾಸ್ತಕಾಲ ಮೊದಲ್ಗೊಂಡು ಕರ್ಮವು ಪೂರೈಸುವವರೆಗೂ ವ್ಯಾಪ್ತಿಯುಳ್ಳ ಪೂರ್ಣಿಮೆಯು ಪೂರ್ವದಿನದಲ್ಲಿಯೇ ಆಗಿದ್ದರೆ, ಮೊದಲನೆಯ ದಿನವನ್ನೇ ಗ್ರಹಿಸಬೇಕು. ಎರಡು ದಿನಗಳಲ್ಲಿಯೂ ವ್ಯಾಪ್ತಿಯಿದ್ದರೂ, ಅಥವಾ ಇಲ್ಲದಿದ್ದರೂ ಎರಡನೆಯ ದಿನವನ್ನು ಗ್ರಹಿಸಬೇಕು. ತಮ್ಮತಮ್ಮ ಸೂತ್ರಗಳಿಂದ ಪ್ರಯೋಗವನ್ನು ತಿಳಿಯಬೇಕು ಶ್ರಾವಣ ಕೃಷ್ಣಚತುರ್ಥಿಯನ್ನು ಮೊದಲುಮಾಡಿಕೊಂಡು ಜೀವಮಾನದವರೆಗೆ ಅಥವಾ ಇಪ್ಪತ್ತೊಂದು ವರ್ಷಗಳವರೆಗೆ ಇಲ್ಲವೇ ಒಂದು ವರ್ಷದವರೆಗೆ ಪ್ರತಿ ಒಂದು ಕೃಷ್ಣಚತುರ್ಥಿಯಲ್ಲಿಯೂ ಸಂಕಷ್ಟಚತುರ್ಥೀವ್ರತವನ್ನು ಮಾಡಬೇಕು. ಶಕ್ತಿಯಿಲ್ಲದವರು ಪ್ರತಿ ವರ್ಷದ ಶ್ರಾವಣಚತುರ್ಥಿಯಲ್ಲಿಯೇ ಮಾಡಬೇಕು. ಇಲ್ಲಿ ಚಂದ್ರೋದಯ

ವ್ಯಾಪ್ತಿಯಿಂದ ತಿಥಿನಿರ್ಣಯವನ್ನು ಮೊದಲ ಪರಿಚ್ಛೇದದಲ್ಲಿ ತಿಳಿಸಿದೆ. ಕೌಸ್ತುಭಾದಿಗ್ರಂಥಗಳಿಂದ ಉದ್ಯಾಪನಾಸಹಿತವಾದ ವ್ರತವಿಧಿಯನ್ನು ತಿಳಿಯತಕ್ಕದ್ದು.

### ಜನ್ಮಾಷ್ಟಮೀನಿರ್ಣಯವು.

ಜನ್ಮಾಷ್ಟಮಿಯ ನಿರ್ಣಯವು.— ಅಷ್ಟಮಿಯು ಶುದ್ಧವೆಂತಲೂ ವಿದ್ಧವೆಂತಲೂ ಎರಡು ಬಗೆಯಾಗಿರುವುದು, ಹಗಲಿನಲ್ಲಾಗಲಿ, ರಾತ್ರಿಯಲ್ಲಾಗಲಿ ಸಪ್ತಮಿಯ ಯೋಗವಿಲ್ಲದೆ ಯಾವ ದಿನದಲ್ಲಿ ಎಷ್ಟುಹೊತ್ತು ಇರುತ್ತದೆಯೋ ಆ ದಿನದಲ್ಲಿ ಅಷ್ಟುಹೊತ್ತು ಶುದ್ಧವೆನಿಸುವುದು. ಹಗಲಿನಲ್ಲಾಗಲಿ ರಾತ್ರಿಯಲ್ಲಾಗಲಿ ಸಪ್ತಮಿಯಯೋಗವು ಯಾವದಿನದಲ್ಲಿ ಎಷ್ಟುಹೊತ್ತು ಇರುವುದೋ ಅಷ್ಟುಹೊತ್ತು ವಿದ್ಧವೆನಿಸುವುದು ಶುದ್ಧವೂ, ವಿದ್ಧವೂ ರೋಹಿಣೀಯುಕ್ತವಾದದ್ದೆಂತಲೂ, ರೋಹಿಣೀಯೋಗರಹಿತವಾದದ್ದೆಂತಲೂ ಪುನಃ ಎರಡುಬಗೆಯಾಗಿರುವುದು. ರೋಹಿಣಿಯ ಯೋಗವಿಲ್ಲದ ಅಷ್ಟಮಿಯ ಭೇದಗಳು- ಸಪ್ತಮಿ ೫೯-೫೯, ಅಷ್ಟಮಿ ೫೮-೫೫, ಎರಡನೆಯ ಅಷ್ಟಮಿಯೇ ಇಲ್ಲದ್ದರಿಂದ ಇದು ಶುದ್ಧಾಷ್ಟಮಿಯೆಂಬುದಕ್ಕೆ ಸಂದೇಹವಿಲ್ಲ. ಸಪ್ತಮಿ ೨, ಅಷ್ಟಮಿ ೫೫, ಮತ್ತೊಂದು ದಿನದಲ್ಲಿ ಅಷ್ಟಮಿಯೇ ಇಲ್ಲದಿರುವುದರಿಂದ, ಈ ವಿದ್ಧವಾದ ಅಷ್ಟಮಿಯಲ್ಲಿಯೂ ಸಂದೇಹವಿಲ್ಲ. ಎರಡು ದಿನಗಳಲ್ಲಿಯೂ ಅಷ್ಟಮಿ ಇರುವ ಸಂದರ್ಭದಲ್ಲಿ ಪೂರ್ವದಿನದ ನಿಶೀಥ (ಅರ್ಧರಾತ್ರಿ) ವ್ಯಾಪ್ತಿಯುಳ್ಳದ್ದೆಂತಲೂ, ಎರಡನೆಯ ದಿನದಲ್ಲಿ ಮಾತ್ರ ನಿಶೀಥವ್ಯಾಪ್ತಿಯುಳ್ಳದ್ದೆಂತಲೂ, ಎರಡು ದಿನಗಳಲ್ಲಿಯೂ ನಿಶೀಥವ್ಯಾಪ್ತಿಯುಳ್ಳದ್ದೆಂತಲೂ, ಎರಡು ದಿನಗಳಲ್ಲಿಯೂ ನಿಶೀಥವ್ಯಾಪ್ತಿ ಇಲ್ಲದ್ದೆಂತಲೂ ನಾಲ್ಕು ಪಕ್ಷಗಳುಂಟು. ಸ್ಥೂಲದೃಷ್ಟಿಯಿಂದ ನೋಡಿದರೆ ರಾತ್ರಿಯ ಎಂಟನೆಯ ಮುಹೂರ್ತವು;(೧೬ ಗಳಿಗೆ) ನಿಶೀಥವೆನ್ನಬಹುದು. ಉದಾಹರಣೆ—ಪೂರ್ವದಿನದಲ್ಲಿ ಮಾತ್ರ ನಿಶೀಥವ್ಯಾಪ್ತಿಯುಳ್ಳದ್ದು-ಸಪ್ತಮಿ ೪೦, ಅಷ್ಟಮಿ, ೪೨, ಇದರಲ್ಲಿ ಸಪ್ತಮೀವೇಧೆಯುಳ್ಳ ಪೂರ್ವದಿನದ ಅಷ್ಟಮಿಯ ದಿನವೇ ಉಪೋಷ್ಯವು. ಅಥವಾ ಅಷ್ಟಮೀ ೬೧-೪, ಇದು ಶುದ್ಧಾಧಿಕವಾಗಿದ್ದರೂ ಪೂರ್ವದಿನದ ಅಷ್ಟಮಿಯನ್ನೇ ಗ್ರಹಿಸಬೇಕು. ಎರಡನೆಯ ದಿನದಲ್ಲಿಯೇ ನಿಶೀಥವ್ಯಾ

ಪ್ತಿಯುಳ್ಳದಕ್ಕೆ-ಸಪ್ತಮಿ ೪೩, ಅಷ್ಟಮಿ ೪೬, ಇಲ್ಲಿ ಎರಡನೆಯು ಅಷ್ಟಮಿಯೇ ಉಪೋಷ್ಯದಿನವು. ಸಪ್ತಮೀ೪೨, ಅಷ್ಟಮೀ೪೬, ಇದು ಎರಡು ದಿನಗಳಲ್ಲಿಯೂ ನಿಶೀಥವ್ಯಾಪ್ತಿಯುಳ್ಳ ಅಷ್ಟಮಿಯು. ಇಲ್ಲಿಯೂ ಎರಡನೆಯದನ್ನೇ ಗ್ರಹಿಸಬೇಕು. ಸಪ್ತಮಿ ೪೩, ಅಷ್ಟಮಿ ೪೨, ಇಲ್ಲಿಯೂ ಎರಡನೆಯ ಅಷ್ಟಮಿಯನ್ನೇ ಗ್ರಹಣಮಾಡಬೇಕು. ಇಲ್ಲಿ ಎಲ್ಲಾಕಡೆಗಳಲ್ಲಿಯೂ ಸಪ್ತಮೀ ಯುಕ್ತವಾದ ಅಷ್ಟಮಿಯಲ್ಲಿ ರಾತ್ರಿಯ ಪೂರ್ವಾರ್ಧದ (ಮೊದಲ ಅರ್ಧ) ಕೊನೆಯಲ್ಲಿ ಕಲಾಮಾತ್ರವಾದರೂ ಅಷ್ಟಮಿಯು ಇದ್ದರೇನೇ ನಿಶೀಥವ್ಯಾಪ್ತಿ ಇದೆ ಎಂದು ತಿಳಿಯತಕ್ಕದ್ದು. ನವಮೀಯುಕ್ತವಾದ ಅಷ್ಟಮಿಗೆ ರಾತ್ರಿಯ ಉತ್ತರಾರ್ಧದ (ಎರಡನೆಯ ಅರ್ಧ) ಪ್ರಾರಂಭದಲ್ಲಿ ಇದ್ದರೇನೇ ನಿಶೀಥವ್ಯಾಪ್ತಿ ಇದೆ ಎಂದು ಗೊತ್ತುಮಾಡಬೇಕು. ಸಪ್ತಮೀ ದಿನದ ಅಷ್ಟಮಿಯು ರಾತ್ರಿಯ ಉತ್ತರಭಾಗದಲ್ಲಿ ಮಾತ್ರವಿದ್ದರೂ ನವಮೀದಿನದ ಅಷ್ಟಮಿಯು ರಾತ್ರಿಯ ಪೂರ್ವಭಾಗದಲ್ಲಿಮಾತ್ರವಿದ್ದರೂ ನಿಶೀಥವ್ಯಾಪ್ತಿ ಇಲ್ಲವೆಂತಲೇ ಭಾವಿಸಬೇಕು. ಹೀಗೆಯೇ ರೋಹಿಣೀಯುಕ್ತವಾದ ಅಷ್ಟಮಿಯ ಭೇದಗಳಲ್ಲಿಯೂ ತಿಳಿಯಬೇಕು. ರೋಹಿಣೀಯುಕ್ತವಾದ ಅಷ್ಟಮಿಯಲ್ಲಿಯೂ, ಮೊದಲದಿನದ ರಾತ್ರಿಯಲ್ಲಿಯೇ ಅಷ್ಟಮೀರೋಹಿಣಿಗಳ ಯೋಗವೆಂತಲೂ, ಎರಡನೆಯ ದಿನದ ರಾತ್ರಿಯಲ್ಲಿಯೇ ಯೋಗವೆಂತಲೂ, ಎರಡು ದಿನಗಳ ರಾತ್ರಿಯಲ್ಲಿಯೂ ಯೋಗವೆಂತಲೂ ಮೂರು ಪಕ್ಷಗಳಿವೆ.

ರೋಹಿಣೀಯುಕ್ತವಾದ ಅಷ್ಟಮೀಭೇದಗಳು.

ರೋಹಿಣೀಯುಕ್ತಾಷ್ಟಮೀಭೇದಗಳು —ಸಪ್ತಮಿ ೪೦, ಆ ದಿನ ಕೃತ್ತಿಕೆ ೫೪, ಅಷ್ಟಮಿ ೪೬, ಆ ದಿನ ರೋಹಿಣಿ ೫೬, ಇದು ಪೂರ್ವದಿನದ ನಿಶೀಥದಲ್ಲಿಯೇ ರೋಹಿಣೀ ಅಷ್ಟಮಿಗಳಿಗೆ ಯೋಗವು. ಇಲ್ಲಿ-ಸಪ್ತಮೀವಿದ್ಧವಾದ ಅಷ್ಟಮಿಯಲ್ಲಿಯೇ ಉಪೋಷ್ಯ ಮಾಡಬೇಕು. ಸಪ್ತಮಿ ೪೨, ಆ ದಿನದಲ್ಲಿ ಕೃತ್ತಿಕೆ ೫೦, ಅಷ್ಟಮಿ ೪೦ ಆ ದಿನವೇ ರೋಹಿಣಿ ೪೬, ಎರಡನೆಯ ದಿನ ರಾತ್ರಿಯಲ್ಲಿಯೇ ಯೋಗವು. ಇಲ್ಲಿ-ಎರಡನೆಯ ಅಷ್ಟಮಿಯನ್ನೇ ಗ್ರಹಿಸಬೇಕು. ಸಪ್ತಮಿ ೪೨, ಕೃತ್ತಿಕಾ ೪೪, ಅಷ್ಟಮಿ ೪೩, ರೋಹಿಣಿ ೪೮, ಇದು ಎರಡು ದಿನದ ನಿಶೀಥದಲ್ಲಿಯೂ

ಯೋಗವುಳ್ಳದ್ದು. ಇಲ್ಲಿ-ಎರಡನೆಯ ದಿನದಲ್ಲಿಯೇ ಉಪವಾಸವು. ರೋಹಿಣೀಯುಕ್ತವಾದ ಅಷ್ಟಮಿಯಲ್ಲಿ ಪೂರ್ವಾಪರದಿನಗಳೆರಡರ ನಿಶೀಥದಲ್ಲಿ ರೋಹಿಣಿಯ ಯೋಗವಿಲ್ಲದಿರುವಿಕೆಯು ನಾನಾವಿಧವಾಗಿರುವುದು. ಅವುಗಳಲ್ಲಿ ಎರಡನೆಯ ದಿನದಲ್ಲಿಯೇ ನಿಶೀಥವ್ಯಾಪ್ತಿಯುಳ್ಳ ಅಷ್ಟಮಿಯೂ, ಎರಡನೆಯ ದಿನದಲ್ಲಿಯೇ ನಿಶೀಥವು ಕಳೆದಮೇಲೆ ರೋಹಿಣಿಯ ವ್ಯಾಪ್ತಿಯೂ ಇರುವುದೊಂದು ಪಕ್ಷವು. ಉ॥ ಸಪ್ತಮಿ ೪೩, ಅಷ್ಟಮಿ ೫೦ ಅಷ್ಟಮೀದಿನದಲ್ಲಿ ಕೃತ್ತಿಕೆ ೪೬, ಈ ಪಕ್ಷದಲ್ಲಿ-ಎರಡನೆಯ ಅಷ್ಟಮಿಯನ್ನೇ ಗ್ರಹಿಸಬೇಕು. ಇದರ ಸಾಮ್ಯದಿಂದ ಮೊದಲದಿನದಲ್ಲಿಯೇ ನಿಶೀಥವ್ಯಾಪ್ತಿಯೂ, ಮೊದಲದಿನದಲ್ಲಿಯೇ ನಿಶೀಥಾನಂತರದಲ್ಲಿ ರೋಹಿಣೀವ್ಯಾಪ್ತಿಯೂ ಇರುವುದು ಎಂಬ ಪಕ್ಷದಲ್ಲಿಯೂ, ಮೊದಲನೆಯ ಅಷ್ಟಮಿಯನ್ನೇ ಗ್ರಹಿಸಬೇಕು. ಎರಡು ದಿನಗಳಲ್ಲಿಯೂ ನಿಶೀಥ ಕಳೆದಮೇಲೆ ರೋಹಿಣೀಯೋಗವೂ, ಎರಡನೆಯ ದಿನದಲ್ಲಿಯೇ ನಿಶೀಥವ್ಯಾಪ್ತಿಯೂ ಇರುವಿಕೆ ಎಂಬುದು ಎರಡನೆಯ ಪಕ್ಷವು. ಉ॥ ಸಪ್ತಮಿ ೪೮ ಆ ದಿನ ಕೃತ್ತಿಕಾ ೩೦, ಅಷ್ಟಮಿ ೪೮, ರೋಹಿಣಿ ೨೫, ಇಲ್ಲಿಯೂ ಎರಡನೆಯದನ್ನೇ ಗ್ರಹಿಸಬೇಕು. ಎರಡು ದಿನಗಳಲ್ಲಿಯೂ ನಿಶೀಥವಲ್ಲದ ಕಾಲದಲ್ಲಿ ರೋಹಿಣೀಯೋಗವೂ, ಮೊದಲ ದಿನವೇ ನಿಶೀಥವ್ಯಾಪ್ತಿಯೂ ಉಳ್ಳದ್ದೆಂಬುದು ಮೂರನೆಯ ಪಕ್ಷವು. ಉ॥ ಸಪ್ತಮಿ ೨೫, ಕೃತ್ತಿಕಾ ೪೮, ಅಷ್ಟಮೀ ೨೦, ರೋಹಿಣೀ ೪೯, ರೋಹಿಣಿ ಯೋಗವು ಎರಡು ದಿನಗಳಿಗೂ ಇದ್ದಾಗ್ಯೂ ಪೂರ್ವದಿನಕ್ಕೆ ಸಪ್ತಮೀ ವೇಧೆಯಿರುವುದರಿಂದ ಇಲ್ಲಿಯೂ ಎರಡನೆಯದೇ ಗ್ರಾಹ್ಯವೆನ್ನಿಸುವುದು. ಅಥವಾ ಅಷ್ಟಮಿ ೬೦-೪, ಕೃತ್ತಿಕಾ ೫೦, ಇಲ್ಲಿ ಮೊದಲನೆಯದನ್ನು ಗ್ರಹಿಸತಕ್ಕದ್ದು. ಏಕೆಂದರೆ.—ಹಗಲು-ರಾತ್ರಿಗಳೆರಡರಲ್ಲಿಯೂ ರೋಹಿಣಿಯ ಯೋಗವು ಇದ್ದಾಗ್ಯೂ ಪೂರ್ವದಿನವೂ ಶುದ್ಧವಾಗಿಯೂ ಪೂರ್ಣವ್ಯಾಪ್ತಿಯುಳ್ಳದ್ದಾಗಿಯೂ ಇರುವುದು, ಎರಡು ದಿನಗಳಲ್ಲಿಯೂ ನಿಶೀಥವ್ಯಾಪ್ತಿ ಇದ್ದು ಎರಡನೆಯ ದಿನದಲ್ಲಿಯೇ ನಿಶೀಥವಲ್ಲದ ಕಾಲದಲ್ಲಿ ರೋಹಿಣೀಯೋಗವುಳ್ಳದ್ದೆಂಬುದು ನಾಲ್ಕನೆಯದು. ಉ॥ ಸಪ್ತಮೀ ೪೯, ಅಷ್ಟಮಿ ೪೭, ಕೃತ್ತಿಕಾ ೪೬, ಇಲ್ಲಿಯೂ ಪರದಿನವನ್ನೇ ಗ್ರಹಿಸಬೇಕು. ಎರಡು ದಿನಗಳಲ್ಲಿಯೂ

ನಿಶೀಥವ್ಯಾಪ್ತಿಯೂ, ಮೊದಲದಿನದಲ್ಲಿಯೇ ನಿಶೀಥವಲ್ಲದಕಾಲದಲ್ಲಿ ರೋಹಿಣೀಯೋಗವೂ ಉಳ್ಳದ್ದೆಂಬುದೇ ಐದನೆಯ ಪಕ್ಷವು. ಉ= ಸಪ್ತಮೀ ೪೧,ಆದಿನ ರೋಹಿಣೀ ೪೨,ಅಷ್ಟಮಿ ೪೩,ಇಲ್ಲಿಯೂ ಮೊದಲನೆಯ ಅಷ್ಟಮಿಯಲ್ಲಿಯೇ ಉಪೋಷ್ಯವು.ಎರಡುದಿನಗಳಲ್ಲಿಯೂ ನಿಶೀಥವ್ಯಾಪ್ತಿಯೂ,ಎರಡುದಿನಗಳಲ್ಲಿಯೂನಿಶೀಥವಲ್ಲದಕಾಲದಲ್ಲಿರೋಹಿಣಿಯೋಗವೂ ಇರುವುದೆಂಬುದು ಆರನೆಯದು. ಉ= ಸಪ್ತಮೀ ೪೨, ಕೃತ್ತಿಕಾ ೪೮, ಅಷ್ಟಮೀ ೪೮, ರೋಹಿಣೀ ೪೨, ಇಲ್ಲಿ ಎರಡನೆಯ ಅಷ್ಟಮಿಯನ್ನೇ ಗ್ರಹಿಸಬೇಕು. ಎರಡು ದಿನಗಳಲ್ಲಿಯೂ ನಿಶೀಥವ್ಯಾಪ್ತಿ ಇಲ್ಲದೆ, ಮೊದಲನೆಯ ದಿನದಲ್ಲಿಯೇ ನಿಶೀಥವಲ್ಲದ ಕಾಲದಲ್ಲಿ ರೋಹಿಣೀಯೋಗವುಳ್ಳುದ್ದೆಂಬುದು ಏಳನೆಯದು. ಉ= ಸಪ್ತಮಿ ೪೮, ಆ ದಿನ ರೋಹಿಣಿ ೫೮, ಅಷ್ಟಮಿ ೪೨, ಇಲ್ಲಿ ಎರಡನೆಯದನ್ನೇ ಗ್ರಹಿಸಬೇಕು. ಈ ಪಕ್ಷದಲ್ಲಿಯೇ ಎರಡನೆಯ ದಿನದಲ್ಲೇ ಆಗಲಿ, (ಸಪ್ತಮಿ ೪೮, ಅಷ್ಟಮಿ ೪೨ ಆ ದಿನ ಕೃತ್ತಿಕೆ ೧೨) ಎರಡು ದಿನಗಳಲ್ಲೂ ಆಗಲಿ (ಸಪ್ತಮಿ ೪೮, ಕೃತ್ತಿಕಾ ೪೮, ಅಷ್ಟಮಿ ೪೨, ಕೃತ್ತಿಕಾ ೪೨,) ನಿಶೀಥವಲ್ಲದ ಕಾಲದಲ್ಲಿ ರೋಹಿಣೀಯೋಗವಿದ್ದಾಗ್ಯೂ ಎರಡನೆಯದೇ ಗ್ರಾಹ್ಯವೆಂಬುದು ಕೈಮುತಿಕನ್ಯಾಯದಿಂದ ಸಿದ್ಧವಾಗಿದೆ. ಮೊದಲನೆಯ ದಿನದಲ್ಲಿಯೇ ನಿಶೀಥವ್ಯಾಪ್ತಿಯೂ, ಎರಡನೆಯ ದಿನದಲ್ಲಿಯೇ ನಿಶೀಥವಲ್ಲದಕಾಲದಲ್ಲಿ ರೋಹಿಣಿ, ಯೋಗವೂ ಉಳ್ಳದ್ದೆಂಬುದೇ ಕೊನೆಯ ಪಕ್ಷವು. ಉ= ಸಪ್ತಮಿ ೫೦ ಅಷ್ಟಮಿ ೫೫, ಆ ದಿನ ಕೃತ್ತಿಕೆ ೫, ಅಥವಾ ಅಷ್ಟಮಿ ೬೦-೪, ಅಷ್ಟಮಿಯು ಉಳಿದಿರುವ ದಿನದಲ್ಲಿ ಕೃತ್ತಿಕೆ ೧, ಈ ಎರಡು ಉದಾಹರಣೆಗಳಲ್ಲಿಯೂ ಎರಡನೆಯದನ್ನೇ ಗ್ರಹಿಸತಕ್ಕದ್ದು. ರೋಹಿಣೀಯುಕ್ತವಾದ ಅಷ್ಟಮಿಯು ಅಲ್ಪಕಾಲವಿದ್ದಾಗ್ಯೂ ಪ್ರಶಸ್ತವಾದ್ದರಿಂದಲೂ, ಒಂದು ಮುಹೂರ್ತಕಾಲವಿದ್ದಾಗ್ಯೂ ಎರಡನೆಯ ಅಷ್ಟಮಿಯು ಯೋಗ್ಯವಲ್ಲದ್ದರಿಂದಲೂ ಮೊದಲ ತಿಥಿಗೆ ನಿಶೀಥವ್ಯಾಪ್ತಿ ಇರುವುದನ್ನೇ ಮುಖ್ಯವೆಂದು ಎಣಿಸಬೇಕಾದ್ದಿಲ್ಲವಾದ್ದರಿಂದಲೂ, ಎಲ್ಲ ಸಂದರ್ಭಗಳಲ್ಲಿಯೂ ಎರಡನೆಯ ದಿನದಲ್ಲಿ ಮುಹೂರ್ತಕ್ಕಿಂತ ಕಡಮೆಯಾಗಿರುವ ಅಷ್ಟಮಿಯನ್ನು ಗ್ರಹಿಸಕೂಡದು. ಮೊದಲನೆಯದೇ ಗ್ರಾಹ್ಯವೆಂದು ಪುರುಷಾರ್ಥ

ಚಿಂತಾಮಣಿಯಲ್ಲಿ ಹೇಳಿದೆ. ಎರಡನೆಯ ದಿನದಲ್ಲಿಯೇ ನಿಶೀಥವ್ಯಾಪ್ತಿಯೂ, ಮೊದಲನೆಯ ದಿನದಲ್ಲಿಯೇ ನಿಶೀಥವಲ್ಲದ ಕಾಲದಲ್ಲಿ ರೋಹಿಣಿಯ ವ್ಯಾಪ್ತಿಯೂ ಉಳ್ಳ ಅಷ್ಟಮಿಯು ಹೇಗೆಂದರೆ:—ಸಪ್ತಮಿ ೪೪. ರೋಹಿಣಿ ೫೫, ಅಷ್ಟಮಿ ೪೪, ಇಲ್ಲಿ-ವೇಧೆಯುಳ್ಳ ತಿಥಿಗೆ ನಿಶೀಥಾನಂತರದಲ್ಲಿ ರೋಹಿಣಿಯ ಯೋಗದಿಂದ ಪ್ರಯೋಜನವಿಲ್ಲವಾದ್ದರಿಂದ ಎರಡನೆಯದನ್ನೇ ಗ್ರಹಿಸಬೇಕು.

ಜನ್ಮಾಷ್ಟಮೀನಿರ್ಣಯಸಂಗ್ರಹವು.

ಜನ್ಮಾಷ್ಟಮಿಯ ಸಂಕ್ಷೇಪ ನಿರ್ಣಯವು.—ವಿಸ್ತಾರವಾಗಿ ಹೇಳಿರುವ ಅನೇಕ ಪಕ್ಷಗಳ ವಿಷಯದಲ್ಲಿ ಸಂಗ್ರಹಿಸಿ, ಪುರುಷಾರ್ಥ ಚಿಂತಾಮಣಿಯಲ್ಲಿ ಹೇಳಿರುವ ನಿರ್ಣಯವೆಂತೆಂದರೆ.—ಶುದ್ಧಸಮ, ಶುದ್ಧನ್ಯೂನ, ವಿದ್ಧಸಮ, ವಿದ್ಧನ್ಯೂನ. ಇವುಗಳಲ್ಲೊಂದಾಗಿರುವ ಕೇವಲ ಅಷ್ಟಮಿಯ ವಿಷಯದಲ್ಲಿ ಸಂದೇಹವೇ ಇಲ್ಲ. ಶುದ್ಧಾಧಿಕವಾದ ಅಷ್ಟಮಿಯನ್ನು ಮೊದಲನೆಯದನ್ನೇ ಗ್ರಹಿಸಬೇಕು. ವಿದ್ಧಾಧಿಕವಾದರೆ, ಪೂರ್ವದಿನದಲ್ಲಿಯೇ ನಿಶೀಥವ್ಯಾಪ್ತಿ ಇದ್ದರೆ ಮೊದಲನೆಯದನ್ನೂ, ಎರಡು ದಿನಗಳಲ್ಲಿಯೂ ನಿಶೀಥವ್ಯಾಪ್ತಿ ಇದ್ದರೂ ಅಥವಾ ಇಲ್ಲದಿದ್ದರೂ ಎರಡನೆಯದನ್ನೇ ಗ್ರಹಿಸಬೇಕು. ರೋಹಿಣಿಯ ಯೋಗವಿರುವಾಗಾದರೆ ಶುದ್ಧಸಮ, ಅಥವಾ ಶುದ್ಧನ್ಯೂನತಿಥಿಗೆ ಸ್ವಲ್ಪಕಾಲರೋಹಿಣಿಯ ಯೋಗವಿದ್ದಾಗ್ಯೂ ಸಂದೇಹವಿಲ್ಲ. ಶುದ್ಧಾಧಿಕತಿಥಿಯಲ್ಲಿ ಮೊದಲದಿನಕ್ಕಾಗಲಿ, ಎರಡುದಿನಗಳಿಗೂ ಆಗಲಿ ರೋಹಿಣೀಯೋಗವಿದ್ದಾಗ್ಯೂ, ಮೊದಲನೆಯದೇ ಗ್ರಾಹ್ಯವು. ಶುದ್ಧಾಧಿಕದಲ್ಲಿ ಎರಡನೆಯ ದಿನದಲ್ಲಿಯೇ ರೋಹಿಣಿಯ ಯೋಗವಿದ್ದಲ್ಲಿ ಮುಹೂರ್ತಕಾಲವಿದ್ದಾಗ್ಯೂ ಎರಡನೆಯದನ್ನೇ ಗ್ರಹಿಸಬೇಕು. ವಿದ್ಧಾಧಿಕದಲ್ಲಿ ಪೂರ್ವದಿನದಲ್ಲಿಯೇ ನಿಶೀಥಕ್ಕಿಂತ ಮೊದಲು ಅಥವಾ ನಿಶೀಥದಲ್ಲಿ ರೋಹಿಣಿಯ ಯೋಗವಿದ್ದರೆ ಮೊದಲನೆಯದನ್ನೇ ಗ್ರಹಿಸಬೇಕು. ಎರಡನೆಯದಿನದಲ್ಲಾಗಲೀ, ಎರಡುದಿನಗಳಲ್ಲಾಗಲೀ, ನಿಶೀಥದಲ್ಲಾಗಲೀ, ನಿಶೀಥವನ್ನು ಬಿಟ್ಟಾಗಲೀ ರೋಹಿಣಿಯ ಯೋಗವಿದ್ದರೆ, ಎರಡನೆಯದನ್ನೇ ಗ್ರಹಿಸಬೇಕು ಎಂಬುದು ಸಂಕ್ಷೇಪವಾಗಿ ನಿರ್ಣಯಸಂಗ್ರಹವು. ಇದು ಕೌಸ್ತುಭವೇ ಮೊದಲಾದ ನವೀನ ಗ್ರಂಥಗಳಿಗನುಸಾರವಾದ ಮಾಧ್ವಾಚಾರ್ಯರ ಅಭಿಪ್ರಾಯದಂತೆ ಇರುವ ಜನ್ಮಾಷ್ಟಮೀ ನಿರ್ಣಯವು.

ಮತಭೇಧಗಳು.

ಮತಭೇದಗಳು.—ಇಲ್ಲಿ ಕೆಲವರು:---ಕೇವಲ ಅಷ್ಟಮಿಯನ್ನು ಜನ್ಮಾಷ್ಟಮಿ ಎಂತಲೂ, ರೋಹಿಣಿಯಿಂದ ಕೂಡಿದರೆ ಅದೇ ಅಷ್ಟಮಿಯು ಜಯನ್ತಿ ಎಂತಲೂ, ಜಯನ್ತಿ, ಅಷ್ಟಮಿ ಇವೆರಡೂ ವ್ರತವಿಷಯದಲ್ಲಿ ಒಂದೇ ಎಂದು ಹೇಳುತ್ತಾರೆ. ಮತ್ತೆ ಕೆಲವರು—“ಜನ್ಮಾಷ್ಟಮಿಯ ವ್ರತವೂ, ಜಯಂತೀವ್ರತವೂ ಬೇರಾದದ್ದೆಂತಲೂ, ರೋಹಿಣಿಯ ಯೋಗವುಂಟಾಗದಿದ್ದರೆ ಜಯಂತೀವ್ರತಕ್ಕೆ ಲೋಪವುಂಟಾಗುವುದೆಂತಲೂ, ಅದರಿಂದ ಆಗ ಜನ್ಮಾಷ್ಟಮಿಯ ವ್ರತವನ್ನೇ ಮಾಡಬೇಕೆಂತಲೂ, ಯಾವ ವರ್ಷದಲ್ಲಿ ಜಯಂತೀಯೋಗವುಳ್ಳ ಜನ್ಮಾಷ್ಟಮಿಯು ಬರುವುದೋ ಆ ಅಷ್ಟಮಿಯು ಜಯಂತಿಯಲ್ಲಿ ಅಂತರ್ಭಾವವನ್ನು (ಐಕ್ಯವಾಗುವುದು) ಹೊಂದುವುದೆಂತಲೂ ಹೇಳುತ್ತಾರೆ. ಈ ಎರಡು ವ್ರತಗಳನ್ನೂ ಮಾಡುವುದರಿಂದ ಮಹಾಫಲವನ್ನೂ, ಬಿಡುವುದರಿಂದ ಪ್ರತ್ಯವಾಯವನ್ನೂ ಹೇಳಿರುವುದರಿಂದ ಇವೆರಡೂ ನಿತ್ಯವಾಗಿಯೂ, ಕಾಮ್ಯವಾಗಿಯೂ ಸಹ ಇರುವುದರಿಂದ ಜಯಂತೀ ದಿನದಲ್ಲಿ ನಿಶೀಥವೆಂಬ ಕರ್ಮಕಾಲದಲ್ಲಿ ಅಷ್ಟಮಿ ಮೊದಲಾದವುಗಳ ವ್ಯಾಪ್ತಿ ಇಲ್ಲದಿದ್ದಾಗ್ಯೂ ಹಿಂದೆ ಅನೇಕ ಪಕ್ಷಗಳಾಗಿ ತೋರಿಸಿರುವ ಎಲ್ಲಾ ವಚನಗಳನ್ನೂ ಗ್ರಹಿಸಿ ಯಾವುದಾದರೊಂದು ಬಗೆಯಲ್ಲಿ ಕರ್ಮಕಾಲವ್ಯಾಪ್ತಿಯನ್ನಿಟ್ಟುಕೊಂಡು ಜಯಂತೀದಿನದಲ್ಲಿಯೇ ಈ ಎರಡು ವ್ರತಗಳನ್ನೂ ತಂತ್ರದಿಂದ ಮಾಡಬೇಕು. ಹಾಗಲ್ಲದೆ ನಿತ್ಯವ್ರತವನ್ನು ಲೋಪಮಾಡುವುದರಿಂದ ದೋಷವುಂಟಾಗುವುದಾದಕಾರಣ ನಿಶೀಥವ್ಯಾಪ್ತಿಯುಳ್ಳ ಪೂರ್ವದಿನದ ಅಷ್ಟಮಿಯಲ್ಲಿ ಜನ್ಮಾಷ್ಟಮಿಯ ವ್ರತಮಾಡಿ ಜಯಂತೀ ದಿನದಲ್ಲಿ ಪಾರಣೆಯನ್ನು ಮಾಡಕೂಡದು” ಎಂಬ ಹೇಳುತ್ತಾರೆ. ನಿರ್ಣಯಸಿಂಧುಕಾರನಾದರೋ, ಮೇಲೆ ಹೇಳಿದಂತೆ ಮಾಧವಾಚಾರ್ಯರ ಮತವನ್ನು ಸ್ಥಾಪಿಸಿ, ಹೇಮಾದ್ರಿಮತಾನುಸಾರವಾಗಿ “ಜನ್ಮಾಷ್ಟಮಿಯ ವ್ರತವೇ ನಿತ್ಯವಾದದ್ದು, ಜಯಂತೀವ್ರತವು ನಿತ್ಯವಾದರೂ ಕಲಿಯುಗದಲ್ಲಿ ಅದರ ಆಚಾರವಿಲ್ಲ ಎಂದು ಕೆಲವರು ಮಾಡುವುದಿಲ್ಲ ಎಂದೂ ಹೇಳಿ ತನ್ನ ಅಭಿಪ್ರಾಯದಂತೆ ಯಾವ ವರ್ಷದಲ್ಲಿ ಪೂರ್ವದಿನದಲ್ಲಿಯೇ ನಿಶೀಥಕಾಲದಲ್ಲಿ ಅಷ್ಟಮಿಯೂ, ಎರಡ

ನೆಯ ದಿನದಲ್ಲಿಯೇ ನಿಶೀಥವಲ್ಲದ ಕಾಲದಲ್ಲಿ ಜಯಂತೀ ಯೋಗವೂ ಇರುವುದೋ ಆ ವರ್ಷದಲ್ಲಿ ಎರಡು ಉಪವಾಸಗಳನ್ನು ಮಾಡಬೇಕು, ಎರಡು ವ್ರತಗಳೂ ನಿತ್ಯವಾದ್ದರಿಂದ ಮಾಡದಿದ್ದರೆ ಪ್ರತ್ಯವಾಯವುಂಟಾಗುವುದು, ಜಯಂತಿಯಲ್ಲಿ ಅಷ್ಟಮಿಯು ಅಂತರ್ಭಾವವನ್ನು ಹೊಂದುವುದೆಂದು ಹೇಳುವ ವಚನವು ಮೂರ್ಖರನ್ನು ವಂಚಿಸುವುದಕ್ಕಾಗಿ ಹೇಳಿದ್ದು ಎಂದು ಹೇಳಿದ್ದಾನೆ. ಆದರೆ ಕೌಸ್ತುಭವೇ ಮೊದಲಾದ ನವೀನ ಗ್ರಂಥಗಳು ಅಂಗೀಕರಿಸಿರುವ ಮಾಧವಾಚಾರ್ಯರ ಅಭಿಪ್ರಾಯದಂತೆ ಜಯಂತಿಯಲ್ಲಿ ಅಂತರ್ಭಾವದಿಂದಲೇ ಅಷ್ಟಮೀವ್ರತವನ್ನು ಮಾಡಬೇಕೆಂಬುದೇ ಯುಕ್ತವೆಂದು ತೋರುವುದು. (ಭಾದ್ರಪದ ಕೃಷ್ಣಪಕ್ಷದ ಅಷ್ಟಮಿಯಲ್ಲಿ ಅರ್ಧರಾತ್ರವ್ಯಾಪ್ತಿಯನ್ನು ಭಾವಿಸಿ ಜನ್ಮಾಷ್ಟಮೀ ವ್ರತವನ್ನು ಮಾಡಬೇಕು. 'ರೋಹಿಣ್ಯಾಸಹಿತಾ ಕೃಷ್ಣಾ ಮಾಸಿ ಭಾದ್ರಪದೇ ಷ್ಟಮೀ । ಅರ್ಧರಾತ್ರೇತು ಯೋಗೋಯಂ ತಾರಾಪತ್ಯುದಯೇತಥಾ॥ ನಿಯತಾತ್ಮಾ ಶುಚಿಸ್ಸಮ್ಯಕ್ಪೂಜಾಂತತ್ರಪ್ರವರ್ತಯೇತ್॥' ಅಂದರೆ ಭಾದ್ರಪದ ಕೃಷ್ಣಾಷ್ಟಮಿಯು ರೋಹಿಣೀ ನಕ್ಷತ್ರಯುಕ್ತವಾಗಿ ಚಂದ್ರೋದಯಕಾಲದಲ್ಲಿ ಅಂದರೆ ಅರ್ಧರಾತ್ರಿಯಲ್ಲಿ ವ್ಯಾಪ್ತಿಯುಳ್ಳದ್ದಾಗಿದ್ದರೆ ನಿಯಮದಿಂದ ಪರಿಶುದ್ಧನಾಗಿ ಆ ಕಾಲದಲ್ಲಿ ವ್ರತವನ್ನು ಮಾಡಬೇಕು ಎಂಬಿದೇ ಮೊದಲಾದ ವಿಷಯಗಳನ್ನು ವ್ರತಾರ್ಕದಲ್ಲಿ ಹೇಳಿರುವುದಲ್ಲದೆ ಎರಡು ದಿನಗಳಲ್ಲಿಯೂ ಅಷ್ಟಮಿಯು ಅರ್ಧರಾತ್ರವ್ಯಾಪ್ತಿಯುಳ್ಳದಾಗಿ, ಅಥವಾ ಎರಡು ದಿನಗಳ ಅರ್ಧರಾತ್ರಿಗೂ ವ್ಯಾಪ್ತಿ ಇಲ್ಲದ್ದಾಗಿರುವುದಾದರೂ, ಪ್ರಾತಃಕಾಲದಲ್ಲಿ ಸಂಕಲ್ಪಕಾಲಕ್ಕೆ ವ್ಯಾಪ್ತಿ ಇರುವುದರಿಂದಲೂ, ಹಗಲು ರಾತ್ರಿಗಳೆರಡರಲ್ಲಿಯೂ ವ್ಯಾಪ್ತಿ ಇರುವುದರಿಂದಲೂ ' ವರ್ಜನೀಯಾಪ್ರಯತ್ನೇನ ಸಪ್ತಮೀ ಸಂಯುತಾಷ್ಟಮೀ , ಅಂದರೆ ಸಪ್ತಮಿಯೊಡನೆ ಸೇರಿದ (ವೇಧೆಯುಳ್ಳ) ಅಷ್ಟಮಿಯನ್ನು ವ್ರತೋಪವಾಸಾದಿಗಳಲ್ಲಿ ಪರಿಗ್ರಹಮಾಡಕೂಡದೆಂದು ನಿಷೇಧಿಸಿರುವುದರಿಂದಲೂ, ಎರಡನೆಯ ಅಷ್ಟಮಿಯನ್ನೇ ಗ್ರಹಿಸಬೇಕು. ಪೂರ್ವದಿನದ ನಿಶೀಥೆಯಲ್ಲಿ ಕೇವಲ ಅಷ್ಟಮಿಯೂ, ಎರಡನೆಯ ದಿನದಲ್ಲಿ ನಿಶೀಥಕಾಲಕ್ಕೆ ವ್ಯಾಪ್ತಿ ಇಲ್ಲದ ರೋಹಿಣೀಯುಕ್ತವಾದ ಅಷ್ಟಮಿಯೂ

ಯಾವಾಗ ಬರುವುದೋ ಆಗ ಕರ್ಮಕಾಲಕ್ಕೆ ವ್ಯಾಪ್ತಿಯುಳ್ಳದ್ದಾದ್ದ ರಿಂದ ಮೊದಲ ಅಷ್ಟಮಿಯನ್ನೇ ಗ್ರಹಿಸಬೇಕು. ರೋಹಿಣೀಯೋಗವು ನವಮೀ ಬುಧವಾರಯೋಗ ಮೊದಲಾದವುಗಳಂತೆ ಹೆಚ್ಚು ಫಲವನ್ನುಂಟು ಮಾಡತಕ್ಕದ್ದೆಂದು ತಿಳಿಯಬೇಕಲ್ಲದೆ ಅಷ್ಟಮೀ ನಿರ್ಣಯಕ್ಕೆ ಪ್ರಯೋಜನಕಾರಿಯಲ್ಲ. ಅಂದರೆ ಈ ಯೋಗವನ್ನೇ ಮುಖ್ಯವಾಗಿಟ್ಟುಕೊಂಡು ಅಷ್ಟಮಿಯನ್ನು ನಿರ್ಣಯಿಸಬೇಕಾದ್ದಿಲ್ಲ. "ಉದಯೇಚಾಷ್ಟಮೀ ಕಿಂಚಿನ್ನವಮೀಸಕಲಾಯದಿ । ಭವೇತ್ತು ಬುಧಸಂಯುಕ್ತಾ ಪ್ರಾಜಾಪತ್ಯರ್ಕ್ಷಸಂಯುತಾ ॥" ಅಂದರೆ ಉದಯಕಾಲದಲ್ಲಿ ಸ್ವಲ್ಪ ಅಷ್ಟಮಿ ಇದ್ದು, ಸಂಪೂರ್ಣವಾದ ನವಮಿಯು ಬುಧವಾರದೊಡನೆ ಸೇರಿ, ರೋಹಿಣೀ ನಕ್ಷತ್ರಯುಕ್ತವಾಗಿದ್ದರೆ—ಇದೇ ಮೊದಲಾದ ಸಂದರ್ಭಗಳಲ್ಲಿ (ಉದಯವೆಂದರೆ ಚಂದ್ರೋದಯವೆಂದು ತಿಳಿಯತಕ್ಕದ್ದು.) ಸೂರ್ಯೋದಯವೆಂದು ಭಾವಿಸುವ ಪಕ್ಷಕ್ಕೆ ನಿಶೀಥವ್ಯಾಪ್ತಿ ಇಲ್ಲದ ಅಷ್ಟಮಿಯಾದಾಗ್ಯೂ ಬುಧ, ರೋಹಿಣಿಗಳ ಯೋಗವುಳ್ಳ ಕಾಲವನ್ನು "ಯಾವದ್ವಾಚನಿಕಂ" ಎಂಬ ನ್ಯಾಯಾನುಸಾರವಾಗಿ (ವಿಧಿಗನುಸಾರವಾಗಿರಬೇಕೆಂಬುದು) ಗ್ರಹಿಸಬೇಕಾಗಿರುವುದು ರೋಹಿಣೀಮಾತ್ರ ಯೋಗವುಳ್ಳದ್ದನ್ನು ಗ್ರಹಿಸಕೂಡದಂತಾಗುವುದು ಎಂಬುದೇ ಮೊದಲಾದ ವಿಸ್ತಾರವನ್ನು ಹೇಳಿದೆ;) ಈ ವ್ರತದಲ್ಲಿ - ಬುಧ, ಸೋಮವಾರಗಳ ಯೋಗವು ಶ್ರೇಷ್ಠತ್ವವನ್ನು ಹೇಳುತ್ತದೆಯಲ್ಲದೆ ರೋಹಿಣಿಯ ಯೋಗದಂತೆ ನಿರ್ಣಯವಿಷಯದಲ್ಲಿ ಪ್ರಯೋಜನವಾಗತಕ್ಕದ್ದಲ್ಲ. ಇನ್ನುಮುಂದೆ ಎರಡನೆಯ ದಿನದಲ್ಲಿ ಭೋಜನರೂಪವಾದ ಪಾರಣೆಯನ್ನು ವ್ರತಾಂಗವಾಗಿ ಮಾಡಬೇಕಾದುದರಿಂದ ಅದರ ಕಾಲವನ್ನು ನಿರ್ಣಯಿಸಬೇಕಾಗಿದೆ.

## ಪಾರಣೆಯ ಕಾಲವು.

ತಿಥಿಯನ್ನು ಮಾತ್ರವೇ ಉದ್ದೇಶಿಸಿ ಮಾಡಿರುವ ಉಪವಾಸಕ್ಕೆ ತಿಥಿಯ ಕೊನೆಯಲ್ಲಿಯೂ, ನಕ್ಷತ್ರಯೋಗವುಳ್ಳ ತಿಥಿಯನ್ನುದ್ದೇಶಿಸಿ ಮಾಡಿರುವ ಉಪವಾಸಕ್ಕೆ ಅವೆರಡರ ಕೊನೆಯಲ್ಲಿಯೂ ಪಾರಣೆಯನ್ನು ಮಾಡಬೇಕು. ತಿಥಿನಕ್ಷತ್ರಗಳಲ್ಲೊಂದರ ಕೊನೆಯುಮಾತ್ರವೇ ಹಗಲಿನಲ್ಲಾಗುವುದಾಗಿಯೂ, ಎರಡರ ಕೊನೆಯು ರಾತ್ರಿಯಲ್ಲಾಗುವುದಾಗಿ

ಯೂ ಇದ್ದರೆ, ಯಾವುದರ ಕೊನೆಯು ಹಗಲಿನಲ್ಲಾಗುವುದೋ ಆ ಒಂದರ ಕೊನೆಯಲ್ಲಿ ಹಗಲಿನಲ್ಲಿಯೇ ಪಾರಣೆಮಾಡಬೇಕು. ಹಗಲು ಯಾವುದರ ಕೊನೆಯೂ ಆಗದಿದ್ದ ಪಕ್ಷದಲ್ಲಿ ನಿಶೀಥವಾಗುವುದಕ್ಕಿಂತ ಮುಂಚೆ ಎರಡರ ಕೊನೆಯಲ್ಲಾಗಲೀ, ಯಾವುದಾದರೊಂದರ ಕೊನೆಯಲ್ಲಾಗಲೀ ರಾತ್ರಿಯಲ್ಲಿ ಪಾರಣೆಯು. ಒಂದುವೇಳೆ ನಿಶೀಥೆಯು ಅತ್ಯಂತ ಸಮೀಪವಾದ ಪೂರ್ವಭಾಗದ ಕಾಲದಲ್ಲಿ (ಅವ್ಯವಹಿತಪೂರ್ವ) ಒಂದರ ಅಥವಾ ಎರಡರ ಅಂತವುಂಟಾದಾಗ್ಯೂ ಆಗ ನಿಶೀಥದಲ್ಲಾದರೂ ಪಾರಣೆ ಮಾಡಬಹುದು. ಭೋಜನಕ್ಕೆ ಅವಕಾಶವಿಲ್ಲದಂತಾದರೆ, ಪಾರಣಾರ್ಥವಾಗಿ ಫಲಾಹಾರಾದಿಗಳನ್ನು ಮಾಡಬಹುದು. ಈ ವಿಷಯದಲ್ಲಿ ಕೆಲವರು-ನಿಶೀಥೆಯಲ್ಲಿ ಪಾರಣೆಯನ್ನು ಮಾಡಕೂಡದು; ಉಪವಾಸ ದಿನದ ಮೂರನೆಯ ದಿನದಲ್ಲಿ ಹಗಲು ಪಾರಣೆಯನ್ನು ಮಾಡಬೇಕು ಎಂದು ಹೇಳುವರು. ಇದು ಯುಕ್ತವಲ್ಲ. ಶಕ್ತಿಯಿಲ್ಲದವರು-ತಿಥಿ, ನಕ್ಷತ್ರಗಳೊಂದೂ ಕೊನೆಯನ್ನು ಹೊಂದದಿದ್ದ ಪಕ್ಷದಲ್ಲಿ ಉತ್ಸವಾನಂತರದಲ್ಲಿ ಬೆಳಗಿನಲ್ಲಿಯೇ ದೇವರಪೂಜೆ ವಿಸರ್ಜನೆಗಳನ್ನು ಮಾಡಿ ಪಾರಣೆಯನ್ನು ಮಾಡಬೇಕು.

## ಸಂಕ್ಷೇಪವಾಗಿ ವ್ರತವಿಧಿಯು.

ವ್ರತವಿಧಿ.—ಬೆಳಗಿನಲ್ಲಿ ನಿತ್ಯಕರ್ಮವನ್ನು ಮಾಡಿ, ಪೂರ್ವಮುಖನಾಗಿ ಕುಳಿತು, ದೇಶ ಮೊದಲಾದವುಗಳನ್ನು ಹೇಳಿಕೊಂಡು, ಆಯಾಯ, ಕಾಲಗಳಲ್ಲಿ ಸಪ್ತಮಿ ಮೊದಲಾದ ತಿಥಿಗಳಿದ್ದಾಗ್ಯೂ, ಮುಖ್ಯವಾದ ಅಷ್ಟಮಿಯನ್ನೇ ಹೇಳಿ 'ಶ್ರೀಕೃಷ್ಣಪ್ರೀತ್ಯರ್ಥಂ ಜನ್ಮಾಷ್ಟಮೀವ್ರತಂಕರಿಷ್ಯೇ' ಶ್ರೀಕೃಷ್ಣ ಪ್ರೀತಿಗಾಗಿ ಜನ್ಮಾಷ್ಟಮೀ ವ್ರತವನ್ನು ಮಾಡುವೆನು ಎಂತಲೂ, ಜಯನ್ತೀ ಯೋಗವಿದ್ದರೆ, ಜನ್ಮಾಷ್ಟಮೀ ಮತ್ತು ಜಯಂತೀ ವ್ರತಗಳೆರಡನ್ನೂ ತಂತ್ರದಿಂದ ಮಾಡುತ್ತೇನೆ ಎಂತಲೂ, ಸಂಕಲ್ಪ ಮಾಡಬೇಕು. ತಾಮ್ರಪಾತ್ರೆಯಲ್ಲಿ ನೀರನ್ನು ತುಂಬಿಟ್ಟುಕೊಂಡು 'ವಾಸುದೇವಂಸಮುದ್ದಿಶ್ಯ ಸರ್ವಪಾಪಪ್ರಶಾನ್ತಯೇ । ಉಪವಾಸಂಕರಿಷ್ಯಾಮಿ ಕೃಷ್ಣಾಷ್ಟಮ್ಯಾಂ ನಭಸ್ಯಹಂ ॥೧॥' ಶ್ರಾವಣ ಬಹುಳ ಅಷ್ಟಮಿಯಲ್ಲಿ ಶ್ರೀ ವಿಷ್ಣುವಿನ ಪ್ರೀತ್ಯರ್ಥವಾಗಿ ನಾನು ಮಾಡಿದ ಪಾಪಗಳೆಲ್ಲವೂ ನಿವಾರಣೆಯಾಗಲೆಂದು ಉಪವಾಸ ಮಾಡುತ್ತೇನೆ ॥೧॥

ಉಪವಾಸ ಮಾಡಲು ಶಕ್ತಿಯಿಲ್ಲದವರು 'ಫಲಾನಿಭಕ್ಷಯಿಷ್ಯಾಮಿ' ಅಂದರೆ ಫಲಾಹಾರ ಮಾಡುತ್ತೇನೆ, ಎಂಬುದೇ ಮೊದಲಾದ ಸಾಧ್ಯವಾದ ವಿಷಯಗಳನ್ನು ಹೇಳಿಕೊಳ್ಳಬೇಕು. 'ಆಜನ್ಮಮರಣಂ ಯಾವದ್ಯನ್ಮಯಾ ದುಷ್ಕೃತಂಕೃತಂ । ತತ್ಪ್ರಣಾಶಾಯಗೋವಿಂದ ಪ್ರಸೀದಪುರುಷೋತ್ತಮ ॥೧॥' ನಾನು ಬದುಕಿರುವುದರಲ್ಲಿ ಮಾಡುವ ಪಾಪಗಳನ್ನೆಲ್ಲಾ ಪರಿಹರಿಸಿ, ಎಲೈ ಪುರುಷಶ್ರೇಷ್ಠನಾದ ಗೋವಿಂದನೇ, ನನಗೆ ನೀನು ಪ್ರಸನ್ನನಾಗು ॥೧॥ ಎಂದು ಪಾತ್ರೆಯಲ್ಲಿನ ನೀರನ್ನು ತೆಗೆದುಕೊಂಡು ಕೆಳಗೆ ಬಿಡಬೇಕು. ಅನಂತರದಲ್ಲಿ ತಮ್ಮ ತಮ್ಮಾಚಾರ ಪ್ರಕಾರವಾಗಿ ಚಿನ್ನ, ಬೆಳ್ಳಿಗಳಿಂದಲೋ, ಮಣ್ಣಿನಿಂದಲೋ ಗೋಡೆಯಲ್ಲಿ ಬಣ್ಣಗಳಿಂದ ಬರೆಯುವುದರಿಂದ ಪ್ರತಿಮೆಗಳನ್ನು ಸಿದ್ಧಪಡಿಸಿಕೊಳ್ಳಬೇಕು. ಅವುಗಳನ್ನು ಸಿದ್ಧಪಡಿಸುವ ಕ್ರಮವನ್ನು ಮುಂದೆ ವಿವರಿಸಿದೆ:--

ಮಂಚದಲ್ಲಿ ಮಲಗಿರುವ ದೇವಕಿಯ ಸ್ತನ್ಯವನ್ನು ಕೃಷ್ಣನು ಪಾನ ಮಾಡುತ್ತಿರುವಂತೆ ಇಡಬೇಕು, ಜಯಂತಿಯ ಯೋಗವಿರುವ ಪಕ್ಷದಲ್ಲಿ ಮತ್ತೊಂದು ದೇವಕಿಯ ಪ್ರತಿಮೆಯ ತೊಡೆಯಮೇಲೆ ಕೂತಿರುವಂತೆ ಶ್ರೀಕೃಷ್ಣಪ್ರತಿಮೆಯೊಂದನ್ನು ಇಡಬೇಕು. ಮಂಚದಮೇಲೆ ಮಲಗಿರುವ ದೇವಕಿಯ ಕಾಲನ್ನು ಲಕ್ಷ್ಮಿಯು ಒತ್ತುತ್ತಿರುವಂತೆ ಮಾಡಬೇಕು. ಗೋಡೆ ಮೊದಲಾದವುಗಳಲ್ಲಿ ಖಡ್ಗವನ್ನು ಧರಿಸುವಂತೆ ವಸುದೇವ ಪ್ರತಿಮೆಯನ್ನೂ, ನನ್ದಗೋಪಿಯನ್ನೂ, ಗೋಪಾಲಕರನ್ನೂ ಬರೆಯಬೇಕು. ಮಂಚದ ಒಂದು ಭಾಗದಲ್ಲಿ ಪ್ರಸವಿಸಿರುವ ಹೆಣ್ಣು ಮಗುವಿನೊಡನೆ ಯಶೋದೆಯ ಪ್ರತಿಮೆಯನ್ನೂ, ಬೇರೊಂದು ಮಣೆಯಲ್ಲಿ ವಸುದೇವ, ದೇವಕಿ, ನನ್ದ, ಯಶೋದೆ, ಶ್ರೀ ಕೃಷ್ಣ, ಬಲರಾಮ ಚಣ್ಡಿಕೆ ಈ ಏಳು ಪ್ರತಿಮೆಗಳನ್ನೂ ಇಡಬೇಕು. ಇಷ್ಟು ಪ್ರತಿಮೆಗಳನ್ನು ಮಾಡುವ ಶಕ್ತಿ ಇಲ್ಲದಿದ್ದರೆ ಮೇಲೆ ಹೇಳಿದ ವಸುದೇವನೇ ಮೊದಲಾಗಿ ಚಣ್ಡಿಕೆಯವರೆಗಿನ ಏಳನ್ನಾದರೂ ತಮ್ಮ ಪೂರ್ವಾಚಾರದಂತೆಯೂ, ತನ್ನ ಶಕ್ತಿಗೆ ಮೀರಿದಂತೆಯೂ ಮಾಡಿ ಉಳಿದವರನ್ನು ಹಾಗೆ ಹಾಗೆಯೇ ಧ್ಯಾನಿಸಬೇಕು ಎಂದು ತೋರುವುದು. ನಿಶೀಥೆಗೆ ಸಮೀಪವಾದ ಹಿಂದಿನ ಕಾಲದಲ್ಲಿ (ನಿಶೀಥೆಯು ಪ್ರಾರಂಭವಾಗುವುದಕ್ಕೆ ಸ್ವಲ್ಪ

ಮುಂಚೆ) ಸ್ನಾನ ಮಾಡಿ ಶ್ರೀ ಕೃಷ್ಣಪ್ರೀತ್ಯರ್ಥವಾಗಿ ಪರಿವಾರದೊಡನೆ ಶ್ರೀ ಕೃಷ್ಣಪೂಜೆಯನ್ನು ಮಾಡುವೆನು ಎಂದು ಸಂಕಲ್ಪಮಾಡಿ, ಶಙ್ಖ ಪೂಜೆ ಮೊದಲಾದ ನಿತ್ಯಪೂಜೆಯನ್ನುಮಾಡಿದ ಅನಂತರದಲ್ಲಿ 'ಪರ್ಯಙ್ಕ ಸ್ಥಾಂ ಕಿನ್ನರಾದ್ಯೈರ್ಯುತಾಂ ಧ್ಯಾಯೇತ್ತು ದೇವಕೀಂ । ಶ್ರೀಕೃಷ್ಣಂ ಬಾಲಕಂ ಧ್ಯಾಯೇತ್ಪರ್ಯಂಕೇ ಸ್ತನಪಾಯಿನಂ ॥೧॥ ಶ್ರೀವತ್ಸವಕ್ಷಸಂ ಶಾನ್ತಂ ನೀಲೋತ್ಪಲದಳಚ್ಛವಿಂ । ಸಂವಾಹಯಂತೀಂ ದೇವಕ್ಯಾಃ ಪಾದೌಧ್ಯಾಯೇಚ್ಚ ತಾಂ ಶ್ರಿಯಂ॥೨॥' ಕಿನ್ನರರೇ ಮೊದಲಾದ ದೇವತೆಗಳಿಂದಕೂಡಿ, ಮಂಚದಲ್ಲಿ ಮಲಗಿರುವ ದೇವಕಿಯನ್ನು ಧ್ಯಾನಿಸಬೇಕು. ಅದೇ ಮಂಚದಲ್ಲಿ ಸ್ತನ್ಯಪಾನ ಮಾಡುತ್ತಿರುವ ಬಾಲನಾಗಿಯೂ, ॥೧॥ ಶ್ರೀ ವತ್ಸವೆಂಬ ಮಚ್ಚೆಯುಳ್ಳವನಾಗಿಯೂ ಪರಮಶಾಂತ ಸ್ವರೂಪನಾಗಿಯೂ, ಕನ್ನೈದಿಲೆಸಳಂತೆ ಶ್ಯಾಮಳ ವರ್ಣವುಳ್ಳವನಾಗಿಯೂ ಇರುವ ಶ್ರೀ ಕೃಷ್ಣನನ್ನು ಧ್ಯಾನಿಸಬೇಕು. ದೇವಕೀ ದೇವಿಯ ಕಾಲನ್ನೊತ್ತುತ್ತಿರುವ ಲಕ್ಷ್ಮೀದೇವಿಯನ್ನೂ ಅನಂತರದಲ್ಲಿ ಧ್ಯಾನ ಮಾಡಬೇಕು. ಹೀಗೆ ಧ್ಯಾನ ಮಾಡಿದಮೇಲೆ, ದೇವಕ್ಯೈನಮಃ, ಎಂದು ದೇವಕೀದೇವಿಯನ್ನು ಆವಾಹನೆ ಮಾಡಬೇಕು. ಮೂಲಮಂತ್ರದಿಂದಲಾಗಲಿ, ಪುರುಷಸೂಕ್ತದ ಋಕ್ಕಿನಿಂದಾಗಲಿ 'ಶ್ರೀ ಕೃಷ್ಣಾಯನಮಃ ಶ್ರೀ ಕೃಷ್ಣಮಾವಾಹಯಾಮಿ, ಎಂದು ಕೃಷ್ಣನನ್ನು ಆವಾಹನೆ ಮಾಡಬೇಕು, ಅನಂತರದಲ್ಲಿ ಲಕ್ಷ್ಮಿಯನ್ನೂ ಆವಾಹನೆ ಮಾಡಬೇಕು. ದೇವಕಿ, ವಸುದೇವ, ಯಶೋದಾ, ನನ್ದಗೋಪ, ಕೃಷ್ಣ, ಬಲರಾಮ, ಚಣ್ಡಿಕಾ ಇವರನ್ನೂ, ಸಕಲ ಪರಿವಾರ ದೇವತೆಗಳನ್ನೂ ಆವಾಹನೆ ಮಾಡಿ ಮೂಲ ಮಂತ್ರದಿಂದಾಗಲಿ, ಪುರುಷಸೂಕ್ತ ಋಕ್ಕಿನಿಂದಾಗಲಿ ಇಲ್ಲಿ ಆವಾಹನೆ ಮಾಡಿರುವ ದೇವಕಿ ಮೊದಲಾದ ಪರಿವಾರದೇವತೆಗಳೊಡನೆ ಶ್ರೀ ಕೃಷ್ಣನಿಗೆ ನಮಸ್ಕಾರವು ಎಂಬದಾಗಿ ಆಸನ, ಪಾದ್ಯ, ಅರ್ಘ್ಯ, ಆಚಮನೀಯ, ಅಭ್ಯಂಗ ಸ್ನಾನಗಳನ್ನು ಮಾಡಿ ಪಂಚಾಮೃತ ಸ್ನಾನಾನಂತರದಲ್ಲಿ ಚಂದನವನ್ನು ಲೇಪಿಸಬೇಕು. ಶುದ್ಧೋದಕಾಭಿಷೇಕಾನಂತರದಲ್ಲಿ 'ವಿಶ್ವೇಶ್ವರಾಯವಿಶ್ವಾಯ ತಥಾ ವಿಶ್ವೋದ್ಭವಾಯಚ । ವಿಶ್ವಸ್ಯಪತಯೇತುಭ್ಯಂ ಗೋವಿನ್ದಾಯ ನಮೋನಮಃ ॥೧॥ ಯಜ್ಞೇಶ್ವರಾಯ ದೇವಾಯ ತಥಾ

ಯ ಜ್ಞೋದ್ಭವಾಯಚ । ಯಜ್ಞಾನಾಂಪತಯೇನಾಥ ಗೋವಿಂದಾಯ ನಮೋನಮಃ ॥೨॥' ವಿಶ್ವೇಶ್ವರಾಯನಮಃ, ವಿಶ್ವಾಯನಮಃ, ವಸ್ತ್ರಂ. ವಿಶ್ವೋದ್ಭವಾಯ । ವಿಶ್ವಪತಯೇ, ಯಜ್ಞೋಪವೀತಂ. ಗೋವಿನ್ದಾಯ । ಯಜ್ಞೇಶ್ವರಾಯ, ಗಂಧಃ. ದೇವಾಯ । ಯಜ್ಞೋದ್ಭವಾಯ ಪುಷ್ಪಂ. ಯಜ್ಞಾನಾಂಪತಯೇ । ಗೋವಿಂದಾಯ, ಧೂಪಂ. ದೀಪಂ, ಎಂದು ಮೂಲ ಮಂತ್ರಾದಿಗಳೊಡನೆ ಪೂಜಿಸಬೇಕು. 'ಜಗನ್ನಾಥನಮಸ್ತುಭ್ಯಂ ಸಂಸಾರ ಭಯನಾಶನ । ಜಗದೀಶಾಯ ದೇವಾಯ ಭೂತಾನಾಂಪತಯೇನಮಃ ॥೧॥' ಎಂಬ ಮಂತ್ರದಿಂದ ನೈವೇದ್ಯ ಮಾಡಬೇಕು. ಮೂಲಮಂತ್ರಾದಿಗಳನ್ನೂ ಎಲ್ಲ ಕಡೆಗಳಲ್ಲಿಯೂ ಸೇರಿಸಿ ಹೇಳಬೇಕು. ತಾಂಬೂಲ ಮೊದಲು, ನಮಸ್ಕಾರ, ಪ್ರದಕ್ಷಿಣೆ, ಪುಷ್ಪಾಂಜಲಿ ಇವುಗಳೆಲ್ಲವೂ ಪೂರಯಿಸುವವರೆಗೂ ಮಾಡಬೇಕು. ಅಥವಾ ಉದ್ಯಾಪನ ವಿಧಿಯಲ್ಲಿ ಹೇಳಿರುವಂತೆ ಪೂಜೆಯನ್ನು ಮಾಡಬಹುದು. ಆ ವಿಧಿಯು ಯಾವುದೆಂದರೆ:-ಹಿಂದೆ ಹೇಳಿರುವ ಪ್ರಕಾರವಾಗಿ ಧ್ಯಾನಾವಾಹನೆಗಳನ್ನು ಮಾಡಿದಮೇಲೆ 'ದೇವಾಬ್ರಹ್ಮಾದಯೋಯೇನ ಸ್ವರೂಪಂನವಿದುಸ್ತವ । ಅತಸ್ತ್ವಾಂಪೂಜಯಿಷ್ಯಾಮಿ ಮಾತುರುತ್ಸಂಗವಾಸಿನಂ ॥೧॥' ಎಲೈ ಕೃಷ್ಣನೇ! ಬ್ರಹ್ಮಾದಿದೇವತೆಗಳೂಕೂಡ ನಿನ್ನ ರೂಪವನ್ನು ಅರಿಯಲು ಶಕ್ತರಾಗಿಲ್ಲವಾದಕಾರಣ, ತಾಯಿಯ ತೊಡೆಯಮೇಲೆ ಕುಳಿತಿರುವ ಅಗೋಚರನಾದ ನಿನ್ನನ್ನುಪೂಜಿಸುವೆನು ॥೧॥ 'ಪುರುಷ ಏ ವೇದಂ' ಎಂಬ ಪುರುಷಸೂಕ್ತದ ಋಕ್ಕಿನಿಂದ ಆಸನವನ್ನು ಸಮರ್ಪಣೆ ಮಾಡಬೇಕು. 'ಅವತಾರಸಹಸ್ರಾಣಿ ಕರೋಷಿಮಧುಸೂದನ । ನತೇಸಂಖ್ಯಾವತಾರಾಣಾಂ ಕಶ್ಚಿಜ್ಜಾನಾತಿತತ್ತ್ವತಃ॥೨ ' ಎಲೈಮಧುಸೂದನನೆ! ನೀನು ಮಾಡುವ ಅವತಾರಗಳೆಷ್ಟು? ಅವುಗಳ ಬಗೆಹೇಗೆ? ಎಂಬುದನ್ನು ಯಾರೂ ತಿಳಿಯಲಾರರು. 'ಏತಾವಾನಸ್ಯ-ಪಾದ್ಯಂ ॥' 'ಜಾತಃ ಕಂಸವಧಾರ್ಥಾಯ ಭೂಭಾರೋತ್ತಾರಣಾಯಚ । ದೇವಾನಾಂಚ ಹಿತಾರ್ಥಾಯ ಧರ್ಮಸಂಸ್ಥಾಪನಾಯಚ ॥ ಕೌರವಾಣಾಂವಿನಾಶಾಯ ಪಾಣ್ಡವಾನಾಂ ಹಿತಾಯಚ । ಗೃಹಾಣಾರ್ಘ್ಯಂ ಮಯಾದತ್ತಂ ದೇವಕ್ಯಾಸಹಿತೋ ಹರೇ ॥೩॥, ಎಲೈ ಶ್ರೀಹರಿಯೇ, ಕಂಸನನ್ನು ಸಂಹರಿಸಿ, ಭೂಭಾರವ

ನ್ನು ಇಳಿಸುವುದಕ್ಕೂ, ದೇವತೆಗಳಿಗೆ ಸಂತೋಷವನ್ನುಂಟುಮಾಡುವುದಕ್ಕೂ, ಲೋಕದಲ್ಲಿ ಧರ್ಮಸ್ಥಾಪನೆ ಮಾಡುವುದಕ್ಕೂ, ಕೌರವರನ್ನು ನಾಶಮಾಡಿ ಪಾಂಡವರಿಗೆ ಹಿತವನ್ನುಂಟುಮಾಡುವುದಕ್ಕೂ ನೀನು ಭೂಮಿಯಲ್ಲಿ ಅವತಾರವನ್ನು ಮಾಡಿದ್ದೀಯೆ, ದೇವಕೀದೇವಿಯೊಡನೆ ನಾನು ಕೊಡುವ ಅರ್ಘ್ಯವನ್ನು ಸ್ವೀಕರಿಸು ॥ 'ತ್ರಿಪಾದೂರ್ಧ್ವಂ-ಅರ್ಘ್ಯಂ॥ 'ಸುರಾಸುರನರೇಶಾಯ ಕ್ಷೀರಾಬ್ಧಿಶಯನಾಯಚ। ಕೃಷ್ಣಾಯವಾಸುದೇವಾಯ ದದಾಮ್ಯಾಚಮನಂಶುಭಂ ॥೪॥' ದೇವ, ರಾಕ್ಷಸ, ಮನುಷ್ಯರಿಗೆ ಒಡೆಯನಾಗಿ ಕ್ಷೀರಸಮುದ್ರದಲ್ಲಿ ಮಲಗಿರುವ ವಸುದೇವಪುತ್ರನಾದ ನಿನಗೆ ಆಚಮನವನ್ನು ಮಾಡಿಸುತ್ತೇನೆ. 'ತಸ್ಮಾತ್ ಆಚಮನಂ॥ 'ನಾರಾಯಣನಮಸ್ತೇಸ್ತು ನರಕಾರ್ಣವತಾರಕ। ಗಂಗೋದಕಂ ಸಮಾನೀತಂ ಸ್ನಾನಾರ್ಥಂ ಪ್ರತಿಗೃಹ್ಯತಾಂ ॥೫॥' ನರಕವೆಂಬ ಅಪಾರವಾದ ಸಮುದ್ರವನ್ನು ದಾಟಿಸತಕ್ಕ ಎಲೈ ಶ್ರೀಮನ್ನಾರಾಯಣನೇ! ನಾನು ತೆಗೆದುಕೊಂಡು ಬಂದಿರುವ ಈ ಗಂಗೋದಕವನ್ನು ಸ್ನಾನಕ್ಕಾಗಿ ತೆಗೆದುಕೊ 'ಯತ್ಪುರುಷೇಣ-ಸ್ನಾನಂ॥ 'ಪಯೋದಧಿಘೃತಕ್ಷೌದ್ರ ಶರ್ಕರಾಸ್ನಾನಮುತ್ತಮಂ। ತೃಪ್ತ್ಯರ್ಥಂದೇವದೇವೇಶ ಗೃಹ್ಯತಾಂ ದೇವಕೀಸುತ ॥೬॥' ದೇವಕೀಪುತ್ರನಾದ ಶ್ರೀಕೃಷ್ಣನೇ! ನಿನ್ನತೃಪ್ತಿಗಾಗಿ ನಾನು ಮಾಡಿಸುವ ಹಾಲು, ಮೊಸರು, ತುಪ್ಪ, ಜೇನುತುಪ್ಪ, ಸಕ್ಕರೆ ಈ ಪಂಚಾಮೃತದ ಸ್ನಾನವನ್ನು ಪರಿಗ್ರಹಿಸುವವನಾಗು ಎಂದು ಪಂಚಾಮೃತ ಸ್ನಾನವನ್ನೂ, ಶುದ್ಧೋದಕಸ್ನಾನವನ್ನೂ ಮಾಡಿಸಬೇಕು. 'ಕ್ಷೌಮಂಚಪಟ್ಟಸೂತ್ರಾಢ್ಯಂ ಮಯಾನೀತಾಂಶುಕಂಶುಭಂ। ಗೃಹ್ಯತಾಂ ದೇವದೇವೇಶ ಮಯಾದತ್ತಂ ಸುರೋತ್ತಮ ॥೭॥' ಎಲೈ ದೇವದೇವನಾದ ಶ್ರೀಕೃಷ್ಣನೇ! ಈ ಪಟ್ಟೆಯ ವಸ್ತ್ರವನ್ನು ನಿನಗೆ ನಾನು ಸಮರ್ಪಿಸುವೆನು. ಇದನ್ನು ಸ್ವೀಕರಿಸುವವನಾಗು. 'ತಂಯಜ್ಞಂ-ವಸ್ತ್ರಂ 'ನಮಃಕೃಷ್ಣಾಯದೇವಾಯ ಶಙ್ಖಚಕ್ರಧರಾಯಚ। ಬ್ರಹ್ಮಸೂತ್ರಂಜಗನ್ನಾಥ ಗೃಹಾಣಪರಮೇಶ್ವರ' ॥ ಶಙ್ಖಚಕ್ರಧಾರಿಯಾದ ಶ್ರೀಕೃಷ್ಣನೇ! ಈ ಯಜ್ಞೋಪವೀತವನ್ನುಗ್ರಹಿಸು ॥೮॥ ತಸ್ಮಾದ್ಯಜ್ಞಾತ್-ಯಜ್ಞೋಪವೀತಂ'ನಾನಾಗನ್ಧಸಮಾಯುಕ್ತಂ ಚನ್ದನಂಚಾರುಚರ್ಚಿತಂ।

ಕುಂಕುಮಾಕ್ತಾ ಕ್ಷತೈರ್ಯುಕ್ತಂಗೃಹಾಣಪರಮೇಶ್ವರ ॥೯॥" ಬಗೆಬಗೆ ಯಾಸುವಾಸನೆಯುಳ್ಳ ವಸ್ತುಗಳಿಂದ ಕಲಸಿಮಾಡಿರುವ ಈ ಗಂಧವನ್ನೂ, ಕುಂಕುಮಮಿಶ್ರವಾದ ಅಕ್ಷತೆಗಳನ್ನೂ ನಿನಗೋಸ್ಕರ ಸಮರ್ಪಿಸುವೆನು ಸ್ವೀಕರಿಸು, 'ತಸ್ಮಾದ್ಯಜ್ಞಾತ್ ಗಂಧಾಕ್ಷತಾನ್, "ಪುಷ್ಪಾಣಿಯಾನಿ ದಿವ್ಯಾನಿ ಪಾರಿಜಾತೋದ್ಭವಾನಿಚ । ಮಾಲತೀಕೇಸರಾದೀನಿ ಪೂಜಾರಂಪ್ರತಿಗೃಹ್ಯತಾಂ ॥೧೦॥" ದೇವಯೋಗ್ಯವಾದ ಪಾರಿಜಾತ, ಮಾಲತೀ, ಕೇಸರ, ಮೊದಲಾದ ಪುಷ್ಪಗಳನ್ನು ತೆಗದುಕೊಳ್ಳುವವನಾಗು'ತಸ್ಮಾದಶ್ವಾಃ-ಪುಷ್ಪಾಣಿ, ಅಂಗಪೂಜೆ-ಕೃಷ್ಣಾಯನಮಃ-ಪಾದೌಪೂಜಯಾಮಿ. ಸಂಕರ್ಷಣಾಯ-ಗುಲ್ಫೌ. ಕಾಲಾತ್ಮನೇ-ಜಾನುನೀ. ವಿಶ್ವಕರ್ಮಣೇ-ಜಂಘೇ' ವಿಶ್ವನೇತ್ರಾಯ-ಕಟಿಂ. ವಿಶ್ವಕರ್ತ್ರೇ-ಮೇಢ್ರಂ. ಪದ್ಮನಾಭಾಯ-ನಾಭಿಂ. ಪರಮಾತ್ಮನೇ-ಹೃದಯಂ ಶ್ರೀಕಂಠಾಯ-ಕಂಠಂ. ಸರ್ವಾಸ್ತ್ರಧಾರಿಣೇ-ಬಾಹೂ.ವಾಚಸ್ಪತಯೇ-ಮುಖಂ, ಕೇಶವಾಯ-ಲಲಾಟಂ,ಸರ್ವಾತ್ಮನೇ। ಶಿರಃ, ವಿಶ್ವರೂಪಿಣೇ ನಾರಾಯಣಾಯನಮಃ-ಸರ್ವಾಂಗಂಪೂಜಯಾಮಿ. ವನಸ್ಪತಿರಸೋ' ॥೧೧॥ ಯತ್ಪುರುಷಂ-ಧೂಪಂ, "ತ್ವಂಜ್ಯೋತಿಸ್ಸರ್ವದೇವಾನಾಂ ತೇಜಸ್ತ್ವಂತೇಜಸಾಂಪರಂ। ಆತ್ಮಜ್ಯೋತಿರ್ನಮಸ್ತುಭ್ಯಂ ದೀಪೋಯಂ ಪ್ರತಿಗೃಹ್ಯತಾಂ॥೧೨॥" ಎಲ್ಲ ದೇವತೆಗಳಿಗೂ ದೀಪದಂತೆ ಪ್ರಕಾಶಕನಾಗಿಯೂ, ಪರಮತೇಜೋರೂಪನಾಗಿಯೂ, ಸ್ವಯಂ ಪ್ರಕಾಶನಾಗಿಯೂ ಇರುವ ಪರಮಾತ್ಮನೇ! ಈ ದೀಪವನ್ನು ಪ್ರತಿಗ್ರಹಿಸು 'ಬ್ರಾಹ್ಮಣೋಸ್ಯ-ದೀಪಂ,'ನಾನಾಗನ್ಧಸಮಾಯುಕ್ತಂಭಕ್ಷ್ಯಭೋಜ್ಯಂ ಚತುರ್ವಿಧಂ।ನೈವೇದ್ಯಾರ್ಥಂ ಮಯಾದತ್ತಂಗೃಹಾಣಪರಮೇಶ್ವರ॥೧೩॥'. ಅನೇಕ ಸುವಾಸನೆಯುಳ್ಳ ಭಕ್ಷ್ಯ, ಭೋಜ್ಯ, ಲೇಹ್ಯ, ಚೋಷ್ಯಗಳೆಂಬ ನಾಲ್ಕು ಬಗೆಯಾದ ಪದಾರ್ಥಗಳನ್ನೂ ನಿನಗೆ ನೈವೇದ್ಯಮಾಡುವೆನು, ಇವುಗಳನ್ನು ಸ್ವೀಕರಿಸು ॥ ಚಂದ್ರಮಾನೈವೇದ್ಯಂ । ಆಚಮನಂ, ಕರೋದ್ವರ್ತನಂ। "ತಾಂಬೂಲಂಚಸಕರ್ಪೂರಂ ಪೂಗೀಫಲಸಮನ್ವಿತಂ। ಮುಖವಾಸಕರಂರಮ್ಯಂ ಪ್ರೀತಿದಂಪ್ರತಿಗೃಹ್ಯತಾಂ॥೧೪॥"ತಾಂಬೂಲಂ. "ರಂಭಾಫಲಂನಾರಿಕೇಳಂ ತಥೈವಾಮ್ರಫಲಾನಿಚ । ಪೂಜಿತೋಸಿಸುರಶ್ರೇಷ್ಠ ಗೃಹ್ಯತಾಂ ಕಂಸಸೂದನ ॥೧೫॥ "ಎಲೈ ಕಂಸಾರಿಯಾದ ದೇವ

ನೇ ! ಬಾಳೆಯಹಣ್ಣು, ತೆಂಗಿನಕಾಯಿ, ಮಾವಿನ ಹಣ್ಣು ಇವುಗಳನ್ನು ನಿನಗೆ ಸಮರ್ಪಿಸಿರುವೆನು." ಫಲಸಮರ್ಪಣಂ" "ಸೌವರ್ಣಂರಾಜತಂ ತಾಮ್ರಂ ನಾನಾರತ್ನಸಮನ್ವಿತಂ । ಕರ್ಮಸಾದ್ಗುಣ್ಯಸಿದ್ಧ್ಯರ್ಥಂ ದಕ್ಷಿಣಾ ಪ್ರತಿಗೃಹ್ಯತಾಂ ॥೧೬॥" ಎಲೈ ನಾರಾಯಣನೇ ! ಈ ಕರ್ಮವು ಸಾದ್ಗುಣ್ಯವನ್ನು ಪಡೆಯಲೆಂದು, ಚಿನ್ನ, ಬೆಳ್ಳಿ, ತಾಮ್ರ, ಈ ನಾಣ್ಯಗಳಿಂದಲೂ, ನವರತ್ನಗಳಿಂದಲೂ, ಕೂಡಿದ ದಕ್ಷಿಣೆಯನ್ನು ಅರ್ಪಿಸುವೆನು "ದಕ್ಷಿಣಾಂ" ನಾಭ್ಯಾಆಸೀತ್-ನೀರಾಜನಂ॥ ಯಾನಿಕಾನಿ-ಸಪ್ತಾಸ್ಯಾಸನ್-ಪ್ರದಕ್ಷಿಣಾಂ ॥೧೭॥ ಯಜ್ಞೇನಯಜ್ಞಂ-ಪುಷ್ಪಾಂಜಲಿಂ, ನಮಸ್ಕಾರಾನ್॥೧೮॥ ಅಪರಾಧಸಹಸ್ರಾಣಿ-ಎಂದು ಪೂಜಾಸಮರ್ಪಣೆಯನ್ನು ಮಾಡಬೇಕು. ಸರ್ವೋಪಚಾರಪೂಜೆಯನ್ನು ಮಾಡಿದ ಮೇಲೆ ಹನ್ನೆರಡಂಗುಲ ವಿಸ್ತಾರವುಳ್ಳದ್ದಾಗಿ ಬೆಳ್ಳಿಯಿಂದ ಮಾಡಿದ ಅಥವಾ (ನೆಲದ ಮೇಲೆ) ಸ್ಥಂಡಿಲದಲ್ಲಿ ಬರೆದಿರುವರೋಹಿಣೀ ಸಹಿತನಾದ ಚಂದ್ರನನ್ನು- "ಸೋಮೇಶ್ವರಾಯ ಸೋಮಾಯ ತಥಾ ಸೋಮೋದ್ಭವಾಯ ಚ। ಸೋಮಸ್ಯಪತಯೇ ನಿತ್ಯಂ ತುಭ್ಯಂ ಸೋಮಾಯವೈನಮಃ ॥೧॥" ಎಂದು ಪೂಜಿಸಿ, ಗಂಧ, ಹೂ, ದರ್ಭೆಗಳೊಡನೆ ಶಙ್ಖದಲ್ಲಿ ಉದಕವನ್ನು ತೆಗೆದುಕೊಂಡು-"ಕ್ಷೀರೋದಾರ್ಣವ ಸಂಭೂತ ಅತ್ರಿನೇತ್ರ(ಗೋತ್ರ)ಸಮುದ್ಭವ । ಗೃಹಾಣಾರ್ಘ್ಯಂಶಶಾಙ್ಕೇಶ ರೋಹಿಣೀಸಹಿತೋಮಮ । (ಪ್ರೀಯೂಪಧಾಮರೋಹಿಣ್ಯಾ ಸಹಿತೋಽರ್ಘ್ಯಂ ಗೃಹಾಣಭೋ) ॥೧॥ ಜ್ಯೋತ್ಸ್ನಾಂಪತೇ ನಮಸ್ತುಭ್ಯಂ ಜ್ಯೋತಿಷಾಂ ಪತಯೇ ನಮಃ। ನಮಸ್ತೇರೋಹಿಣೀಕಾಂತ ಅರ್ಘ್ಯಂನಃ ಪ್ರತಿಗೃಹ್ಯತಾಂ॥೨॥" ಕ್ಷೀರಸಮುದ್ರದಲ್ಲಿ ಜನಿಸಿ, ಅತ್ರಿಋಷಿಯನೇತ್ರದಿಂದುತ್ಪನ್ನನಾದ ಎಲೈ ಚಂದ್ರನೇ! ರೋಹಿಣೀ ಸಹಿತನಾದ ನೀನು, ನಾನು ಕೊಡುವ ಅರ್ಘ್ಯವನ್ನು ತೆಗೆದುಕೊ ॥೧॥ ಬೆಳ್ದಿಂಗಳಿಂದ ಮನೋಹರನಾಗಿಯೂ, ತೇಜೋನಿಧಿಯಾಗಿಯೂ, ರೋಹಿಣೀ ಪತಿಯಾಗಿಯೂ ಇರುವಚಂದ್ರನೇ! ನಿನಗೆ ನಮಸ್ಕಾರವು. ನಮ್ಮ ಅರ್ಘ್ಯವನ್ನು ಸ್ವೀಕರಿಸು ॥೨॥ ಈ ಎರಡು ಮಂತ್ರಗಳಿಂದ ಚಂದ್ರನಿಗೆ ಅರ್ಘ್ಯವನ್ನು ಕೊಡಬೇಕು.-"ಜಾತಃ ಕಂಸವಧಾರ್ಥಾಯ ಭೂಭಾರೋತ್ತಾರಣಾಯಚ । ಪಾಣ್ಡವಾನಾಂ ಹಿತಾರ್ಥಾಯ ಧರ್ಮಸಂಸ್ಥಾಪನಾಯ

ಚ ॥೧॥ ಕೌರವಾಣಾಂ ವಿನಾಶಾಯ ದೈತ್ಯಾನಾಂ ನಿಧನಾಯಚ। ಗೃಹಾ ಣಾರ್ಘ್ಯಂ ಮಯಾದತ್ತಂ ದೇವಕ್ಯಾಸಹಿತೋಹರೇ ॥೨॥" ಈ ಮಂ ತ್ರಗಳಿಂದ ಕೃಷ್ಣನಿಗೆ ಅರ್ಘ್ಯವನ್ನು ಕೊಡಬೇಕು-"ತ್ರಾಹಿಮಾಂಸರ್ವ ಲೋಕೇಶ ಹರೇ ಸಂಸಾರ ಸಾಗರಾತ್। ತ್ರಾಹಿಮಾಂಸರ್ವಪಾಪಘ್ನ ದುಃಖ ಶೋಕಾರ್ಣವಾತ್ಪ್ರಭೋ ॥೧॥ ಸರ್ವಲೋಕೇಶ್ವರ ತ್ರಾಹಿಪತಿತಂಮಾಂ ಭವಾರ್ಣವೇ। ತ್ರಾಹಿಮಾಂಸರ್ವ ದುಃಖಘ್ನ ರೋಗಶೋಕಾರ್ಣ ವಾ ದ್ಧರೇ ॥೨॥ ದುರ್ಗತಾಂ ಸ್ತ್ರಾಯಸೇವಿಷ್ಣೋಯೇ ಸ್ಮರಂತಿ ಸಕೃ ತ್ಸಕೃತ್ ॥ ತ್ರಾಹಿಮಾಂ ದೇವದೇವೇಶ ತ್ವತ್ತೋನಾ ನ್ಯೋಸ್ತಿರಕ್ಷಿತಾ॥ ಯದ್ವಾಕ್ಯಚನ ಕೌಮಾರೇ ಯೌವನೇ ಯಚ್ಚವಾರ್ಧಕೇ । ತತ್ಪುಣ್ಯಂ ವೃದ್ಧಿಮಾಯಾತು ಪಾಪಂದಹಹಲಾಯುಧ॥೪॥, ಎಲೈ ಸರ್ವಲೋಕೇಶ್ವ ರನೇ ! ನನ್ನನ್ನು ಈ ಸಂಸಾರವೆಂಬ ಸಮುದ್ರದಿಂದ ಉದ್ಧರಿಸಿ, ಸರ್ವ ಪಾಪಗಳನ್ನು ನಿವಾರಣೆಮಾಡು. ಪ್ರಭುವೇ ! ದುಃಖ, ಶೋಕಗಳೆಂಬ ಸಮುದ್ರದಿಂದೆತ್ತಿ ಕಾಪಾಡು ॥೧॥ ಎಲೈ ಶ್ರೀಹರಿಯೇ! ಸಂಸಾರಸಾಗ ರದಲ್ಲಿ ಮುಳಗಿರುವ ನನ್ನನ್ನು ಉದ್ಧಾರಮಾಡು. ಸಕಲದುಃಖ ನಿವಾರಕ ನೇ ! ರೋಗ ಶೋಕಗಳೆಂಬ ಸಮುದ್ರದಿಂದ ನನ್ನನ್ನು ರಕ್ಷಿಸು ॥ ೨ ॥ ಒಂದೊಂದುವೇಳೆ ನಿನ್ನನ್ನು ಸ್ಮರಿಸಿದಾಗ್ಯು ದುರ್ಗತಿಯನ್ನು ಹೊಂದಿದವ ರನ್ನು ನೀನು ಕರುಣೆಯಿಂದ ಕಾಪಾಡುವಿ, ನಿನಗೆ ಸಮಾನರಾದ ರಕ್ಷಕ ರು ಲೋಕದಲ್ಲಿ ಮತ್ತಾರೂ ಇಲ್ಲವಾದಕಾರಣ, ಎಲೈ ದೇವದೇವನೆ! ಶ್ರೀ ಮಹಾವಿಷ್ಣುವೇ ! ನನ್ನನ್ನು ರಕ್ಷಿಸು ॥೩॥ ಎಲೈ ಹಲಾಯುಧನಾದ ಬಲರಾಮನೇ ! ಬಾಲ್ಯದಲ್ಲಿಯೋ ! ಯೌವನಾವಸ್ಥೆಯಲ್ಲಿಯೋ ! ಇಲ್ಲ ವೇ ಮುಪ್ಪಿನಲ್ಲಿಯೋ ನಾನುಮಾಡಿದ ಸ್ವಲ್ಪಪುಣ್ಯವೇ ಮಹತ್ತರವಾಗಿ ವೃದ್ಧಿಹೊಂದಲಿ, ಎಲ್ಲಾ ಪಾಪಗಳನ್ನೂ ನಾಶಮಾಡುವವನಾಗು ॥ ೪ ॥ ಎಂದು ಪ್ರಾರ್ಥಿಸಬೇಕು."ಇತ್ಯೇವಂ ಪೂಜಯಿತ್ವಾತು ಪುರುಷಸೂಕ್ತೈ ಸ್ಸವೈಷ್ಣವೈಃ। ಸ್ತುತ್ವಾವಾದಿತ್ರನಿರ್ಘೋಷೈರ್ಗೀತ ವಾದಿತ್ರಮಙ್ಗಲೈಃ॥ ಸುಕಥಾಭಿರ್ವಿಚಿತ್ರಾಭಿ ಸ್ತಥಾಪ್ರೇಕ್ಷಣ ಕೈರಪಿ। ಪೂರ್ವೇತಿಹಾಸ್ಯೈಃ ಪೌ ರಾಣ್ಯೈಃ ಕ್ಷಿಪೇತ್ತಾಂ ಶರ್ವರೀಂ ನೃಪ॥೨॥" ಈರೀತಿಯಲ್ಲಿ ಪೂಜೆಯನು ಮಾಡಿದಮೇಲೆ, ಪುರುಷಸೂಕ್ತ, ವಿಷ್ಣುಸೂಕ್ತ ಮೊದಲಾದ ಸೂಕ್ತಗ

ಳಿಂದಲೂ, ವಾದ್ಯಘೋಷ ಗಳಿಂದಲೂ, ಸಂಗೀತದಿಂದಲೂ, ||೧|| ಹರಿಕಥೆಮೊದಲಾದ್ದರಿಂದಲೂ, ನಾಟ್ಯಮೊದಲಾದ್ದರಿಂದಲೂ, ಇತಿಹಾಸ, ಪುರಾಣಗಳಿಂದಲೂ, ಆರಾತ್ರಿಯನ್ನು ಜಾಗರದಿಂದ (ನಿದ್ರಿಸದೆ) ಕಳೆಯಬೇಕು ಎಂದು ಅಗ್ನಿಪುರಾಣದಲ್ಲಿ ಹೇಳಿದೆ. ಈರೀತಿಯಾಗಿ ಜಾಗರಣೆ ಶೂದ್ರರಿಗೆ ಯುಕ್ತವಾದದ್ದಲ್ಲ ವಾದ್ದರಿಂದ ವರ್ಣತ್ರಯದವರು ಮಾತ್ರಹೀಗೆಮಾಡಬೇಕು. ಸೂಕ್ತಾದಿಗಳನ್ನುಳಿದ ಸಂಗೀತ ನಾಟ್ಯಮೊದಲಾದವು ಚತುರ್ವರ್ಣಗಳಿಗೂ ಜಾಗರಕ್ಕೆ ಕಾರಣವಾಗಬಹುದೆಂದು ಬೇರೆವಚನಗಳಲ್ಲಿ ಹೇಳಿದೆ.ವೈಷ್ಣವರು:-ಗೋಕುಲಸ್ಥನಾದ ಶ್ರೀಕೃಷ್ಣನ ಬಾಲಲೀಲೆಮೊದಲಾದ ಕಥೆಗಳನ್ನು ಕೇಳಿದಮೇಲೆ- "ದಧಿಕ್ಷೀರ ಘೃತಾಂಬುಭಿಃ ಆ ಸಿಂಚನ್ತೋ ವಿಲಂಪಂತಃ" ಎಂಬ ಭಾಗವತ ವಚನ ಪ್ರಕಾರವಾಗಿ ಒಬ್ಬರಿಗೊಬ್ಬರು, ಹಾಲು, ಮೊಸರು, ತುಪ್ಪ, ನೀರು, ಇವುಗಳಿಂದ ಸವರಿಸಿ (ಬಳಿಯುವುದು) ಕೊಳ್ಳಬೇಕು, ಈ ಉತ್ಸವವು ಈಗಲೂಮಹಾರಾಷ್ಟ್ರ ದೇಶದಲ್ಲಿ ಗೋಪಾಲಕುಲ (ದನವನ್ನು ಕಾಯುವಕುಲ) ದಲ್ಲಿ ಹೆಚ್ಚಾಗಿ ನಡೆಯುತ್ತಿರುವಂತೆ ತೋರುವುದು. ಇವೆಲ್ಲವನ್ನೂ ಕೌಸ್ತುಭದಲ್ಲಿ ಅನಂತಭಟ್ಟನು ಹೇಳಿದ್ದಾನಾಗಿ ಯಾರೂ ಈವಿಷಯದಲ್ಲಿ ಕೋಪಿಸಕೂಡದು. ರಾಮನವಮಿ, ಏಕಾದಶಿ ಮೊದಲಾದ ಉತ್ಸವಗಳಲ್ಲಿಯೂ ಸಹ ಪೂಜೆ, ಜಾಗರಣೆ ಮೊದಲಾದ ವ್ರತೋತ್ಸವಗಳೆಲ್ಲವೂ ಸಮಾನವಾದ್ದರಿಂದ,ಈ ರೀತಿಯಾದ ಕಥೆ ಮೊದಲಾದವುಗಳಿಂದ ರಾತ್ರಿಜಾಗರವನ್ನುಮಾಡಬಹುದೆಂದೂಹಿಸಬಹುದು. ಮಹಾರಾಷ್ಟ್ರ ದೇಶದಲ್ಲಿ ಹೀಗೆಯೇ ಆಚಾರವಿದೆ, ಭಗವತ್ಪ್ರೀತಿ ಮೊದಲಾದ ಭಾಗ್ಯಸಂಪನ್ನರು 'ಪರ್ವಾಣಿಸ್ಯುರುತಾನ್ಯಹಂ,ಪುಣ್ಯದಿನಗಳಲ್ಲಿ ಮಾಡಬೇಕಾದ ಮಹೋತ್ಸವಗಳನ್ನುಶಕ್ತಿಯುಳ್ಳವರು ಪ್ರತಿದಿನವೂ ಸಾಮಾನ್ಯವಾಗಿ ನಡೆಯಿಸಬಹುದು, ಎಂಬ ವಿಷಯದಲ್ಲಿ ಹೇಳತಕ್ಕದ್ದೇನು ? ಎಂಬ ನ್ಯಾಯಾನುಸಾರವಾಗಿ, ಪ್ರತಿದಿನಗಳಲ್ಲಿಯೂ ಹರಿಕಥೆ, ಉತ್ಸವಗಳನ್ನು ಮಾಡುವರೆಂದು ತೋರುತ್ತದೆ. ಅನಂತರದಲ್ಲಿ ನವಮಿಯ ದಿನದಲ್ಲಿಬ್ರಾಹ್ಮಣರನ್ನು ಭೋಜನ, ದಕ್ಷಿಣಾದಿಗಳಿಂದ ತೃಪ್ತಿಪಡಿಸಿ ಪಾರಣೆಯ ನಿರ್ಣಯ ಕಾಲಕ್ಕೆ ಸರಿಯಾಗಿಭೋಜನಮಾಡಬೇಕು, ಶ್ರಾವಣಬಹುಳ ಅಷ್ಟಮಿ ಮೊದಲ್ಗೊಂಡು ಪ್ರತಿಮಾಸದ ಕೃಷ್ಣಾ

ಷ್ಟಮಿಯಲ್ಲಿಯೂ ವಿಧ್ಯುಕ್ತನಾಗಿವರ್ಷವು ಪೂರ್ತಿಯಾಗುವವರೆಗೂ ಈ ಜಯಂತೀ ವ್ರತವನ್ನು ಮಾಡಬೇಕೆಂದುಬೇರ ಪುರಾಣದಲ್ಲಿ ಹೇಳಿದೆ, ಇದ ರ ಉದ್ಯಾಪನಾ ವಿಧಿಯನ್ನುಗ್ರಂಥಾಂತರದಿಂದ ತಿಳಿಯತಕ್ಕದ್ದು, ಇಂತು ಜನ್ಮಾಷ್ಟಮೀ ನಿರ್ಣಯವು

— ದರ್ಭಾಹರಣೆಯು. —

ದರ್ಭಾಹರಣವು-"ನಭೋಮಾಸಸ್ಯ ದರ್ಶೇತು ಶುಚಿರ್ದರ್ಭಾ ನ್ಸಮಾಹರೇತ್।ಅಯಾತಯಾಮಾಸ್ತೇದರ್ಭಾವಿನಿಯೋಜ್ಯಾಃ ಪುನಃಪುನಃ" ಶ್ರಾವಣಮಾಸ ದರ್ಶ (ಅಮಾವಾಸ್ಯ) ದಿನದಲ್ಲಿ ಪರಿಶುದ್ಧನಾಗಿ ದರ್ಭೆಗಳ ನ್ನು ಕೊಯ್ದುಕೊಂಡು ಬರಬೇಕು. ಆಗತಂದ ದರ್ಭೆಗಳು ಸಾರವತ್ತಾ ಗಿರುವ ಕಾರಣ ಅವುಗಳನ್ನು ಆಗಾಗ್ಯೆ ಉಪಯೋಗಿಸಿ ಕೊಳ್ಳಬಹುದು॥ ಕೆಲವರು-ಭಾದ್ರಪದದ ಅಮಾವಾಸ್ಯೆಯಲ್ಲಿ ದರ್ಭೆಯನ್ನು ತರಬೇಕೆಂದು ಅಭಿಪ್ರಾಯ ಪಡುವರು-"ಕುಶಾಃ ಕಾಶಾ ಯವಾ ದೂರ್ವಾ ಉಶೀರಾಶ್ಚ ಸ ಕುಂದಕಾಃ । ಗೋಧೂಮಾವ್ರೀಹಯೋಮೌಂಜಾದಶದರ್ಭಾಸ್ಸಬಲ್ವ ಜಾಃ ॥೧॥ ಕುಶ, ಕಾಶ (ಕಾಚಿಹುಲ್ಲು) ಯವೆಯಹುಲ್ಲು, ದೂರ್ವೆ (ಗರಿ ಕೆ) ಉಶೀರ (ಲಾಮಂಚದಹುಲ್ಲು) ಕುಂದವೆಂಬಹುಲ್ಲು, ಗೋಧಿಯಹು ಲ್ಲು, ಭತ್ತದಹುಲ್ಲು, ನೊದೆಹುಲ್ಲು, ಬಲ್ವಜ (ಜಂಡು) ಈಹತ್ತೂ ದರ್ಭೆ ಯ ಭೇದಗಳು. ॥೧॥ "ವಿರಿಂಚಿನಾಸಹೋತ್ಪನ್ನಪರಮೇಷ್ಠಿನಿಸರ್ಗಜ ನುದಸರ್ವಾಣಿ ಪಾಪಾನಿದರ್ಭಸ್ವಸ್ತಿಕರೋಭವ ॥೨॥ ಬ್ರಹ್ಮನಜತೆ ಯಲ್ಲಿ ಹುಟ್ಟಿ ಪವಿತ್ರವಾದ ಎಲೈ ದರ್ಭೆಯೇ! ನನ್ನ ಪಾಪಗಳೆಲ್ಲವನ್ನೂ ಪರಿಹರಿಸಿ ಮಂಗಳವನ್ನುಂಟುಮಾಡು ॥ ೨ ॥ "ಏವಂ ಮಂತ್ರಂ ಸಮು ಚ್ಚಾರ್ಯತತಃ ಪೂರ್ವೋತ್ತರಾಮುಖಃ । ಹುಂಫಟ್ಕಾರೇಣಮಂತ್ರೇಣಸ ಕೃಚ್ಛಿತ್ವಾಸಮುದ್ಧರೇತ್ ॥೩॥" ಮೇಲಣಮಂತ್ರವನ್ನು 'ಹುಂಫಟ್' ಕಾರಗಳೊಡನೆಹೇಳಿ ಪೂರ್ವ, ಅಥವಾ ಉತ್ತರಾಭಿಮುಖನಾಗಿ ನಿಂತು ಒಂದುಸಾರಿಕೊಯ್ದು ಅನಂತರದಲ್ಲಿ ಬೇಕಾದಷ್ಟನ್ನು ತೆಗೆದುಕೊಳ್ಳಬೇ ಕು. ॥೩॥ ಬ್ರಾಹ್ಮಣನಿಗೆ ನಾಲ್ಕು ದರ್ಭೆಗಳಿಂದಲೂ, ಕ್ಷತ್ರಿಯನಿಗೆ ೩ ದರ್ಭೆಗಳಿಂದಲೂ, ವೈಶ್ಯನಿಗೆ ೨ದರ್ಭೆಗಳಿಂದಲೂ, ಪವಿತ್ರವು. 'ಸರ್ವೇ ಷಾಂ ವಾ ಭವೇದ್ದ್ವಾಭ್ಯಾಂ ಪವಿತ್ರಂಗ್ರಂಥಿಕಂನವಾ', ಎಂಬಂತೆ ಎಲ್ಲಾ

ವರ್ಣದ ವರಿಗೂ ಸಾಮಾನ್ಯವಾಗಿ ಎರಡು ದರ್ಭೆಗಳಿಂದ, ಗ್ರಂಥಿಯನ್ನು ಹಾಕಿಯೂ ಅಥವಾ ಇಲ್ಲದೆಯೂ ಪವಿತ್ರವಾಗಿ ಉಪಯೋಗಿಸಬಹುದೆಂದೂ ಪ್ರಮಾಣವುಂಟು, ಇಂತು ಶ್ರಾವಣಮಾಸ ನಿರ್ಣಯೋದ್ದೇಶವು ॥೫॥

(೬) ಭಾದ್ರಪದಮಾಸವು

(೬) ಭಾದ್ರಪದಮಾಸ ನಿರ್ಣಯವು-ಕನ್ಯಾಸಂಕ್ರಮಣದಲ್ಲಿ ಸಂಕ್ರಮಣವಾದ ಮೇಲಣ ೧೬ ಗಳಿಗೆಗಳು ಪುಣ್ಯಕಾಲವು. ಭಾದ್ರಪದಮಾಸದಲ್ಲಿ ಏಕಾನ್ನಾಹಾರವ್ರತವನ್ನು ಮಾಡುವುದರಿಂದ ಧನಸಂಪತ್ತಿಯೂ, ಆರೋಗ್ಯವೇ ಮೊದಲಾದವೂ ಉಂಟಾಗುವವು. ಈ ಮಾಸದಲ್ಲಿ ಶ್ರೀ ವಿಷ್ಣುಪ್ರೀತ್ಯರ್ಥವಾಗಿ, ಪಾಯಸ, ಗುಡಾನ್ನ, ಉಪ್ಪು, ಮೊದಲಾದವುಗಳನ್ನು ದಾನಮಾಡಬೇಕು, ಭಾದ್ರಪದ ಶುದ್ಧತೃತೀಯೆಯಲ್ಲಿ ಹರಿತಾಳಿಕಾವ್ರತವು.

— ಹರಿತಾಳಿಕಾವ್ರತವು —

ಇಲ್ಲಿ-ತದಿಗೆಯು ಒಂದು ಮುಹೂರ್ತ ಅಥವಾ ಅದಕ್ಕಿಂತ ಕಡಿಮೆಯಾಗಿದ್ದಾಗ್ಯೂ ಎರಡನೆಯದನ್ನು ಗ್ರಹಿಸಬೇಕು. ಒಂದು ವೇಳೆ ಕ್ಷಯದ ದೆಸೆಯಿಂದ ಎರಡನೆಯ ದಿನದಲ್ಲಿ ಸುತರಾಂತೃತೀಯೆಯು ಇಲ್ಲದೆ ಹೋಗುವ ಪಕ್ಷದಲ್ಲಿ ದ್ವಿತೀಯೆಯಿಂದ ಕೂಡಿದ ತೃತೀಯೆಯನ್ನು ಗ್ರಹಿಸಬಹುದು, ಶುದ್ಧಾಧಿಕವಾಗಿದ್ದಾಗ ಪೂರ್ವದಿನದಲ್ಲಿ ಅರವತ್ತು ಗಳಿಗೆಗಳಿದ್ದಾಗ್ಯೂ ಅದನ್ನು ಬಿಟ್ಟು, ಗಣಯೋಗವು (ವಿನಾಯಕನೊಡನೆ ಕೂಡಿದ್ದು) ಉತ್ಕೃಷ್ಟವಾದ್ದರಿಂದ, ಅಲ್ಪಕಾಲವಿರುವುದಾದರೂ ಚತುರ್ಥೀಯುಕ್ತವಾದ ಎರಡನೆಯ ತೃತೀಯೆಯನ್ನೇ ಗ್ರಹಿಸಬೇಕು. ಈ ವ್ರತದಲ್ಲಿ ಪಾರ್ವತೀಪರಮೇಶ್ವರರ ಪೂಜೆಯೂ, ಉಪವಾಸವೂ, ಸ್ತ್ರೀಯರಿಗೆ ನಿತ್ಯವೆನ್ನಿಸುವುದು.“ಮಂದಾರಮಾಲಾಕುಲಿತಾಲಕಾಯೈ ಕಪಾಲಮಾಲಾಂಕಿತಶೇಖರಾಯ। ದಿವ್ಯಾಂಬರಾಯೈ ಚ ದಿಗಂಬರಾಯ ನಮಃಶಿವಾಯೈ ಚ ನಮಃಶಿವಾಯ॥೧॥”ಮಂದಾರಮಾಲಿಕೆಯಿಂದಲಂಕೃತವಾದ ಮುಂಗುರುಳುಗಳುಳ್ಳವಳಾಗಿಯೂ, ಶ್ರೇಷ್ಠವಾದ ವಸ್ತ್ರವುಳ್ಳವಳಾಗಿಯೂ ಇರುವ ಪಾರ್ವತಿಗೂ, ಕಪಾಲಮಾಲಿಕೆಗಳಿಂದ ಹೊಳೆವ ಶಿರಸ್ಸುಳ್ಳವನಾಗಿಯೂ, ದಿಗಂಬರನಾಗಿಯೂ ಇರುವ ಪರಮೇಶ್ವರನಿಗೂ ನಮಸ್ಕಾರವು ॥೧॥

ಇದೇ ಮೊದಲಾದುವು ಪೂಜೆಗೆ ಮಂತ್ರಗಳೆಂದು ತಿಳಿಯತಕ್ಕದ್ದು.

ಗಣೇಶಚತುರ್ಥೀ

ವಿನಾಯಕ ಚತುರ್ಥೀ:-ಶುದ್ಧಚತುರ್ಥಿಯಲ್ಲಿ ಸಿದ್ಧಿವಿನಾಯಕ ವ್ರತವನ್ನು ಮಾಡಬೇಕು. ಇಲ್ಲಿ ಮಧ್ಯಾಹ್ನವ್ಯಾಪ್ತಿಯುಳ್ಳ ಚತುರ್ಥಿಯನ್ನು ಗ್ರಹಿಸಬೇಕು. ಎರಡು ದಿನಗಳಲ್ಲಿಯೂ ಮಧ್ಯಾಹ್ನಕ್ಕೆ ಸಂಪೂರ್ಣವ್ಯಾಪ್ತಿ ಇದ್ದಾಗ್ಯೂ, ಅಥವಾ ಇಲ್ಲದಿದ್ದಾಗ್ಯೂ ಪೂರ್ವದಿನವನ್ನೇ ಗ್ರಹಿಸಬೇಕು. ವಿಷಮಕಾಲವ್ಯಾಪ್ತಿ ಇದ್ದಲ್ಲಿ ಹೆಚ್ಚುವ್ಯಾಪ್ತಿಯು ಎರಡನೆಯ ದಿನಕ್ಕಿದ್ದ ಪಕ್ಷದಲ್ಲಿ ಎರಡನೆಯ ದಿನವನ್ನು ಗ್ರಹಿಸಬೇಕೆಂದು ಕೆಲವರು. ಪೂರ್ವದಿನದಲ್ಲಿ ಮಧ್ಯಾಹ್ನಸ್ಪರ್ಶವು ಸ್ವಲ್ಪವೂ ಇಲ್ಲದೆ, ಪರದಿನದಲ್ಲಿಯೇ ಮಧ್ಯಾಹ್ನ ಸ್ಪರ್ಶವಾದರೆ ಆಗ್ಯೆಮಾತ್ರವೇ ಎರಡನೆಯದನ್ನು ಗ್ರಹಿಸಬೇಕು. ಎರಡುದಿನಗಳಲ್ಲಿಯೂ, ಸಮಾನವಾಗಿಯೂ, ಹೆಚ್ಚುಕಡಿಮೆಯಾಗಿಯೂ ಒಂದುಭಾಗದ ವ್ಯಾಪ್ತಿ ಇದ್ದ ಪಕ್ಷದಲ್ಲಿಯೂ ಪೂರ್ವದಿನವನ್ನೇಗ್ರಹಿಸಬೇಕು. ಮೊದಲದಿನದಲ್ಲಿ ಮಧ್ಯಾಹ್ನದ ಐದು ಭಾಗಕ್ಕೆ ಮಾತ್ರವೇ ವ್ಯಾಪ್ತಿಇದ್ದು ಎರಡನೆಯ ದಿನದ ಮಧ್ಯಾಹ್ನಕ್ಕೆ ಸಂಪೂರ್ಣವ್ಯಾಪ್ತಿ ಇದ್ದರೆ ಆಗಲೂ ಪರದಿನವೇ ಗ್ರಾಹ್ಯವು, ಇತರ ಮಾಸಗಳಲ್ಲಿಯೂ ಹೀಗೆಯೇ ನಿರ್ಣಯವು. ಚತುರ್ಥಿಯು ಭಾನು, ಮಂಗಳವಾರದಲ್ಲಿ ಬಂದರೆ ಪ್ರಶಸ್ತವೆನಿಸುವುದು.

ಈ ಚತುರ್ಥಿಯಲ್ಲಿ ಚಂದ್ರದರ್ಶನವನ್ನು ಮಾಡಿದವನಿಗೆ ಮಿಥ್ಯಾಪವಾದ (ಇಲ್ಲದ ದೂರು) ದೋಷವುಂಟಾಗುವುದು. ಆದ್ದರಿಂದ ಚತುರ್ಥಿಯಲ್ಲಿ ಹುಟ್ಟಿದ ಚಂದ್ರನನ್ನು ಪಂಚಮಿಯಲ್ಲಿ ನೋಡುವ ಪಕ್ಷದಲ್ಲಿ ವಿನಾಯಕವ್ರತದಿನವಾದಾಗ್ಯೂ ದೋಷವಿಲ್ಲ. ಅಂದರೆ ಪೂರ್ವದಿನದ ಸಾಯಾಹ್ನ ಮೊದಲ್ಗೊಂಡು ಪ್ರಾರಂಭವಾದ ಚತುರ್ಥಿಯಲ್ಲಿ, ವಿನಾಯಕವ್ರತವನ್ನು ಮಾಡದಿದ್ದಾಗ್ಯೂ, ಆದಿನದಲ್ಲಿಯೇ ಚಂದ್ರದರ್ಶನದಿಂದ ದೋಷವುಂಟಾಗುವುದೆಂದು ಸಿದ್ಧವಾಗುತ್ತದೆ. ಚತುರ್ಥಿಯಲ್ಲಿ ಹುಟ್ಟಿದ ಚಂದ್ರನ ದರ್ಶನವು, ಎಂದು ಹೇಳುವ ಪಕ್ಷದಲ್ಲಿ ಮೊದಲರಾತ್ರಿಯಲ್ಲಿ ಕಳೆದುಳಿದ, ಎರಡನೆಯ ದಿನದಲ್ಲಿ ೫ ಅಥವಾ ೬ ಮುಹೂರ್ತಕಾಲಮಾತ್ರವಿರುವ ಚತುರ್ಥೀದಿನವನ್ನೂ, ಚಂದ್ರದರ್ಶನ ವಿಷಯದಲ್ಲಿ ವಿ

ಷೇಧಿಸಬೇಕಾಗಿಬರುವುದು. ಈಗ ಲೋಕದಲ್ಲೆಲ್ಲರೂ ಒಂದೇ ಪಕ್ಷವನ್ನವಲಂಬಿಸಿ ವಿನಾಯಕವ್ರತದಿನದಲ್ಲಿ ಚಂದ್ರನನ್ನು ನೋಡಕೂಡದೆಂಬಾಚಾರವನ್ನು ನಡೆಯಿಸುತ್ತಿರುವರು. ಉದಯಕಾಲದಲ್ಲಿ ಅಥವಾ ದರ್ಶನಕಾಲದಲ್ಲಿ ಚತುರ್ಥಿಯು ಇದೆಯೋ ಇಲ್ಲವೋ ಎಂಬುದನ್ನು ವಿಚಾರಿಸಿ ನಡಯಿಸುತ್ತಾ ಬಂದಿಲ್ಲ. ಹೀಗೆ ಚಂದ್ರದರ್ಶನ ಮಾಡಿದ್ದರ ದೋಷನಿವಾರಣೆಗಾಗಿ''ಸಿಂಹಃಪ್ರಸೇನಮವಧೀತ್ಸಿಂಹೋ ಜಾಂಬವತಾ ಹತಃ । ಸುಕುಮಾರಕಮಾರೋದೀಸ್ತವಹ್ಯೇಷಸ್ಯಮಂತಕಃ ॥ ೧ ॥'' ಸಿಂಹವು ಪ್ರಸೇನನನ್ನು ಕೊಂದಿತು. ಅದನ್ನು ಜಾಂಬವನು ಕೊಂದು ಈ ಸ್ಯಮಂತಕರತ್ನವನ್ನು ತಂದಿದ್ದಾನೆ, ಎಲೈ ಬಾಲಕನೇ! ನೀನು ಅಳಬೇಡ, ಈ ರತ್ನವನ್ನು ನೀನೇ ತೆಗೆದುಕೊ ॥ ೧ ॥ ಎಂಬ ಸ್ಯಮಂತಕೋಪಾಖ್ಯಾನ ಶ್ಲೋಕವನ್ನು ಜಪಮಾಡಬೇಕು. ಈ ಚತುರ್ಥಿಯಲ್ಲಿ ಮಣ್ಣುಮೊದಲಾದವುಗಳಿಂದ ಮಾಡಿದ ಗಣಪತಿ ಪ್ರತಿಮೆಯಲ್ಲಿ ಪ್ರಾಣಪ್ರತಿಷ್ಠೆ ಮಾಡಿ ವಿನಾಯಕನನ್ನು ಷೋಡಶೋಪಚಾರಗಳಿಂದ ಪೂಜಿಸಿ ಒಂದುಕಡುಬನ್ನು ನೈವೇದ್ಯಮಾಡಿ, ಗಂಧವನ್ನು ಸವರಿದಿಂದೂರ್ವೆಗಳನ್ನು ತೆಗೆದುಕೊಂಡು ಗಣಾಧಿಪಾಯ। ಉಮಾಪುತ್ರಾಯ। ಅಘನಾಶನಾಯ।ವಿನಾಯಕಾಯ। ಈಶಪುತ್ರಾಯ।ಸರ್ವಸಿದ್ಧಿಪ್ರದಾಯ।ಏಕದಂತಾಯ। ಇಭವಕ್ತ್ರಾಯ।ಮೂಷಿಕವಾಹನಾಯ। ಕುಮಾರಗುರವೇ॥ ಎಂಬ ಹತ್ತುನಾಮಗಳಿಂದ ಒಂದೊಂದಕ್ಕೆ ಎರಡೆರಡರಂತೆ ದೂರ್ವೆಗಳನ್ನು ವಿಘ್ನೇಶ್ವರನಿಗೆ ಸಮರ್ಪಿಸಿ, ಉಳಿದ ಒಂದು ದೂರ್ವೆಯನ್ನು ಹತ್ತುನಾಮಗಳಿಂದಲೂ ಸಮರ್ಪಣೆ ಮಾಡಬೇಕು. ಹತ್ತು ಕಡುಬುಗಳನ್ನು ಬ್ರಾಹ್ಮಣರಿಗೆ ದಾನಮಾಡಿ, ತಾನು ಭೋಜನಮಾಡಬೇಕು ಎಂಬುದೇ ಸಂಕ್ಷೇಪವಾದ ವ್ರತವಿಧಿಯು. ಭಾದ್ರಪದ ಶುದ್ಧ ಪಂಚಮಿಯು ಋಷಿಪಂಚಮಿ ಎನ್ನಿಸಿಕೊಳ್ಳುವುದು. ಈ ಪಂಚಮಿಯು ಮಧ್ಯಾಹ್ನ ವ್ಯಾಪ್ತಿಯುಳ್ಳದ್ದಾಗಿರಬೇಕು. ಎರಡು ದಿನಗಳಿಗೂ ಮಧ್ಯಾಹ್ನ ವ್ಯಾಪ್ತಿ ಇದ್ದಾಗ್ಯೂ ಇಲ್ಲದಿದ್ದಾಗ್ಯೂ ಮೊದಲನೆಯದನ್ನೇ ಗ್ರಹಿಸಬೇಕು. ಈ ದಿನದಲ್ಲಿಋಷಿಗಳನ್ನು ಪೂಜಿಸಿ ಉಳದಿರುವ ಭೂಮಿಯಲ್ಲಿ ಬೆಳೆದಶಾಕವನ್ನು (ಸೊಪ್ಪು) ಆಹಾರವಾಗಿ ಉಪಯೋಗಿಸಬೇಕು ''ಶುಕ್ಲೇಭಾದ್ರಪದೇಸ್ನಾನಂ

ಷಷ್ಠ್ಯಾಂಭಾಸ್ಕರಪೂಜನಂ । ಪ್ರಾಶನಂಪಂಚಗವ್ಯಸ್ಯ ಚಾಶ್ವಮೇಧ ಫಲಾಧಿಕಂ ॥೧॥"ಭಾದ್ರಪದಶುದ್ಧ ಷಷ್ಠಿಯಲ್ಲಿ ಸ್ನಾನವೂ, ಸೂರ್ಯಪೂಜೆಯೂ, ಪಂಚಗವ್ಯಪ್ರಾಶನೆಯೂ ಅಶ್ವಮೇಧಕ್ಕಿಂತಲೂ ಹೆಚ್ಚಾದ ಫಲವನ್ನುಂಟುಮಾಡುವುದು. ಈ ಸೂರ್ಯಷಷ್ಠಿಯು ಸಪ್ತಮೀಯುಕ್ತವಾದದ್ದಾಗಿರಬೇಕು. ಈ ದಿನದಲ್ಲಿ ಷಣ್ಮುಖಸ್ವಾಮಿಯನ್ನು ದರ್ಶನ ಮಾಡಿದರೆ ಬ್ರಹ್ಮಹತ್ಯಾದಿಪಾಪಗಳು ಪರಿಹಾರವಾಗುವುವು.

—ದೂರ್ವಾಷ್ಟಮಿ—

ದೂರ್ವಾಷ್ಟಮಿ—ಭಾದ್ರಪದ ಶುಕ್ಲಾಷ್ಟಮಿಯೇ ದೂರ್ವಾಷ್ಟಮಿ, ಮೊದಲನೆಯ ದಿನದ್ದನ್ನು ಗ್ರಹಿಸಬೇಕು. ಮೂಲ, ಜ್ಯೇಷ್ಠ ಈ ನಕ್ಷತ್ರಗಳಿಂದ ಕೂಡಿದ ಅಷ್ಟಮಿಯನ್ನು ಬಿಡಬೇಕು. ಮೂಲ, ಜ್ಯೇಷ್ಠ ಈ ನಕ್ಷತ್ರಗಳಿಂದ ಸೇರಿದ ಅಷ್ಟಮಿಯು ಸಿಕ್ಕದಿದ್ದಲ್ಲಿ ಇವುಗಳಿಂದ ಸೇರಿದ ಅಷ್ಟಮಿಯನ್ನೇ ಗ್ರಹಿಸಬೇಕು. ಈ ದೂರ್ವಾಪೂಜನವ್ರತವನ್ನು ಸೂರ್ಯನು ಕನ್ಯಾರಾಶಿಯಲ್ಲಿ ರುವಾಗಲೂ, ಅಗಸ್ತ್ಯೋದಯ ಕಾಲದಲ್ಲಿಯೂ ಬಿಡಬೇಕು. (ಭಾದ್ರಪದ ಶುದ್ಧ ಅಷ್ಟಮಿಯಲ್ಲಿ ಅಗಸ್ತ್ಯೋದಯವುಂಟಾಗದಿದ್ದರೆ ಹಿಂದಣ ಕೃಷ್ಣಾಷ್ಟಮಿಯಲ್ಲಿ (ಅಧಿಕಕೃಷ್ಣಾಷ್ಟಮಿ) ಯೇ ದೂರ್ವಾಷ್ಟಮೀ ವ್ರತವನ್ನು ಮಾಡಬೇಕೆಂದು ಹೇಮಾದ್ರಿ, ದೀಪಿಕೆಗಳಲ್ಲಿ ಹೇಳಿದೆ. " ಅಧಿಮಾಸೇತುಸಂಪ್ರಾಪ್ತೇನಭಸ್ಯ ಉದಯೇಮುನೇಃ । ಅರ್ವಾಗ್ದೂರ್ವಾವ್ರತಂ ಕಾರ್ಯಂ ಪರತೋನೈವ ಕುತ್ರಚಿತ್ ॥" ಅಧಿಕಮಾಸವಾದರೂ, ಅಗಸ್ತ್ಯೋದಯವಾದರೂ ಪೂರ್ವಮಾಸದ ಅಷ್ಟಮಿಯನ್ನಲ್ಲದೆ ಎಂದಿಗೂ ಎರಡನೆಯಮಾಸದ (ನಿಜಭಾದ್ರಪದದ) ಅಷ್ಟಮಿಯನ್ನು ಗ್ರಹಿಸಬೇಕೆಂತಲೂ, 'ಸಿಂಹಸ್ಥೇಸೋತ್ತಮಾಸೂರ್ಯೇ " ಸೂರ್ಯನು ಸಿಂಹರಾಶಿಯಲ್ಲಿರುವಾಗಣದೂರ್ವಾಷ್ಟಮಿಯೇ ಉತ್ತಮವಾದದ್ದೆಂತಲೂ, ವಚನವಿರುವುದರಿಂದ, ಅಧಿಕದಲ್ಲಿಯೇ ಮಾಡಬೇಕು. ಅದಕ್ಕೆ ವಿಧಿಯು-:ಪರಿಶುದ್ಧವಾದ ಸ್ಥಳದಲ್ಲಿ ಹುಟ್ಟಿರುವ ಗರಿಕೆಯಮೇಲೆ ಶಿವಲಿಂಗವನ್ನಿಟ್ಟು ದೂರ್ವೆಯೊಡನೆ ಈಶ್ವರನನ್ನು ಪೂಜಿಸಬೇಕು. ಅನಂತರದಲ್ಲಿ ಪರಮೇಶ್ವರನಿಗೆ ದಧ್ಯಕ್ಷತೆಗಳೊಡನೆ ಅರ್ಘ್ಯವನ್ನು ಕೊಡಬೇಕು. "ತ್ವಂದೂರ್ವೇ

ಮೃತಜನ್ಮಾ ಸಿವಂದಿತಾ ಸಿಸುರಾಸುರೈಃ । ಸೌಭಾಗ್ಯಂಸಂತತಿಂದೇಹಿ ಸರ್ವಕಾರ್ಯಕರೀಭವ ॥೧॥ ಯಥಾಶಾಖಾಪ್ರಶಾಖಾಭಿರ್ವಿಸ್ತೃತಾಸಿಮಹೀತಲೇ । ತಥಾಮಮಾಪಿಸಂತಾನಂ ದೇಹಿತ್ವಮಜರಾಮರಂ॥೨॥'' ಎಲೈ ದೂರ್ವೆಯೇ! ನೀನು ನಾಶರಹಿತವಾದ ಜನ್ಮವುಳ್ಳದ್ದಾಗಿದ್ದಿ. ದೇವತೆಗಳೂ, ರಾಕ್ಷಸರೂ ನಿನ್ನನ್ನು ವಂದಿಸುವರು. ನೀನು ನನಗ ಸೌಭಾಗ್ಯವನ್ನೂ, ಸಂತಾನವನ್ನೂ ಕೊಡು. ನನ್ನ ಕಾರ್ಯಗಳೆಲ್ಲವನ್ನೂ ನೆರವೇರಿಸು॥೧॥ ನೀನು ಭೂಮಿಯಲ್ಲಿ ಶಾಖೋಪಶಾಖೆಗಳಿಂದ ಹೇಗೆ ಹರಡಿಕೊಂಡಿರುವೆಯೊ ಹಾಗೆಯೇ ಜರಾಮರಣವನ್ನು ಳಿದಸಂತಾನ ಸಂಪತ್ತನ್ನು ನನಗೆಕೊಡು॥೨ ಎಂಬುವು ಮಂತ್ರಗಳು. ಈ ಸಂದರ್ಭದಲ್ಲಿ ಬೇಯಿಸಿದ ಆಹಾರಪದಾರ್ಥಗಳನ್ನು ತಿನ್ನಕೂಡದು. ಉಪ್ಪು, ಕಾರಗಳನ್ನು ಸೇವಿಸಕೂಡದೆಂದು ನಿರ್ಣಯಸಿಂಧು ಮೊದಲಾದ ಗ್ರಂಥಗಳಲ್ಲಿ ಹೇಳಿದೆ. ಈ ವ್ರತವು ಸ್ತ್ರೀಯರಿಗೆ ನಿತ್ಯವಾದದ್ದು. ಈ ದಿನದಲ್ಲಿ ಕೇವಲಾಷ್ಟಮಿಯನ್ನೂ, ಕೇವಲ ಜ್ಯೇಷ್ಠಾನಕ್ಷತ್ರವನ್ನೂ ಉದ್ದೇಶಿಸಿ ಜ್ಯೇಷ್ಠಾದೇವೀಪೂಜೆಯೆಂಬವ್ರತವನ್ನು ಮಾಡಬೇಕು ದಕ್ಷಿಣದೇಶದವರು ಜ್ಯೇಷ್ಠಾನಕ್ಷತ್ರವೊಂದನ್ನೇ ಮುಖ್ಯವಾಗಿಟ್ಟುಕೊಂಡು ಈ ವ್ರತವನ್ನು ಮಾಡುತ್ತಾರೆ. ಅನೂರಾಧೆಯಲ್ಲಿ ಆವಾಹನೆಯೂ, ಜ್ಯೇಷ್ಠೆಯಲ್ಲಿ ಪೂಜೆಯೂ, ಮೂಲದಲ್ಲಿ ವಿಸರ್ಜನೆಯೂ ಹೀಗೆ ಮೂರುದಿನಗಳಲ್ಲಿ ಆ ವ್ರತವನ್ನು ಮಾಡಬೇಕು.

"ಮೈತ್ರಶಾಕ್ರಭಮೂಲೇಷು ಜ್ಯೇಷ್ಠಾಹ್ವಾರ್ಚಾವಿಸರ್ಜನಂ । ನಕಾಲನಿಯಮಸ್ತತ್ರನಚಪಾತಾದಿಲಕ್ಷಣಂ ॥ '' ಅನೂರಾಧೆಯಲ್ಲಿ ಜ್ಯೇಷ್ಠಾದೇವಿಯ ಆವಾಹನೆಯನ್ನೂ, ಜ್ಯೇಷ್ಠೆಯಲ್ಲಿ ಪೂಜೆಯನ್ನೂ, ಮೂಲದಲ್ಲಿ ವಿಸರ್ಜನೆಯನ್ನೂ ಮಾಡಬೇಕು. ಇದಕ್ಕೆ ಕಾಲದಲ್ಲಿ ಬೇರೆನಿಯಮವೂ, ಪಾತಾದಿಗಳ ದೋಷವೂ ಇಲ್ಲ ಎಂದು ಗ್ರಂಥಾಂತರದಲ್ಲಿ ಹೇಳಿದೆ. ಆವಾಹನೆವಿಸರ್ಜನಗಳನ್ನು ಮಾಡುವ ದಿನಗಳಲ್ಲಿ ಪೂರ್ವೆಯದಿನಕ್ಕೆ ತೊಂದರೆಯುಂಟಾದರೆ ಮಾಡಬೇಕಾದ ನಿರ್ಣಯವು: —ಪೂರ್ವದಿನದ ಮಧ್ಯಾಹ್ನವೊದಲ್ಗೊಂಡು ಪ್ರಾರಂಭವಾದ ಜ್ಯೇಷ್ಠಾನಕ್ಷತ್ರವು ಎರಡನಯದಿನ ಮಧ್ಯಾಹ್ನದಲ್ಲಿ ಅಥವಾ ಮಧ್ಯಾಹ್ನಕ್ಕಿಂತಲೂ ಮುಂಚೆ ಪೂರಯಿಸುವುದಾದರೆ ಪೂರ್ವದಿನದಲ್ಲಿಯೇ ಪೂಜೆಯನ್ನು ಮಾಡಬೇಕು. ಪೂರ್ವ

ದಿನದ ಮಧ್ಯಾಹ್ನಾನಂತರದಲ್ಲಿ ಪ್ರಾರಂಭವಾಗಿ ಎರಡನೆಯದಿನದ ಮಧ್ಯಾಹ್ನದಲ್ಲಿ ಪೂರಯಿಸಿದರೆ ಆಗ ಅಷ್ಟಮಿಯಯೋಗದಿಂದ ಪೂರ್ವದಿನವನ್ನಾಗಲಿ, ಎರಡನೆಯ ದಿನವನ್ನಾಗಲಿ ಗ್ರಹಿಸಬೇಕು. ಎರಡುದಿನಗಳಿಗೂ ಅಷ್ಟಮಿಯ ಯೋಗವಿದ್ದರೆ ಪೂರ್ವದಿನವನ್ನೇಗ್ರಹಿಸಬೇಕು. ಪೂರ್ವದಿನದ ಮಧ್ಯಾಹ್ನದಲ್ಲಾಗಲಿ, ಮಧ್ಯಾಹ್ನವು ಕಳೆದಮೇಲಾಗಲೀ ಪ್ರಾರಂಭವಾಗಿ ಎರಡನೆಯ ದಿನದಲ್ಲಿ ಮಧ್ಯಾಹ್ನಾನಂತರದಲ್ಲಿದ್ದು ಅಪರಾರ್ಣ್ಣದ ಸ್ಪರ್ಶವನ್ನೂ ಪಡೆದರೆ ಅಷ್ಟಮಿಯ ಯೋಗವಿಲ್ಲದಿದ್ದಾಗ್ಯೂ ಎರಡನೆಯದನ್ನೇ ಗ್ರಹಿಸತಕ್ಕದ್ದು.

—ವಿಷ್ಣುಪರಿವರ್ತನೋತ್ಸವವು—

ವಿಷ್ಣುಪರಿವರ್ತನೋತ್ಸವವು—ಭಾದ್ರಪದಶುದ್ಧ ಏಕಾದಶಿಯಲ್ಲಾಗಲೀ, ದ್ವಾದಶಿಯಲ್ಲಿ ಪಾರಣೆಯಾದಮೇಲಾಗಲೀವಿಷ್ಣುಪರಿವರ್ತನೋತ್ಸವವನ್ನು ನಡೆಯಿಸಬೇಕು. ಅದರಲ್ಲಿ-'ಶ್ರುತೇರ್ಋಕ್ಷಮಧ್ಯೇ ಪರಿವರ್ತಮೇತಿ' ಶ್ರವಣನಕ್ಷತ್ರಮಧ್ಯಭಾಗದಲ್ಲಿ ಪರಿವರ್ತನೆಯನ್ನು ಹೊಂದುವುದು ಎಂಬ ವಚನಾನುಸಾರವಾಗಿ ಶ್ರವಣನಕ್ಷತ್ರ ಘಟಿಕಾಪ್ರಮಾಣವನ್ನು ಮೂರು ಸಮಭಾಗಮಾಡಿದರೆ, ಮಧ್ಯಭಾಗದ ಯೋಗವು ಏಕಾದಶಿಯಲ್ಲಿದ್ದರೆ ಆ ದಿನದಲ್ಲಿಯೂ, ದ್ವಾದಶಿಯಲ್ಲಿದ್ದರೆ ಆ ದಿನದಲ್ಲಿಯೂ, ಎರಡುದಿನಗಳಲ್ಲಿಯೂ ಶ್ರವಣಮಧ್ಯಯೋಗವಿಲ್ಲದಿದ್ದರೂ, ದ್ವಾದಶಿಯಲ್ಲಿಯೂ ಪರಿವರ್ತನೋತ್ಸವವನ್ನು ಮಾಡಬೇಕು ಎಂಬುದೇ ಮೊದಲಾದ ವ್ಯವಸ್ಥೆಯುಂಟು. ಆಗ-ಸಂಧ್ಯಾಕಾಲದಲ್ಲಿ ವಿಷ್ಣುವನ್ನುಪೂಜಿಸಿ "ವಾಸುದೇವಜಗನ್ನಾಥಪ್ರಾಪ್ತೇಯಂ ದ್ವಾದಶೀತವ । ಪಾರ್ಶ್ವೇನಪರಿವರ್ತಸ್ವಸುಖಂ ಸ್ವಪಿಹಿ ಮಾಧವ॥೧॥" ಎಲೈ ಜಗನ್ನಿಯಾಮಕನಾದ ಪರಮಾತ್ಮನೇ! ಈ ದ್ವಾದಶಿಯು ಪ್ರಾಪ್ತವಾಗಿದೆ. ಮಗ್ಗುಲಾಗಿತಿರುಗಿಕೊಂಡು ಮಲಗಿ ಸುಖದಿಂದ ನಿದ್ರೆಮಾಡು ॥೧॥ ಎಂದು ಪ್ರಾರ್ಥಿಸಬೇಕು.

—ಶ್ರವಣದ್ವಾದಶೀವ್ರತವು—

ಶ್ರವಣದ್ವಾದಶೀವ್ರತವು—ಯಾವದಿನದಲ್ಲಿ ಮುಹೂರ್ತವೇ ಮೊದಲಾದ ಶ್ರವಣನಕ್ಷತ್ರದ ಅಲ್ಪಕಾಲಗಳ ಯೋಗವಾದರೂ, ದ್ವಾದಶಿಗೆ ಉಂಟಾಗುವುದೋ ಆ ದಿನದಲ್ಲಿ ಉಪವಾಸಮಾಡಬೇಕು. ಉತ್ತರಾಷಾಢದ ವೇಧೆಯುಳ್ಳ ಶ್ರವಣನಕ್ಷತ್ರಯೋಗವು ಶ್ರೇಷ್ಠವಲ್ಲವೆಂದು ನಿರಾಕರಿಸಿ

ರುವ ವಚನಗಳು ಇದರಿಂದ ನಿರ್ಮೂಲವಾದಂತಾಯಿತು. ಪೂರ್ವದಿನದಲ್ಲಿ ಏಕಾದಶೀವೇಧೆಯುಳ್ಳ ದ್ವಾದಶಿಯಿದ್ದು, ಎರಡನೆಯ ದಿನದಲ್ಲಿಯೂ ದ್ವಾದಶಿಯು ಉಳಿದಿದ್ದು, ಎರಡುದಿನಗಳಿಗೂ ಶ್ರವಣನಕ್ಷತ್ರಯೋಗವಿದ್ದರೆ ಆ ಪೂರ್ವದಿನದಲ್ಲಿ, ಏಕಾದಶೀ, ದ್ವಾದಶೀ, ಶ್ರವಣ ಈ ಮೂರರ ಯೋಗದಿಂದ ವಿಷ್ಣು ಶೃಂಖಲಯೋಗವುಂಟಾಗುವುದರಿಂದ ಆ ದಿನದಲ್ಲಿ ಉಪವಾಸಮಾಡಬೇಕು. ಉದಾಹರಣೆ—ಏಕಾದಶಿ ೧೮, ಉತ್ತರಾಷಾಢ ೬, ದ್ವಾದಶಿ ೨೦, ಶ್ರವಣ ೧೨, ಅಥವಾ ಏಕಾದಶಿ ೧೮ ಉತ್ತರಾಷಾಢ ೨೫ ದ್ವಾದಶಿ ೨೦ ಶ್ರವಣ ೧೮, ಇಲ್ಲಿ ಎರಡನೆಯ ಉದಾಹರಣೆಯಲ್ಲಿ ಏಕಾದಶಿಗೆ ಶ್ರವಣಯೋಗವಿಲ್ಲದಿದ್ದಾಗ್ಯೂ ಶ್ರವಣಯುಕ್ತವಾದ ದ್ವಾದಶಿಯ ಸ್ಪರ್ಶಮಾತ್ರದಿಂದ ವಿಷ್ಣುಶೃಂಖಲಯೋಗವು. ಈ ಎರಡುಬಗೆಯ ಯೋಗಗಳನ್ನೂ ಹಗಲಿನಲ್ಲಿಯೇ ಗ್ರಹಿಸಬೇಕಲ್ಲದೆ ರಾತ್ರಿಯಲ್ಲಿ ಕೂಡದೆಂದು ಪುರುಷಾರ್ಥ ಚಿನ್ತಾಮಣಿಯಲ್ಲಿ ಹೇಳಿದೆ. ರಾತ್ರಿಯಾದರೂ, ನಿಶೀಥಾನಂತರದಲ್ಲಾದರೂ ಯೋಗವನ್ನು ಗ್ರಹಿಸಬೇಕೆಂದು ನಿರ್ಣಯಸಿಂಧುಕಾರನ ಆಶಯವು. ರಾತ್ರಿಯ ಮೊದಲನೆಯ ಯಾಮದವರೆಗೂ ತಿಥಿಗಳೆರಡಕ್ಕೂ ಶ್ರವಣಯೋಗವನ್ನು ಗ್ರಹಿಸಬಹುದು. ಎರಡನೆಯ ಯಾಮ ಮೊದಲಾದವುಗಳಲ್ಲಿ ಈ ಯೋಗವನ್ನು ಗ್ರಹಿಸಕೂಡದೆಂದು ಕೆಲವರು ಅಭಿಪ್ರಾಯಪಡುವರು. ಇವುಗಳಲ್ಲಿ ಕೊನೆಯಪಕ್ಷವೇ ಯುಕ್ತವಾದದ್ದೆಂದು ತೋರುವುದು. ಈ ವಿಷ್ಣುಶೃಂಖಲಯೋಗದಲ್ಲಿ ಎರಡುವ್ರತಗಳಿಗೂ (ಏಕಾದಶೀ, ಶ್ರವಣದ್ವಾದಶೀ) ತಂತ್ರದಿಂದ ಏಕಾದಶಿಯಲ್ಲಿಯೇ ಉಪವಾಸಮಾಡಿ ದ್ವಾದಶಿಯಲ್ಲಿ ಮುಂದೆಹೇಳುವ ಪಾರಣೆಯ ಕಾಲನಿರ್ಣಯಾನುಸಾರವಾಗಿ ಪಾರಣೆಯನ್ನು ಮಾಡಬೇಕು. ಮೇಲೆಹೇಳಿದಂತೆ ವಿಷ್ಣುಶೃಂಖಲಯೋಗವಿಲ್ಲದೆ ಶುದ್ಧಾಧಿಕದ್ವಾದಶಿಯಾಗಿ ಎರಡುದಿನಗಳಿಗೂ ಶ್ರವಣಯೋಗವುಂಟಾಗುವುದಲ್ಲದೆ ಪೂರ್ವದಿನದಲ್ಲಿ ಉದಯಕಾಲದಲ್ಲಿ ಶ್ರವಣವಿಲ್ಲದಂತಾದರೆ ಎರಡನೆಯದನ್ನೇ ಗ್ರಹಿಸಬೇಕು. ಒಂದುವೇಳೆ ಎರಡುದಿನಗಳಿಗೂಉದಯಕಾಲದಲ್ಲಿ ದ್ವಾದಶಿಯುದಿನ ಶ್ರವಣನಕ್ಷತ್ರಯೋಗವಿದ್ದರೆ ಮೊದಲನೆಯದನ್ನೇ ಗ್ರಹಿಸಬೇಕು. ವಿದ್ಧಾಧಿಕದಲ್ಲಿಯೂ, ಎರಡನೆಯದಿನದಲ್ಲಿಯೂ ಸೂರ್ಯೋದ

ಯಕಾಲದಲ್ಲಿ ಅಥವಾ ಸೂರ್ಯೋದಯಾನಂತರದಲ್ಲಾಗಲಿ ಶ್ರವಣಯೋಗ ವುಂಟಾದರೂ ಎರಡನೆಯದನ್ನೇ ಗ್ರಹಿಸಬೇಕೆಂಬ ವಿಷಯದಲ್ಲಿ ಸಂಶಯ ವಿಲ್ಲ. ಎರಡುದಿನಗಳಿಗೂ ಶ್ರವಣಯೋಗವುಂಟಾಗಿ ಹಿಂದೆಹೇಳಿದಂತೆ ವಿ ಷ್ಣುಶೃಂಖಲಯೋಗವಾದರೆ ಮೊದಲನೆಯದನ್ನೂ, ಹಾಗಿಲ್ಲದಿದ್ದರೆ ಎರಡ ನೆಯದನ್ನೂ ಗ್ರಹಿಸಬೇಕೆಂದು ತಿಳಿಯತಕ್ಕದ್ದು, ಹೀಗೆ ಏಕಾದಶಿ ಶ್ರವ ಣದ್ವಾದಶಿ ಈ ಎರಡುದಿನಗಳಲ್ಲಿಯೂ ಒಂದೇಸಮವಾಗಿ ಉಪವಾಸ ಮಾಡಬೇಕಾಗಿ ಬಂದರೆ ಎರಡುವ್ರತಗಳೂ ನಿತ್ಯವಾದ್ದರಿಂದ ಶಕ್ತಿಯುಳ್ಳ ವರು ಎರಡು ಉಪವಾಸಗಳನ್ನು ಮಾಡಬೇಕು. ಎರಡುವ್ರತಗಳೂ ಒಂ ದೇದೇವತೆಯನ್ನು ಉದ್ದೇಶಿಸಿರುವುದರಿಂದ ಪಾರಣೆಯು ಲೋಪವಾದಾ ಗ್ಯೂ ದೋಷವಿಲ್ಲ. ಎರಡುಪವಾಸಗಳನ್ನು ಮಾಡುವುದಕ್ಕೆ ಶಕ್ತಿ ಇಲ್ಲದ ವನು, ಏಕಾದಶೀವ್ರತಕ್ಕೆ ಸಂಕಲ್ಪಮಾಡುವುದಕ್ಕಿಂತ ಮುಂಚೆಯೇ ತ ನ್ನ ಶಕ್ತಿಯನ್ನು ನಿಶ್ಚಯಿಸಿ, ಏಕಾದಶಿಯಲ್ಲಿ ಫಲಾಹಾರ ಮೊದಲಾದವು ಗಳನ್ನು ಮಾಡಿ ದ್ವಾದಶಿಯಲ್ಲಿ ಉಪವಾಸಮಾಡಬೇಕು. "ಉಪೋಷ್ಯ ದ್ವಾದಶೀಂಪುಣ್ಯಾಂ ವಿಷ್ಣುಋಕ್ಷೇಣಸಂಯುತಾಂ। ಏಕಾದಶ್ಯುದ್ಭವಂ ಪುಣ್ಯಂ ನರಃಪ್ರಾಪ್ನೋತ್ಯಸಂಶಯಂ॥೧॥" ಶ್ರವಣದ್ವಾದಶಿಯಲ್ಲಿ ಉಪ ವಾಸಮಾಡಿದ ಮನುಷ್ಯನಿಗೆ ಏಕಾದಶೀ ಉಪವಾಸದಫಲವು ತಪ್ಪದೆ ಬ ರುವುದು ॥೧॥ ಎಂಬ ನಾರದವಚನದಿಂದಲೂ ಮತ್ತು "ಶ್ರವಣೇನಯುತಾ ಚೇತ್ಸ್ಯಾತ್ ದ್ವಾದಶೀಸಾಹಿವೈಷ್ಣವೈಃ। ಸ್ಮಾರ್ತೈಶ್ಚೋಪೋಷಣೀ ಯಾಸ್ಯಾತ್ತ್ಯಜೇದೇಕಾದಶೀಂಸದಾ॥೧॥' ದ್ವಾದಶಿಯಲ್ಲಿ ಶ್ರವಣನಕ್ಷತ್ರ ವುಕೂಡಿದರೆ ಏಕಾದಶಿಯನ್ನು ಬಿಟ್ಟು ಸ್ಮಾರ್ತರೂ, ವೈಷ್ಣವರೂ ಸಹ ದ್ವಾದಶಿಯಲ್ಲಿಯೇ ಉಪವಾಸಮಾಡಬೇಕು ॥೧॥ ಎಂಬ ಮಾಧವಾಚಾ ರ್ಯರ ವಚನದಿಂದಲೂ ಈ ಸಂದರ್ಭದಲ್ಲಿ ಏಕಾದಶೀ ವ್ರತಲೋಪದಿಂ ದ ದೋಷವಿಲ್ಲ. ಇಲ್ಲಿ ಏಕಾದಶಿಯನ್ನುಬಿಡುವದೆಂದರೆ ಫಲಾಹಾರ ಮೊ ದಲಾದವುಗಳನ್ನು ಮಾಡಬೇಕೆಂದಲ್ಲದೆ ಭೋಜನವನ್ನು ಮಾಡಬೇಕೆಂ ಬರ್ಥವಲ್ಲವು, ಯಾವನು ಎರಡುದಿನಗಳಲ್ಲಿಯೂ ತನಗೆ ಉಪವಾಸಮಾ ಡುವ ಶಕ್ತಿಯುಂಟೆಂದು ಭ್ರಾಂತಿಯಿಂದ ತಿಳಿದು ಅದರಂತೆ ಸಂಕಲ್ಪಮಾ ಡಿ, ಏಕಾದಶಿಯಲ್ಲಿ ಉಪವಾಸಮಾಡಿ ದ್ವಾದಶಿಯಲ್ಲುಪವಾಸಮಾಡಲಾರ

ದೆ ಅಶಕ್ತನಾಗುವನೋ ಅಂತಹವನು ದ್ವಾದಶಿಯಲ್ಲಿ ವಿಷ್ಣುಪೂಜೆಯಂ ಮಾಡಿ ಅನಂತರದಲ್ಲಿ ಪಾರಣೆಯನ್ನು ಮಾಡಬಹುದು. ಇಲ್ಲಿ ವ್ರತಾಂಗ ಪೂಜೆಯನ್ನು ಮಾಡಿ ತಾನು ಉಪವಾಸಮಾಡಲು ಶಕ್ತನಲ್ಲದ್ದರಿಂದ ಉಪವಾಸಕ್ಕೆ ಬದಲಾಗಿ ವಿಷ್ಣುಪೂಜೆಯನ್ನು ಮಾಡುತ್ತೇನೆಂದು ಸಂಕಲ್ಪ ಮಾಡಿಕೊಂಡು ಮತ್ತೆ ಪೂಜೆಮಾಡಬೇಕು. ಇಲ್ಲಿ ದ್ವಾದಶಿಯಲ್ಲಿ ಶ್ರವಣ ನಕ್ಷತ್ರಯೋಗವಿಲ್ಲದೆ ಏಕಾದಶಿಗೆ ಮಾತ್ರ ಯೋಗವಿದ್ದರೆ ಆದಿನವೇ ಶ್ರವಣ ದ್ವಾದಶೀ ವ್ರತವನ್ನು ಮಾಡಬೇಕು ವಿದ್ಧೈಕಾದಶಿಯಲ್ಲಿ ಶ್ರವಣ ಯೋಗವುಂಟಾದರೆ ಯಾರಿಗೆ ಆ ದಿನದಲ್ಲಿ ಏಕಾದಶೀವ್ರತವು ನಡೆಯಬೇಕಾಗಿದೆಯೋ ಅವರು ತಂತ್ರದಿಂದ ಎರಡು ಉಪವಾಸಗಳನ್ನು ಮಾಡಬೇಕು. ಶ್ರಾವಣ ದ್ವಾದಶೀವ್ರತವನ್ನು ಹಿಡಿದಿರುವ ಇತರರು ಎರಡು ಉಪವಾಸಗಳನ್ನೂ ಮಾಡಬೇಕು. ಈವಿಷಯದಲ್ಲಿ ಶಕ್ತಿ ಇಲ್ಲದವರು ಮೊದಲದಿನದಲ್ಲಿ ಫಲಾಹಾರವನ್ನೂ, ಎರಡನೆಯದಿನದಲ್ಲಿ ಉಪವಾಸವನ್ನೂ ಮಾಡಬೇಕೆಂದು ತೋರುವುದು.

—ಪಾರಣೆಯು—

ಪಾರಣೆಯು—ತಿಥಿ ಮತ್ತು ನಕ್ಷತ್ರ ಇವೆರಡರ ಕೊನೆಯಲ್ಲಿ ಪಾರಣೆಮಾಡುವುದೇ ಮುಖ್ಯಪಕ್ಷವು. ಇವೆರಡರಲ್ಲೊಂದರ ಕೊನೆಯಲ್ಲಿ ಪಾರಣೆಮಾಡುವುದು ಎರಡನೆಯ ಪಕ್ಷವು. ವಿಷ್ಣುಶೃಂಖಲ ಯೋಗವಿಲ್ಲದಿದ್ದರೆ ತ್ರಯೋದಶಿಯಲ್ಲಿ ಎರಡರ ಕೊನೆಯಲ್ಲಿ ಪಾರಣೆಯು. ವಿಷ್ಣುಶೃಂಖಲಯೋಗವಿದ್ದಲ್ಲಿ ಪೂರ್ವದಿನದಲ್ಲಿ ತಂತ್ರದಿಂದ ಮಾಡಿರುವ ಉಪವಾಸದ್ವಯಕ್ಕೆ, ಎರಡನೆಯದಿನದಲ್ಲಿ ಶ್ರವಣನಕ್ಷತ್ರಕ್ಕಿಂತಲೂ ದ್ವಾದಶಿಯು ಹೆಚ್ಚುಕಾಲವಿರುವುದಾದರೆ ಶ್ರವಣವು ಕಳೆದಮೇಲೆ ದ್ವಾದಶಿಯಲ್ಲಿ ಪಾರಣೆಯಾಗಬೇಕು. ದ್ವಾದಶಿಗಿಂತಲೂ ಶ್ರವಣವೇ ಹೆಚ್ಚುಕಾಲವಿರುವುದಾದರೆ ಏಕಾದಶೀವ್ರತಪಾರಣೆಗಾಗಿ ದ್ವಾದಶಿಯನ್ನು ನಿರಾಕರಿಸುವುದರಿಂದ ದೋಷವುಂಟಾಗುವುದಾದಕಾರಣ ದ್ವಾದಶಿಯಲ್ಲಿಯೇ ಪಾರಣೆಯು. ತಿಥಿ ನಕ್ಷತ್ರಗಳೊಂದರ ಕೊನೆಯನ್ನೂ ನಿರೀಕ್ಷಿಸಬೇಕಾದ್ದಿಲ್ಲ. ಸಂದರ್ಭವಾದರೆ ಶ್ರವಣನಕ್ಷತ್ರ ಮಧ್ಯಭಾಗವೆನ್ನಿಸಿಕೊಳ್ಳುವ ಇಪ್ಪತ್ತುಗಳಿಗೆಗಳ ಕಾಲವನ್ನು ಬಿಟ್ಟು ಪಾರಣೆಯನ್ನು ಮಾಡಬೇಕು.

ಹೇಗೆಂದರೆ—ಏಕಾದಶೀ ೩೦, ಉತ್ತರಾಷಾಢ ೨೯, ದ್ವಾದಶಿ ೨೭, ಶ್ರವಣ ೨೯ ಇಲ್ಲಿ- ಮೊದಲದಿನದಲ್ಲಿ ತಂತ್ರದಿಂದ ಎರಡುಪವಾಸಗಳನ್ನು ಮಾಡಿ, ಎರಡನೆಯದಿನದಲ್ಲಿ ಶ್ರವಣಮಧ್ಯಭಾಗವಾದ ೨೦ ಘಳಿಗೆಗಳಲ್ಲಿ ಉಳಿದಿರುವ ೯ ಘಳಿಗೆಗಳನ್ನು ಬಿಟ್ಟು ದ್ವಾದಶಿಯಲ್ಲಿ ಶ್ರವಣದ ಕೊನೆಯಭಾಗವಾದ ೨೦ ಘಳಿಗೆಗಳಲ್ಲಿ ಪಾರಣೆಯನ್ನು ಮಾಡಬೇಕು.

ಹೀಗೆ ಇಲ್ಲಿಹೇಳಿರುವ ಉದಾಹರಣೆಯಲ್ಲಿಯೇ ಏಕಾದಶಿಯು ಹತ್ತುಗಳಿಗೆಗಳಿದ್ದು ದ್ವಾದಶಿಯು ಎಂಟುಗಳಿಗೆಗಳಿದ್ದರೆ ಅಥವಾ ದ್ವಾದಶಿಯು ೧೭ ಘಳಿಗೆ, ಶ್ರವಣವು ೪೦ ಘಳಿಗೆಗಳಿದ್ದರೆ ಶ್ರವಣಮಧ್ಯಭಾಗವನ್ನು ಬಿಡುವುದರಿಂದ ದ್ವಾದಶಿಯು ಕಳೆದುಹೋಗುವಂತಾಗುವ ಸಂದರ್ಭದಲ್ಲಿ ಸಂಗಮಕಾಲವು ಕಳೆದಮೇಲೆ ಮೂರುಮುಹೂರ್ತಗಳವರೆಗೆ ಅಥವಾ ಏಳುಮುಹೂರ್ತಗಳೊಳಗಾಗಿ ನಕ್ಷತ್ರಮಧ್ಯಭಾದಲ್ಲಿಯೇ ಭೋಜನಮಾಡಬೇಕು. ಬೇರೆಮಾಸಗಳ ಶ್ರವಣನಕ್ಷತ್ರಗಳಲ್ಲಿ ವಿಷ್ಣುಪರಿವರ್ತನೆಯಾಗದಿರೋಣದರಿಂದ ಭಾದ್ರಪದಮಾಸದ ಶ್ರವಣದ್ವಾದಶೀವ್ರತದಲ್ಲಿ ಮಧ್ಯಭಾಗವನ್ನು ಬಿಡಬೇಕಲ್ಲದೆ ಮಾಘ, ಫಾಲ್ಗುಣಮಾಸದ ಕೃಷ್ಣಪಕ್ಷದಲ್ಲಿ ಬರುವ ಶ್ರವಣದ್ವಾದಶೀ ವ್ರತಪಾರಣೆಯಲ್ಲಿ ಬಿಡಬೇಕಾದ್ದಿಲ್ಲ. ಭಾದ್ರಪದದ ಶ್ರವಣಮಧ್ಯವನ್ನು ಬಿಡುವುದರಿಂದಲೇ ಭೋಜನನಿಷೇಧವನ್ನು ಆಚರಿಸಿದಂತಾಯ್ತೆಂದು ಭಾವಿಸಿ, ಯಾರುವಿಷ್ಣುಶೃಂಖಲಯೋಗವಿಲ್ಲದಿದ್ದಾಗ್ಯೂ, ಶ್ರವಣ ಮಧ್ಯವನ್ನು ಮಾತ್ರವೇ ಬಿಟ್ಟು ಭೋಜನಮಾಡುತ್ತಾರೆಯೋ ಅವರು ನಿತ್ಯಶ್ರವಣ ದ್ವಾದಶೀ ಮಾಹಾತ್ಮ್ಯೆಯನ್ನರಿಯದೆ ಭ್ರಾಂತರಾಗುತ್ತಾರೆ. ಈ ನಿರ್ಣಯವೆಲ್ಲವನ್ನೂ ಉಳಿದಮಾಸಗಳ ಶ್ರವಣದ್ವಾದಶೀ ವ್ರತಗಳಿಗೂ ಅನ್ವಯಿಸಬೇಕು. ಶ್ರವಣದ್ವಾದಶೀ ವ್ರತದಲ್ಲಿ ನದೀ ಸಂಗಮಕ್ಕೆ ಹೋಗಿ ಸ್ನಾನಮಾಡಿ ಕಲಶದಲ್ಲಿ ಸುವರ್ಣದಲ್ಲಿ ಮಾಡಿದ ಜನಾರ್ದನನಾದ ವಿಷ್ಣುವಿನ ಪ್ರತಿಮೆಯನ್ನು ಇಟ್ಟು ಪೂಜಿಸಿ, ವಸ್ತ್ರ, ಯಜ್ಞೋಪವೀತ, ಪಾದರಕ್ಷೆ, ಛತ್ರ, ಮೊದಲಾದುವನ್ನು ಸಮರ್ಪಿಸಿ, ಉಪವಾಸಮಾಡಿ, ಪಾರಣೆಯದಿನದಲ್ಲಿ ಮೊಸರನ್ನು, ವಸ್ತ್ರಯುಕ್ತವಾದ ನೀರುತುಂಬಿದ ಪಾತ್ರೆ, ಛತ್ರ, ಇವೇ ಮೊದಲಾದವುಗಳೊಡನೆ ಆ ಪ್ರತಿಮೆಯನ್ನು ದಾನಮಾಡಬೇಕು.“ನಮೋ

ನಮಸ್ತೇಗೋವಿಂದ ಬುಧಶ್ರವಣಸಂಜ್ಞಕ । ಅಘೌಘಸಂಕ್ಷಯಂಕೃತ್ವಾ ಸರ್ವಸೌಖ್ಯಪ್ರದೋಭವ ॥೧॥" ಶ್ರವಣನಾಮಕನಾದ ಎಲೈ ದೇವೋತ್ತಮನಾದ ಗೋವಿಂದನೇ! ನಿನಗೆ ನಮಸ್ಕರಿಸುತ್ತೇನೆ! ನನ್ನ ಪಾಪಸಂಚಯ್ಯವನ್ನು ನಾಶಮಾಡಿ ಸೌಖ್ಯವನ್ನುಂಟುಮಾಡು ಎಂಬುದೇ ಮಂತ್ರವು.

—ವಾಮನ ಜಯನ್ತಿ—

ವಾಮನ ಜಯಂತೀ—ಭಾದ್ರಪದ ಶುದ್ಧ ದ್ವಾದಶೀ ಶ್ರವಣನಕ್ಷತ್ರದಲ್ಲಿ ವಾಮನನು ಮಧ್ಯಾಹ್ನದಲ್ಲಿ ಹುಟ್ಟಿದನು. ಆದ್ದರಿಂದ ಮಧ್ಯಾಹ್ನವ್ಯಾಪ್ತಿಯುಳ್ಳದ್ದಾಗಿಯೂ ಮಧ್ಯಾಹ್ನ ಅಥವಾ ಬೇರೊಂದುಕಾಲಕ್ಕಾದರೂ ವ್ಯಾಪ್ತಿಯುಳ್ಳ ಶ್ರವಣನಕ್ಷತ್ರಯುಕ್ತವಾದ ದ್ವಾದಶಿಯನ್ನು ಗ್ರಹಿಸಬೇಕು. ಎರಡುದಿನಗಳಿಗೂ ಶ್ರವಣಯೋಗವಿದ್ದರೆ ಮೊದಲನೆಯದನ್ನೇ ಗ್ರಹಿಸಬೇಕು. ದ್ವಾದಶಿಗೆ ಸ್ವಲ್ಪವಾದರೂ ಶ್ರವಣಯೋಗವಿಲ್ಲದೆ ಏಕಾದಶಿಗೆಮಾತ್ರವೇ ಯೋಗವಿದ್ದರೆ ದ್ವಾದಶಿಗೆ ಮಧ್ಯಾಹ್ನವ್ಯಾಪ್ತಿ ಇದ್ದಾಗ್ಯೂ ಅದನ್ನು ಬಿಟ್ಟು ಏಕಾದಶಿಯಲ್ಲಿಯೇ ವ್ರತವನ್ನು ಮಾಡಬೇಕು. ಶುದ್ಧೈಕಾದಶಿಗೆ ಶ್ರವಣಯೋಗವಿಲ್ಲದೆ ಹೋಗಿ, ದಶಮೀವಿದ್ಧವಾದ ಏಕಾದಶಿಗೆ ಶ್ರವಣಯೋಗವಿದ್ದರೆ ವಿದ್ಧೈಕಾದಶಿಯಲ್ಲಿಯೇ ವ್ರತವನ್ನು ಮಾಡಬೇಕು. ಪೂರ್ವದಿನದಲ್ಲಿಯೇ ಮಧ್ಯಾಹ್ನವ್ಯಾಪ್ತಿಯುಳ್ಳ ದ್ವಾದಶಿಯೂ, ಎರಡನೆಯ ದಿನದಲ್ಲಿ ಮಧ್ಯಾಹ್ನವಲ್ಲದ ಕಾಲದಲ್ಲಿ ಶ್ರವಣಯೋಗವೂ ಇದ್ದರೆ ಪೂರ್ವದಿನವನ್ನೇ ಗ್ರಹಿಸಬೇಕು. ಎರಡುದಿನಗಳಿಗೂ ಶ್ರವಣಯೋಗವಿಲ್ಲದೆಹೋದರೆ ಮಧ್ಯಾಹ್ನವ್ಯಾಪ್ತಿಯುಳ್ಳ ದ್ವಾದಶಿಯಲ್ಲಿಯೇ ವ್ರತವು. ಎರಡುದಿನಗಳಿಗೂ ಮಧ್ಯಾಹ್ನವ್ಯಾಪ್ತಿ ಇದ್ದರೂ ಇಲ್ಲದಿದ್ದರೂ ಏಕಾದಶೀಯುಕ್ತವಾದ ದ್ವಾದಶಿಯನ್ನೇ ಗ್ರಹಿಸಬೇಕು. ಪಾರಣೆಯನ್ನು ಮಾತ್ರ ತಿಥಿ, ನಕ್ಷತ್ರಗಳೆರಡರ ಕೊನೆಯಲ್ಲಾಗಲಿ, ಯಾವುದಾದರೊಂದರ ಕೊನೆಯಲ್ಲಾಗಲಿ ಮಾಡಬಹುದು. ಈ ವ್ರತದಲ್ಲಿ ಮಧ್ಯಾಹ್ನದಲ್ಲಿ ನದೀಸಂಗಮದಲ್ಲಿ ಸ್ನಾನಮಾಡಿ ಚಿನ್ನದವಾಮನಪ್ರತಿಮೆಯನ್ನು ಪೂಜಿಸಬೇಕು. "ದೇವೇಶ್ವರಾಯದೇವಾಯ ದೇವಸಂಭೂತಿಕಾರಿಣೇ । ಪ್ರಭವೇಸರ್ವದೇವಾನಾಂ ವಾಮನಾಯನಮೋನಮಃ ॥೧॥" ದೇವದೇವನಾಗಿಯೂ ದೇವತೆಗಳ ಉತ್ಪತ್ತಿಗೆ ಕಾರಣನಾಗಿಯೂ,

ಇರುವ ವಾಮನನಿಗೆ ನಮಸ್ಕಾರವು ||೧|| ಎಂಬ ಮಂತ್ರವು. "ನಮಸ್ತೇ ಪದ್ಮನಾಭಾಯ ನಮಸ್ತೇಜಲಶಾಯಿನೇ । ತುಭ್ಯಮರ್ಘ್ಯಂಪ್ರಯಚ್ಛಾಮಿ ಬಾಲವಾಮನರೂಪಿಣೇ ||೧|| ನಮಶ್ಶಾರ್ಙ್ಗಧನುರ್ಬಾಣ ಪಾಣಯೇವಾಮನಾಯಚ । ಯಜ್ಞಭುಕ್ಫಲದಾತ್ರೇಚವಾಮನಾಯನಮೋನಮಃ ||೨||" ಕಮಲದಂತೆ ನಾಭಿಯುಳ್ಳವನಾಗಿಯೂ, ಸಮುದ್ರಶಾಯಿಯಾಗಿಯೂ, ಬಾಲಕನಾಗಿಯೂ, ವಾಮನರೂಪನಾಗಿಯೂಇರುವ ನಿನಗೆ ಅರ್ಘ್ಯವನ್ನು ಕೊಡುವೆನು ||೧|| ಶಾರ್ಙ್ಗವೆಂಬ ಬಿಲ್ಲನ್ನೂ, ಬಾಣವನ್ನೂ ಕೈಯಲ್ಲಿಹಿಡಿದಿರುವನಾಗಿಯೂ, ಯಜ್ಞಹವಿರ್ಭಾಗಗಳನ್ನು ತೆಗೆದುಕೊಂಡು ಸತ್ಫಲಗಳನ್ನು ಕೊಡತಕ್ಕವನಾಗಿಯೂ ಇರುವ ವಾಮನನಿಗೆ ನಮಸ್ಕಾರವು ||೨|| ಈ ಮಂತ್ರಗಳಿಂದ ಅರ್ಘ್ಯವನ್ನು ಕೊಡಬೇಕು. ಮೂರುದಿನದಲ್ಲಿ ಸೋಪಸ್ಕರದೊಡನೆ ವಾಮನಪ್ರತಿಮೆಯನ್ನು ದಾನಮಾಡಬೇಕು. "ವಾಮನಃಪ್ರತಿಗೃಹ್ಣಾತಿವಾಮನೋಹಂದದಾಮಿತೇ । ವಾಮನಂ ಸರ್ವತೋಭದ್ರಂ ದ್ವಿಜಾಯಪ್ರತಿಪಾದಯೇ ||೧||" ವಾಮನನಾದ ನಾನೇ ದಾನಮಾಡುವೆನು, ವಾಮನನೇ ತೆಗೆದುಕೊಳ್ಳುವವನು. ಮಂಗಳಕರವಾದ ವಾಮನ ಪ್ರತಿಮೆಯನ್ನು ಬ್ರಾಹ್ಮಣನಿಗೆ ದಾನಮಾಡುತ್ತೇನೆ||೧||ಎಂಬುದು ದಾನಕ್ಕೆ ಮಂತ್ರವು.

—ಪಯೋವ್ರತವು—

ಪಯೋವ್ರತವು—ಈ ದ್ವಾದಶಿಯ ರಾತ್ರಿಯಲ್ಲಿಯೇ ದೇವರ ಪೂಜೆಯನ್ನು ಮಾಡಿ, ಇಲ್ಲದಿದ್ದರೆ ಹಗಲಾದರೂ ದಧಿವ್ರತವನ್ನು ಮಾಡಿ, ದಧಿಯನ್ನು ನೈವೇದ್ಯಮಾಡಿ, ಪಯೋವ್ರತಕ್ಕೆ ಸಂಕಲ್ಪಮಾಡಬೇಕು. ಈ ಪಯೋವ್ರತದಲ್ಲಿ ಹಾಲನ್ನು ಕೂಡಿಸಿ ಮಾಡಿಸುವ ಪಾಯಸವೇ ಮೊದಲಾದದ್ದನ್ನೂ, ಹಾಲಿನಲ್ಲಿ ಬೇಯಿಸಿದ ಅನ್ನವನ್ನೂ ಬಿಡಬೇಕು. ಮೊಸರುಮೊದಲಾದದ್ದು ಹಾಲಿನಿಂದಲೇ ಆಗುವುದಾದರೂ ಅದನ್ನು ಬಿಡಬೇಕಾದದ್ದಿಲ್ಲ. ಹೀಗೆಯೇ ದಧಿವ್ರತದಲ್ಲಿ ಮಜ್ಜಿಗೆ ಮೊದಲಾದದ್ದನ್ನು ಬಿಡಬೇಕಾದದ್ದಿಲ್ಲ. ಹೊಸದಾಗಿ ಈದ ಹಸುವಿನ ಹಾಲನ್ನು ಹತ್ತುದಿನಗಳವರೆಗೂ ಉಪಯೋಗಿಸಕೂಡದೆಂದುಹೇಳಿರುವ ಸಂದರ್ಭದಲ್ಲಿ ಮಾತ್ರ ಹಾಲನ್ನು ಬಿಡುವುದಲ್ಲದೆ ಅದರಿಂದಾಗುವ ಮೊಸರು, ಮಜ್ಜಿಗೆ ಮೊದಲಾ

ದವುಗಳಲ್ಲವನ್ನೂ ಬಿಡಬೇಕು.

—ಅನನ್ತವ್ರತಂ—

ಅನಂತವ್ರತವು—ಭಾದ್ರಪದ ಶುಕ್ಲ ಚತುರ್ದಶಿಯಲ್ಲಿ ಅನಂತವ್ರತವು. ಸೂರ್ಯೋದಯಕಾಲದಲ್ಲಿ ಮೂರು ಮುಹೂರ್ತ ವ್ಯಾಪ್ತಿಯುಳ್ಳ ಚತುರ್ದಶಿಯನ್ನು ಗ್ರಹಿಸಬೇಕೆಂಬುದು ಮೊದಲನೆಯ ಪಕ್ಷವು. ಅದಿಲ್ಲದಿದ್ದರೆ ಎರಡುಮುಹೂರ್ತಕಾಲದ ವ್ಯಾಪ್ತಿಯುಳ್ಳದ್ದನ್ನು ಗ್ರಹಿಸಬೇಕೆಂಬುದು ಸಾಮಾನ್ಯಪಕ್ಷವು. ಎರಡುಮುಹೂರ್ತಕ್ಕಿಂತಲೂ ಕಡಮೆಯಾದ ವ್ಯಾಪ್ತಿ ಇದ್ದರೆ ಮೊದಲನೆಯದನ್ನೇ ಗ್ರಹಿಸಬೇಕು. ಎರಡು ದಿನಗಳಲ್ಲಿಯೂ ಸೂರ್ಯೋದಯವ್ಯಾಪ್ತಿ ಇದ್ದರೆ ಮೊದಲನೆಯ ದಿನಕ್ಕೆ ಸಂಪೂರ್ಣವ್ಯಾಪ್ತಿ ಇರುವುದರಿಂದ ಪೂರ್ವತಿಥಿಯನ್ನೇ ಗ್ರಹಿಸಬೇಕು. ವ್ರತಕ್ಕೆ ಪೂರ್ವಾಹ್ಣವೇ ಮುಖ್ಯಕಾಲವು. ಅದಿಲ್ಲದಿದ್ದರೆ ಮಧ್ಯಾಹ್ನವಾದರೂ ಆಗಬಹುದು. ಈ ವ್ರತದಲ್ಲಿ ಸುವರ್ಣಪ್ರತಿಮೆಯನ್ನೂ ೧೪ ಗಂಟುಗಳುಳ್ಳ ದೋರ (ದಾರ) ವನ್ನೂ ಪೂಜಿಸಬೇಕು. ಈ ವ್ರತವಿಧಿಯನ್ನೂ, ಉದ್ಯಾಪನಾ ವಿಧಿಯನ್ನೂ, ಕೌಸ್ತುಭಾದಿ ಗ್ರಂಥಗಳಿಂದ ತಿಳಿಯಬೇಕು. ಪೂಜೆ ಮಾಡಿದ ದಾರವು ಹೋದರೆ ಪುರೋಹಿತರನ್ನು ಕರೆಯಿಸಿ ವರಣವನ್ನು ಕೊಟ್ಟು ಅವರ ಆಜ್ಞೆಯಂತೆ ಯಥಾಶಕ್ತಿಯಾಗಿ 'ಕೃಚ್ಛ್ರ' ಮೊದಲಾದ ಪ್ರಾಯಶ್ಚಿತ್ತವನ್ನು ಮಾಡಿಕೊಂಡು ಹನ್ನೆರಡಕ್ಷರವುಳ್ಳ ವಾಸುದೇವ ಮಂತ್ರದಿಂದ (ಓಂನಮೋಭಗವತೇ ವಾಸುದೇವಾಯ) ೧೦೮ ಆಜ್ಯ ಹೋಮಗಳನ್ನೂ, ಕೇಶವಾದಿ ೨೪ ಹೋಮಗಳನ್ನೂ ಮಾಡಿ, ಹೋಮ ಶೇಷವನ್ನು ಮುಗಿಸಿ, ಹೊಸದಾರವನ್ನು ತೆಗೆದುಕೊಂಡು, ಮೊದಲಿನಂತೆ ಪೂಜೆಮೊದಲಾದವುಗಳನ್ನು ಮಾಡಬೇಕು. ಸೂರ್ಯನು ವೃಷಭಸಂಕ್ರಮಣವನ್ನು ಹೊಂದಿದ ಏಳನೆಯದಿನದಲ್ಲಿ ಅಗಸ್ತ್ಯಾಸ್ತವೂ, ಸಿಂಹಸಂಕ್ರಮಣಾನಂತರ ೨೧ನೇ ದಿನದಲ್ಲಿ ಅಗಸ್ತ್ಯೋದಯವೂ, ಆಗುವುದು. ಆದ್ದರಿಂದ ಕನ್ಯಾಸಂಕ್ರಮಣವಾಗುವುದಕ್ಕೆ ಪೂರ್ವದ (ಮುಂಚಿನ) ಏಳುದಿನಗಳೊಳಗಾಗಿ ಅಗಸ್ತ್ಯಪೂಜೆಯನ್ನೂ, ಅರ್ಘ್ಯಪ್ರದಾನಮೊದಲಾದುವನ್ನೂ ಮಾಡಬೇಕು. ಭಾದ್ರಪದ ಶುದ್ಧ ಪೌರ್ಣಿಮೆಯಲ್ಲಿ ಪ್ರಪಿತಾಮಹನಿಂದೀಚೆಗೆ ಇರುವ ಪಿತೃಮೊದಲಾದ ವಸುರುದ್ರಾದಿತ್ಯರೂಪಗಳುಳ್ಳ ಸ

ಪತ್ನೀಕರಾದ ಮೂರುಜನ (ತಲೆ) ಗಳನ್ನೂ, ಮಾತಾಮಹ ಮೊದಲಾದ ಮೂರುಜನ ಸಪತ್ನೀಕರನ್ನೂ ಉದ್ದೇಶಿಸಿ ಶ್ರಾದ್ಧವನ್ನು ಮಾಡಬೇಕು. ಇದು ಪಾರ್ವಣಶ್ರಾದ್ಧವಾದ್ದರಿಂದ ಅಪರಾಹ್ಣದಲ್ಲಿ ಪುರೂರವಾರ್ದ್ರವ ರೆಂಬ ವಿಶ್ವೇದೇವತೆಗಳೊಡನೆ ಸಪಿಣ್ಡವಾಗಿ ಮಾಡಬೇಕು.

—ಪ್ರೋಷ್ಠಪದೀಶ್ರಾದ್ಧಂ—

ಪ್ರೋಷ್ಠಪದೀಶ್ರಾದ್ಧವು—ಪ್ರಪಿತಾಮಹನಿಗೆ ಪಿತೃ ಮೊದಲಾದ ಮೂರು ತಲೆಗಳನ್ನು ಮಾತ್ರವೇ ಉದ್ದೇಶಿಸಿ ನಾಂದೀಶ್ರಾದ್ಧದ ರೀತಿ ಯಾಗಿ ಸತ್ಯವಸುಗಳೆಂಬ ವಿಶ್ವೇದೇವತೆಗಳೊಡನೆ ಈ ಶ್ರಾದ್ಧವನ್ನು ಮಾಡಬೇಕಲ್ಲದೆ ಮಾತಾಮಹ ಮೊದಲಾದವರನ್ನು ಇದರಲ್ಲಿ ಉದ್ದೇಶವಾ ಡಕೂಡದೆಂದು ಕೆಲವರು ಹೇಳುವರು. ಈ ಪ್ರೋಷ್ಠಪದೀಶ್ರಾದ್ಧವು ಸಕೃನ್ಮಹಾಲಯಪಕ್ಷದಲ್ಲಿಯೂ,ಕೃಷ್ಣಪಕ್ಷದಎಲ್ಲಾಮಹಾಲಯಗಳನ್ನೂ ಮಾಡುವಪಕ್ಷದಲ್ಲಿಯೂ ಆವಶ್ಯಕವು. ಪಂಚಮಿ ಮೊದಲಾದ ಐದುಮಹಾ ಲಯಗಳ ಪಕ್ಷದಲ್ಲಿ ವಿಕಲ್ಪವು.

—(೩) ಮಹಾಲಯವು—

(೩) ಮಹಾಲಯವು—ಶಕ್ತಿಯುಳ್ಳವರು ಭಾದ್ರಪದ ಬಹುಳ ಪ್ರ ತಿಪತ್ತನ್ನು ಮೊದಲುಮಾಡಿಕೊಂಡು ತಿಥಿವೃದ್ಧಿಯುಂಟಾದರೆ ಅಮಾವಾ ಸ್ಯೆಯವರೆಗೂ ೧೬ ಮಹಾಲಯಗಳನ್ನು ಮಾಡಬೇಕು. ವೃದ್ಧಿಕ್ಷಯಗಳಿ ಲ್ಲದಿದ್ದರೆ ಹದಿನೈದೇ ಮಹಾಲಯಗಳು. ಕ್ಷಯತಿಥಿಗಳಾದರೆ ೧೪ ಮಾತ್ರ ವೇ. ಶಕ್ತಿ ಇಲ್ಲದವರು- ಪಂಚಮಿ, ಷಷ್ಠಿ, ಅಷ್ಟಮಿ, ದಶಮಿ, ಏಕಾ ದಶಿ ಮೊದಲಾದ ಅಮಾವಾಸ್ಯೆಯ ವರಿಗಿನ ತಿಥಿಗಳಲ್ಲಿ (೫ ರಲ್ಲಿಯೂ) ಮಾಡಬೇಕು. ಈ ವಿಷಯದಲ್ಲಿಯೂ ಅಶಕ್ತರು ನಿಷೇಧವಲ್ಲದ ಒಂದೇ ಒಂದು ಕ್ಲುಪ್ತತಿಥಿಯಲ್ಲಿ ಸಕೃನ್ಮಹಾಲಯಶ್ರಾದ್ಧವನ್ನು ಮಾಡಬೇಕು. ಪ್ರತಿಪತ್ತು ಮೊದಲ್ಗೊಂಡು ದರ್ಶಾಂತದ ವರಿಗೂ ಪ್ರತಿದಿನದಲ್ಲಿಯೂ ಮಾಡತಕ್ಕವರು ಚತುರ್ದಶಿಯನ್ನು ಬಿಡಕೂಡದು. ಪಂಚಮೀ ಮೊದ ಲ್ಗೊಂಡು ದರ್ಶಾಂತದ (ಅಮಾವಾಸ್ಯೆಯ) ವರಿಗಿನ ಐದುದಿನಗಳ ಪಕ್ಷ ದಲ್ಲಿ ಚತುರ್ದಶಿಯನ್ನು ಬಿಟ್ಟು ಉಳಿದ ತಿಥಿಗಳಲ್ಲಿ ಮಹಾಲಯಗಳನ್ನು ಮಾಡಬೇಕು, ಸಕೃನ್ಮಹಾಲಯದಲ್ಲಿಯೂ ಚತುರ್ದಶಿಯನ್ನು ಬಿಡಬೇ

೫. ಸಕೃನ್ಮಹಾಲಯದಲ್ಲಿ ಪ್ರತಿಪತ್ತು, ಷಷ್ಠೀ, ಏಕಾದಶೀ, ಚತುರ್ದಶಿಗಳನ್ನೂ, ಶುಕ್ರವಾರವನ್ನೂ, ಜನ್ಮನಕ್ಷತ್ರವನ್ನೂ ಜನ್ಮನಕ್ಷತ್ರಕ್ಕೆ ಹತ್ತನೇ ಮತ್ತು ಇಪ್ಪತ್ತೊಂದನೆಯ ನಕ್ಷತ್ರಗಳನ್ನೂ, ರೋಹಿಣೀ, ಮಘಾ, ರೇವತೀ ನಕ್ಷತ್ರಗಳನ್ನೂ, ಬಿಡಬೇಕು. ಕೆಲವು ಗ್ರಂಥಗಳಲ್ಲಿ ತ್ರಯೋದಶಿ,ಸಪ್ತಮಿ, ಭಾನುವಾರ, ಮಂಗಳವಾರಗಳನ್ನೂ ಬಿಡಬೇಕೆಂದು ಹೇಳಿದೆ. ಪಿತೃ (ತಂದೆ) ಮೃತತಿಥಿಯಲ್ಲಿ ಸಕೃನ್ಮಹಾಲಯವನ್ನು ಮಾಡುವ ಪಕ್ಷದಲ್ಲಿ ನನ್ದಾತಿಥಿಮೊದಲಾದ ನಿಷೇಧಗಳಿಲ್ಲ. "ಅಶಕ್ತಃಪಿತೃಪಕ್ಷೇತು ಕರೋತ್ಯೇಕದಿನೇತುಯಃ । ನಿಷಿದ್ಧೇಪಿದಿನೇಕುರ್ಯಾತ್ಪಿಂಡದಾನಂಯಥಾವಿಧಿ॥೧॥" ಪಿತೃಪಕ್ಷಗಳಲ್ಲೆಲ್ಲಾ ಶ್ರಾದ್ಧಮಾಡುವುದಕ್ಕೆ ಶಕ್ತಿಇಲ್ಲದವನು ಒಂದೇದಿನದಲ್ಲಿ ಮಾಡುವುದಾದರೆ ನಿಷಿದ್ಧದಿನದಲ್ಲಾದರೂ ಶ್ರಾದ್ಧವನ್ನು ವಿಧ್ಯುಕ್ತವಾಗಿ ಮಾಡಬಹುದು ॥೧॥ ಎಂದು ವಚನವಿರುವುದು. ಮೃತತಿಥಿಯಲ್ಲಿ ಶ್ರಾದ್ಧವನ್ನು ಮಾಡದ ಪಕ್ಷದಲ್ಲಿ ನಿಷಿದ್ಧತಿಥಿಮೊದಲಾದುವನ್ನು ಬಿಟ್ಟೇ ಮಹಾಲಯವನ್ನು ಮಾಡಬೇಕು. ಅದರಲ್ಲಿಯೂ ಮೃತತಿಥಿಯಲ್ಲಿ ಶ್ರಾದ್ಧಮಾಡದೆ ಸಕೃನ್ಮಹಾಲಯವನ್ನು ಮಾಡತಕ್ಕವರು-ದ್ವಾದಶಿ, ಅಮಾವಾಸ್ಯೆ, ಅಷ್ಟಮಿ, ಭರಣಿ, ವ್ಯತೀಪಾತಗಳಲ್ಲಿ ಮಾಡುವುದಾದರೆ ತಿಥಿಮೊದಲಾದ ಯಾವದೋಷವೂ ಇಲ್ಲ. ಸನ್ಯಾಸಿಗಳಿಗೆ ಮಹಾಲಯವನ್ನು ಮಾಡಬೇಕಾದರೆ ಅಪರಾಹ್ಣವ್ಯಾಪ್ತಿಯುಳ್ಳ ದ್ವಾದಶಿಯಲ್ಲಿ ಸಪಿಂಡಿಕವಾಗಿ ಮಾಡಬೇಕಲ್ಲದೆ ಉಳಿದ ತಿಥಿಗಳಲ್ಲಿ ಮಾಡಕೂಡದು " ಶ್ರಾದ್ಧಂ ಶಸ್ತ್ರಹತಸ್ಯೈವ ಚತುರ್ದಶ್ಯಾಂ ಪ್ರಕೀರ್ತಿತಂ " ಆಯುಧಗಳಿಂದ ಮೃತನಾದವನಿಗೆ ಮಾತ್ರವೇ ಚತುರ್ದಶಿಯಲ್ಲಿ ಮಹಾಲಯವನ್ನು ಮಾಡಬೇಕೆಂಬ ನಿಯಮವು ಎಲ್ಲಕ್ಕಿಂತಲೂ ಪ್ರಬಲವಾಗಿರುವುದರಿಂದ ಪ್ರತಿಸಾಂವತ್ಸರಿಕ ಶ್ರಾದ್ಧವಲ್ಲದೆ ಉಳಿದ ಶ್ರಾದ್ಧಗಳು ಚತುರ್ದಶಿಯಲ್ಲಿ ನಡೆಯಕೂಡದೆಂದು ನಿಷೇಧಮಾಡಿರುವಕಾರಣ ಚತುರ್ದಶಿಯಲ್ಲಿ ಸತ್ತವನಿಗೂ ಕೂಡ ಚತುರ್ದಶಿಯಲ್ಲಿ ಮಹಾಲಯವು ಹುಟ್ಟಲಾರದು. ಹೀಗೆಯೇ ಪೌರ್ಣಮಾಸ್ಯೆಯಲ್ಲಿ ಮೃತನಾದವನಿಗೂ ಕೂಡ, ಪೌರ್ಣಮಾಸ್ಯೆಯು ಅಪರ (ಕೃಷ್ಣ) ಪಕ್ಷಕ್ಕೆ ಸೇರುವುದಿಲ್ಲವಾಗಿ ಅದರಲ್ಲಿ ಮಹಾಲಯವು ಸಂಭವಿಸುವುದಿಲ್ಲವಾದಕಾರಣ, ಪೌರ್ಣಮಾಸ್ಯೆಯಲ್ಲಿ ಮ

ಹಾಲಯವನ್ನು ಮಾಡಕೂಡದು. ಆದ್ದರಿಂದ ಚತುರ್ದಶಿ ಅಥವಾ ಪೌರ್ಣಿಮೆಯಲ್ಲಿ ಮೃತನಾದವನಿಗೆ ದ್ವಾದಶಿ, ಅಮಾವಾಸ್ಯಾದಿ ತಿಥಿಗಳಲ್ಲಿ ಮಹಾಲಯವನ್ನು ಮಾಡಬೇಕು. "ಆದೌ ಮಧ್ಯೇsವಸಾನೇವಾಯತ್ರ ಕನ್ಯಾಂವ್ರಜೇದ್ರವಿಃ । ಸಪಕ್ಷಃಸಕಲಃಪೂಜ್ಯಃಶ್ರಾದ್ಧಷೋಡಶಕಂಪ್ರತಿ ॥೧॥" ಯಾವ ಪಕ್ಷದಲ್ಲಿ ಸೂರ್ಯನು ಮೊದಲಲ್ಲಾಗಲಿ, ಮಧ್ಯದಲ್ಲಾಗಲಿ, ಕೊನೆಯಲ್ಲಾಗಲಿ ಕನ್ಯಾರಾಶಿಯನ್ನು ಪ್ರವೇಶಿಸುವನೋ ಆ ಪಕ್ಷವೆಲ್ಲವೂ ೧೬ ಶ್ರಾದ್ಧಗಳಿಗೂ ಉತ್ಕೃಷ್ಟವಾದದ್ದು ॥೧॥ ಎಂಬುದೇ ಮೊದಲಾದ ಸ್ಮೃತಿಗಳಿರುವುದರಿಂದ ಸೂರ್ಯನು ಕನ್ಯಾರಾಶಿಯನ್ನು ಸೇರುವುದು ಪ್ರಾಶಸ್ತ್ಯಕ್ಕೆ ಕಾರಣವಲ್ಲದೆ ನಿಮಿತ್ತವಲ್ಲ. ಅಮಾಸ್ಯೆಯ ವರಿಗಿನ ತಿಥಿಗಳೊಳಗಾಗಿ ಮಡುವುದಕ್ಕೆ ಅನುಕೂಲವಾಗದೆ ಹೋಗುವಪಕ್ಷದಲ್ಲಿ, ಆಶ್ವಯುಜ ಶುದ್ಧ ಪಂಚಮೀವರಿಗೆ ಯಾವುದಾದರೊಂದು ಕ್ಲುಪ್ತ ತಿಥಿಯಲ್ಲಿ ಮಹಾಲಯವು. ಆಗಲೂ ಮಾಡುವುದಕ್ಕಾಗದಿದ್ದರೆ ವೃಶ್ಚಿಕ ಸಂಕ್ರಮಣವಾಗುವವರಿಗೆ ವ್ಯತೀಪಾತ, ದ್ವಾದಶೀಮೊದಲಾದ ಪುಣ್ಯ ತಿಥಿಗಳಲ್ಲಿ ಮಾಡಬಹುದು. (ಈ ಶ್ರಾದ್ಧವನ್ನು ಮಲಮಾಸದಲ್ಲಿ ಮಾಡಕೂಡದೆಂಬುದಕ್ಕೆ ಭೃಗುವು- "ವೃದ್ಧಿಶ್ರಾದ್ಧಂತಥಾಸೋಮಮಗ್ನ್ಯಾಧೇಯಂಮಹಾಲಯಂ । ರಾಜಾಭಿಷೇಕಂಕಾಮ್ಯಂ ಚ ನಕುರ್ಯಾದ್ಭಾನುಲಂಘಿತೇ॥ 'ಸಂಕ್ರಮಣವಿಲ್ಲದ (ಮಲ) ಮಾಸದಲ್ಲಿ ವೃದ್ಧಿಶ್ರಾದ್ಧ, ಸೋಮಯಜ್ಞ, ಅಗ್ನ್ಯಾಧಾನ, ಮಹಾಲಯ, ರಾಜ್ಯಪಟ್ಟಾಭಿಷೇಕ, ಕಾಮ್ಯವ್ರತ (ನಿತ್ಯವಲ್ಲದ್ದು) ಗಳನ್ನು ಮಾಡಕೂಡದು ॥ ಎಂದು ಹೇಳಿದ್ದಾನೆಂದು ನಿರ್ಣಯಸಿಂಧುವಿನಲ್ಲಿದೆ) ಮೃತದಿನಗಳಲ್ಲಿಯೂ, ಮಹಾಲಯದಲ್ಲಿಯೂ ಪಕ್ವಾನ್ನದಿಂದಲೇ ಶ್ರಾದ್ಧವನ್ನು ಮಾಡಬೇಕಲ್ಲದೆ ಆಮ ಪದಾರ್ಥ (ಹಸಿಯಾದದ್ದು ಅಥವಾ ಬೇಯಿಸದ್ದು) ದಿಂದ ಕೂಡದು. "ಮಹಾಲಯೇಗಯಾಶ್ರಾದ್ಧೇ ಮಾತಾಪಿತ್ರೋರ್ಮೃತೇಹನಿ । ಕೃತೋದ್ವಾಹೋಪಿಕುರ್ವೀತಪಿಣ್ಡದಾನಂ ಯಥಾವಿಧಿ ॥೧॥ ಮಹಾಲಯದಲ್ಲಿಯೂ ಗಯಾಶ್ರಾದ್ಧದಲ್ಲಿಯೂ, ತಂದೆತಾಯಿಗಳ ಮೃತಿದಿನಗಳಲ್ಲಿಯೂ, ವಿವಾಹವನ್ನು ಮಾಡಿಕೊಂಡವನೂ ಕೂಡ (ಅದೇವರ್ಷದಲ್ಲಿ) ಯಥಾಕ್ರಮವಾಗಿ ಪಿಣ್ಡಪ್ರದಾನವನ್ನು ಮಾಡಬೇಕು ॥೧॥

## —ಮಹಾಲಯ ದೇವತೆಗಳು—

ಮಹಾಲಯದಲ್ಲಿ ದೇವತೆಗಳು—ಪಕ್ಷಶ್ರಾದ್ಧದಲ್ಲಿ- ಪಿತೃ ಮೊದಲಾದ ಮೂರುಜನ ಪತ್ನೀಮೊದಲಾದ ಏಕೋದ್ದಿಷ್ಟ, ಪಿತೃಗಣದೊಡನೆ ಎಲ್ಲಪಿತೃಗಳು, ಇವರನ್ನು ಉದ್ದೇಶಿಸುವುದು. ಸಪತ್ನೀಕರಾದ ಪಿತೃಮೊದಲಾದ ಮೂವರು,ಸಪತ್ನೀಕಮಾತಾಮಹಾದಿಮೂವರು,ಈ ಆರ್ವರನ್ನು ಮಾತ್ರ ಉದ್ದೇಶಿಸುವುದು; ಈ ಆರನ್ನು ಏಕೋದ್ದಿಷ್ಟ, ಪಿತೃಗಳಸಹಿತ ಉದ್ದೇಶಿಸಿಸುವುದು ; ಈ ಮೂರುಪಕ್ಷಗಳಿಂದ ಪ್ರತಿದಿನದಲ್ಲಿಯೂ ಮಹಾಲಯವನ್ನು ಮಾಡುವವಾಡಿಕೆಯುಂಟು. ಪಂಚಮಿಮೊದಲಾದ ಪಕ್ಷಗಳಲ್ಲಿಯೂ ಹೀಗೆಯೇ ಮೂರುವಿಧಗಳವೆ. ಶಸ್ತ್ರಮಹಾಲಯದಲ್ಲಿ ಮಾತ್ರ ಸರ್ವಪಿತೃಗಳನ್ನೂ ಉದ್ದೇಶಿಸಿಯೇ ಮಾಡಬೇಕು. ಇಲ್ಲಿ ಮಾಡಬೇಕಾದ ದೇವತಾ ಸಂಕಲ್ಪವು:-ಪಿತೃಪಿತಾಮಹಪ್ರಪಿತಾಮಹಾನಾಂ, ಮಾತೃತತ್ಸಪತ್ನೀ (ಸವತಿ) ಪಿತಾಮಹೀತತ್ಸಪತ್ನೀಪ್ರಪಿತಾಮಹೀತತ್ಸಪತ್ನೀನಾಂ ಎಂದಾಗಲಿ, ಅಸ್ಮತ್ಸಾಪತ್ನಮಾತುಃ ಎಂದು ಬೇರೆಬೇರೆ ನಿರ್ದೇಶಮಾಡುವುದರಿಂದಾಗಲಿ, ಮಾತಾಮಹ ಮಾತೃ ಪಿತಾಮಹ ಮಾತೃಪ್ರಪಿತಾಮಹಾನಾಂ, ಸಪತ್ನೀಕಾನಾಂ ಎಂದು ಹೇಳಿ, ಹೆಸರು ಗೋತ್ರ ವಸು ಮೊದಲಾದ ರೂಪಗಳನ್ನು ಷಷ್ಠೀಬಹುವಚನದಲ್ಲಿ ಹೇಳಬೇಕು. ಪಾರ್ವಣವಿಧಿಯಿಂದ ಪುತ್ರ, ಕನ್ಯಾ, ಪಿತೃವ್ಯ (ತಂದೆಯ ಸಹೋದರ) ಮಾತುಲ (ತಾಯಿಯ ಸಹೋದರ) ಭ್ರಾತೃ (ತನ್ನ ಸಹೋದರ) ಪಿತೃಷ್ವಸೃ (ತಂದೆಯ ಸಹೋದರಿ) ಮಾತೃಷ್ವಸೃ (ತಾಯಿಯ ಸಹೋದರಿ) ಆತ್ಮಭಗಿನೀ (ತನ್ನ ಸಹೋದರಿ) ಪಿತೃವ್ಯಪುತ್ರ (ದೊಡ್ಡತಂದೆ ಚಿಕ್ಕತಂದೆಗಳ ಮಕ್ಕಳು) ಜಾಮಾತೃ (ಅಳಿಯ) ಭಾಗಿನೇಯ (ಸೋದರಳಿಯ) ಶ್ವಶುರ (ಮಾವ) ಶ್ವಶ್ರೂ (ಅತ್ತೆ) ಆಚಾರ್ಯ, ಉಪಾಧ್ಯಾಯ, ಗುರು, ಸಖ, ಶಿಷ್ಯ, ಇವರ ಹೆಸರನ್ನೂ, ಗೋತ್ರಗಳನ್ನೂ, ರೂಪಗಳನ್ನೂ ಷಷ್ಠೀವಿಭಕ್ತ್ಯಂತವಾಗಿ ಹೇಳಬೇಕು. ಗಂಡಸರವಿಷಯದಲ್ಲಿ ಸಪತ್ನೀಕನೆಂದೂ, ಹೆಂಗಸನ್ನು ಹೇಳುವಾಗ ಸಭರ್ತೃಕಾ ಎಂದೂ, ಅವರ ಮಕ್ಕಳನ್ನು ಹೇಳಬೇಕಾದಾಗ ಸಾಪತ್ಯಕ ಎಂದೂ ಷಷ್ಠ್ಯಂತನಾಗಿ ಹೇಳ ಏಕೋದ್ದಿಷ್ಟವಿಧಿಯಿಂದ, ಮಹಾಲಯಾಪರಪಕ್ಷಶ್ರಾದ್ಧವನ್ನು ಅಥವಾ

ಸಕೃನ್ಮಹಾಲಯಾಪರಪಕ್ಷಶ್ರಾದ್ಧವನ್ನು ವಿಶ್ವೇದೇವತೆಗಳೊಡನೆ ಸದ್ಯಃ ಮಾಡುತ್ತೇನೆ ಎಂದು ಸಂಕಲ್ಪಮಾಡಬೇಕು. ಮೇಲೆಹೇಳಿದವರಲ್ಲಿ ಯಾರಾದರೂ ಬದುಕಿದ್ದರೆ ಅವರನ್ನು ಬಿಟ್ಟು ಉಳಿದವರನ್ನು ಉದ್ದೇಶಮಾಡಬೇಕು. ಮಾತಾಮಹ ಮೊದಲಾದವರಲ್ಲಿ ಪತ್ನಿಯರು ಬದುಕಿದ್ದರೆ ಸಪತ್ನೀಕ ಎಂಬುದನ್ನೂ, ಸ್ತ್ರೀಯರನ್ನು ಹೇಳುವಾಗ ಅವರ ಗಂಡನು ಬದುಕಿದ್ದರೆ ಸಭರ್ತೃಕಾ,ಎಂಬುದನ್ನೂ ಹೇಳಕೂಡದು. "ಮಹಾಲಯೇಗಯಾಶ್ರಾದ್ಧೇವೃದ್ಧೌ ಚಾನ್ವಷ್ಟಕಾಸುಚ।ನವದೈವತಮತ್ರೇಷ್ಟ ಶೇಷಂಷಾಟ್ಪೌರುಷಂವಿದುಃ ॥೧॥ "ಮಹಾಲಯ,ಗಯಾಶ್ರಾದ್ಧ, ವೃದ್ಧಿಶ್ರಾದ್ಧ(ನಾಂದೀ) ಅನ್ವಷ್ಟಕಾ ಇವುಗಳಲ್ಲಿ ಒಂಭತ್ತುದೇವತೆಗಳನ್ನು (ಪಿತೃ,ಪಿತಾಮಹ, ಪ್ರಪಿತಾಮಹ, ಮಾತೃ,ಪಿತಾಮಹಿ,ಪ್ರಪಿತಾಮಹಿ, ಮಾತಾಮಹ,ಮಾತುಃ ಪಿತಾಮಹ,ಮಾತುಃಪ್ರಪಿತಾಮಹ(ಸಪತ್ನೀಕ)ಎಂದುಉದ್ದೇಶಮಾಡಬೇಕು. ಉಳಿದವುಗಳಲ್ಲಿಆರು ದೇವತೆಗಳನ್ನು(ಪಿತೃವರ್ಗ ಮಾತೃವರ್ಗ)ಉದ್ದೇಶಿಸಬೇಕೆಂದು ಹೇಳುತ್ತಾರೆ ॥೧॥ " ಅನ್ವಷ್ಟಕಾಸುವೃದ್ಧೌಚಪ್ರತಿಸಂವತ್ಸರೇತಥಾ । ಮಹಾಲಯೇಗಯಾಯಾಂಚಸಪಿಣ್ಡೀಕರಣಾತ್ಪುರಾ॥೨॥ ಮಾತೃಶ್ರಾದ್ಧಂಪೃಥಕ್ಕಾರ್ಯಮನ್ಯತ್ರಪತಿನಾಸಹ॥ " ಅನ್ವಷ್ಟಕಾ,ವೃದ್ಧಿಶ್ರಾದ್ಧ, ಪ್ರತಿಸಾಂವತ್ಸರಿಕ,ಮಹಾಲಯ,ಗಯಾಶ್ರಾದ್ಧ, ಸಪಿಣ್ಡೀಕರಣ ಮಾಡುವುದಕ್ಕಿಂತ ಮುಂಚೆ ಈ ಸಂದರ್ಭಗಳಲ್ಲಿ ॥೨॥ ಮಾತೃಶ್ರಾದ್ಧವನ್ನು ಬೇರೆಮಾಡಬೇಕು. ಉಳಿದೆಡೆಗಳಲ್ಲಿ ಗಂಡನೊಡನೆ ಸೇರಿಸಿ ಹೇಳತಕ್ಕದ್ದು ಎಂದು ಹೇಳುವ ವಚನಾನುಸಾರವಾಗಿ ಮೂರೇ ಪಾರ್ವಣವನ್ನು (ಸಪತ್ನೀಕ ಪಿತೃ, ಪಿತಾಮಹ, ಪ್ರಪಿತಾಮಹ) ಹೇಳಿದೆ. ಕೆಲವರು- ಮಾತಾಮಹಿಮೊದಲಾದ ಮೂವರನ್ನು ಬೇರೆಯಾಗಿ ಉಚ್ಚರಿಸಿ, ದ್ವಾದಶ (೧೨) ದೇವತಾಕವಾದ ನಾಲ್ಕು ಪಾರ್ವಣಗಳನ್ನು ಮಾಡಬೇಕೆಂದು ಹೇಳುತ್ತಾರೆ. ಗಯಾಶ್ರಾದ್ಧ, ತೀರ್ಥಶ್ರಾದ್ಧ, ಪಿತೃತರ್ಪಣ ಇವುಗಳೆಲ್ಲಕ್ಕೂ ಇದೇ ಪಿತೃದೇವತೆಗಳನ್ನು ತೆಗೆದುಕೊಳ್ಳಬೇಕು. ಮಹಾಲಯದಲ್ಲಿ ಧೂರಿಲೋಚನ ಸಂಜ್ಞಕರೇ ವಿಶ್ವೇ ದೇವತೆಗಳು.

—ವಿಪ್ರನಿಮನ್ತ್ರಣಾದಿಗಳು—

ವಿಪ್ರನಿಮಂತ್ರಣಾದಿಗಳು—ಅನುಕೂಲವಿರುವ ಪಕ್ಷದಲ್ಲಿ ವಿಶ್ವೇ

ದೇವಸ್ಥಾನಕ್ಕೆ ಇಬ್ಬರನ್ನೂ, ವರ್ಗತ್ರಯಗಳಲ್ಲಿ ಪ್ರತಿಬಂದಕ್ಕೂ ಮೂ
ರುಮೂರರಂತೆ ಒಂಭತ್ತು ಜನಗಳನ್ನೂ, ಪತ್ನೀಮೊದಲಾದ ಏಕೋದ್ದಿ
ಷ್ಟಗಣಕ್ಕೆ ಪ್ರತಿಬಂದಕ್ಕೂ ಒಂದೊಂದರಂತೆಯೂ ನಿಮಂತ್ರಣಕ್ಕೆ
ಹೇಳಬೇಕು. ಶಕ್ತಿ ಇಲ್ಲದವರು- ವಿಶ್ವೇದೇವಸ್ಥಾನಕ್ಕೆ ಒಬ್ಬರನ್ನೂ, ವ
ರ್ಗಕ್ಕೆ ಒಬ್ಬೊಬ್ಬರಂತೆ ಮೂರುವರ್ಗಗಳಿಗೆ ಮೂರುಜನಗಳನ್ನೂ, ಏ
ಕೋದ್ದಿಷ್ಟಗಣಕ್ಕೆ (ಕಾರುಣ್ಯಪಿತೃಗಳು) ಒಬ್ಬರನ್ನೂ ಹೇಳಬಹುದು.
ಆದರೆ-ವಿಶ್ವೇದೇವಸ್ಥಾನಕ್ಕೆ ಇಬ್ಬರನ್ನುಹೇಳಿ, ವರ್ಗತ್ರಯದಿಂದ ಒಟ್ಟು
ಮೂರುಜನಗಳನ್ನು ಹೇಳುವುದಾಗಲಿ, ಪ್ರತಿವರ್ಗಕ್ಕೂ ಮೂರುಮೂರು
ಜನರನ್ನೂ,ವಿಶ್ವೇದೇವಸ್ಥಾನಕ್ಕೆಒಬ್ಬರನ್ನೂ ಹೇಳುವುದಾಗಲಿ, ವೈಷಮ್ಯ
ವಾಗುವುದರಿಂದ ಕೂಡದು. ಹೀಗೆ ಅಮಾವಾಸ್ಯೆ ಮೊದಲಾದ ಎಲ್ಲ ಶ್ರಾ
ದ್ಧಗಳಲ್ಲಿಯೂ ತಿಳಿಯಬೇಕು. ಅತ್ಯಂತ ಅಶಕ್ತನಾದವನು ಪಾರ್ವಣದ್ವಯ
ಕ್ಕೆ (ಎರಡುವರ್ಗ) ಒಬ್ಬರನ್ನಾದರೂ ಹೇಳಬೇಕು. “ಮಹಾಲಯದ
ಲ್ಲಿ ಮಾತ್ರವೇ ಕೊನೆಯಲ್ಲಿ ವಿಷ್ಣುಸ್ಥಾನಕ್ಕೆ ಒಬ್ಬನನ್ನು ಅವಶ್ಯಕವಾಗಿ
ಹೇಳಿಕೊಳ್ಳಬೇಕು” ಎಂದು ಕೌಸ್ತುಭದಲ್ಲಿ ಹೇಳಿದೆ. ಜೀವನ್ಮಾತೃಕನು
ಸಾಪತ್ನಮಾತೃವಿಗೆ ಏಕೋದ್ದಿಷ್ಟವನ್ನು ಮಾಡಬೇಕಲ್ಲದೆ ಪಾರ್ವಣವನ್ನು
ಮಾಡಕೂಡದು. ಯಾವನಿಗೆ ಅನೇಕಸಾಪತ್ನಮಾತೃಗಳು (ಬಲತಾಯಿಗ
ಳು) ಇರುತ್ತಾರೋ ಅಂಥವನು ಎಲ್ಲಮಾತೃಗಳನ್ನುದ್ದೇಶಿಸಿ ಒಬ್ಬ ಬ್ರಾ
ಹ್ಮಣನನ್ನು ಹೇಳಿ, ಒಂದೇಪಿಣ್ಡವನ್ನು ಮಾಡಬೇಕು. ಅರ್ಘ್ಯಪಾತ್ರಗ
ಳು ಮಾತ್ರವೇ ಬೇರೆಬೇರೆಯಾಗಿರಬೇಕು. ತನ್ನ ತಾಯಿಯೊಡನೆ ಅನೇ
ಕ ಮಾತೃಗಳಾಗುವುದಾದರೆ, ತನ್ನ ತಾಯಿಯೊಡನೆ ಎಲ್ಲಮಾತೃಗಳಿಗೂ
ಒಬ್ಬನೇ ಬ್ರಾಹ್ಮಣನು. ಒಂದೇಪಿಣ್ಡವು, ಒಂದೇ ಅರ್ಘ್ಯಪಾತ್ರೆಯೂ ಇ
ರಬೇಕು. ಬೇರೆಬೇರೆ ಸಾಪತ್ನಮಾತೃಗಳಿಗೆ ಏಕೋದ್ದಿಷ್ಟವು ಕೂಡದೆಂ
ಬುದೊಂದು ಪಕ್ಷವು. ಎಲ್ಲಾಸಪತ್ನಮಾತೃಗಳಿಗೂ ಬೇರೆಬೇರೆ ಏಕೋದ್ದಿ
ಷ್ಟವೆಂಬುದೊಂದು ಪಕ್ಷವು. ಮಹಾಲಯದಲ್ಲಿ ಪಾರ್ವಣಾರ್ಥವಾಗಿ ಅ
ಗ್ನೌಕರಣವನ್ನು ಮಾಡಬೇಕು. ಏಕೋದ್ದಿಷ್ಟಗಣಾರ್ಥವಾಗಿ ಅಗ್ನೌ
ಕರಣವು ವಿಕಲ್ಪವಾದದ್ದು (ಮಾಡಿದರೂ, ಅಥವಾ ಬಿಟ್ಟರೂ ಬಾಧಕವಿ
ಲ್ಲ) ಮಾಡುವ ಪಕ್ಷದಲ್ಲಿ ಏಕೋದ್ದಿಷ್ಟಗಣಾರ್ಥವಾದ ಅಗ್ನೌಕರಣ

ಕ್ಕೆ ಬೇರೆ ಪಾತ್ರೆಯಲ್ಲಿ ಅನ್ನವನ್ನು ತಾದುಕೊಳ್ಳಬೇಕು. ಮಹಾಲಯದಲ್ಲಿ ಎಲ್ಲಾಪಾರ್ವಣಗಳಿಗೂ, ಏಕೋದ್ದಿಷ್ಟಗಳಿಗೂ ಬೇರೆ ಬರ್ಹಿಸ್ಸು (ದರ್ಭಾಸನ) ದರ್ಶಾದಿಗಳಲ್ಲಿ ಪ್ರತಿಪಾರ್ವಣಕ್ಕೂ ಬೇರೆಬೇರೆ ಬರ್ಹಿಗಳಿರಬೇಕು. ಉಳಿದ ಶ್ರಾದ್ಧಪ್ರಯೋಗವನ್ನೂ, ಅನೇಕ ಮಾತೃಗಳಿದ್ದರೆ ಅಂಜನಾಭ್ಯಂಜನಾದಿಗಳಲ್ಲಿ ಹೇಳಬೇಕಾದ ಮಂತ್ರಗಳ ಊಹೆ (ತಿದ್ದಿಕೊಂಡುಹೇಳುವಿಕೆ) ಯನ್ನೂ, ಶ್ರಾದ್ಧಸಾಗರದಿಂದಲೂ, ತಮ್ಮ ತಮ್ಮ ಶಾಖೋಕ್ತಪ್ರಯೋಗದ ಗ್ರಂಥಗಳಿಂದಲೂ ತಿಳಿಯತಕ್ಕದ್ದು. ಸಕೃನ್ಮಹಾಲಯದಲ್ಲಿ ಶ್ರಾದ್ಧಾಂಗವಾದ ತಿಲತರ್ಪಣವನ್ನು, ಎಲ್ಲ ಪಿತೃಗಳನ್ನೂ ಉದ್ದೇಶಿಸಿ, ಎರಡನೇ ದಿನದಲ್ಲಿಯೇ, ಪ್ರಾತಃ ಸಂಧ್ಯಾವಂದನೆಯನ್ನು ಮಾಡುವದಕ್ಕಿಂತ ಮುಂಚೆಯೇ, ಪ್ರಾತಃಸಂಧ್ಯಾವಂದನಾನಂತರದಲ್ಲಾಗಲಿ, ಬ್ರಹ್ಮಯಜ್ಞಾಂಗವಾದ ತರ್ಪಣಕ್ಕಿಂತ ಭಿನ್ನವಾಗಿ (ಅದರೊಡನೆ ಸೇರಿಸದೆ) ಮಾಡಬೇಕು. ಪ್ರತಿಪತ್ತು ಮೊದಲಾದ, ಮತ್ತು ಪಂಚಮಿ ಮೊದಲಾದ ಪಕ್ಷಗಳಲ್ಲಿ, ವಿಪ್ರವಿಸರ್ಜನೆಯಾದ ಕೂಡಲೆ ಶ್ರಾದ್ಧದಲ್ಲಿ ಪೂಜಿತರಾದ ಪಿತೃಗಳನ್ನುದ್ದೇಶಿಸಿ ತರ್ಪಣಮಾಡಬೇಕು, ಪತ್ನಿಯು ರಜಸ್ವಲೆಯಾಗಿರುವಾಗ, ಬೇರೆ ಕಾಲಗಳೂ ಇರುವದರಿಂದ ಸಕೃನ್ಮಹಾಲಯವನ್ನು ಮಾಡಕೂಡದು. ಅಮಾವಾಸ್ಯೆಯಲ್ಲಿ ರಜೋದೋಷವುಂಟಾದರೆ, ಆಶ್ವಯುಜಶುದ್ಧ ಪಂಚಮೀವರಿಗಿರುವ ಗೌಣಕಾಲದಲ್ಲಿ ಮಹಾಲಯವನ್ನು ಮಾಡಬಹುದು. ಪ್ರತಿಪತ್ತು ಮೊದಲಾದ ಇತರ ಪಕ್ಷಗಳಲ್ಲಿ ಪ್ರಾರಂಭದಿನದಲ್ಲಿ, ಅಡಿಗೆಗೆ ಪ್ರಾರಂಭಮಾಡುವುದಕ್ಕಿಂತ ಮುಂಚೆ ಪತ್ನಿಯು ರಜಸ್ವಲೆಯಾದರೆ ಮುಂದು ಮುಂದಿನ ಪಕ್ಷಗಳನ್ನು ಸ್ವೀಕರಿಸಬೇಕು. ಅಡಿಗೆಗೆ ಪ್ರಾರಂಭವಾದ ಮೇಲಾದರೆ ಆಕೆಯನ್ನು, ಬೇರೊಂದು ಮನೆಗೆ ಕಳುಹಿಸಿ ಮಹಾಲಯವನ್ನು ಮಾಡಬೇಕು (ಇಲ್ಲಿ ಸೂತಕಾದಿಗಳು ಪ್ರಾಪ್ತವಾದರೆ ಮಾಡಬೇಕಾದದ್ದನ್ನೂ, ಸಹೋದರ ಮೊದಲಾದವಶ ಮಹಾಲಯ ನಿರ್ಣಯವನ್ನೂ ಮೂರನೆಯ ಪರಿಚ್ಛೇದದ ಉತ್ತರಾರ್ಧದಲ್ಲಿ ಹೇಳಿದೆ). ವಿಧವೆಯುಮಾಡಬೇಕಾದ ಶ್ರಾದ್ಧದಲ್ಲಿಯೂ ಹೀಗೆಯೇ ಮಾಡಬೇಕು.

—ವಿಧವೆಯು ಮಹಾಲಯವನ್ನು ಮಾಡುವುದು.—

ವಿಧವೆಯು ಮಾಡುವ ಮಹಾಲಯವು-ಇಲ್ಲಿ ಪುತ್ರರಹಿತಳಾದ ವಿಧವೆಯು-ಮಮಭರ್ತೃ, ಪಿತಾಮಹಪ್ರಪಿತಾಮಹನಾಂ, ಭರ್ತೃರ್ಮಾತೃಪಿತಾಮಹಿಪ್ರಪಿತಾಮಹೀನಾಂ, ಮಮಪಿತೃಪಿತಾಮಹಪ್ರಪಿತಾಮಹಾನಾಂ, ಮಮಮಾತೃಪಿತಾಮಹಿಪ್ರಪಿತಾಮಹೀನಾಂ, ಮಮಮಾತಾಮಹಮಾತೃಪಿತಾಮಹ, ಮಾತೃಪ್ರಪಿತಾಮಹಾನಾಂ, ಮಮಮಾತಾಮಹಿಮಾತೃಪಿತಾಮಹಿಮಾತೃಪ್ರಪಿತಾಮಹೀನಾಂ, ತೃಪ್ತ್ಯರ್ಥಂ ಸಕೃನ್ಮಹಾಲಯಾಪರಪಕ್ಷಶ್ರಾದ್ಧಂ ಕರಿಷ್ಯೇ, ಎಂದು ಸಂಕಲ್ಪವನ್ನು ತಾನೇ ಮಾಡಬೇಕು. ಬ್ರಾಹ್ಮಣನ ಮೂಲಕವಾಗಿ ಅಗ್ನೌಕರಣಾದಿಗಳೊಡನೆ ಎಲ್ಲಪ್ರಯೋಗವನ್ನೂ ಸ್ವಲ್ಪವೂ ಬಿಡದಂತೆ ಮಾಡಿಸಬೇಕು. ಆಬ್ರಾಹ್ಮಣನು, ಇಂಥಹೆಸರುಳ್ಳಯಜಮಾನಿಯ (ಶ್ರಾದ್ಧಕರ್ತ್ರೀ) ಭರ್ತೃ, ತತ್ಪಿತೃ, ಪಿತಾಮಹ, ಮೊದಲಾದವರ ಉಚ್ಚಾರಣೆಯನ್ನು ಮಾಡಿ ಪ್ರಯೋಗಮಾಡಬೇಕು. ಶಕ್ತಿಯಿಲ್ಲದವಳು ಸ್ವಭರ್ತ್ರಾದಿತ್ರಯ, ಸ್ವಪಿತ್ರಾದಿತ್ರಯ, ಸ್ವಮಾತ್ರಾದಿತ್ರಯ, ಸ್ವಮಾತಾಮಹಾದಿತ್ರಯ (ಸಪತ್ನೀಕ) ವೆಂದು ನಾಲ್ಕು ಪಾರ್ವಣಗಳನ್ನುದ್ದೇಶಿಸಿ ಮಹಾಲಯಮಾಡಬೇಕು. ಅತ್ಯಶಕ್ತಳಾದರೆ ಸ್ವಭರ್ತ್ರಾದಿತ್ರಯ, ಸ್ವಪಿತ್ರಾದಿತ್ರಯವೆಂದು ಎರಡು ಪಾರ್ವಣವನ್ನೇ ಮಾಡಬೇಕು.

ಜೀವತ್ಪಿತೃಕಮೊದಲಾದವರು ಸಂಕಲ್ಪವಿಧಿಯಿಂದ ಮಾಡುವಿಕೆ.

ಜೀವತ್ಪಿತೃಕಾದಿಗಳು ಮಾಡಬೇಕಾದ ಸಂಕಲ್ಪವಿಧಾನವು:—

"ವೃದ್ಧೌತೀರ್ಥೇಚ ಸಂನ್ಯಸ್ತೇ ತಾತೇಚ ಪತಿತೇಸತಿ। ಯೇಭ್ಯಏವಪಿತಾದದ್ಯಾತ್ತೇಭ್ಯೋ ದದ್ಯಾತ್ಸ್ವಯಂ ಸುತಃ ॥೧॥ ಮುಣ್ಡನಂ ಪಿಣ್ಡದಾನಂಚ ಪ್ರೇತಕರ್ಮ ಚ ಸರ್ವಶಃ । ನಜೀವತ್ಪಿತೃಕಃ ಕುರ್ಯಾದ್ಗುರ್ವಿಣೀಪತಿರೇವ ಚ ॥೨॥" ವೃದ್ಧಿಶ್ರಾದ್ಧದಲ್ಲಿಯೂ, ತೀರ್ಥಶ್ರಾದ್ಧದಲ್ಲಿಯೂ, ತಂದೆಯು ಸಂನ್ಯಾಸಿಯಾಗಿ ಅಥವಾ ಪತಿತ (ಜಾತಿಭ್ರಷ್ಟ) ನಾಗಿರುವಾಗಲೂ ಕೂಡ, ತಂದೆಯು ಯಾರನ್ನುದ್ದೇಶಿಸಿ ಪಿಣ್ಡದಾನಮಾಡುತ್ತಿದ್ದನೋ ಅವರಿಗೆ ಮಗನು ತಾನೂ ಕೊಡಬೇಕು. ॥೧॥ ಮುಣ್ಡನ, ಪಿಣ್ಡದಾನ, ಪ್ರೇತಸಂಸ್ಕಾರ ಇವುಗಳನ್ನು ಜೀವತ್ಪಿತೃಕನೂ (ತಂದೆಯು ಬದುಕಿರುವವನು)

ಗರ್ಭಿಣೀಪತಿಯೂ ಮಾಡಕೂಡದು ॥ ೩॥ ಎಂಬ ವಚನಗಳಿರುವುದರಿಂದ ತಂದೆಯು ಸಂನ್ಯಾಸಿಯಾಗಿ, ಅಥವಾ ಜಾತಿ ಭ್ರಷ್ಟನಾಗಿರುವಾಗ ಮಗನು, ತಂದೆಯತಂದೆ ಮೊದಲಾದ ಎಲ್ಲಾ ಪಿತೃಗಳನ್ನೂ ಉದ್ದೇಶಿಸಿ, ಪಿಂಡದಾನವಿಲ್ಲದೆ ಸಂಕಲ್ಪವಿಧಿಯಿಂದ ಮಹಾಲಯವನ್ನು ಮಾಡಬೇಕು. ಪಿಂಡದಾನ ಮೊದಲಾದ ವಿಸ್ತಾರಗಳನ್ನು ಮಾಡುವುದಕ್ಕೆ ಶಕ್ತಿಯಿಲ್ಲದವರೂ ಸಂಕಲ್ಪವಿಧಾನದಿಂದ ಮಹಾಲಯವನ್ನು ಮಾಡಬಹುದು. ಸಂಕಲ್ಪವಿಧಿಯಲ್ಲಿ ಅರ್ಘ್ಯದಾನ,ಸಮಂತ್ರಕವಾದ ಆವಾಹನೆ, ಅಗ್ನೌಕರಣ, ಪಿಂಡಪ್ರದಾನ, ವಿಕಿರ, ಸ್ವಧಾವಾಚನೆ, ಇವುಗಳನ್ನು ಬಿಡಬೇಕು. ಬೇಕಾದಷ್ಟು ಜನ ಬ್ರಾಹ್ಮಣರು ಸಿಕ್ಕದೆ ಹೋದರೆ ವಿಶ್ವೇದೇವಸ್ಥಾನದಲ್ಲಿ ಸಾಲಗ್ರಾಮಮೊದಲಾದ ದೇವತಾಮೂರ್ತಿಯನ್ನಿಟ್ಟು ಶ್ರಾದ್ಧವನ್ನು ಮಾಡಬಹುದು, ಬ್ರಾಹ್ಮಣರೊಬ್ಬರೂ ಸಿಕ್ಕದಿದ್ದರೆ ದರ್ಭವಟು (ಕೂರ್ಚಕಟ್ಟಿರುವುದು) ವಿಧಿಯಿಂದ ಶ್ರಾದ್ಧವು. ತಂದೆತಾಯಿಗಳು ಸತ್ತ ಸಂವತ್ಸರದಲ್ಲಿ ಮಹಾಲಯವು ವಿಕಲ್ಪವು. ಮಲಮಾಸದಲ್ಲಿ ಮಹಾಲಯವನ್ನು ಮಾಡಕೂಡದು.

—ಪ್ರತಿಸಾಂವತ್ಸರಿಕ ಶ್ರಾದ್ಧಾದಿಗಳು ಬಂದರೆ.—

ಪ್ರತ್ಯಬ್ದಿಕ ಶ್ರಾದ್ಧಾದಿಗಳು ಬಂದರೆ.—ಅಪರಪಕ್ಷದಲ್ಲಿ ಪ್ರತಿಸಾಂವತ್ಸರಿಕ ಶ್ರಾದ್ಧವೊದಗಿದರೆ,ಮೃತತಿಥಿಯಲ್ಲಿ ವಾರ್ಷಿಕಶ್ರಾದ್ಧವನ್ನು ಮಾಡಿ ಬೇರೆ ದಿನದಲ್ಲಿ ಸಕೃನ್ಮಹಾಲಯವನ್ನು ಮಾಡಬೇಕು. ಪ್ರತಿಪತ್ತು ಮೊದಲಾಗಿ ಅಮಾವಾಸ್ಯಾಂತವಾದ ಪಕ್ಷಗಳಲ್ಲಿ, ಮೃತದಿನದಲ್ಲಿ - ವಾರ್ಷಿಕವನ್ನು ಮಾಡಿ, ಬೇರೆ ಪಾಕದಿಂದ ಮಹಾಲಯವನ್ನು ಮಾಡಬೇಕು. ಅಮಾವಾಸ್ಯೆಯಲ್ಲಿ ಪ್ರತಿವಾರ್ಷಿಕವೂ, ಸಕೃನ್ಮಹಾಲಯವೂ ಪ್ರಾಪ್ತವಾದರೆ, ಮೊದಲು ವಾರ್ಷಿಕವನ್ನೂ,ಆಮೇಲೆ ಮಹಾಲಯವನ್ನೂ,ಅನಂತರದಲ್ಲಿ ದರ್ಶವನ್ನೂ, ಈ ಮೂರನ್ನೂ ಕ್ರಮವಾಗಿ ಬೇರೆಬೇರೆ ಪಾಕಗಳಿಂದ ಮಾಡಬೇಕು. ಅಮಾವಾಸ್ಯೆಯಲ್ಲಿ ಮಹಾಲಯಮಂತ್ರವೇ ಬಂದಾಗ್ಯೂ, ಮೊದಲು ಮಹಾಲಯವನ್ನೂ, ತರುವಾಯ ದರ್ಶವನ್ನೂ ಮಾಡತಕ್ಕದ್ದು. ಮೃತತಿಥಿಯಲ್ಲಿ ಸಕೃನ್ಮಹಾಲಯವು ಬಂದಕಾಲದಲ್ಲಿ-ಆಯಾ ತಿಥಿಗಳನ್ನು ಗ್ರಹಿಸತಕ್ಕ ವಿಷಯದಲ್ಲಿ ಅಪರಾಹ್ಣವ್ಯಾಪ್ತಿಯೊಡನೆ ದರ್ಶದಂತೆಯೇ ಮಾಡತಕ್ಕದ್ದೆಂದು ತೋರುತ್ತದೆ.

## —ಭರಣೀಶ್ರಾದ್ಧವು —

ಭರಣೀಶ್ರಾದ್ಧವು:-ಈ ಅಪರಪಕ್ಷದಲ್ಲಿ ಭರಣೀನಕ್ಷತ್ರದಲ್ಲಿ ಶ್ರಾದ್ಧ ಮಾಡಿದರೆ ಗಯಾಶ್ರಾದ್ಧಫಲವುಂಟು. ಭರಣೀಶ್ರಾದ್ಧವನ್ನು ಪಿಣ್ಡರಹಿತವಾಗಿ ಆರುದೇವತೆಗಳನ್ನುದ್ದೇಶಿಸಿ ಸಂಕಲ್ಪ ವಿಧಾನ ದಿಂದ ಮಾಡಬೇಕು. ವಿಶ್ವೇದೇವತೆಗಳು (ಧೂ)ಧುರಿಲೋಚನರಾಗಲಿ, ಪುರೂರವಾರ್ದ್ರವರಾಗಲಿ ಆಗಬಹುದು. ಗಯಾಶ್ರಾದ್ಧಫಲಾಪೇಕ್ಷೆಯುಳ್ಳವರು ಪ್ರತಿವರ್ಷದಲ್ಲಿಯೂ, ಕಾಮ್ಯನಾಗಿ ಭರಣೀಶ್ರಾದ್ಧವನ್ನು ಮಾಡಬೇಕು. ಕೆಲವರು-ತಂದೆ ಮೊದಲಾದವರು ಸತ್ತಮೇಲೆ ಮೊದಲನೆಯ ವರ್ಷದಲ್ಲಿ ಮಾತ್ರವೇ ಎಲ್ಲರಿಗೂ ಈಭರಣೀಶ್ರಾದ್ಧವನ್ನು ಮಾಡುತ್ತಾರೆ. ಎರಡನೆಯ ವರ್ಷದಿಂದ ಮಾಡುವುದೇ ಇಲ್ಲ. ಇದಕ್ಕೆ, ಏನು ಆಧಾರವಿದೆಯೋ ಗೊತ್ತಿಲ್ಲ. "ನದೈವಂನಾಪಿವಾಪಿತ್ರ್ಯಂಯಾವತ್ಪೂರ್ಣೋನವತ್ಸರಃ" ಸತ್ತವನಿಗೆ ವರ್ಷವುಪೂರ್ತಿಯಾಗುವುದರೊಳಗೆ ದೈವಕರ್ಮಗಳನ್ನೂ ಪಿತೃಕರ್ಮಗಳನ್ನೂ ಮಾಡಕೂಡದು. ಎಂಬ ವಚನದಂತೆ, ದರ್ಶಮೊದಲಾದ ಎಲ್ಲಾಶ್ರಾದ್ಧಕ್ಕೂ ಪ್ರಥಮಸಂವತ್ಸರದಲ್ಲಿ ನಿಷೇಧವನ್ನು ಹೇಳಿರುವುದರಿಂದಲೂ, ಮೃತನಾದವನು ವರ್ಷಾಂತದಲ್ಲಿಯೇ ಪಿತೃತ್ವವನ್ನು ಪಡೆವುದರಿಂದಲೂ, ಮೊದಲನೆಯವರ್ಷವನ್ನು ಬಿಟ್ಟು ಎರಡನೆಯ ವರ್ಷದಿಂದ ಮಾಡತಕ್ಕದ್ದು ಯುಕ್ತವಾಗಿ ಕಾಣುತ್ತದೆ. ಅಲ್ಲದೆ ಸತ್ತವನು ತಂದೆಯಲ್ಲದೆ ಇತರನಾದರೂ ಅವನಿಗೆ ಭರಣೀಶ್ರಾದ್ಧವನ್ನು ಮೊದಲವರ್ಷದಲ್ಲಿ ಮಾಡುವುದಕ್ಕೂ ಆಧಾರವು ತೋರಿಬಂದಿಲ್ಲ. ಗಯಾಶ್ರಾದ್ಧಫಲಉಂಟಾಗುವುದೆಂಬಾಚಾರವನ್ನು ಅನುಸರಿಸಿ ಮಾಡುವುದಾದರೆ, ಸತ್ತವನೊಬ್ಬನ ಪಾರ್ವಣವನ್ನೊಂದನ್ನೇ ಕುರಿತು ಸದ್ಯೈವವಾಗಿ ಮಾಡಬೇಕು. ಇಲ್ಲಿ ಸಪಿಣ್ಡವಾಗಿ ಮಾಡುವ ಆಚಾರವು ಹೇಗೆ ಬಂತೆಂಬ ವಿಷಯವನ್ನೂ, ಆಲೋಚಿಸಬೇಕಾದ್ದು ಆವಶ್ಯಕವಾಗಿದೆ. ಇಲ್ಲಿ-ಅಪರಪಕ್ಷದಲ್ಲಿ ಸಪ್ತಮಿ ಮೊದಲಾದ ಮೂರು ದಿನಗಳಲ್ಲಿ ಮಘಾನಕ್ಷತ್ರದಲ್ಲಿ ವರ್ಷಶ್ರಾದ್ಧವನ್ನು ಮಾಡುವುದಕ್ಕಾಗಿ ಆಶ್ವಲಾಯನರು- 'ಪೂರ್ವೇದಿನದ ಶ್ರಾದ್ಧವನ್ನು ಮಾಡುವೆನು, ಮಘಾನಕ್ಷತ್ರದ ವರ್ಷಶ್ರಾದ್ಧವನ್ನು ಮಾಡುವೆನು, ಅನ್ವಷ್ಟಕ್ಯಶ್ರಾದ್ಧವನ್ನು ಮಾಡುವೆನು, ಎಂದು ಕ್ರಮವಾಗಿ ಸಂಕಲ್ಪಮಾಡಿ, ಅಷ್ಟಕವಿಧಿಯಂತೆ

ಎಲ್ಲವನ್ನೂ ಮಾಡಬೇಕು. ಆಶ್ವಲಾಯನರು ಅಷ್ಟಕಾವಿಕೃತಿರೂಪವಾದ ಈ ಶ್ರಾದ್ಧವನ್ನು ಒಂದೇ ಅಷ್ಟಕಾಶ್ರಾದ್ಧವನ್ನು ಮಾಡುವುದಾದರೂ ಮಾಡಬೇಕು. ಇತರಶಾಖೆಯುವನು ಅಷ್ಟಕಾರೂಪವಾಗಿಯೇ ಮಾಡಬೇಕು. ಇದು ಅಷ್ಟಕೆಗಳನ್ನು ಮಾಡುವುದಾದರೆ 'ಅಷ್ಟಕಾಶ್ರಾದ್ಧವನ್ನು ಮಾಡುವೆನು' ಎಂದು ಸಂಕಲ್ಪಮಾಡಿ ಮಾಡಬೇಕು. ಒಂದೇ ಅಷ್ಟಕೆಯನ್ನು ಮಾಡುವುದಾದರೆ ಮಾಡಕೂಡದು.

—ಅನ್ವಷ್ಟಕ್ಯಾದಿಶ್ರಾದ್ಧವು.—

ಅನ್ವಷ್ಟಕ್ಯವೊದಲಾದ ಶ್ರಾದ್ಧಗಳು ಅಷ್ಟಮಿಯಲ್ಲಿ ಅಷ್ಟಕಾಶ್ರಾದ್ಧವನ್ನು ಮಾಡದಿದ್ದರೂ ಕೂಡ, ಎಲ್ಲಾಶಾಖೆಯುವರೂ ನವಮಿಯಲ್ಲಿ ಒಂಭತ್ತು ಮಂದಿ ದೇವತೆಗಳನ್ನುದ್ದೇಶಿಸಿ ಅನ್ವಷ್ಟಕ್ಯಶ್ರಾದ್ಧವನ್ನು, ಗೃಹ್ಯಾಗ್ನಿಯಲ್ಲಿ ವಿಧ್ಯುಕ್ತವಾಗಿ ಮಾಡಬೇಕು. ನವಮಿಯಲ್ಲಿ ಅನ್ವಷ್ಟಕ್ಯವನ್ನು ಮಾಡುವುದೇ ಮುಖ್ಯವಾದದ್ದು. ಗೃಹ್ಯಾಗ್ನಿಯಿಲ್ಲದವನಾದರೆ ವೊದಲು ತಾಯಿಯು ಮೃತಳಾಗಿ ಅನಂತರದಲ್ಲಿ ತಂದೆಯು ಸತ್ತುಹೋಗಿದ್ದಲ್ಲಿ ಅಂಥವನು ಪಾಣಿ ಹೋಮದೊಡನೆ ಒಂಭತ್ತು ಜನ ಪಿತೃದೇವತೆಗಳಿಗಾಗಿ ಶ್ರಾದ್ಧವನ್ನು ಮಾಡಬೇಕು. ಜೀವತ್ಪಿತೃಕ, ಮೃತಮಾತೃಕ, ಉಪನಯನವಿಲ್ಲದವನು, ಈ ಮೂರುಮಂದಿಯೂ, ಮಾತೃವೊದಲಾದ ಮೂರು ಮಂದಿಯನ್ನು ಕುರಿತು ಒಂದೇ ಪಾರ್ವಣದಿಂದ, ಪೂರ್ವ (ಪುರೂ) ರವಾದ್ರ್ಯವರೆಂಬ ವಿಶ್ವೇದೇವತೆಗಳೊಡನೆ ಸಪಿಂಡವಾಗಿ ಶ್ರಾದ್ಧವನ್ನುಮಾಡಬೇಕು. ತನ್ನ ತಾಯಿಯು ಬದುಕಿರುವಾಗ ಸತ್ತುಹೋಗಿರುವ ಸಾಪತ್ನಮಾತೃವೇ ವೊದಲಾದ ಮೂವರನ್ನುದ್ದೇಶಿಸಿ ಮಾಡಬೇಕು. ತನ್ನತಾಯಿಯೂ, ಸಾಪತ್ನಮಾತೃವೂ (ಬಲತಾಯಿ) ಸತ್ತುಹೋಗಿದ್ದರೆ, ದ್ವಿವಚನಪ್ರಯೋಗದಿಂದಲೂ ಸಾಪತ್ನಮಾತೃಗಳನೇಕಮಂದಿಗಳಿದ್ದರೆ ಬಹುವಚನಪ್ರಯೋಗದಿಂದಲೂ ತನ್ನ ತಾಯಿಯೊಡನೆ ಒಬ್ಬ ಬ್ರಾಹ್ಮಣನನ್ನು ಹೇಳಿ, ಒಂದೇ ಕ್ಷಣವನ್ನೂ, ಒಂದೇ ಅರ್ಘ್ಯವನ್ನೂ, ಪಿಂಡವನ್ನೂ ಮಾಡಬೇಕು. ಪಿತಾಮಹಿಗಳಿಗೆ ಎರಡು ಪಿಂಡಗಳನ್ನು ಮಾಡಬೇಕು. ಈ ರೀತಿಯಾಗಿ ಪಾರ್ವಣವನ್ನು ಅವಶ್ಯಕವಾಗಿ ಮಾಡಬೇಕು. ಅನೇಕ ಮಂದಿತಾಯಿಗಳಿದ್ದರೆ ಬ್ರಾಹ್ಮಣರು, ಪಿಂಡಗಳು, ಇವುಗಳಲ್ಲಿ

ಭೇದವನ್ನು ಕೆಲವರು ಹೇಳುತ್ತಾರೆ. ತನ್ನ ತಾಯಿಯೂ, ಸಾಪತ್ನಮಾತೃವೂ ಬದುಕಿದ್ದರೆ ಗೃಹ್ಯಾಗ್ನಿ ರಹಿತನಾದ ಮೃತಪಿತೃಕನೂ ಸಹ ಅನ್ವಷ್ಟಕ್ಯದಲ್ಲಿ ಮಾತೃಯಜ್ಞವು ಮುಖ್ಯವಾದದ್ದರಿಂದ, ಮಾಡಬೇಕು. ಅದರಿಂದಲೇ ಕೆಲವರು-ಇಲ್ಲಿ ಮಾತೃಪಾರ್ವಣಕ್ಕೆ ಪ್ರಾಥಮ್ಯ (ಮೊದಲು ಮಾಡಬೇಕಾದದ್ದೆಂದು) ವನ್ನುಹೇಳುವರೆಂದು ತೋರುವುದು. ಮೊದಲು ತಂದೆ ಸತ್ತು, ಅನಂತರದಲ್ಲಿ ತಾಯಿ ಸತ್ತಾಗ್ಯೂ, ಗೃಹ್ಯಾಗ್ನಿಗಳಿಗೆ, ಇದು ನಿತ್ಯವಾದ್ದರಿಂದ, ಈ ನವಮಿಯಲ್ಲಿ ಅನ್ವಷ್ಟಕ್ಯವು ಆವಶ್ಯಕವಾದದ್ದು. ಗೃಹ್ಯಾಗ್ನಿಗಳಲ್ಲದ ಇತರರಿಗೆ ತಂದೆಯು ಅನಂತರದಲ್ಲಿ ತಾಯಿ ಸತ್ತಿದ್ದರೆ ಆವಶ್ಯಕವಿಲ್ಲ. ಮೊದಲೇ ಸತ್ತತಾಯಿಯ ಶ್ರಾದ್ಧವಿಷಯದಲ್ಲಿ ಈನವಮಿಯಲ್ಲಿ 'ಮೃತೇಭರ್ತರಿಲುಪ್ಯತೇ' ಎಂಬ ವಚನಾನುಸಾರವಾಗಿ ತಂದೆ ಬದುಕಿರುವವರೆಗೂ ಮಾಡುತ್ತಿದ್ದು, ಕೆಲವರು ಅನಂತರದಲ್ಲಿ ಮಾಡುವುದಿಲ್ಲ.

## —ಅವಿಧವಾನವಮೀ—

ಅವಿಧವಾನವಮಿ-ತನ್ನ ಗಂಡನು ಬದುಕಿರುವಾಗ, ಅಥವಾ ಸಹಗಮನದಿಂದ ಸತ್ತುಹೋದ, ಮಾತಾ ಮಹಿ, ಭಗಿನಿ (ಅತ್ತಿಗೆ) ಮಗಳು, ತಾಯ ಸಹೋದರಿ, ತಂದೆಯ ಸಹೋದರಿ ಮೊದಲಾದ, ತಮ್ಮ ತಂದೆ ತಾಯಿಗಳ ವಂಶದಲ್ಲಿ ಹುಟ್ಟಿ ಮಕ್ಕಳಿಲ್ಲದಿರುವ, ಎಲ್ಲಾ ಸುವಾಸಿನಿಯರಿಗೂ, ಈ ನವಮಿಯಲ್ಲಿ ಶ್ರಾದ್ಧಮಾಡಬೇಕು. ಗಂಡನಿರುವಾಗಲೇ ಸತ್ತವರಿಗೆ ಅವರ ಗಂಡನು ಸತ್ತಮೇಲೆ ಈ ಶ್ರಾದ್ಧವನ್ನು ಮಾಡಕೂಡದು. ಆದ್ದರಿಂದಲೇ ಇದಕ್ಕೆ ಅವಿಧವಾನವಮೀ ಎಂಬ ಪ್ರಸಿದ್ಧಿಯುಂಟಾಗಿದೆ. ಆದ್ದರಿಂದ ಹೆಂಡತಿಗೂ ಈನವಮೀಶ್ರಾದ್ಧವನ್ನು ಮಾಡಕೂಡದು. ಈ ಅವಿಧವಾನವಮಿಗೂ ಮಹಾಲಯದಂತೆ ವೃಶ್ಚಿಕ ಸಂಕ್ರಮಣದವರೆಗೂ ಗೌಣಕಾಲವುಂಟು, ಹೀಗೆಯೇ ದೌಹಿತ್ರ (ಮಗಳಮಗ) ನಿಗೆ ಪ್ರತಿಸತ್ತಿನಲ್ಲಿ ಶ್ರಾದ್ಧಮಾಡುವುದಕ್ಕೂ ಕಾಲವುಂಟೆಂದು ಕಾಲತತ್ವವಿವೇಚನೆ, ಎಂಬಗ್ರಂಥದಲ್ಲಿ ಹೇಳಿದೆ. ಈ ಅವಿಧವಾನವಮಿಯಲ್ಲಿಯೂ, ಸುವಾಸಿನಿಯರಪ್ರತಿ ಸಾಂವತ್ಸರಿಕೆಯಲ್ಲಿಯೂ ಸಹ "ಭರ್ತುರಗ್ರೇಮೃತಾನಾರೀಸಹದಾಹೇನವಾಮೃತಾ । ತಸ್ಯಾಃಸ್ಥಾನೇನಿಯುಂಜೀತವಿಪ್ರೈಃ ಸಹಸುವಾಸಿ

ನೀಂ ॥ ೧ ॥ ” ಗಂಡನಿರುವಾಗಲೇ ಸತ್ತ ಅಥವಾ ಸಹಗಮನದಿಂದ ಸತ್ತವಳ ಶ್ರಾದ್ಧದಲ್ಲಿ ನಿಮಂತ್ರಣಕ್ಕೆ ಕರೆವ ಬ್ರಾಹ್ಮಣರೊಡನೆ ಸುವಾಸಿನಿಯನ್ನೂ ಸಹ ನಿಮಂತ್ರಣಕ್ಕೆ ಹೇಳಬೇಕು, ಎಂಬ ಮಾರ್ಕಂಡೇಯ ವಚನವೇ ಮೊದಲಾದ ಆಧಾರಗಳಿಂದ, ಸುವಾಸಿನಿಗೆ ಭೋಜನಮಾಡಿಸಬೇಕು. ಈ ನವಮಿಯಲ್ಲಿ ಜೀವತ್ಪಿತೃಕನಾದವನೂ, ಗರ್ಭಿಣೀಪತಿಯಾದವನೂ ಕೂಡ ಪಿಂಡಪ್ರದಾನವನ್ನು ಮಾಡಲೇಬೇಕು. ನವಮೀಶ್ರಾದ್ಧವನ್ನು ಮಾಡುವುದಕ್ಕೆ ಯತ್ನವಿಲ್ಲದೆ ಹೋದರೆ 'ಅನ್ವಷ್ಟಕ್ಯಶ್ರಾದ್ಧವನ್ನು ಮಾಡದ ದೋಷಪರಿಹಾರಕ್ಕಾಗಿ, ನಾನು ' ಏಭಿರ್ದ್ಯುಭಿಸ್ಸುಮನಾಃ ' ಎಂಬ ಮಂತ್ರವನ್ನು ನೂರು ಸಾರಿ ಜಪಮಾಡುತ್ತೇನೆ, ಎಂದು ಸಂಕಲ್ಪಮಾಡಿ, ಆ ಜಪ ಮಾಡಬೇಕು. ಸಾಮವೇದಿಗಳು-ಅನ್ವಷ್ಟಕ್ಯದಲ್ಲಿ ಪಿತೃಪಾರ್ವಣವನ್ನು ಮಾತ್ರವೇ ಮಾಡಬೇಕು. ಮಾತೃ, ಮಾತಾಮಹ ಪಾರ್ವಣಗಳನ್ನು ಮಾಡಕೂಡದು, ಎಂದು ಸಿಂಧುಕಾರನ ಆಶಯವು. ಇಲ್ಲಿ-ದ್ವಾದಶಿಯಲ್ಲಿ ಸಂನ್ಯಾಸಿಗಳಿಗೆ ಮಹಾಲಯವನ್ನು ಮಾಡತಕ್ಕದ್ದು. ಅದನ್ನು ಅಪರಾಹ್ಣವ್ಯಾಪ್ತಿಯುಳ್ಳ ತಿಥಿಯಲ್ಲಿ ಮಾಡಬೇಕೆಂದು ಹೇಳಿದೆ. ಈ ವಿಷಯದಲ್ಲಿ ವೈಷ್ಣವರು, ಅಪರಾಹ್ಣವ್ಯಾಪ್ತಿಯುಳ್ಳ ದ್ವಾದಶಿಯಲ್ಲಿ ಏಕಾದಶೀ ವ್ರತವು ಪ್ರಾಪ್ತವಾದರೆ ಸ್ವಲ್ಪಕಾಲವಿರುವ ಎರಡನೆಯ ದ್ವಾದಶಿಯಲ್ಲಾಗಲಿ, ಸಂಪೂರ್ಣವಾದ ತ್ರಯೋದಶಿಯಲ್ಲಾಗಲಿ ಏಕಾದಶೀ ಪಾರಣೆಯದಿನದಲ್ಲಿಯೇ ಸಂನ್ಯಾಸಿ ನಿಮಿತ್ತವಾದ ಶ್ರಾದ್ಧವನ್ನು ಮಾಡುತ್ತಾರೆ. ಈವಿಷಯದಲ್ಲಿ ವೈಷ್ಣವರು,ಸಂನ್ಯಾಸಿ ಮಹಾಲಯವನ್ನು ದರ್ಶದಿನದಲ್ಲಿ ಮಾಡಬೇಕಾಗಿ ತೋರುತ್ತದೆ.ತ್ರಯೋದಶಿಯು, ಮಘಾನಕ್ಷತ್ರದೊಡನೆ ಸೇರಿದ್ದಾಗ್ಯೂ, ಇಲ್ಲವಾದರೂ ನಿತ್ಯವಾಗಿ ಶ್ರಾದ್ಧಮಾಡಬೇಕು. ಮಘಾನಕ್ಷತ್ರವೊಂದನ್ನೇ ಉದ್ದೇಶಿಸಿಯೂ ಈ ಶ್ರಾದ್ಧವನ್ನು ಮಾಡಬೇಕು.

### —ಮಘಾತ್ರತೋದಶೀ ಶ್ರಾದ್ಧವು.—

ಮಘಾತ್ರಯೋದಶೀ ಶ್ರಾದ್ಧವು-ಈಶ್ರಾದ್ಧವಿಧಿಯಲ್ಲಿ ಬಹು ಗ್ರಂಥಗಳಲ್ಲಿ ಅನೇಕ ಪಕ್ಷಾಂತರಗಳನ್ನು ಹೇಳಿದ್ದಾರೆ. ಪುತ್ರವಂತ ಅಥವಾ ಅಪುತ್ರನಾದ ಗೃಹಸ್ಥನು, ಸಪತ್ನೀಕ ಪಿತೃಪಾರ್ವಣ, ಮಾತಾಮಹಪಾ

ರ್ವಣಗಳೊಡನೆ, ಚಿಕ್ಕಪ್ಪ, ದೊಡ್ಡಪ್ಪ, (ಪಿತೃವ್ಯ) ಸಹೋದರ, ಸೋದರಮಾವ, ತಾಯಿತಾಯಿಗಳ ಅಕ್ಕತಂಗಿಯರು, ಅತ್ತಿಗೆ, ಮಾವ, ಮೊದಲಾದ ಪಾರ್ವಣ ಸಹಿತವಾಗಿ, ಪಿಂಡರಹಿತವಾದ, ಸಂಕಲ್ಪ ಶ್ರಾದ್ಧವಿಧಿಯಿಂದ ಶ್ರಾದ್ಧಮಾಡಬೇಕು. ಅಥವಾ ಮಹಾಲಯದಂತೆ, ಪಿತೃಮೊದಲಾದ ಪಾರ್ವಣದ್ವಯವನ್ನೂ, ಪಿತೃವ್ಯಾದಿಯಾದ ಏಕೋದ್ದಿಷ್ಟಗಣವನ್ನೂ, ಉದ್ದೇಶಿಸಿ ಸಂಕಲ್ಪ ಶ್ರಾದ್ಧವನ್ನು ಮಾಡಬೇಕು. ಇಲ್ಲವೇ ದರ್ಶದಂತೆ ಈರುಜನ ಪಿತೃದೇವತೆಗಳನ್ನುದ್ದೇಶಿಸಿ, ಅಪಿಂಡವಾಗಿ ಶ್ರಾದ್ಧಮಾಡಬೇಕು. ಅಲ್ಲದಿದ್ದರೆ, ಪುತ್ರವಂತನಾದ ನಿಷ್ಕಾಮಿಯು ಶ್ರಾದ್ಧವಿಧಿಯಾಗಿ ಶ್ರಾದ್ಧವನ್ನು ಮಾಡಬೇಕಾದ್ದಿಲ್ಲ. ಅಂದರೆ ಪಿತೃಮೊದಲಾದ ಪಾರ್ವಣದ್ವಯವನ್ನಾಗಲಿ, ಪಿತೃವ್ಯಮೊದಲಾದವರೊಡನಾಗಲಿ ಉದ್ದೇಶಿಸಿ, ಇವರ ತೃಪ್ತ್ಯರ್ಥವಾಗಿ ಬ್ರಾಹ್ಮಣಭೋಜನವನ್ನು ಮಾಡಿಸುವೆನೆಂದು ಸಂಕಲ್ಪ ಮಾಡಿ, ಪಿತೃರೂಪಿಯಾದ ಬ್ರಾಹ್ಮಣನಿಗೆ ಗಂಧವನ್ನು ಸಮರ್ಪಿಸುವೆನು, ಎಂಬುದೇ ಮೊದಲಾಗಿ ಪಂಚೋಪಚಾರಗಳನ್ನು ಅರ್ಪಿಸಿ 'ಬ್ರಹ್ಮಾರ್ಪಣಂ' ಎಂಬುದೇ ಮೊದಲಾದ ಮಂತ್ರಗಳನ್ನು ಹೇಳಿ, ಈ ಬ್ರಾಹ್ಮಣಭೋಜನದಿಂದ ಪಿತೃರೂಪಿಯಾದ ಈಶ್ವರನು ಪ್ರೀತನಾಗಲಿ ಎಂದು ಅನ್ನವನ್ನು ಧಾರೆಯೆರೆದು, ಪಾಯಸಮೊದಲಾದ ಮಧುರಾನ್ನಗಳಿಂದ ಬ್ರಾಹ್ಮಣಭೋಜನಮಾಡಿಸಿ, ದಕ್ಷಿಣಾದಿಗಳಿಂದ ಸಂತೋಷಪಡಿಸಿ ತಾನೂ ಊಟಮಾಡಬೇಕು, ಎಂಬ ವಿಧಿಯನ್ನಾದರೂ ಆಚರಿಸಬಹುದು. ಪುತ್ರರಹಿತನೂ, ಸಕಾಮನಾಗಿ ಶ್ರಾದ್ಧಮಾಡುವವನೂ ಸಹ, ಪಿಂಡಪ್ರದಾನವಿಲ್ಲದ ವಿಧಿಯಿಂದ ಶ್ರಾದ್ಧಮಾಡುವುದರಿಂದ ದೋಷವಿಲ್ಲ. ("ಅಸಂತಾನಸ್ತು ಯಸ್ತಸ್ಯ ಶ್ರಾದ್ಧೇ ಪ್ರೋಕ್ತಾ ತ್ರಯೋದಶೀ । ಸಂತಾನಯುಕ್ತೋ ಯಃ ಕುರ್ಯಾತ್ತಸ್ಯ ವಂಶಕ್ಷಯೋ ಭವೇತ್ ॥" ಸಂತಾನರಹಿತನಾದವನು ತ್ರಯೋದಶೀಶ್ರಾದ್ಧವನ್ನು ಮಾಡಬೇಕು. ಪುತ್ರವಂತನು ತ್ರಯೋದಶೀಶ್ರಾದ್ಧವನ್ನು ಮಾಡಿದರೆ ವಂಶಕ್ಷಯವಾಗುವುದು॥ ಎಂದು ಹೇಮಾದ್ರಿಯಲ್ಲಿ ನಾಗರಖಂಡವಚನವಿರುವುದೆಂದು ನಿರ್ಣಯಸಿಂಧುಕಾರನು ಹೇಳಿರುವನು) ಪುತ್ರವಂತರಲ್ಲದವರು ಪಿಂಡಪ್ರದಾನವನ್ನೂ ಮಾಡಬಹುದೆಂದು ಕೆಲವೆಡೆಗಳಲ್ಲಿ ಹೇಳಿದೆ. ಹಿಂದೆ ಹೇಳಿದ್ದರಲ್ಲಿ ಯಾವುದಾದ

ರೊಂದು ಪಕ್ಷವನ್ನಾಶ್ರಯಿಸಿ ಮಘಾತ್ರಯೋದಶೀ ಶ್ರಾದ್ಧವನ್ನು ಮಾಡಲೇಬೇಕು. ಮಾಡದಿದ್ದರೆ ದೋಷವುಂಟೆಂದು ಹೇಳಿರುವುದರಿಂದ ಇದು ನಿತ್ಯ ಶ್ರಾದ್ಧವಾಗಿರುವುದು. ಸೂರ್ಯನು ಹಸ್ತ ನಕ್ಷತ್ರದಲ್ಲಿರುವಾಗ ತ್ರಯೋದಶಿಯು ಮಘಾ ನಕ್ಷತ್ರದಲ್ಲಿ ಬಂದರೆ «ಗಜಚ್ಛಾಯಾ» ಎಂಬ ಹೆಸರು ಉಂಟಾಗುವುದು. ಈದಿನದಲ್ಲಿ ಶ್ರಾದ್ಧ ಮಾಡಿದರೆ ಬಹಳ ಫಲ.

ಇಲ್ಲಿ ಮಹಾಲಯವೂ ಯುಗಾದಿಯೂ ಎರಡೂ ಪ್ರಾಪ್ತವಾದರೆ, ಮಘಾ ತ್ರಯೋದಶಿ, ಮಹಾಲಯ, ಯುಗಾದಿ, ಈ ಶ್ರಾದ್ಧಗಳನ್ನು ತಂತ್ರದಿಂದ ಮಾಡುತ್ತೇನೆಂದು ಸಂಕಲ್ಪಮಾಡಿ ಮೂರನ್ನೂ ತಂತ್ರದಿಂದ ಮಾಡಬೇಕು. ದರ್ಶದಿಂದ ನಿತ್ಯ ಶ್ರಾದ್ಧದಾತೆಯೋ ಮತ್ತೊಂದು ಶ್ರಾದ್ಧದ ಪ್ರಸಂಗ ಸಿದ್ಧಿಯುಂಟಾಗಲಾರದು. (ಮತ್ತೊಂದು ಶ್ರಾದ್ಧವು ಕೃತವಾಗುವುದಿಲ್ಲ) ಅಂಗಗಳಿಗೆ ಐಕ್ಯವೂ, ಪ್ರಧಾನವು ಮಾತ್ರ ಭಿನ್ನವೂ ಆಗುವುದೇ ತಂತ್ರವೆನ್ನುವುದು. ಆದ್ದರಿಂದ ವಿಶ್ವೇ ದೇವತೆಗಳು, ಪಾಕ (ಅಡಿಗೆ) ಮೊದಲಾದ ಅಂಗಗಳಿಗೆ ಐಕ್ಯವೂ, ಬ್ರಾಹ್ಮಣ, ಅರ್ಘ್ಯ, ಪಿಂಡ ಮೊದಲಾದ ಪ್ರಧಾನಗಳಿಗೆ ಭೇದವೂ (ಬೇರೆಬೇರೆ) ಇರಬೇಕು. ಪ್ರಸಂಗ ಸಿದ್ಧಿಯುಂಟಾಗುವ ಸ್ಥಳಗಳಲ್ಲಿ ಪ್ರಧಾನಗಳಿಗೂ ಭೇದವಾಗಬೇಕಾದದ್ದಿಲ್ಲವೆಂದು ತೋರುವುದು. ತ್ರಯೋದಶೀ ಶ್ರಾದ್ಧವು ಅಪರಪಕ್ಷದಲ್ಲಾಗುವುದರಿಂದ ಧೂರಿಲೋಚನರೆಂಬ ವಿಶ್ವೇ ದೇವತೆಗಳಿರಬೇಕೆಂದು ಶ್ರಾದ್ಧಸಾಗರದಲ್ಲಿ ಹೇಳಿದೆ. ವಿಭಕ್ತರಾಗದಿರುವ ಸಹೋದರರೂ ಕೂಡ ಮಘಾ ತ್ರಯೋದಶೀ ಶ್ರಾದ್ಧವನ್ನು ಬೇರೆಬೇರೆಯಾಗಿ ಮಾಡಬೇಕೆಂದು ಸಿಂಧು, ಕೌಸ್ತುಭಾದಿ ಗ್ರಂಥಗಳಲ್ಲಿ ಹೇಳಿದೆ. ವಿಭಕ್ತರಾದವರಾದರೂ ಕೂಡ ಒಟ್ಟಿಗೆ ಮಾಡಬೇಕೆಂದು ಶ್ರಾದ್ಧಸಾಗರದಲ್ಲಿದೆ.

## — ಚತುರ್ದಶಿಯಲ್ಲಿ ಶಸ್ತ್ರಾದಿಗಳಿಂದ ಹತರಾದವರಿಗೆ ಶ್ರಾದ್ಧವು. —

ಚತುರ್ದಶಿಯಲ್ಲಿ ಶಸ್ತ್ರಾದಿಗಳಿಂದ ಹತರಾದವರ ಶ್ರಾದ್ಧವು:- ಈ ಚತುರ್ದಶಿಯಲ್ಲಿ, ಪಿತೃವೊದಲಾದ ಮೂವ್ವರಲ್ಲಿ ಯಾರಾದರೂ ಆಯುಧ, ವಿಷ, ಅಗ್ನಿ, ಜಲ ಮೊದಲಾದವುಗಳಿಂದಾಗಲಿ, (ಮರವನ್ನು ಹತ್ತಿ ಬೀಳುವುದು, ಸಿಡಿಲು ಬಡಿವುದು) ಶೃಙ್ಗಿ (ಕೊಂಬುಳ್ಳ ಎತ್ತು ಮೊದಲಾ

ದದ್ದು, ವ್ಯಾಘ್ರ (ಹುಲಿ) ಸರ್ಪ ಮೊದಲಾದ ಕಾರಣಗಳಿಂದಾಗಲಿ, ದುರ್ಮರಣವನ್ನು ಹೊಂದಿಸತ್ತಿದ್ದರೆ, ಅಂಥವನಿಗೆ ಏಕೋದ್ದಿಷ್ಟ ವಿಧಾನದಿಂದ ಶ್ರಾದ್ಧವಮಾಡಬೇಕು. ಪಿತ್ರಾದಿಗಳಲ್ಲಾರಾದರೂ ಇಬ್ಬರು ದುರ್ಮರಣದಿಂದ ಮೃತರಾಗಿದ್ದರೆ ಎರಡು ಏಕೋದ್ದಿಷ್ಟಗಳನ್ನು ಮಾಡಬೇಕು. ಮೂರು ಜನವೂ ಶಸ್ತ್ರಾದಿಗಳಿಂದ ಹತರಾಗಿದ್ದರೆ ಪಾರ್ವಣ ವಿಧಾನದಿಂದಲೇ ಮಾಡಬೇಕು. ಕೆಲವರು-ಮೂರು ಏಕೋದ್ದಿಷ್ಟಗಳನ್ನು ಮಾಡಬೇಕೆಂದು ಹೇಳುತ್ತಾರೆ. ಸಹಗಮನದಲ್ಲಿ ಅಗ್ನಿಯಿಂದ ಸತ್ತವರಿಗೂ, ಪ್ರಯಾಗಾದಿ ಕ್ಷೇತ್ರದಲ್ಲಿ ನೀರಿನಿಂದ ಸತ್ತವರಿಗೂ ಈ ಶ್ರಾದ್ಧವನ್ನು ಮಾಡಕೂಡದು, ಯುದ್ಧ ಅಥವಾ ಪ್ರಾಯೋಪವೇಶದಿಂದ ಸತ್ತವರು ಯುಕ್ತವಾಗಿ ಸತ್ತವರಾದಾಗ್ಯೂ, ಅವುಗಳನ್ನು ದುರ್ಮರಣದಂತೆಯೇ ಈ ಶ್ರಾದ್ಧವನ್ನು ಮಾಡಬೇಕು. ಶಸ್ತ್ರಾದಿಗಳಿಂದ ಮೃತರಾದ ಚಿಕ್ಕಪ್ಪ, ದೊಡ್ಡಪ್ಪ, ಅಣ್ಣ, ತಮ್ಮ, ಇವರ ಮಕ್ಕಳಿಗೂ ಸಹ ಏಕೋದ್ದಿಷ್ಟವನ್ನು ಮಾಡಬೇಕು. (ಶಸ್ತ್ರ ಮೊದಲಾದವುಗಳಿಂದ ಮೃತರಾದ ಸ್ತ್ರೀಯರಿಗೂ ಸಹ ಏಕೋದ್ದಿಷ್ಟವನ್ನು ಮಾಡಬೇಕು. ಪಾರ್ವಣವನ್ನು ಮಾಡಕೂಡದೆಂದು ಶ್ರೀ ದತ್ತೋಪಾಧ್ಯಾಯನು ಹೇಳಿರುವನೆಂದು ನಿರ್ಣಯ ಸಿಂಧುವಿನಲ್ಲಿದೆ) ಈ ಶ್ರಾದ್ಧವನ್ನು ಧೂರಿಲೋಚನರೆಂಬ ವಿಶ್ವೇದೇವತೆಗಳೊಡನೆ ಮಾಡತಕ್ಕದ್ದು, ಇಲ್ಲಿ-ಸಂಬಂಧ, ಗೋತ್ರ, ಹೆಸರು, ಇವುಗಳನ್ನುಚ್ಚರಿಸಿ, ಇಂಥ ಕಾರಣದಿಂದ ಸತ್ತವನಿಗೆ ಚತುರ್ದಶೀ ನಿಮಿತ್ತವಾಗಿ, ಸದೈವವಾಗಿ, ಸಪಿಂಡವಾಗಿ, ಏಕೋದ್ದಿಷ್ಟ ವಿಧಾನದಿಂದ ಶ್ರಾದ್ಧ ಮಾಡುತ್ತೇನೆಂದು ಸಂಕಲ್ಪಮಾಡಿ. ಪ್ರತಿ ಒಂದು ಏಕೋದ್ದಿಷ್ಟವನ್ನೂ ಒಂದು ಅರ್ಘ್ಯ, ಒಂದು ಪವಿತ್ರ, ಒಂದು ಪಿಣ್ಡದಿಂದ ಮಾಡಬೇಕು. ತಂದೆ ಮೊದಲಾದವರು ಮತ್ತು ಭ್ರಾತೃ ಮೊದಲಾದವರು ದುರ್ಮರಣದಿಂದ ಸತ್ತಿದ್ದರೆ, ಬೇರೆಬೇರೆ ಅಡಿಗೆಗಳಿಂದ ಮಹಾಲಯದಂತೆ ಸಮಾನತಂತ್ರದಿಂದಾಗಲಿ, ಏಕೋದ್ದಿಷ್ಟ ದ್ವಯಾದಿಗಳನ್ನು ಮಾಡಬೇಕು. ಹೀಗೆ ಚತುರ್ದಶಿಯಲ್ಲಿ ಏಕೋದ್ದಿಷ್ಟವನ್ನು ಮಾಡಿ, ಪಿತೃ ಮೊದಲಾದ ಸರ್ವ ಪಿತೃಗಣವನ್ನುದ್ದೇಶಿಸಿ ಬೇರೊಂದು ತಿಥಿಯಲ್ಲಿ ಅವಶ್ಯಕವಾಗಿ ಮಹಾಲಯವನ್ನೂ ಮಾಡಬೇಕು. ಈ ಚತುರ್ದಶಿಯಲ್ಲಿ ಶಸ್ತ್ರಾದಿಗಳಿಂದ

ಮೃತರಾದ ಮಾತಾಪಿತೃಗಳ ಮೃತದಿನವಾಗುವ ಪಕ್ಷದಲ್ಲಿ ಚತುರ್ದಶೀ ನಿಮಿತ್ತವಾದ ಏಕೋದ್ದಿಷ್ಟವನ್ನುಮಾಡಿ, ಪುನಃ ಆಗಲೇ ಮೃತರಾದವರೇ ಮೊದಲ್ಗೊಂಡು ಮೂರು ಜನಗಳನ್ನು ಉದ್ದೇಶಿಸಿ ಸಾಂವತ್ಸರಿಕ ಶ್ರಾದ್ಧವನ್ನು ಪಾರ್ವಣ ವಿಧಿಯಿಂದ ಮಾಡಬೇಕೆಂದು ಶ್ರಾದ್ಧಸಾಗರದಲ್ಲಿದೆ. ಸಾಂವತ್ಸರಿಕ ಶ್ರಾದ್ಧದಿಂದಲೇ ಚತುರ್ದಶೀ ನಿಮಿತ್ತವಾದ ಶ್ರಾದ್ಧವು ಕೃತವಾಗುವುದು. ಬೇರೆಯಾಗಿ ಮಾಡಬೇಕಾದ್ದಿಲ್ಲವೆಂದು ಕೌಸ್ತುಭಾದಿ ಗ್ರಂಥಗಳಲ್ಲಿ ಹೇಳದೆ. ಬೇರೆ ದಿನದಲ್ಲಿ ಸಕೃನ್ಮಹಾಲಯವನ್ನು ಮಾಡಬೇಕು. ಇಲ್ಲಿ ಚತುರ್ದಶೀ ಶ್ರಾದ್ಧಕ್ಕೆ ಕಾರಣಾಂತರದಿಂದ ವಿಘ್ನವುಂಟಾದರೆ ಈ ಪಕ್ಷದಿಂದಾಗಲಿ, ಮೊದಲ ಪಕ್ಷದಂತಾಗಲಿ ಬೇರೊಂದು ದಿನದಲ್ಲಿ ಪಾರ್ವಣ ವಿಧಿಯಿಂದಲೇ ಮಾಡಬೇಕು. ಏಕೋದ್ದಿಷ್ಟವನ್ನು ಮಾಡಕೂಡದು. ಈ ಏಕೋದ್ದಿಷ್ಟದಲ್ಲಿ ಅಪರಾಹ್ಣವ್ಯಾಪ್ತಿಯುಳ್ಳ ಚತುರ್ದಶಿಯನ್ನೇ ಗ್ರಹಿಸಬೇಕು, ಇತರ ಏಕೋದ್ದಿಷ್ಟ ಶ್ರಾದ್ಧಗಳಂತೆ ಮಧ್ಯಾಹ್ನ ವ್ಯಾಪ್ತಿಯುಳ್ಳದ್ದನ್ನು ಗ್ರಹಿಸಕೂಡದೆಂದು ಕೌಸ್ತುಭಮತವು. ಸೂರ್ಯನು ಹಸ್ತ ನಕ್ಷತ್ರದಲ್ಲಿರುವಾಗ ಅಮಾವಾಸ್ಯೆಯಲ್ಲಿ ಹಸ್ತ ನಕ್ಷತ್ರವು ಬಂದರೆ,ಗಜಚ್ಛಾಯವೆಂಬ ಸಂಜ್ಞೆಯುಂಟು. ಆದಿನದಲ್ಲಿಶ್ರಾದ್ಧ, ದಾನ, ಮೊದಲಾದವುಗಳನ್ನು ಮಾಡಬೇಕು. ಇಂತು ಅಮಾವಾಸ್ಯೆಯಲ್ಲಿ ಗಜಚ್ಛಾಯೆಯು.

## —ದೌಹಿತ್ರ ಶ್ರಾದ್ಧವು.—

ದೌಹಿತ್ರ ಶ್ರಾದ್ಧವು:-ದೌಹಿತ್ರನು (ಮಗಳ ಮಗನು) ಅನುಪನೀತನಾಗಿದ್ದಾಗ್ಯೂ, ತನ್ನ ಸೋದರಮಾವನು ಬದುಕಿದ್ದರೂ ಕೂಡ, ಆಶ್ವಯುಜ ಶುದ್ಧ ಪ್ರತಿಪತ್ತಿನಲ್ಲಿ ಸಪತ್ನೀಕನಾದ ಮಾತಾಮಹನ (ತಾಯಿಯತಂದೆ) ಪಾರ್ವಣವನ್ನು ಮಾಡಬೇಕು. ಮಾತಾಮಹಿಯು (ತಾಯಿಯತಾಯಿ) ಬದುಕಿದ್ದರೆ ಮಾತಾಮಹ ಪಾರ್ವಣ ವೊಂದನ್ನೇ ಮಾಡಬೇಕು. ಈ ಶ್ರಾದ್ಧವನ್ನು ಜೀವತ್ಪಿತೃಕನೇ ಮಾಡಬೇಕು. ಸಪಿಂಡಕವಾಗಿಯಾದರೂ ಅಪಿಂಡಕವಾಗಿಯಾದರೂ ಮಾಡಬಹುದು. ಇಲ್ಲಿ ಪುರೂರವಾರ್ದ್ರವ ಸಂಜ್ಞಕ ವಿಶ್ವೇ ದೇವತೆಗಳನ್ನು ಹೇಳಬೇಕು.

ಧೂರಿಲೋಚನರೆಂದು ಕೆಲವರು. ಈ ಪ್ರತಿಪತ್ತು ಅಪರಾಹ್ಣ ವ್ಯಾಪ್ತಿಯುಳ್ಳದ್ದಾಗಿರಬೇಕೆಂದು ಬಹು ಜನರ ಮತವು. ಸಂಗವ ವ್ಯಾಪ್ತಿಯುಳ್ಳದ್ದಾಗಿರಬೇಕೆಂದು ಕೆಲವರು. ಈ ಶ್ರಾದ್ಧಕ್ಕೂ ವೃಶ್ಚಿಕ ಸಂಕ್ರಮಣದವರೆಗೂ ಗೌಣಕಾಲವುಂಟೆಂದು ಕಾಲತತ್ವ ವಿವೇಚನೆಯಲ್ಲಿ ಹೇಳಿದೆ. ಇಂತು ಮಹಾಲಯ ನಿರ್ಣಯೋದ್ದೇಶವು.

— (೮) ಕಪಿಲಾ ಷಷ್ಠೀ ನಿರ್ಣಯವು. —

(೮) ಕಪಿಲಾಷಷ್ಠೀ ನಿರ್ಣಯವು:-ಭಾದ್ರಪದ ಕೃಷ್ಣಪಕ್ಷದಲ್ಲಿ ಮಂಗಳವಾರ, ವ್ಯತೀಪಾತ ಯೋಗ, ರೋಹಿಣೀನಕ್ಷತ್ರಗಳಿಂದ ಕೂಡಿದ ಷಷ್ಠಿಗೆ ಕಪಿಲಾಷಷ್ಠಿ ಎಂಬಹೆಸರು. ಇದರಲ್ಲಿ ಸೂರ್ಯನು ಹಸ್ತ ನಕ್ಷತ್ರದಲ್ಲಿದ್ದರೆ ಫಲಾದಿಕ್ಯವುಂಟು. ಸೂರ್ಯ ನಿಮಿತ್ತವಾದ ಯೋಗವಾದ್ದರಿಂದ ಈ ಯೋಗವು ಹಗಲಿನಲ್ಲಾದರೆ ಗ್ರಹಿಸಬೇಕಲ್ಲದೆ ರಾತ್ರಿಯಲ್ಲೆಣಿಸಕೂಡದು ಎಂದು ತೋರುವುದು. 'ಅಸ್ಯಾಂ ಹುತಾಂಚ ದತ್ತಂ ಚ ಸರ್ವಂ ಕೋಟಿ ಗುಣಂ ಭವೇತ್' ಈ ಯೋಗದಲ್ಲಿ ಹವನಮಾಡಿದ ದಾನಮಾಡಿದ, ಎಲ್ಲವೂ ಕೋಟಿ ಭಾಗ ಫಲವನ್ನುಂಟು ಮಾಡುವುದು ಎಂದು ಹೇಳಿರುವುದು. ಇಲ್ಲಿ ಶ್ರಾದ್ಧಮಾಡಬೇಕೆಂಬ ವಿಷಯದಲ್ಲಿ ವಿಶೇಷವಾಗಿ ವಚನಗಳು ದೊರೆಯುವುದಿಲ್ಲ. ಆದರೂ ಈಯೋಗವು ದುರ್ಲಭವಾದ್ದರಿಂದ ಶ್ರಾದ್ಧ ವಿಧಿಯಿಂದ ದರ್ಶದಹಾಗೆ ಷಡ್ದೈವತ್ಯ ಶ್ರಾದ್ಧವನ್ನು ಮಾಡಬೇಕು. ಇಲ್ಲಿ ಮಾಡಬೇಕಾದ ವ್ರತದ ವಿಧಿಯನ್ನು ಸಂಕ್ಷೇಪವಾಗಿ ಹೇಳುತ್ತಾನೆ.

—ವ್ರತವಿಧಿಯು.—

ವ್ರತವಿಧಿಯು-ಸೂರ್ಯೋದ್ದೇಶದಿಂದ ಉಪವಾಸಮಾಡಿ, ದೇವದಾರು. ಲಾಮಂಚ, ಕುಂಕುಮ,ಏಲಕ್ಕಿ, ಮಣಿಶಿಲೆ, ತಾವರೆಯ ಕಡ್ಡಿ, ಅಕ್ಕಿ, ಇವುಗಳನ್ನು ಜೇನು ತುಪ್ಪ, ಗವ್ಯ, (ಹಸುವಿನ ತುಪ್ಪ) ಇವುಗಳಲ್ಲಿ ಅರೆದು, ಹಾಲಿನಲ್ಲಿ ಕದಡಿ, ಆಕಲ್ಕವನ್ನು ಮೈಗೆಸವರಿಕೊಂಡು ಸ್ನಾನಮಾಡಬೇಕು. ಅದಕ್ಕೆ ಮಂತ್ರವು-"ಆಪಸ್ತ್ವಮಸಿ ದೇವೇಶ ಜ್ಯೋತಿಷಾಂ ಪತಿರೇವಚ। ಪಾಪಂ ನಾಶಯ ಮೇ ದೇವ ವಾಙ್ಮನಃ ಕಾಯಕರ್ಮ

ಜಂ॥೧॥'' ಎಲೈ ಉದಕವೇ! ನೀನು ದೇವೋತ್ತಮನಾಗಿಯೂ (ಶ್ರು-ಆ ಪೋವೈ ಸರ್ವಾ ದೇವತಾಃ) ತೇಜೋಮಯನಾಗಿಯೂ ಇದ್ದೀಯೆ, ವಾಕ್ಕು, ಮನಸ್ಸು, ಕಾಯ, ವೆಂಬ ಕರಣ ತ್ರಯಗಳಿಂದ ಮಾಡಿದನನ್ನ ಪಾಪ ಕರ್ಮಗಳೆಲ್ಲವನ್ನೂ ನಾಶಮಾಡು ॥ ೨ ॥ ಅನಂತರದಲ್ಲಿ- ಪಂಚಗವ್ಯದಲ್ಲಿ ಸ್ನಾನಮಾಡಿ ಪಂಚಪಲ್ಲವಗಳಿಂದ ಮಾರ್ಜನೆ (ಪ್ರೋಕ್ಷಣೆ) ಮಾಡಿಕೊಳ್ಳಬೇಕು. ಆ ಮೇಲೆ ಮೃತ್ತಿಕಾ ಸ್ನಾನವನ್ನು ಮಾಡಬೇಕು. ತರ್ಪಣ ಮೊದಲಾದ ನಿತ್ಯಕರ್ಮಗಳನ್ನು ಮಾಡಿಕೊಂಡು, ವರುಣ ಪೂಜೆಯನ್ನು ಮಾಡಿ, ಸರ್ವತೋ ಭದ್ರ ಮಂಡಲದಲ್ಲಿ ಕಲಶವನ್ನಿಟ್ಟು, ಅದರಲ್ಲಿ ಅಕ್ಕಿ ಮೊದಲಾದವುಗಳನ್ನು ತುಂಬಿ, ಅದರಲ್ಲಿ ಎಂಟುದಳದ ಪದ್ಮವನ್ನು ಬರೆದು, ಅದರ ದಳಗಳಲ್ಲಿ ಪೂರ್ವವನ್ನು ಮೊದಲು ಮಾಡಿಕೊಂಡು ಕ್ರಮವಾಗಿ ಸೂರ್ಯ, ತಪನ, ಸ್ವರ್ಣರೇತ, ರವಿ, ಆದಿತ್ಯ, ದಿವಾಕರ, ಪ್ರಭಾಕರ, ಮಿತ್ರ, ಇವರನ್ನು ಆವಾಹನೆಮಾಡಿ ಮಧ್ಯದಲ್ಲಿ ಸುವರ್ಣರಥದಲ್ಲಿ ಸೂರ್ಯನನ್ನೂ, ಅವನ ಮುಂಭಾಗದಲ್ಲಿ ಅರುಣನನ್ನೂ ಆವಾಹನೆಮಾಡಿ, ಕಣಿಗಿಲು,ಎಕ್ಕ, ಈ ಹೂಗಳಿಂದಲೂ, ಧೂಪದೀಪಗಳಿಂದಲೂ ಪೂಜಿಸಬೇಕು. ದಿಕ್ಪಾಲರೇ ಮೊದಲಾದ ದೇವತೆಗಳನ್ನು ಪೂಜಿಸಿ, ಸೂರ್ಯನಿಗೆ ಹನ್ನೆರಡು ಅರ್ಘ್ಯಗಳನ್ನು ಕೊಡಬೇಕು. ವಿಸ್ತಾರವಾದ ಪೂಜಾವಿಧಿಯೂ, ದ್ವಾದಶಾರ್ಘ್ಯ ಮಂತ್ರವೂ ಕೌಸ್ತುಭದಲ್ಲಿ ಹೇಳಿದೆ. ಸೂರ್ಯನೆದುರಿಗೆ'ಪ್ರಭಾಕರ ನಮಸ್ತುಭ್ಯಂ ಸಂಸಾರಾನ್ಮಾಂ ಸಮುದ್ಧರ। ಭುಕ್ತಿಮುಕ್ತಿ ಪ್ರದೋಯಸ್ಮಾ ತ್ತಸ್ಮಾ ಚ್ಛಾಂತಿಂ ಪ್ರಯಚ್ಛಮೇ ॥೧॥ ನಮೋನಮಸ್ತೇ ವರದ ಋಕ್ಸಾಮ ಯಜುಷಾಂಪತೇ। ನಮೋಸ್ತು ವಿಶ್ವರೂಪಾಯ ವಿಶ್ವಧಾತ್ರೇ ನಮೋಸ್ತುತೇ॥೨॥'ಎಲೈ ಸೂರ್ಯನೇ! ನಿನಗೆ ವಂದಿಸುವೆನು. ಸಂಸಾರ ಬಂಧದಿಂದ ನನ್ನನ್ನು ಬಿಡಿಸಿ ಉದ್ಧಾರಮಾಡು. ನೀನು ಭುಕ್ತಿಮುಕ್ತಿಗಳನ್ನು ಕೊಡುವ ಸಮರ್ಥನಾದ್ದರಿಂದ ನನ್ನ ಪರಿತಾಪಗಳನ್ನು ಪರಿಹರಿಸಿ ಶಾಂತಿಯನ್ನುಂಟು ಮಾಡು ॥೧॥ ಋಗ್ಯಜುಸ್ಸಾಮವೇದಗಳಿಗೆ ಅಧಿಪತಿಯಾಗಿಯೂ, ಜಗದ್ರಕ್ಷಕನಾಗಿಯೂ, ಜಗದ್ರೂಪನಾಗಿಯೂ, ವರಪ್ರದನಾಗಿಯೂ ಇರುವ ಸೂರ್ಯನೇ! ನಿನಗೆ ನಮಸ್ಕಾರವು ॥೨॥ ಎಂದು ಪ್ರಾರ್ಥಿಸಿ, ಉದುತ್ಯಂ, ಮೊದಲಾದ ಸೂರ್ಯಸೂಕ್ತಗ

ಳನ್ನು ಜಪಿಸಿ, ರಾತ್ರಿ ಜಾಗರಣೆಮಾಡಿ, ಬೆಳಗಾದಮೇಲೆ 'ಆಕೃಷ್ಣೇನ'ಎಂಬ ಮಂತ್ರದಿಂದಅರ್ಕಸಮಿತ್ತು, ಚರು, ಆಜ್ಯ,ತಿಲ, ಇವುಗಳನ್ನು ಪ್ರತ್ಯೇಕಪ್ರತ್ಯೇಕವಾಗಿ ೧೦೮ ಸಾರಿ ಹೋಮಮಾಡಿ, ಗಂಟೆ ಮೊದಲಾದವುಗಳಿಂದಲಂಕೃತವಾದ ಕಪಿಲವರ್ಣದ ಗೋವನ್ನು ಸಮಂತ್ರಕವಾಗಿ ಪೂಜಿಸಿ ಬ್ರಾಹ್ಮಣನಿಗೆ ದಾನಮಾಡಬೇಕು, ಗೋ ಪೂಜಾ ಮಂತ್ರವು ಕೌಸ್ತುಭದಲ್ಲಿದೆ. 'ನಮಸ್ತೇ ಕಪಿಲೇದೇವಿ ಸರ್ವಪಾಪ ಪ್ರಣಾಶಿನಿ। ಸಂಸಾರಾರ್ಣವ ಮಗ್ನಂ ಮಾಂ ಗೋಮಾತ ಸ್ತ್ರಾತು ಮರ್ಹಸಿ॥ ೧ ॥' ಸಮಸ್ತಪಾಪಗಳನ್ನು ಪರಿಹರಿಸುವ ಎಲೌ ಕಪಿಲಿಯೇ! ಗೋಮಾತೃವೇ! ಸಂಸಾರಸಮುದ್ರದಲ್ಲಿ ಮುಳುಗಿರುವ ನನ್ನನ್ನು ಕಾಪಾಡು ॥೧॥ ಎಂಬುದೇ ದಾನಕ್ಕೆ ಮಂತ್ರವು. 'ವಸ್ತ್ರಯುಗ್ಮದಿಂದ ಹೊದಿಸಿರುವ, 'ಗಂಟೆಯಿಂದಲಂಕೃತವಾದ' ಮೊದಲಾದ ವಿಶೇಷಣಗಳನ್ನು ಹೇಳಿ, ಈ ಹಸುವನ್ನು ನಿನಗೆ ನಾನು ದಾನ ಮಾಡಿದ್ದೇನೆ ಎಂದು ಹೇಳಿ, ದಾನ ಕೊಟ್ಟು,ಸುವರ್ಣ ದಕ್ಷಿಣೆಯನ್ನು ಕೊಡಬೇಕು. ಅನಂತರದಲ್ಲಿ ಆ ಬ್ರಾಹ್ಮಣನಿಗೆ ರಥವನ್ನೂ, ಸೂರ್ಯ ಪ್ರತಿಮೆಯನ್ನೂ ದಾನಮಾಡಬೇಕು. 'ದಿವ್ಯ ಮೂರ್ತಿರ್ಜಗ ಚ್ಚಕ್ಷು ರ್ದ್ವಾದಶಾತ್ಮಾ ದಿವಾಕರಃ। ಕಪಿಲಾಸಹಿತೋ ದೇವೋ ಮಮ ಮುಕ್ತಿಂ ಪ್ರಯಚ್ಛತು ॥೧॥ ಯಥಾತ್ವಂ ಕಪಿಲೇಪುಣ್ಯಾ ಸರ್ವಲೋಕಸ್ಯ ಪಾವನೀ। ಪ್ರದತ್ತಾ ಸಹಸೂರ್ಯೇಣ ಮಮಮುಕ್ತಿಪ್ರದಾಭವ ॥೨॥' ದಿವ್ಯವಾದ ದೇಹವುಳ್ಳವನಾಗಿಯೂ, ಲೋಕಕ್ಕೆ ನೇತ್ರಸ್ವರೂಪನಾಗಿಯೂ, ಮಿತ್ರಾದಿ ದ್ವಾದಶರೂಪನಾಗಿಯೂ, ಕಪಿಲಾಸಹಿತನಾಗಿಯೂ ಇರುವ ಸೂರ್ಯನು ನನಗೆ ಮೋಕ್ಷವನ್ನು ಕೊಡಲಿ ॥೧॥ ಎಲೌ ಸಕಲಲೋಕ ಪಾವನಳಾಗಿಯೂ, ಪುಣ್ಯಾತ್ಮಳಾಗಿಯೂ ಇರುವ ಕಪಿಲಿಯೇ ! ಸೂರ್ಯನೊಡನೆ ನಿನ್ನನ್ನು ನಾನು ದಾನಮಾಡಿರುವೆನಾದ್ದರಿಂದ ನನಗೆ ಮುಕ್ತಿಯನ್ನು ಕೊಡುವವಳಾಗು ॥೨॥ ಎಂಬುವುದೇ ದಾನಮಂತ್ರವು. ಅನಂತರ ಕಪಿಲಾ ಪ್ರಾರ್ಥನೆ ಮೊದಲಾದ ವಿಸ್ತಾರವನ್ನು ಕೌಸ್ತುಭದಿಂದ ತಿಳಿಯತಕ್ಕದ್ದು. ಹಾಗಲ್ಲದಿದ್ದರೆ-ಉಪೋಷಣ, ಜಾಗರಣ, ಹೋಮಾದಿ ವಿಧಿಗಳನ್ನು ಬಿಟ್ಟು, ಷಷ್ಠಿಯಲ್ಲಿಯೇ ಸ್ನಾನ, ರಥಾದಿಪೂಜಾ, ಕಪಿಲಾದಿ ದಾನಗಳನ್ನು ಮಾಡತಕ್ಕದ್ದು, ಇಂತು ಸಂಕ್ಷೇ

ಪದಿಂದ ಕಪಿಲಾಷಷ್ಠೀ ವ್ರತವಿಧಿಯು. ಭಾದ್ರಪದ ಮಾಸ ಕೃತ್ಯನಿರ್ಣಯೋದ್ದೇಶವು.

## —(೯) ಆಶ್ವಿನ ಮಾಸವು —

(೯) ಆಶ್ವಯುಜಮಾಸವು-ತುಲಾಮೇಷ ಸಂಕ್ರಾಂತಿಗಳು ವಿಷುವಸಂಜ್ಞೆಯುಳ್ಳವು. ವಿಷುವ ಸಂಕ್ರಮಣದ ಹಿಂದಣ, ಮತ್ತು ಮುಂದಣ ಹದಿನೈದುಗಳಿಗೆಗಳು ಪುಣ್ಯಕಾಲವು. ವಿಶೇಷವನ್ನು ಮೊದಲೇ ಹೇಳಿದೆ. ಆಶ್ವಿನ ಶುಕ್ಲ ಪ್ರತಿಪತ್ತಿನಲ್ಲಿ ದೇವೀ ನವರಾತ್ರಿಯು ಪ್ರಾರಂಭವಾಗುವುದು, ನವರಾತ್ರವೆಂದರೆ ಆಶ್ವಯುಜ ಶುದ್ಧ ಪ್ರತಿಪತ್ತನ್ನು ಮೊದಲು ಮಾಡಿಕೊಂಡು ನವಮೀವರಿಗೆ ಮಾಡಬೇಕಾದ ಕರ್ಮವೆಂದರ್ಥವು. ಇದರಲ್ಲಿ ಪೂಜೆಯೇ ಮುಖ್ಯವಾದ ಕರ್ಮವು. ಉಪವಾಸವೂ, ಸ್ತೋತ್ರಜಪವೂ ಅಂಗಭೂತವಾಗಿವೆ ಅಂದರೆ-ತಮ್ಮತಮ್ಮಕುಲಸಂಪ್ರದಾಯಾನುಸಾರವಾಗಿ ಉಪವಾಸ, ಏಕಭಕ್ತ, ನಕ್ತ, ಅಯಾಚಿತ, ಮೊದಲಾದ ಯಾವುದಾದರೊಂದು ವ್ರತವನ್ನು, ಸಪ್ತಶತಿ,ಲಕ್ಷ್ಮೀಹೃದಯ ಮೊದಲಾದ ಸ್ತೋತ್ರ ಪಾರಾಯಣವನ್ನೂ ಮಾಡುತ್ತಾ ಪ್ರತಿಪತ್ತು ಮೊದಲ್ಗೊಂಡು ನವಮೀ ಪರ್ಯಂತವಾಗಿ ಪ್ರತಿನಿತ್ಯವೂ ದೇವತಾಪೂಜೆಯನ್ನು ಮಾಡುವುದೇ ನವರಾತ್ರ ಶಬ್ದಾರ್ಥವು ಪೂಜೆಯನ್ನೇ ಪ್ರಧಾನವನ್ನಾಗಿಟ್ಟುಕೊಂಡು ಕೆಲವು ಮನೆಗಳಲ್ಲಿ, ಜಪ, ಉಪವಾಸಾದಿ ನಿಯಮಗಳನ್ನಾಚರಿಸುವುದಿಲ್ಲ. ಯಾವ ಕುಲದಲ್ಲಿಯೂ ನವರಾತ್ರ ಪ್ರಯುಕ್ತವಾದ ಪೂಜೆಯನ್ನು ಮಾಡದೆ ಬಿಡುವುದಿಲ್ಲವು,
ಯಾರು ನವರಾತ್ರವನ್ನೇ ಮಾಡುವ ಸಂಪ್ರದಾಯ ವಿಲ್ಲದವರೋ, ಅಂಥವರ ಮನೆಯಲ್ಲಿ ಮಾತ್ರವೇ ಪೂಜೆಯು ಲೋಪವಾದರೂ ಆಗಬಹುದಾಗಿದೆ.

## —ನವರಾತ್ರಾರಂಭವು.—

ನವರಾತ್ರಾರಂಭವು- ಈ ನವರಾತ್ರವನ್ನು ಸೂರ್ಯೋದಯಾನಂತರದಲ್ಲಿ ಮೂರು ಮುಹೂರ್ತಕಾಲದ ವ್ಯಾಪ್ತಿಯುಳ್ಳ ಪ್ರತಿಪತ್ತಿನಲ್ಲಿ ಪ್ರಾರಂಭಿಸಬೇಕು. ಅದಿಲ್ಲದಿದ್ದರೆ ಎರಡು ಮುಹೂರ್ತ ವ್ಯಾಪ್ತಿಯುಳ್ಳದ್ದ

ನ್ನಾದರೂ ಗ್ರಹಿಸಬೇಕು. ಒಂದು ಮುಹೂರ್ತ ವ್ಯಾಪ್ತಿಯುಳ್ಳದ್ದನ್ನೂ ಗ್ರಹಿಸಬಹುದೆಂದು ಕೆಲವರು. ಅಮಾವಾಸ್ಯಾ ಯುಕ್ತವಾದ ಪ್ರತಿಪತ್ತನ್ನು ಸರ್ವಥಾ ಗ್ರಹಿಸಕೂಡದೆಂಬುದು ಬಹು ಗ್ರಂಥ ಸಮ್ಮತವಾದ ಸಂಗತಿ. ಮುಹೂರ್ತಕ್ಕಿಂತ ಕಡಿಮೆಯಾದ ವ್ಯಾಪ್ತಿ ಇದ್ದರೂ ಸೂರ್ಯೋದಯ ಕಾಲ ವ್ಯಾಪ್ತಿ ಇಲ್ಲದಿದ್ದರೂ ಸಹ ಅಮಾವಾಸ್ಯಾಯುಕ್ತವಾದದ್ದನ್ನೂ ಗ್ರಹಿಸಬೇಕು. ಯಾವ ಪ್ರಥಮ ದಿನದಲ್ಲಿ ೬೦ ಘಳಿಗೆಗಳವರಿಗೆ ಪ್ರತಿಪತ್ತು ಇದ್ದು ಎರಡನೆಯ ದಿನದಲ್ಲಿ ಎರಡು ಮುಹೂರ್ತ ಮೊದಲಾದ ಕಾಲಪ್ರಮಾಣದಷ್ಟು ಹೆಚ್ಚಾಗಿರುವುದೋ ಆಗ ಪೂರ್ಣತಿಥಿಯಾದ ಪೂರ್ವದಿನದ ಪ್ರತಿಪತ್ತನ್ನೇ ಗ್ರಹಿಸಬೇಕು. (ಮುಹೂರ್ತಕಾಲಕ್ಕಿಂತ ಕಡಿಮೆಯಾದ ವ್ಯಾಪ್ತಿಯುಳ್ಳದ್ದೆಂಬುದೇ ಮೊದಲಾದದ್ದು ಒಂದು ಪಕ್ಷವು. ಪೂರ್ವದಿನದಲ್ಲಿ ೬೦ ಗಳಿಗೆ ಇರುವುದೇ ಮೊದಲಾದದ್ದು ಎರಡನೆಯ ಪಕ್ಷವು) ದ್ವಿತೀಯೆಯ ವೇಧೆಯು ನಿಷೇಧವಾದದ್ದೆಂಬುದೂ ಕೂಡ ಈ ಎರಡು ಪಕ್ಷಗಳಲ್ಲಿಯೇ ಸೇರಿದ್ದು, ಪೂರ್ವದಿನದಲ್ಲಿ ನಾಲ್ಕು ಮುಹೂರ್ತ ಅಥವಾ ಐದು ಮುಹೂರ್ತವು ಕಳೆದಮೇಲೆ ಪ್ರಾರಂಭವಾಗಿ ಎರಡನೆಯ ದಿನದಲ್ಲಿ ಎರಡು ಮುಹೂರ್ತವೇ ಮೊದಲಾದ ಪ್ರಮಾಣದಿಂದ ಇರುವ ಪ್ರತಿಪತ್ತು ಬಂದರೆ ಎರಡನೆಯ ಪ್ರತಿಪತ್ತು ಕ್ಷಯತಿಥಿಯಾದ್ದರಿಂದ ನಿಷಿದ್ಧವಾದಕಾರಣ ಅಮಾವಾಸ್ಯಾ ಯುಕ್ತವಾದದ್ದಾದರೂ ಮೊದಲನೆಯದನ್ನೇ ಗ್ರಹಿಸಬೇಕೆಂದು ಪುರುಷಾರ್ಥ ಚಿಂತಾಮಣಿಯಲ್ಲಿ ಹೇಳಿದೆ. ಆಗ-ಸೂರ್ಯೋದಯವಾದ ಮೇಲೆ ಹತ್ತುಗಳಿಗೆಗಳೊಳಗೆ, ಅಥವಾ ಮಧ್ಯಾಹ್ನದಲ್ಲಿ ಅಭಿಜನ್ಮುಹೂರ್ತದಲ್ಲಿ ಪ್ರಾರಂಭಮಾಡಬೇಕು. ಅಪರಾಹ್ನದಲ್ಲಿ ಪ್ರಾರಂಭಿಸಕೂಡದು. ಅಂತು ಪ್ರತಿಪತ್ತಿನ ಮೊದಲ ೧೬ ಗಳಿಗೆಗಳ ನಿಷೇಧವನ್ನೂ, ಚಿತ್ರಾನಕ್ಷತ್ರ ವೈಧೃತಿಯೋಗ ನಿಷೇಧವನ್ನೂ, ಉಕ್ತವಾದ ಕಾಲವನ್ನು ನಿರೀಕ್ಷಿಸ ಬೇಕಾದ್ದರಿಂದ ಅನುಕೂಲವಾದರೆ, ಅನುಸರಿಸಬಹುದು. ನಿಷೇಧವನ್ನು ಅನುಸರಿಸಿ ಪೂರ್ವಾಹ್ಣದಲ್ಲಿ ಪ್ರಾರಂಭಿಸಕೂಡದು. ಪ್ರತಿಪತ್ತಿಥಿಯನ್ನೂ ಅತಿಕ್ರಮಿಸ ಕೂಡದು. ಈ ಕರ್ಮದಲ್ಲಿ ಬ್ರಾಹ್ಮಣಾದಿ ಚತುರ್ವರ್ಣದವರಿಗೂ ಮ್ಲೇಚ್ಛಾದಿಗಳಿಗೂ ಅಧಿಕಾರವುಂಟು.

—ಪೂಜಾದಿಗಳಲ್ಲಿ ಅಧಿಕಾರವು—

ಪೂಜಾದಿಗಳಿಗೆ ಅಧಿಕಾರಿಗಳು-ಬ್ರಾಹ್ಮಣನು-ಜಪ, ಹೋಮ, ಅನ್ನಬಲಿ, ನೈವೇದ್ಯಗಳಿಂದ ಸಾತ್ವಿಕ ಪೂಜೆಯನ್ನು ಮಾಡತಕ್ಕದು. 'ನೈವೇದ್ಯೈಶ್ಚ ನಿರಾಮಿಷೈಃ । ಮದ್ಯಂದತ್ವಾ ಬ್ರಾಹ್ಮಣಸ್ತು ಬ್ರಾಹ್ಮಣ್ಯಾದೇವಹೀಯತೇ॥ " ಮಾಂಸವಲ್ಲದ ನಿವೇದನವನ್ನು ಬ್ರಾಹ್ಮಣನು ಮಾಡಬೇಕು. ಬ್ರಾಹ್ಮಣನು ಮದ್ಯವನ್ನು ನಿವೇದನ ಮಾಡಿದರೆ ಬ್ರಾಹ್ಮಣ್ಯವೇ ಹೋಗಿ ಜಾತಿಭ್ರಷ್ಟನಾಗುವನು. 'ಮದ್ಯಮಪೇಯಮದೇಯಂ'ಮದ್ಯವನ್ನು ಪಾನಮಾಡಕೂಡದು, ದಾನಮಾಡಲೂ ಕೂಡದು, ಎಂಬುದೇ ಮೊದಲಾದ ನಿಷೇಧಗಳಿಂದ ಮಾಂಸ ಮದ್ಯಾದಿಗಳನ್ನುಪಯೋಗಿಸಿ ಮಾಡಬಹುದಾದ ತಾಮಸ ಪೂಜೆಗಳಲ್ಲಿ ಬ್ರಾಹ್ಮಣನಿಗೆ ಅಧಿಕಾರವಿಲ್ಲ. ಅಲ್ಪವಾದ ಪ್ರಾಯಶ್ಚಿತ್ತದಿಂದ ದೋಷವು ಪರಿಹರವಾಗದೆ ಹೋದರೆ ಪಾತಿತ್ಯ (ದುರ್ಗತಿ) ವುಂಟಾಗುವುದೆಂದು ಭಾವಿಸಿ, ಮದ್ಯಪಾನಕ್ಕೆ ಮರಣಾಂತವಾದ ಪ್ರಾಯಶ್ಚಿತ್ತವನ್ನೂ, ಮದ್ಯವನ್ನು ಮುಟ್ಟಿದರೆ ಆ ಅಂಗವನ್ನು ಕತ್ತರಿಸಿ ಹಾಕಬೇಕೆಂಬುದನ್ನೂ ಹೇಳಿದೆ. ಹೀಗೆಯೇ ಪೂರ್ವಿಕರೂ, ನವೀನರೂ ಎಲ್ಲಾ ಶಾಸ್ತ್ರ ನಿಬಂಧಕಾರರೂ ನಿರ್ಬಂಧದಿಂದ ಬರೆದಿರುತ್ತಾರೆ. ಹೊಸಬನಾದ ಭಾಸ್ಕರರಾಯನೇ ಮೊದಲಾದವರೂ ಸಹ ಸಪ್ತಶತೀ ಟೀಕಾದಿಗಳಲ್ಲಿ ಪೂರ್ವಗ್ರಂಥಗಳನ್ನು ಅನುಸರಿಸಿಯೇ ಪರಿಷ್ಕಾರಮಾಡಿದ್ದಾರೆ. ಸಭೆಗಳಲ್ಲಿ ಈ ಅಭಿಪ್ರಾಯವನ್ನೇ ಪ್ರಶಂಸೆಮಾಡುತ್ತಾರೆ ಆಚರಣೆಯನ್ನ ಮಾತ್ರ ಅನ್ಯಥಾ ಮಾಡುತ್ತಿರುತ್ತಾರೆ. ನಾವೇನೋ ದುರದೃಷ್ಟದಿಂದ ಜಾತಿ ಭ್ರಷ್ಟರಾದೆವು. ಇತರರಾದರೂ ಹೀಗಾಗಬಾರದೆಂಬ ಭೂತದಯೆಯಿಂದಲೋ, ಅಥವಾ ತಮಗುಂಟಾದ ಪಾತಿತ್ಯವನ್ನು ಮುಚ್ಚಿ ಕೊಳ್ಳುವುದಕ್ಕಾಗಿಯೋ, ಇಲ್ಲವೇ ಇತರರಾದ ಕಲಿಯುಗದ ಬ್ರಾಹ್ಮಣರಿಗೆ ಈ ಅಧಿಕಾರವಿಲ್ಲವೆಂಬ ಭಾವನೆಯಿಂದಲೋ ಯಾವಕಾರಣದಿಂದ ಹೀಗೆ ಮಾಡುತ್ತಾರೆಯೋ ಗೊತ್ತಿಲ್ಲ. ಕ್ಷತ್ರಿಯ, ವೈಶ್ಯರು ಮಾಂಸಾದಿಗಳಿಂದಲೂ, ಜಪಹೋಮಾದಿಗಳಿಂದಲೂ ರಾಜಸ ಪೂಜೆಯನ್ನು ಮಾಡಬಹುದು. ಅದು ಕಾಮ್ಯವಲ್ಲದೆ ನಿತ್ಯವಲ್ಲ. ನಿಷ್ಕಾಮಿಗಳಾದ ಕ್ಷತ್ರಿಯಾದಿಗಳು ಸಾತ್ವಿಕ ಪೂಜೆಯನ್ನು

ಮಾಡುವುದರಿಂದ, ಮೋಕ್ಷ ಮೊದಲಾದ ಫಲ ಪ್ರಾಪ್ತಿಯಾಗುವುದು. ಶೂದ್ರಾದಿಗಳಿಗೂ ಹೀಗೆಯೇ. ಶೂದ್ರರು-ಮಂತ್ರವೂ, ಜಪವೂ, ಇಲ್ಲದೆ ಮಾಂಸಾದಿ ದ್ರವ್ಯಗಳೊಡನೆ ತಾಮಸಪೂಜೆಯನ್ನೂ ಮಾಡಬಹುದು. ಸಪ್ತಶತಿಮೊದಲಾದ ಜಪ, ಹೋಮ, ಇವುಗಳಿಂದ ಶೂದ್ರನು ಬ್ರಾಹ್ಮಣನ ಮೂಲಕವಾಗಿ ಸಾತ್ವಿಕ ಪೂಜೆಯನ್ನೂ ಮಾಡಿಸಬಹುದು. ಸ್ತ್ರೀಯರಿಗೂ, ಶೂದ್ರಾದಿಗಳಿಗೂ, ಪೌರಾಣ ಮಂತ್ರಗಳನ್ನೂ ಕೂಡ ಸ್ವತಂತ್ರವಾಗಿ ಹೇಳುವ ಅಧಿಕಾರವಿಲ್ಲ. ಅದರಿಂದಲೇ 'ಶೂದ್ರಸ್ಸುಖ ಮವಾಪ್ನುಯಾತ್' ಎಂಬ ಸ್ಥಳದಲ್ಲಿ ಭಾಷ್ಯವನ್ನು ಬರೆಯುವುದರಲ್ಲಿ ಸ್ತ್ರೀ ಶೂದ್ರರಿಗೆ ಶ್ರವಣಮಾತ್ರದಿಂದಲೇ ಫಲವಲ್ಲದೆ ಪಠನೆಯಿಂದಲ್ಲವೆಂದು ಹೇಳಿದೆ, ಆದಕಾರಣ ಸ್ತ್ರೀಶೂದ್ರರು ಗೀತಾ, ವಿಷ್ಣು ಸಹಸ್ರನಾಮಗಳನ್ನು ಪಠನಮಾಡಿದರೆ ದೋಷವುಂಟಾಗುವುದೆಂದು ತಿಳಿಯಬೇಕು. ಪುರಾಣಮಂತ್ರಗಳಿಂದ ಪೂಜೆಮಾಡುವ ವಿಷಯದಲ್ಲಿ ಸ್ತ್ರೀ ಶೂದ್ರರಿಗೆ ಅಧಿಕಾರವುಂಟೆಂದು ಕೆಲವೆಡೆಗಳಲ್ಲಿ ಹೇಳಿದೆ. ಜಪಹೋಮಾದಿಗಳಿಗೆ ಬ್ರಾಹ್ಮಣರ ಮೂಲಕವೇ ಅಧಿಕಾರವು. ಮ್ಲೇಚ್ಛಾದಿಗಳಿಗಂತು ಜಪ ಹೋಮಾದಿಗಳಲ್ಲಿಯೂ, ಸಮಂತ್ರಕ ಪೂಜೆಯಲ್ಲಿಯೂ ಬ್ರಾಹ್ಮಣಮುಖದಿಂದಲೂ ಅಧಿಕಾರವಿಲ್ಲ. ಅಂದರೆ-ಅವರು ದೇವಿಯನ್ನು ಕುರಿತು ಮಾಡುವ ೧ ಆವುಪಚಾರಗಳನ್ನುಮನಸ್ಸಿನಲ್ಲಿ ಮಾತ್ರವೇ ಭಾವನೆಮಾಡಿಬಿಡತಕ್ಕದ್ದು.

— ಅನುಕಲ್ಪಗಳು —

ನವರಾತ್ರದ ಅನುಕಲ್ಪಗಳು-ತೃತೀಯೆ ಮೊದಲ್ಗೊಂಡು ನವಮಿವರೆಗೆ ಏಳು ದಿನಗಳಾಗಲಿ, ಪಂಚಮಿಯಿಂದ ಐದುದಿನಗಳಾಗಲಿ, ಸಪ್ತಮಿಯಿಂದ ಮೂರು ರಾತ್ರಗಳಾಗಲಿ, ಅಷ್ಟಮ್ಯಾದಿ ದ್ವಿರಾತ್ರವಾಗಲಿ ಒಂದೇದಿನದಲ್ಲಿ ಮಾಡುವ ಪಕ್ಷದಲ್ಲಿ ಅಷ್ಟಮಿ ಅಥವಾ ನವಮಿಯಲ್ಲಾಗಲಿ, ಮಾಡಬಹುದು. ಈ ಪಕ್ಷಗಳಲ್ಲಿ, ತಮ್ಮ ತಮ್ಮ ಕಾಲಪದ್ಧತಿಯಂತೆಯೋ ಅಥವಾ ತೊಂದರೆಯಿಂದ ಹೆಚ್ಚು ದಿನಗಳು ನಡೆಸುವುದಕ್ಕಾಗದುದರಿಂದಲೋ ಯಾವುದಾದರೊಂದು ಪಕ್ಷವನ್ನು ಆಶ್ರಯಿಸ ಬಹುದು.

ಆಗ-ತೃತೀಯೆ, ಪಂಚಮಿಗಳ ನಿರ್ಣಯವು ಪ್ರತಿಪತ್ತು ಮೊದಲಾದವುಗಳಂತೆಯೇ. ಸಪ್ತಮ್ಯಾದಿಗಳ ನಿರ್ಣಯವನ್ನು ಮುಂದೆಹೇಳುವೆವು. ನವರಾತ್ರ ಮೊದಲಾದ ಪಕ್ಷಗಳಲ್ಲಿ ಕ್ಷಯವೃದ್ಧಿಗಳಿಂದಲ್ಲದೆ, ದಿನಗಳು ಹೆಚ್ಚು ಕಡಿಮೆಯಾಗುವುದಾಗಿದ್ದರೆ ಪೂಜಾದಿಗಳಿಗೆ ಆವೃತ್ತಿಯನ್ನು ಮಾಡಿಕೊಳ್ಳಬೇಕು. (ತಿಥಿವೃದ್ಧಿಯಾಗುವ ಪಕ್ಷದಲ್ಲಿ ಒಂದೇತಿಥಿಯು ಎರಡು ದಿನಗಳಲ್ಲಿಯೂ ಇರುವುದರಿಂದ ಆಯಾತಿಥಿ ಪ್ರಯುಕ್ತವಾದ ಪೂಜೆ ಮೊದಲಾದದ್ದು, ಎರಡು ದಿನಗಳಲ್ಲಿಯೂ ನಡೆಯಬೇಕಾಗುವುದು. ಕ್ಷಯತಿಥಿಯಾದರೆ ಎರಡು ತಿಥಿಗಳಲ್ಲಿ ನಡೆಯಬೇಕಾದ ಪೂಜೆಮೊದಲಾದುವು ಒಂದೇ ದಿನದಲ್ಲಿ ಎರಡುಸಾರಿ ಯಾಗಬೇಕಾಗುವುದು ಇದೇ ಪೂಜಾದಿಗಳಿಗೆ ಆವೃತ್ತಿ ಯೆಂದರ್ಥವು) ಕೆಲವರು-ಕ್ಷಯತಿಥಿಯಾಗುವ ವಿಷಯದಲ್ಲಿ ಎಂಟು ಪೂಜೆಗಳನ್ನೂ, ಚಂಡೀಸ್ತೋತ್ರ ಪಾರಾಯಣವನ್ನೂ ಮಾಡುತ್ತಾರೆ. ಈ ದೇವೀಪೂಜಾರೂಪವಾದ ನವರಾತ್ರಕರ್ಮವು, ಮಾಡದಿದ್ದರೆ ಪ್ರತ್ಯವಾಯವನ್ನೂ, ಮಾಡಿದರೆ ಸತ್ಫಲವನ್ನೂ ಉಂಟುಮಾಡುವುದರಿಂದ ನಿತ್ಯವೂ, ಕಾಮ್ಯವೂ ಆಗಿದೆ.

## —ನವರಾತ್ರ ಕರ್ತವ್ಯಗಳು—

ನವರಾತ್ರದಲ್ಲಿ ಮಾಡಬೇಕಾದ ಕರ್ಮಗಳು-ಈ ನವರಾತ್ರದಲ್ಲಿ ಕಲಶಸ್ಥಾಪನೆಯೂ, ಪ್ರಾತಃಕಾಲ, ಮಧ್ಯಾಹ್ನಕಾಲ, ಪ್ರದೋಷಕಾಲಗಳೆಂಬ ಕಾಲತ್ರಯದಲ್ಲಿ ಅಥವಾ ಎರಡು ಕಾಲದಲ್ಲಿ, ಇಲ್ಲವೇ ಒಂದೇ ಕಾಲದಲ್ಲಿ ತಮ್ಮತಮ್ಮ ಕುಲದೇವತಾ ಪೂಜೆಯೂ, ಸಪ್ತಶತಿ ಮೊದಲಾದವುಗಳ ಜಪವೂ, ಅಖಂಡದೀಪವೂ (ನಂದಾದೀವಿಗೆ) ಪದ್ಧತಿಯಾಗಿ ಬಂದಿರುವ ಮಾಲಾಬಂಧನವೂ, ಉಪವಾಸ, ನಕ್ತ, ಏಕಭುಕ್ತಾದಿ ನಿಯಮವೂ, ಸುವಾಸಿನಿಯರಿಗೆ ಭೋಜನಮಾಡಿಸುವುದೂ, ಕುಮಾರಿ [ಕನ್ನಿಕೆ] ಗಳಿಗೆ ಭೋಜನ, ಪೂಜೆಗಳೂ, ಕೊನೆಯಲ್ಲಿ ಸಪ್ತಶತಿ ಮೊದಲಾದ ಸ್ತೋತ್ರಗಳ ಮಂತ್ರಹೋಮವೂ, ಇವೇ ಮೊದಲಾದವುಗಳು ಉಕ್ತವಾಗಿವೆ. ಕೆಲವು ಮತಗಳಲ್ಲಿ, ಇವುಗಳೊಳಗೆ ಕಲಶಸ್ಥಾಪನೆ ಮೊದಲಾದ ಎರಡು ಮೂರು ಕರ್ಮಗಳನ್ನು ಮಾತ್ರವೇ ಅನುಸರಿಸು

ತ್ತಾರೆ. ಎಲ್ಲವನ್ನೂ ನಡೆಯಿಸುವುದಿಲ್ಲ. ಮತ್ತೆ ಕೆಲವರು ಕುಂಭಸ್ಥಾಪನೆಯನ್ನುಳಿದು ಎಲ್ಲವನ್ನೂ, ಮತ್ತೆ ಕೆಲವರು ಕೆಲವುಮಾತ್ರವನ್ನೂ, ತವ್ಮತಮ್ಮ ಸಂಪ್ರದಾಯಾನುಸಾರವಾಗಿ ಬಂದೊಂದು ಬಗೆಯಾಗಿ ಮಾಡುತ್ತಾರೆ, ವಂಶಪಾರಂಪರ್ಯವಾಗಿ ನಡೆದು ಬಂದಿರುವುದಕ್ಕಿಂತ ಹೆಚ್ಚಾಗಿ ನಡೆಯಿಸುವುದಕ್ಕೆ ಶಕ್ತಿ ಇದ್ದಾಗ್ಯೂ ಮಾಡಕೂಡದೆಂದು ಶಿಷ್ಟರಸಂಪ್ರದಾಯವಿದೆ. ಕುಲಪದ್ಧತಿ ಯಿಲ್ಲದಿದ್ದಾಗ್ಯೂ ಫಲಾಪೇಕ್ಷೆಯಿಂದ ಕೋರಿ ಉಪವಾಸ ಮೊದಲಾದವುಗಳನ್ನು ಮಾಡುವುದುಂಟು. ಈ ಕಲಶಸ್ಥಾಪನೆಯನ್ನು ರಾತ್ರಿಯಲ್ಲಿ ಮಾಡಕೂಡದು. ಇಲ್ಲಿ ಕಲಶಸ್ಥಾಪನೆಗಾಗಿ ಶುದ್ಧವಾದ ಮಣ್ಣಿನಲ್ಲಿ ವೇದಿಕೆ [ಜಗುಲಿ] ಯನ್ನು ಹಾಕಿ ಪಂಚಪಲ್ಲವ, ದೂರ್ವೆ, ಫಲ, ತಾಂಬೂಲ, ಕುಂಕುಮ, ಧೂಪ, ಮೊದಲಾದ ಸಾಮಗ್ರಿಗಳನ್ನು ಸಂಪಾದಿಸಬೇಕು.

—ಪ್ರಯೋಗವು—

ಪ್ರಯೋಗವು--ನವರಾತ್ರಾರಂಭ ಪ್ರಯೋಗವನ್ನು ಸಂಕ್ಷೇಪವಾಗಿ ಹೇಳುತ್ತೇವೆ.—ಪ್ರತಿಪತ್ತಿನ ಪ್ರಾತಃಕಾಲದಲ್ಲಿಅಭ್ಯಂಗಸ್ನಾನಮಾಡಿ, ಕುಂಕುಮ, ಚಂದನ, ಮೊದಲಾದವುಗಳಿಂದ ಪುಂಡ್ರವನ್ನು ಧರಿಸಿ, ಪವಿತ್ರವನ್ನಿಟ್ಟುಕೊಂಡು, ಪತ್ನೀಸಮೇತನಾಗಿ ಕುಳಿತು, ಹತ್ತುಗಳಿಗೆಗಳೊಳಗೆ ಅಥವಾ ಅಭಿಜಿನ್ಮುಹೂರ್ತದಲ್ಲಿ ದೇಶಕಾಲ ಸಂಕೀರ್ತನಮಾಡಿ, ಸಕುಟುಂಬನಾದ ನನಗೆ ಈ ದೇವತೆಯು ಪ್ರೀತಿಯುಂಟಾಗುವುದರ ಮೂಲಕವಾಗಿ, ಸಕಲ ವಿಪತ್ತುಗಳೂ ಪರಿಹಾರವಾಗಿ, ದೀರ್ಘಾಯುಸ್ಸು, ಧನ, ಪುತ್ರವೃದ್ಧಿ, ಶತ್ರುಜಯ, ಯಶಃಪ್ರಾಪ್ತಿ ಮೊದಲಾದ ಚತುರ್ವಿಧಪುರುಷಾರ್ಥಸಿದ್ಧಿ ಯುಂಟಾಗುವುದಕ್ಕಾಗಿ, ಈದಿನ ಮೊದಲು ಮಾಡಿಕೊಂಡು ಮಹಾನವಮಿಯವರೆಗೂ, ಮೂರುಕಾಲ ಅಥವಾ ಏಕಕಾಲದಲ್ಲಿ ದೇವತಾಪೂಜೆಯನ್ನೂ, ಉಪವಾಸ, ನಕ್ತ, ಏಕಭಕ್ತ ಇವುಗಳೊಂದರೊಡನೆ ನಿಯಮದಿಂದ ಅಖಂಡದೀಪವನ್ನೂ, ಕುಮಾರೀಪೂಜೆಯನ್ನೂ, ಚಂಡೀಸಪ್ತಶತೀ ಜಪವನ್ನೂ, ಸುವಾಸಿನೀ ಭೋಜನಮೊದಲಾದುವನ್ನೂ, ತಮ್ಮತಮ್ಮ ಕುಲಪದ್ಧತಿಯ ಪ್ರಕಾರವಾಗಿ ಹೇಳಿಕೊಂಡು,

ಈರೀತಿಯಾಗಿ ಶಾರದನವರಾತ್ರದ ಉತ್ಸವವೆಂಬ ಕರ್ಮವನ್ನು ಮಾಡು ತ್ತೇನೆಂದು ಸಂಕಲ್ಪಮಾಡಬೇಕು. ದೇವತಾಪೂಜಾಂಗವಾಗಿ ಕುಂಭ ಸ್ಥಾಪನೆಯನ್ನು ಮಾಡಬೇಕು. ಪ್ರಾರಂಭದಲ್ಲಿ ಮಹಾಗಣಪತಿ ಪೂಜೆ ಯನ್ನೂ, ಕಾರ್ಯವು ನಿರ್ವಿಘ್ನವಾಗಿ ಪೂರಯಿಸುವುದಕ್ಕಾಗಿಮಾಡಿ, ಪುಣ್ಯಾ ಹವನ್ನೂ, ಚಂಡೀಸಪ್ತಶತೀ ಪಾರಾಯಣಕ್ಕಾಗಿ ಬ್ರಾಹ್ಮಣನಿಗೆ ಋತ್ವಿ ಗ್ವರಣವನ್ನೂ ಕೊಟ್ಟು, ಅನಂತರದಲ್ಲಿ ಕುಂಭಸ್ಥಾಪನೆಯನ್ನು ಮಾಡು ವುದಾಗಿದ್ದರೆ, 'ಮಹೀದ್ಯೌಃ' ಎಂಬ ಮಂತ್ರದಿಂದ ಭೂಸ್ಪರ್ಶ ಮಾಡ ಬೇಕು. ಆ ಭೂಮಿಯಲ್ಲಿ ಅಂಕುರಾರ್ಪಣೆಗಾಗಿ ಶುದ್ಧವಾದ ಮಣ್ಣ ನ್ನು ಹಾಕಬೇಕು. ಆಮಣ್ಣಿನಲ್ಲಿ ಓಷಧಯಃ ಸಂ, ಎಂಬ ಮಂತ್ರದಿಂದ ಯವೆ ಮೊದಲಾದುವನ್ನು ಹಾಕಿ, 'ಕಲಶೇಷು' ಎಂಬ ಮಂತ್ರದಿಂದ ಕಲಶವನ್ನಿಟ್ಟು 'ಇಮಂ ಮೇಗಂಗೇ, ಎಂಬ ಮಂತ್ರದಿಂದ ನೀರನ್ನು ತುಂ ಬಿ. ‹ಗಂಧದ್ವಾರಾಂ, ಎಂಬುದರಿಂದ ಗಂಧವನ್ನೂ, ‹ಯಾಓಷಧೀಃ, ಎಂ ಬುದರಿಂದ ಎಲ್ಲಾ ಓಷಧಿಗಳನ್ನೂ, ‹ಕಾಂಡಾತ್ಕಾಂಡಾತ್, ಎಂಬುದರಿಂ ದ ದೂರ್ವೆಯನ್ನೂ, ‹ಅಶ್ವತ್ಥೇವಃ, ಎಂಬುದರಿಂದ ಪಂಚಪಲ್ಲವಗಳನ್ನೂ ‹ಸ್ಯೋನಾಪೃಥಿವಿ, ಎಂಬುದರಿಂದ ಮೃತ್ತಿಕೆಯನ್ನೂ, ‹ಯಾಃ ಫಲಿನೀಃ' ಎಂಬುದರಿಂದ ಫಲವನ್ನೂ, ‹ಸಹಿರತ್ನಾನಿ, ‹ಹಿರಣ್ಯರೂಪಃ, ಎಂಬುವುಗ ಳಿಂದ ರತ್ನ, ಸುವರ್ಣಗಳನ್ನೂ, ಹಾಕಿ, ‹ಯುವಾಸುವಾಸಾಃ, ಎಂಬುದ ರಿಂದ ನೂಲನ್ನು ಸುತ್ತಿ, ‹ಪೂರ್ಣಾದರ್ವಿ, ಎಂಬುದರಿಂದ ಪೂರ್ಣಪಾ ತ್ರೆಯನ್ನಿಟ್ಟು, ‹ತತ್ವಾಯಾಮಿ, ಎಂಬ ಮಂತ್ರದಿಂದ ವರುಣಪೂಜೆಯ ನ್ನು ಮಾಡಿ, ಆ ಕಲಶದಮೇಲೆ ಕುಲದೇವತಾ ಪ್ರತಿಮೆಯನ್ನಿಟ್ಟು ಪೂಜೆ ಮಾಡಬೇಕು. ಅಥವಾ ಆ ಪ್ರತಿಮೆಯನ್ನು ಇದ್ದ ಸ್ಥಳದಲ್ಲಿಯೇ ಇಟ್ಟು ಪೂಜಿಸಬೇಕು. ‹ಜಯಂತೀ ಮಂಗಳಾಕಾಳೀ ಭದ್ರಕಾಳೀ ಕಪಾಲಿ ನೀ। ದುರ್ಗಾಕ್ಷಮಾ ಶಿವಾ ಧಾತ್ರೀ ಸ್ವಧಾಸ್ವಾಹಾ ನಮೋಸ್ತುತೇ ॥೧॥ ಆಗಚ್ಛವರದೇದೇವಿ ದೈತ್ಯದರ್ಪನಿಷೂದಿನಿ। ಪೂಜಾಂಗೃಹಾಣ ಸುಮು ಖಿ ನಮಸ್ತೇ ಶಂಕರಪ್ರಿಯೇ॥೨॥' ಜಯಂತೀ ಮೊದಲಾದ ನಾಮಗಳುಳ್ಳ ವಳಾಗಿಯೂ, ಈಶ್ವರಪತ್ನಿಯಾಗಿಯೂ, ರಾಕ್ಷಸಸಂಹಾರಕಳಾಗಿಯೂ, ಸುಮುಖಿಯಾಗಿ, ವರಪ್ರದಳಾಗಿಯೂ ಇರುವ ಎಲೈ ಚಣ್ಡಿಯೇ! ನೀನು

ದಯೆಮಾಡಿ ಇಲ್ಲಿಗೆಬಂದು ನಾನು ಮಾಡುವ ಪೂಜೆಯನ್ನು ಸ್ವೀಕರಿಸು॥ ೧-೨॥ ಈ ಮಂತ್ರದಿಂದಲೂ, ಪುರುಷಸೂಕ್ತ ಶ್ರೀಸೂಕ್ತಗಳ ಮೊದಲ ಋಕ್ಕಿನಿಂದಲೂ ಆವಾಹನೆಮಾಡಿ, ‹ಜಯನ್ತೀ, ಮಂಗಳಾ, ಕಾಳೀ, ಎಂಬ ಮಂತ್ರದಿಂದಲೂ, ಸೂಕ್ತ ಋಕ್ಕುಗಳಿಂದಲೂ, ಆಸನಾದಿ ಷೋಡಶೋಪಚಾರ [ಹದಿನಾರು] ಗಳಿಂದ ಪೂಜಿಸಬೇಕು. ‹ಸರ್ವಮಂಗಳ ಮಾಂಗಲ್ಯೇ, ಮೊದಲಾದ ಮಂತ್ರಗಳಿಂದ ಪ್ರಾರ್ಥಿಸಿ, ಪ್ರತಿದಿನವೂ ಬಲಿಯನ್ನು ಹಾಕುವ ಪಕ್ಷದಲ್ಲಿ, ಉದ್ದಿನ ಅನ್ನದಿಂದ ಅಥವಾ ಕುಂಬಳಕಾಯಿಯಿಂದ ಬಲಿಯನ್ನು ಕೊಡಬೇಕು ಕೊನೆಯದಿನದಲ್ಲಿಯೂ ಬಲಿಯನ್ನು ಹಾಕಬಹುದು. ಬಲಿಯನ್ನು ಮಾಡದಿರುವುದೂ ಉಂಟು. ‹ಅಖಂಡದೀಪಕಂ ದೇವ್ಯಾಃ ಪ್ರೀತಯೇ ನವರಾತ್ರಕಂ । ಉಜ್ಜ್ವಾಲಯೇ ಅಹೋರಾತ್ರಮೇಕಚಿತ್ತೋ ಧೃತವ್ರತಃ ॥ ೨ ॥, ಏಕಚಿತ್ತನಾಗಿಯೂ, ವ್ರತನಿಯಮವುಳ್ಳವನಾಗಿಯೂ ಇರುವ ನಾನು, ನವರಾತ್ರ ಸಂಬಂಧವಾದ ಅಖಂಡದೀಪವನ್ನು ಚಂಡಿಕೆಯ ಪ್ರೀತ್ಯರ್ಥವಾಗಿಟ್ಟು ಹಗಲು ರಾತ್ರಿಗಳಲ್ಲಿಯೂ ಬೆಳಗಿಸುವೆನು ಎಂದು ಅಖಂಡದೀಪವನ್ನು ಇಡಬೇಕು.

— ಚಂಡೀಪಾಠವಿಧಿಯು —

ಚಂಡೀಸ್ತೋತ್ರ ಪಾರಾಯಣಕ್ರಮವು-ಯಜಮಾನನಿಂದ ವರಣವನ್ನು ತೆಗೆದ ಕೊಂಡಿರುವ ನಾನು, ‹ಚಂಡೀ ಸಪ್ತಶತೀ, ಪಾರಾಯಣವನ್ನಾಗಲಿ, ನಾರಾಯಣ ಹೃದಯ, ಲಕ್ಷ್ಮೀಹೃದಯ ಪಾರಾಯಣವನ್ನಾದರೂ ಮಾಡುವೆನು. ಈ ಮೊದಲಾದ ಸಂಕಲ್ಪಮಾಡಿ ಆಸನಾದಿಗಳನ್ನು ಕಲ್ಪಿಸಿಕೊಂಡು ಬೇರೊಬ್ಬರು ಬರೆದ ಪುಸ್ತಕವನ್ನು ವ್ಯಾಸಪೀಠ ಮೊದಲಾದ ಆಧಾರಗಳ ಮೇಲಿಟ್ಟು, ‹ನಾರಾಯಣಂ ನಮಸ್ಕೃತ್ಯ, ಮೊದಲಾದ ವಿಧಿ ಯಿರುವುದರಿಂದ, ‹ಓಂ ನಾರಾಯಣಾಯನಮಃ, ನರಾಯನರೋತ್ತಮಾಯನಮಃ, ದೇವ್ಯೈ ಸರಸ್ವತ್ಯೈನಮಃ, ವ್ಯಾಸಾಯನಮಃ, ಎಂದು ಎಲ್ಲರಿಗೂ ನಮಸ್ಕರಿಸಿ ಪ್ರಣವೋಚ್ಚಾರಣೆ ಮಾಡಿ, ಪ್ರತಿ ಒಂದು ಪಾರಾಯಣದ ಕೊನೆಯಲ್ಲಿಯೂ ಪ್ರಣವವನ್ನು (ಓಂ) ಉಚ್ಚರಿಸಬೇಕು. ಪುಸ್ತಕವನ್ನೋದ ಬೇಕಾದರೆ ನಿಯಮಗಳು—ಕೈಯಲ್ಲಿ ಪುಸ್ತಕವನ್ನು ಹಿಡಿದುಕೊಳ್ಳಕೂಡದು. ತಾನಾಗಲಿ, ಬ್ರಾಹ್ಮಣನಲ್ಲದ ಇತರರಾ

ಗಲಿ ಬರೆದಪುಸ್ತಕದಿಂದ ಪಾರಾಯಣಮಾಡಿದರೆ ನಿಷ್ಫಲವಾಗುವುದು. ಅ
ಧ್ಯಾಯವು ಮುಗಿಯುವವರೆಗೂ ಮಧ್ಯದಲ್ಲಿ ನಿಲ್ಲಿಸಕೂಡದು. ‘ಅಧ್ಯಾ
ಯಂಪ್ರಾಪ್ಯವಿರಮೇನ್ನತುಮಧ್ಯೇಕದಾಚನ। ಕೃತೇವಿರಾಮೇ ಮಧ್ಯೇ
ತು ಅಧ್ಯಾಯಾದಿ ಪಠೇತ್ಪುನಃ॥೧॥, ಅಧ್ಯಾಯವು ಮುಗಿದು ಹೊಸಅಧ್ಯಾ
ಯವು ಬಂದರೆ ನಿಲ್ಲಿಸಬೇಕಲ್ಲದೆ ಮಧ್ಯದಲ್ಲಿ ಯಾವಕಾರಣದಿಂದಲೂ ನಿ
ಲ್ಲಿಸಕೂಡದು. ಒಂದು ವೇಳೆ ಹಾಗೆ ನಿಲ್ಲಿಸಿದರೆ ಆ ಅಧ್ಯಾಯವ ನ್ನು
ಪುನಃ ಮೊದಲಿನಿಂದ ಓದಬೇಕು ॥೧॥ ಗ್ರಂಥದ ಅರ್ಥವನ್ನು ಮನಸ್ಸಿಗೆ
ತೆಗೆದುಕೊಳ್ಳುತ್ತಲೂ, ಅಕ್ಷರಗಳನ್ನು ಸ್ಪಷ್ಟವಾಗಿ ಉಚ್ಚಾರಣೆ ಮಾಡು
ತ್ತಲೂ ಬಹಳ ಬೇಗನ ಅಥವಾ ಬಹಳ ನಿಧಾನವಾಗಿಯೂ ಓದದೆ, ಆ
ಯಾರಸಗಳನ್ನೂ, ಭಾವಗಳನ್ನೂ, ಸೂಚನೆ ಮಾಡುವ ಸ್ವರಗಳಿಂದ ಓದ
ಬೇಕು. ವರ್ಗತ್ರಯ ಫಲವನ್ನಪೇಕ್ಷಿಸುವವನು ಸರ್ವದಾ ಚಂಡೀ
ಸ್ತೋತ್ರ ಪಾರಾಯಣವನ್ನು ಮಾಡಬೇಕು. ‘ತಸ್ಮಾನ್ಮಮೈತನ್ಮಾ
ಹಾತ್ಮ್ಯಂ ಪಠಿತವ್ಯಂಸಮಾಹಿತೈಃ। ಶ್ರೋತವ್ಯಂಚ ಸದಾಭಕ್ತ್ಯಾ’ಅಂ
ದರೆ-ಚಂಡಿಯು ತನ್ನ ಮಾಹಾತ್ಮ್ಯೆಯನ್ನು ಎಲ್ಲರೂ ಭಕ್ತಿಯಿಂದ ಸರ್ವ
ದಾಪಾರಾಯಣ ಮಾಡಬೇಕು, ಮತ್ತು ಕೇಳಬೇಕು, ಎಂದು ಹೇಳು
ವ ವಚನವಿರುವುದು. ಹೀಗಲ್ಲದೆ ನೈಮಿತ್ತಿಕದಿಂದಲೂ ಪಾರಾಯಣ
ಮಾಡಬೇಕೆಂದು ಹೇಳಿದೆ. ಹೇಗೆಂದರೆ-‘ಶಾನ್ತಿಕರ್ಮಣಿ ಸರ್ವತ್ರ ತಥಾ
ದುಸ್ವಪ್ನ ದರ್ಶನೇ। ಗ್ರಹಪೀಡಾಸುಚೋಗ್ರಾಸು ಮಾಹಾತ್ಮ್ಯಂ ಶೃ
ಣುಯಾನ್ಮಮ ॥ ೧ ॥’ ಎಲ್ಲಾ ಶಾನ್ತಿ ಕರ್ಮಗಳಲ್ಲಿಯೂ, ದುಸ್ವಪ್ನವನ್ನು
ಕಂಡರೂ, ಗ್ರಹಪೀಡೆಗಳಲ್ಲಿಯೂ, ನನ್ನ ಮಹಿಮೆಯನ್ನುಕೇಳಬೇಕು॥೧
ಎಂಬುದೇ ಮೊದಲಾದದ್ದು. ಹಾಗೆಯೇ-‘ಅರಣ್ಯೇ ಪ್ರಾಂತರೇವಾ ಪಿ
ದಾವಾಗ್ನಿ ಪರಿವಾರಿತಃ। ದಸ್ಯುಭಿರ್ವಾವೃತಶ್ಶೂನ್ಯೇ ಗೃಹೀತೋವಾಪಿ ಶ
ತ್ರುಭಿಃ ॥ ೧ ॥ ಸರ್ವಬಾಧಾಸು ಚೋಗ್ರಾಸು ವೇದನಾಭ್ಯರ್ದಿತೋಪಿ
ವಾ। ಸ್ಮರನ್ಮಮೈತನ್ಮಾಹಾತ್ಮ್ಯಂನರೋಮುಚ್ಯೇತಸಂಕಟಾತ‘॥೨॥’
ಅರಣ್ಯದಲ್ಲಿ ಕಾಡುಕಿಚ್ಚಿನಮಧ್ಯದಲ್ಲಿ ಸಿಕ್ಕಿಕೊಂಡಿರುವವನೂ, ದೂರ
ಮಾರ್ಗದಲ್ಲಿ ಕಳ್ಳರಕೈಗೆ ಸಿಕ್ಕಿದವನೂ, ಒಬ್ಬನೇ ಶತ್ರುಗಳ ಮಧ್ಯದಲ್ಲಿ
ಸಿಕ್ಕುಬಿದ್ದಿರುವನೂ, ॥೧॥ ಹೆಚ್ಚಾದ ಬಾಧೆಯನ್ನೂ, ನೋವನ್ನೂ, ಹೊಂ

ದಿದವನೂ, ಇವೇ ಮೊದಲಾದ ಸಂಕಟಗಳಿಗೆ ಒಳಗಾದವನು ನನ್ನ ಮಾಹಾತ್ಮ್ಯೆಯನ್ನು ಸ್ಮರಿಸಿಕೊಂಡ ಮಾತ್ರಕ್ಕೆ ಈ ಸಂಕಟಗಳೆಲ್ಲವೂ ಪರಿಹಾರವಾಗುವವು ॥ ೨ ॥ ಎಂದು ಹೇಳಿ ಇದೆ, ತೊಂದರೆಗಳನ್ನು ತಪ್ಪಿಸಿ ಕೊಳ್ಳಲು ಮೂರುಸಾರಿ ಪಾರಾಯಣವನ್ನು ಮಾಡಬೇಕು. ಗ್ರಹಚಾರಬಾಧೆಯ ಪರಿಹಾರಕ್ಕೆ ಐದು ಆವೃತ್ತಿ ಪಾರಾಯಣ ಮಾಡಬೇಕು. ಹೆಚ್ಚಾದ ಭಯದಲ್ಲಿ ಏಳುಆವೃತ್ತಿ, ಶಾಂತಿಗಾಗಿಯೂ, ವಾಜಪೇಯ ಫಲವನ್ನು ಹೊಂದುವುದಕ್ಕೂ ಒಂಭತ್ತುಸಾರಿ, ರಾಜವಶ್ಯಕ್ಕೆ ಹನ್ನೊಂದುಬಾರಿ, ಶತ್ರುನಾಶಕ್ಕೆ ೧೨ಸಾರಿ, ಸ್ತ್ರೀ ಪುರುಷರ ವಶ್ಯಕ್ಕೆ ೧೪. ಸೌಖ್ಯ ಸೌಭಾಗ್ಯ ಪ್ರಾಪ್ತಿಗೆ ೧೫. ಪುತ್ರ ಪೌತ್ರ ಧನಧಾನ್ಯವೃದ್ಧಿಗೆ ೧೬. ರಾಜಭಯನಿವಾರಣೆಗೆ ೧೭, ಉಚ್ಚಾಟನಾರ್ಥವಾಗಿ, ೧೮.ಅರಣ್ಯಭಯಕ್ಕೆ ೨೦.ಬಂಧನವನ್ನುತಪ್ಪಿಸಿಕೊಳ್ಳಲು೨೫.ವಾಸಿಯಾಗದರೋಗ, ವಂಶನಾಶ, ಆಯುರ್ನಾಶ. ವೈರಿವೃದ್ಧಿ, ವ್ಯಾಧಿವೃದ್ಧಿ,ಮೂರುಬಗೆಯ ಉತ್ಪಾತಗಳು, ಮೊದಲಾದ ಮಹಾಸಂಕಟಗಳ ಪರಿಹಾರಕ್ಕೆ ೧೦೦ ಸಾರಿ ಪಾರಾಯಣ ಮಾಡಬೇಕು. ಸಹಸ್ರಾವೃತ್ತಿ ಪಾರಾಯಣ ಮಾಡಿದರೆ ನೂರು ಅಶ್ವಮೇಧಗಳ ಫಲವು ಬರುವುದು. ಸಕಲ ಮನೋರಥಗಳೂ ಸಿದ್ಧವಾಗುವುವು. ಮುಕ್ತಿಪ್ರಾಪ್ತಿಯಾಗುವುದು. ಎಂದು ವಾರಾಹೀ ತಂತ್ರದಲ್ಲಿ ಹೇಳಿದೆ. ಎಲ್ಲಾ ಕಾಮ್ಯಪಾರಾಯಣಗಳಲ್ಲಿಯೂ ಮೊದಲು ಸಂಕಲ್ಪಪೂರ್ವಕವಾಗಿ ಪೂಜೆಯನ್ನೂ, ಕೊನೆಯಲ್ಲಿ ಬಲಿಯನ್ನೂ ಮಾಡಬೇಕು. ಇಲ್ಲಿ ಪದ್ಧತಿಯಿರುವವರು ವೇದಪಾರಾಯಣವನ್ನೂ ಮಾಡಬೇಕು. ಆ ವಿಧಿಯನ್ನು ಬೋಧಾಯನರು ಹೇಳಿರುವುದನ್ನು ಕೌಸ್ತುಭದಲ್ಲಿ ತಿಳಿಯತಕ್ಕದ್ದು.

---ಕುಮಾರೀಪೂಜೆಯು---

ಕುಮಾರೀಪೂಜೆಯು-- 'ಏಕವರ್ಷಾತುಯಾಕನ್ಯಾ ಪೂಜಾರ್ಥಂತಾಂ ವಿವರ್ಜಯೇತ್' ॥' ಒಂದು ವರ್ಷದ ಕನ್ಯೆಯನ್ನು ಪೂಜಿಸಕೂಡದು ಎರಡನೇ ವರ್ಷ ಮೊದಲ್ಗೊಂಡು ಹತ್ತುವರ್ಷಗಳವರೆಗೆ ಕ್ರಮವಾಗಿ ಕನ್ಯೆಯರಿಗೆ, ಕುಮಾರಿಕಾ, ತ್ರಿಮೂರ್ತಿ, ಕಲ್ಯಾಣೀ, ರೋಹಿಣೀ,ಕಾಳೀ, ಚಣ್ಡಿಕಾ, ಶಾಂಭವೀ, ದುರ್ಗಾ, ಭದ್ರಾ, ಎಂಬ ಹೆಸರುಗಳು ಬರುವವು. ಈ ಕುಮಾರಿಗಳಿಗೆ ಪ್ರತ್ಯೇಕವಾದ, ಲಕ್ಷಣವನ್ನೂ, ಪೂಜಾ

ಮಂತ್ರಗಳನ್ನೂ, ಫಲಭೇದಗಳನ್ನೂ ಬೇರೆ ಗ್ರಂಥಗಳಿಂದ ತಿಳಿಯಬೇಕು. ಬ್ರಾಹ್ಮಣನು ಬ್ರಾಹ್ಮಣ ಸ್ತ್ರೀಯನ್ನು ಪೂಜಿಸಬೇಕು. ಹೀಗೆಯೇ ಸವರ್ಣವೇ ಶ್ರೇಷ್ಠವಾದದ್ದು. ವರ್ಣಭೇದವಿದ್ದರೂ ಕೆಲವು ಅಪೇಕ್ಷೆಗಳಿಂದ ಆಗಬಹುದೆಂದು ಹೇಳಿರುವ ಕೆಲವು ಸಂದರ್ಭಗಳಿವೆ. ದಿನಕ್ಕೊಂದರಂತೆ ಹೆಚ್ಚಿಸಿ, ಅಥವಾ ಪ್ರತಿ ದಿನದಲ್ಲಿಯೂ ಒಂದನ್ನಾದರೂ ಪೂಜಿಸಬೇಕು. 'ಮಂತ್ರಾಕ್ಷರಮಯೀಂ ಲಕ್ಷ್ಮೀಂ ಮಾತೄಣಾಂ ರೂಪಧಾರಿಣೀಂ। ನವದುರ್ಗಾತ್ಮಿಕಾಂ ಸಾಕ್ಷಾತ್ಕನ್ಯಾಮಾವಾಹಯಾಮ್ಯಹಂ ॥೧॥ ಜಗತ್ಪೂಜ್ಯೇ ಜಗದ್ವಂದ್ಯೇ ಸರ್ವಶಕ್ತಿಸ್ವರೂಪಿಣಿ। ಪೂಜಾಂ ಗೃಹಾಣ ಕೌಮಾರಿ ಜಗನ್ಮಾತರ್ನಮೋಸ್ತುತೇ'॥ ೨ ॥ ಮಂತ್ರಸ್ವರೂಪಳಾಗಿಯೂ, ಲಕ್ಷ್ಮೀಸ್ವರೂಪಳಾಗಿಯೂ, ಮಾತೃರೂಪಳಾಗಿಯೂ, ಪ್ರತ್ಯಕ್ಷ ನವದುರ್ಗಾಸ್ವರೂಪಿಣಿಯಾಗಿಯೂ, ಇರುವ ಕನ್ಯೆಗೆ ನಾನು ಆವಾಹನೆಯನ್ನು ಸಮರ್ಪಿಸುವೆನು ॥ ೧ ॥ಜಗನ್ಮಾತೆಯಾಗಿ, ಲೋಕಪೂಜಿತೆಯಾಗಿ, ಸರ್ವಶಕ್ತಿರೂಪಳಾಗಿರುವ ಕುಮಾರಿಯೇ, ನಿನಗೆ ನಮಸ್ಕಾರವು. ನನ್ನ ಪೂಜೆಯನ್ನು ಸ್ವೀಕರಿಸು ॥ ೨ ॥ ಎಂಬ ಮಂತ್ರಗಳಿಂದ ಪಾದಪ್ರಕ್ಷಾಳನೆಯೊಡನೆ ವಸ್ತ್ರ, ಕುಂಕುಮ, ಗಂಧ, ಧೂಪ, ದೀಪ, ನೈವೇದ್ಯ (ಭೋಜನ) ಗಳಿಂದ ಪೂಜಿಸಬೇಕೆಂಬುದು ಸಂಕ್ಷೇಪವು. ಕುಮಾರೀ ಪೂಜೆಯಂತೆ,ದೇವೀಪೂಜೆಯನ್ನೂ, ಚಂಡೀ ಪಾರಾಯಣವನ್ನೂ, ಏಕೋತ್ತರ ವೃದ್ಧಿಯಾಗಿ, (ದಿನಕ್ಕೊಂದೊಂದರಂತೆ ಹೆಚ್ಚಿಸುವುದು) ಮಾಡಬೇಕೆಂದೂ ಹೇಳಿದೆ. ಭವಾನೀ ಸಹಸ್ರನಾಮಪಾರಾಯಣವೂ ಕಲವೆಡೆಗಳಲ್ಲಿ ಹೇಳಿದೆ. ಈ ಶಾರದ ನವರಾತ್ರೋತ್ಸವವನ್ನು ಮಲಮಾಸದಲ್ಲಿ ಮಾಡಕೂಡದು. ಶುಕ್ರಾಸ್ತಾದಿಗಳಲ್ಲಿ ನಡೆಯಬಹುದು. ಹೊಸದಾಗಿ ಪ್ರಾರಂಭಿಸುವವರು ಮಾತ್ರವೇ ಮಾಡಕೂಡದು.

—ಆಶೌಚಾದಿಗಳಲ್ಲಿ ಮಾಡಬೇಕಾದದ್ದು—

ಆಶೌಚಾದಿಗಳಲ್ಲಿ ವಿಧಿ—ಜಾತಾಶೌಚಮೃತಾಶೌಚಗಳು ಸಂಭವಿಸಿದರೆ ಕಲಶಸ್ಥಾಪನೆ ಮೊದಲಾದುವನ್ನು ಬ್ರಾಹ್ಮಣರ ಮೂಲಕ ಮಾಡಿಸಬೇಕು. ಪ್ರಾರಂಭವಾದ ಮೇಲೆ ಮಧ್ಯಕಾಲದಲ್ಲಿ ಆಶೌಚವು ಬಂ

ದರೆ ಪ್ರಾರಂಭಮಾಡಿದ ಪೂಜೆಯನ್ನು ತಾವೇ ಪೂರಯಿಸಬೇಕೆಂದು ಕೆಲವರು. ಆಶೌಚದಲ್ಲಿ ಪೂಜೆ, ದೇವರನ್ನು ಮುಟ್ಟುವುದು. ಇವೆಲ್ಲಾ ಲೋಕವಿರೋಧವಾದ್ದರಿಂದ ಶಿಷ್ಟರು ಇತರರಿಂದಲೇ ಮಾಡಿಸುತ್ತಾರೆ. ಮತ್ತೆ ಕೆಲವರು ತೃತೀಯಾದಿ, ಪಂಚಮ್ಯಾದಿ, ಸಪ್ತಮ್ಯಾದಿ ಅನುಕಲ್ಪದಿಂದ ನವರಾತ್ರ ವಿಧಿಯು ಇರುವುದರಿಂದ, ಪ್ರತಿಪತ್ತಿನಲ್ಲಿ ಆಶೌಚವುಂಟಾದರೆ ತೃತೀಯೆಯಲ್ಲಿ ಪ್ರಾರಂಭಮಾಡುವುದೇ ಮೊದಲಾದ ಅನುಕಲ್ಪಗಳನ್ನು ಆಶ್ರಯಿಸುತ್ತಾರೆ. ಸರ್ವಥಾ ಲೋಪವಾಗುವಂತೆ ಬಂದರೇನೆ ಬ್ರಾಹ್ಮಣರಿಂದ ಮಾಡಿಸುತ್ತಾರೆ. ಉಪವಾಸಾದಿ ದೇಹಸಂಬಂಧ ನಿಯಮಗಳನ್ನು ತಾನೇ ಮಾಡಬೇಕು. ಹೀಗೆ ರಜಸ್ವಲೆಯೂ ಕೂಡ ಉಪವಾಸಾದಿಗಳನ್ನು ತಾನೇ ಮಾಡಿ, ಪೂಜಾದಿಗಳನ್ನು ಇತರರಿಂದ ಮಾಡಿಸಬೇಕು. ಇಲ್ಲಿ ಸುವಾಸಿನಿಯರು ಉಪವಾಸದಲ್ಲಿ ಗಂಧ ತಾಂಬೂಲಾದಿಗಳನ್ನು ಗ್ರಹಿಸಿದಾಗ್ಯೂ ದೋಷವಿಲ್ಲವೆಂದು ಹೇಳಿದೆ.

—ಉಪಾಂಗಲಲಿತಾವ್ರತಂ—

ಉಪಾಂಗಲಲಿತಾವ್ರತವು—ಪಂಚಮಿಯಲ್ಲಿ ಉಪಾಂಗಲಲಿತಾ ವ್ರತವನ್ನು ಮಾಡಬೇಕು. ಅಪರಾಹ್ಣಕಾಲದಲ್ಲಿಯೇ ಪೂಜೆಯು ನಡೆಯಬೇಕಾದುದರಿಂದ ಇಲ್ಲಿ ಅಪರಾಹ್ಣ ವ್ಯಾಪ್ತಿಯುಳ್ಳ ಪಂಚಮಿಯನ್ನು ಗ್ರಹಿಸಬೇಕು. ಎರಡು ದಿನಗಳಲ್ಲಿ ಸಂಪೂರ್ಣವಾದ ಅಪರಾಹ್ಣವ್ಯಾಪ್ತಿ ಇದ್ದರೂ, ಸಮನಾಗಿ, ಅಥವಾ ವ್ಯತ್ಯಸ್ತವಾಗ ವ್ಯಾಪ್ತಿ ಇದ್ದಾಗ್ಯೂ, ಯುಗ್ಮವಾಕ್ಯದಿಂದ ಪೂರ್ವತಿಥಿಯನ್ನೇ ಗ್ರಹಿಸಬೇಕು. ಎರಡನೆಯ ದಿನಗಳಲ್ಲಿಯೇ ವ್ಯಾಪ್ತಿ ಇದ್ದಾಗ್ಯೂ ಪರದಿನವನ್ನು ಗ್ರಹಿಸಬೇಕು. ಕೆಲವರು ರಾತ್ರಿ ವ್ಯಾಪ್ತಿಯುಳ್ಳ ತಿಥಿಯನ್ನು ಗ್ರಹಿಸಿ ಪೂಜಾದಿಗಳನ್ನೂ ರಾತ್ರಿಯಲ್ಲಿಯೇ ಮಾಡುತ್ತಾರೆ. ಅದಕ್ಕೆ ಏನು ಆಧಾರವೋ ಗೊತ್ತಿಲ್ಲ. ಪೂಜಾದಿವಿಧಿಯು ಬೇರೆ ಗ್ರಂಥಗಳಲ್ಲಿ ಉಕ್ತವಾಗಿರುವುದರಿಂದ ಇಲ್ಲಿ ಬರೆಯಲಿಲ್ಲ. ಆಶ್ವಯುಜ ಶುದ್ಧದಲ್ಲಿ ಮೂಲ ನಕ್ಷತ್ರದಲ್ಲಿ ಪುಸ್ತಕಗಳಲ್ಲಿ ಸರಸ್ವತಿಯನ್ನಾವಾಹನೆ ಮಾಡಿ ಪೂಜಿಸುವುದುಂಟು. 'ಮೂಲೇಷು ಸಾಪನಂ ದೇವ್ಯಾಃ ಪೂರ್ವಾಷಾಢಾಸು ಪೂಜನಂ। ಉತ್ತರಾಸು ಬಲಿಂ ದದ್ಯಾತ್ ಶ್ರವಣೇನ ವಿಸರ್ಜಯೇತ್॥೧॥' ಮೂಲ ನಕ್ಷತ್ರದಲ್ಲಿ ಸರಸ್ವತಿ

ಯನ್ನುಸ್ಥಾಪಿಸಬೇಕು (ಬಿಡುವುದು) ಪೂರ್ವಾಷಾಢದಲ್ಲಿ ಪೂಜಿಸಬೇಕು. ಉತ್ತರಾಷಾಢದಲ್ಲಿ ಬಲಿಯನ್ನು ಅರ್ಪಿಸಬೇಕು. ಶ್ರವಣದಲ್ಲಿ ವಿಸರ್ಜನ ಮಾಡಬೇಕು ಎಂದು ವಚನವಿರುವುದು. ಪ್ರತಿ ದಿನದಲ್ಲಿಯೂ ಪೂಜಿಸುವ ಕ್ರಮ ರುದ್ರಯಾಮಳದಲ್ಲಿದೆ.

—ಸರಸ್ವತಿಯ ಆವಾಹನಾದಿಗಳು—

ಸರಸ್ವತ್ಯಾವಾಹನಾದಿಗಳು—'ಮೂಲ ನಕ್ಷತ್ರದಲ್ಲಿ ಆವಾಹನೆಯನ್ನೂ, ತದಂಗವಾಗ ಪೂಜೆಯನ್ನೂ ಮಾಡುವೆನು' ಎಂದು ಸಂಕಲ್ಪಮಾಡಿ ಆವಾಹನೆಯನ್ನೂ ಪೂಜೆಯನ್ನೂ ಮಾಡಬೇಕು. ಪೂರ್ವಾಷಾಢದಲ್ಲಿ ಪೂಜಿಸುವೆನೆಂದು ಸಂಕಲ್ಪಮಾಡಿ, ಆವಾಹನೆಯನ್ನು ಬಿಟ್ಟು ಪೂಜೆಯನ್ನಮಾತ್ರವೇ ಮಾಡಬೇಕು. ಉತ್ತರಾಷಾಢದಲ್ಲಿ ಬಲಿಯನ್ನು ಹಾಕುವುದು, ತದಂಗ ಪೂಜೆ, ಇವುಗಳನ್ನ ಮಾಡುತ್ತೇನೆಂದು ಸಂಕಲ್ಪ ಮಾಡಿ ಎರಡನ್ನು ಮಾಡಬೇಕು, ಶ್ರವಣದಲ್ಲಿ ವಿಸರ್ಜನಾಂಗವಾದಪೂಜೆಯನ್ನು ವಿಸರ್ಜನವನ್ನೂ ಮಾಡುವೆನೆಂದೂ ಸಂಕಲ್ಪಮಾಡಿ, ಪೂಜೆ ಮಾಡಿ, ಅನಂತರಲ್ಲಿ ವಿಸರ್ಜನ ಮಾಡಬೇಕೆಂಬುದೇ ಕ್ರಮವು. ಇಲ್ಲಿ ಸೂರ್ಯಾಸ್ತವಾಗುವುದಕ್ಕೆ ಮುಂಚೆ ಮೂರುಮುಹೂರ್ತ ಕಾಲವ್ಯಾಪ್ತಿಯುಳ್ಳ ಮೂಲನಕ್ಷತ್ರದ ಮೊದಲ ಪಾದದಲ್ಲಿ ಸರಸ್ವತಿಯನ್ನು ಆವಾಹನೆಮಾಡಬೇಕು. ಮೂರು ಮುಹೂರ್ತಕ್ಕಿಂತಕಡಿಮೆಯಾದರೆ ರಾತ್ರಿಯಲ್ಲಿ ಪ್ರಥಮ ಪಾದವಿದ್ದರೂ, ವಿಶೇಷವಚನವಿಲ್ಲದೆ ಗ್ರಹಿಸ ಕೂಡದಾದ್ದರಿಂದ ಅದನ್ನು ಬಿಟ್ಟು ಉಳಿದ ಯಾವುದಾದರೊಂದು ಪಾದದಲ್ಲಿ ಎರಡನೆಯದಿನವೇ ಆವಾಹನೆಯು. ಹೀಗೆ ಪೂರ್ವಾಷಾಢಾದಿ ನಕ್ಷತ್ರಗಳನ್ನು ಹಗಲಿನವ್ಯಾಪ್ತಿಯುಳ್ಳವುಗಳನ್ನೇ ಪೂಜಾದಿಗಳಿಗೆ ಗ್ರಹಿಸಬೇಕು. ವಿಸರ್ಜನೆಯನ್ನು ಮಾತ್ರ ವಿಶೇಷ ವಚನ ವಿರುವುದರಿಂದ ಶ್ರವಣನಕ್ಷತ್ರ, ಪ್ರಥಮ ಪಾದವು ರಾತ್ರಿಯಲ್ಲಿದ್ದಾಗ್ಯೂ ಮಾಡಬೇಕು. ಅದೂ ರಾತ್ರಿಯ ಮೊದಲಯಾಮದವರೆಗೆ ಎಂದು ತೋರುತ್ತದೆ. ಸಪ್ತಮೀ ಮೊದಲ್ಗೊಂಡು ಮೂರುದಿನಗಳಲ್ಲಿ ಪತ್ರಪೂಜೆಯನ್ನು ಮಾಡಬೇಕೆಂದು ಹೇಳಿದೆ. ಅದಕ್ಕೆ ಸಪ್ತಮಿ ಮೊದಲಾದ ಮೂರು ತಿಥಿಗಳು ಸೂರ್ಯೋದಯ ಕಾಲದಲ್ಲಿ ಮುಹೂರ್ತ ಮಾತ್ರವಿದ್ದರೂ ಗ್ರಹಿಸಬೇಕು. ಅಧಿವಾಸನಾದಿ ಪ್ರಯೋ

ಗವನ್ನು ಕೌಸ್ತುಭಾದಿಗಳಲ್ಲಿ ವಿಸ್ತಾರವಾಗಿ ಹೇಳಿದೆ. ಸಪ್ತಮಿ ಮೊದಲು ಮೂರು ರಾತ್ರಿಗಳಲ್ಲಿ ಅನುಕಲ್ಪದಿಂದ ನವರಾತ್ರ ಕಾರ್ಯವನ್ನು ಮಾಡತಕ್ಕವರು ಮಾತ್ರವೇ ಸೂರ್ಯೋದಯಾನಂತರದಲ್ಲಿ ಮುಹೂರ್ತ ಕಾಲಕ್ಕಿಂತಲೂ ಹೆಚ್ಚಾದ ವ್ಯಾಪ್ತಿಯುಳ್ಳ ಸಪ್ತಮಿಯನ್ನು ಗ್ರಹಿಸಬೇಕು. ಮುಹೂರ್ತಕ್ಕಿಂತ ಕಡಮೆಯಾಗಿದ್ದರೆ ಪೂರ್ವದಿನವನ್ನು ಗ್ರಹಿಸತಕ್ಕದ್ದು.

—ಮಹಾಷ್ಟಮ್ಯಾದಿಗಳು—

ಮಹಾಷ್ಟಮಿ ಮೊದಲಾದದ್ದು-- ನವಮಿಯಿಂದ ಕೂಡಿದ ಅಷ್ಟಮಿಯು ಸೂರ್ಯೋದಯಾನಂತರದಲ್ಲಿ ಒಂದುಗಳಿಗೆಯು ಕಾಲವಿದ್ದಾಗ್ಯೂ ಅದನ್ನು ಗ್ರಹಿಸಬೇಕು. ಸ್ವಲ್ಪಕಾಲ ಸಪ್ತಮಿಯು ಇದ್ದಾಗ್ಯೂ ಆ ಅಷ್ಟಮಿಯನ್ನು ಸರ್ವಥಾ ಬಿಡಬೇಕು. ಮೊದಲು ದಿನದಲ್ಲಿ ಸಪ್ತಮಿಯಿಂದ ಕೂಡಿದ್ದು, ಎರಡನೆಯ ದಿನದಲ್ಲಿ ಅಷ್ಟಮಿಯು ಇಲ್ಲದೆಯೂ, ಅಥವಾ ಒಂದು ಗಳಿಗೆಗಿಂತ ಕಡಿಮೆಯಾಗಿದ್ದರೂ, ಆಗ ಸಪ್ತಮೀ ವಿದ್ಧವಾದಾಗ್ಯೂ ಮೊದಲ ಅಷ್ಟಮಿಯನ್ನೇ ಗ್ರಹಿಸಬೇಕು. ಮಂಗಳವಾರದಲ್ಲಿ ಈ ಅಷ್ಟಮಿಯು ಬಹಳ ಪ್ರಶಸ್ತ ವೆನ್ನಿಸುವುದು. ಪೂರ್ವ ದಿನದಲ್ಲಿ ಅಷ್ಟಮಿ ೬೦ ಗಳಿಗೆಗಳಿದ್ದು ಎರಡನೆಯ ದಿನದಲ್ಲಿ ಒಂದು ಮುಹೂರ್ತ ಅಥವಾ ಹೆಚ್ಚಿನ ವ್ಯಾಪ್ತಿಯುಳ್ಳದ್ದಾಗಿದ್ದರೆ ಆಗ ನವಮೀ ವಿದ್ಧವಾದ ಅಷ್ಟಮಿಯನ್ನು ಬಿಟ್ಟು ಸಂಪೂರ್ಣವಾದ್ದರಿಂದ ಪೂರ್ವದಿನದ ಅಷ್ಟಮಿಯನ್ನೇ ಗ್ರಹಿಸಬೇಕು. ಹೀಗೆ ನವಮಿಯು ಕ್ಷಯವಶದಿಂದ ದಶಮಿಯಲ್ಲಿ ಸೂರ್ಯೋದಯಾನಂತರದಲ್ಲಿ ಉಳಿಯದೆ ಹೋದರೆ, ನವಮೀ ಯುಕ್ತವಾಗಿಯೂ, ಉದಯಕಾಲ ವ್ಯಾಪ್ತಿಯುಳ್ಳದ್ದಾದರೂ ಆ ಅಷ್ಟಮಿಯನ್ನು ಬಿಟ್ಟು ಸಪ್ತಮೀ ಯುಕ್ತವಾದದ್ದನ್ನು ಗ್ರಹಿಸಬೇಕು ಪುತ್ರವಂತನು ಅಷ್ಟಮಿಯಲ್ಲಿ ಉಪವಾಸ ಮಾಡಕೂಡದು ಕುಲಪದ್ಧತಿಯಿದ್ದರೆ ಯಾವುದಾದರೂ ಆಹಾರವನ್ನು ತೆಗೆದುಕೊಂಡು ಉಪವಾಸ ಮಾಡಬೇಕು. ಬಲಿದಾನವನ್ನುಳದ ವಿಷಯಗಳಲ್ಲಿ, ಪೂಜೆ, ಉಪವಾಸ ಮೊದಲಾದವುಗಳಿಗೆ ಅಷ್ಟಮೀ ವಿದ್ಧವಾದ ನವಮಿಯನ್ನು ಗ್ರಹಿಸಬೇಕು. ನವಮಿಯು ಅಷ್ಟಮಿಯ ದಿನದಲ್ಲಿ ಸಾಯಂಕಾಲದಲ್ಲಿ ಮೂರುಮುಹೂ

ರ್ತಕಾಲವಿದ್ದರೆ ಅದನ್ನೇ ಗ್ರಹಿಸಬೇಕು. ಮೂರು ಮುಹೂರ್ತಕ್ಕಿಂತ ಕಡಿಮೆಯಾಗಿದ್ದರೆ ಎರಡನೆಯದನ್ನೇ ಗ್ರಹಿಸಬೇಕು. ನವಮೀಪ್ರಯು ಕ್ತವಾದ ಮಹಾಬಲಿಯನ್ನು ಕೊಡುವ ವಿಷಯದಲ್ಲಿ ದಶಮೀ ವಿದ್ಧವಾ ದದ್ದೇ ಪ್ರಶಸ್ತವೆಂದದ್ದು. ನವಮಿಯು ಶುದ್ಧಾಧಿಕವಾಗಿದ್ದಲ್ಲಿ ಪೂರ್ವ ತಿಥಿಯಾದ್ದರಿಂದ ಬಲಿದಾನವನ್ನೂ ಪೂರ್ವ ದಿನದಲ್ಲಿಯೇ ಮಾಡಬೇ ಕು. ಅಷ್ಟಮೀ ನವಮಿಗಳ ಸಂಧಿಯಲ್ಲಿ ಪೂಜೆಯನ್ನು ಮಾಡಬೇಕೆಂ ದು ಹೇಳಿದೆ. ಅಷ್ಟಮಿ ಮತ್ತು ನವಮಿಗಳು ಬೇರೆಬೇರೆ ದಿನಗಳಲ್ಲಾ ದರೆ ಹಗಲಾಗಲಿ ರಾತ್ರಿಯಾಗಲಿ ಅಷ್ಟಮಿಯು ಕೊನೆಯ ಗಳಿಗೆ, ನವ ಮಿಯ ಮೊದಲಗಳಿಗೆಗಳಲ್ಲಿ ಮಾಡಬೇಕು. ಅಷ್ಟಮಿ ಮತ್ತು ನವ ಮಿಗಳ ಯೋಗವು ಮಧ್ಯಾಹ್ನ ಅಥವಾ ಅಪರಾಹ್ನದಲ್ಲಾಗಿ, ಅಷ್ಟ ಮೀ ನವಮಿಗಳ ಪೂಜೆಗಳೆರಡೂ ಒಂದೇ ದಿನದಲ್ಲಿ ಆಗ ಬೇಕಾಗ ಬಂದರೆ, ಅಷ್ಟಮಿ ಮತ್ತು ನವಮಿಗಳ ಪೂಜೆಗಳನ್ನೂ, ಸಂಧಿಕಾ ಲದ ಪೂಜೆಯನ್ನೂ ತಂತ್ರದಿಂದ ಮಾಡುತ್ತೇನೆಂದು ಸಂಕಲ್ಪಮಾ ಡಿ ತಂತ್ರದಿಂದ ಪೂಜೆ ಮಾಡಬೇಕು. ಶುದ್ಧಾಧಿಕಾಷ್ಟಮಿ ಯಾದರೆ ಪೂರ್ವ ದಿನದಲ್ಲಿ ಅಷ್ಟಮಿಯ ಪೂಜೆಯನ್ನು ಮಾಡಿ ಎರಡನೆಯ ದಿನ ದಲ್ಲಿ ಸಂಧಿಪೂಜೆ ಮತ್ತು ನವಮೀ ಪೂಜೆಗಳನ್ನು ತಂತ್ರದಿಂದ ಮಾಡ ಬೇಕು. ನವರಾತ್ರಿಯಲ್ಲಿ ಸ್ವತಃ ಪೂಜೆಮಾಡಲು ಶಕ್ತಿ ಇಲ್ಲದವರು ಅ ನ್ಯರಿಂದ ಮಾಡಿಸಬೇಕು. ಷೋಡಶೋಪಚಾರ ಪೂಜೆಯನ್ನೂ ಮಾ ಡುವುದಕ್ಕೆ ಶಕ್ತಿಯಿಲ್ಲದಿದ್ದರೆ ಗಂಧವೇ ಮೊದಲಾದ ಪಂಚೋಪಚಾ ರಗಳಿಂದ ಪೂಜಿಸಬಹುದು. ನವಮಿಯಲ್ಲಿ ಪೂಜೆಮಾಡಿ ಹೋಮವ ನ್ನು ಮಾಡಬೇಕು. ಅಷ್ಟಮಿಯಲ್ಲಿಯೇ ಹೋಮ ಮಾಡಬೇಕೆಂದು ಕೆಲವರ ಅಭಿಪ್ರಾಯವು.

## —ನವಮಿಯಲ್ಲಿ ಹೋಮಾದಿಗಳು—

ನವಮಿಯಲ್ಲಿ ಹೋಮಾದಿಗಳು - 'ಅಷ್ಟಮಿಯಲ್ಲಿ ಹೋಮಕ್ಕೆ ಪ್ರಾರಂಭಿಸಿ ನವಮಿಯಲ್ಲಿ ಹೋಮವನ್ನು ಪೂರ್ತಿ ಮಾಡಬೇಕು. ಅ ರುಣೋದಯವನ್ನು ಮೊದಲು ಮಾಡಿಕೊಂಡು ಸಾಯಂಕಾಲ ಪರ್ಯಂತ ವೂ, ಅಷ್ಟಮೀ ನವಮಿಯ ಸಂಧಿಯಲ್ಲಿ ಆ ಹೋಮವು ನಡೆಯಬೇಕು.

ರಾತ್ರಿಯಲ್ಲಿ ಸಂಧಿಯುಂಟಾದರೆ, ರಾತ್ರಿಯಲ್ಲಿ ಹೋಮಾದಿಗಳನ್ನು ಮಾಡಕೂಡದಾದ್ದರಿಂದ ನವಮಿಯಲ್ಲಿಯೇ ಪ್ರಾರಂಭವನ್ನೂ ಪ್ರೂರ್ತಿಯನ್ನೂ ಮಾಡಬೇಕು ಎಂದು ಕೆಲವರು ಹೇಳುವರು. ಇಲ್ಲಿ ತಮ್ಮ ಕುಲಪದ್ಧತಿಯಂತೆ ವ್ಯವಸ್ಥೆಯು. ಈ ಹೋಮವನ್ನು,ನವಾರ್ಣವಮಂತ್ರ, 'ಜಯಂತೀ ಮಂಗಲಾಕಾಲೀ' ಎಂಬ ಶ್ಲೋಕ, 'ನಮೋದೇವ್ಯೈ ಮಹಾದೇವ್ಯೈ' ಎಂಬ ಶ್ಲೋಕ, ಸಪ್ತಶತೀಶ್ಲೋಕಗಳು, ಕವಚ, ಅರ್ಗಳ, ಕೀಲಕ, ಗಳೆಂಬ ಮೂರು ರಹಸ್ಯ ಶ್ಲೋಕದೊಡನೆ ಸಪ್ತಶತೀ ಸ್ತೋತ್ರದ ಸಪ್ತಶತ ಮಂತ್ರಗಳು, ಇವುಗಳಲ್ಲೊಂದರಿಂದ ಮಾಡಬೇಕು. ಸಪ್ತಶತ ಮಂತ್ರಗಳ ವಿಭಾಗವನ್ನು ಗ್ರಂಥಾಂತರದಿಂದ ತಿಳಿಯಬೇಕು. ಇಲ್ಲಿಯೂ ಹೋಮಮಂತ್ರಗಳ ವಿಷಯದಲ್ಲಿ ತಮ್ಮ ಕುಲಪದ್ಧತಿ ಯಾವುದೋ ಅದನ್ನುಪಯೋಗಿಸಿ ಕೊಳ್ಳಬೇಕು. ತುಪ್ಪವನ್ನೂ, ಬಿಳಿಯ ಎಳ್ಳನ್ನೂ ಕೂಡಿಸಿದ ಪಾಯಸದಿಂದಾಗಲಿ, ಬರೀ ಎಳ್ಳಿನಿಂದಾಗಲಿ ಹೋಮಮಾಡಬೇಕು. ಮುತ್ತುಗದಹೂ, ಗರಿಕೆ,ಸಾಸುವೆ, ಅರಲು, ಅಡಕೆ, ಯವೆ, ಬಾಳೆಯಹಣ್ಣು, ರಕ್ತಚಂದನದ ಚಕ್ಕೆ, ಬಗೆಬಗೆಯ ಹಣ್ಣುಗಳು, ಇವುಗಳನ್ನೆಲ್ಲಾ ಪಾಯಸದಲ್ಲಿ ಮಿಶ್ರಮಾಡಬೇಕೆಂದು ಕೆಲವೆಡೆಗಳಲ್ಲಿ ಹೇಳಿದೆ. ಜಪಸಂಖ್ಯೆಯ ಹತ್ತರಷ್ಟು ಹೋಮವನ್ನು ಮಾಡಬೇಕು. ಕುಲಪದ್ಧತಿ ಯಿದ್ದರೆ ನೃಸಿಂಹ, ಭೈರವ, ಈ ದೇವತಾಕವಾದ ಮಂತ್ರಗಳಿಂದಲೂ ಹೋಮ ಮಾಡಬೇಕು. ಈ ವಿಷಯದಲ್ಲಿ ಗ್ರಹಮುಖದೊಡನೆ ವಿಸ್ತಾರವಾದ ಪ್ರಯೋಗವು ಕೌಸ್ತುಭದಲ್ಲಿರುವುದು. ಬಲಿದಾನವು-ಬ್ರಾಹ್ಮಣನು ಉದ್ದು ಮೊದಲಾದವುಗಳಿಂದ ಕೂಡಿದ ಅನ್ನದಿಂದಾಗಲಿ, ಕುಂಬಳಕಾಯಿಂದಾಗಲಿ ಬಲಿಯನ್ನು ಹಾಕಬೇಕು. (ಬ್ರಾಹ್ಮಣನು ಪಾರಣೆಯ ದಿನದಲ್ಲಿ ಕೂಶ್ಮಾಂಡ ಬಲಿಯನ್ನುಕೊಡಬೇಕು) 'ಕೂಷ್ಮಾಂಡೋ ಬಲಿರೂಪೇಣ ಮಮ ಭಾಗ್ಯಾ ದುಪಸ್ಥಿತಃ । ಪ್ರಣಮಾಮಿತತ್ಸರ್ವ ರೂಪಿಣಂ ಬಲಿರೂಪಿಣಂ ॥೧॥ ಚಂಡಿಕಾ ಪ್ರೀತಿದಾನೇನ ದಾತುರಾಪದ್ವಿನಾಶನಂ । ಚಾಮುಂಡಾ ಬಲಿರೂಪಾಯ ಬಲೀ ತುಭ್ಯಂ ನಮೋಽಸ್ತುತೇ ॥ ೨ ॥' ನನ್ನ ಪುಣ್ಯವಶದಿಂದ ಬಲಿರೂಪವಾಗಿ ಈಕುಂಬಳಕಾಯಿ ನನಗೆ ಸಿಕ್ಕಿತು, ಸರ್ವರೂಪಿಯಾಗಿ ಬಲಿರೂಪದಿಂದಿರುವ

ಈ ಕೂಶ್ಮಾಂಡಕ್ಕೆ ನಮಸ್ಕರಿಸುವೆನು ॥ ೨॥ ಚಂಡಿಗೆ ಪ್ರೀತಿಯನ್ನುಂಟು ಮಾಡುವುದರಿಂದ ಬಲಿಕೊಡುವವನ ವಿಪತ್ತುಗಳನ್ನು ಪರಿಹಾರಮಾಡು ವಚಂಡಿಕಾದೇವಿಯ ಬಲಿರೂಪವಾದ ಬಲಿಯೇ! ನಿನಗೆನಮಸ್ಕಾರವು॥ ೩॥ ಎಂದು ಪ್ರಾರ್ಥಿಸಬೇಕು. 'ಯಜ್ಞಾರ್ಥಂ ಬಲಯಃ ಸೃಷ್ಟಾಃ ಸ್ವಯಮೇವ ಸ್ವಯಂಭುವಾ । ಅತಸ್ತ್ವಾಂ ಘಾತಯಾ ಮ್ಯದ್ಯ ತಸ್ಮಾ ದ್ಯಜ್ಞೇವಧೋ ವಧಃ ॥೧॥' ಬ್ರಹ್ಮನು ಯಜ್ಞಗಳಿಗಾಗಿ ತಾನೇ ಬಲಿಗಳನ್ನು ಸೃಷ್ಟಿಸಿದ್ದಾನೆ. ಆದ್ದರಿಂದ ಎಲೈ ಬಲಿಯೇ ! ನಿನ್ನನ್ನು ನಾನು ಕತ್ತರಿಸುವೆನು. ಯಜ್ಞದಲ್ಲಿ ಮಾಡಿದ ವಧೆಯು ಕೊಲೆಯಲ್ಲವು ॥ ೧ ॥ ಓಂ, ಹ್ರೀಂ,ಐಂ, ಹ್ರೀಂ,ಕೌಶಿಕೀ ಕೂಶ್ಮಾಂಡ ರಸೇನಾಪ್ಯಾಯತಾಂ,ಎಂದು ಬಲಿಯನ್ನು ಕೊಟ್ಟು, ಕಾಲುಗಳನ್ನು ತೊಳೆದುಕೊಂಡು ಶುದ್ಧಾಚಮನಮಾಡಿ, 'ಶಾಂತಾಪೃಥಿವೀ' ಎಂಬ ಮಂತ್ರವನ್ನು ಹೇಳಿ, ಶಾಂತಿಃ ಶಾಂತಿಶ್ಶಾಂತಿಃ, ಎಂದು ಹೇಳಬೇಕೆಂದು ಕೆಲವು ಪುಸ್ತಕಗಳಲ್ಲಿ ಅಧಿಕ (ಹೆಚ್ಚು) ಪಾಠವಿದೆ. ಅಥವಾ ತುಪ್ಪದಲ್ಲಿ ಕಲಸಿದ ಅಕ್ಕಿಯ ಹಿಟ್ಟ ಮೊದಲಾದವುಗಳಿಂದ, ಸಿಂಹ, ಹುಲಿ, ಮನುಷ್ಯ, ಮೇಕೆ, ಮುಂತಾದ ಆಕಾರವನ್ನು ಮಾಡಿ, ಕತ್ತಿಯಿಂದ ಕಡಿಯಬೇಕು. ಬ್ರಾಹ್ಮಣನು - ಪಶು ಮಾಂಸ, ಮದ್ಯ, ಇವುಗಳಿಂದ ಬಲಿ ಹಾಕಿದರೆ ಜಾತಿ ಭ್ರಷ್ಟನಾಗುವನು. ಸಕಾಮರಾದ ಕ್ಷತ್ರಿಯ ಮೊದಲಾದವರು ಸಿಂಹ, ಹುಲಿ, ಕೋಣ, ಮೇಕೆ, ಹಂದಿ, ಮೃಗ, ಪಕ್ಷಿ, ಮತ್ಸ್ಯ, ಮುಂಗಸಿ, ಉಡ, ಮೊದಲಾದ ಪ್ರಾಣಿ ದೇಹರಕ್ತದಿಂದಲೂ ಬಲಿಯನ್ನು ಕೊಡಬೇಕು. ಜಂಕೆಯನ್ನು ಕ್ಷತ್ರಿಯಾದಿಗಳೂಕೂಡ ಬಲಿ ಮಾಡಕೂಡದು. ಪಂಚ ಬಲಿದಾನಮಂತ್ರ ಮೊದಲಾದದ್ದು ನಿರ್ಣಯ ಸಿಂಧುವಿನಲ್ಲಿದೆ. ಶತ ಚಂಡೀ, ಸಹಸ್ರ ಚಂಡೀ ಪ್ರಯೋಗಗಳನ್ನು ಕೌಸ್ತುಭಾದಿ ಗ್ರಂಥಗಳಲ್ಲಿ ತಿಳಿಯಬಹುದು. ಆಶೌಚದ್ವಯದಲ್ಲಿಯೂ ಕೂಡ ನವಮಿಯಲ್ಲಿ ಹೋಮವನ್ನೂ, ಕಲಶ ಮೊದಲಾದವುಗಳ ವಿಸರ್ಜನೆಯನ್ನೂ ಬ್ರಾಹ್ಮಣರ ಮೂಲಕವಾಗಿ ಮಾಡಿಸಿ, ತಾನು ಪಾರಣೆಯನ್ನು ಮಾಡಿ, ಆಶೌಚವು ಮುಗಿದಮೇಲೆ ಬ್ರಾಹ್ಮಣ ಭೋಜನವನ್ನೂ, ದಾನದಕ್ಷಿಣೆಗಳನ್ನೂ ಕೊಡಬೇಕು. ರಜಸ್ವಲೆಯೂ ಸಹ, ಹೀಗೆಯೇ ಪಾರಣೆಯ ಕಾ

ಲದಲ್ಲಿ ಪಾರಣೆಯನ್ನು ಮಾಡಿ ಶುದ್ಧಸ್ನಾನವಾದಮೇಲೆ ದಾನಾದಿಗಳನ್ನು ಮಾಡಬೇಕು. ವಿಧವೆಗೆ ರಜಸ್ವಲೆಯಾದ ಕಾಲದಲ್ಲಿ ಭೋಜನವು ನಿಷೇಧವಾದ್ದರಿಂದ ಶುದ್ಧಳಾದ ಮೇಲೆಯೇ ಪಾರಣೆಯನ್ನು ಮಾಡಬೇಕು. ಉಳಿದ ವ್ರತಗಳಲ್ಲಿಯೂ ಹೀಗೆಯೇ ಎಂದು ತಿಳಿಯತಕ್ಕದ್ದು.

—ಆಯುಧ, ಅಶ್ವ ಇವುಗಳಪೂಜೆ—

ಶಸ್ತ್ರಾಸ್ತ್ರಾದಿಗಳಪೂಜೆ—ಪ್ರತಿಪತ್ತು ಮೊದಲ್ಗೊಂಡು ಅಷ್ಟಮಿವರೆಗೆ ' ಲೋಹಾಭಿಸಾರಿಕ ' (ಆಯುಧಗಳನ್ನು ತೆಗೆದು ಸರಿಮಾಡಿಕೊಳ್ಳುವುದು.) ಎಂಬ ಕರ್ಮವನ್ನು ರಾಜರು ನಡೆಯಿಸಬೇಕು. ಅದರಲ್ಲಿ ಛತ್ರ, ಚಾಮರ ಮೊದಲಾದ ರಾಜ ಚಿಹ್ನೆಗಳಿಗೂ, ಆನೆ, ಕುದುರೆ, ಮೊದಲಾದ ವಾಹನಗಳಿಗೂ, ಧನುಸ್ಸು ಮೊದಲಾದ ಆಯುಧಗಳಿಗೂ, ಪೂಜೆ ಹೋಮ ಮೊದಲಾದುವುಗಳನ್ನು ಮಾಡಬೇಕು, ದೊರೆಗಳು ಮಾತ್ರವಲ್ಲದೆ ಕುದುರೆಯನ್ನು ಸಾಕಿರುವ ಇತರರೂ ಕೂಡ ಸ್ವಾತೀನಕ್ಷತ್ರಯುಕ್ತವಾದ ಆಶ್ವಯುಜಶುದ್ಧ ಪ್ರತಿಪತ್ತು ಅಥವಾ ದ್ವಿತೀಯೆಯನ್ನು ಪ್ರಾರಂಭ ಮಾಡಿಕೊಂಡು ನವಮೀಪರ್ಯಂತವಾಗಿಯೂ, 'ವಾಜಿ ನೀರಾಜನ' (ಕುದುರೆಗೆ ಮಂಗಳಾರತಿ) ಎಂಬ ಕರ್ಮವನ್ನು ಮಾಡುವರು. ಅದಕ್ಕಾಗಿ ಉಚ್ಚೈಃಶ್ರವಸ್ಸಿನ ಪೂಜೆಯನ್ನೂ ರೈವತದಪೂಜೆಯನ್ನೂ ಪ್ರತಿಮೆಗಳ ಮೂಲಕವಾಗಿ ಮಾಡಬೇಕು. ಪ್ರತ್ಯಕ್ಷವಾಗಿ ಅಶ್ವಪೂಜೆ, ನೀರಾಜನಗಳನ್ನೂ ಮಾಡಬೇಕು. ಈ ಎರಡು ಕರ್ಮಗಳಿಗೂ ಬೇಕಾದ ಪೂಜಾಮಂತ್ರ ಹೋಮಾದಿಗಳ ಮಂತ್ರಗಳಿಂದ ಕೂಡಿದ ವಿಸ್ತಾರವಾದ ಪ್ರಯೋಗವನ್ನು ಕೌಸ್ತುಭದಲ್ಲಿ ತಿಳಿಯ ತಕ್ಕದ್ದು. ಈಗ ಕುದುರೆಗಳನ್ನಿಟ್ಟಿರುವ ಸಾಮಾನ್ಯ ಜನರು ವಿಜಯಾ ದಶಮಿಯಲ್ಲಿ ಕುದುರೆಗಳನ್ನು ನೀರಿನಲ್ಲಿ ಬಿಟ್ಟು ತೊಳೆದು, ಹೂಮಾಲೆಗಳಿಂದ ಅಲಂಕರಿಸಿ, ಕುದುರೆಯ ಕಾಯಿಗಳಲ್ಲಿ ಕಟ್ಟುತ್ತಾರೆ. 'ಗಂಧರ್ವ ಕುಲಜಾತಸ್ತ್ವಂ ಮಾಭೂಯಾಃ ಕುಲದೂಷಕಃ । ಬ್ರಹ್ಮಣಸ್ಸತ್ಯವಾಕ್ಯೇನ ಸೋಮಸ್ಯ ವರುಣಸ್ಯಚ ॥೧॥ ಪ್ರಭಾವಾಚ್ಚ ಹುತಾಶಸ್ಯ ವರ್ಧಯ ತ್ವಂ ತುರಂಗಮಾನ್ । ರಿಪೂನ್ವಿಜಿತ್ಯ ಸಮರೇ ಸಹಭರ್ತ್ರಾ ಸುಖೀ ಭವ' ॥೨॥ ಗಂಧರ್ವವಂಶದಲ್ಲಿ ಹುಟ್ಟಿದ ನೀನು ವಂಶಕ್ಕೆ ಅಪಕೀರ್ತಿಯನ್ನು ತಾರದೆ. ಬ್ರಹ್ಮನಸತ್ಯ ವಚನದಿಂದಲೂ,

ಚಂದ್ರವರುಣ ॥ ೧ ॥ ಅಗ್ನಿ ಇವರ ಮುಖವೊಯಿಂದಲೂ ಕುದುರೆಗಳನ್ನು ಅಭಿವೃದ್ಧಿಗೊಳಿಸಿ, ಯುದ್ಧದಲ್ಲಿ ಶತ್ರುಗಳನ್ನು ಜಯಿಸಿ ಯಜಮಾನನೊಡನೆ ಸುಖದಿಂದಿರು ॥೨॥ ಎಂಬ ಮಂತ್ರದಿಂದ ಕುದುರೆಗೆ ಪೂಜೆಯನ್ನಾದರೂ ಮಾಡುವುದು ಯುಕ್ತವಾದದ್ದು.

—ಪಾರಣೆಗೂ ವಿಸರ್ಜನೆಗೂ ಕಾಲವು—

ಪಾರಣೆಗೂ, ವಿಸರ್ಜನೆಗೂ, ಕಾಲಗಳು- ದಶಮಿಯಲ್ಲಿ ವಿಸರ್ಜನೆಯನ್ನು ಮಾಡಬೇಕು. ಎರಡು ದಿನಗಳಲ್ಲಿ ದಶಮಿಇದ್ದರೆ ಮೊದಲದಶಮಿಗೆ ಶ್ರವಣದ ಕೊನೆಯ ಪಾದದ ಯೋಗವಿದ್ದರೆ ಆದಿನವೇ ವಿಸರ್ಜನೆಮಾಡಬೇಕು. ಆ ದಿನದಲ್ಲಿ ಅದರ ಯೋಗವಿಲ್ಲದಿದ್ದರೆ ಎರಡನೆಯ ದಶಮಿಯಲ್ಲಿಯೇ ವಿಸರ್ಜನೆಯು. ಎರಡನೆಯ ದಿನದಲ್ಲಿ ದಶಮಿ ಇಲ್ಲದಿದ್ದರೆ ಪೂರ್ವ ದಶಮಿಗೆ ಶ್ರವಣ ನಕ್ಷತ್ರ ಯೋಗವಿದ್ದರೂ, ಇಲ್ಲದಿದ್ದರೂ ಪೂರ್ವ ದಶಮಿಯಲ್ಲಿಯೇ ವಿಸರ್ಜನೆ ಮಾಡಬೇಕು. ನಕ್ಷತ್ರಯೋಗ ವಿರಬೇಕಾದದ್ದೇ ಮುಖ್ಯವೆಂಬ ವಿಧಿಗೆ ಅನುಸಾರವಾಗಿ ಮಾಡುವ ವಿಸರ್ಜನೆಯು ಅಪರಾಹ್ಣದಲ್ಲಿಯೂ ಆಗಬಹುದು. ಇಲ್ಲದಿದ್ದರೆ ಪ್ರಾತಃಕಾಲದಲ್ಲಿಯೇ ಆಗಬೇಕು. ಅದರಲ್ಲಿ ಮಣ್ಣು ಮೊದಲಾದವುಗಳ ಪ್ರತಿಮೆಯನ್ನು ವಿಸರ್ಜನೆ ಮಾಡಿದಮೇಲೆ ನೀರಿನಲ್ಲಿ ಬಿಡಬೇಕು. ವಂಶಪಾರಂಪರ್ಯವಾಗಿ ಪೂಜಿಸುತ್ತಿರುವ ಲೋಹಪ್ರತಿಮೆಯನ್ನು ಕಲಶ ಮೊದಲಾದವುಗಳಿಂದ 'ಉತ್ತಿಷ್ಠ' ಮೊದಲಾದ ಮಂತ್ರಗಳೊಡನೆ ಎತ್ತಿಡುವುದು ಮಾತ್ರವೇ. ಪರಿತ್ಯಾಗ ಮಾಡಕೂಡದು. ಯಾವ ದಿನದಲ್ಲಿ ದೇವತಾವಿಸರ್ಜನೆ ಯಾಗುವುದೋ ಆದಿನವೇ ನಿಯಮವನ್ನೂ ತ್ಯಾಗಮಾಡುವುದು ತಕ್ಕದ್ದಾದ್ದರಿಂದ ವಿಸರ್ಜನೆಮಾಡಿದ ಕೂಡಲೇ ಆದಿನದಲ್ಲಿಯೇ ಪಾರಣೆಯನ್ನು ಮಾಡಬೇಕು. ದಶಮಿಯಲ್ಲಿ ವಿಸರ್ಜನೆಯನ್ನು ಮಾಡಿದಾಗ್ಯೂ ನವಮಿಯಲ್ಲೇ ಪಾರಣೆಯನ್ನು ಮಾಡಬೇಕು. 'ನವಮ್ಯಾಂ ಪಾರಣಂ ಕುರ್ಯಾತ್ । ದಶಮ್ಯಾ ಮಭಿಷೇಕಂಚ ಕೃತ್ವಾ ಮೂರ್ತಿಂ ವಿಸರ್ಜಯೇತ್' ಎಂಬ ವಚನವಿರುವುದು ಎಂದು ಹೇಳುವವರು ಕೆಲವರುಂಟು. ಈ ವಿಷಯದಲ್ಲಿ ವ್ಯವಸ್ಥೆ ಹೇಗೆಂದರೆ---ಮೊದಲ ದಿನದಲ್ಲಿ ಸ್ವಲ್ಪಕಾಲ ವಿರುವ ಅಷ್ಟಮಿಯಿಂದ ಕೂಡಿದ ನವಮಿಯೂ, ಎರಡ

ನೆಯ ದಿನದಲ್ಲಿ ಪಾರಣೆಗೆ ಸಾಕಾದಷ್ಟು ಕಾಲವುಳ್ಳ ನವಮಿಯಿಂದ ಕೂಡಿದ ದಶಮಿಯೂ, ಅದರ ಎರಡನೆಯದಿನದಲ್ಲಿ ಶ್ರವಣ ನಕ್ಷತ್ರದೊಡನೆ ಕೂಡಿ ವಿಸರ್ಜನೆಗೆ ಯೋಗ್ಯವಾದ ದಶಮಿಯೂ ಇದ್ದರೆ, ಅಷ್ಟಮಿ, ನವಮಿಗಳ ಉಪವಾಸವು ಮೊದಲ ದಿನದಲ್ಲಿಯೇ ನಡೆಯಬಹುದಾಗಿ ಉಳಿದ ನವಮಿಯಲ್ಲಿ ಪಾರಣೆಯೂ, ಉಳಿದ ದಶಮಿಯಲ್ಲಿ ವಿಸರ್ಜನೆಯೂ ನಡೆಯಬೇಕು. ಉಳಿದ ನವಮಿಯ ದಿನದಲ್ಲಿಯೇ ಶ್ರವಣದೊಡನೆ ಕೂಡಿದ ವಿಸರ್ಜನೆಗೆ ಯೋಗ್ಯವಾದ ದಶಮಿ ಇದ್ದರೆ ಆಗ ವಿಸರ್ಜನಾನಂತರದಲ್ಲಿ ಆದಿನವೇ ಪಾರಣೆಯನ್ನು ಮಾಡಬೇಕು. ಪೂರ್ವ ದಿನದಲ್ಲಿ ೬೦ಗಳಿಗೆ ಅಷ್ಟಮಿಯೂ, ಪರದಿನದಲ್ಲಿ ಅಷ್ಟಮಿಯ ಶೇಷದಿಂದ ಕೂಡಿದ ನವಮಿಯೂ, ಅನಂತರದಲ್ಲಿ ಶೇಷನವಮಿಯಿಂದ ಕೂಡಿದದಶಮಿಯೂ ಇದ್ದರೆ, ಆಗಲೂ ನವಮಿಯಿಂದ ಕೂಡಿದ ದಶಮಿಯಲ್ಲಿಯೇ ವಿಸರ್ಜನೆಯನ್ನೂ ಪಾರಣೆಯನ್ನೂ ಮಾಡಬೇಕು. ನವಮಿಯು ೬೦ ಗಳಿಗೆ ಯಿದ್ದು ಎರಡನೆಯ ದಿನದಲ್ಲಿ ಶೇಷನವಮಿಯಿಂದ ಕೂಡಿದ ದಶಮಿಯೂ ಇದ್ದರೆ ಆಗಲೂ ನವಮೀ ಯುಕ್ತವಾದ ದಶಮಿಯಲ್ಲಿಯೇ ವಿಸರ್ಜನೆಯೂ ಪಾರಣೆಯೂ ನಡೆಯಬೇಕು. ಅಷ್ಟಮಿ, ನವಮಿ, ದಶಮಿಗಳು ಸೂರ್ಯೋದಯ ಮೊದಲ್ಗೊಂಡು, ಸೂರ್ಯಾಸ್ತಮಾನ ಪರ್ಯಂತವಾಗಿ ಅಖಂಡವಾಗಿದ್ದು ಆಯಾ ಕರ್ಮಕ್ಕೆ ತಕ್ಕಷ್ಟು ಕಾಲವಿರುವುದಾಗಿದ್ದರೆ, ದಾಕ್ಷಿಣಾತ್ಯರಿಗೆ (ದಕ್ಷಿಣ ದೇಶದವರು) ನವಮಿಯಲ್ಲಿ ಪಾರಣ ಮಾಡುವುದೇ ಆಚಾರವಾದ್ದರಿಂದ ನವಮಿಯಲ್ಲಿಯೇ ಪಾರಣೆಯೂ, ವಿಸರ್ಜನೆಯೂ, ನಡೆಯಬೇಕು. ದಶಮಿಯಲ್ಲಿಯೇ ಮಾಡುವ ಪದ್ಧತಿಯುಳ್ಳವರಿಗೆ ದಶಮಿಯಲ್ಲಿಯೇ ಎರಡೂ ನಡೆಯಬೇಕು.

—ವಿಜಯ ದಶಮೀ—

ವಿಜಯದಶಮಿಯು:- - ವಿಜಯ ದಶಮಿಯು: —ಪರದಿನದಲ್ಲಿ ಅಪರಾಹ್ಣ ವ್ಯಾಪ್ತಿಯಿದ್ದರೆ ಪರದಿನವನ್ನು ಗ್ರಹಿಸಬೇಕು. ಎರಡು ದಿನಗಳಗೂ ಅಪರಾಹ್ಣ ವ್ಯಾಪ್ತಿ ಇದ್ದರೆ, ಶ್ರವಣನಕ್ಷತ್ರ ವ್ಯಾಪ್ತಿ ಯಿಲ್ಲದಿದ್ದರೂ, ಇದ್ದರೂ ಮೊದಲತಿಥಿಯನ್ನೇ ಗ್ರಹಿಸಬೇಕು. ಎರಡು ದಿನಗಳಲ್ಲಿಯೂ ದಶಮಿಗೆ ಅಪರಾಹ್ಣವ್ಯಾಪ್ತಿ ಇಲ್ಲದಿದ್ದರೂ, ಶ್ರವಣಯೋಗವಿರು

ವುದು, ಇಲ್ಲದಿರುವುದು, ಇವುಗಳಿಂದ ಪೂರ್ವದಿನವನ್ನೇ ಗ್ರಹಿಸಬೇಕು. ಎರಡು ದಿನಗಳಿಗೂ ಅಪರಾಹ್ಣವ್ಯಾಪ್ತಿ ಇದ್ದರೂ ಇಲ್ಲದಿದ್ದರೂ ಎಂದಿಗೆ ಶ್ರವಣಯೋಗವಿದೆಯೋ ಆ ದಿನವನ್ನೇ ಗ್ರಹಿಸಬೇಕು. ಹೀಗೆಯೇ ಅಪರಾಹ್ಣಕ್ಕೆ ಒಂದು ಭಾಗಕ್ಕೆ ವ್ಯಾಪ್ತಿ ಇರುವ ವಿಷಯದಲ್ಲೂ ಊಹಿಸಬೇಕು. ಪೂರ್ವದಿನದಲ್ಲಿಯೇ ಅಪರಾಹ್ಣವ್ಯಾಪ್ತಿಯೂ, ಎರಡನೆಯ ದಿನದಲ್ಲಿ ಶ್ರವಣಯೋಗವಿಲ್ಲದಿರುವುದೂ ಆದರೆ, ಆಗಲೂ ಮೊದಲನೆಯದಕ್ಕೇ ಗ್ರಹಣವು. ಪೂರ್ವದಿನದಲ್ಲಿಯೇ ಅಪರಾಹ್ಣವ್ಯಾಪ್ತಿಯೂ ಪರದಿನದಲ್ಲಿ ಮೂರು ಮುಹೂರ್ತ ಮೊದಲಾದ ಕಾಲಗಳ ವ್ಯಾಪ್ತಿಯೂ, ಇರುವ ದಶಮಿಯು ಅಪರಾಹ್ಣಕ್ಕಿಂತಲೂ ಮುಂಚೆಯೇ ಮುಗಿಯುವುದಾಗಿಯೂ, ಎರಡನೆಯ ದಿನದಲ್ಲಿಯೇ ಶ್ರವಣಯೋಗವಿರುವುದಾಗಿಯೂ ಇರುವುದೋ ಆಗ ಅಪರಾಹ್ಣದಲ್ಲಿ ದಶಮಿ ಇಲ್ಲದಿದ್ದಾಗ್ಯೂ, 'ಯಾಂತಿಥಿಂ ಸಮನುಪ್ರಾಪ್ಯ ಉದಯಂ ಯಾತಿ ಭಾಸ್ಕರಃ' ಮೊದಲಾದ ವಚನಗಳಿಂದ ಶ್ರವಣಯೋಗದಿಂದ ಗ್ರಾಹ್ಯವಾದ ಉದಯಕಾಲದಲ್ಲಿ ಸ್ವಲ್ಪಕಾಲವಾತ್ರವಿರುವ ದಶಮಿಯು ಕರ್ಮಕಾಲದಲ್ಲಿ ಇರುವುದರಿಂದ ಎರಡನೆಯ ತಿಥಿಯನ್ನೇ ಗ್ರಹಿಸಬೇಕು. ಎರಡನೆಯ ದಿನದ ಅಪರಾಹ್ಣಕಾಲಕ್ಕೆ ಶ್ರವಣವಿದ್ದರೇನೇ. ಶ್ರವಣವು ಅಪರಾಹ್ಣಕ್ಕಿಂತ ಮುಂಚೆಯೇ ಮುಗಿಯುವುದಾಗಿದ್ದರೆ, ಮೊದಲನೆಯದನ್ನೇ ಗ್ರಹಿಸಬೇಕೆಂದು ಹೇಳುವ ಸಿಂಧುಕಾರನ ವಚನವು ಯುಕ್ತವಾಗಿರುವುದು. ಪರದಿನದಲ್ಲಿಯೇ ಅಪರಾಹ್ಣವ್ಯಾಪ್ತಿಯೂ, ಪೂರ್ವದಿನದಲ್ಲಿಯೇ ಅಪರಾಹ್ಣವಲ್ಲದ ಸಾಯಾಹ್ನ ಮೊದಲಾದವುಗಳಲ್ಲಿ ಶ್ರವಣಯೋಗವೂ ಬಂದರೆ ಎರಡನ್ನೆಯದನೇ ಗ್ರಹಿಸಬೇಕೆಂದು ತೋರುವುದು.

## —ಅಪರಾಜಿತಾ ಶಮೀಪೂಜೆಯು—

ಅಪರಾಜಿತಾ ಶಮೀಪೂಜೆಯು— ಈ ದಿನದಲ್ಲಿ ಅಪರಾಜಿತಾ ಪೂಜೆಯೂ, ಸೀಮೋಲ್ಲಂಘನೆಯೂ. (ಊರಿನ ಎಲ್ಲೆಯನ್ನು ಬಿಟ್ಟು ಹೊರಗೆ ಹೋಗಿಬರುವದು) ಶಮೀಪೂಜೆಯೂ, ಪರದೇಶಯಾತ್ರೆಗೆ ಹೋಗತಕ್ಕವರ ಪ್ರಯಾಣವೂ ನಡೆಯಬೇಕು. ಅಪರಾಹ್ಣದಲ್ಲಿ ಊರಿನ ಈಶಾನ್ಯ ದಿಕ್ಕಿಗೆ ಹೋಗಿ ಶುದ್ಧವಾದ ಸ್ಥಳದಲ್ಲಿ ನೆಲವನ್ನು ಸಾರಿಸಿ ಅಷ್ಟದಳಪ

ಧ್ಮವನ್ನು ಬರೆದು 'ಸಕುಟುಂಬನಾದ ನನಗೆ ಕ್ಷೇಮವುಂಟಾಗುವುದಕ್ಕೆಂದು ಅಪರಾಜಿತಾ ಪೂಜೆಯನ್ನು ಮಾಡುವೆನು' ಎಂದು ಸಂಕಲ್ಪಮಾಡಿ 'ಮಧ್ಯೇ ಅಪರಾಜಿತಾಯೈನಮಃ' ಎಂದು ಅಪರಾಜಿತೆಯನ್ನು ಆವಾಹನೆಮಾಡಿ ಅದರ ದಕ್ಷಿಣದಲ್ಲಿ, ಕ್ರಿಯಾಶಕ್ತ್ಯೈನಮಃ--ಎಂದು ಜಯಾದೇವತೆಯನ್ನೂ,ಎಡಗಡೆಯಲ್ಲಿ, ಉಮಾಯೈನಮಃ-ಎಂದು ವಿಜಯೆಯನ್ನೂ, ಆವಾಹನೆಮಾಡಿ, ಅಪರಾಜಿತಾಯೈನಮಃ, ಜಯಾಯೈನಮಃ, ವಿಜಯಾಯೈನಮಃ, ಎಂದು ಷೋಡಶೋಪಚಾರ ಪೂಜೆಯನ್ನು ಮಾಡಿ ಪ್ರಾರ್ಥಿಸಬೇಕು. 'ಇಮಾಂ ಪೂಜಾಂ ಮಯಾ ದೇವಿ ಯಥಾಶಕ್ತಿ ನಿವೇದಿತಾಂ। ರಕ್ಷಾರ್ಥಂತು ಸಮಾದಾಯ ವ್ರಜ ಸ್ವಸ್ಥಾನ ಮುತ್ತಮಂ॥೧॥' ಎಲೌದೇವಿಯೇ ! ನನ್ನ ಶಕ್ತ್ಯನುಸಾರವಾಗಿ ನಾನು ಮಾಡಿದ ಪೂಜೆಯನ್ನು ಸ್ವೀಕರಿಸಿ ನನಗೆ ಕ್ಷೇಮವನ್ನುಂಟು ಮಾಡಿ ನಿನ್ನ ಉತ್ತಮಸ್ಥಾನಕ್ಕೆ ತೆರಳು ॥೧॥ ಎಂಬುದೇ ಪ್ರಾರ್ಥನಾ ಮಂತ್ರವು. ಇಲ್ಲಿ ದೊರೆಗಳು ಸಂಕಲ್ಪಮಾಡುವುದರಲ್ಲಿ 'ಯಾತ್ರೆಯಲ್ಲಿ ಜಯವುಂಟಾಗುವು ದಕ್ಕಾಗಿ' ಎಂಬುದನ್ನು ಹೆಚ್ಚಾಗಿ ಹೇಳಿಕೊಳ್ಳಬೇಕು. ಪೂಜೆ, ನಮಸ್ಕಾರ ಇವುಗಳಾದ ಮೇಲೆ 'ಹಾರೇಣತು ವಿಚಿತ್ರೇಣ ಭಾಸ್ವತ್ಕನಕಮೇಖಲಾ । ಅಪರಾಜಿತಾ ಭದ್ರರತಾ ಕರೋತು ವಿಜಯಂ ಮಮ'॥೧॥ ದಿವ್ಯಹಾರದಿಂದಲೂ, ಸುವರ್ಣಕಾಂಚಿಯಿಂದಲೂ, ಪ್ರಕಾಶಿಸುತ್ತಿರುವ ಮಂಗಳಕರಳಾದ ಅಪರಾಜಿತೆಯು ನನಗೆ ಜಯವನ್ನುಂಟು ಮಾಡಲಿ ॥ ೧ ॥ ಎಂಬುದೇ ಮೊದಲಾದ ಮಂತ್ರಗಳಿಂದ ವಿಜಯವನ್ನು ಕೇಳಿಕೊಂಡು ಪೂರ್ವದಂತೆಯೇ ವಿಸರ್ಜನೆ ಮಾಡಬೇಕೆಂಬುದು ಸಂಕ್ಷೇಪವು. ಅನಂತರದಲ್ಲಿ-ಎಲ್ಲ ಜನರೂ ಗ್ರಾಮದ ಹೊರಗೆ ಈಶಾನ್ಯದಿಕ್ಕಿನಲ್ಲಿರುವ ಶಮೀ ವೃಕ್ಷಸಮೀಪಕ್ಕೆ ಹೋಗಿ ಪೂಜೆಮಾಡುವರು. ಸೀಮೋಲ್ಲಂಘನೆಯನ್ನು ಶಮೀಪೂಜಾ ನಂತರದಲ್ಲಿಯೋ ಅಥವಾ ಮುಂಚಿತವಾಗಿಯೋ ಮಾಡಿಸಬೇಕು. ದೊರೆಗಳು,ಕುದುರೆಯನ್ನೇರಿ, ಮಂತ್ರಿ ಪುರೋಹಿತರೊಡನೆ ಶಮೀ(ಬನ್ನಿಯ) ವೃಕ್ಷದ ಬುಡಕ್ಕೆ ಹೋಗಿ ವಾಹನದಿಂದಿಳಿದು, ಸ್ವಸ್ತಿವಾಚನೆಯೊಡನೆ ಶಮೀಪೂಜೆಯನ್ನು ಮಾಡಿ,ಮುಂದೆ ಮಾಡಬೇಕಾದ ಕಾರ್ಯಗಳ ಉದ್ದೇಶವನ್ನು ಮಂತ್ರಿಗಳೊಡನೆ ಹೇಳುತ್ತಾ ಪ್ರದಕ್ಷಿಣೆ ಮಾಡಬೇಕು.

'ಸಕಲ ಪಾಪಗಳೂ, ಅಮಂಗಲವೂ ಪರಿಹಾರವಾಗಿ, ಕ್ಷೇಮವುಂಟಾಗುವುದಕ್ಕೂ, ಯಾತ್ರೆಯಲ್ಲಿ ಜಯವುಂಟಾಗುವುದಕ್ಕೂ, ಶಮೀಪೂಜೆಯನ್ನು ಮಾಡುವೆನು' ಎಂದು ಸಂಕಲ್ಪಮಾಡಬೇಕು. ಬನ್ನಿಯ ಮರವು ಇಲ್ಲದಿದ್ದರೆ 'ಅಶ್ಮಂತಕವೃಕ್ಷ ಪೂಜಾಂಕರಿಷ್ಯೇ' ಎಂದು ಸಂಕಲ್ಪಮಾಡುವುದು, ದೊರೆಯು ಶಮೀಮೂಲದಲ್ಲಿ ದಿಕ್ಪಾಲಕರ ಪೂಜೆಯನ್ನೂ, ವಾಸ್ತುದೇವತಾ ಪೂಜೆಯನ್ನೂ ಮಾಡಬೇಕು. 'ಅಮಂಗಲಾನಾಂ ಶಮನೀಂ ಶಮನೀಂ ದುಷ್ಕೃತಸ್ಯಚ । ದುಃಖ ಪ್ರಣಾಶಿನೀಂ ಧನ್ಯಾಂ ಪ್ರಪದ್ಯೇಹಂ ಶಮೀಂಶುಭಾಂ ॥೧॥' ಅಶುಭ ಪರಿಹಾರಕವಾಗಿಯೂ, ಪಾಪಪರಿಹಾರಕವಾಗಿಯೂ, ದುಃಖನಿವಾರಕವಾಗಿಯೂ, ಧನ್ಯವಾಗಿಯೂ, ಮಂಗಳ ಪ್ರದವಾಗಿಯೂ, ಇರುವ ಶಮಿಯನ್ನು ಸ್ತೋತ್ರ ಮಾಡುವೆನು ॥೧॥ ಇದು ಪೂಜಾಮಂತ್ರವು. 'ಶಮೀಶಮಯತೇ ಪಾಪಂಶಮೀಲೋಹಿತಕಂಟಕಾ । ಧರಿತ್ರ್ಯರ್ಜುನ ಬಾಣಾನಾಂ ರಾಮಸ್ಯ ಪ್ರಿಯವಾದಿನೀ ॥೧॥ ಕರಿಷ್ಯಮಾಣ ಯಾತ್ರಾಯಾಂ ಯಥಾಕಾಲಂ ಸುಖಂಮಯಾ । ತತ್ರನಿರ್ವಿಘ್ನ ಕರ್ತ್ರೀ ತ್ವಂ ಭವ ಶ್ರೀರಾಮಪೂಜಿತೇ ॥೨॥' ಶಮೀವೃಕ್ಷವು, ಕೆಂಪು ಮುಳ್ಳುಗಳುಳ್ಳದ್ದು. ಅದು ಪಾಪ ಪರಿಹಾರಕವಾಗಿಯೂ, ಅರ್ಜುನನ ಗಾಂಡೀವವೆಂಬ ಧನುಸ್ಸನ್ನುಧರಿಸಿದುದಾಗಿಯೂ ಶ್ರೀರಾಮನಿಗೆ ಇಷ್ಟ ಜನವನ್ನು ಹೇಳಿದುದಾಗಿಯೂ ಇದೆ. ॥೧॥ ರಾಮ ಚಂದ್ರನು ಪೂಜಿಸಿದ ಶಮಿಯೇ ! ನಾನು ಮಾಡುವ ಯಾತ್ರೆಯಲ್ಲಿ ಕಾಲಾನು ಗುಣವಾಗಿ ಸುಖವಾಗುವುದಕ್ಕೂ, ಪ್ರಯಾಣವು ನಿರ್ವಿಘ್ನವಾಗಿ ಸಾಗುವುದಕ್ಕೂ ನೀನು ಸಹಾಯಕಳಾಗಿರು ॥೨॥ ಎಂದು ಪೂಜೆಯಾದ ಮೇಲೆ ಪ್ರಾರ್ಥಿಸಬೇಕು. ಅಶ್ಮಂತಕ (ಆರೆಯಗಿಡ) ವೃಕ್ಷದಪೂಜೆಯಲ್ಲಿ 'ಅಶ್ಮಂತಕ ಮಹಾವೃಕ್ಷ ಮಹಾದೋಷ ನಿವಾರಣ । ಇಷ್ಟಾನಾಂದರ್ಶನಂ ದೇಹಿ ಶತ್ರೂಣಾಂಚ ವಿನಾಶನಂ' ॥೧॥ ಎಲೈ ಅಶ್ಮಂತಕವೃಕ್ಷವೇ ! ಸಕಲದೋಷಗಳನ್ನೂ ಪರಿಹರಿಸುವ ನೀನು, ಬಾಧುಗಳ ದರ್ಶನವನ್ನೂ, ಶತ್ರುಗಳ ನಾಶವನ್ನೂ ಉಂಟುಮಾಡು ॥೧॥ ಎಂದು ಪ್ರಾರ್ಥಿಸಬೇಕು. ರಾಜರು ಶತ್ರುಗಳ ಆಕಾರವನ್ನು ಮಾಡಿ ಆಯುಧದಿಂದ ಛೇದಿಸಬೇಕು. ಶಮೀವೃಕ್ಷದ ಕೊಂಬೆಗಳನ್ನು ಕೆಲವರು ಕಡಿದು ಕೊಂಡು ಬರುವರು,

ಅದಕೆ ಆಧಾರವೇನೋ ಗೊತ್ತಿಲ್ಲ. 'ಗೃಹೀತ್ವಾ ಸಾಕ್ಷತಾ ಮಾದ್ರಾಗ್ಂಶ ವಿಾಮೂಲಗತಾಂ ವೃದಂ। ಗೀತವಾದಿತ್ರ ನಿರ್ಘೋಷೈ ರಾನಯೇತ್ಸ್ವ ಗೃಹಂಪ್ರತಿ ॥೧॥ ತತೋಭೂಷಣ ವಸ್ತ್ರಾದಿ ಧಾರಯೇತ್ಸ್ವಜನೈಸ್ಸಹ ನೀರಾಜ್ಯಮಾನಃ ಪುಣ್ಯಾಭಿರ್ಯುವತೀಭಿಸ್ಸುಮಂಗಲಂ॥೨॥' ಮಂತ್ರಾಕ್ಷತೆ ಯೊಡನೆ ಬನ್ನಿಯಮರದ ಬುಡದಹಸಿಯಮಣ್ಣನ್ನು ತೆಗದುಕೊಂಡು, ಗೀತ ವಾದ್ಯ ಧ್ವನಿಗಳಿಂದ ಮನೆಗೆ ತರಬೇಕು. ॥೧॥ ಅನಂತರದಲ್ಲಿ ವಸ್ತ್ರಭೂಷ ಣಗಳನ್ನು ಧರಿಸಿ ಮಂಗಳಾರ್ಥವಾದ ಆರ್ತಿಯನ್ನು ಸುಮಂಗಲಿಯರಿಂದ ಮಾಡಿಸಿಕೊಂಡು ಸ್ವಜನಗಳ ಸಂಗಡ ಸಂತೋಷವಾಗಿರಬೇಕು.

—ವಿಜಯ ಮುಹೂರ್ತವು—

ವಿಜಯ ಮುಹೂರ್ತವು—ಪರದೇಶ ಪ್ರಯಾಣ ಮಾಡತಕ್ಕವರು ಚಂದ್ರ ಮೊದಲಾದ ಅನುಕೂಲಗಳಿಲ್ಲದಿದ್ದಾಗ್ಯೂ ಪ್ರಯಾಣವನ್ನು ವಿಜ ಯಮುಹೂರ್ತದಲ್ಲಿ ಮಾಡಬೇಕು. 'ಈಷತ್ಸಂಧ್ಯಾ ಮತಿಕ್ರಮ್ಯ ಕಿಂ ಚಿದುದ್ಭಿನ್ನ ತಾರಕಃ। ವಿಜಯೋ ನಾಮಕಾಲೋಯಂ ಸರ್ವಕಾರ್ಯಾ ರ್ಥಸಾಧಕಃ ॥೧॥' ಸಂಧ್ಯಾಕಾಲವು ಕಳೆದ ಸ್ವಲ್ಪಹೊತ್ತಿನ ಮೇಲೆ, ನಕ್ಷ ತ್ರಗಳು ಸಾಧಾರಣವಾಗಿ ಕಾಣಬರುವ ಹೊತ್ತು ವಿಜಯ ಮುಹೂರ್ತ ವೆನಿಸುವುದು. ಇದು ಸಕಲ ಕಾರ್ಯಗಳಲ್ಲಿಯೂ, ದಿಗ್ವಿಜಯವನ್ನುಂಟು ಮಾಡುವುದು॥೧॥ ಎಂಬುದೊಂದು ಪಕ್ಷವು. 'ಏಕಾದಶೋಮುಹೂರ್ತೋ ಪಿ ವಿಜಯಃ ಪರಿಕೀರ್ತಿತಃ। ತಸ್ಮಿನ್ ಸರ್ವೈರ್ವಿಧಾತವ್ಯಾ ಯಾತ್ರಾ ವಿ ಜಯ ಕಾಂಕ್ಷಿಭಿಃ॥೧॥' ಹನ್ನೊಂದನೆಯ ಮುಹೂರ್ತವು(೨೨ನೆಯಗಳಿಗೆ) ವಿಜಯವೆಂಬುದು. ಎಲ್ಲಾ ಜಯಾಪೇಕ್ಷೆ ಯುಳ್ಳವರೂ ಆಗ ಪ್ರಯಾಣ ವನ್ನು ಮಾಡಬೇಕು. ॥೧॥ ಎಂಬುದೊಂದು ಪಕ್ಷವು. ಹೀಗೆ ಎರ ಡೂ ವಿಜಯ ಮುಹೂರ್ತಗಳೆನಿಸುವವು. ಈ ಎರಡರಲ್ಲೊಂದು ಮು ಹೂರ್ತದಲ್ಲಿ ದಶಮಿಯ ದಿನದಲ್ಲಿ ಪ್ರಯಾಣ ಮಾಡಬೇಕು. ಏಕಾದಶಿ ಯಲ್ಲಿ ಕೂಡದು. 'ಆಶ್ವಯುಕ್ ಶುಕ್ಲ ದಶಮೀ ವಿಜಯಾಖ್ಯಾಖಿಲೇಶು ಭಾ ಪ್ರಯಾಣೇತು ವಿಶೇಷೇಣ ಕಿಂಪುನಃ ಶ್ರವಣಾನ್ವಿತಾ ॥೧॥' ಆಶ್ವ ಯುಜ ಶುದ್ಧ ದಶಮಿಯ ವಿಜಯವೆಂಬ ಮುಹೂರ್ತವು ಸಕಲ ಕರ್ಮಗ ಳಿಗೂ ಯೋಗ್ಯವಾದದ್ದು. ಪ್ರಯಾಣಕ್ಕೆ ಅತಿ ಪ್ರಶಸ್ತವಾದದ್ದು. ಶ್ರ

ವಣ ನಕ್ಷತ್ರವೂ ಇದ್ದರೆ ಅತ್ಯಂತ ಪ್ರಶಸ್ತವಾದದ್ದು. ಎಂದು ಜ್ಯೋತಿಷದಲ್ಲಿ ಹೇಳಿರುವುದರಿಂದ ಮಾಸ ವಿಶೇಷಗಳನ್ನು ಅಪೇಕ್ಷಿಸುವ ಬೇರೆ ಬೇರೆ ಕರ್ಮಗಳನ್ನೂ ಕೂಡ ಈ ಮಾಸದಲ್ಲಿ ಚಂದ್ರನು ಅನುಕೂಲವಿಲ್ಲದಿದ್ದಾಗ್ಯೂ ಮಾಡಬಹುದು. ಬೇರೆ ಮಾಸಗಳಲ್ಲಿ ಮಾಡಬೇಕೆಂದು ಹೇಳಿರುವ ಚೂಡಾಕರ್ಮ, ವಿಷ್ಣು ಮೊದಲಾದ ದೇವತಾಪ್ರತಿಷ್ಠೆ, ಇವುಗಳನ್ನು ಮಾತ್ರ ಮಾಡಕೂಡದು. ದೊರೆಗಳ ಪಟ್ಟಾಭಿಷೇಕಕ್ಕೆ ನವಮೀ ವೇಧೆಯುಳ್ಳ ದಶಮಿಯನ್ನು ಶ್ರವಣ ನಕ್ಷತ್ರ ಯುಕ್ತವಾಗಿದ್ದರೂ ಬಿಟ್ಟು ಉದಯವ್ಯಾಪ್ತಿಯುಳ್ಳ ದಶಮಿಯನ್ನೇ ಗ್ರಹಿಸಬೇಕು.

—ಕಾರ್ತಿಕ ಸ್ನಾನವು—

ಕಾರ್ತಿಕಸ್ನಾನವು---ಆಶ್ವಯುಜ ಶುದ್ಧ ದಶಮಿ, ಏಕಾದಶಿ, ಪೌರ್ಣಮಾವಾಸ್ಯೆ ಇವುಗಳಲ್ಲೊಂದನ್ನು ಪ್ರಾರಂಭಮಾಡಿಕೊಂಡು ಒಂದು ಮುಹೂರ್ತ ಮಾತ್ರವೇ ಉಳಿದು ಇರುವ ರಾತ್ರಿಯಲ್ಲಿ (ಬೆಳಗಿನ ೫ ಗಂಟೆ) ಪ್ರತಿದಿನವೂ ಮಾಸವು ಪೂರಯಿಸುವವರೆಗೂ, ತೀರ್ಥಮೊದಲಾದವುಗಳಿಗೆ ಹೋಗಿ ಸ್ನಾನ ಮಾಡಬೇಕು. ವಿಷ್ಣುಸ್ಮರಣ ಪೂರ್ವಕವಾಗಿ ದೇಶಕಾಲ ಸಂಕೀರ್ತನ ಮಾಡಿ, (ಸಂಕಲ್ಪಮಾಡಿ) 'ನಮಃ ಕಮಲನಾಭಾಯ ನಮಸ್ತೇ ಜಯಶಾಲಿನೇ । ನಮಸ್ತೇಽಸ್ತು ಹೃಷೀಕೇಶ ಗೃಹಾಣಾರ್ಘ್ಯಂ ನಮೋಽಸ್ತುತೇ॥೧॥' ಪದ್ಮನಾಭನಾಗಿಯೂ, ಜಯಶೀಲನಾಗಿಯೂ ಇರುವ ಹೃಷೀಕೇಶನೇ! ನನ್ನ ಅರ್ಘ್ಯವನ್ನು ಸ್ವೀಕರಿಸು. ನಿನಗೆ ನಮಸ್ಕರಿಸುವೆನು. ॥೧॥ ಎಂಬ ಮಂತ್ರದಿಂದ ಅರ್ಘ್ಯವನ್ನು ಕೊಟ್ಟು 'ಕಾರ್ತಿಕೇಽಹಂ ಕರಿಷ್ಯಾಮಿ ಪ್ರಾತಃ ಸ್ನಾನಂ ಜನಾರ್ದನ । ಪ್ರೀತ್ಯರ್ಥಂ ತವ ದೇವೇಶ ದಾಮೋದರ ಮಯಾಸಹ ॥೧॥ ಧ್ಯಾತ್ವಾಹಂ ತ್ವಾಂ ಚ ದೇವೇಶ ಜಲೇಽಸ್ಮಿನ್ ಸ್ನಾತು ಮುದ್ಯತಃ। ತವಪ್ರಸಾದಾ ತ್ಪಾಪಂಮೇ ದಾಮೋದರ ವಿನಶ್ಯತು ॥೨॥' ಎಲೈ ಜನಾರ್ದನನಾದ ಮಹಾವಿಷ್ಣುವೇ! ನಿನ್ನ ಪ್ರೀತ್ಯರ್ಥವಾಗಿ ನಾನು ಪ್ರಾತಃ ಸ್ನಾನವನ್ನು ಮಾಡುವೆನು ॥೧॥ ನಿನ್ನ ಧ್ಯಾನವನ್ನು ಮಾಡಿ ಸ್ನಾನಮಾಡುವ ನನ್ನ ಪಾಪಗಳು ನಿನ್ನ ಅನುಗ್ರಹದಿಂದ ನಾಶವಾಗಲಿ ॥೨॥ ಎಂಬ ಮಂತ್ರಗಳಿಂದ ಸ್ನಾನಮಾಡಿ, 'ನಿತ್ಯೇ ನೈಮಿತ್ತಿಕೇ ಕೃಷ್ಣ ಕಾರ್ತಿಕೇ ಪಾಪನಾಶನೇ । ಗೃಹಾಣಾ

ರ್ಘ್ಯಂಮಯಾದತ್ತಂ ರಾಧಯಾ ಸಹಿತೋ ಹರೇ ॥೧॥ ವ್ರತಿನಃ ಕಾರ್ತಿ
ಕೇಮಾಸಿ ಸ್ನಾತಸ್ಯ ವಿಧಿವನ್ಮಮ । ಗೃಹಾಣಾರ್ಘ್ಯಂ ಮಯಾದತ್ತಂ
ರಾಧಯಾ ಸಹಿತೋ ಹರೇ ॥೨॥' ಎಲೈ ಕೃಷ್ಣನೇ ! ನಿತ್ಯನೈಮಿತ್ತಿಕ
ಕರ್ಮಗಳಲ್ಲಿ, ಪಾಪನಾಶಕವಾದ ಈ ಕಾರ್ತಿಕದಲ್ಲಿ ನಾನು ಕೊಡುವ
ಅರ್ಘ್ಯವನ್ನು ರಾಧಾಸಹಿತನಾಗಿ ಸ್ವೀಕರಿಸು ॥೧॥ ಕಾರ್ತಿಕ ಮಾಸದಲ್ಲಿ
ವ್ರತವುಳ್ಳವನಾಗಿ ವಿಧಿಯಿಂದ ಸ್ನಾನಮಾಡುವ ನಾನು ಕೊಡುವ ಅರ್ಘ್ಯ
ವನ್ನು ರಾಧೆಯೊಡನೆ ಸ್ವೀಕರಿಸು ॥೨॥ ಎಂಬ ಮಂತ್ರಗಳಿಂದ ಪುನರ
ರ್ಘ್ಯವನ್ನು ಕೊಡಬೇಕು. ಕುರುಕ್ಷೇತ್ರ, ಗಂಗಾ, ಪುಷ್ಕರ ಮೊದಲಾ
ದವುಗಳಲ್ಲಿ ಸ್ನಾನಮಾಡಿದರೆ ವಿಶೇಷವಾಗಿ ಪುಣ್ಯವುಂಟಾಗುವುದು. 'ಕಾ
ರ್ತಿಕಂ ಸಕಲಂ ಮಾಸಂ ನಿತ್ಯಸ್ನಾಯೀ ಜಿತೇಂದ್ರಿಯಃ । ಜಪನ್ ಹವಿ
ಷ್ಯಭುಗ್ದಾಂತಃ ಸರ್ವಪಾಪೈಃ ಪ್ರಮುಚ್ಯತೇ ॥೧॥ ಸ್ಮೃತ್ವಾ ಭಾಗೀರ
ಥೀಂ ವಿಷ್ಣುಂಶಿವಂಸೂರ್ಯಂಜಲೇವಿಶೇತ್ । ನಾಭಿಮಾತ್ರೇ ಜಲೇತಿಷ್ಠ
ನ್ವ್ರತೀಸ್ನಾಯಾದ್ಯಥಾವಿಧಿ॥೨॥' ಕಾರ್ತಿಕ ಮಾಸವು ಪೂರಯಿಸುವವ
ರೆಗೂ ನಿತ್ಯವೂ ಸ್ನಾನ ಮಾಡುತ್ತಾ ಜಿತೇಂದ್ರಿಯನಾಗಿ ಜಪಮಾಡುತ್ತಾ
ಹವಿಷ್ಯಾನ್ನವನ್ನು ಭೋಜನಮಾಡಿ ಇಂದ್ರಿಯ ನಿಗ್ರಹಮಾಡಿರುವವನ
ಪಾಪಗಳು ನಾಶವಾಗುವವು ॥೧॥ ನಿಯಮ ವುಳ್ಳವನು ನಾಭಿಪರ್ಯಂತವಾ
ದ ನೀರಿನಲ್ಲಿ ನಿಂತು, ಗಂಗೆ, ವಿಷ್ಣು ಈಶ್ವರ, ಸೂರ್ಯ, ಇವರುಗಳ ಸ್ಮರ
ಣೆಯನ್ನು ಮಾಡಿ ಯಥಾವಿಧಿಯಾಗಿ ಸ್ನಾನಮಾಡಬೇಕು ॥೨॥ ಈಕಾರ್ತಿ
ಕ ಸ್ನಾನವನ್ನು, ಪ್ರಾತಃಸ್ನಾನ ಸಂಧ್ಯಾವಂದನೆಗಳನ್ನು ಮಾಡಿದಮೇಲೆ
ಯೇ ಮಾಡಬೇಕು. ಇವುಗಳನ್ನು ಮಾಡದೆ ಬೇರೆಕರ್ಮಗಳಗಧಿಕಾರಿ
ಯಾಗುವುದಿಲ್ಲ. ಪರಂತು-ಸೂರ್ಯೋದಯ ಕಾಲಕ್ಕೆ ಪ್ರಾತಃ ಸಂಧ್ಯಾಕಾ
ಲವು ಪೂರ್ತಿಯಾಗುವುದು. ಇಲ್ಲಿ ವಚನಬಲದಿಂದ ಉದಯಕ್ಕೆ ಮುಂಚೆ
ಯೇ ಸಂಧ್ಯಾವಂದನೆಯನ್ನು ಮಾಡಿಕೊಂಡು ಆಮೇಲೆ ಕಾರ್ತಿಕ ಸ್ನಾನ
ವನ್ನು ಮಾಡಬೇಕೆಂದು ನಿರ್ಣಯ ಸಿಂಧುವಿನಲ್ಲಿಹೇಳಿದೆ. ಬೇರೆಗ್ರಂಥಗಳಲ್ಲಿ
ಈಬಗೆಯಾಗಿಹೇಳಿಲ್ಲ. ಹೀಗೆ ತಿಂಗಳವರೆಗೂ ಸ್ನಾನಮಾಡಲು ಶಕ್ತಿ ಇ
ಲ್ಲದವರು ಮೂರುದಿನಗಳು ಸ್ನಾನಮಾಡಬಹುದು. ಉಳಿದವರು ಕಾರ್ತಿ
ಕಮಾಸ ವ್ರತವನ್ನು ಪ್ರಾರಂಭಿಸುವುದಕ್ಕೂ ಇದೇಸಮಯವು.

## ಕಾರ್ತ್ತಿಕ ವ್ರತಗಳು.

ಕಾರ್ತ್ತಿಕ ವ್ರತಗಳು—„ತುಲಸೀದಳಲಕ್ಷೇಣ ಕಾರ್ತ್ತಿಕೇ ಯೋಽರ್ಚಯೇದ್ಧರಿಂ । ಪತ್ರೇಪತ್ರೇ ಮುನಿಶ್ರೇಷ್ಠ ಮೌಕ್ತಿಕಂಪಿನ್ದತೇಫಲಂ ॥೧॥„ ಯಾರು ಕಾರ್ತ್ತಿಕಮಾಸದಲ್ಲಿ ತುಲಸೀದಳಗಳಿಂದ ಶ್ರೀಹರಿಯನ್ನು ಪೂಜಿಸುವನೋ ಅವನು ಪೂಜಿಸಿದ ತುಳಸಿಯ ಎಲೆಯೊಂದಕ್ಕೆ ಬಾದೊಂದು ಮುತ್ತಿನಂತೆ ಫಲವನ್ನು ಪಡೆಯುತ್ತಾನೆ ॥ ೧ ॥ ತುಲಸಿಯ ಕುಚ್ಚುಗಳಿಂದ ಹರಿಹರರನ್ನು ಪೂಜಿಸುವವನು ಮುಕ್ತಿಯನ್ನೇ ಹೊಂದುವನು. ಹುಟ್ಟಹಾಕುವುದು, ಬೆಳೆಯಿಸುವುದು, ಮುಟ್ಟುವುದು ಇವುಗಳಿಂದ ಪಾಪವು ಪರಿಹಾರವಾಗುವುದು. ತುಲಸಿಯ ನೆಳಲಲ್ಲಿ ಶ್ರಾದ್ಧಮಾಡಿದರೆ ಪಿತೃಗಳು ತೃಪ್ತರಾಗುವರು. ತುಲಸೀಗಿಡದಿಂದ ಪ್ರಕಾಶಿಸುವ ಪರಿಶುದ್ಧವಾದ ಮನೆಗೆ ಯಮದೂತರು ಬರಲಾರರು. ಇವೇ ಮೊದಲಾದವು ತುಲಸೀಮಾಹಾತ್ಮ್ಯಗಳು. ಧಾತ್ರೀ (ನೆಲ್ಲಿ) ವೃಕ್ಷಮಹಿಮೆಯೂ ಇಂಥದೇ! „ಕಾರ್ತ್ತಿಕೇಧಾತ್ರಿವೃಕ್ಷಾಧಶ್ಚಿತ್ರಾನ್ನೈಸ್ತೋಷಯೇದ್ಧರಿಂ।ಬ್ರಾಹ್ಮಣಾನ್‌ಭೋಜಯೇದ್ಭಕ್ತ್ಯಾ ಸ್ವಯಂಭುಂಜೀತಬಂಧುಭಿಃ ॥೧॥„ ಕಾರ್ತ್ತಿಕಮಾಸದಲ್ಲಿ ನೆಲ್ಲಿಗಿಡದ ಕೆಳಗೆ ವಿಷ್ಣುವಿಗೆ ಚಿತ್ರಾನ್ನವನ್ನು ನಿವೇದನಮಾಡಿ, ಭಕ್ತಿಯಿಂದ ಬ್ರಾಹ್ಮಣ ಭೋಜನ ಮಾಡಿಸಿ, ಬಂಧುಮಿತ್ರರೊಡನೆ ತಾನೂ ಭೋಜನ ಮಾಡಬೇಕು. ॥೧॥ ನೆಲ್ಲಿಗಿಡದ ಅಡಿಯಲ್ಲಿ ಶ್ರಾದ್ಧವೂ, ನೆಲ್ಲಿಯ ಪತ್ರಫಲಗಳಿಂದ ವಿಷ್ಣುಪೂಜೆಯೂ ಮಹಾಫಲವನ್ನುಂಟು ಮಾಡುವುವು. ನೆಲ್ಲಿಯ ಗಿಡದಲ್ಲಿ ಸಮಸ್ತ ದೇವತೆಗಳೂ, ಋಷಿಗಳೂ, ಯಜ್ಞಗಳೂ, ತೀರ್ಥಗಳೂ ವಾಸವಾಗಿರುವವೆಂದು ಪ್ರಮಾಣವಿರುವುದು. ಇಲ್ಲಿ ವಿಷ್ಣುವನ್ನು ಕುರಿತು ರಾತ್ರಿಯಲ್ಲಿ ಜಾಗರವನ್ನು ಮಾಡಬೇಕು. „ಜಾಗರಂಕಾರ್ತ್ತಿಕೇಮಾಸಿ ಯಃ ಕುರ್ಯಾದರುಣೋದಯೇ । ದಾಮೋದರಾಗ್ರೇಸೇನಾಸೀಗೋಸಹಸ್ರಫಲಂಲಭೇತ್ ॥೧॥ ಶಿವವಿಷ್ಣುಗೃಹಾಭಾವೇಸರ್ವದೇವಾಲಯೇಷ್ವಪಿ । ಕುರ್ಯಾದಶ್ವತ್ಥಮೂಲೇಷುತುಲಸೀನಾಂವನೇಷ್ವಪಿ ॥ ೨ ॥ ವಿಷ್ಣುನಾಮಪ್ರಬನ್ಧಾನಿ ಯೋಗಾಯಾದ್ವಿಷ್ಣುಸನ್ನಿಧೌ । ಗೋಸಹಸ್ರಪ್ರದಾನಸ್ಯಫಲಮಾಪ್ನೋತಿಮಾನವಃ ॥ ೩ ॥ ವಾದ್ಯಕೃತ್ಪುರುಷಶ್ಚಾಪಿ ವಾಜಪೇಯಫಲಂಲಭೇತ್ । ಸರ್ವತೀರ್ಥಾವಗಾಹೋತ್ಥಂನರ್ತ್ತ

ಕಃ ಫಲಮಾಪ್ನುಯಾತ್ ॥೪॥ ಸರ್ವಮೇತಲ್ಲಭೇತ್ಪುಣ್ಯಂ ತೇಷಾಂತುದ್ರವ್ಯದಃಪುಮಾನ್ । ಅರ್ಚನಾದ್ದರ್ಶನಾದ್ವಾಪಿತತ್ ಷಡಂಶಮವಾಪ್ನುಯಾತ್ ॥೫॥,, ಯಾರು ಕಾರ್ತಿಕ ಮಾಸದಲ್ಲಿ ಅರುಣೋದಯ ಕಾಲದಲ್ಲಿ ಮಹಾವಿಷ್ಣುವಿನ ಸಮೀಪದಲ್ಲಿ ಜಾಗರದಿಂದಿರುವನೋ ಅವನಿಗೆ ಸಹಸ್ರ ಗೋದಾನ ಫಲವುಂಟಾಗುವದು. ॥೧॥ ಶಿವ, ವಿಷ್ಣು ದೇವಾಲಯಗಳಲ್ಲದಿದರೆ ಯಾವ ದೇವಾಲಯದಲ್ಲಾದರೂ, ಅಶ್ವತ್ಥವೃಕ್ಷ (ಅರಳಿಮರ) ದ ಬುಡದಲ್ಲಿಯೂ, ತುಲಸೀವನದಲ್ಲಿಯಾದರೂ, ಜಾಗರವನ್ನು ಮಾಡಬಹುದು. ॥೨॥ ವಿಷ್ಣುಸಮೀಪದಲ್ಲಿ-ವಿಷ್ಣುವಿನ ನಾಮಗಳನ್ನೂ, ಚರಿತ್ರೆಯನ್ನೂ ಗಾನಮಾಡುವವನು ಸಹಸ್ರ ಗೋದಾನಫಲವನ್ನು ಪಡೆವನು. ॥೩॥ ವಿಷ್ಣುವಿನೆದುರಾಗಿ ವಾದ್ಯಗಳನ್ನು ಬಾರಿಸುವನು ವಾಜಪೇಯಫಲವನ್ನೂ, ನರ್ತನೆ ಮಾಡುವವನು ಸಕಲ ತೀರ್ಥಸ್ನಾನಫಲವನ್ನೂ ಪಡೆವನು. ॥೪॥ ಅಂಥವರಿಗೆ ಧನವನ್ನು ಕೊಡುವವನು ಮೇಲೆ ಹೇಳಿದ ಎಲ್ಲ ಫಲಗಳನ್ನೂ ಪಡೆವನು. ಪೂಜೆ, ದರ್ಶನ, ಇವುಗಳಿಂದ ಅದರ ಆರರಷ್ಟು ಫಲವನ್ನ ಹೊಂದುವನು ॥೫॥ ಎಂದು ಕೌಸ್ತುಭದಲ್ಲಿ ಹೇಳಿದೆ. ಇವುಗಳೊಂದೂ ಇಲ್ಲದಿದ್ದರೆ ವಿಷ್ಣುಭಕ್ತರಾದ ಬ್ರಾಹ್ಮಣರನ್ನಾಗಲಿ, ಅಶ್ವತ್ಥ, ವಟ (ಆಲ) ವೃಕ್ಷವನ್ನಾಗಲಿ ಸೇವಿಸಬೇಕೆಂದು ಅದೇ ಗ್ರಂಥದಲ್ಲಿ ಹೇಳಿದೆ. ,,ಸರೋರುಹಾಣಿತುಲಸೀ ಮಾಲತೀಮುನಿಪುಷ್ಪಕಂ । ಕಾರ್ತಿಕೇವಿಹಿತಾನ್ಯೇವಂದೀಪದಾನಂಚಪಂಚಮಂ ॥೧॥,, ಕಾರ್ತಿಕಮಾಸದಲ್ಲಿ ಅಗಸೆಯ ಹೂ, ಕಮಲ, ತುಲಸಿ, ಮಾಲತಿ, (ಜಾಜಿಯ ಹೂ) ಇವುಗಳಿಂದ ಪೂಜೆಯನ್ನೂ, ದೀಪದಾನವನ್ನೂ, ಈ ಐದನ್ನೂ ಮಾಡಬೇಕೆಂದು ಹೇಳಿದೆ. ॥೧॥ ಕಾರ್ತಿಕಮಾಸ ಒಂದು ತಿಂಗಳೂ (ಮಾಸೋಪವಾಸ) ಉಪವಾಸವನ್ನು, ವಾನಪ್ರಸ್ಥರೂ, ಯತಿಯೂ, ವಿಧವೆಯರೂ ಮಾಡಬೇಕು. ಗೃಹಸ್ಥರು ಉಪವಾಸವನ್ನು ಮಾಡಕೂಡದು. ,,ಕೃಚ್ಛ್ರಂವಾಪ್ಯತಿಕೃಚ್ಛ್ರಂವಾಪ್ರಾಜಾಪತ್ಯಮಥಾಪಿವಾ । ಏಕರಾತ್ರಂವ್ರತಂಕುರ್ಯಾತ್ತ್ರಿರಾತ್ರವ್ರತಮೇವವಾ ॥೧॥ ಶಾಕಾಹಾರಂಪಯೋಹಾರಂ ಫಲಾಹಾರಮಥಾಪಿವಾ। ಚರೇದ್ಯವಾನ್ನಾಹಾರಂ ವಾ ಸಂಪ್ರಾಪ್ತೇಕಾರ್ತಿಕೇವ್ರತೀ॥೨॥,, ಕೃಚ್ಛ್ರ, ಅಥವಾ ಅತಿಕೃಚ್ಛ್ರ, ಇಲ್ಲವೇ ಪ್ರಾಜಾಪತ್ಯಗಳನ್ನುಮಾಡಿ,

ಒಂದು ರಾತ್ರಿ ವ್ರತವನ್ನು ಮಾಡಬೇಕು. ಇಲ್ಲದಿದ್ದರೆ ಮೂರುರಾತ್ರಿ ವ್ರತವನ್ನು ಮಾಡಬೇಕು. ॥೦॥ ಕಾರ್ತಿಕಮಾಸವು ಬಂದಾಗ ವ್ರತ ಮಾಡತಕ್ಕವರು, ಸೊಪ್ಪನ್ನು ತಿನ್ನುವುದು (ಶಾಕಾಹಾರ) ಅಥವಾ ಹಾಲನ್ನು ಕುಡಿದಿರುವುದು. ಅಲ್ಲದೆ ಹಣ್ಣನ್ನು ತಿನ್ನುವುದು, ಇಲ್ಲವೆ ಯವೆಯ ಅನ್ನವನ್ನು ತಿನ್ನುವುದು ಇವುಗಳನ್ನು ಮಾಡಬೇಕು. ॥೨॥

## ಕಾರ್ತಿಕದಲ್ಲಿ ಬಿಡಬೇಕಾದವುಗಳು.

ಕಾರ್ತಿಕದಲ್ಲಿ ಬಿಡಬೇಕಾದದ್ದು—ನೀರುಳ್ಳಿ, ಬೆಳ್ಳುಳ್ಳಿ, ಹಿಂಗು, ಸರ್ಪಾಕ್ಷಿಯಕಾಯಿ, ಮೂಲಂಗಿ, ಸೋರೆಕಾಯಿ, ನುಗ್ಗಿಕಾಯಿ, ಬದನೆಕಾಯಿ, ಕುಂಬಳಕಾಯಿ, ಹೆಗ್ಗುಳ್ಳದಕಾಯಿ, ಕೊಡಸಿಗೆಹಣ್ಣು, ಬೇಲದಹಣ್ಣು, ಎಣ್ಣೆ, ಉಪ್ಪು: ಶಾಕ, ಎರಡುಸಾರಿ ಬೇಯಿಸಿದ ಅನ್ನ (ಕುಸುವಲಕ್ಕಿ ಅನ್ನ ಮೊದಲಾದದ್ದು.) ತಂಗಳನ್ನ, ಸುಟ್ಟುಮಾಡಿದ ಅನ್ನ, ಉದ್ದು, ಹೆಸರು, ಕಿರುಗಡಲೆ, ಕಡಲೆ, ಹುರುಳಿ, ಅವರೆ, ತುಗರಿ, ಮೊದಲಾದ ದ್ವಿದಳ ಧಾನ್ಯಗಳು. ಇವನ್ನು ಬಿಡಬೇಕು. ಸಪ್ತಮಿಯಲ್ಲಿ ನೆಲ್ಲಿಕಾಯನ್ನೂ, ಅಷ್ಟಮಿಯಲ್ಲಿ ಎಳ್ಳನ್ನೂ, ತೆಂಗಿನಕಾಯನ್ನು ಭಾನುವಾರದಲ್ಲಿಯೂ, ಸರ್ವದಾ ನೆಲ್ಲಿಯಕಾಯನ್ನೂ ಬಿಡಬೇಕು. ಕಂಚಿನತಟ್ಟೆಯಲ್ಲಿ ಭೋಜನವನ್ನು ಬಿಡಬೇಕಾದ ವ್ರತದಲ್ಲಿ-ಕಂಚಿನ ಪಾತ್ರೆಯಲ್ಲಿ ತುಪ್ಪವನ್ನು ತುಂಬಿ ದಾನಮಾಡಬೇಕು. ಮಧುವನ್ನು ಬಿಡುವ ವ್ರತದ ಕೊನೆಯಲ್ಲಿ-ಪಾಯಸ, ಸಕ್ಕರೆ ಇವುಗಳನ್ನು ದಾನಮಾಡಬೇಕು. ಎಣ್ಣೆಯನ್ನು ಬಿಡುವ ವ್ರತದಲ್ಲಿ ಎಳ್ಳನ್ನು ದಾನಮಾಡಬೇಕು. ಕಾರ್ತಿಕ ಮಾಸದಲ್ಲಿ ಮೌನದಿಂದ ಭೋಜನವನ್ನು ಮಾಡುವವನು ಎಳ್ಳು, ಗಂಟೆ ಇವುಗಳನ್ನು ದಾನಮಾಡಬೇಕು. ಈ ಮಾಸದಲ್ಲಿ ದಕ್ಷಿಣೆ, ಉದ್ದು ಇವುಗಳೊಡನೆ ಕುಂಬಳಕಾಯಿಗಳನ್ನು ದಾನಮಾಡಬೇಕು. ಈ ಮಾಸದಲ್ಲಿ ಕಾಂಸ್ಯಪಾತ್ರಭೋಜನವು ಕ್ರಿಮಿಭಕ್ಷಣೆಗೆ ಸಮಾನವು. ಹಣ್ಣನ್ನು ಬಿಟ್ಟಿದ್ದರೆ ಹಣ್ಣನ್ನೂ, ರಸಗಳನ್ನು(ಷಡ್ರಸ) ಬಿಟ್ಟಿದ್ದರೆ ಆ ರಸಪದಾರ್ಥಗಳನ್ನೂ, ಧಾನ್ಯವನ್ನು ಬಿಟ್ಟಿದ್ದರೆ ಅದೇ ಧಾನ್ಯವನ್ನೂ ದಾನಮಾಡಬೇಕು. ಎಲ್ಲಾ ಸಂದರ್ಭಗಳಿಗೂ ಬದಲಾಗಿ ಗೋದಾನವನ್ನಾದರೂ ಮಾಡಬೇಕು. ॥ ಏಕಂ ಸ್ಸರ್ವದಾನಾನಿದೀಪದಾನಂತಥೈಕತಃ । ಕಾರ್ತಿಕೇದೀಪದಾನಸ್ಯ ಕಲಾತೆ

ನಾರ್ಹಂತಿಷೋಡಶೀಂ॥೧॥,, ಎಲ್ಲಾ ದಾನಗಳ ಫಲವನ್ನೂ, ದೀಪದಾನದ ಫಲವನ್ನೂ ಸರಿಮಾಡಿ ನೋಡಿದರೆ ಕಾರ್ತಿಕಮಾಸದಲ್ಲಿ ದೀಪದಾನ ಮಾಡಿದ್ದರಿಂದ ಬರುವ ಫಲದ ಹದಿನಾರನೆಯ ಒಂದು ಭಾಗವನ್ನೂ ಉಳಿದ ಸಕಲ ದಾನಗಳೂ ಹೊಂದಲಾರವು ॥೧॥ ಈ ವ್ರತಗಳನ್ನಾಗಲಿ ಚಾತುರ್ಮಾಸ್ಯ ವ್ರತವನ್ನಾಗಲಿ ಮಾಡುವುದಕ್ಕಾಗದಿರುವವರು ಕಾರ್ತಿಕದಲ್ಲಿಯೂ ವುದಾದರೂ ಒಂದು ವ್ರತವನ್ನು ಮಾಡಲೇಬೇಕು. ಹಾಗೆ ಮಾಡದಿದ್ದರೆ ,,ಅವ್ರತಃಕಾರ್ತಿಕೋಯೇಷಾಂಗತೋ ಮೂಢಧಿಯಾಮಿಹ । ತೇಷಾಂಪುಣ್ಯಸ್ಯಲೇಶೋಪಿನಭವೇ ತ್ಸೂಕರಾತ್ಮನಾಂ ॥೧॥,, ಕಾರ್ತಿಕಮಾಸದಲ್ಲಿ ಯಾವ ವ್ರತವನ್ನೂ ಮಾಡದೆ ಇರುವ ಮೂಢರು ಹಂದಿಗೆ ಸಮಾನರು. ಅವರಿಗೆ ಯಾವ ಪುಣ್ಯವೂ ಲಭಿಸುವುದಿಲ್ಲ. ॥೧॥ ಸಾಲಗ್ರಾಮ ಮೊದಲಾದ ದೇವರೆದುರಾಗಿ ಸ್ವಸ್ತಿಕ, ಪದ್ಮ ಮೊದಲಾದವುಗಳನ್ನು ರಂಗವಲ್ಲಿಯಲ್ಲಿ ಬರೆದು ಪೂಜಿಸುವವಳು ಸ್ವರ್ಗಾದಿ ಲೋಕಗಳನ್ನನುಭವಿಸುತ್ತಾ ಏಳು ಜನ್ಮಗಳಲ್ಲಿ ವೈಧವ್ಯವನ್ನು ಪಡೆಯದಿರುವಳು.

### ಪುರಾಣಾದಿಗಳನ್ನು ಕೇಳುವುದು.

ಪುರಾಣಾದಿಶ್ರವಣವು—ಕಾರ್ತಿಕಮಾಸದಲ್ಲಿ ಪುರಾಣ, ಇತಿಹಾಸ ಇವುಗಳನ್ನು ಹೇಳಿಸಿ ಕೇಳಬೇಕು. ,,ಬ್ರಾಹ್ಮಣಂವಾಚಕಂಕುರ್ಯಾನ್ನಾನ್ಯವರ್ಣಜಮಾದರಾತ್ । ಶ್ರಾವಯೇಚ್ಚತುರೋವರ್ಣಾನ್ಕೃತ್ವಾಬ್ರಾಹ್ಮಣಮಗ್ರತಃ ॥೧॥ ವಿಸ್ಪಷ್ಟಮದ್ರುತಂಶಾಂತಂ ಸ್ಪಷ್ಟಾಕ್ಷರಪದಂತಥಾ । ಕಲಸ್ವರಸಮಾಯುಕ್ತಂ ರಸಭಾವಸಮನ್ವಿತಂ ॥೨॥ ಬ್ರಾಹ್ಮಣಾದಿಷುಸರ್ವೇಷು ಗ್ರಂಥಾರ್ಥಂಚಾರ್ಪಯೇನ್ನೃಪ ! ಯಏವಂವಾಚಯೇದ್ಬ್ರಹ್ಮನ್ ಸವಿಪ್ರೋವ್ಯಾಸಉಚ್ಯತೇ ॥ ೩ ॥ ಸಮಾಪ್ತೇಷುಪುರಾಣೇಷುಶಕ್ತ್ಯಾತಂತರ್ಪಯೇನ್ನೃಪ । ವಾಚಕಃಪೂಜಿತೋಯೇನ ಪ್ರಸನ್ನಾಸ್ತಸ್ಯದೇವತಾಃ॥೪॥ಶ್ರಾದ್ಧೇಯಸ್ಯದ್ವಿಜೋಭುಙ್ತೇವಾಚಕ ಶ್ರದ್ಧಯಾನ್ವಿತಃ । ಭವಂತಿಪಿತರಸ್ತಸ್ಯ ತೃಪ್ತಾವರ್ಷಶತಾನ್ನೃಪ,, ॥೫॥ ಪುರಾಣವನ್ನು ಓದುವುದಕ್ಕೆ ಬ್ರಾಹ್ಮಣನನ್ನೇ ನಿಯಮಿಸಬೇಕು. ಇತರ ವರ್ಣದವರನ್ನು ಸೇರಿಸಕೂಡದು. ಬ್ರಾಹ್ಮಣರನ್ನು ಮುಂದುಮಾಡಿ ಎಲ್ಲ ವರ್ಣದವರಿಗೂ (ಚತುರ್ವರ್ಣ) ಶ್ರವಣ ಮಾಡಿಸಬಹುದು ॥೧॥ ಸ್ಪಷ್ಟವಾಗಿಯೂ,

ನಿಧಾನವಾಗಿಯೂ, ಗಂಭೀರವಾಗಿಯೂ, ಅಕ್ಷರಗಳನ್ನೂ ಶಬ್ದಗಳನ್ನೂ ಸ್ಫುಟವಾಗಿ ಉಚ್ಚರಿಸುತ್ತಲೂ, ಕಳೆಗಳಿಗೆ ತಕ್ಕ ಧ್ವನಿಯಿಂದಲೂ, ನವ ರಸಗಳ ಭಾವವನ್ನೂ ತೋರ್ಪಡಿಸುವಂತೆಯೂ ॥೨॥ ಬ್ರಾಹ್ಮಣ ಮೊದಲಾದ ಎಲ್ಲಾ ಜಾತಿಯವರಿಗೂ ಅರ್ಥವು ತಿಳಿಯುವಂತೆಯೂ ಯಾರು ಪುರಾಣವನ್ನೋದಿ ಅರ್ಥವನ್ನು ಹೇಳುವರೋ ಅವರು ವ್ಯಾಸರಿಗೆ ಸಮಾನರು ॥೩॥ ಪುರಾಣವು ಪೂರಯಿಸಿದಮೇಲೆ ಪುರಾಣಿಕರನ್ನು ಯಥಾಶಕ್ತಿಯಾಗಿ ತೃಪ್ತಿಪಡಿಸಬೇಕು. ಪುರಾಣವನ್ನೋದುವ ಬ್ರಾಹ್ಮಣನನ್ನು ಪೂಜಿಸಿದವನ ದೇವತೆಗಳೆಲ್ಲರೂ ಪ್ರಸನ್ನರಾಗುವರು. ॥ ೪ ॥ ಶ್ರದ್ಧಾಯುಕ್ತನಾಗಿ ಪುರಾಣವನ್ನೋದುವವನು ಯಾರ ಶ್ರಾದ್ಧದಲ್ಲಿ ಭೋಜನ ಮಾಡುವನೋ ಆ ಪಿತೃಗಳು ನೂರು ವರ್ಷಗಳವರೆಗೆ ಸಂತುಷ್ಟರಾಗಿರುವರು. ॥೫॥ ಕಾರ್ತಿಕ ಸ್ನಾನಕಾಲದಲ್ಲಿ ಪುತ್ರಕಾಮನಾಗಿರುವನು. ಕಾಶೀಖಂಡದಲ್ಲಿ ಹೇಳಿರುವ ಅಭಿಲಾಷಾಷ್ಟಕವನ್ನು ಹೇಳಬೇಕು. ಈಗ ದುಗ್ಧ (ಹಾಲು) ವ್ರತವನ್ನು ಪೂರಯಿಸಿ, ದುಗ್ಧದಾನಮಾಡಿ, ದ್ವಿದಳವ್ರತಕ್ಕೆ ಸಂಕಲ್ಪ ಮಾಡಬೇಕು. ಹುಟ್ಟುವಾಗ ಎರಡು ದಳಗಳು ಕಾಣಬರುವ ಧಾನ್ಯಗಳನ್ನು ಮಾತ್ರವೇ ಬಿಡಬೇಕೆಂದು ಕೆಲವರು. "ಹೀಗೆಯೇ ಇರಬೇಕೆಂಬ ವಿಷಯದಲ್ಲಿ ವಚನಗಳಿಲ್ಲವಾದ್ದರಿಂದ ನೋಡುವುದಕ್ಕೆ ಯಾವವುಗಳಲ್ಲಿ ದಳದ್ವಯವು ಕಾಣಬರುವುದೋ ಅವುಗಳನ್ನು ಬಿಡಬೇಕು. ಉಳಿದವುಗಳನ್ನು ಬಿಡಬೇಕಾದಿಲ್ಲ. ಪತ್ರ ಪುಷ್ಪ ಮೊದಲಾದವುಗಳನ್ನು ಬಿಡಬೇಕಾದದ್ದೂ ಇಲ್ಲ" ಎಂದು ಮತ್ತೆ ಕೆಲವರು. ತಾಂಬೂಲ, ಕೇಶಕರ್ತನ (ಕ್ಷೌರ) ಮೊದಲಾಗಿ ಬಿಡಬೇಕಾದ ವ್ರತಾಂತರಗಳನ್ನೂ ಹೀಗೆಯೇ ತಿಳಿಯತಕ್ಕದ್ದು.

## ಆಕಾಶದೀಪವು.

ಆಕಾಶದೀಪವು—ಸೂರ್ಯನು ಅಸ್ತನಾದಮೇಲೆ ಮನೆಗೆ ಸ್ವಲ್ಪದೂರದಲ್ಲಿ ಒಂದು ಆಳು ಎತ್ತರವುಳ್ಳ ಕಗ್ಗಲಿಯ ಕಡ್ಡಿಯನ್ನು ನಟ್ಟು ಅದರ ಮೇಲೆ ಎಂಟು ಮೂಲೆ ಮೊದಲಾದ ಆಕಾರವುಳ್ಳ ದೀಪಯಾತ್ರ (ಆಕಾಶದ ಬುಟ್ಟಿ) ದಲ್ಲಿ ಮಧ್ಯಭಾಗದಲ್ಲಿ ಮುಖ್ಯದೀಪವನ್ನೂ, ಸುತ್ತಲೂ ಎಂಟು ದೀಪಗಳನ್ನೂ ಇಟ್ಟು „ದಾಮೋದರಾಯನಭಸಿತುಲಾಯಾಂದೋಲ

ಯಾಸಚ । ಪ್ರದೀಪಂತೇಪ್ರಯಚ್ಛಾಮಿನಮೋಽನಂತಾಯವೇಧಸೇ॥೧॥,,
ಎಲೈ ದಾಮೋದರನಾದ ವಿಷ್ಣುವೇ! ಈ ತುಲಾಮಾಸದಲ್ಲಿ ನಿನಗೋಸ್ಕರ
ಆಕಾಶದ ಬುಟ್ಟಿಯಲ್ಲಿ ತೂಗುದೀಪಗಳನ್ನಿಟ್ಟು ಸಮರ್ಪಿಸುವೆನು ॥೧॥
ಎಂಬ ಮಂತ್ರದಿಂದ ನಿವೇದನಮಾಡಬೇಕು. ಹೀಗೆಯೇ ಈ ತಿಂಗಳು ಪೂ
ರಯಿಸುವವರೆಗೂ ದೀಪಗಳನ್ನು ಹಚ್ಚಿದರೆ ಮಹೈಶ್ವರ್ಯವುಂಟಾಗುವುದು.

### ಕೋಜಾಗರೀ ವ್ರತವು.

ಕೋಜಾಗರ ವ್ರತವು— ಆಶ್ವಯುಜ ಶುದ್ಧ ಪೂರ್ಣಿಮೆಯಲ್ಲಿ
ಕೋಜಾಗರ ವ್ರತವು. ಪೂರ್ವದಿನದಲ್ಲಿಯೇ ನಿಶೀಥವ್ಯಾಪ್ತಿ ಇದ್ದರೆ ಪೂರ್ವ
ದಿನವನ್ನೇ ಗ್ರಹಿಸಬೇಕು. ಎರಡನೇ ದಿನದಲ್ಲಿಯೇ ಆಗಲಿ, ಎರಡು ದಿನ
ಗಳಲ್ಲಿಯೂ ಆದಾಗ್ಯೂ, ಎರಡು ದಿನಗಳಿಗೂ ಇಲ್ಲದಿದ್ದಾಗ್ಯೂ, ಎರಡನ
ಯ ದಿನವನ್ನು ಗ್ರಹಿಸಬೇಕು. ಪೂರ್ವದಿನದಲ್ಲಿ ನಿಶೀಥವ್ಯಾಪ್ತಿ ಇದ್ದು,
ಎರಡನೆಯ ದಿನದಲ್ಲಿ ಪ್ರದೋಷವ್ಯಾಪ್ತಿ ಮಾತ್ರವೇ ಇದ್ದರೆ ಪರದಿನವ
ನ್ನೇ ಗ್ರಹಿಸಬೇಕೆಂದು ಕೆಲವರು. ಇಲ್ಲಿ-ಲಕ್ಷ್ಮಿ, ಇಂದ್ರ, ಇವರನ್ನು
ಪೂಜಿಸಿ, ಜಾಗರಣೆಯನ್ನೂ, ಪಗಡೆಯಾಟವನ್ನೂ ನಡೆಯಿಸಬೇಕು. ಪ
ದ್ಮಾಸನದಲ್ಲಿರುವ ಲಕ್ಷ್ಮಿಯನ್ನು ಧ್ಯಾನಿಸಿ, ಅಕ್ಷತೆಗಳಲ್ಲಿ ಓಂ ಲಕ್ಷ್ಮ್ಯೈನ
ಮಃ ಎಂಬುವ ಮಂತ್ರದಿಂದ ಆವಾಹನೆಮಾಡಿ ಷೋಡಶೋಪಚಾರಗಳಿಂದ
ಪೂಜಿಸಬೇಕು. ,,ನಮಸ್ತೇ ಸರ್ವದೇವಾನಾಂವರದಾಸಿಹರಿಪ್ರಿಯೇ ।
ಯಾಗತಿಸ್ತ್ವತ್ಪ್ರಪನ್ನಾನಾಂ ಮಾಸೇಭೂಯಾತ್ತ್ವದರ್ಚನಾತ್ ॥೧॥,,
ಎಲೈ ವಿಷ್ಣುಪತ್ನಿಯಾದ ಲಕ್ಷ್ಮೀದೇವಿಯೇ! ವರಪ್ರದರಾಗಿ ನಿನ್ನನ್ನು ಸೇ
ವಿಸುತ್ತಿರುವ ದೇವತೆಗಳಿಗೆ ಉಂಟಾಗುವ ಉತ್ತಮವಾದ ಗತಿಯು ಒಂ
ದು ತಿಂಗಳಲ್ಲಿ ನನಗೆ ಉಂಟಾಗಲಿ ॥೧॥ ಎಂದು ಪುಷ್ಪಾಂಜಲಿಯನ್ನು ಸ
ಮರ್ಪಿಸಿ ನಮಸ್ಕಾರ ಮಾಡಬೇಕು. ,,ಚತುರ್ದಂತಸಮಾರೂಢೋ ವಜ್ರ
ಪಾಣಿಃಪುರಂದರಃ । ಶಚೀಪತಿಶ್ಚ ಧ್ಯಾತವ್ಯೋನಾನಾಭರಣಭೂಷಿತಃ॥೧॥,,
ಐರಾವತವನ್ನು ಆರೋಹಣಮಾಡಿ, ವಜ್ರಾಯುಧವನ್ನು ಹಿಡಿದು, ಅನೇ
ಕಾಭರಣಗಳನ್ನು ಧರಿಸಿರುವ ಶಚೀಪತಿಯಾದ ಇಂದ್ರನನ್ನು ಧ್ಯಾನಿಸ
ಬೇಕು. ॥೧॥ ಹೀಗೆ ಧ್ಯಾನಿಸಿ ಅಕ್ಷತೆಗಳ ಗುಂಪಿನಲ್ಲಿ (ಗುಡ್ಡೆ) ಇಂದ್ರಾ
ಯನಮಃ, ಎಂಬಮಂತ್ರದಿಂದ ಪೂಜಿಸಬೇಕು. ,,ವಿಚಿತ್ರೈರಾವತಸ್ಥಾಯ

ಭಾಸ್ವತ್ಕುಲಿಶಪಾಣಯೇ ॥ ಪೌಲೋಮ್ಯಾಲಿಂಗಿತಾಂಗಾಯ ಸಹಸ್ರಾಕ್ಷಾಯತೇ ನಮಃ॥೧॥, ವಿಚಿತ್ರವಾದ ಐರಾವತದಮೇಲೆ ಕುಳಿತು, ಕೈಯಲ್ಲಿ ವಜ್ರಾಯುಧವನ್ನು ಹಿಡಿದು, ಶಚೀದೇವಿಯನ್ನು ಆಲಿಂಗಿಸಿರುವ ಸಹಸ್ರ ನೇತ್ರಗಳುಳ್ಳ ಇಂದ್ರನಿಗೆ ನಮಸ್ಕಾರವು. ॥೧॥ ಎಂದು ಪುಷ್ಪಾಂಜಲಿಯನ್ನರ್ಪಿಸಿ ನಮಸ್ಕಾರಮಾಡಬೇಕು. ,,ನಾರಿಕೇಳೋದಕಂಪೀತ್ವಾಅಕ್ಷಕ್ರೀಡಾಂಸಮಾರಭೇತ್ । ನಿಶೀಥೇವರದಾಲಕ್ಷ್ಮೀಃ ಕೋಜಾಗರ್ತೀತಿಭಾಷಿಣೀ ॥ ತಸ್ಮೈವಿತ್ತಂಪ್ರಯಚ್ಛಾಮಿ ಅಕ್ಷೈಃಕ್ರೀಡಾಂಕರೋತಿಯಃ,,॥೧॥ ಅರ್ಧರಾತ್ರದಲ್ಲಿ ಯಾರು ಪಗಡೆಯಾಡುತ್ತಾ ಜಾಗರದಿಂದಿರುವರೋ ಅವರಿಗೆ ಭಾಗ್ಯವನ್ನು ಕೊಡುತ್ತೇನೆ ಎಂದು ಹೇಳುವಳು. ಆದಕಾರಣ ಎಳನೀರನ್ನು ಕುಡಿದು ಪಗಡೆಯಾಟವನ್ನು ಪ್ರಾರಂಭಿಸಬೇಕು ॥೧॥ ಎಳನೀರನ್ನೂ, ಅವಲಕ್ಕಿಯನ್ನೂ, ದೇವತೆಗಳಿಗೂ, ಪಿತೃಗಳಿಗೂ ಸಮರ್ಪಣೆಮಾಡಿ ಬಂಧುಗಳೊಡನೆ ತಾವೂ ಭಕ್ಷಿಸಬೇಕು. ಈ ದಿನದಲ್ಲಿಯೇ ಆಶ್ವಲಾಯನರು ಆಶ್ವಯುಜೀ ಕರ್ಮವನ್ನು ಮಾಡಬೇಕು.

### ಆಗ್ರಯಣವು.

ಆಗ್ರಯಣವು—ಪರ್ವವು ಎರಡಾಗುವಪಕ್ಷದಲ್ಲಿ ಪೂರ್ವಾಹ್ಣಸಂಧಿಯಾದರೆ ಉಳಿದ ಪರ್ವದಲ್ಲಿ ಪ್ರಕೃತಿ ಎಂಬ ಇಷ್ಟಿಯನ್ನುಮಾಡಿ ಅನಂತರದಲ್ಲಿ ಮಾಡಬೇಕು. ಅಪರಾಹ್ಣ ಸಂಧಿಯಾದರೆ ವಿಕೃತಿಯನ್ನುಮಾಡಿ ಅನಂತರದಲ್ಲಿ ಪ್ರಕೃತಿಗೆ ಅನ್ವಾಧಾನವು. ಆ ಪ್ರಯೋಗವನ್ನು ಬೇರೆ ಗ್ರಂಥಗಳಿಂದ ತಿಳಿಯಬೇಕು. ಆಶ್ವಯುಜ ಕಾರ್ತಿಕಮಾಸಗಳ ಪೌರ್ಣಮಿ ಅಥವಾ ಅಮಾವಾಸ್ಯೆಯಲ್ಲಿ ಶುಕ್ಲಪಕ್ಷದಲ್ಲಿ ಕೃತ್ತಿಕೆ ಮೊದಲ್ಗೊಂಡು ವಿಶಾಖಾ ನಕ್ಷತ್ರದವರಿಗಿನ ನಕ್ಷತ್ರಗಳಲ್ಲಿ ಅಥವಾ ರೇವತಿಯಲ್ಲಿ ವ್ರೀಹ್ಯಾಗ್ರಯಣವನ್ನು ಮಾಡಬೇಕು. ಹೀಗೆಯೇ ಶ್ರಾವಣ ಮತ್ತು ಭಾದ್ರಪದಮಾಸಗಳಲ್ಲಿ ಮೇಲ್ಕಂಡ ಪರ್ವ ಮತ್ತು ನಕ್ಷತ್ರಗಳಲ್ಲಿ ಶ್ಯಾಮಾಕಾಗ್ರಯಣವು. ಚೈತ್ರವೈಶಾಖಗಳ ಪರ್ವಮೊದಲಾದವುಗಳಲ್ಲಿ ಯವಾಗ್ರಯಣವು. ಅದರಲ್ಲಿ ಪೌರ್ಣಮಾಸ್ಯೆಯ ಪರ್ವದಲ್ಲಿ ಸಂಗವಕಾಲಕ್ಕಿಂತಲೂ ಮುಂಚೆ ಸಂಧಿಯಾದರೆ ಪೂರ್ವದಿನದಲ್ಲಿ ಆಗ್ರಯಣವನ್ನುಮಾಡಿ ಪ್ರಕೃತಿಗೆ ಅನ್ವಾಧಾನ ಮಾಡಬೇಕು. ಮಧ್ಯಾಹ್ನಾನಂತರದಲ್ಲಿ ಸಂಧಿಯಾದರೆ ಸಂಧಿದಿನದಲ್ಲಿ

ಆಗ್ರಯಣವನ್ನುಮಾಡಿ ಪ್ರಕೃತಿಗೆ ಅನ್ವಾಧಾನ ಮಾಡಬೇಕು. ಮಧ್ಯಾಹ್ನ
ದಲ್ಲಾಗಲಿ, ಸಂಗವಾಸಂತರದಲ್ಲಿ ಮಧ್ಯಾಹ್ನಕ್ಕಿಂತಲೂ ಮುಂಚೆಯಾಗಲಿ
ಸಂಧಿಯಾದರೆ ಸಂಧಿದಿನದಲ್ಲಿ ಆಗ್ರಯಣೇಷ್ಟಿಯನ್ನುಮಾಡಿ ಪ್ರಕೃತೀ
ಷ್ಟಿಯನ್ನು ಆ ದಿನದಲ್ಲಾಗಲಿ ಎರಡನೆಯ ದಿನದಲ್ಲಾಗಲಿ ಮಾಡಬೇಕು.
ದರ್ಶದಲ್ಲಾದರೆ ಪೂರ್ವಾಹ್ಣದಲ್ಲಾಗಲಿ ಅಪರಾಹ್ಣದಲ್ಲಾಗಲಿ ಸಂಧಿಯಾದ
ರೆ ಕಾಲಕ್ಕೆ ಸರಿಯಾಗಿ ದರ್ಶೇಷ್ಟಿಯನ್ನುಮಾಡಿ ಪ್ರತಿಪತ್ತಿನ ಮಧ್ಯದ
ಲ್ಲಿ ಆಗ್ರಯಣೇಷ್ಟಿಯನ್ನು ಮಾಡಬೇಕು. ನಕ್ಷತ್ರಾಗ್ರಯಣದಲ್ಲಿಯೂ
ಹೀಗೆಯೇ ಪೌರ್ಣಮಾಸೇಷ್ಟಿಗಿಂತಲೂ ಮುಂಚೆ ದರ್ಶೇಷ್ಟಿಯ ಅನಂ
ತರದಲ್ಲಿ ಆಗುವಹಾಗೆ ಆಗ್ರಯಣವನ್ನು ಮಾಡಬೇಕು. ಹಾಗೆಯೇ ದೀಪಿ
ಕೆಯಲ್ಲಿಯೂ ಆಗ್ರಯಣವು ದರ್ಶೇಷ್ಟಿಯ ಅನಂತರದಲ್ಲೂ 'ಪ್ರಾಕ್ಪೌ
ರ್ಣಮಾಸಾಚ್ಚ ತತ್' ಪೌರ್ಣಮಾಸ್ಯೇಷ್ಟಿಗಿಂತಲೂ ಮೊದಲು ಮಾಡ
ಬೇಕೆಂದು ಹೇಳಿದೆ. ಆದರೆ 'ಅಥೋಪೂರ್ವಾಹ್ಣಪರ್ವಕ್ಷಯೇ' ಎಂದು
ಹೇಳಿರುವುದರಿಂದ ಪೂರ್ವಾಹ್ಣಸಂಧಿಯಲ್ಲಿಯೇ ಹೀಗೆ ನಡೆಯಬೇಕೆಂಬು
ದು ಹೇಮಾದ್ರಿಮತವನ್ನು ಅನುಸರಿಸಿರುವ ದೀಪಿಕೆಯ ಮತವು. ಆದರೂ
ಎಲ್ಲವಿಧವಾದ ಸಂಧಿಗಳಲ್ಲಿಯೂ ಹೀಗೆಯೇ ನಡೆಯಬೇಕೆಂಬ ಕೌಸ್ತುಭ
ಸಿದ್ಧಾಂತವನ್ನು ಅನುಸರಿಸಿ ಇಲ್ಲಿ ಬರೆದಿದೆ ಎಂದು ತಿಳಿಯಬೇಕು. ಈ
ಪಕ್ಷದಲ್ಲಿ 'ಅಥೋ' ಎಂಬ ಪದವನ್ನು ಅರ್ಥಕ್ಕೆ ಸೇರಿಸಿಕೊಳ್ಳಬೇಕು.
ಅದರಿಂದ ಪೂರ್ವಾಹ್ಣದಲ್ಲಿ ಪರ್ವಕ್ಷಯವುಂಟಾದರೆ, ಎಂದು ಅರ್ಥವು. ಹೀ
ಗೆ ಕೃಷ್ಣಪಕ್ಷದಲ್ಲಾಗುವುದಿಲ್ಲವೆಂಬುದು ಸಿದ್ಧವಾಗುವುದು. ಅಮಾವಾ
ಸ್ಯಾಪರ್ವದಲ್ಲಿ ಆಗ್ರಯಣವನ್ನು ಮಾಡಬೇಕೆಂದು ವಿಧಿಸಿರುವುದಕ್ಕೆ ಅಖಂ
ಡದರ್ಶವಿಷಯದಲ್ಲಿ ವೈಯರ್ಥ್ಯವುಂಟಾಗುವುದರಿಂದ ಈ ದೀಪಿಕಾಕಾ
ರನ ಮತವು ಯುಕ್ತವಾದದ್ದಲ್ಲವೆಂಬ ಗೃಹ್ಯಾಗ್ನಿಸಾಗರದ ವಚನವು. ವಿ
ಕೃತಿಭೇದಗಳನ್ನೂ, ಖಂಡಪರ್ವದಲ್ಲಿ ಪ್ರಕೃತಿಯ ಅನಂತರದಲ್ಲಿ ಪ್ರತಿಪ
ತ್ತಿನಲ್ಲಿ ಮಾಡಿದಾಗ್ಯೂ ಪರ್ವವನ್ನನುಸರಿಸಿ ನಡೆಯಿಸಿದಂತೆ ಒಪ್ಪಿಕೊಳ್ಳು
ವಹಾಗೆಯೇ, ಖಂಡದರ್ಶದಲ್ಲಿಯೂ ಸಹ ಪ್ರತಿಪತ್ತಿನಲ್ಲಿ ಮಾಡಹೋಗು
ವ ಆಗ್ರಯಣಕ್ಕೆ ದರ್ಶಪರ್ವದ ಸಮೀಪಕಾಲಗಳಲ್ಲಿಯೇ ಮಾಡಿದಂತಾ
ಗುವದೆಂದು ಅಂಗೀಕರಿಸಬಹುದಾದ್ದರಿಂದಲೂ, ಖಂಡದರ್ಶದಲ್ಲಿ ದರ್ಶ

ಪರ್ವವನ್ನು ವಿಧಾನಮಾಡಿದ್ದಕ್ಕೆ ಸಾರ್ಥಕ್ಯವುಂಟಾಗುವುದರಿಂದಲೂ, ಸರಿಯಲ್ಲವೆಂದು ತೋರುತ್ತದೆ. ಶ್ರಾವಣಾದಿ ಮಾಸಗಳಲ್ಲಿ ಶ್ಯಾಮಾಕಾಗ್ರಯಣವನ್ನು ಮಾಡದಿದ್ದರೆ ಶರದೃತುವಿನಲ್ಲಿ ವ್ರೀಹ್ಯಾಗ್ರಯಣದೊಡನೆ ಸಮಾನತಂತ್ರದಿಂದ ಮಾಡಬೇಕು. ಸ್ಮಾರ್ತಾಗ್ನಿಯಲ್ಲಿ ವ್ರೀಹ್ಯಾಗ್ರಯಣವನ್ನೂ, ಶ್ಯಾಮಾಕಾಗ್ರಯಣವನ್ನೂ ತಂತ್ರದಿಂದ ಮಾಡುವೆನೆಂದು ಸಂಕಲ್ಪಮಾಡಿ, ಇಂದ್ರ, ಅಗ್ನಿ, ವಿಶ್ವೇದೇವತೆಗಳಿಗಾಗಿ ಎಂಟುಹಿಡಿ ವ್ರೀಹಿಯನ್ನು ಹಾಕಿ, ಬೇರೊಂದು ಮೊರದಲ್ಲಿ ಶ್ಯಾಮಾಕವನ್ನು ಸೋಮದೇವತೆಗೆ ಹೆಸರಿನಿಂದ ನಿರ್ದೇಶಮಾಡಿಹಾಕಿ, ಮತ್ತೆ ಮೊದಲನೆಯ ಮೊರದಲ್ಲಿ (ಶೂರ್ಪಪಾತ್ರ) ದ್ಯಾವಾಪೃಥಿವಿಗಳಿಗಾಗಿ ವ್ರೀಹಿಮುಷ್ಟಿಗಳನ್ನಿಡಬೇಕು. ಹೋಮದಲ್ಲಿಯೂ ಹೀಗೆಯೇ. ವಿಶ್ವೇದೇವ ಹೋಮಾನಂತರದಲ್ಲಿ ಸೋಮದೇವತೆಗೆ ಶ್ಯಾಮಾಕಾನ್ನವನ್ನು ಹೋಮಮಾಡಿ ಆಮೇಲೆ ದ್ಯಾವಾಪೃಥಿವೀಹೋಮವನ್ನು ಮಾಡಬೇಕು. ಆಶ್ವಯುಜ ಪೌರ್ಣಮಿಗೆ ಅಪರಾಹ್ಣ ಮೊದಲಾದ ಸಂಧಿಗಳಲ್ಲಿ, ಆಗ್ರಯಣವನ್ನು ಮಾಡುವಾಗ ಆಶ್ವಯುಜೀ ಕರ್ಮದೊಡನೆ ಸಮಾನತಂತ್ರದಿಂದ ಮಾಡಬೇಕು. ಆದರೆ-ಜೀರ್ಣವ್ರೀಹಿಚರು, ನವ (ಹೊಸ) ವ್ರೀಹಿಚರು, ನವಶ್ಯಾಮಾಕಚರುಗಳೆಂಬ ಮೂರುವಿಧ ಚರುಗಳನ್ನೂ ಮೂರು ಪಾತ್ರದಲ್ಲಿ ಮಾಡಬೇಕು. ಪೂರ್ವಾಹ್ಣಾದಿ ಸಂಧಿಗಳಲ್ಲಿ-ಸಂಧಿದಿನದಲ್ಲಿ ಪ್ರಕೃತಿಯಾಗವನ್ನು ಮಾಡಿದಮೇಲೆ ಆಶ್ವಯುಜೀ ಕರ್ಮವೂ, ಪೂರ್ವದಿನದಲ್ಲಾಗಲಿ,ಸಂಧಿದಿನದಲ್ಲಾಗಲಿ, ಪ್ರಕೃತಿಯಾಗಕ್ಕಿಂತ ಮುಂಚೆ ಆಗ್ರಯಣವೂ ಆಗಬೇಕಾದ್ದರಿಂದ ಎರಡರ ಕಾಲವೂ ಒಂದೇ ಆಗದೆ ಕಾಲಭೇದ ವುಂಟಾಗಿರುವಕಾರಣ ಏಕತಂತ್ರವು ಕೂಡದು. ಶ್ಯಾಮಾಕಚರುವನ್ನು ಮಾಡುವುದಕ್ಕೆ ಆಗದಿರುವಪಕ್ಷದಲ್ಲಿ ಶ್ಯಾಮಾಕತೃಣಗಳಿಂದ (ಹುಲ್ಲಿನಿಂದ) ಹಾಸಿಗೆಯನ್ನುಮಾಡಿ (ಕೆಳಕ್ಕೆ ಹಾಸಿ) ಅದರಮೇಲೆ ಸ್ರುಚವನ್ನು ಇಡುವುದರಿಂದಲೇ ಶ್ಯಾಮಾಕಾಗ್ರಯಣವನ್ನು ಮಾಡಿದಂತಾಗುವುದು. (ಕೃತ) ಎಂದು ವೃತ್ತಿಕಾರನಾದ ನಾರಾಯಣಭಟ್ಟನು ಹೇಳಿದ್ದಾನೆ. ಯವಾಗ್ರಯಣವು ವಿಕಲ್ಪವಾದದ್ದು. ವ್ರೀಹ್ಯಾಗ್ರಯಣಕ್ಕೆ ವಸಂತಋತುವಿನವರೆಗೂ ಗೌಣ (ಮುಖ್ಯವಲ್ಲದ್ದು) ಕಾಲವುಂಟು. ಯವಾಗ್ರಯಣಕ್ಕೆ ವರ್ಷರ್ತುವಿನವರೆಗೂ ಗೌಣಕಾಲ

ವು. ಆಪತ್ತು ಪ್ರಾಪ್ತವಾಗದೆ ಗೌಣಕಾಲದಲ್ಲಿ ಮಾಡಿದರೆ ಕಾಲಾತಿಕ್ರಮಣಕ್ಕೆ ಪ್ರಾಯಶ್ಚಿತ್ತವನ್ನು ಮಾಡಿಕೊಂಡು ಆಗ್ರಯಣವನ್ನು ಮಾಡಬೇಕು, ಆಪತ್ತಿನಿಂದ (ಸಂಕಟ) ಕಾಲಾತಿಕ್ರಮಣವಾದರೆ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕಾದದ್ದಿಲ್ಲ. ಗೌಣಕಾಲವೂ ಅತಿಕ್ರಮಿಸಿದರೆ ವೈಶ್ವಾನರೇಷ್ಟಿಯನ್ನು ಪ್ರಾಯಶ್ಚಿತ್ತರೂಪವಾಗಿಮಾಡಿ ಅತಿಕ್ರಾಂತವಾದ ಆಗ್ರಯಣವನ್ನು ಮಾಡಬೇಕು. ಸ್ಮಾರ್ತಪ್ರಯೋಗದಲ್ಲಾದರೆ ಆಹಿತಾಗ್ನಿಗೆ ಯಾವುವು ಪುರೋಡಾಶಗಳೋ ಅವೇ ಔಪಾಸನಾಗ್ನಿಯುಳ್ಳವನಿಗೆ ಚರುಗಳೆನ್ನಿಸುವವೆಂದು ವಚನವಿರುವಕಾರಣ ವೈಶ್ವಾನರ ದೇವತಾಸಂಬಂಧವಾದ ಸ್ಥಾಲೀಪಾಕವು ಗ್ರಾಹ್ಯವಾದದ್ದು. ಪ್ರಥಮಾಗ್ರಯಣಕ್ಕೆ ಶರತ್ಕಾಲವೂ ಕಳೆದುಹೋದರೆ ವಿಭ್ರಷ್ಟೇಷ್ಟಿಯನ್ನಾಗಲಿ, ಆ ದೇವತಾಕವಾದ ಸ್ಥಾಲೀಪಾಕವನ್ನಾಗಲಿಮಾಡಿ, ಮುಂದೆ ಬರುವ ಮುಖ್ಯಕಾಲದಲ್ಲಿ ಪ್ರಥಮಾಗ್ರಯಣವನ್ನು ಮಾಡಬೇಕು. ಗೌಣಕಾಲದಲ್ಲಿ (ಮೊದಲನೆ) ಪ್ರಥಮಾಗ್ರಯಣವು ಹುಟ್ಟಲಾರದು. ಪ್ರಾರಂಭಿಸದಿರುವ ದರ್ಶ, ಪೂರ್ಣಮಾಸ, ಆಗ್ರಯಣಾದಿಗಳಿಗೆ ಪ್ರಾಯಶ್ಚಿತ್ತವು ವಿಕಲ್ಪವಾದ್ದರಿಂದ, ವಿಭ್ರಷ್ಟೇಷ್ಟಿಯೂ ವಿಕಲ್ಪವಾಗದ್ದೆಂದು ತಿಳಿಯಬೇಕು. ಆಗ್ರಯಣವನ್ನು ಮಾಡದೆ ಹೊಸ ಬೆಳೆಯನ್ನಾವುದನ್ನೂ ತಿನ್ನಕೂಡದು. „ಅಕೃತಾಗ್ರಯಣೋಽಶ್ನೀಯಾನ್ನವಾನ್ನಂ ಸುದಿವ್ಯೈನರಃ । ವೈಶ್ವಾನರಾಯಕರ್ತವ್ಯಶ್ಚರುಃ ಪೂರ್ಣಾಹುತಿಸ್ತುವಾ ॥೧॥ ಯದ್ವಾಸಮಿಂದ್ರರಾಯೇತಿ ಶತವಾರಂಜಪೇನ್ಮನುಂ ॥„ ಆಗ್ರಯಣವನ್ನು ಮಾಡದವನು ಹೊಸ ಬೆಳೆಯ ಅನ್ನವನ್ನು ಭುಂಜಿಸಬೇಕಾದರೆ ಅಗ್ನಿಗೆ ಚರುವನ್ನಾಗಲಿ, ಪೂರ್ಣಾಹುತಿಯನ್ನಾಗಲಿ ಮಾಡಬೇಕು ॥೧॥ ಅಥವಾ 'ಸಮಿಂದ್ರರಾಮು' ಎಂಬ ಮಂತ್ರವನ್ನು ನೂರಾವೃತ್ತಿ ಜಪಿಸಬೇಕು.

### ಆಗ್ರಯಣಾನುಕಲ್ಪಗಳು.

ಆಗ್ರಯಣಾನುಕಲ್ಪಗಳು—ಪೃಥಕ್ಕಾಗಿ (ಬೇರ) ಆಗ್ರಯಣವನ್ನು ಮಾಡುವುದಕ್ಕೆ ಶಕ್ತಿ ಇಲ್ಲದಿದ್ದರೆ ಪ್ರಕೃತೀಷ್ಟಿಯೊಡನೆ ಸಮಾನತಂತ್ರದಿಂದ ಮಾಡಬಹುದು. ಅದಕ್ಕೆ ಪೌರ್ಣಮಾಸೇಷ್ಟಿಯೊಡನೆ ಸಮಾನತಂತ್ರವಾದರೆ ಮೊದಲು ಆಗ್ರಯಣದ ಪ್ರಧಾನ (ಮುಖ್ಯ) ಕರ್ಮವೂ,

ಅನಂತರದಲ್ಲಿ ಪ್ರಕೃತವಾದ ಪೌರ್ಣಮಾಸೀಯಾಗವು ದರ್ಶೇಷ್ಟಿಯೊಡನೆ ಏಕತಂತ್ರವಾದರೆ ಮೊದಲು ದರ್ಶೇಷ್ಟಿಪ್ರಧಾನಯಾಗವೂ, ಅನಂತರದಲ್ಲಿ ಆಗ್ರಯಣ ಮುಖ್ಯ ಯಾಗವೂ ನಡೆಯಬೇಕು. 'ವಿರೋಧೇವೈಕೃತಂತತ್ರಂ' ಕರ್ಮವಿರೋಧ ವುಂಟಾದರೆ ವಿಕೃತಿಸಂಬಂಧದಿಂದಲೇ ತಂತ್ರವು ಎಂಬದಾಗಿ ಸಿದ್ಧಾಂತವಿರುವುದರಿಂದ, ಉಳಿದ ಪೂರ್ವ ಅಥವಾ ಉತ್ತರಕಾಲದಲ್ಲಿ ಅಂಗವಾಗಿ ಹುಟ್ಟುವ ಆಗ್ರಯಣವನ್ನು ವಿಕೃತಿಸಂಬಂಧದಿಂದಲೇ ಮಾಡಬೇಕು. ಹೀಗೆ ಮಾಡುವುದಕ್ಕಾಗದಿದ್ದರೆ ಹೊಸದಾದ ಶ್ಯಾಮಾಕ, ವ್ರೀಹಿ, ಯವೆಗಳಿಂದ ಪುರೋಡಾಶವನ್ನು ಮಾಡಿ, ದರ್ಶಪೂರ್ಣಮಾಸಗಳನ್ನು ಮಾಡಬೇಕು. ಇಲ್ಲದಿದ್ದರೆ ನವವ್ರೀಹಿ ಮೊದಲಾದವುಗಳಿಂದ ಅಗ್ನಿಹೋತ್ರ ಹೋಮವನ್ನು ಮಾಡಬೇಕು. ಅಥವಾ ಹೊಸಬೆಳೆಯ ಅನ್ನವನ್ನು ಅಗ್ನಿಹೋತ್ರಕ್ಕೆ ಉಪಯುಕ್ತವಾಗಿರುವ ಹಸುವಿಗೆ ತಿನ್ನಿಸಿ, ಆ ಹಸುವಿನ ಹಾಲಿನಿಂದ ಅಗ್ನಿಹೋತ್ರವನ್ನು ಮಾಡಬಹುದು. ಇಲ್ಲವೇ ನವಾನ್ನದಿಂದ ಬ್ರಾಹ್ಮಣರಿಗೆ ಭೋಜನ ಮಾಡಿಸಬೇಕೆಂಬುದು ಸಂಕ್ಷೇಪವಿಧಿ. ಇದನ್ನು ಮಲಮಾಸದಲ್ಲಿ ಮಾಡಕೂಡದು. ಗುರ್ವಸ್ತ ಮೊದಲಾದವುಗಳಲ್ಲಿಯೂ ಮಾಡಕೂಡದೆಂದು ಕೆಲವರು. ಹಳೆಯ ಧಾನ್ಯವು ಸಿಕ್ಕದಿದ್ದರೆ ಮಲಮಾಸಾದಿಗಳಲ್ಲಿಯೂ ಮಾಡಬೇಕು. ಈ ಪೌರ್ಣಮಾಸ್ಯೆಯಲ್ಲಿ ಜ್ಯೇಷ್ಠಾಪತ್ಯ (ದೊಡ್ಡಮಗ) ಗಳಿಗೆ ಆರತಿ ಮೊದಲಾದವನ್ನು ಮಾಡಬೇಕು. ಇದಕ್ಕೆ ಪರವಿದ್ಧ (ಪ್ರತಿಪದ್ಯುಕ್ತ) ತಿಥಿಯನ್ನು ಗ್ರಹಿಸಬೇಕು. ಆಶ್ವಯುಜ ಕೃಷ್ಣ ಚತುರ್ಥಿಯು ನರಕಚತುರ್ಥಿಯೆನ್ನಿಸುವುದು. ಅದಕ್ಕೆ ಚಂದ್ರೋದಯವ್ಯಾಪ್ತಿಯುಳ್ಳ ತಿಥಿಯನ್ನು ಗ್ರಹಿಸಬೇಕು. ಎರಡು ದಿನಗಳಿಗೆ ಚಂದ್ರೋದಯವ್ಯಾಪ್ತಿ ಇದ್ದರೆ ಸಂಕಷ್ಟಚತುರ್ಥಿಯಂತೆ ನಿರ್ಣಯವು. ಮಥುರಾ ದೇಶದಲ್ಲಿರತಕ್ಕವರು ಕೃಷ್ಣಾಷ್ಟಮಿಯದಿನ ರಾಧಾಕುಂಡದಲ್ಲಿ ಸ್ನಾನಮಾಡಬೇಕು. ಅದಕ್ಕೆ ಅರುಣೋದಯ ಅಥವಾ ಸೂರ್ಯೋದಯವ್ಯಾಪ್ತಿಯುಳ್ಳ ತಿಥಿಯನ್ನು ಗ್ರಹಿಸಬೇಕು.

## ಗೋವತ್ಸದ್ವಾದಶೀ.

ಗೋವತ್ಸದ್ವಾದಶಿ---ಆಶ್ವಯುಜ ಬಹುಳ ದ್ವಾದಶಿಗೆ ಗೋವತ್ಸ

ದ್ವಾದಶಿ ಎಂಬ ಹೆಸರು. ಇದಕ್ಕೆ ಪ್ರದೋಷವ್ಯಾಪ್ತಿಯುಳ್ಳ ತಿಥಿಯೇ ಗ್ರಾಹ್ಯವು. ಎರಡು ದಿನಗಳಲ್ಲಿಯೂ ಪ್ರದೋಷವ್ಯಾಪ್ತಿ ಇಲ್ಲದಿದ್ದರೆ, ಸಾಯಂಕಾಲವೆಂಬ ಗೌಣಕಾಲದಲ್ಲಿರೋಣದರಿಂದ ಎರಡನೆಯದನ್ನು ಗ್ರಹಿಸಬೇಕು. ಎರಡು ದಿನಗಳಿಗೂ ವ್ಯಾಪ್ತಿ ಇದ್ದರೆ ಮೊದಲನೆಯದೇ ಗ್ರಾಹ್ಯವೆಂದು ಬಹುಜನರು, ಎರಡನೆಯದು ಗ್ರಾಹ್ಯವೆಂದು ಕೆಲವರು. ಈ ದಿನದಲ್ಲಿ ಕರೆವ ಹಸುವನ್ನೂ, ಅದೇ ಬಣ್ಣದ ಕರುವನ್ನೂ ಪೂಜಿಸಿ ಗೋವಿನ ಪಾದವನ್ನು ಕುರಿತು ತಾಮ್ರಪಾತ್ರೆಯಲ್ಲಿ ಅರ್ಘ್ಯವನ್ನು ಕೊಡಬೇಕು. ,,ಕ್ಷೀರೋದಾರ್ಣವಸಂಭೂತೇ ಸುರಾಸುರನಮಸ್ಕೃತೇ । ಸರ್ವದೇವಮಯೇಮಾತ ರ್ಗೃಹಾಣಾರ್ಘ್ಯಂನಮೋಸ್ತುತೇ ॥೧॥ ,, ಕ್ಷೀರ ಸಮುದ್ರದಲ್ಲಿ ಹುಟ್ಟಿ, ದೇವರಾಕ್ಷಸರಿಂದ ಪೂಜಿತಳಾಗಿ, ಸಕಲ ದೇವತಾ ಸ್ವರೂಪಳಾದ ಮಾತೆಯೇ! ನಿನಗೆ ವಂದಿಸುವೆನು. ಈ ಅರ್ಘ್ಯವನ್ನು ಸ್ವೀಕರಿಸು ॥೧॥ ಎಂಬುದು ಮಂತ್ರವು. ಅನಂತರದಲ್ಲಿ ಉದ್ದಿನೊಡೆ ಮೊದಲಾದದ್ದನ್ನು ಗೋಗ್ರಾಸಕ್ಕಾಗಿ ಕೊಟ್ಟು, ,,ಸರ್ವದೇವಮಯೇ ದೇವಿ ಸರ್ವದೇವೈರಲಂಕೃತೇ । ಮಾತರ್ಮಮಾಭಿಲಷಿತಂ ಸಫಲಂಕುರು ನಂದಿನಿ,, ॥೧॥ ಎಲ್ಲಾ ದೇವತೆಗಳಿಂದಲೂ ಪೂಜಿಸಲ್ಪಡುತ್ತಾ ಸರ್ವದೇವತಾ ರೂಪಳಾದ ಎಲೈ ನಂದಿನಿಯೇ! ನನ್ನ ಕೋರಿಕೆಯನ್ನು ನೆರವೇರಿಸು ॥೧॥ ಎಂದು ಪ್ರಾರ್ಥಿಸಬೇಕು. ಆ ದಿನದಲ್ಲಿ ಎಣ್ಣೆಯಿಂದ ಕರಿದ ಪಾತ್ರೆಯಲ್ಲಿ ಪಕ್ವ [ಬೇಯಿಸಿದ] ವಾದ ಅನ್ನವನ್ನೂ, ಹಸುವಿನಹಾಲು, ತುಪ್ಪ, ಮೊಸರು, ಮಜ್ಜಿಗೆ ಇವುಗಳನ್ನೂ ಬಿಡಬೇಕು. ನಕ್ತ, ಉಗ್ಗಿನ ಅನ್ನ ಭೋಜನ, ನೆಲದಮೇಲೆ ಮಲಗುವುದು, ಬ್ರಹ್ಮಚರ್ಯ ಇವುಗಳನ್ನು ಮಾಡಬೇಕು. ಇದೇ ದ್ವಾದಶಿಯನ್ನಾರಂಭ ಮಾಡಿಕೊಂಡು ಐದು ದಿನಗಳವರೆಗೂ ರಾತ್ರಿಯ ಪೂರ್ವಭಾಗದಲ್ಲಿ ,,ನೀರಾಜಯೇಯುರ್ದೇವಾಂಶ್ಚ ವಿಪ್ರಾನ್ಗಾಶ್ಚ ತುರಂಗಮಾನ್ । ಜ್ಯೇಷ್ಠಾನ್ ಶ್ರೇಷ್ಠಾನ್ ಜಘನ್ಯಾಂಶ್ಚ ಮಾತೃಮುಖ್ಯಾಶ್ಚ ಯೋಷಿತಃ ॥೧॥,, ತಾಯಿ ಮೊದಲಾದ ಸುವಾಸಿನಿಯರು, ದೇವತೆಗಳಿಗೂ, ಬ್ರಾಹ್ಮಣರಿಗೂ ಹಸು, ಕುದುರೆ ಇವುಗಳಿಗೂ, ಜ್ಯೇಷ್ಠಕನಿಷ್ಠಪುತ್ರರಿಗೂ ಆರತಿಯನ್ನೆತ್ತಬೇಕು ॥೧॥ ಎಂದು ನಾರದನು ಹೇಳಿರುವನು. ತ್ರಯೋದಶಿಯಲ್ಲಿ ಅಪಮೃತ್ಯುಪರಿಹಾರಾರ್ಥವಾಗಿ

ಸಾಯಂಕಾಲದಲ್ಲಿ ಮನೆಯ ಹೊರಗೆ ಯಮನನ್ನುದ್ದೇಶಿಸಿ ದೀಪವನ್ನು ಇಡಬೇಕು. ಈ ತ್ರಯೋದಶಿಯನ್ನಾರಂಭಿಸಿ ಗೋತ್ರಿರಾತ್ರವೆಂಬ ವ್ರತ ವನ್ನು ಮಾಡಬೇಕು. ಅದರ ವಿಧಿಯು ಕೌಸ್ತುಭದಲ್ಲಿದೆ.

## ನರಕಚತುರ್ದಶೀ ೨೨.

ನರಕಚತುರ್ದಶ್ಯಯು—ಆಶ್ವಿಜಕೃಷ್ಣ ಚತುರ್ದಶಿಯಲ್ಲಿ ನರಕಭ ಯದಿಂದ ಎಳ್ಳೆಣ್ಣೆಯನ್ನೊತ್ತಿಕೊಂಡು ಅಭ್ಯಂಗಸ್ನಾನ ಮಾಡಬೇಕು. ಇದಕ್ಕೆ ರಾತ್ರಿಯ ಕೊನೆಯ ಯಾಮವನ್ನು ಮೊದಲ್ಗೊಂಡು ಅರುಣೋ ದಯದವರೆಗೊಂದು, ಅಲ್ಲಿಂದ ಚಂದ್ರೋದಯವರೆಗೊಂದು, ಆಮೇಲೆ ಸೂರ್ಯೋದಯದವರೆಗೊಂದು ಹೀಗೆ ಮೂರು ಕಾಲಗಳುಂಟು. ಇವುಗ ಳಲ್ಲಿ ಮೊದಲು ಮೊದಲನೆಯದು ಶ್ರೇಷ್ಠವಾದದ್ದಲ್ಲ. ಕೊನೆಕೊನೆಯವು ಉತ್ತಮವಾದವು. ಅಂದರೆ--ಚಂದ್ರೋದಯಾನಂತರದಲ್ಲಿ ಮುಖ್ಯ ಕಾಲ ವು, ಪ್ರಾತಃಕಾಲವು ಗೌಣಕಾಲವು, ಮೊದಲನೆಯ ದಿನದಲ್ಲಿಯೇ ಚಂ ದ್ರೋದಯವ್ಯಾಪ್ತಿ ಇದ್ದರೆ ಮೊದಲನೆಯ ದಿನವನ್ನೂ, ಎರಡನೆಯ ದಿನ ದಲ್ಲಿಯೇ ವ್ಯಾಪ್ತಿ ಇದ್ದರೆ ಎರಡನೆಯ ದಿನವನ್ನೂ ಗ್ರಹಿಸಬೇಕು. ಈ ಪಕ್ಷದಲ್ಲಿ-ಆ ದಿನದ ಅಸ್ತಮಯಾದಿ ಕಾಲದಲ್ಲಿ ಹೇಳಿರುವ ಉಲ್ಕಾದಾನ (ಕೊಳ್ಳಿ) ದೀಪದಾನಗಳನ್ನು ಆ ಕಾಲದಲ್ಲಿ ಚತುರ್ದಶಿಯು ಇಲ್ಲದಿದಾ ಗ್ಯೂ ಮಾಡಬೇಕು. ಎರಡು ದಿನಗಳಲ್ಲಿ ಚಂದ್ರೋದಯವ್ಯಾಪ್ತಿ ಇದ್ದರೆ ಪೂರ್ವದಿನವನ್ನೇ ಗ್ರಹಿಸಬೇಕು. ಎರಡು ದಿನಗಳಲ್ಲಿ ಚಂದ್ರೋದಯ ವ್ಯಾಪ್ತಿ ಬಂದರೆ ಮೂರು ಪಕ್ಷಗಳುಂಟು. ಮೊದಲದಿನದಲ್ಲಿ ಚಂದ್ರೋ ದಯಾನಂತರದಲ್ಲಿ ಉಷಃಕಾಲವನ್ನೂ, ಸೂರ್ಯೋದಯವನ್ನೂ ವ್ಯಾಪಿಸಿ ಪ್ರಾರಂಭವಾಗಿ ಎರಡನೆಯದಿನ ಚಂದ್ರೋದಯಕ್ಕಿಂತಲೂ ಮುಂಚೆ ಮುಗಿಯುವುದು. ಉ-ತ್ರಯೋದಶೀ ೫೮-೫೦, ಚತುರ್ದಶಿ ೫೭, ಈ ಮೊದಲನೆಯಪಕ್ಷದಲ್ಲಿ ಚತುರ್ದಶೀಯುಕ್ತವಾದ ಉಷಃಕಾಲದ ಒಂದು ಭಾಗದಲ್ಲಿ ಅಭ್ಯಂಗಸ್ನಾನವನ್ನು ಮಾಡಬೇಕು. ಮೊದಲ ದಿನದಲ್ಲಿ ಸೂ ರ್ಯೋದಯಕಾಲದಲ್ಲಿಯೇ ವ್ಯಾಪ್ತಿಯುಳ್ಳದ್ದಾಗಿ ಪ್ರಾರಂಭವಾಗಿ ಎರಡನೆ ಯ ದಿನದಲ್ಲಿ ಚಂದ್ರೋದಯಕ್ಕಿಂತಲೂ ಮುಂಚೆ ಮುಗಿಯುವುದೊಂ ದು. ಅಥವಾ ಸೂರ್ಯೋದಯವನ್ನು ಸ್ಪರ್ಶಮಾಡದೆ ಚತುರ್ದಶಿಯು ಕ್ಷ

ಯವಾಗುವುದು. ಉ-ತ್ರಯೋದಶಿ ೫೯-೫೯ ಚತುರ್ದಶಿ ೫೭, ಅಥವಾ ತ್ರಯೋದಶಿ ೨, ಆ ದಿನವಲ್ಲಿ ಚತುರ್ದಶಿ ೫೮. ಈ ಎರಡು ಪಕ್ಷಗಳಲ್ಲಿಯೂ ಎರಡನೆಯ ದಿನದ ಚಂದ್ರೋದಯದಲ್ಲಿ, ನಾಲ್ಕನೇ ಯಾಮ ಮೊದಲಾದ ದಿವಸದ ಕೊನೆಯ ಭಾಗಕ್ಕೆ ಚತುರ್ದಶೀವ್ಯಾಪ್ತಿ ಇರುವುದರಿಂದ ಅಭ್ಯಂಗಸ್ನಾನವು. ಈ ಎರಡು ಪಕ್ಷಗಳಲ್ಲಿ ಕೆಲವರು-ಅರುಣೋದಯಕ್ಕಿಂತಲೂ ಮೊದಲು ಚತುರ್ದಶೀ ಮಧ್ಯದಲ್ಲಿಯೇ ಸ್ನಾನವೆಂದು ಹೇಳುವರು. ಉಳಿದವರು-ಅರುಣೋದಯಾನಂತರದಲ್ಲಿ ಚಂದ್ರೋದಯ ಮೊದಲಾದ ಕಾಲದಲ್ಲಿ ಅಮಾವಾಸ್ಯಾದಿಗಳಿಂದ ಕೂಡಿದ್ದಾಗ್ಯೂ ಸ್ನಾನಮಾಡಬೇಕೆಂದು ಹೇಳುವರು. ಆದರೆ-ಚತುರ್ದಶೀಕ್ಷಯದಲ್ಲಿ ಪೂರ್ವದಿನದ ತ್ರಯೋದಶಿಯ ಚಂದ್ರೋದಯದಲ್ಲಿ ಸ್ನಾನವೆಂದು ಹೇಳುತ್ತಾರೆ. ಅದು ಯುಕ್ತವಲ್ಲ. ಇಲ್ಲಿ ಅಭ್ಯಂಗಸ್ನಾನವು ವಿಶೇಷವಾದದ್ದು. ,,ಸೀತಾಲೋಷ್ಟಸಮಾಯುಕ್ತ ಸಕಂಟಕದಳಾನ್ವಿತ । ಹರ ಪಾಪಮಪಾಮಾರ್ಗಭ್ರಾಮ್ಯಮಾಣಃಪುನಃಪುನಃ॥೧॥,, ನೇಗಿಲಿನಿಂದಎತ್ತ ಹೆಂಟೆ (ಮಣ್ಣು) ಯಿಂದಲೂ, ಮುಳ್ಳುಗಳಿಂದಲೂ, ಎಲೆಗಳಿಂದಲೂ ಕೂಡಿದ ಎಲೈ ಉತ್ತರಣೆಯೇ! ನನ್ನ ಕೈಯಿಂದ ಬಾರಿಬಾರಿಗೂ ತಿರುಗಿಸುವೆನಾದ್ದರಿಂದ ಸುತ್ತುತ್ತಿರುವ ನೀನು ನನ್ನ ಪಾಪಗಳೆಲ್ಲವನ್ನೂ ಪರಿಹರಿಸು ॥೧॥ ಎಂಬ ಮಂತ್ರದಿಂದ ನೇಗಲಿಂದ ಎತ್ತಿಬಂದ ಮಣ್ಣಿನೊಡನೆ ಕೂಡಿದ ಉತ್ತರಣೆಯ ಕೊನೆ, ಸೋರೆಯಕೊನೆ, ಕೊಂಬೆಗಳನ್ನು ತೆಗೆದುಕೊಂಡು ಸ್ನಾನಮಾಡುತ್ತಾ ಇರುವಾಗಲೇ ಮೂರಾವೃತ್ತಿ ತಿರುಗಿಸಬೇಕು. ಅಭ್ಯಂಗಸ್ನಾನವಾದಮೇಲೆ ತಿಲಕವನ್ನು ಧರಿಸಿದನಂತರ ಕಾರ್ತಿಕಸ್ನಾನವನ್ನು ಮಾಡಬೇಕು. ಉಕ್ತವಾದಕಾಲದಲ್ಲಿ ಅಭ್ಯಂಗಕ್ಕವಕಾಶವಿಲ್ಲದೆ ಹೋದರೆ ಸೂರ್ಯೋದಯಾನಂತರದಲ್ಲಿ ಗೌಣಕಾಲದಲ್ಲಾದರೂ ಯತಿಗಳು ಮೊದಲಾದವರೂ ಸಹ ಅವಶ್ಯಕವಾಗಿ ಅಭ್ಯಂಗಸ್ನಾನವನ್ನು ಮಾಡಿಕೊಳ್ಳಬೇಕು. ಕಾರ್ತಿಕಸ್ನಾನಾನಂತರದಲ್ಲಿ ಯಮತರ್ಪಣ ಮಾಡಬೇಕು.

### ಯಮತರ್ಪಣವು.

ಯಮತರ್ಪಣವು— ಯಮಾಯನಮಃ, ಯಮಂತರ್ಪಯಾಮಿ, ಎಂದು ಹೇಳಿ ಎಳ್ಳಿನೊಡನೆ ಮೂರು ಬೊಗಸೆಯ ನೀರನ್ನು ತೆಗೆದುಕೊಂ

ಡು ಸವ್ಯದಲ್ಲಾಗಲಿ, ಅಪಸವ್ಯದಲ್ಲಾಗಲಿ, ದೇವತೀರ್ಥ ಅಥವಾ ಪಿತೃತೀರ್ಥದಿಂದ ದಕ್ಷಿಣಾಭಿಮುಖನಾಗಿ ತರ್ಪಣವನ್ನು ಕೊಡಬೇಕು. (ಬೆರಲುಗಳ ತುದಿಯಿಂದ ಬಿಡುವ ನೀರಿಗೆ ದೇವತೀರ್ಥವೆಂತಲೂ, ಅಂಗುಷ್ಠಕ್ಕೂ ಉಳಿದ ಬೆರಲುಗಳಿಗೂ ಮಧ್ಯದಲ್ಲಿ ಬಿಡುವುದಕ್ಕೆ ಪಿತೃತೀರ್ಥವೆಂತಲೂ ಹೆಸರು.) ಮುಂದೆಯೂ ಹೀಗೆಯೇ. ಧರ್ಮರಾಜಾಯ-ಮೃತ್ಯವೇ-ಅನ್ತಕಾಯ-ವೈವಸ್ವತಾಯ-ಕಾಲಾಯ- ಸರ್ವಭೂತಕ್ಷಯಾಯ-ಔದುಂಬರಾಯ-ದಧ್ನಾಯ-ನೀಲಾಯ - ಪರಮೇಷ್ಠಿನೇ-ವೃಕೋದರಾಯ-ಚಿತ್ರಾಯ-ಚಿತ್ರಗುಪ್ತಾಯ ಎಂಬದಾಗಿ ತರ್ಪಣ ಕೊಡಬೇಕು. ಜೀವತ್ಪಿತೃಕನು ಯವೆಗಳೊಡನೆ ಸವ್ಯವಾಗಿ ದೇವತೀರ್ಥದಿಂದ ತರ್ಪಣ ಮಾಡಬೇಕು. ,,ತತಃಪ್ರದೋಷಸಮಯೇದೀಪಾನ್ ದದ್ಯಾನ್ಮನೋಹರಾನ್ । ದೇವಾಲಯೇಮಠೇವಾಪಿ ಪ್ರಾಕಾರೋದ್ಯಾನವೀಥಿಷು ॥೧॥ ಗೋವಾಜಿಹಸ್ತಿಶಾಲಾಯಾ ಮೇವಂಘಸ್ರತ್ರಯೇಪಿಚ । ತುಲಾಸಂಸ್ಥೇಸಹಸ್ರಾಂಶೌಪ್ರದೋಷೇ ಭೂತದರ್ಶಯೋಃ ॥೨॥ ಉಲ್ಕಾಹಸ್ತಾನರಾಃ ಕುರ್ಯುಃ ಪಿತೄಣಾಂ ಮಾರ್ಗದರ್ಶನಂ ॥,, ಅನಂತರದಲ್ಲಿ ಪ್ರದೋಷಕಾಲದೊಳಗೆ ರಮ್ಯವಾದ ದೀಪಗಳನ್ನು ದೇವಾಲಯ, ಮಠ, ಪ್ರಾಕಾರ (ಪೌಳಿ) ಉಪವನ, ಬೀದಿ, ॥೧॥ ದನಗಳ ಕೊಟ್ಟಗೆ, ಕುದುರೆ, ಆನೆ ಇವುಗಳ ಲಾಯ ಮುಂತಾದವುಗಳಲ್ಲಿ ಇಡಬೇಕು. ಸೂರ್ಯನು ತುಲಾರಾಶಿಗೆ ಬಂದಮೇಲೆ ಚತುರ್ದಶಿ, ಅಮಾವಾಸ್ಯೆ ಈ ಎರಡು ದಿನಗಳಲ್ಲಿ ಒಟ್ಟು ಮೂರು ದಿನಗಳಲ್ಲಿಯೂ ಪ್ರದೋಷಕಾಲಕ್ಕೆ ॥೨॥ ಜನರು ಕೈಯಲ್ಲಿ ಉರಿವ ಕೊಳ್ಳಿಗಳನ್ನು ಪಿತೃಗಳಿಗೆ ದಾರಿಯನ್ನು ತೋರಿಸುವುದಕ್ಕಾಗಿ ಹಿಡಿದುಕೊಳ್ಳಬೇಕು. ಅದಕ್ಕೆ ಮಂತ್ರವು, ,,ಅಗ್ನಿದಗ್ಧಾಶ್ಚಯೇಜೀವಾ ಯೇಪ್ಯದಗ್ಧಾಃ ಕುಲೇಮಮ । ಉಜ್ಜ್ವಲಜ್ಯೋತಿಷಾದಗ್ಧಾಸ್ತೇಯಾಂತುಪರಮಾಂಗತಿಂ ॥೧॥ ಯಮಲೋಕಂಪರಿತ್ಯಜ್ಯ ಆಗತೋಯೇಮಹಾಲಯೇ । ಉಜ್ಜ್ವಲಜ್ಯೋತಿಷಾವರ್ತ್ಮ ಪ್ರಪಶ್ಯಂತುವ್ರಜಂತುತೇ ॥೨॥,, ನಮ್ಮ ವಂಶದಲ್ಲಿ ಅಗ್ನಿಯಿಂದ ದಗ್ಧರಾದವರೂ ಇಲ್ಲದವರೂ ಸಹ ಈ ಉರಿಯ ಬೆಳಕಿನಿಂದ ದಗ್ಧರಾಗಿ ಸದ್ಗತಿಯನ್ನು ಪಡೆಯಲಿ ॥೧॥ ಮಹಾಲಯಕಾಲದಲ್ಲಿ ಯಮಲೋಕವನ್ನು ಬಿಟ್ಟು ಬಂದಿರುವ ಪಿತೃಗಳೆಲ್ಲರೂ ಈ ಕೊಳ್

ಯ ಉರಿಯ ಬೆಳಕಿನಲ್ಲಿ ಮಾರ್ಗವನ್ನು ತಿಳಿದು ಹೊರಟುಹೋಗಲಿ ॥ ೨ ॥ ಈ ದಿನದಲ್ಲಿ ನಕ್ತಭೋಜನವು ಮಹಾ ಫಲಪ್ರದವಾದದ್ದು.

## ಲಕ್ಷ್ಮೀಪೂಜೆ ಮೊದಲಾದವು.

ಲಕ್ಷ್ಮೀಪೂಜನಾದಿಗಳು—ಆಶ್ವಯುಜಮಾಸದ ಅಮಾವಾಸ್ಯೆಯ ಪ್ರಾತಃಕಾಲದಲ್ಲಿ ಅಭ್ಯಂಗಸ್ನಾನವನ್ನೂ, ಪ್ರದೋಷದಲ್ಲಿ ದೀಪದಾನವನ್ನೂ (ಇಡುವುದು) ಲಕ್ಷ್ಮೀಪೂಜೆಯನ್ನೂ ಮಾಡಬೇಕು. ಸೂರ್ಯೋದಯವ್ಯಾಪ್ತಿಯುಳ್ಳದ್ದಾಗಿ ಅಸ್ತಮಯಾನಂತರದಲ್ಲಿ ಒಂದುಗಳಿಗೆಗೆ ಮೀರಿ ರಾತ್ರಿ ವ್ಯಾಪ್ತಿ ಇರುವ ದರ್ಶವಾದರೆ ಸಂದೇಹವಿಲ್ಲ. ಬೆಳಗಿನಲ್ಲಿ ಅಭ್ಯಂಗಸ್ನಾನ, ದೇವತಾಪೂಜೆಗಳನ್ನುಮಾಡಿ, ಅಪರಾಹ್ಣದಲ್ಲಿ ಪಾರ್ವಣಶ್ರಾದ್ಧ ಮಾಡಿ, ಪ್ರದೋಷಕಾಲದಲ್ಲಿ ದೀಪಗಳನ್ನಿಡುವುದು, ಕೊಳ್ಳಿಯನ್ನು ತೋರಿಸುವುದು, ಲಕ್ಷ್ಮೀಪೂಜೆ ಇವುಗಳನ್ನು ಮಾಡಿಕೊಂಡು ಭೋಜನಮಾಡಬೇಕು. ಈ ದರ್ಶದಲ್ಲಿ ಬಾಲವೃದ್ಧರನ್ನುಳಿದವರು ಹಗಲು ಊಟವನ್ನು ಮಾಡಕೂಡದು. ರಾತ್ರಿಯಲ್ಲಿ ಊಟಮಾಡಬೇಕೆಂಬುದನ್ನು ಹೇಳಿದಂತೆಯೇ ಆಯಿತು. ಎರಡನೇ ದಿನದಲ್ಲಿಯೇ ಆಗಲಿ ಎರಡು ದಿನಗಳಲ್ಲಾಗಲಿ ಪ್ರದೋಷವ್ಯಾಪ್ತಿ ಇದ್ದರೆ ಎರಡನೆಯ ತಿಥಿಯನ್ನು ಗ್ರಹಿಸಬೇಕು. ಮೊದಲದಿನದಲ್ಲಿಯೇ ಪ್ರದೋಷವ್ಯಾಪ್ತಿ ಇದ್ದರೆ ಲಕ್ಷ್ಮೀಪೂಜಾದಿಗಳನ್ನು ಮೊದಲದಿನದಲ್ಲಿ ಮಾಡಬೇಕು. ಅಭ್ಯಂಗಸ್ನಾನಾದಿಗಳಿಗೆ ಎರಡನೆಯದನ್ನು ಗ್ರಹಿಸಬೇಕು. ಎರಡು ದಿನಗಳಿಗೂ ಪ್ರದೋಷವ್ಯಾಪ್ತಿ ಇಲ್ಲದಿದ್ದಾಗ್ಯೂ ಹೀಗೆಯೇ. ಮೊದಲನೆಯ ದಿನದಲ್ಲಿ ವ್ಯಾಪ್ತಿ ಬರುವಪಕ್ಷದಲ್ಲಿ ಎರಡನೆಯ ದಿನದಲ್ಲಿ ಮೂರು ಯಾಮಗಳಿಗಿಂತಲೂ ಹೆಚ್ಚಾದ ವ್ಯಾಪ್ತಿಯುಳ್ಳ ದರ್ಶವಿದ್ದರೆ ದರ್ಶಕ್ಕಿಂತಲೂ ಪ್ರತಿಪತ್ತು ವೃದ್ಧತಿಥಿಯಾದಾಗ ಲಕ್ಷ್ಮೀಪೂಜೆ ಮೊದಲಾದವುಗಳೂ ಎರಡನೆಯ ದಿನದಲ್ಲಿಯೇ ನಡೆಯಬೇಕೆಂದು ಪುರುಷಾರ್ಥಚಿಂತಾಮಣಿಯಲ್ಲಿ ಹೇಳಿದೆ. ಇವನ ಮತದಂತೆ ಎರಡು ದಿನಗಳಲ್ಲಿಯೂ ಪ್ರದೋಷವ್ಯಾಪ್ತಿ ಇದ್ದಾಗಲೂ, ಎರಡನೆಯ ದಿನದಲ್ಲಿ ದರ್ಶಕ್ಕೆ ಮೂರೂವರೆ ಯಾಮಕ್ಕಿಂತ ಹೆಚ್ಚು ವ್ಯಾಪ್ತಿ ಇರೋಣದರಿಂದ ಎರಡನೆಯದನ್ನೇ ಗ್ರಹಿಸಬೇಕೆಂಬುದು ಯುಕ್ತವೆಂದು ತೋರುವುದು. ಚತುರ್ದಶಿ ಮೊದಲಾದ ಮೂರು ದಿನಗಳನ್ನು ದೀಪಾವಳಿ ಎಂದು

ಹೇಳುವರು. ಈ ದಿನಗಳಲ್ಲಿ ಯಾವದಿನಕ್ಕೆ ಸ್ವಾತೀನಕ್ಷತ್ರಯೋಗವಿದೆಯೋ ಆ ದಿನವು ಪ್ರಶಸ್ತವಾದದ್ದು. ಈ ದಿನದಲ್ಲಿಯೇ ನಿಶೀಥಾನಂತರದಲ್ಲಿ ಪಟ್ಟಣದಲ್ಲಿರುವ ಹೆಂಗಸರು ತಮ್ಮ ಮನೆಯಿಂದ ಅಲಕ್ಷ್ಮಿಯನ್ನು (ದಾರಿದ್ರ್ಯ) ಹೊರಡಿಸತಕ್ಕ ಸಂಪ್ರದಾಯವುಂಟು. ಇಂತು ಆಶ್ವಯುಜಮಾಸಕೃತ್ಯನಿರ್ಣಯೋದ್ದೇಶವು.

—(೧೦) ಕಾರ್ತಿಕಮಾಸವು.—

(೧೦) ಕಾರ್ತಿಕಮಾಸವು—ವೃಶ್ಚಿಕ ಸಂಕ್ರಮಣದ ಪೂರ್ವಭಾಗದ (ಮುಂಚಿನ) ೧೬ ಘಳಿಗೆಗಳ ಕಾಲವು ಪುಣ್ಯಕಾಲವೆನಿಸುವುದು. ಉಳಿದ ವಿಷಯಗಳು ಮೊದಲಿನಂತೆಯೇ. ಕಾರ್ತಿಕ ಶುದ್ಧ ಪ್ರತಿಪತ್ತಿನಲ್ಲಿ ಅವಶ್ಯಕವಾಗಿ ಅಭ್ಯಂಗಸ್ನಾನಮಾಡಬೇಕು. ಹೀಗೆ . ಚತುರ್ದಶಿ ಮೊದಲಾದ ಮೂರುದಿನಗಳಲ್ಲಿ ಅಭ್ಯಂಗ ಮೊದಲಾದ ಉತ್ಸವಗಳನ್ನು ಮಾಡದೆ ಹೋಗುವ ಪಕ್ಷದಲ್ಲಿ ನರಕಾದಿಪ್ರಾಪ್ತಿಯೂ, ಮಾಡುವುದರಿಂದ ದಾರಿದ್ರ್ಯಪರಿಹಾರವೂ, ಐಶ್ವರ್ಯಪ್ರಾಪ್ತಿಯೂ, ಉಂಟಾಗುವುದೆಂದು ಹೇಳಿರುವುದರಿಂದ ನಿತ್ಯವಾಗಿಯೂ ಕಾಮ್ಯವಾಗಿಯೂ ಇದೆ. ಈ ಪ್ರತಿಪತ್ತಿನಲ್ಲಿ ಬಲಿಪೂಜೆ, ದೀಪೋತ್ಸವ, ಗೋಕ್ರೀಡೆ, ಗೋವರ್ಧನಪೂಜೆ, ಮಾರ್ಗಪಾಳೀಬಂಧನ, ಹಗ್ಗವನ್ನು ಹಿಡಿದೆಳೆವುದು, ಹೊಸದಾಗಿ ಉಡುಪುಗಳನ್ನು ಧರಿಸುವುದು. ಜೂಜಾಡುವುದು, ಹೆಂಗಸರು ಆರತಿಗಳನ್ನೆತ್ತುವುದು, ಮಂಗಳಾರ್ಥವಾಗಿ ಹೂಮಾಲೆಗಳನ್ನು ಧರಿಸುವುದು ಇವೇ ಮೊದಲಾದವುಗಳು ನಡೆಯಿಸಬೇಕು.

—ಪ್ರತಿಪನ್ನಿರ್ಣಯವು—

ಪ್ರತಿಪನ್ನಿರ್ಣಯವು—ಉದಯಕಾಲದ ವ್ಯಾಪ್ತಿಯುಳ್ಳ ಹತ್ತುಮುಹೂರ್ತಕಾಲವಿರುವ ಪ್ರತಿಪತ್ತು ಆದರೆ ಆಗ ಚಂದ್ರದರ್ಶನವಿಲ್ಲದ್ದರಿಂದ ಚಂದ್ರದರ್ಶನವನ್ನೇ ಮುಖ್ಯವಾಗಿರುವುದಾದ ದ್ವಿತೀಯೆಯ ವೇಧೆಯ ನಿಷೇಧವು ಈ ಸಂದರ್ಭದಲ್ಲಿ ಪ್ರವರ್ತಿಸುವುದಕ್ಕವಕಾಶವಿಲ್ಲದ ಕಾರಣ ಎಲ್ಲಾ ಕಾರ್ಯಗಳೂ ಎರಡನೆಯ ಪ್ರತಿಪತ್ತಿನಲ್ಲಿಯೇ ಆಗುತ್ತವೆ. ಇಷ್ಟಿನಿರ್ಣಯಪ್ರಕರಣದಲ್ಲಿ ಮೂರುಮುಹೂರ್ತಕಾಲದ ದ್ವಿತೀಯೆ ಇದ್ದಾಗ್ಯೂ ಚಂದ್ರದರ್ಶನವಾಗುವುದೆಂದೇ ಹೇಳಿದೆ. ಅದು ಸೂ

ಷ್ಟ್ರದರ್ಶನವಾಗುವುದೆಂಬ ಅಭಿಪ್ರಾಯದಿಂದ ಹೇಳಿದುದು. ಇಲ್ಲಿ ಸ್ಥೂಲದರ್ಶನವೇ ನಿಷೇಧಪ್ರವೃತ್ತಿಗೆ ಸಾಧಕವಾಗಿದ್ದು, ಅದು ಆರುಮುಹೂರ್ತದ್ವಿತೀಯೆಯ ಪ್ರವೇಶದಿಂದಲೇ ಆಗಬೇಕು, ಆದ್ದರಿಂದ ವಿರೋಧವಿಲ್ಲವಾಗಿ ಕಾಣುತ್ತದೆ. ಬಾಭತ್ತು ಮುಹೂರ್ತಗಳ ಕಾಲ ಪ್ರತಿಪತ್ತು ಇಲ್ಲದಿರುವ ಸಂದರ್ಭದಲ್ಲಿ ಬಲಿಪೂಜೆ, ಗೋಕ್ರೀಡೆ, ಗೋವರ್ಧನಪೂಜೆ, ಮಾರ್ಗಪಾಳೀಬಂಧನೆ, ವಷ್ಟ್ರಕಾಕರ್ಷಣ, ಇವು ಪೂರ್ವ್ವವೇಧೆಯುಳ್ಳ ಪ್ರತಿಪತ್ತಿನಲ್ಲಿ ನಡೆಯಬೇಕು, ಅಭ್ಯಂಗ, ನೂತನ ವಸ್ತ್ರಧಾರಣ, ಜೂಜು, ಆರತಿ, ಮಾಲಿಕಾಧಾರಣಾದಿಗಳನ್ನು ಉದಯಕಾಲದಿಂದ ಮುಹೂರ್ತಮಾತ್ರ ವಿರುವ ಪ್ರತಿಪತ್ತಿನಲ್ಲಿಯೂ ಮಾಡಬಹುದು. ಬಲಿಪೂಜೆ ಮೊದಲಾದವುಗಳು ಕಾರಣಾಂತರದಿಂದ ಪೂರ್ವವಿದ್ಧವಾದ ಪ್ರತಿಪತ್ತಿನಲ್ಲಿಯೇ ನಡೆಯದೆ ನಿಂತರೆ ಪರವಿದ್ಧವಾದ ಪ್ರತಿಪತ್ತಿನಲ್ಲಾದರೂ ಮಾಡಬೇಕು. ಬೋಧಾಯನಾದಿ ಸೂತ್ರಗಳಿಗೆ ಸೇರಿದವರು ತಮ್ಮ ಸೂತ್ರಪ್ರಕಾರವಾಗಿ ಕರ್ಮವನ್ನು ಮಾಡುವುದಕ್ಕೆ ಅವಕಾಶವಿಲ್ಲದಿದ್ದರೆ ಆಪಸ್ತಂಬ ಮೊದಲಾದ ಸೂತ್ರಗಳನ್ನನುಸರಿಸಿ ಕರ್ಮವನ್ನು ಮಾಡಬೇಕಲ್ಲದೆ ಕರ್ಮಲೋಪವನ್ನಾಗಲಿ, ಅನ್ಯಶಾಖೆಯನ್ನನುಸರಿಸುವುದಾಗಲಿ ಹೇಗೆ ಕೂಡದೋ, ಹಾಗೆಯೇ ಕರ್ಮವನ್ನು ಬಿಡಕೂಡದು, ಬೇರೊಂದು ತಿಥಿಯಲ್ಲಿ ಮಾಡಲೂ ಕೂಡದು, ಎಂದು ಮಾಧವೀಯದಲ್ಲಿ ಸ್ಪಷ್ಟವಾಗಿ ಹೇಳಿದೆ.

—ಬಲಿಪೂಜಾದೀಪೋತ್ಸವಾದಿಗಳು —

ಬಲಿಪೂಜಾದೀಪೋತ್ಸವಗಳು:—ದೊರೆಗಳು ಪಂಚವರ್ಣದ ರಂಗವಲ್ಲಿಯಿಂದಲೂ, ಉಳಿದ ಜನಗಳು ಬಿಳಿಯಅಕ್ಕಿಯಲ್ಲಿಯೂ, ಎರಡುಭುಜಗಳುಳ್ಳ ಬಲಿಯನ್ನು ಬರೆದು ಪೂಜೆಮಾಡುವರು "ಬಲಿರಾಜನಮಸ್ತುಭ್ಯಂವಿರೋಚನ ಸುತಪ್ರಭೋ। ಭವಿಷ್ಯೇಂದ್ರ ಸುರಾರಾತೇ ಪೂಜೇಯಂ ಪ್ರತಿಗೃಹ್ಯತಾಂ ॥೧॥" ದೇವತೆಗಳಿಗೆ ಶತ್ರುವಾಗಿಯೂ, ಮುಂದೆ ದೇವೇಂದ್ರಪದವನ್ನು ಪಡೆವವನಾಗಿಯೂ, ವಿರೋಚನ ಪುತ್ರನಾಗಿಯೂ, ಇರುವ ಎಲೈ ಬಲಿಯೇ! ಈ ಪೂಜೆಯನ್ನು ಸ್ವೀಕರಿಸು ಎಂಬುದು ಪೂಜಾಮಂತ್ರವು. ಬಲಿಯನ್ನುದ್ದೇಶಿಸಿ ಶಕ್ತ್ಯನುಸಾರವಾಗಿ ದಾನವೂ

ಡಿದರೆ ಅಕ್ಷಯಪುಣ್ಯಪ್ರದವಾಗಿಯೂ, ವಿಷ್ಣುಪ್ರೀತಿಕರವಾಗಿಯೂ, ಆಗುವುದು. "ಯೋಯಾದೃಶೇನಭಾವೇನ ತಿಷ್ಠತ್ಯಸ್ಯಾಂ ಮುನೀಶ್ವರ । ಹರ್ಷದೈನ್ಯಾದಿರೂಪೇಣ ತಸ್ಯವರ್ಷಂಪ್ರಯಾತಿಹಿ ॥೧॥ ಅಸ್ಯಾಂದ್ಯೂತಂಪ್ರಕರ್ತವ್ಯಂ ಪ್ರಭಾತೇ ಸರ್ವಮಾನವೈಃ । ತಸ್ಮಿನ್ದ್ಯೂತೇಜಯೋಯಸ್ಯ ತಸ್ಯಸಂವತ್ಸರಂಜಯಃ ॥೨॥ ವಿಶೇಷವಚ್ಚಭೋಕ್ತವ್ಯಂ ಪ್ರಶಸ್ತೈ ಬ್ರಾಹ್ಮಣೈಸ್ಸಹ । ಬಲಿರಾಜ್ಯೇ ದೀಪದಾನಾತ್ಸದಾ ಲಕ್ಷ್ಮೀಃ ಸ್ಥಿರಾಭವೇತ್ ॥ ೩ ॥ ದೀಪೈರ್ನೀರಾಜನಾದತ್ರಸೈಷಾ ದೀಪಾವಲೀಸ್ಮೃತಾ । ಬಲಿರಾಜ್ಯಂ ಸಮಾಸಾದ್ಯ ಯೈರ್ನದೀಪಾವಳೀ ಕೃತಾ ॥ ತೇಷಾಂ ಗೃಹೇಕಥಂ ದೀಪಾಃ ಪ್ರಜ್ವಲಿಷ್ಯಂತಿ ಕೇಶವ ॥" ಈ ಬಲಿಪಾಡ್ಯದಲ್ಲಿ ಯಾರುಯಾರು ಸಂತೋಷ, ದುಃಖ, ದೈನ್ಯವೊದಲಾದ ಯಾವಯಾಭಾವನೆಯಿಂದ ಇರುತ್ತಾರೋ ಅವರವರಿಗೆ ಆ ಸಂವತ್ಸರದಲ್ಲಿ ಅಂತಹ ಫಲವೇ ಪ್ರಾಪ್ತವಾಗುವುದು ॥೧॥ ಈ ದಿನದ ಪ್ರಾತಃಕಾಲದಲ್ಲಿ ಎಲ್ಲ ಜನರೂ ಜೂಜಾಡಬೇಕು. ಯಾರು ಈ ದಿನದಲ್ಲಿ ಗೆಲ್ಲುವರೋ ಅವರು ಸಂವತ್ಸರ ಮುಗಿವವರೆಗೂ ಜಯವನ್ನೇ ಪಡೆವರು ॥೨॥ ಯೋಗ್ಯರಾದ ಬ್ರಾಹ್ಮಣರೊಡನೆ ಚೆನ್ನಾಗಿ ಭಕ್ಷ್ಯ ಭೋಜ್ಯಾದಿಗಳಿಂದ ಊಟಮಾಡಬೇಕು. ಬಲಿರಾಜ್ಯದಲ್ಲಿ ದೀಪಗಳನ್ನು ಹಚ್ಚಿಸುವುದರಿಂದ ಲಕ್ಷ್ಮಿಯು ಸ್ಥಿರವಾಗಿ ನೆಲಸಿರುವಳು ॥೩॥ ಈ ದಿನದಲ್ಲಿ ದೀಪಗಳಿಂದ ಆರತಿಯನ್ನು ಮಾಡುವುದರಿಂದ ದೀಪಾವಳಿಯೆಂದು ಹೆಸರು ಬಂತು ಬಲಿರಾಜ್ಯದಲ್ಲಿ ಯಾರು ದೀಪಾವಳಿಯನ್ನು ಮಾಡುವುದಿಲ್ಲವೋ ॥ ೪ ॥ ಅವರಮನೆಯಲ್ಲಿ ಹೇಗೆತಾನೇ ದೀಪಗಳು ಉರಿಯುವುದರಿಂದ ಬೆಳಕಾದೀತು ? ॥ ಈ ದಿನದಲ್ಲಿ ಲಕ್ಷ್ಮಿಪೂಜೆಯನ್ನೂ, ಕುಬೇರಪೂಜೆಯನ್ನೂ, ಮಾಡಬೇಕು "ಲಕ್ಷ್ಮೀರ್ಯಾಲೋಕಪಾಲಾನಾಂ ಧೇನುರೂಪೇಣ ಸಂಸ್ಥಿತಾ । ಘೃತಂವಹತಿಯಜ್ಞಾರ್ಥೇ ಮಮಪಾಪಂ ವ್ಯಪೋಹತು ॥೧॥ ಅಗ್ರತಃ ಸಂತುಮೇಗಾವೋ ಗಾವೋ ಮೇಸಂತುಪೃಷ್ಠತಃ । ಗಾವೋಮೇಹೃದಯೇ ಸಂತು ಗವಾಂಮಧ್ಯೇವಸಾಮ್ಯಹಂ ॥೨॥" ಅಷ್ಟದಿಕ್ಪಾಲಕರ ಐಶ್ವರ್ಯರೂಪವಾದ ಯಾವಧೇನುವು (ಹಸು) ಯಜ್ಞಕ್ಕಾಗಿ ತುಪ್ಪವನ್ನು ಕೊಡುತ್ತಿರುವುದೋ, ಆ ಧೇನುರೂಪವಾದ ಲಕ್ಷ್ಮಿಯು ನನ್ನ ಪಾಪವ

ನ್ನುಪರಿಹರಿಸಲಿ॥೧॥ ನನ್ನ ಹಿಂದೆಯೂ, ಮುಂದೆಯೂ, ನನ್ನ ಮನಸ್ಸಿನಲ್ಲಿಯೂ ಹಸುಗಳಿರಲಿ. ನಾನು ಹಸುಗಳ ಮಧ್ಯದಲ್ಲಿ ಸರ್ವದಾ ವಾಸಮಾಡುತ್ತಿರುವೆನು॥೨॥ ಈ ಮಂತ್ರಗಳಿಂದ ಕರುಗಳೊಡನೆ ಹಸುಗಳನ್ನೂ ಎತ್ತುಗಳನ್ನೂ ಅಲಂಕರಿಸಿ, ಪೂಜೆಯನ್ನು ಮಾಡಿ, ಹಸುಗಳಲ್ಲಿ ಹಾಲುಕರೆವುದನ್ನೂ, ಎತ್ತುಗಳಿಗೆ ಭಾರವನ್ನು ಹೊರಿಸುವುದನ್ನೂ ಬಿಡಬೇಕು.

—ಗೋವು ಮತ್ತು ಗೋವರ್ಧನಗಳ ಪೂಜೆ—

ಗೋ ಗೋವರ್ಧನಪೂಜೆ—ಗೋವರ್ಧನ ಪರ್ವತವು ಸಮೀಪವಾಗಿದ್ದರೆ ಅದನ್ನೇ ಪೂಜಿಸಬೇಕು. ಇಲ್ಲದಿದ್ದರೆ ಸಗಣಿ ಅಥವಾ ಅನ್ನದಿಂದ ಗೋವರ್ಧನಪರ್ವತವನ್ನು ನಿರ್ಮಿಸಿ, ಅದರೊಡನೆ ಗೋಪಾಲಪೂಜೆಯನ್ನೂ ಮಾಡಬೇಕು. ಶ್ರೀ ಕೃಷ್ಣನ ಪ್ರೀತ್ಯರ್ಥವಾಗಿ ಗೋವರ್ಧನ ಮತ್ತು ಗೋಪಾಲಕಪೂಜೆಯನ್ನು ಮಾಡುವೆನೆಂದು ಸಂಕಲ್ಪಮಾಡಿ "ಬಲಿರಾಜ್ಞೋ ದ್ವಾರಪಾಲೋಭವಾನದ್ಯ ಭವಪ್ರಭೋ । ನಿಜವಾಕ್ಯಾರ್ಥನಾರ್ಥಾಯ ಸಗೋವರ್ಧನಗೋಪತೇ ॥೧॥" ಎಲೈ ಗೋವರ್ಧನದೊಡನೆ ಕೂಡಿದ ಗೋಪಾಲನೇ ! ನೀನು ಆತನ ಮಾತನ್ನು ಕೇಳುವುದಕ್ಕಾಗಿ ಬಲಿಚಕ್ರವರ್ತಿಯ ಮನೆಯ ಬಾಗಿಲಲ್ಲಿ ದ್ವಾರಪಾಲಕನಾಗಿ ನಿಲ್ಲು ॥೧॥ ಎಂಬ ಮಂತ್ರದಿಂದ ಗೋವರ್ಧನವನ್ನೂ, ಗೋಪಾಲನನ್ನೂ ಆವಾಹನೆ ಮಾಡಿಡಬೇಕು. "ಗೋಪಾಲಮೂರ್ತೇ ವಿಶ್ವೇಶ ಶಕ್ರೋತ್ಸವವಿಭೇದಕ । ಗೋವರ್ಧನಕೃತ ಛತ್ರಪೂಜಾಂಮೇಹ ರಗೋಪತೇ ॥೧॥ ಗೋವರ್ಧನಧರಾಧಾರ ಗೋಕುಲತ್ರಾಣಕಾರಕ । ವಿಷ್ಣುಬಾಹುಕೃತಚ್ಛಾಯ ಗವಾಂ ಕೋಟಿಪ್ರದೋಭವ ॥೨॥" ಎಲೈ ಗೋಪಾಲನೇ ! ಗೋವರ್ಧನಪರ್ವತವನ್ನು ಛತ್ರವನ್ನಾಗಿ ಮಾಡಿ, ಮಳೆಯ ಬಾಧೆಯನ್ನು ಪರಿಹರಿಸಿ, ಗೋವುಗಳನ್ನು ರಕ್ಷಿಸಿ, ಇಂದ್ರನಗರ್ವವನ್ನು ಅಡಗಿಸಿದ ನೀನು, ನಾನು ಮಾಡುವ ಪೂಜೆಯನ್ನು ಸ್ವೀಕರಿಸು ॥೧॥ ಗೋವರ್ಧನವನ್ನೆತ್ತಿ, ಗೋವುಗಳನ್ನು ರಕ್ಷಿಸಿ, ಭುಜದ ನೆರಲನ್ನುಂಟುಮಾಡಿದ ಗೋಪಾಲನಾದ ಕೃಷ್ಣನೇ ! ಕೋಟಿಗೋವುಗಳನ್ನು ಅನುಗ್ರಹಿಸುವವನಾಗು ॥೨॥ ಈ ಮಂತ್ರಗಳಿಂದ ಗೋಪಾಲ, ಗೋವರ್ಧನಗಳನ್ನು ಷೋಡಶೋಪಚಾರಗಳಿಂದ ಪೂಜಿಸಬೇಕು. ಇಲ್ಲಿ ವೈಭವಾನುಸಾರವಾ

ಗಿ ಮಹಾನೈವೇದ್ಯಮಾಡಬೇಕು. ಅನಂತರದಲ್ಲಿ ಅದರ ಅಂಗವಾಗಿ ಪ್ರತ್ಯಕ್ಷ ಗೋವನ್ನಾಗಲಿ, ಮಣ್ಣಿನ ಹಸುವನ್ನಾಗಲಿ, ಮೇಲ್ಕಂಡ ಮಂತ್ರಗಳಿಂದ ಪೂಜಿಸಿ "ಆಗಾವೋ ಅಗ್ಮ್ನ, ಪ್ರೈತೇವಂದತು' ಎಂಬ ಋಕ್ಕುಗಳಿಂದ ಮನೆಯಲ್ಲಿ ಮಾಡಿರುವ ಅನ್ನದಿಂದ (ಸಿದ್ಧಚರು) ಹೋಮಮಾಡಬೇಕು. ತರುವಾಯ ಬ್ರಾಹ್ಮಣರಿಗೆ ಅನ್ನದಾನವನ್ನೂ, ಗೋದಾನವನ್ನೂ, ಗೋವುಗಳಿಗೆ ತೃಣದಾನವನ್ನೂ, ಗಿರಿಗೆ [ಬೆಟ್ಟ] ಬಲಿದಾನವನ್ನೂ,ಮಾಡಬೇಕು. ಮನೆಯಲ್ಲಿರುವ ಗೋವುಗಳೊಡನೆ ಗೋವು ಬ್ರಾಹ್ಮಣರು, ಹೋಮಾಗ್ನಿ. ಗೋವರ್ಧನ, ಇವುಗಳನ್ನು ಪ್ರದಕ್ಷಿಣೆ ಮಾಡಬೇಕು.

—ಮಾರ್ಗಪಾಳೀಬಂಧನೆಯ.೨—

ಮಾರ್ಗಪಾಳೀ ಬಂಧನೆ—ಇದನ್ನು ಅಪರಾಹ್ಣದಲ್ಲಿ ಮಾಡಬೇಕು, ಊರಿಗೆ ಪೂರ್ವದಿಕ್ಕಿನಲ್ಲಿ ದರ್ಭೆ- ಕಾಚಿಹುಲ್ಲು, ಇವುಗಳಿಂದ ಹೊಸೆದ ಹಗ್ಗಗಳಲ್ಲೊಂದನ್ನು ತಮ್ಮತಮ್ಮ ಪೂರ್ವಾಚಾರದಂತೆ ತೆಗದುಕೊಂಡು ದೊಡ್ಡ ಕಂಭಕ್ಕೂ, ಮರಕ್ಕೂ ಕಟ್ಟಬೇಕು. "ಮಾರ್ಗಪಾಳಿ ನಮಸ್ತೇಸ್ತು ಸರ್ವಲೋಕಸುಖಪ್ರದೇ । ವಿಧೇಯೈಃ ಪುತ್ರದಾರಾದ್ಯೈಃ ಪುನರೇಹಿವ್ರತಸ್ಯಮೇ ॥೧॥" ಸರ್ವಲೋಕಗಳಿಗೂ ಸುಖಪ್ರದವಾದ ಮಾರ್ಗಪಾಳಯೇ ! (ದಾರಿಯಲ್ಲಿ ಕಟ್ಟಿದ ತೋರಣ) ಪುತ್ರ ದಾರಾದಿಗಳೊಡನೆ ನನ್ನ ವ್ರತಾರ್ಥವಾಗಿ ಪುನಃ ಬರುವವನಾಗು ॥೧॥ ಎಂದು ಪ್ರಾರ್ಥಿಸಿ, ನಮಸ್ಕಾರಮಾಡಬೇಕು. ಅದರಕೆಳಗೆ ದಾರಿಯಲ್ಲಿ ಹಸುಗಳು, ಆನೆಗಳು ಮೊದಲಾದವುಗಳೊಡನೆ ಬ್ರಾಹ್ಮಣರು, ರಾಜರು ಮೊದಲಾದವರು ಎಲ್ಲರೂ ಹೋಗಬೇಕು. ಹೀಗೆಯೇ ಕಾಚಿಹುಲ್ಲು ಮೊದಲಾದವುಗಳಿಂದ ಗಟ್ಟಿಯಾಗಿ ದೊಡ್ಡ ಹಗ್ಗವನ್ನು ಹೊಸೆದು, ಗೆಲುವನ್ನು ತಿಳದುಕೊಳ್ಳುವುದಕ್ಕಾಗಿ ಒಂದುಕಡೆಯಲ್ಲಿ ರಾಜಪುತ್ರರೂ, ಮತ್ತೊಂದುಕಡೆ ಅಲ್ಪಜಾತಿಯವರೂ, ಹಿಡಿದುಕೊಂಡು ಎಳೆಯಬೇಕು. ಇದರಲ್ಲಿ ಹೀನಜಾತಿಯವರು ಗೆದ್ದರೆ ರಾಜನಿಗೆ ಜಯವುಂಟಾಗುವುದೆಂದು ತಿಳಿಯಬೇಕು. ಪ್ರಾತಃಕಾಲದಲ್ಲಿ ಜೂಜಾಡಬೇಕೆಂದು ಹಿಂದೆಯೇ ಹೇಳಿದೆ. ಸುವಾಸಿನಿಯರು ಆರತಿಯನ್ನೂ ಬೆಳಗಿನಲ್ಲಿಯೇ ಮಾಡಬೇಕು.

ರಾತ್ರಿಯಲ್ಲಿ ಸಂಗೀತ ವಾದ್ಯಘೋಷ ಮೊದಲಾದ ಉತ್ಸವಗಳನ್ನು ಮಾಡಬೇಕು 'ನವೈರ್ವಸ್ತ್ರೈಶ್ಚ ಸಂಪೂಜ್ಯಾ ದ್ವಿಜಸಂಬಂಧಿಬಾಂಧವಾಃ' ಬ್ರಾಹ್ಮಣರಿಗೂ ಬಾಂಧವರಿಗೂ ಉಡುಗೊರೆ ಮೊದಲಾದವುಗಳನ್ನು ಕೊಟ್ಟು ತಾವೂ ನೂತನ ವಸ್ತ್ರಾದಿಗಳನ್ನು ಧರಿಸಬೇಕು.

—ಯಮದ್ವಿತೀಯೆಯು—

ಯಮದ್ವಿತೀಯೆ— "ಯಮೋಯಮುನಯಾಪೂರ್ವಂ ಭೋಜಿತಃ ಸ್ವಗೃಹೇ ಸ್ವಯಂ । ಅತೋಯಮದ್ವಿತೀಯಾ ಸಾ ಪ್ರೋಕ್ತಾ ಲೋಕೇ ಯುಧಿಷ್ಠಿರ ॥೧॥" ಎಲೈ ಧರ್ಮರಾಜನೇ ! ಕೇಳು-ಪೂರ್ವದಲ್ಲಿ ಯಮುನೆಯು ತನ್ನ ಮನೆಗೆ ಯಮನನ್ನು ಕರೆದು ಆ ದಿನದಲ್ಲಿ ಭೋಜನಮಾಡಿಸಿದಳು. ಆದ್ದರಿಂದ ಲೋಕದಲ್ಲಿ ಅದಕ್ಕೆ ಯಮದ್ವಿತೀಯೆ ಎಂದು ಹೆಸರಾಯಿತು ॥೧॥ ಈ ದಿನದಲ್ಲಿ ತಮ್ಮ ಮನೆಯಲ್ಲಿ ಊಟಮಾಡಕೂಡದು. ತಮ್ಮ ಅಕ್ಕನಮನೆಯಲ್ಲಿ ಊಟಮಾಡುವುದರಿಂದ ಧನಧಾನ್ಯಸುಖಪ್ರಾಪ್ತಿಯಾಗುವುದು. ವಸ್ತ್ರಾಲಂಕಾರಗಳಿಂದ ತಮ್ಮ ಅಕ್ಕತಂಗಿಯರನ್ನು ಪೂಜಿಸಬೇಕು. ತಮಗೆ ಅಕ್ಕಂದಿರಿಲ್ಲದಿದ್ದರೆ ಸ್ನೇಹಿತರ ಸಹೋದರಿಯರನ್ನಾದರೂ ಪೂಜಿಸಬೇಕು. ಅಕ್ಕನೂ ಸಹ ತನ್ನ ಸಹೋದರರನ್ನು ಪೂಜಿಸುವುದರಿಂದ ಅವೈಧವ್ಯವೂ, ಸಹೋದರರಿಗೆ ಆಯುರ್ವೃದ್ಧಿಯೂ ಉಂಟಾಗುವುವು. ಇಲ್ಲದಿದ್ದರೆ ಏಳು ಜನ್ಮಗಳಲ್ಲಿ ಸಹೋದರರೇ ಇರಲಾರರು. ಪೂರ್ವದಿನದಲ್ಲಿಯೇ ಅಪರಾಹ್ಣವ್ಯಾಪ್ತಿ ಇದ್ದರೆ ಇದಕ್ಕೆ ಪೂರ್ವದಿನವನ್ನೇ ಗ್ರಹಿಸಬೇಕು. ಎರಡು ದಿನಗಳಿಗೂ ವ್ಯಾಪ್ತಿ ಇರುವುದು, ಅಥವಾ ಇಲ್ಲದಿರುವುದು, ಮೊದಲಾದ ಪಕ್ಷಾಂತರಗಳಲ್ಲಿ ಪರದಿನವನ್ನೇ ಗ್ರಹಿಸಬೇಕು. ಈ ದಿನದಲ್ಲಿ ಯಮುನಾಸ್ನಾನವೂ, ಚಿತ್ರಗುಪ್ತ, ಯಮದೂತರೊಡನೆ ಯಮಪೂಜೆಯನ್ನೂ, ಯಮನಿಗೆ ಅರ್ಘ್ಯವನ್ನೂ ಮಾಡತಕ್ಕದ್ದು. ಕಾರ್ತಿಕ ಶುದ್ಧ ಷಷ್ಠಿಯಲ್ಲಿ ಮಂಗಳವಾರವು ಸೇರಿದ್ದರೆ ಅಗ್ನಿಯನ್ನು ಪೂಜಿಸಿ, ತತ್ಪ್ರೀತ್ಯರ್ಥವಾಗಿ ಬ್ರಾಹ್ಮಣ ಭೋಜನವನ್ನು ಮಾಡಿಸಬೇಕು. ಕಾರ್ತಿಕ ಶುದ್ಧಾಷ್ಟಮಿಗೆ ಗೋಪಾಷ್ಟಮಿ ಎಂದು ಹೆಸರು. ಈ ದಿನದಲ್ಲಿ ಗೋಪೂಜೆಯನ್ನೂ, ಗೋಪ್ರದಕ್ಷಿಣೆಯನ್ನೂ, ಗೋವನ್ನು ಹಿಂಬಾಲಿಸಿ ನಡೆಯುವುದನ್ನೂ, ಮಾಡಿದರೆ ಇಷ್ಟಾ

ರ್ಥಸಿದ್ಧಿಯುಂಟಾಗುವುದು ಶುದ್ಧ ನವಮಿಯಲ್ಲಿ ಮಥುರಾಪ್ರದಕ್ಷಿಣೆಯುನ್ನು ಮಾಡಬೇಕು. ಇದು ಒಂದು ಯುಗಾದಿಯೂ ಆಗಿದೆ. ಪೂರ್ವಾಹ್ಣವ್ಯಾಪ್ತಿಯುಳ್ಳ ಈ ತಿಥಿಯಲ್ಲಿ ಪಿಣ್ಡರಹಿತವಾಗಿ ಶ್ರಾದ್ಧವನ್ನು ಮಾಡಬೇಕು. ವಿಶೇಷವಿಧಿಯು ವೈಶಾಖಪ್ರಕರಣದಲ್ಲಿ ಉಕ್ತವಾಗಿದೆ

—ಭೀಷ್ಮಪಂಚಕವ್ರತಂ—

ಭೀಷ್ಮಪಂಚಕವ್ರತವು—ಏಕಾದಶಿ ಮೊದಲ್ಗೊಂಡು ಐದುದಿನಗಳಲ್ಲಿ ಭೀಷ್ಮಪಂಚಕವ್ರತವನ್ನು ಮಾಡಬೇಕು. ಅದನ್ನು ಶುದ್ಧೈಕಾದಶಿಯಲ್ಲಿ ಪ್ರಾರಂಭಿಸಿ ಚತುರ್ದಶಿಯ ವೇಧೆಯಿಲ್ಲದೆ ಉದಯವ್ಯಾಪ್ತಿಯುಳ್ಳ ಪೌರ್ಣಮಿಯಲ್ಲಿ ಮುಗಿಸಬೇಕು. ಶುದ್ಧೈಕಾದಶಿಯಲ್ಲಿ ಪ್ರಾರಂಭಿಸಿದರೆ ಕ್ಷಯವಶದಿಂದ ಐದು ದಿನಗಳಿಂದ ಮಾಡಬೇಕಾದ ಈ ವ್ರತವನ್ನು ಪೌರ್ಣಮಿಯಲ್ಲಿ ಮುಗಿಸಲು ಸಾಧ್ಯವಿಲ್ಲದ ಪಕ್ಷದಲ್ಲಿ ವಿದ್ಧೈಕಾದಶಿಯಲ್ಲೂ, ಆರಂಭಿಸಬಹುದು. ಶುದ್ಧೈಕಾದಶಿಯಲ್ಲಿ ಪ್ರಾರಂಭಿಸಿದಾಗ್ಗೂ, ದಿನವೃದ್ಧಿವಶದಿಂದ ಪರವಿದ್ಧವಾದ ಪೌರ್ಣಮಾಸ್ಯೆಯಲ್ಲಿ ಮುಗಿಸುವ ಪಕ್ಷದಲ್ಲಿ ಆರುದಿನಗಳಾಗುವ ಹಾಗಿದ್ದರೆ ಚತುರ್ದಶೀವಿದ್ಧವಾದ ಪೌರ್ಣಮಿಯಲ್ಲಿಯೇ ಮುಗಿಸಬಹುದು. ವ್ರತಪ್ರಯೋಗವು ಕೌಸ್ತುಭಾದಿಗ್ರಂಥಗಳಲ್ಲಿದೆ 'ಕಾರ್ತಿಕೇತು ಕೃತಾ ದೀಕ್ಷಾ ನೃಣಾಂ ಜನ್ಮವಿಮೋಚಿನೀ' ಕಾರ್ತಿಕಮಾಸದಲ್ಲಿ ದೀಕ್ಷೆಯನ್ನು ವಹಿಸುವವರು ಪುನರ್ಜನ್ಮವನ್ನು ಕಳೆದುಕೊಳ್ಳುವರು, ಎಂದು ನಾರದವಚನವಿರುವುದರಿಂದ ಕಾರ್ತಿಕಮಾಸದ ಏಕಾದಶಿ ಮೊದಲಾದ ಪುಣ್ಯತಿಥಿಗಳಲ್ಲಿ ಚಂದ್ರತಾರಾದಿ ಬಲಗಳಿರುವ ದಿನದಲ್ಲಿ ಶಿವ ಅಥವಾ ವಿಷ್ಣುಮಂತ್ರದ ಉಪದೇಶವನ್ನು ತೆಗೆದುಕೊಳ್ಳುವುದೇ ಮೊದಲಾದ ದೀಕ್ಷೆಯನ್ನು ವಹಿಸಬೇಕು. ಹಾಗೆಯೇ ತುಲಸೀಕಡ್ಡಿಯ ಮಾಲಿಕೆಯನ್ನು (ತುಲಸೀಮಣಿಯ ಸರ) ಧರಿಸಬೇಕೆಂದು ಸ್ಕಾಂದಪುರಾಣದ ದ್ವಾರಕಾಮಾಹಾತ್ಮ್ಯೆಯಲ್ಲಿಯೂ, ವಿಷ್ಣುಧರ್ಮದಲ್ಲಿಯೂ ಹೇಳಿದೆ.

—ತುಲಸೀ ಕಾಷ್ಠಮಾಲಾಧಾರಣೆಯು—

ತುಲಸೀ ಕಾಷ್ಠಮಾಲಾಧಾರಣೆ—"ನಿವೇದ್ಯಕೇಶವೇ ಮಾಲಾಂ ತುಲಸೀಕಾಷ್ಠಸಂಭವಾಂ । ವಹತೇ ಯೋನರೋಭಕ್ತ್ಯಾ ತಸ್ಯನ್ಯೈ

ವಾಸ್ತಿ ಪಾತಕಂ ||೧|| ತುಲಸೀಕಾಷ್ಠಸಂಭೂತೇ ಮಾಲೇ ಕೃಷ್ಣಜನ ಪ್ರಿಯೇ | ಬಿಭರ್ಮಿ ತ್ವಾ ಮಹಂಕಂಠೇ ಕುರುಮಾಂ ಕೃಷ್ಣವಲ್ಲಭಂ || ಏವಂ ಸಂಪ್ರಾರ್ಥ್ಯವಿಧಿವನ್ಮಾಲಾಂ ಕೃಷ್ಣಗಳೇರ್ಪಿತಾಂ | ಧಾರಯೇತ್ಕಾರ್ತಿಕೇ ಯೋ ವೈ ಸಗಚ್ಛೇದ್ವೈಷ್ಣವಂ ಪದಂ ||೩|| ವಿಷ್ಣುವಿಗೆ ತುಲಸೀಮಣಿಯ ಸರವನ್ನು ಧಾರಣೆಮಾಡಿ ಅದನ್ನು ಭಕ್ತಿಯಿಂದ ಯಾವನು ಧರಿಸಿರುವನೋ ಅವನಿಗೆ ಯಾವಪಾತಕವೂ ಉಂಟಾಗಲಾರದು || ಕೃಷ್ಣಭಕ್ತರ ಪ್ರೀತಿಪಾತ್ರವಾದ ಎಲೈ ತುಳಸೀಮಣಿಯಮಾಲಿಕೆಯೇ! ನಿನ್ನನ್ನು ನಾನು ಕಂಠದಲ್ಲಿ ಧರಿಸುವೆನು. ಕೃಷ್ಣನ ಪ್ರೀತಿಯುಂಟಾಗುವಂತೆ ಮಾಡು ||೨|| ಹೀಗೆ ಪ್ರಾರ್ಥಿಸಿ ಕೃಷ್ಣನ ಕೊರಳಲ್ಲಿರುವ ತುಳಸೀಮಣಿಯ ಸರವನ್ನು ವಿಧಿವತ್ತಾಗಿ ತನ್ನ ಕಂಠದಲ್ಲಿ ಹಾಕಿಕೊಂಡವನು ವಿಷ್ಣುಲೋಕವನ್ನು ಹೊಂದುವನು ||೩|| ಎಂದು ನಿರ್ಣಯಸಿಂಧುವಿನಲ್ಲಿ ಹೇಳಿದೆ. ಆದರೆ-ಆನಿರ್ಣಯಸಿಂಧುವಿನಲ್ಲಿಯೇ ಮಾಲಾಧಾರಣಪ್ರಕರಣದ ಕೊನೆಯಲ್ಲಿ ಎಲ್ಲ ಪುಸ್ತಕಗಳಲ್ಲಿಯೂ ಇಲ್ಲದೆ ಕೆಲವು ಪುಸ್ತಕಗಳಲ್ಲಿಮಾತ್ರವೇ ‘ಅತ್ರ ಮೂಲಂ ಚಿನ್ತ್ಯಂ’ ಇದಕ್ಕೆ ಏನುಕಾರಣವೋ ಗೊತ್ತಿಲ್ಲ ಎಂಬ ವಾಕ್ಯವು ಬರೆದಿದೆ ಆ ವಾಕ್ಯಕ್ಕೆ ಮಾಲಾಧಾರಣೆಯನ್ನು ವಿಧಿಸುವ ವಾಕ್ಯಗಳಿಗೆ ಪ್ರಾಮಾಣ್ಯತೆ ಇಲ್ಲವೆಂಬ ತಾತ್ಪರ್ಯವಲ್ಲ. ಏತಕೆಂದರೆ-ಸ್ಕಂದಪುರಾಣದಲ್ಲಿರುವ ವಿಷ್ಣುಧರ್ಮದಲ್ಲಿ ಹೇಳಿದೆ, ಎಂದು ಆಧಾರವನ್ನೂ ತಾನೇ ಹೇಳಿ, ಅಪ್ರಮಾಣ್ಯವೆಂದೂ ಹೇಳಿದರೆ ತನ್ನಅಭಿಪ್ರಾಯಕ್ಕೆ ವಿರೋಧವುಂಟಾಗುವುದಲ್ಲದೆ ‘ತುಲಸೀಕಾಷ್ಠಘಟಿತೈರುದ್ರಾಕ್ಷಾಕಾರಕಾರಿತೈಃ | ನಿರ್ಮಿತಾಂ ಮಾಲಿಕಾಂಕಂಠೇ ನಿಧಾಯಾರ್ಚನಮಾರಭೇತ್ ||೧|| ತುಲಸೀಕಾಷ್ಠಮಾಲಾಯಾ ಭೂಷಿತಃ ಕರ್ಮಆಚರನ್ | ಪಿತೄಣಾಂ ದೇವತಾನಾಂಚ ಕೃತಂ ಕೋಟಿಗುಣಂ ಭವೇತ್ ||೨||” ತುಲಸಿಯ ಕಡ್ಡಿಯಿಂದ ಮಾಡಿದ ರುದ್ರಾಕ್ಷಾಕಾರವಾಗಿರುವ ಮಣಿಗಳ ಸರವನ್ನು ಕೊರಳಲ್ಲಿ ಧರಿಸಿ ಪೂಜೆಗೆ ಪ್ರಾರಂಭಿಸಬೇಕು || ೧ || ತುಲಸೀಮಣಿಯ ಸರದಿಂದಲಂಕೃತನಾಗಿ ಕರ್ಮಮಾಡಿದರೆ ದೇವತೆಗಳಿಗೂ, ಪಿತೃಗಳಿಗೂ, ಅದು ಕೋಟಿಗುಣವುಳ್ಳದ್ದಾಗಿ ಫಲವನ್ನುಂಟುಮಾಡುವುದು ||೨|| ಎಂದು ಪದ್ಮಪುರಾಣದ ಪಾತಾಳಖಂಡದಲ್ಲಿ ಋಸೆಯ

ಅಧ್ಯಾಯದ ಪ್ರತ್ಯಕ್ಷ ವಚನಕ್ಕೆ ವಿರೋಧವುಂಟಾಗುವುದು. ಆದರೆ—ಆ ಷಾಢಮಾಸ ಪ್ರಕರಣದಲ್ಲಿ ಆಷಾಢ ಶುದ್ಧದ್ವಾದಶಿಯಲ್ಲಿ ಅನೂರಾಧಾ ನಕ್ಷತ್ರಯೋಗ ವಿಲ್ಲದಿರುವಾಗ ಪಾರಣೆಯನ್ನು ಮಾಡಬೇಕು, ಎಂದು ಹೇಳಿ, ಅದಕ್ಕೆ ಆಧಾರವಾಗಿ 'ಆ ಭಾಕಾಸಿತ ಪಕ್ಷೇಷು, ಮೈತ್ರಾದ್ಯ ಪಾದೇ ಸ್ವಪಿತೀಹ ವಿಷ್ಣುಃ, ಅಂದರೆ-ಆಷಾಢ, ಭಾದ್ರಪದ, ಕಾರ್ತಿಕ, ಈ ಮಾಸಗಳ ಶುಕ್ಲಪಕ್ಷಗಳಲ್ಲಿ, ಅನೂರಾಧಾ ನಕ್ಷತ್ರದ ಮೊದಲ ಪಾದದಲ್ಲಿ, ವಿಷ್ಣು ಶಯನ ಮಾಡಿರುವನು, ಎಂಬುದೇ ಮೊದಲಾದ ಭವಿಷ್ಯೋತ್ತರ ಪುರಾಣದಲ್ಲಿರುವ ವಿಷ್ಣುಧರ್ಮದ ವಾಕ್ಯಗಳನ್ನು ಹೇಳಿ, ಕೊನೆಯಲ್ಲಿ 'ಇದಂ ನಿರ್ಮೂಲಂ' ಇದಕ್ಕೆ ಆಧಾರವಿಲ್ಲ, ಎಂದು ಹೇಳಿರುವಂತೆಯೇ ಎಲ್ಲಾ ಪ್ರಕರಣಗಳಲ್ಲಿಯೂ ತಿಳಿಯಬೇಕು. ಆದಕ್ಕೆ ಮಾಧವಾದಿಮೂಲಗ್ರಂಥಗಳಲ್ಲಿ ಈ ವಿಷಯವನ್ನು ಹೇಳಲ್ಲವೆಂಬುದೇ ಅರ್ಥವಲ್ಲದೆ ವಿಷಯವು ಪ್ರಾಮಾಣ್ಯವಲ್ಲವೆಂಬರ್ಥವಲ್ಲ. ಹಾಗಾದರೆ-ಭಾದ್ರಪದ ಕಾರ್ತಿಕಗಳಲ್ಲಿ ಆ ವಾಕ್ಯವನ್ನನುಸರಿಸಿಯೇ ಪಾರಣ ನಿರ್ಣಯವನ್ನು ಬರೆದದ್ದು ಅಸಂಗತವಾಗುವುದು. ಕೌಸ್ತುಭಾದಿ ಎಲ್ಲಾ ಹೊಸಗ್ರಂಥಗಳು ಅದನ್ನೇ ಅನುಸರಿಸಿ ನಿರ್ಣಯವನ್ನು ಮಾಡಿರುವುದೂ, ಅಸಂಗತವಾಗಬೇಕಾಗಿ ಬರುತ್ತದೆ. ಶಿಷ್ಟರೆಲ್ಲರೂ ಅದನ್ನನುಸರಿಸಿ ಪಾರಣೆಯನ್ನುಮಾಡುತ್ತಿರುವ ಆಚರಣೆಯನ್ನು ನಂಬದೆ ಇರಬೇಕಾಗುತ್ತದೆ. ಇದರಿಂದ ಮಾಧವಾದಿ ಗ್ರಂಥಗಳಲ್ಲಿ ಸಿಕ್ಕದಿರುವ ಮಾತ್ರಕ್ಕೆ ಆ ವಚನಗಳಿಗೆ ಅಪ್ರಾಮಾಣ್ಯವುಂಟಾಗುವುದೆಂಬುದು ತೊಲಗಿತು. ಇಲ್ಲದಿದ್ದರೆ ಮಾಧವಾದಿ ಗ್ರಂಥಗಳಲ್ಲಿಲ್ಲದ ವಾಕ್ಯಗಳಿಗೂ, ಅದರಂತೆ ನಡೆಯುತ್ತಿರುವ ಆಚಾರಕ್ಕೂ, ಪ್ರಯೋಜನವಿಲ್ಲದಂತಾದೀತು ! ಆದರೆ-'ಯತ್ತು' (ಯಾವ ಕಾರಣದಿಂದ) ಎಂಬ ಯತ್ಪದ ಪ್ರಾರಂಭದಿಂದ ಹೇಳಿರುವ ವಾಕ್ಯಗಳನ್ನು 'ತಾನಿ ನಿರ್ಮೂಲಾನಿ, (ಅವುಗಳಿಗೆ ಆಧಾರವಿಲ್ಲ) ಎಂಬ ಮಾತುಗಳಿಂದ ದೂಷಿಸಿರುವ 'ಶ್ರವಣ ದ್ವಾದಶೀ ಪ್ರಕರಣದಲ್ಲಿ, ಶ್ರವಣಕ್ಕೆ ಉತ್ತರಾಷಾಢಾ ನಕ್ಷತ್ರವೇಧೆಯ ನಿಷೇಧವಾಕ್ಯಗಳೇ ಮೊದಲಾದುವು ಮಾತ್ರ ಸರ್ವಥಾ ಅಪ್ರಮಾಣಗಳೆಂದೇ ಬುದ್ಧಿಶಾಲಿಗಳು ತಿಳಿಯಬೇಕು. ಮಾಧವಾದಿ ಗ್ರಂಥಗಳಲ್ಲಿ ಹೇಳದಿರುವುದರಿಂದ ಈವಿಷಯಕ್ಕೆ (ಶಾಸ್ತ್ರ

ಮಾಲಾಧಾರಣೆ) ಆಧಾರವಿಲ್ಲವೆಂದು ಹೇಳುವುದಿಲ್ಲ! ಕಾಷ್ಠಮಾಲಾಧಾರಣೆಯನ್ನು ಮಾಡಕೂಡದೆಂದು ಹೇಳುವನಿಷೇಧ ವಾಕ್ಯಗಳಿರುವುದರಿಂದ ಹಾಗೆ ಹೇಳುತ್ತೇವೆ, ಎಂದು ಭಾವಿಸೋಣ, ಆದರೆ-ಆ ನಿಷೇಧವಾಕ್ಯಗಳು ಕಾಷ್ಠಮಾಲಿಕೆಯನ್ನು ಮಾತ್ರವೇ ನಿಷೇಧಿಸಿವೆಯೋ! ಇಲ್ಲವೆ ತುಲಸೀಕಾಷ್ಠ ಮಾಲಿಕೆಯನ್ನು ನಿಷೇಧಿಸಿವೆಯೋ! ಎಂಬುದನ್ನು ನೋಡಬೇಕು. ಸಾಮಾನ್ಯವಾದ ಕಾಷ್ಠಮಾಲಿಕೆಯನ್ನು ನಿಷೇಧಿಸಿರುವ ಪಕ್ಷದಲ್ಲಿ ಆ ವಚನವನ್ನು ವಿಶೇಷವಾದ ತುಲಸೀ ಧಾತ್ರೀಕಾಷ್ಠಗಳ ಮಾಲಿಕೆಗಳನ್ನು ಧರಿಸಬೇಕೆಂಬ ವಿಶೇಷವಚನವು ಬಾಧಿಸುವುದೆಂಬುದು ಸ್ಪಷ್ಟವು. ಷೋಡಶಿಯನ್ನುಗ್ರಹಿಸಬೇಕು, ಮತ್ತು ಗ್ರಹಿಸಬೇಕಾದದ್ದಿಲ್ಲವೆಂಬಂತೆ ಒಂದು ವಿಷಯವನ್ನು ವಿಧಾನಮಾಡಿ, ನಿಷೇಧವನ್ನೂ ಮಾಡುವುದರಿಂದ ವಿಕಲ್ಪವೆಂದು ತಿಳಿಯಬೇಕು. ಆ ವಿಕಲ್ಪವು ವೈಷ್ಣವರು ವೈಷ್ಣವರಲ್ಲದವರೆಂಬ ಪಂಗಡಗಳಿಂದ ವ್ಯವಸ್ಥೆಯನ್ನು ಪಡೆಯುವುದು. ಆದರೆ-ಮೂಲವಾಕ್ಯದಲ್ಲಿ, ವಿಷ್ಣು ಮೊದಲಾದ ಪದಗಳನ್ನು ಉಪಯೋಗಿಸಿರುವುದರಿಂದ ತುಲಸ್ಯಾದಿ ಕಾಷ್ಠಮಾಲೆಯನ್ನು ವೈಷ್ಣವರು ಧರಿಸಬೇಕೆಂತಲೂ, ವೈಷ್ಣವರಲ್ಲದವರು ಧರಿಸಬೇಕಾದದ್ದಿಲ್ಲವೆಂತಲೂ, ಈ ವಿಷಯವು ವಿಕಲ್ಪವಾಗುವುದರಿಂದ ಅಪ್ರಾಮಾಣ್ಯವನ್ನು ಪಡೆಯಲಾರದು. ಹರಿವಾಸರ ಲಕ್ಷಣವನ್ನು ಹೇಳುವ ಸಂದರ್ಭದಲ್ಲಿ ಪುರುಷಾರ್ಥ ಚಿಂತಾಮಣಿಯಲ್ಲಿ - ವೈಷ್ಣವರಿಗೆ ಮಾತ್ರವೇ ಇದು ಅವಶ್ಯಕವಾದ್ದರಿಂದ ಈ ವಿಷಯವನ್ನು ಹೇಳದಿರುವ ಮಾಧವಾದಿಗಳಿಗೆ ಕೊರತೆಯೇನೂ ಇಲ್ಲವೆಂದು ಹೇಳಿರುವಂತೆ, ಈ ಕಾಷ್ಠಮಾಲಾಧಾರಣ ವಿಷಯವನ್ನು ವರ್ಣಿಸದಿರುವದನ್ನು ಊಹಿಸಿಕೊಳ್ಳಬಹುದಾಗಿದೆ. ತುಳಸಿಯ ಕಡ್ಡಿಯ ಮಣಿಯ ಸರವನ್ನು (ಧಾತ್ರೀಕಾಷ್ಠಮಾಲಾ) ಧರಿಸುವ ವಿಷಯದಲ್ಲಿಯೂ ಇದೇ ವಿಧಿಯನ್ನು ತಿಳಿಯಬೇಕು. ರಾಮಾರ್ಚನ ಚಂದ್ರಿಕೆ ಮೊದಲಾದ ಗ್ರಂಥಗಳಲ್ಲಿ 'ತುಲಸೀಕಾಷ್ಠಘಟಿತೈರ್ಮಣಿಭಿ ರ್ಜಪಮಾಲಿಕಾ' ತುಲಸೀಕಾಷ್ಠದಿಂದ ಮಾಡಿದ ಮಣಿಗಳಿಂದ ಜಪಮಾಲಿಕೆಯನ್ನು ಮಾಡಬೇಕು. ಎಂಬುದೇ ಮೊದಲಾದ ತುಲಸೀಕಾಷ್ಠಮಾಲಿಕೆಯಿಂದ ಜಪಮಾಡಬೇಕೆಂದು ವಿಧಿಸುವ ವಾಕ್ಯಗಳು ಅನೇಕವಾಗಿವೆ. ಇನ್ನೂ ಅನೇಕ ಗ್ರಂ

ಥಗಳಲ್ಲಿ ಅನೇಕ ವಾಕ್ಯಗಳು ಸಿಕ್ಕುವುವು. ಮೊದಲು ದೇವಪೂಜೆಗೆ ಸಾಕಾಗುವಷ್ಟು ಉದಕ, ಗಂಧ, ಪುಷ್ಪ, ಅಕ್ಷತೆ ಮೊದಲಾದುವನ್ನು ಸಿದ್ಧಮಾಡಿಕೊಂಡು ಕೈಕಾಲುಗಳನ್ನು ತೊಳೆದುಕೊಂಡು, ಯಥಾಶಕ್ತಿಯಾಗಿ ದುಕೂಲ ಮೊದಲಾದ ಶುದ್ಧ ವಸ್ತ್ರವನ್ನು ಧರಿಸಿ, ಭೂಷಣಗಳಿಂದಲಂಕೃತನಾಗಿ, ಮುತ್ತು, ಹವಳ, ತಾವರೆಮಣಿ, ಸ್ಫಟಿಕಮಣಿ, ತುಲಸೀಮಣಿ, ಇವುಗಳಿಂದ ನಿರ್ಮಿಸಿದ ಮಾಲಿಕೆಗಳನ್ನು ಕೊರಲಲ್ಲಿ ಹಾಕಿಕೊಳ್ಳಬೇಕು, ಎಂದು ಪ್ರಯೋಗ ಪಾರಿಜಾತದ ಆಹ್ನಿಕದಲ್ಲಿ ಪೂಜಾಪ್ರಕರಣದಲ್ಲಿ ಹೇಳಿದೆ. ಎಲ್ಲ ದೇಶಗಳಲ್ಲಿರುವ ವೈಷ್ಣವರೂ ತುಲಸೀಕಾಷ್ಠಮಾಲೆಯನ್ನು ಧರಿಸುತ್ತಾ, ಅದರಿಂದ ಜಪಮಾಡುವ ಸಂಪ್ರದಾಯವಿದೆ. ಆದರೆ--ಶೈವಾಗಮವನ್ನು ವಹಿಸಿರುವವರು-ಭಸ್ಮಧಾರಣೆ ಮೊದಲಾದವುಗಳನ್ನು ದ್ವೇಷಿಸುವ ವೈಷ್ಣವರ ಮೇಲಣ ಸ್ಪರ್ಧೆ (ಹುರುಡು)ಗಾಗಿಯೇ ತುಲಸೀ ಕಾಷ್ಠಮಾಲಾ ಧಾರಣಾದಿಗಳನ್ನು ದ್ವೇಷಿಸುತ್ತಾರೆ. ಇನ್ನು ಹೆಚ್ಚಾಗಿ ಹೇಳಬೇಕಾದ್ದಿಲ್ಲ.

## — ಧಾತ್ರೀಮೂಲೇ ಪೂಜಾ —

ನೆಲ್ಲಿಯಗಿಡದ ಬುಡದಲ್ಲಿ ದೇವಪೂಜೆಯು, ಮತ್ತು ವಿಧಿಯು:-ಸರ್ವಪಾಪಗಳೂ ಪರಿಹಾರವಾಗಿ ದಾಮೋದರನ ಪ್ರೀತಿಯುಂಟಾಗುವುದಕ್ಕಾಗಿ, ನೆಲ್ಲಿಯಗಿಡದ ಬುಡದಲ್ಲಿ ದಾಮೋದರನನ್ನು ಪೂಜಿಸುವೆನು. ಎಂದು ಸಂಕಲ್ಪಮಾಡಿ, ಪುರುಷಸೂಕ್ತ ವಿಧಾನದಿಂದ ಷೋಡಶೋಪಚಾರ ಪೂಜೆಯನ್ನುಮಾಡಿ, ಗಂಧ, ಪುಷ್ಪ, ಫಲಗಳಿಂದಕೂಡಿದಅರ್ಘ್ಯವನ್ನು ಕೊಡಬೇಕು. 'ಅರ್ಘ್ಯಂಗೃಹಾಣಭಗವನ್ ಸರ್ವಕಾಮ ಪ್ರದೋಭವ। ಅಕ್ಷಯಾ ಸಂತತಿರ್ಮೇಸ್ತು ದಾಮೋದರ ನಮೋಸ್ತುತೇ॥೧॥' ಎಲೈ ದಾಮೋದರನಾದ ಕೃಷ್ಣನೇ! ನಿನಗೆ ನಮಸ್ಕರಿಸುವೆನು. ನಾನು ಕೊಡುವ ಅರ್ಘ್ಯವನ್ನು ಸ್ವೀಕರಿಸಿ, ಸಕಲವಾದ ಇಷ್ಟಾರ್ಥಗಳನ್ನೂ, ಅಕ್ಷಯವಾದ ಸಂತಾನವನ್ನೂ ಕೊಡುವವನಾಗು ॥೧॥ ಎಂಬ ಮಂತ್ರದಿಂದ ಅರ್ಘ್ಯವನ್ನು ಕೊಟ್ಟು 'ಅಪರಾಧ ಸಹಸ್ರಾಣಿ' ಎಂಬ ಮಂತ್ರದಿಂದ ಪ್ರಾರ್ಥಿಸಿ, ಧಾತ್ರಿಯನ್ನು ಕುಂಕುಮಗಂಧಾದಿಗಳಿಂದಲಂಕರಿಸಿ, ಧಾತ್ರ್ಯೈನಮಃ, ಶಾ

ಸ್ತ್ರೈ, ಮೇಧಾಯ್ಯೈ, ಪ್ರಕೃತ್ಯೈ, ವಿಷ್ಣುಪತ್ನ್ಯೈ, ಮಹಾಲಕ್ಷ್ಮ್ಯೈ, ರಮಾಯ್ಯೈ, ಕಮಲಾಯ್ಯೈ, ಇಂದಿರಾಯ್ಯೈ,ಲೋಕಮಾತ್ರೇ, ಕಲ್ಯಾಣ್ಯೈ ಕಮನೀಯಾಯ್ಯೈ, ಸಾವಿತ್ರ್ಯೈ, ಜಗದ್ಧಾತ್ರ್ಯೈ! ಗಾಯತ್ರ್ಯೈ, ಮೂರ್ಧನ್ಯೈ,ಅವ್ಯಕ್ತಾಯ್ಯೈ, ವಿಶ್ವರೂಪಾಯ್ಯೈ, ಸುರೂಪಾಯ್ಯೈ, ಅಬ್ಧಿಧವಾಯ್ಯೈ ॥ ಎಂಬ ನಾಮಮಂತ್ರಗಳಿಂದ ಪುಷ್ಪಪೂಜೆಯನ್ನು ಮಾಡಬೇಕು. 'ಪಿತಾಪಿತಾ ಮಹಾಶ್ಚಾನ್ಯೇ ಅಪ್ರತ್ರಾಯೇಚ ಗೋತ್ರಿಣಃ।ತೇಪಿಬಂತುಮಯಾದತ್ತಂ ಧಾತ್ರೀಮೂಲೇऽಕ್ಷಯಂಪಯಃ॥೧॥'ನಮ್ಮಗೋತ್ರದಲ್ಲಿ ಮಕ್ಕಳಿಲ್ಲದೆ ಮೃತರಾದ ತಂದೆ ತಾತ ಮೊದಲಾದವರು ಈ ನೆಲ್ಲಿಯುಗಿಡದಲ್ಲಿ ಬಿಟ್ಟ ಅಕ್ಷಯೋದಕವನ್ನು ಪಾನಮಾಡಲಿ ॥೧॥ 'ಆ ಬ್ರಹ್ಮಸ್ತಂಬ ಪರ್ಯಂತಂ, ಎಂಬ ಮಂತ್ರಗಳಿಂದ ಧಾತ್ರೀ ಮೂಲದಲ್ಲಿ ಸವ್ಯದಿಂದ ಅರ್ಘ್ಯವನ್ನು ಕೊಡಬೇಕು. 'ದಾಮೋದರ ನಿವಾಸಾಯ್ಯೈಧಾತ್ರ್ಯೈದೇವ್ಯೈ ನಮೋಸ್ತುತೇ । ಸೂತ್ರೇಣಾನೇನ ಬಧ್ನಾಮಿ ಸರ್ವದೇವನಿವಾಸಿನೀಂ ॥೧॥' ಶ್ರೀ ಕೃಷ್ಣನಿಗೆ ವಾಸಸ್ಥಾನವಾಗಿರುವ ಧಾತ್ರಿಯೇ ! ನಿನಗೆ ನಮಸ್ಕಾರವು, ಎಲ್ಲಾ ದೇವತೆಗಳಿಗೂ ಆಶ್ರಯಳಾದ ನಿನ್ನನ್ನುಈ ಸೂತ್ರ(ದಾರ) ದಿಂದ ಸುತ್ತುವೆನು ॥೧॥ಎಂಬ ಮಂತ್ರದಿಂದ ದಾರವನ್ನು ಸುತ್ತಬೇಕು। ಧಾತ್ರ್ಯೈನಮಃ ಎಂದು ನಾಲ್ಕು ದಿಕ್ಕುಗಳಲ್ಲಿಯೂ ಬಲಿಯನ್ನು ಹಾಕಿ, ಎಂಟು ದೀಪಗಳನ್ನು ಸಮರ್ಪಿಸಬೇಕು. ಎಂಟು ಸಾರಿ ಪ್ರದಕ್ಷಿಣೆಮಾಡಿ ನಮಸ್ಕಾರವನ್ನು ಮಾಡಬೇಕು. 'ಧಾತ್ರೀದೇವಿ ನಮಸ್ತುಭ್ಯಂ ಸರ್ವಪಾಪ ಕ್ಷಯಂಕರಿ । ಪುತ್ರಾನ್ದೇಹಿ ಮಹಾಪ್ರಾಜ್ಞೇಯಶೋದೇಹಿ ಬಲಂಚಮೇ ॥೧॥ ಪ್ರಜ್ಞಾಂಮೇಧಾಂಚಸೌಭಾಗ್ಯಂ ವಿಷ್ಣುಭಕ್ತಿಂಚ ಶಾಶ್ವತೀಂ।ನೀರೋಗಂ ಕುರುಮಾಂ ನಿತ್ಯಂ ನಿಷ್ಪಾಪಂ ಕುರುಸರ್ವದಾ ॥೨॥' ಸಮಸ್ತ ಪಾಪಗಳನ್ನುನಾಶಮಾಡುವ ಧಾತ್ರೀದೇವಿಯೇ!ಪ್ರಜ್ಞಾವಂತಳಾದ ನೀನು ನನಗೆ ಪುತ್ರಸಂತಾನವನ್ನೂ,ಕೀರ್ತಿಯನ್ನೂ, ಬಲವನ್ನೂ ಕೊಡು ॥೧॥ ಒಳ್ಳೆಯ ಬುದ್ಧಿಯನ್ನೂ, ಪ್ರತಿಭೆಯನ್ನೂ, ಸೌಭಾಗ್ಯವನ್ನೂ, ಶಾಶ್ವತವಾದ ವಿಷ್ಣುಭಕ್ತಿಯನ್ನೂ ಕೊಟ್ಟು ನನ್ನ ರೋಗಗಳನ್ನೂ, ಪಾಪಗಳನ್ನೂ, ಸರ್ವದಾ ನಿವಾರಣೆಮಾಡು ॥೨॥ ಎಂದು ಪ್ರಾರ್ಥಿಸಿ ಕಂಚಿನಲ್ಲಿ ತುಪ್ಪವನ್ನು ತುಂಬಿ ದಕ್ಷಿಣೆಯೊಡ

ನೆದಾನವಾಡಬೇಕೆಂಬುಗೇ ಸಂಕ್ಷೇಪವಿಧಿಯು, ಕಾರ್ತಿಕಶುದ್ಧ ೧೨ ಯಲ್ಲಿ ರೇವತೀ ನಕ್ಷತ್ರ ಯೋಗವಿಲ್ಲದಿರುವಾಗ ಪಾರಣೆಯನ್ನು ಮಾಡಬೇಕು. (ಆ ಭಾಕಾಸಿತ ಪಕ್ಷೇಷು ಮೈತ್ರಶ್ರವಣ ರೇವತೀ। ಸಂಗಮೇನಹಿಭೋಕ್ತವ್ಯಂ ದ್ವಾದಶದ್ವಾದಶೀರ್ಹರೇತ್ ॥೧॥ ಆಷಾಢ, ಭಾದ್ರಪದ, ಕಾರ್ತಿಕ ಮಾಸಗಳ ಶುಕ್ಲಪಕ್ಷದ್ವಾದಶಿಗೆ ಕ್ರಮವಾಗಿ, ಅನೂರಾಧ, ಶ್ರವಣ, ರೇವತಿ, ನಕ್ಷತ್ರಗಳ ಯೋಗವಿರುವಾಗ ಪಾರಣೆಯನ್ನು ಮಾಡಕೂಡದು. ಮಾಡಿದರೆ ೧೨ ದ್ವಾದಶಿಗಳ ಪಾರಣೆಯ ಫಲವನ್ನು ಹೋಗಲಾಡಿಸುವುದು ॥೧॥ ಎಂದು ವಿಷ್ಣುಧರ್ಮದಲ್ಲಿ ಹೇಳಿದೆ 'ಮೈತ್ರಾದ್ಯಪಾದೇ ಸ್ವಪಿತೀಹವಿಷ್ಣುಃ ಪೌಷ್ಣಾಂತ್ಯಪಾದೇ ಪ್ರತಿಬೋಧಮೇತಿ। ಶ್ರುತೇಶ್ಚಮಧ್ಯೇ ಪರಿವರ್ತಮೇತಿ, ॥ ವಿಷ್ಣುವು ಅನೂರಾಧೆಯ ಮೊದಲ ಪಾದದಲ್ಲಿ ಮಲಗುವನು, ರೇವತಿಯ ಕೊನೆಯ ಪಾದದಲ್ಲಿ ಎಚ್ಚರಗೊಳ್ಳುವನು. ಶ್ರವಣದ ಮಧ್ಯಭಾಗದಲ್ಲಿ ಹೊರಳುವನು ,ಸುಪ್ತಪ್ರಭೋಧ ಪರಿವರ್ತನ ಮೇವವರ್ಜ್ಯಂ, ಮಲಗುವುದು,ಏಳುವುದು,ತಿರುಗಿಕೊಳ್ಳುವುದು, ಈ ನಕ್ಷತ್ರಗಳನ್ನು ಬಿಡಬೇಕು. (ಪಾರಣೆಗೆ) ಎಂದು ನಿರ್ಣಯಸಿಂಧುವಿನಲ್ಲಿ ಹೇಳಿದೆ) ಬಿಡುವುದಕ್ಕವಕಾಶ ವಿಲ್ಲದಂತೆ ಯೋಗವುಂಟಾದರೆ ನಾಲ್ಕನೇ ಪಾದವನ್ನು ಬಿಡಬೇಕು ಎಂಬುದೇ ಮೊದಲಾದ ಶ್ರವಣ ನಿರ್ಣಯ ಪ್ರಕರಣದಲ್ಲಿ ಹೇಳಿರುವಂತೆ ತಿಳಿಯಬೇಕು.

## — ಪ್ರಬೋಧೋತ್ಸವ ತುಲಸೀ ವಿವಾಹಗಳು —

ಪ್ರಬೋಧೋತ್ಸವ ತುಲಸೀ ವಿವಾಹಗಳು---ಕಾರ್ತಿಕ ಶುದ್ಧ ೧ಕಾದಶೀ ದಿನದಲ್ಲಿ ಪ್ರಬೋಧೋತ್ಸವವೆಂದು ಕೆಲವು ಕಡೆಗಳಲ್ಲಿ ಹೇಳಿದೆ. ರಾಮಾರ್ಚನಚಂದ್ರಿಕೆ ಮೊದಲಾದವುಗಳಲ್ಲಿ ದ್ವಾದಶಿಯಲ್ಲಿ ನಡೆಯಬೇಕೆಂದು ಹೇಳಿದೆ. ಎಚ್ಚರಗೊಳಿಸುವ ಮಂತ್ರದಲ್ಲಿ ದ್ವಾದಶಿಯನ್ನೇ ಹೇಳಿರುವುದರಿಂದ ಅದೇ ಯುಕ್ತವಾದದ್ದು. ಅದರಲ್ಲಿ ರೇವತಿಯ ಕೊನೆಯ ಪಾದದ ಯೋಗವು ರಾತ್ರಿಯ ಮೊದಲಭಾಗದಲ್ಲಿ ಪ್ರಶಸ್ತವು. ಅದಿಲ್ಲದಿದ್ದರೆ ಅದೇ ರಾತ್ರಿಯಲ್ಲಿ ರೇವತೀ ನಕ್ಷತ್ರ ಮಾತ್ರಯೋಗವೂ ಉತ್ತಮವು.

ಅದೂ ಇಲ್ಲದಿದ್ದರೆ ರಾತ್ರಿಯ ಮೊದಲಭಾಗದಲ್ಲಿ ಕೇವಲ ದ್ವಾದಶಿಯೂ ಶ್ರೇಷ್ಠವು. ಕೇವಲ ರೇವತಿಯೂ ಹೀಗೆಯೇ । ದ್ವಾದಶಿ, ರೇವತಿ, ಇವೆರಡೂ ರಾತ್ರಿಯಲ್ಲಿರದಿದ್ದರೆ ಹಗಲಿನಲ್ಲಿಯೇ ಮಧ್ಯಕಾಲದಲ್ಲಿ ದ್ವಾದಶಿಯನ್ನು ಮಾಡಬೇಕೆಂದು ಕೌಸ್ತುಭದಲ್ಲಿ ಹೇಳಿದೆ. ಆದರೂ 'ಪಾರಣಾಹೇ ಪೂರ್ವರಾತ್ರೌ, ಪಾರಣೆಯ ದಿನದ ರಾತ್ರಿಯ ಪೂರ್ವಭಾಗದಲ್ಲಿ, ಎಂಬ ವಚನಾನುಸಾರವಾಗಿ, ದ್ವಾದಶಿ ಇಲ್ಲದಿದ್ದಾಗ್ಯೂ ತ್ರಯೋದಶಿಯಲ್ಲಿಯೇ ಪಾರಣೆಯ ದಿನಗಳಲ್ಲಿ ಪ್ರಬೋಧೋತ್ಸವವನ್ನು ಮಾಡಬೇಕೆಂಬುದು ದೇಶಾಚಾರವು. ಹೀಗೆ ತುಲಸೀ ವಿವಾಹಕ್ಕೆ ನವಮಿ ಮೊದಲ್ಗೊಂಡು ಮೂರು ದಿನ ಗಳಲ್ಲಾಗಲಿ, ಏಕಾದಶಿಯಿಂದ ಪೂರ್ಣಿಮೆಯೊಳಗಾಗಲಿ ಯಾವುದಾದರೊಂದು ದಿನದಲ್ಲಿ ಅಥವಾ ಕಾರ್ತಿಕ ಶುದ್ಧದಲ್ಲಿರುವ ವಿವಾಹಯೋಗ್ಯ ನಕ್ಷತ್ರದ ದಿನದಲ್ಲಿ, ಆಗಬಹುದೆಂದು ವಿಧಿಸಿರುವುದರಿಂದ ಅನೇಕ ಕಾಲಗಳಿವೆ, ಆದರೂ ಪಾರಣೆಯ ದಿನದಲ್ಲಿ ಪ್ರಬೋಧೋತ್ಸವದೊಡನೆ ತಂತ್ರದಿಂದಲೇ ಎಲ್ಲಕಡೆಗಳಲ್ಲಿಯೂ ಆಚರಿಸುತ್ತಿದ್ದಾರಾಗಿ ಅದನ್ನು ಪಾರಣದಿನದ ರಾತ್ರಿಯ ಪೂರ್ವಭಾಗದಲ್ಲಿ ಮಾಡಬೇಕು. ಪ್ರಬೋಧೋತ್ಸವವನ್ನು ಬಿಟ್ಟು ಬೇರೆ ಮಾಡಬೇಕೆಂಬ ಅಪೇಕ್ಷೆ ಯಿದ್ದವರು ಬೇರೆ ಕಾಲದಲ್ಲಾದರೂ ಮಾಡಬಹುದು. ಇಲ್ಲಿ-ಪುಣ್ಯಾಹವಾಚನೆ, ನಾಂದೀಶ್ರಾದ್ಧ, ವಿವಾಹ ಹೋಮ ಮೊದಲಾದ ಅಂಗಗಳೊಡನೆ ನಡೆಯಬೇಕಾದ ತುಲಸೀ ವಿವಾಹ ಪ್ರಯೋಗವನ್ನು ಕೌಸ್ತುಭದಿಂದ ತಿಳಿಯತಕ್ಕದ್ದು. ಪ್ರಬೋಧೋತ್ಸವದೊಡನೆ ತಂತ್ರದಿಂದ ಮಾಡುತ್ತಿರುವ ಶಿಷ್ಟಾಚಾರವನ್ನನುಸರಿಸಿ ಸಂಕ್ಷೇಪವಾಗಿ ಇಲ್ಲಿ ತಿಳಿಸುವೆವು. ದೇಶಕಾಲಗಳನ್ನು ಹೇಳಿ, ದಾಮೋದರ ಪ್ರೀತ್ಯರ್ಥವಾಗಿ ಪ್ರಬೋಧೋತ್ಸವವನ್ನೂ, ಸಂಕ್ಷೇಪದಿಂದ ತುಲಸೀವಿವಾಹ ವಿಧಿಯನ್ನೂ, ತಂತ್ರದಿಂದ ಮಾಡುವೆನು, ಎಂದು ಹೇಳಿ, ಅದರ ಅಂಗವಾಗಿ ಪುರುಷಸೂಕ್ತ ವಿಧಾನದಿಂದ ಷೋಡಶೋಪಚಾರಗಳಿಂದ ತಂತ್ರವಾಗಿ ಶ್ರೀ ಮಹಾವಿಷ್ಣುವನ್ನೂ, ತುಲಸಿಯನ್ನೂ ಪೂಜಿಸುವೆನು, ಎಂದು ಸಂಕಲ್ಪಮಾಡಿ, ನ್ಯಾಸಾದಿಗಳನ್ನು ಮಾಡಿ, ಶ್ರೀ ವಿಷ್ಣುವನ್ನೂ, ತುಲಸಿಯನ್ನೂ,ಧ್ಯಾನಿಸಿ 'ಸಹಸ್ರಶೀರ್ಷಾ, ಎಂಬ ಮಂತ್ರದಿಂದ ಶ್ರೀ ಮಹಾವಿಷ್ಣುವನ್ನೂ, ತುಲಸಿಯನ್ನೂಆವಾಹ

ಸೇವಾಡಬೇಕು, ಪುರುಷಏವ, ಮೊದಲಾದ ಮಂತ್ರಗಳಿಂದ ಶ್ರೀಮಹಾವಿಷ್ಣವೇ, ದಾಮೋದರಾಯ, ಶ್ರೀದೇವ್ಯೈ, ತುಲಸ್ಯೈನಮಃ, ಆಸನಂ ಏಂಬಿದೇ ಮೊದಲಾಗಿ ಸ್ನಾನದವರೆಗೂ ಮಾಡಿ, ಮಂಗಳಕರವಾದ ವಾದ್ಯಗಳೊಡನೆ ಗಂಧ, ತೈಲ, ಅರಿಸಿನ, ಇವುಗಳನ್ನು, ವೀಳಯದೆಲೆಯಲ್ಲಿ ತೆಗೆದುಕೊಂಡು, ವಿಷ್ಣುವಿಗೂ, ತುಲಸಿಗೂ, ಸುವಾಸಿನಿಯರಿಂದ ಮಂಗಳಸ್ನಾನಮಾಡಿಸಬೇಕು. ಅಥವಾ ತಾವೇ ಮಾಡಬೇಕು. ಅನಂತರದಲ್ಲಿ ಪಂಚಾಮೃತ, ಶುದ್ಧೋದಕ ಸ್ನಾನಗಳನ್ನು ಮಾಡಿಸಿ ವಸ್ತ್ರ, ಯಜ್ಞೋಪವೀತ, ಗಂಧಗಳನ್ನರ್ಪಿಸಿ, ತುಲಸಿಗೆ ಅರಿಸಿನ, ಕುಂಕುಮ ಕಂಠಸೂತ್ರ ಮೊದಲಾದ ಮಂಗಳ ದ್ರವ್ಯಗಳನ್ನುಸಮರ್ಪಿಸಿ, ಮಂತ್ರಪುಷ್ಪಾಂತವಾಗಿ ಪೂಜೆಯನ್ನು ಪೂರಯಿಸಿ, ಘಂಟಾನಾದದೊಡನೆ ವಿಷ್ಣುವನ್ನು ಎಚ್ಚರಿಸಬೇಕು. ಮಂತ್ರಗಳು:-ಇದಂ ವಿಷ್ಣುಃ, ಯೋಜಾಗಾರ,ಎಂಬುದು ಆಚಾರದಿಂದ ಬಂದದ್ದು. 'ಬ್ರಹ್ಮೇಂದ್ರ ರುದ್ರಾಗ್ನಿ ಕುಬೇರಸೂರ್ಯ ಸೋಮಾದಿಭಿರ್ವಂದಿತ ವಂದನೀಯ ! ಬುಧ್ಯಸ್ವದೇವೇಶ ಜಗನ್ನಿವಾಸ ಮಂತ್ರಪ್ರಭಾವೇನ ಮುಖೇನ ದೇವ॥೧॥' ಇಯಂಚದ್ವಾದಶೀದೇವ ಪ್ರಬೋಧಾರ್ಥಂತು ನಿರ್ಮಿತಾ । ತ್ವಯ್ಯೈವಸರ್ವ ಲೋಕಾನಾಂ ಹಿತಾರ್ಥಂ ಶೇಷಶಾಯಿನಾ ॥೨॥ ಉತ್ತಿಷ್ಠೋತ್ತಿಷ್ಠ ಗೋವಿಂದ ತ್ಯಜನಿದ್ರಾಂ ಜಗತ್ಪತೇ ತ್ವಯಿಸುಪ್ತೇ ಜಗತ್ಸುಪ್ತ ಮುತ್ಥಿತೇಚೋತ್ಥಿತಂ ಜಗತ್ ॥೩॥ ಬ್ರಹ್ಮ, ಇಂದ್ರ, ರುದ್ರ, ಅಗ್ನಿ, ಕುಬೇರ, ಸೂರ್ಯ, ಚಂದ್ರ, ಮೊದಲಾದ ದೇವತೆಗಳಿಂದ ನಮಸ್ಕಾರವನ್ನು ಹೊಂದುವ ಜಗದ್ವ್ಯಾಪಕನಾದ ಪರಮಾತ್ಮನೇ ! ಮಂತ್ರಪ್ರಭಾವವುಳ್ಳ ನಿನ್ನ ಮುಖದಿಂದ ಎಚ್ಚರವನ್ನು ಹೊಂದು॥ ಆದಿಶೇಷನಮೇಲೆ ನಿದ್ರಿಸುತ್ತಿರುವ ಎಲೈ ವಿಷ್ಣುವೇ ! ಲೋಕವನ್ನುಉದ್ಧಾರಮಾಡುವುದಕ್ಕೂ, ಎಚ್ಚರಗೊಳಿಸುವುದಕ್ಕೂ ನೀನೇ ಈ ದ್ವಾದಶಿಯನ್ನು ಸೃಷ್ಟಿಮಾಡಿದ್ದೀಯೆ॥೨॥ ಎಲೈ ಜಗತ್ಪತಿಯಾದ ಗೋವಿಂದನೇ ! ನೀನು ನಿದ್ರಿಸುತ್ತಿದ್ದರೆ ಈ ಜಗತ್ತೆಲ್ಲವೂ ನಿದ್ರೆಯನ್ನು ಹೊಂದಿರುವುದು. ನೀನು ಎಚ್ಚತ್ತಿದ್ದರೆ ಪ್ರಪಂಚವೆಲ್ಲವೂ ಎಚ್ಚರಗೊಂಡಿರುವುದು. ಆದಕಾರಣ ನೀನು ನಿದ್ರೆಯನ್ನು ತೊರೆದು ಎಚ್ಚರಗೊಳ್ಳುವವನಾಗು ॥೩॥ ಎಂದು ಎಬ್ಬಿಸಿ, 'ಚರಣಂಪವಿತ್ರಂ'॥೧॥ 'ಗತಾಮೇಘಾ ವಿಯಚ್ಚೈವ ನಿರ್ಮಲಂ

ನಿರ್ಮಲಾ ದಿಶಃ । ಶಾರದಾನಿಚ ಪುಷ್ಪಾಣಿ ಗೃಹಾಣ ಮಮಕೇಶವ॥೨॥' ಮೇಘಗಳೆಲ್ಲವೂ ತೊಲಗಿದವು. ಆದಕಾರಣ ಆಕಾಶವೂ, ದಿಕ್ಕುಗಳೂ ನಿರ್ಮ್ಮಲವಾಗಿವೆ. ಎಲೈ ಕೇಶವನೇ! ನಾನು ಸಮರ್ಪಿಸುವ ಈ ಶರದೃತು ಸಂಬಂಧವಾದ ಪುಷ್ಪಗಳನ್ನು ಪರಿಗ್ರಹಿಸು ॥ ೨ ॥ ಈ ಮಂತ್ರಗಳಿಂದ ಪುಷ್ಪಾಂಜಲಿಯನ್ನು ಕೊಡಬೇಕು. ಅನಂತರದಲ್ಲಿ ಆಚಾರ ಪ್ರಕಾರವಾಗಿ ತುಲಸಿಗೆ ಎದುರಾಗಿ ಶ್ರೀ ಕೃಷ್ಣಪ್ರತಿಮೆಯನ್ನು ನಿಲ್ಲಿಸಿ ಮಧ್ಯದಲ್ಲಿ ತೆರೆಯನ್ನು ಹಿಡಿದು, ಮಂಗಳಾಷ್ಟಕ ಶ್ಲೋಕಗಳನ್ನು ಹೇಳಿ, ತೆರೆಯನ್ನು ತೆರೆದು, ಅಕ್ಷತೆಗಳನ್ನು ಹಾಕಿಸಿ, ದಾಮೋದರನ ಕೈಯಲ್ಲಿ ತುಲಸೀದಾನವನ್ನು ಮಾಡಬೇಕು. 'ದೇವೀಂಕನಕ ಸಂಪನ್ನಾಂ ಕನಕಾಭರಣೈರ್ಯುತಾಂ । ದಾಸ್ಯಾಮಿ ವಿಷ್ಣವೇತುಭ್ಯಂ ಬ್ರಹ್ಮಲೋಕ ಜಿಗೀಷಯಾ॥೧॥' ಸುವರ್ಣದಂತೆ ಹೊಳೆಯುತ್ತಾ, ಸ್ವರ್ಣಾಭರಣಗಳಿಂದ ಅಲಂಕೃತಳಾಗಿರುವ ಈ ತುಲಸೀದೇವಿಯನ್ನು ವಿಷ್ಣುವಾದ ನಿನಗೆ ಬ್ರಹ್ಮಲೋಕವನ್ನು ನಾನು ಪಡೆಯಲೆಳಸಿ ದಾನಮಾಡುವೆನು ॥೧॥ ನಾನೇ ಪ್ರೋಕ್ಷಿಸಿ, ನನ್ನ ಶಕ್ತ್ಯನುಸಾರವಾಗಿ ಅಲಂಕಾರಮಾಡಿರುವ ತುಲಸೀದೇವಿಯನ್ನು ವರರೂಪನಾದ ಮಹಾವಿಷ್ಣುವಾದ ನಿನಗೆ ನಾನು ದಾನಮಾಡಿದ್ದೇನೆ. ಎಂದು ಹೇಳಿ ವಿಷ್ಣುವಿನೆದುರಿಗೆ ಮಂತ್ರಾಕ್ಷತೆಗಳೊಡನೆ ಉದಕವನ್ನು ಬಿಡಬೇಕು. ಶ್ರೀ ಮಹಾವಿಷ್ಣುವು ಸುಪ್ರೀತನಾಗಲಿ, ಎಂದು ಹೇಳಿ, ಈ ತುಲಸೀದೇವಿಯನ್ನು ನೀನು ಪ್ರತಿಗ್ರಹಮಾಡು, ಎಂದು ಹೇಳಬೇಕು. ಅನಂತರದಲ್ಲಿ ಕೃಷ್ಣನ ಕೈಯನ್ನು ತುಲಸಿಯಿಂದ ಮುಟ್ಟಿಸಿ. 'ಕಇದಂ ಕಸ್ಮಾದಾತ್ಕಾಮಃ ಕಾಮಾಯಾದಾತ್ಕಾಮೋದಾತಾ ಕಾಮಃ ಪ್ರತಿಗ್ರಹೀತಾ ಕಾಮಂ ಸಮುದ್ರಮಾವಿಶ ಕಾ ಮೇನತ್ವಾ ಪ್ರತಿಗೃಹ್ಣಾಮಿಕಾಮೈತತ್ತೇ ವೃಷ್ಟಿರಸಿದ್ಯೌ ಸ್ತ್ವಾದದಾತು, ಪೃಥಿವೀ ಪ್ರತಿಗೃಹ್ಣಾತು, ಎಂಬ ಮಂತ್ರವನ್ನು ಮತ್ತೊಬ್ಬರಿಂದ ಹೇಳಿಸಬೇಕು. 'ತ್ವಂದೇ ವಿಮೇಽಗ್ರತೋಭೂಯಾ ಸ್ತುಲಸೀ ದೇವಿ ಪಾರ್ಶ್ವತಃ ॥ ದೇವಿ ತ್ವಂ ಪೃಷ್ಠತೋಭೂಯಾಸ್ತ್ವದ್ದಾ ನಾನ್ಮೋಕ್ಷಮಾಪ್ನುಯಾಂ ॥೧॥' ಎಲೆ ತುಲಸಿದೇವಿಯೇ । ನೀನು ನನ್ನ ಹಿಂದೂ ಮುಂದೂ, ಸರ್ವದಾ ಪಕ್ಕಗಳಲ್ಲಿಯೂ, ಇರು. ನಿನ್ನನ್ನು ದಾನಮಾಡಿದ್ದರಿಂದ ನಾನು ಮುಕ್ತಿಯನ್ನು ಪಡೆವೆನು॥೧

ಎಂಬ ಮಂತ್ರವನ್ನು ಹೇಳಿ ಯಜಮಾನನು ದಾನಕ್ಕೆ ಪ್ರತಿಷ್ಠೆಯುಂಟಾ ಗುವುದಕ್ಕಾಗಿ ದಕ್ಷಿಣೆಯನ್ನು ದೇವರಿಗೆ ಅರ್ಪಿಸಬೇಕು. ಅನಂತರದಲ್ಲಿ 'ಸ್ವಸ್ತಿನೋಮಿಮೀತಾಂ' ಶಂನ ಇಾದ್ರಾಗ್ನೀ; ಮೊದಲಾದ ತಮ್ಮ ತಮ್ಮ ಶಾಖಾ ಶಾಂತಿ ಸೂಕ್ತಗಳನ್ನೂ, ವಿಷ್ಣುಸೂಕ್ತಗಳನ್ನೂ ಹೇಳಬೇಕು. ತುಲಸೀ ಸಹಿತನಾದ ವಿಷ್ಣುವಿಗೆ ಮಹಾ ನೀರಾಜನವನ್ನು ಮಾಡಿ, ಮಂತ್ರಪುಷ್ಪವನ್ನು ಅರ್ಪಿಸಿ ತನ್ನ ಹೆಂಡತಿ, ಬಂಧುಗಳು, ಮಂತ್ರಿಗಳೊಡನೆ ನಾಲ್ಕು ಪ್ರದಕ್ಷಿಣೆಗಳನ್ನು ಮಾಡಬೇಕು. ಬ್ರಾಹ್ಮಣರಿಗೆ ದಕ್ಷಿಣೆಗಳನ್ನು ಕೊಟ್ಟು ತನ್ನಶಕ್ತಿಗೆ ತಕ್ಕಷ್ಟುಮಂದಿ ಬ್ರಾಹ್ಮಣರಿಗೆ ಭೋಜನ ಮಾಡಿಸುವುದಲ್ಲದೆ ಕರ್ಮವನ್ನು ಈಶ್ವರನಿಗೆ ಅರ್ಪಿಸಬೇಕು. ಹೀಗೆ ದೇವರನ್ನು ಎಚ್ಚರಿಸಿ, ಕಾರ್ತಿಕಮಾಸದಲ್ಲಿ ತಾನು ಬಿಟ್ಟದ್ದ ಪದಾರ್ಥಗಳನ್ನೂ, ಇತರ ವಸ್ತುಗಳನ್ನೂ ಬ್ರಾಹ್ಮಣರಿಗೆ ಕೊಟ್ಟು-"ಇದಂ ವ್ರತಂ ಮಯಾದೇವ ಕೃತಂ ಪ್ರೀತ್ಯೈತವಪ್ರಭೋ। ನ್ಯೂನಂ ಸಂಪೂರ್ಣತಾಂ ಯಾತು ತ್ವತ್ಪ್ರಸಾದಾಜ್ಜನಾರ್ದನ ॥೧॥" ಎಲೈ ಸ್ವಾಮಿಯೇ! ನಿನ್ನ ಪ್ರೀತಿಗಾಗಿ ಈ ವ್ರತವನ್ನು ನಾನು ಮಾಡಿದೆನು. ನಿನ್ನ ಅನುಗ್ರಹದಿಂದ ಅದು ನ್ಯೂನತೆಯನ್ನು ಹೊಂದದೆ ಸಂಪೂರ್ಣವಾಗಲಿ ॥೧॥ ಎಂದುವ್ರತಕ್ಕೆ ಸಂಪೂರ್ಣತ್ವವನ್ನು ಪ್ರಾರ್ಥಿಸಿಕೊಂಡು ಈಶ್ವರಾರ್ಪಣೆ ಮಾಡಬೇಕು. ಇಲ್ಲಿಯೇ ಚಾತುರ್ಮಾಸ್ಯ ವ್ರತವನ್ನೂ ಪೂರಯಿಸಬೇಕೆಂದು ಕೆಲವರು. ಕಾರ್ತಿಕಮಾಸ ವ್ರತೋದ್ಯಾಪನೆಯೂ, ಚಾತುರ್ಮಾಸ್ಯ ವ್ರತೋದ್ಯಾಪನೆಯೂ, ಚತುರ್ದಶಿ ಅಥವಾ ಪೌರ್ಣಮಿಯಲ್ಲಾಗಬೇಕೆಂದು ಮತ್ತೆ ಕೆಲವರು ಹೇಳುತ್ತಾರೆ.

— ವೈಕುಂಠಚತುರ್ದಶಿಯು —

ವೈಕುಂಠಚತುರ್ದಶಿಯು—ಮೊದಲ ದಿನದಲ್ಲಿ ಉಪವಾಸಮಾಡಿ ಅರುಣೋದಯವ್ಯಾಪ್ತಿಯುಳ್ಳ ಚತುರ್ದಶಿಯಲ್ಲಿ ಈಶ್ವರನನ್ನು ಪೂಜಿಸಿ, ಬೆಳಗಿನಲ್ಲಿ ಪಾರಣೆಯನ್ನು ಮಾಡಬೇಕು. ಆದ್ದರಿಂದ ಚತುರ್ದಶಿಯುಕ್ತವಾದ ಅರುಣೋದಯವುಳ್ಳ ಅಹೋರಾತ್ರಿಯಲ್ಲಿ (ಬಂದು ಹಗಲು ಮತ್ತು ರಾತ್ರಿ) ಉಪವಾಸ ಮಾಡಬೇಕೆಂಬುದು ಫಲಿತಾರ್ಥವು. ಎರಡು ದಿನಗಳಿಗೆ ಅರುಣೋದಯವ್ಯಾಪ್ತಿ ಇದ್ದರೆ ಎರಡನೆಯ ದಿನದ ಅರುಣೋದ

ಯದಲ್ಲಿ ಪೂಜೆಯನ್ನೂ,ಪೂರ್ವದಿನದಲ್ಲಿ ಉಪವಾಸವನ್ನೂ ಮಾಡಬೇಕು. ಉಭಯದಿನಗಳಿಗೂ ಅರುಣೋದಯವ್ಯಾಪ್ತಿ ಇಲ್ಲದಿದ್ದರೆ-ಚತುರ್ದಶೀ ಯುಕ್ತವಾದ ಅಹೋರಾತ್ರಿಯಲ್ಲಿಯೇ ಅರುಣೋದಯದಲ್ಲಿ ಪೂಜೆಯೂ, ಪೂರ್ವದಿನದಲ್ಲಿ ಉಪವಾಸವೂ ನಡೆಯಬೇಕು. ವಿಷ್ಣುಪೂಜೆಯಲ್ಲಿ ನಿಶೀಥ ವ್ಯಾಪ್ತಿಯುಳ್ಳ ಚತುರ್ದಶಿಯನ್ನೂ, ಎರಡು ದಿನಗಳಲ್ಲಿ ವ್ಯಾಪ್ತಿ ಇದ್ದರೆ ನಿ ಶೀಥ ಮತ್ತು ಪ್ರದೋಷ ಈ ಎರಡರವ್ಯಾಪ್ತಿಯುಳ್ಳ ಚತುರ್ದಶಿಯನ್ನು ಗ್ರಹಿಸಬೇಕೆಂದು ಕೆಲವರ ಮತವು. ಎರಡನೆಯದಿನದ ವೇಧೆಯುಳ್ಳ ಈ ಚತುರ್ದಶಿಯಲ್ಲಿ ಕಾರ್ತಿಕ ಮಾಸ ವ್ರತದ ಉದ್ಯಾಪನೆಗಾಗಿ ಉಪ ವಾಸಮಾಡಿ,ದೇವರಿಗೆ ಅಧಿವಾಸನಗಳನ್ನು ಮಾಡಿಸಿ "ರಾತ್ರೌ ಜಾಗರಣಂ ಕುರ್ಯಾದ್ಗೀತ ವಾದ್ಯಾದಿ ಮಂಗಳೈಃ । ನರಾಣಾಂ ಜಾಗರೇವಿಷ್ಣೋ ರ್ಗೀತಂ ನೃತ್ಯಂಚ ಕುರ್ವತಾಂ ॥ ೧ ॥ ಗೋ ಸಹಸ್ರಂಚದದತಾಂ ಫಲಂ ಸಮಮುದಾಹೃತಂ॥" ಶ್ರೀಮಹಾವಿಷ್ಣುವಿಗೆ ಗೀತವಾದ್ಯಗಳಿಂದ ಜಾಗರ ವನ್ನುಂಟುಮಾಡಿ, ರಾತ್ರಿಯಲ್ಲಿ ಸಂಗೀತ, ನಾಟ್ಯ, ಮೊದಲಾದವುಗಳಿಂದ ತೃಪ್ತಿ ಪಡಿಸತಕ್ಕವರಿಗೂ ॥ ೧ ॥ ಸಹಸ್ರ ಗೋದಾನಮಾಡಿದವರಿಗೆ ಸಮ ವಾದ ಫಲವು ಬರುವುದು.॥ ಈ ಮೊದಲಾದ ವಚನಗಳಿಂದ ಹೇಳಿರುವ ಗೀ ತ ನೃತ್ತ, ವಾದ್ಯ, ವಿಷ್ಣು ಚರಿತ್ರ ಪಠನ, ಪ್ರಿಯಾಲಾಪ ಮೊದಲಾದ ವಿ ನೋದಗಳಿಂದ ವಿಷ್ಣುಜಾಗರವನ್ನು ಮಾಡಿ,ಪರತಿಥಿವೇಧೆಯುಳ್ಳ ಪೌರ್ಣ ಮಿಯಲ್ಲಿ ಪತ್ನೀ ಸಮೇತನಾದ ಆಚಾರ್ಯನಿಗೆ ವರಣಕೊಟ್ಟು ' ಅತೋ ದೇವಾಃ ' ಎಂಬೆರಡು ಋಕ್ಕುಗಳಿಂದ ತಿಲ ಪಾಯಸಗಳನ್ನು ಹೋಮ ಮಾಡಿ ಗೋದಾನವನ್ನು ಮಾಡಬೇಕು. ಇದೇ ಮಾಸ ವ್ರತೋದ್ಯಾಪನೆ ಯು. ಕಾರ್ತಿಕ ಶುದ್ಧದ್ವಾದಶಿ, ಪೌರ್ಣಮಿಗಳು, ಮನ್ವಾದಿಗಳು, ಪೂರ್ವಾಹ್ಣವ್ಯಾಪ್ತಿಯುಳ್ಳ ತಿಥಿಯನ್ನು ಅದಕ್ಕೆ ಗ್ರಹಿಸಬೇಕು. ಉಳಿದ ವಿಷಯವು ಮೊದಲಿನಂತೆಯೇ. ಈ ದಿನದಲ್ಲಿ ಚಾತುರ್ಮಾಸ್ಯ ವ್ರತವನ್ನು ಪೂರೈಯಿಸಬೇಕು.

—ಚಾತುರ್ಮಾಸ್ಯ ವ್ರತದಾನಗಳು—

ಚಾತುರ್ಮಾಸ್ಯವ್ರತದಾನಗಳು — ನಕ್ತವ್ರತವನ್ನು ಮಾಡಿದ್ದವರು ವಸ್ತ್ರಯುಗ್ಮವನ್ನು ಕೊಡಬೇಕು. ದಿನಬಿಟ್ಟು ದಿನ ಉಪವಾಸ ಮಾಡಿದ

ರೆ ಗೋವು. ನೆಲದಲ್ಲಿ ಮಲಗುವುದಕ್ಕೆ ಹಾಸಿಗೆ, ದಿನದ ಆರನೆಯಯಾಮದ ಹ
ಲ್ಲಿ ಭೋಜನ ಮಾಡಿದ್ದರೆ ಗೋವು, ವ್ರೀಹಿ, ಗೋಧಿ ಮೊದಲಾದ ಧಾನ್ಯ
ಗಳನ್ನು ಬಿಟ್ಟದ್ದರೆ ಚಿನ್ನದ ಆಯಾಧಾನ್ಯಗಳು. ಕೃಚ್ಛ್ರವ್ರತಕ್ಕೆ ಗೋ
ಯುಗ್ಮವು (ಎರಡು) ಸೊಪ್ಪುಗಳನ್ನು ಆಹಾರಮಾಡಿದ್ದರೆ ಗೋವು, ಹಾ
ಲನ್ನು ಮಾತ್ರವೇ ಆಹಾರ ಮಾಡಿಕೊಂಡಿದ್ದಾಗ್ಯೂ ಅಥವಾ ಹಾಲನ್ನು ಬಿ
ಟ್ಟದ್ದರೂ ಗೋವು, ಜೇನುತುಪ್ಪ, ಮೊಸರು, ತುಪ್ಪ ಇವುಗಳನ್ನುಬಿಟ್ಟ
ದ್ದರೆ ವಸ್ತ್ರವು, ಗೋವು, ಬ್ರಹ್ಮಚರ್ಯಕ್ಕೆ ಸುವರ್ಣವು ತಾಂಬೂಲವನ್ನು
ಬಿಟ್ಟದ್ದರೆ ವಸ್ತ್ರಯುಗ್ಮವು, ಮೌನವ್ರತಕ್ಕೆ (ಊಟ ಮಾಡುವಾಗ) ಘಂಟೆ
ಮತ್ತು ತುಪ್ಪವನ್ನು ತುಂಬಿರುವ ಪಾತ್ರೆ, ವಸ್ತ್ರಯುಗ್ಮಗಳು. ರಂಗವಲ್ಲಿಗ
ಳನ್ನು ಬರೆದು ಪೂಜಿಸಿದ್ದರೆ ಗೋವು. ಚಿನ್ನದ ಕಮಲವು. ದೀಪದಾನ
ವ್ರತಕ್ಕೆ ದೀಪವು. ವಸ್ತ್ರದ್ವಯವೂ. ನೆಲದಲ್ಲಿ ಊಟಮಾಡುವುದಕ್ಕೆ ಕಂ
ಚು, ಗೋವು. ಹಸುವಿನ ಮೇವು ಕೊಡುತ್ತಿದ್ದರೆ (ಗೋಗ್ರಾಸ) ಹಸು,
ಎತ್ತು, ನೂರು ಪ್ರದಕ್ಷಿಣೆಗಳನ್ನು ಮಾಡಿದ್ದರೆವಸ್ತ್ರವು- ಅಭ್ಯಂಗವನ್ನು
ಬಿಟ್ಟದ್ದರೆ ಎಣ್ಣೆಯನ್ನು ತುಂಬಿರುವ ಪಾತ್ರೆ, ಕೂದಲನ್ನೂ ಉಗು
ರುಗಳನ್ನೂ ಬೆಳಸಿದ್ದರೆ ಜೇನುತುಪ್ಪ, ತುಪ್ಪ, ಚಿನ್ನಗಳು, ಯಾವುದಕ್ಕೆ
ವಿಶೇಷ ದಾನವನ್ನು ಹೇಳಲ್ಲವೋ ಅದಕ್ಕೆ ದಕ್ಷಿಣೆ, ಗೋವು ಇವುಗಳನ್ನು
ದಾನಮಾಡಬೇಕು. ಬೆಲ್ಲವನ್ನು ಬಿಟ್ಟದ್ದರೆ ಬೆಲ್ಲದಿಂದ ತುಂಬಿದ ತಾಮ್ರ
ಪಾತ್ರೆಯನ್ನೂ, ಸುವರ್ಣವನ್ನೂ, ಉಪ್ಪನ್ನು ಬಿಟ್ಟದ್ದರೆ ಉಪ್ಪುತುಂಬಿದ
ತಾಮ್ರಪಾತ್ರೆ, ಸುವರ್ಣ ಇವುಗಳನ್ನು ದಾನ ಮಾಡಬೇಕೆಂದು ಕೆಲವೆಡೆಗ
ಳಲ್ಲಿ ಹೇಳಿದೆ. ಈ ದಿನದಲ್ಲಿಯೇ ಆಷಾಢಾದಿಗಳಲ್ಲಿ ಪ್ರಾರಂಭಿಸಿದ ಲಕ್ಷ
ಪ್ರದಕ್ಷಿಣೆ, ಲಕ್ಷನಮಸ್ಕಾರಇವುಗಳಿಗೆ ಉದ್ಯಾಪನೆಯನ್ನು ಮಾಡಬೇಕು.

—ಲಕ್ಷಪೂಜಾ ಫಲಾದಿಗಳು—

ಲಕ್ಷಪೂಜಾ ಫಲಾದಿಗಳು:-ಪುಷ್ಪಲಕ್ಷಪೂಜಾದಿಗಳೂ ಹೀಗೆಯೇ!
(ಪದ್ಮಪುರಾಣದ ಪೃಥ್ವೀಚಂದ್ರೋದಯದಲ್ಲಿ“ಕಾರ್ತಿಕೇ ನಾರ್ಚಿತೋ
ಯೈಸ್ತು ಕಮಲೈಃ ಕಮಲೇಕ್ಷಣಃ। ಜನ್ಮಕೋಟಿಷು ವಿಪ್ರೇಂದ್ರನ
ತೇಷಾಂಕಮಲಾಗೃಹೇ,, ಕಾರ್ತಿಕಮಾಸದಲ್ಲಿ ಯಾರು ವಿಷ್ಣುವನ್ನು ಕ
ಮಲಗಳಿಂದ ಪೂಜಿಸುವುದಿಲ್ಲವೋ ಅವರ ಮನೆಯನ್ನು ಲಕ್ಷ್ಮಿಯು

ಕೋಟಿ ಜನ್ಮಗಳವರೆಗೂ ಪ್ರವೇಶಿಸಳು, ಎಂದು ನಿರ್ಣಯ ಸಿಂಧುವಿನಲ್ಲಿ ಹೇಳಿರುವುದರಿಂದ ಐಶ್ವರ್ಯವನ್ನು ಅಪೇಕ್ಷೆಮಾಡುವವರು ಕಾರ್ತಿಕ ಮಾಸದಲ್ಲಿ ವಿಷ್ಣುವಿಗೆ ಕಮಲಾರ್ಚನೆಯನ್ನು ಆವಶ್ಯಕವಾಗಿ ಮಾಡಬೇಕು.) ಲಕ್ಷಬಿಲ್ವ ಪತ್ರವನ್ನು ಪೂಜಿಸುವುದರಿಂದ ಲಕ್ಷ್ಮೀಪ್ರಾಪ್ತಿಯಾಗುವುದು. ಲಕ್ಷದೂರ್ವೆಗಳಿಂದ ಅರಿಷ್ಟನಿವಾರಣೆ, ಲಕ್ಷಚಂಪಕ (ಸಂಪಗೆ) ಗಳಿಂದ ಆಯುರ್ವೃದ್ಧಿ, ಅತಸೀಲಕ್ಷದಿಂದ ವಿದ್ಯೆಯು, ಲಕ್ಷ ತುಲಸಿಯಿಂದ ವಿಷ್ಣುಪ್ರಸಾದವು, ಅಕ್ಕಿ, ಗೋಧಿ ಮೊದಲಾದ ಧಾನ್ಯ ಲಕ್ಷದಿಂದ ದುಃಖಪರಿಹಾರವೂ ಉಂಟಾಗುವುವು. ಹೀಗೆ ಎಲ್ಲಾ ಪುಷ್ಪಗಳಿಂದಲೂ ಇಷ್ಟಸಿದ್ಧಿಯುಂಟಾಗುವುದು. ಹೀಗೆ ಲಕ್ಷವರ್ತಿ (ಬತ್ತಿ) ವ್ರತವನ್ನು ಮೂರುತಿಂಗಳವರೆಗೆ ಮಾಡಿ, ಕಾರ್ತಿಕ, ಮಾಘ, ವೈಶಾಖ, ಇವುಗಳಲ್ಲಿ ಮುಗಿಸಬೇಕು. ಕೊನೆಕೊನೆಯವು ಉತ್ತಮವಾದ ಮಾಸಗಳು, ಧಾರಣಪಾರಣಾ ವ್ರತದ ಉದ್ಯಾಪನೆಯೂ ಪೌರ್ಣಮಿಯಲ್ಲಿಯೇ. ಕಾರ್ತಿಕ ಮಾಸದಲ್ಲಿ ಮಾಡುವ ಮಾಸೋಪವಾಸವ್ರತ ಮೊದಲಾದವುಗಳಿಗೆ ದ್ವಾದಶಿಯಲ್ಲಿಯೇ ಪೂರ್ತಿಯು, ಆಗ ಆಗದಿದ್ದರೆ ಪೌರ್ಣಮಿಯಲ್ಲಿ ಹೀಗೆಯೇ ಆಷಾಢ ಶುದ್ಧೈಕಾದಶಿ ಮೊದಲಾದವುಗಳಲ್ಲಾರಂಭಿಸಿ ಪ್ರತಿದಿನವೂ ೩೩ ಗೋಪದ್ಮಗಳನ್ನು ಬರೆದು, ಗಂಧಪುಷ್ಪಾದಿಗಳಿಂದ ಪೂಜಿಸಿ, ಅಷ್ಟೇ ಸಂಖ್ಯೆಯುಳ್ಳ, ಅರ್ಘ್ಯ, ನಮಸ್ಕಾರ, ಪ್ರದಕ್ಷಿಣೆಗಳನ್ನು ಮಾಡಿ, ಕಾರ್ತಿಕ ದ್ವಾದಶಿಯಲ್ಲಿ ೩೩ ಅಪೂಪ (ಭಕ್ಷ್ಯ)ಗಳನ್ನು ಬಾಯನವಾಗಿ ಕೊಡಬೇಕು. ಐದು ಸಂವತ್ಸರಗಳವರೆಗೂ ಹೀಗೆಯೇ ಮಾಡಿ, ಆಮೇಲೆ ಉದ್ಯಾಪನೆಯನ್ನು ಮಾಡುವುದೇ ಗೋಪದ್ಮವ್ರತವಿಧಿಯು. ಲಕ್ಷ ಪ್ರದಕ್ಷಿಣೆ ಮೊದಲ್ಗೊಂಡು ಗೋಪದ್ಮದವರಿಗೆ ಮಾಡಬೇಕಾದ ವ್ರತೋದ್ಯಾಪನಾವಿಧಿಯು ಕೌಸ್ತುಭಾದಿ ಗ್ರಂಥಗಳಲ್ಲಿದೆ. ಕಾರ್ತಿಕ ಪೌರ್ಣಮಿಗೆ ಕೃತ್ತಿಕೆಯ ಯೋಗವಿದ್ದರೆ ಬಹು ಪುಣ್ಯಪ್ರದವು. ರೋಹಿಣಿಯ ಯೋಗವಿದ್ದರೆ ಮಹಾ ಕಾರ್ತಿಕಿ, ಎಂದು ಹೇಳಿಸಿಕೊಳ್ಳುವುದು. ಕಾರ್ತಿಕ ಪೌರ್ಣಮಿಯಲ್ಲಿ ಕೃತ್ತಿಕೆಯ ಯೋಗವು ಬಂದರೆ, ಷಣ್ಮುಖ ದರ್ಶನವನ್ನು ಮಾಡುವ ಬ್ರಾಹ್ಮಣನು ಏಳು ಜನ್ಮಗಳಲ್ಲಿ ಐಶ್ವರ್ಯವಂತನೂ, ವೇದಪಾರಗನೂ ಆಗುವನು. ಸೂರ್ಯನು ವಿಶಾಖಾ ನಕ್ಷತ್ರ

ದಲ್ಲಿರುವ ದಿನದಲ್ಲಿ ಚಂದ್ರನು ಕೃತ್ತಿಕಾ ನಕ್ಷತ್ರದಲ್ಲಿದ್ದರೆ ಪುಷ್ಕರಯೋಗವು. ಪುಷ್ಕರತೀರ್ಥದಲ್ಲಿ ಆ ದಿನವು ವಿಶೇಷವಾದದ್ದು. ಈ ದಿನದಲ್ಲಿಯೇ ತ್ರಿಪುರದಾನವನ್ನು ಮಾಡತಕ್ಕದು. ,,ಪೌರ್ಣಮಾಸ್ಯಾಂತು ಸಂಧ್ಯಾಯಾಂ ಕರ್ತವ್ಯಸ್ತ್ರಿಪುರೋತ್ಸವಃ। ದದ್ಯಾದನೇನ ಮಂತ್ರೇಣ ಪ್ರದೀಪಾಂಶ್ಚ ಸುರಾಲಯೇ॥ ಕೀಟಾಃ ಪತಂಗಾ ಮಶಕಾಶ್ಚ ವೃಕ್ಷಾ ಜಲೇಸ್ಥಲೇ ಯೇ ವಿಚರಂತಿ ಜೀವಾಃ। ದೃಷ್ಟ್ವಾ ಪ್ರದೀಪಂ ನಚ ಜನ್ಮಭಾಗಿನೋ ಭವಂತಿ ನಿತ್ಯಂಶ್ವಪಚಾಹಿವಿಪ್ರಾಃ॥,, ಪೌರ್ಣಮಿಯು ಸಂಧ್ಯಾಕಾಲದಲ್ಲಿ ತ್ರಿಪುರೋತ್ಸವವನ್ನು ಮಾಡಿ ಮುಂದೆ ಹೇಳುವ ಮಂತ್ರದಿಂದ ದೇವಸ್ಥಾನಗಳಲ್ಲಿ ದೀಪಗಳನ್ನಿಡಬೇಕು. ಹುಳುಗಳು, ಪತಂಗಗಳು (ದೀಪದ ಹುಳು) ಸೊಳ್ಳೆ, ಮರಗಳು, ಮುಂತಾದವೂ, ನೀರು, ನೆಲಗಳಲ್ಲಿರುವ ಇತರ ಪ್ರಾಣಿಗಳೂ, ಭ್ರಷ್ಟರಾದ ಬ್ರಾಹ್ಮಣರೂ, ಈ ದೀಪಗಳನ್ನು ನೋಡಿದ್ದರಿಂದ ಪುನರ್ಜನ್ಮವನ್ನು ಕಳೆದುಕೊಂಡು ಶಾಶ್ವತಗತಿಯನ್ನು ಪಡೆಯುತ್ತಾರೆ, ಎಂದು ನಿರ್ಣಯಸಿಂಧುವು) ಕಾರ್ತಿಕ ಪೌರ್ಣಮಿಯಲ್ಲಿ ಕಾಮ್ಯವೃಷೋತ್ಸರ್ಗವು ಬಹಳ ಪ್ರಶಸ್ತವಾದದ್ದು. ಹಾಗೆಯೇ- ಆನೆ, ಕುದುರೆ, ರಥ, ತುಪ್ಪ, ಹಸು, ಮೊದಲಾದ ದಾನವೂ ಶ್ರೇಷ್ಠವಾದದ್ದು. ವೃಷೋತ್ಸರ್ಗಕ್ಕೆ ಆಶ್ವಯುಜ ಪೌರ್ಣಮಿಯೂ, ಸೂರ್ಯ ಚಂದ್ರಗ್ರಹಣಗಳೂ, ಉತ್ತರಾಯಣ, ದಕ್ಷಿಣಾಯನಗಳೂ, ವಿಷುವತ್ಕಾಲಗಳೆರಡೂ ಸಹ ಪ್ರಶಸ್ತವಾದ ಕಾಲಗಳು. ಮಾಘ, ಚೈತ್ರ, ವೈಶಾಖ, ಫಾಲ್ಗುಣ, ಆಷಾಢಗಳ ಪೌರ್ಣಮಾಸ್ಯೆಗಳೂ, ವೈಧೃತಿವ್ಯತೀಪಾತಗಳೂ, ರೇವತೀ ನಕ್ಷತ್ರವೂ, ಯುಗಾದಿಗಳೂ, ಮನ್ವಾದಿಗಳೂ, ಸೂರ್ಯಸಂಕ್ರಮಣಗಳೂ ಪಿತೃಮೃತದಿನಗಳೂ, ಅಷ್ಟಕಾದಿನಗಳೂ ಉತ್ತಮವಾದವುಗಳೆಂದು ಕೆಲವೆಡೆಗಳಲ್ಲಿ ಹೇಳಿದೆ. ಶಾಖಾಭೇದಗಳಿಂದ ಬಗೆಬಗೆಯಾದ ವಿಸ್ತಾರವುಳ್ಳ ವೃಷೋತ್ಸರ್ಗ ಪ್ರಯೋಗವನ್ನು ಕೌಸ್ತುಭದಲ್ಲಿ ತಿಳಿಯಬಹುದು.

—* ಕಾಲಾಷ್ಟಮಿಯು *—

ಕಾಲಾಷ್ಟಮೀ:- ಕಾರ್ತಿಕ ಕೃಷ್ಣಾಷ್ಟಮಿಯು ಕಾಲಾಷ್ಟಮಿಯೆಂದು ಪ್ರಸಿದ್ಧವಾಗಿದೆ. ಪೌರ್ಣಮಿಯೇ ಕೊನೆಯಾದಂತೆ ಮಾಸವನ್ನು ಭಾವಿಸುವ ಪಕ್ಷದಲ್ಲಿ- ಮಾರ್ಗಶೀರ್ಷ ಕೃಷ್ಣಾಷ್ಟಮಿಯೆನಿಸಿಕೊ

ಳ್ಳುವುದು. ಮಧ್ಯಾಹ್ನ ವ್ಯಾಪ್ತಿಯುಳ್ಳ ಅಷ್ಟಮಿಯನ್ನು ಇದಕ್ಕೆ ಗ್ರಹಿಸಬೇಕು. ಎರಡು ದಿನಗಳಲ್ಲಿ ಮಧ್ಯಾಹ್ನವ್ಯಾಪ್ತಿ ಇದ್ದರೆ ಪೂರ್ವದಿನವನ್ನೇ ಗ್ರಹಿಸಬೇಕೆಂದು ಸಿಂಧುಕಾರನು. ಪ್ರದೋಷವ್ಯಾಪ್ತಿಯುಳ್ಳದ್ದಾಗಬೇಕೆಂದು ಕೌಸ್ತುಭದಲ್ಲಿ ಹೇಳಿದೆ. ಎರಡು ದಿನಗಳಗೂ ಪ್ರದೋಷವ್ಯಾಪ್ತಿ ಇದ್ದರೂ, ಪ್ರದೋಷದ ಒಂದು ಭಾಗಕ್ಕೆ ವ್ಯಾಪ್ತಿ ಇದ್ದರೂ, ಎರಡನೆಯ ತಿಥಿಯನ್ನು ಗ್ರಹಿಸಬೇಕು. ಪೂರ್ವದಿನದಲ್ಲಿ ಪ್ರದೋಷವ್ಯಾಪ್ತಿ ಮಾತ್ರವೂ, ಎರಡನೆಯ ದಿನದಲ್ಲಿ ಮಧ್ಯಾಹ್ನವ್ಯಾಪ್ತಿ ಮಾತ್ರವೂ ಇರುವಾಗ ಶಿಷ್ಟಾಚಾರ ಪ್ರಕಾರವಾಗಿ ಪ್ರದೋಷವ್ಯಾಪ್ತಿಯನ್ನನುಸರಿಸಿಯೇ ನಿರ್ಣಯವಲ್ಲದೆ ಮಧ್ಯಾಹ್ನ ವ್ಯಾಪ್ತಿಯನ್ನನುಸರಿಸಬೇಕಾದದ್ದಿಲ್ಲವೆಂದು ತೋರುವುದು. ಇಲ್ಲಿ ಕಾಲಭೈರವ ಪೂಜೆಯನ್ನು ಮಾಡಿ ಮೂರು ಅರ್ಘ್ಯಗಳನ್ನು ಕೊಡಬೇಕು. ಉಪವಾಸವನ್ನೂ ಜಾಗರಣೆಯನ್ನೂ ಮಾಡಬೇಕು. ಇಂತು ಕಾರ್ತಿಕಮಾಸ ನಿರ್ಣಯೋದ್ದೇಶವು,

---*೧೧ ಮಾರ್ಗಶೀರ್ಷಮಾಸವು*---

೧೧ ಮಾರ್ಗಶೀರ್ಷಮಾಸವು:-ಧನುಸ್ಸಂಕ್ರಮಣದಲ್ಲಿಸಂಕ್ರಮಣಾನಂತರದ ೧೬ ಗಳಿಗೆಗಳು ಪುಣ್ಯಕಾಲವು. ಉಳಿದದ್ದನ್ನು ಹಿಂದೆಯೇ ಹೇಳಿದೆ, ಮಾರ್ಗಶೀರ್ಷ ಶುಕ್ಲಪಂಚಮಿಯಲ್ಲಿ ದಕ್ಷಿಣ ದೇಶದವರು ನಾಗಪೂಜೆಯನ್ನು ಮಾಡುವ ಪದ್ಧತಿಯುಂಟು. ಷಷ್ಠಿಯುಕ್ತವಾದದ್ದನ್ನೇ ಗ್ರಹಿಸಬೇಕೆಂಬುದೇ ಮೊದಲಾದ ವಿಷಯಗಳನ್ನು ಪ್ರಥಮ ಪರಿಚ್ಛೇದದಲ್ಲಿ ಹೇಳಿದೆ. ಮಾರ್ಗಶೀರ್ಷಶುದ್ಧ ಷಷ್ಠಿಯು 'ಚಂಪಾಷಷ್ಠಿ, ಎಂದು ಮಹಾರಾಷ್ಟ್ರ ದೇಶಗಳಲ್ಲಿ ಪ್ರಸಿದ್ಧವಾಗಿದೆ, ಇಲ್ಲಿ ಎರಡು ದಿನಗಳಲ್ಲಿ ತಿಥಿವ್ಯಾಪ್ತಿ ಇದ್ದರೆ ಯಾವ ದಿನದಲ್ಲಿ, ಭಾನುವಾರ, ಭೌಮವಾರ, ಶತಭಿಷೆ, ವೈಧೃತಿ, ಇವುಗಳೊಳಗೆ ಹೆಚ್ಚು ಸಂಖ್ಯೆಗಳುಳ್ಳ ಯೋಗವಿರುವುದೋ ಅಂತಹ ತಿಥಿಯು ಮೊದಲನೆಯದಾದರೂ ಎರಡನೆಯದಾದರೂ ಮೂರು ಮುಹೂರ್ತಕಾಲವಿದ್ದಾಗ್ಯೂ ಅದನ್ನು ಗ್ರಹಿಸಬೇಕು. ಎರಡು ದಿನಗಳಲ್ಲಿಯೂ ಯೋಗವಿಲ್ಲದಿದ್ದರೆ ಮೂರು ಮುಹೂರ್ತವಿರುವ ಎರಡನೆಯ ತಿಥಿಯನ್ನೇ ಗ್ರಹಿಸಬೇಕು. ಸ್ಕಂದ ಷಷ್ಠಿಯೂ ಇದೇ. ಮೊದಲನೆಯದನ್ನು ಗ್ರಹಿಸಬೇಕು. ಸಪ್ತಮಿಯಲ್ಲಿ ಸೂರ್ಯವ್ರತವನ್ನು

ಮಾಡಬೇಕು. ಇದರ ವಿಧಿಯು ಕೌಸ್ತುಭದಲ್ಲಿದೆ, ಮೃಗಶೀರ್ಷಾನಕ್ಷತ್ರವುಳ್ಳ ಪೌರ್ಣಿಮೆಯಲ್ಲಿ ಲವಣದಾನ ಮಾಡಿದರೆ ಸೊಗಸಾದ ರೂಪವು ಬರುವುದು. ಮಾರ್ಗಶೀರ್ಷಪೌರ್ಣಮಾಸ್ಯೆಯಲ್ಲಿ ದತ್ತಾತ್ರೆಯೋತ್ಪತ್ತಿಯು. ಇದಕ್ಕೆ ಪ್ರದೋಷವ್ಯಾಪ್ತಿ ಇರಬೇಕು. ಮಾರ್ಗಶೀರ್ಷ ಶುದ್ಧ ಚತುರ್ದಶಿ ಅಥವಾ ಪೌರ್ಣಿಮೆಯಲ್ಲಿ ಪ್ರದೋಷ ಕಾಲದಲ್ಲಿ ಆಶ್ವಲಾಯನರು-'ಪ್ರತ್ಯವರೋಹಣ, ವೆಂಬ ಕರ್ಮವನ್ನು ಮಾಡಬೇಕು. ಕರ್ತೃಕಾಲವ್ಯಾಪ್ತಿಯುಳ್ಳ ತಿಥಿಯನ್ನು ಇದಕ್ಕೆ ಗ್ರಹಿಸಬೇಕು. ಈ ಪ್ರಯೋಗವು, ಪ್ರಯೋಗರತ್ನ ಕೌಸ್ತುಭಾದಿ ಗ್ರಂಥಗಳಲ್ಲಿದೆ.

— ಅಷ್ಟಕಾದಿಶ್ರಾದ್ಧಗಳು —

ಅಷ್ಟಕಾದಿಶ್ರಾದ್ಧಗಳು—ಮಾರ್ಗಶೀರ್ಷವೇ ಮೊದಲಾದ ನಾಲ್ಕು ಮಾಸಗಳ ಕೃಷ್ಣಾಷ್ಟಮಿಗಳಲ್ಲಿ ಅಷ್ಟಕಾ ಶ್ರಾದ್ಧಗಳನ್ನು ಮಾಡಬೇಕು. ಅವುಗಳ ಎರಡನೆಯ ದಿನದ ನವಮಿಗಳಲ್ಲಿ ಅನ್ವಷ್ಟಕ್ಯ ಶ್ರಾದ್ಧಗಳನ್ನು ಮಾಡಬೇಕು. ಅಷ್ಟಮಿಗಳ ಹಿಂದಿನ ಸಪ್ತಮಿಗಳಲ್ಲಿ 'ಪೂರ್ವೇದ್ಯು' (ಹಿಂದಣ ದಿನದಲ್ಲಿ ಮಾಡಬೇಕಾದದ್ದು.) ಶ್ರಾದ್ಧಗಳನ್ನು ಮಾಡಬೇಕು. ಹೀಗೆಯೇ ಭಾದ್ರಪದ ಕೃಷ್ಣಪಕ್ಷದಲ್ಲಿಯೂ 'ಅಷ್ಟಕಾನಿ ಶ್ರಾದ್ಧಾನಿ ಕರ್ತವ್ಯಾನಿ' ಅಷ್ಟಕಾಶ್ರಾದ್ಧಗಳನ್ನು ಮಾಡಬೇಕು, ಎಂಬಂತೆ ಪಂಚಾಷ್ಟಕಾ ಪಕ್ಷದಿಂದ ಆಶ್ವಲಾಯನ ಶಾಖೆಯುಳ್ಳದವರು ಮಾಡಬೇಕು. ಆಶ್ವಲಾಯನರು ಮಾತ್ರ ಮಾರ್ಗಶೀರ್ಷವೇ ಮೊದಲಾದ ನಾಲ್ಕು ಅಷ್ಟಕಾಪಕ್ಷವನ್ನೇ ಅವಲಂಬಿಸಬೇಕು. ಭಾದ್ರಪದ ಕೃಷ್ಣಾಷ್ಟಮಿಯಲ್ಲಿ 'ಮಾಘ್ಯಾವರ್ಷ ಶ್ರಾದ್ಧವನ್ನು ಮಾಡುವೆನು, ಎಂದು ಸಂಕಲ್ಪಮಾಡಿ'ಎಲ್ಲವನ್ನೂ ಅಷ್ಟಕಾ ಶ್ರಾದ್ಧದಂತೆಯೇ ಮಾಡಬೇಕು. ಸಪ್ತಮಿಯಲ್ಲಿ ಮಾಘ್ಯಾವರ್ಷ ಶ್ರಾದ್ಧವನ್ನು ಮಾಡುವುದಕ್ಕೆ ಪೂರ್ವೇದ್ಯುಃ ಶ್ರಾದ್ಧವನ್ನು ಮಾಡುತ್ತೇನೆಂದು ಸಂಕಲ್ಪವು. ನವಮಿಯಲ್ಲಿ ಅನ್ವಷ್ಟಕಾ ಶ್ರಾದ್ಧವನ್ನು ಮಾಡುತ್ತೇನೆಂದು ಸಂಕಲ್ಪವು. ಭಾದ್ರಪದ ಕೃಷ್ಣಾಷ್ಟಮಿ ಶ್ರಾದ್ಧಕ್ಕೆ 'ಮಾಘ್ಯಾವರ್ಷ' ವೆಂಬ ಸಂಜ್ಞೆ ಇರುವುದರಿಂದ ಆಶ್ವಲಾಯನರಿಗೆ ಚತುರಷ್ಟಕಾಪಕ್ಷವು, ಇತರ ಶಾಖೆಯವರಿಗೆ ಪೌಷ ಮೊದಲಾದ ತ್ರ್ಯಷ್ಟಕಾಪಕ್ಷವೂ ಉಂಟು. ಹೀಗೆ ಎಲ್ಲಾ ಅಷ್ಟಕಗಳನ್ನು ಮಾಡುವುದಕ್ಕೆ

ಶಕ್ತಿ ಇಲ್ಲದವರು ಒಂದು ಅಷ್ಟಕವನ್ನು ಮಾಡಬೇಕು. ಅದನ್ನು ಮಾಘಪೌರ್ಣಿಮಾಸ್ಯಾನಂತರದ ಸಪ್ತಮಿ, ಅಷ್ಟಮಿ, ನವಮಿ ಈ ಮೂರು ದಿನಗಳಲ್ಲಿ ಮಾಡಬೇಕು. ಮೂರು ದಿನಗಳಲ್ಲಿ ಮೂರು ಶ್ರಾದ್ಧಗಳನ್ನು ಮಾಡುವುದಕ್ಕೆ ಶಕ್ತಿ ಇಲ್ಲದವರು ಮಾಘ ಕೃಷ್ಣಾಷ್ಟಮೀ ಶ್ರಾದ್ಧವನ್ನೇ ಮಾಡಬಹುದು. ಅಷ್ಟಕಾಶ್ರಾದ್ಧಕ್ಕೆ ಅಪರಾಹ್ಣವ್ಯಾಪ್ತಿಯುಳ್ಳ ಅಷ್ಟಮಿಯನ್ನು ಗ್ರಹಿಸಬೇಕು. ಎರಡು ದಿನಗಳಲ್ಲಿ ವ್ಯಾಪ್ತಿ ಇದ್ದರೂ ಅಥವಾ ಇಲ್ಲದಿದ್ದರೂ ದರ್ಶದಂತೆಯೇ ನಿರ್ಣಯವು ಅಷ್ಟಮಿಯನ್ನನುಸರಿಸಿ ಪೂರ್ವದಿನದಲ್ಲಿ ಪೂರ್ವೇದ್ಯುಃ ಶ್ರಾದ್ಧವನ್ನೂ ಪರದಿನದಲ್ಲಿ ಅನ್ವಷ್ಟಕ್ಯ ಶ್ರಾದ್ಧವನ್ನೂ ಮಾಡಬೇಕು. ಸಪ್ತಮ್ಯಾದಿ ತಿಥಿಗಳಿಗೆ ಅಪರಾಹ್ಣವ್ಯಾಪ್ತಿ ಇರಬೇಕಾದದ್ದಿಲ್ಲ. ಒಂದುದಿನವು ಶ್ರಾದ್ಧಮಾಡುವದಕ್ಕೆ ಶಕ್ತಿ ಇಲ್ಲದವರು ಪ್ರತ್ಯಾಮ್ನಾಯವಾಗಿ (ಬದಲು) ಎತ್ತಿಗೆ ಹುಲ್ಲನ್ನು ಕೊಡುವದು, ಕಂಕುಳಿಗೆ ಬರೆಯನ್ನು ಹಾಕಿಕೊಳ್ಳುವುದು, ಶ್ರೋತ್ರಿಯರ ಮನೆಗೆ ಉದಕುಂಭವನ್ನು ಹಾಕುವುದು. ಶ್ರಾದ್ಧ ಮಂತ್ರಗಳನ್ನು ಹೇಳಿಕೊಳ್ಳುವುದು, ಇವುಗಳಲ್ಲೊಂದನ್ನು ಮಾಡಬಹುದು, ಉಪವಾಸವನ್ನೂ ಮಾಡಬಹುದೆಂದು ಕೆಲವು ಕಡೆಯಲ್ಲಿ ಹೇಳಿದೆ. ಹೀಗೆ ಶ್ರವಣಾಕರ್ಮ ಮೊದಲಾದ ಪಾಕ ಯಜ್ಞಗಳು ಲೋಪವಾದರೆ ಪ್ರತಿ ಪಾಕಯಜ್ಞಕ್ಕೂ ಪ್ರಾಜಾಪತ್ಯ ಕೃಚ್ಛ್ರವನ್ನು ಪ್ರಾಯಶ್ಚಿತ್ತವಾಗಿ ಹೇಳಿದೆ. ಮಲಮಾಸದಲ್ಲಿ ಅಷ್ಟಕಾಶ್ರಾದ್ಧಗಳನ್ನು ಮಾಡಕೂಡದೆಂದು ನಾರಾಯಣ ವೃತ್ತಿಯಲ್ಲಿ ಹೇಳಿದೆ. ಈ ಅಷ್ಟಕಾದಿ ಶ್ರಾದ್ಧತ್ರಯದ ಪ್ರಯೋಗವು ಕೌಸ್ತುಭ ಪ್ರಯೋಗರತ್ನಾದಿಗಳಲ್ಲಿದೆ. ಈ ಅಷ್ಟಮೀ ಶ್ರಾದ್ಧದಲ್ಲಿ ಕಾಮ ಕಾಲ, ಸಂಜ್ಞಕ ವಿಶ್ವೇದೇವತೆಗಳು ಸಪ್ತಮಿನವಮಿಗಳಲ್ಲಿಪುರೂರವಾರ್ದ್ರವರು ಆಹಿತಾಗ್ನಿಯು ಪೂರ್ವೇದ್ಯುಃಶ್ರಾದ್ಧಾಂಗ ಹೋಮವನ್ನೂ, ಅಷ್ಟಕಾಂಗ ಹೋಮವನ್ನೂ ಅನ್ವಷ್ಟಕಾಗ್ನೌಕರಣಹೋಮವನ್ನೂ ಮೂರುದಿನಗಳಲ್ಲಿಯೂ, ಹವಿಃಶ್ರವಣ (ಅನ್ನವನ್ನು ಕುದಿಸುವುದು) ವನ್ನೂ, ದಕ್ಷಿಣಾಗ್ನಿಯಲ್ಲಿ ಮಾಡಬೇಕು. ಉಳಿದದ್ದು ಅನಾಹಿತಾಗ್ನಿಯಂತೆಯೇ. ಅಷ್ಟಕಾಲೋಪವಾದರೆ ಪ್ರಾಜಾಪತ್ಯ ಕೃಚ್ಛ್ರವಾಗಲಿ, ಉಪವಾಸವಾಗಲಿ ಪ್ರಾಯಶ್ಚಿತ್ತವು. ಅನ್ವಷ್ಟಕ್ಯ ಲೋಪವಾದರ ಆದಿನದಲ್ಲಿ ನೂರುಸಾರಿ

" ಏಭಿರ್ದ್ಯುಭಿಃಸುಮನಾಃ " ಎಂಬ ಮಂತ್ರವನ್ನು ಜಪಿಸಬೇಕು.

— ಭಾನುವಾರಗಳಲ್ಲಿ ಸೌರವ್ರತವು —

ಭಾನುವಾರಗಳಲ್ಲಿ ಸೌರವ್ರತವು:—ಮಾರ್ಗಶೀರ್ಷ ಮೊದಲಾದ ಮಾಸಗಳ ಭಾನುವಾರಗಳಲ್ಲಿ ಸೌರವ್ರತವನ್ನು ಮಾಡಬೇಕು. ಈ ವ್ರತ ದಿನದಲ್ಲಿ ಭಕ್ಷಣೆಮಾಡಬೇಕಾದದ್ದು—ಮಾರ್ಗಶೀರ್ಷದಲ್ಲಿ ಮೂರು ತುಲಸೀದಳಗಳು, ಪುಷ್ಯದಲ್ಲಿ ಮೂರು ಪಲತೂಕ ತುಪ್ಪ, ಮಾಘದಲ್ಲಿ ಮೂರು ಹಿಡಿ ಎಳ್ಳು, ಫಾಲ್ಗುನದಲ್ಲಿ ಮೂರು ಪಲ ಮೊಸರು, ಚೈತ್ರದಲ್ಲಿ ಮೂರು ಪಲ ಹಾಲು, ವೈಶಾಖದಲ್ಲಿ ಗೋಮಯವು, ಜ್ಯೇಷ್ಠದಲ್ಲಿ ಮೂರು ಬೊಗಸೆ ನೀರು, ಆಷಾಢದಲ್ಲಿ ಮೂರು ಮೆಣಸು, ಶ್ರಾವಣದಲ್ಲಿ ಮೂರು ಪಲ ಸಕ್ತು (ಅಕ್ಕಿಯಹಿಟ್ಟು) ಭಾದ್ರಪದದಲ್ಲಿ ಗೋಮೂತ್ರವು ಆಶ್ವಯುಜದಲ್ಲಿ ಸಕ್ಕರೆ, ಕಾರ್ತಿಕದಲ್ಲಿ ಬಳ್ಳಿಯ ಹವಿಸ್ಸು. ಇವುಗಳನ್ನು ಆಹಾರಮಾಡಿ ಉಪವಾಸಮಾಡಬೇಕು. ಇಂತು ಮಾರ್ಗಶೀರ್ಷಮಾಸ ಕೃತ್ಯನಿರ್ಣಯೋದ್ದೇಶವು,

—(೧೨) ಪೌಷಮಾಸವು.—

(೧೨) ಪುಷ್ಯಮಾಸವು- ಹಗಲು ಮಕರ ಸಂಕ್ರಮಣವಾದರೆ ಸಂಕ್ರಾಂತ್ಯನಂತರದಲ್ಲಿ ೪೦ ಘಳಗೆಗಳವರಗೆ ಪುಣ್ಯಕಾಲವು. ಬಿಂದುಗಳಿಗೆ ಮೊದಲಾದ ಸ್ವಲ್ಪಕಾಲ ಮಾತ್ರವೇ ಉಳಿದಿರುವ ಹಗಲಿನಲ್ಲಿ ಸಂಕ್ರಮಣವಾದರೆ ರಾತ್ರಿಯಲ್ಲಿ ಶ್ರಾದ್ಧ, ದಾನ, ಮೊದಲಾದ್ದನ್ನು ಮಾಡಕೂಡದಾದ್ದರಿಂದಲೂ, ಸ್ವಲ್ಪಭಾಗದ ಹಗಲಿನಲ್ಲಿ, ಸ್ನಾನ, ಶ್ರಾದ್ಧ, ತನ್ಮಭೋಜನ ಮೊದಲಾದವುಗಳೆಲ್ಲವನ್ನೂ ಮಾಡುವುದಸಾಧ್ಯವಾದ್ದರಿಂದಲೂ, ರಾತ್ರಿಯಲ್ಲಿ ಭೋಜನಮಾಡಬಾರದಾದ್ದರಿಂದಲೂ, ಪುತ್ರವಂತನಾದ ಗೃಹಸ್ಥನು ಉಪವಾಸಮಾಡಬಾರದಾದ್ದರಿಂದಲೂ, ಹೇಗೂ ಅವಕಾಶವಿಲ್ಲವಾದ ಕಾರಣ, ಸಂಕ್ರಾಂತಿಯಾಗುವುದಕ್ಕೆ ಸ್ವಲ್ಪ ಮುಂಚೆ, ಹಗಲೇ ಸ್ನಾನ, ಶ್ರಾದ್ಧ, ದಾನ, ಭೋಜನ ಮುಂತಾದ್ದನ್ನು ಮಾಡಬೇಕು, ಆದ್ದರಿಂದ ಈ ವಿಷಯದಲ್ಲಿ ಸಂಕ್ರಾಂತ್ಯನಂತರ ಕಾಲವು ಪುಣ್ಯಕಾಲವೆಂಬುದನ್ನು ನಿಷೇಧಿಸಿ, ಪೂರ್ವಕಾಲಕ್ಕೆ ಪುಣ್ಯಕಾಲತ್ವವುಂಟಾಗುವುದೆಂದು ತಿಳಿಯಬೇಕು.

—ಮಕರಸಂಕ್ರಾಂತಿ ನಿರ್ಣಯವು—

ಮಕರಸಂಕ್ರಾಂತಿ ನಿರ್ಣಯವು- ರಾತ್ರಿಯಲ್ಲಿ ಮೊದಲಿನಲ್ಲಾಗಲಿ ಮಧ್ಯದಲ್ಲಾಗಲಿ, ಕೊನೆಯಲ್ಲಾಗಲಿ ಸಂಕ್ರಮಣವಾದರೆ ಎರಡನೆಯ ದಿನದಲ್ಲಿಯೇ ಪುಣ್ಯಕಾಲವು. ಅದರಲ್ಲಿಯೂ ಎರಡನೆಯ ದಿನದ ಮೊದಲ ಅರ್ಧವು ಬಹಳ ಪುಣ್ಯಕರವಾದದ್ದು. ಅದರಲ್ಲಿಯೂ ಸೂರ್ಯೋದಯಾನಂತರದಲ್ಲಿ ೫ ಘಳಿಗೆಗಳು ಅತ್ಯಂತ ಪುಣ್ಯಕರವಾದದ್ದು. ಹೀಗೆ ರಾತ್ರಿ ಸಂಕ್ರಾಂತಿ ವಿಷಯದಲ್ಲಿ ಪೂರ್ವದಿನದ ಉತ್ತರಭಾಗವು ಪುಣ್ಯಕಾಲವಾಗುವ ಎಲ್ಲಾ ಸಂದರ್ಭಗಳಲ್ಲಿಯೂ, ಹಗಲಿನ ಕೊನೆಯ ೫ ಗಳಿಗೆಗಳಿಗೆ ಪ್ರಾಶಸ್ತ್ಯವು. ಎಲ್ಲಿ ಎರಡನೆಯ ದಿನದ ಪೂರ್ವಾರ್ಧವು ಪುಣ್ಯಕಾಲವೋ ಅಲ್ಲಿ ಉದಯಾನಂತರದಲ್ಲಿ ೫ ಗಳಿಗೆಗಳು ಪುಣ್ಯತಮಗಳು. ಹಗಲು ಸಂಕ್ರಮಣದಲ್ಲಿಯೂ ಹೀಗೆಯೇ. 'ಯಾಃಯಾಃ ಸನ್ನಿಹಿತಾಃನಾಡ್ಯಸ್ತಾಸ್ತಾಃ ಪುಣ್ಯತಮಾಃ ಸ್ಮೃತಾಃ' ಸಂಕ್ರಮಣಕ್ಕೆ ಸಮೀಪವಾದಗಳಿಗೆಗಳೆಲ್ಲವೂ ಉತ್ತಮಗಳು ಎಂದು ಹೇಳಿರುವುದರಿಂದ ಮಕರಾದಿಗಳಿಗೆ ಅನಂತರದಲ್ಲಿಯೂ, ಕರ್ಕಾಟಕಾದಿಗಳಿಗೆ ಪೂರ್ವದಲ್ಲಿಯೂ ಇರುವ ಗಳಿಗೆಗಳು ಅತ್ಯುತ್ತಮವಾದವುಗಳು ಎಂದು ತಿಳಿಯಬೇಕು. ಸೂರ್ಯಾಸ್ತಾನಂತರದಲ್ಲಿ ಮೂರುಗಳಿಗೆಗಳು ಸಂಧ್ಯಾಕಾಲವು, ಆಗ ಮಕರ ಸಂಕ್ರಮಣವಾದರೆ ಪರದಿನದಲ್ಲಿ ಪುಣ್ಯಕಾಲವೆಂಬುದನ್ನು ಬಾಧಿಸಿ ಪೂರ್ವದಿನದಲ್ಲಿಯೇ ಪುಣ್ಯಕಾಲವಾಗುವುದು, ಎಂದು ಮುಹೂರ್ತಚಿಂತಾಮಣಿ, ಮೊದಲಾದ ಗ್ರಂಥಗಳಲ್ಲಿ ಹೇಳಿವೆ, ಎಲ್ಲಾ ಧರ್ಮಶಾಸ್ತ್ರಗ್ರಂಥಗಳಲ್ಲಿ ಈ ಅಂಶವನ್ನು ಹೇಳಿಲ್ಲ. 'ಶುಕ್ಲಪಕ್ಷೇತು ಸಪ್ತಮ್ಯಾಂ ಸಂಕ್ರಾಂತಿರ್ಗ್ರಹಣಾಧಿಕಾ ॥' ಶುಕ್ಲಪಕ್ಷದ ಸಪ್ತಮಿಯಲ್ಲಿ ಬರುವ ಸಂಕ್ರಮಣಗಳೆಲ್ಲವೂ ಗ್ರಹಣಕ್ಕಿಂತ ಹೆಚ್ಚಾದವುಗಳು, ಎಂದು ಶಾಸ್ತ್ರವಿದೆ.

— ಈ ಸಂಕ್ರಮಣದಲ್ಲಿನ ಕೃತ್ಯಗಳು —

ಇದರಲ್ಲಿ ಮಾಡಬೇಕಾದದ್ದು-'ರವಿಸಂಕ್ರಮಣೇ ಪ್ರಾಪ್ತೇ ನ ಸ್ನಾಯಾದ್ಯಸ್ತು ಮಾನವಃ। ಸಪ್ತಜನ್ಮನಿರೋಗೀ ಸ್ಯಾನ್ನಿರ್ಧನಶ್ಚೈವ ಜಾಯತೇ ॥೧॥' ಯಾವ ಮನುಷ್ಯನು ಸೂರ್ಯಸಂಕ್ರಮಣಗಳಲ್ಲಿ ಸ್ನಾನ ಮಾಡದಿರುವನೋ ಅವನು ಏಳು ಜನ್ಮಗಳಲ್ಲಿ ರೋಗಿಯೂ, ದರಿದ್ರನೂ

ಆಗುತ್ತಾನೆ. ॥೧॥ ಎಂಬ ವಚನದಂತೆ, ಮನುಷ್ಯ ಮಾತ್ರದವನು ಸಂಕ್ರಮಣ ಸ್ನಾನವನ್ನು ಮಾಡಿಯೇ ತೀರಬೇಕು. 'ಸಂಕ್ರಾಂತೌ ಯಾನಿ ದತ್ತಾನಿ ಹವ್ಯಕವ್ಯಾನಿ ದಾತೃಭಿಃ। ತಾನಿ ನಿತ್ಯಂ ದದಾತ್ಯರ್ಕಃ ಪುನರ್ಜನ್ಮನಿಜನ್ಮನಿ ॥ ೧ ॥' ಸಂಕ್ರಾಂತಿಯಲ್ಲಿ ಹವ್ಯರೂಪವಾಗಿಯೂ ಕವ್ಯರೂಪವಾಗಿಯೂ ಕೊಟ್ಟವಸ್ತುಗಳನ್ನು ಸೂರ್ಯನು ಪ್ರತಿಜನ್ಮದಲ್ಲಿಯೂ ಯಥೇಚ್ಛವಾಗಿ ಕೊಡುವನು ॥೧॥ ಎಂದಿರುವುದರಿಂದ ಶ್ರಾದ್ಧಾಧಿಕಾರಿಯು ಪಿಂಡರಹಿತವಾದ ಶ್ರಾದ್ಧವನ್ನು ನಿತ್ಯವಾಗಿ ಮಾಡಬೇಕು. ಅಯನ ಸಂಕ್ರಮಣದಲ್ಲಿ ಮೂರು ದಿನಗಳಲ್ಲಿ ಉಪವಾಸಮಾಡಬೇಕು. ಅಥವಾ ಸಂಕ್ರಮಣವಾದ ಹಗಲು ರಾತ್ರಿಗಳಲ್ಲಾಗಲಿ, ಪುಣ್ಯಕಾಲವಾದ ಅಹೋರಾತ್ರಿಗಳಲ್ಲಾಗಲಿ ಉಪವಾಸಮಾಡಿ, ಉಕ್ತವಾದ ಪುಣ್ಯಕಾಲದಲ್ಲಿ ಸ್ನಾನದಾನಾದಿಗಳನ್ನು ಮಾಡಬೇಕು. ಪುತ್ರವಂತನಾದ ಗೃಹಸ್ಥನು ಈ ಉಪವಾಸವನ್ನು ಮಾಡಕೂಡದು. 'ಧೇನುಂ ತಿಲಮಯೀಂ ರಾಜನ್ ದದ್ಯಾಚ್ಚೈವೋತ್ತರಾಯಣೇ। ತಿಲತೈಲೇನ ದೀಪಾಶ್ಚ ದೇಯಾಃ ಶಿವಗೃಹೇ ಶುಭಾಃ ॥೧॥ ಸತಿಲೈಸ್ತಂಡುಲೈಶ್ಚೈವ ಪೂಜಯೇದ್ವಿಧಿವಚ್ಛಿವಂ। ತಸ್ಯಾಂ ಕೃಷ್ಣತಿಲೈಃ ಸ್ನಾನಂ ಕಾರ್ಯಂ ಚೋದ್ವರ್ತನಂ ತಿಲೈಃ॥೨॥ ತಿಲಾ ದೇಯಾಶ್ಚ ಹೋತವ್ಯಾ ಭಕ್ಷ್ಯಾಶ್ಚೈವೋತ್ತರಾಯಣೇ॥' ಎಳ್ಳಿನಿಂದ ಮಾಡಿದ ಗೋವನ್ನು ಉತ್ತರಾಯಣದಲ್ಲಿ ದಾನಮಾಡಬೇಕು. ಶಿವ ದೇವಸ್ಥಾನದಲ್ಲಿ ಎಳ್ಳೆಣ್ಣೆಯಿಂದ ದೀಪಗಳನ್ನು ಉರಿಸಬೇಕು ॥೧॥ ಎಳ್ಳನ್ನೂ ಅಕ್ಕಿಯನ್ನೂ ಬೆರಸಿ ವಿಧಿವತ್ತಾಗಿ ಈಶ್ವರನನ್ನು ಪೂಜಿಸಬೇಕು, ಕರೀಎಳ್ಳನ್ನರೆದು ತಲೆಗೆ ತಿಕ್ಕಿಕೊಂಡು ಮೈಗೂ ಉಜ್ಜಿಕೊಂಡು ಸ್ನಾನಮಾಡಬೇಕು ॥೨॥ ಎಳ್ಳನ್ನು ದಾನಮಾಡಬೇಕು. ಹೋಮ ಮಾಡಬೇಕು, ಮತ್ತು ತಿನ್ನಬೇಕು ॥ ಬಿಳಿಯ ಎಳ್ಳಿನಿಂದ ದೇವತೆಗಳನ್ನೂ, ಕರಿಯ ಎಳ್ಳಿನಿಂದ ಪಿತೃಗಳನ್ನೂ ತೃಪ್ತಿಪಡಿಸಬೇಕು ಈ ದಿನದಲ್ಲಿ ಪರಮೇಶ್ವರನಿಗೆ ಘೃತಾಭಿಷೇಕವನ್ನು ಮಾಡಿದರೆ ಬಹು ಪುಣ್ಯವುಂಟು. ತಾಮ್ರ ಪಾತ್ರೆಯಲ್ಲಿ ಎಳ್ಳನ್ನು ತುಂಬಿ ದಕ್ಷಿಣೆಯೊಡನೆ ದಾನಮಾಡಬೇಕು. ಅದರ ವಿಧಿಯನ್ನು ಮುಂದೆ ಹೇಳುತ್ತೇವೆ, ಶಿವಪೂಜಾವ್ರತವು ಪೂರ್ವದಿನದಲ್ಲಿ ಉಪವಾಸಮಾಡಿ, ಸಂಕ್ರಮಣ ದಿನದಲ್ಲಿ, ಎಳ್ಳನ್ನು ಸವರಿ, ಉಜ್ಜಿ

ಕೊಂಡು ಸ್ನಾನಮಾಡಿ ತಿಲತರ್ಪಣವನ್ನು ಮಾಡಿ, ಈಶ್ವರನನ್ನು ಹಸುವಿನ ತುಪ್ಪದಲ್ಲಿ ತಿಕ್ಕಿ ಶುದ್ಧೋದಕದಲ್ಲಿ ತೊಳೆದು, ವಸ್ತ್ರಾದಿಗಳಿಂದ ಪೂಜಿಸಿ, ಸುವರ್ಣ, ವಜ್ರ, ನೀಲ, ಪದ್ಮರಾಗ, ಮುತ್ತು, ಈ ಪಂಚರತ್ನವನ್ನೂ, ಕರ್ಷಪ್ರಮಾಣ ಸುವರ್ಣವನ್ನಾಗಲಿ ಸಮರ್ಪಿಸಿ, ಸುವರ್ಣದೊಡನೆ ತಿಲದೀಪಗಳನ್ನಿಟ್ಟು, ತಿಲಾಕ್ಷತೆಗಳಿಂದ ಪೂಜೆಮಾಡಿ, ತುಪ್ಪವನ್ನೂ, ಕಂಬಳಿಯನ್ನೂ, ಅರ್ಪಿಸಿ, ಮೇಲ್ಕಟ್ಟನ್ನೂ, ಚಾಮರಗಳನ್ನೂ ಸಮರ್ಪಣೆಮಾಡಿ, ಬ್ರಾಹ್ಮಣರಿಗೆ ಎಳ್ಳನ್ನು ದಕ್ಷಿಣೆಯೊಡನೆ ಕೊಟ್ಟು, ಎಳ್ಳಿನಿಂದ ಹೋಮಮಾಡಿ, ಬ್ರಾಹ್ಮಣರಿಗೂ, ಯತಿಗಳಿಗೂ ಭೋಜನ ಮಾಡಿಸಿ, ದಕ್ಷಿಣೆಯನ್ನು ಕೊಟ್ಟು, ಎಳ್ಳಿನೊಡನೆ ಪಂಚಗವ್ಯವನ್ನು ಕುಡಿದು ಪಾರಣೆಯನ್ನು ಮಾಡಬೇಕು. ಇಲ್ಲಿ ವಸ್ತ್ರದಾನವು ಮಹಾ ಫಲಪ್ರದವಾದದ್ದು, 'ತಿಲಪೂರ್ವಮನಡ್ವಾಹಂ ದತ್ವಾ ರೋಗೈಃ ಪ್ರಮುಚ್ಯತೇ, ಎಳ್ಳಿನೊಡನೆ ಎತ್ತನ್ನು ದಾನಮಾಡಿದರೆ ರೋಗವು ನಿವಾರಣೆಯಾಗುವುದು. ಹಾಲಿನಿಂದ ಸೂರ್ಯನಿಗೆ ಅಭಿಷೇಕಮಾಡಿದರೆ ಸೂರ್ಯಲೋಕಪ್ರಾಪ್ತಿಯಾಗುವುದು. ವಿಷುವಾಯನ ಸಂಕ್ರಮಣವು ಹಗಲಿನಲ್ಲಾದರೆ ಆ ದಿನದಲ್ಲಿಯೂ, ಹಿಂದಣರಾತ್ರಿಯಲ್ಲಿಯೂ ಮುಂದಿನ ರಾತ್ರಿಯಲ್ಲಿಯೂ ಅನಧ್ಯಾಯವು. ರಾತ್ರಿಯಲ್ಲಿ ಸಂಕ್ರಮಣವಾದರೆ ಆ ರಾತ್ರಿಯಲ್ಲಿಯೂ, ಪೂರ್ವದಿನದಲ್ಲಿಯೂ (ಹಗಲು) ಮುಂದಿನ ದಿನದಲ್ಲಿಯೂ (ಪಕ್ಷಿಣಿ) ಅನಧ್ಯಾಯವು. ರಾತ್ರಿಯಲ್ಲಿ ಸಂಕ್ರಮಣವಾದರೆ ಗ್ರಹಣದಂತೆಯೇ ರಾತ್ರಿಯಲ್ಲಿಯೇ ಸ್ನಾನದಾನಾದಿಗಳನ್ನು ಮಾಡಬೇಕೆಂಬ ಪಕ್ಷವನ್ನು ಕೆಲವರು ಅನುಮೋದಿಸಿ ಬರೆದಿರುವರು. ಅದು ಶಿಷ್ಟರಿಗೆ ಸಮ್ಮತವಲ್ಲ. ಅಯನದಿನವೂ ಅದರ ಪರದಿನವೂ 'ಕರಿ' ಎಂಬ ಹೆಸರುಳ್ಳದ್ದು. ಆ ಕಾಲದಲ್ಲಿ ಶುಭ ಕರ್ಮಗಳನ್ನು ಮಾಡಕೂಡದು ಎಂದು ಹೇಳಿದೆ. ಆದರೆ ಅರ್ಧರಾತ್ರಿಗೆ ಪೂರ್ವದಲ್ಲಿ ಅಯನ ಸಂಕ್ರಮಣವಾದರೆ ಆ ದಿನವನ್ನೂ, ಅದರ ಪರದಿನವನ್ನೂ ಬಿಡಬೇಕು. ನಿಶೀಥದಲ್ಲಾಗಲಿ, ನಿಶೀಥಾನಂತರದಲ್ಲಾಗಲಿ ಸಂಕ್ರಮಣವಾದರೆ ಪರದಿನವನ್ನೂಅದರ ಪರದಿನವನ್ನೂ ಶುಭಕರ್ಮಗಳಲ್ಲಿ ಬಿಡಬೇಕೆಂದು ತೋರುವುದು. ಗ್ರಹಣದಲ್ಲಿಯೂ ಹೀಗೆಯೇ ಊಹಿಸತಕ್ಕದ್ದು. ಪುಷ್ಯಶುಕ್ಲಾಷ್ಟಮಿಯು ಬುಧವಾರವಾದರೆ ಸ್ನಾನ, ಜಪ,

ಹೋಮ, ತರ್ಪಣ, ಬ್ರಾಹ್ಮಣ ಭೋಜನ ಇವುಗಳನ್ನು ಮಾಡಬೇಕು. ಈ ದಿನದಲ್ಲಿ ಭರಣೀ ನಕ್ಷತ್ರವಾದರೆ ಮಹಾಪುಣ್ಯವೆಂದು ಕೆಲವರು, ರೋಹಿಣಿ, ಆರ್ದ್ರಾನಕ್ಷತ್ರಯೋಗ ಬಂದರೆ ಪುಣ್ಯಕರವೆಂದು ಉಳಿದವರು, ಪುಷ್ಯಶುದ್ಧೈಕಾದಶಿಯು ಮನ್ವಾದಿಯು. ಇದರ ನಿರ್ಣಯವು ಹಿಂದೆ ಹೇಳಿದೆ.

## — ಮಾಘಸ್ನಾನವು. —

ಮಾಘಸ್ನಾನವು—ಪುಷ್ಯಶುದ್ಧ ಏಕಾದಶಿ, ಪೂರ್ಣಿಮಾ, ಅಥವಾ ಅಮಾವಾಸ್ಯೆಯಲ್ಲಿ ಮಾಘಸ್ನಾನಕ್ಕೆ ಆರಂಭಿಸಬೇಕು. (ಶುಕ್ಲಪಕ್ಷದಲ್ಲಿಯೇ ಪ್ರಾರಂಭಮಾಡಬೇಕೆಂಬುದು ಚಾಂದ್ರಮಾನವನ್ನು ಮುಖ್ಯವೆಂದು ಹೇಳುವುದಕ್ಕಾಗಿ, ಈ ಪಕ್ಷವು ಈಗ ಆಚರಣೆಯಲ್ಲಿಲ್ಲವೆಂದು ನಿರ್ಣಯಸಿಂಧುವಿನಲ್ಲಿ ಹೇಳಿದೆ.) ಮಾಘದ ದ್ವಾದಶಿ, ಪೂರ್ಣಿಮೆ, ಇವುಗಳಲ್ಲಿ ಪೂರಯಿಸಬೇಕು. ಅಥವಾ ಮಕರ ಸಂಕ್ರಮಣ ಮೊದಲ್ಗೊಂಡು ಕುಂಭ ಸಂಕ್ರಮಣದವರೆಗೆ ಸ್ನಾನಮಾಡಬೇಕು. 'ಉತ್ತಮಂತು ಸನಕ್ಷತ್ರಂ ಲುಪ್ತತಾರಂ ಚ ಮಧ್ಯಮಂ। ಸವಿತರ್ಯುದಿತೇಭೂಪ ತತೋಹೀನಂ ಪ್ರಕೀರ್ತಿತಂ ॥ ೧ ॥ ಮಾಘಮಾಸೇರಟಂತ್ಯಾಪಃ ಕಿಂಚಿದಭ್ಯುದಿತೇರವೌ। ಬ್ರಹ್ಮಘ್ನಂವಾ ಸುರಾಪಂವಾ ಕಂಪತಂತಂ ಪುನೀಮಹೇ॥ ೨ ॥' ನಕ್ಷತ್ರಗಳು ಕಾಣುವ ಕಾಲವು ಉತ್ತಮವಾದದ್ದು. ನಕ್ಷತ್ರಗಳು ಕಾಣಬರದಿದ್ದರೆ ಮಧ್ಯಮಕಾಲವು. ಸೂರ್ಯೋದಯವಾದಮೇಲೆ ಅಧಮಕಾಲವು ॥ ೧ ॥ ಮಾಘಮಾಸದಲ್ಲಿ ಸೂರ್ಯೋದಯವಾಗುತ್ತಿರುವಾಗ ಉದಕಗಳು ತಮ್ಮಲ್ಲಿ ತಾವು ' ಬ್ರಹ್ಮಹತ್ಯೆ ಮಾಡಿದವನನ್ನು ಅಥವಾ ಸುರಾಪಾನ ಮಾಡಿದವನನ್ನು ನಮ್ಮಲ್ಲಿ ಮುಳುಗದ ಮತ್ತೆಯಾರನ್ನು ಪರಿಶುದ್ಧನನ್ನಾಗಿ ಮಾಡೋಣ' ಎಂದು ಹೇಳಿಕೊಳ್ಳುತ್ತಿರುವವು ॥೨॥ ಎಂದು ವಚನವಿರುವುದರಿಂದ ಸ್ನಾನಕ್ಕೆ ಅರುಣೋದಯ ಮೊದಲ್ಗೊಂಡು ಪ್ರಾತಃಕಾಲದವರೆಗೂ ಅವಧಿಯುಂಟು. 'ಬ್ರಹ್ಮಚಾರೀ ಗೃಹಸ್ಥೋವಾ ವಾನಪ್ರಸ್ಥೋಥ ಭಿಕ್ಷುಕಃ। ಬಾಲವೃದ್ಧ ಯುವಾನಶ್ಚ ನರನಾರೀ ನಪುಂಸಕಾಃ॥ ॥೧॥' ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ, ಸನ್ಯಾಸಿಗಳೆಂಬ ನಾಲ್ಕು ಆಶ್ರಮದವರೂ, ಹುಡುಗರೂ, ಯೌವನಸ್ಥರೂ, ಮುದುಕರೂ, ಗಂಡಸ

ರೂ, ಹೆಂಗಸರೂ, ನಪುಂಸಕರೂ ಎಲ್ಲರೂ ಸ್ನಾನವನ್ನು ಮಾಡಬಹುದು 'ತಪ್ತೇನ ವಾರಿಣಾ ಸ್ನಾನಂ ಯದ್ಗೃಹೇ ಕ್ರಿಯತೇ ನರೈಃ । ಷಡಬ್ದಫಲದಂತದ್ಧಿ ಮಕರಸ್ಥೇ ದಿವಾಕರೇ ॥ ೧ ॥ ಸೂರ್ಯನು ಮಕರರಾಶಿಯಲ್ಲಿರುವಾಗ ಮನೆಯಲ್ಲಿ ಬಿಸನೀರಿನಲ್ಲಿ ಸ್ನಾನವನ್ನು ಮಾಡಿದರೆ ಆರು ವರ್ಷಗಳು ಸ್ನಾನ ಮಾಡಿದ ಫಲವುಂಟಾಗುವುದು ॥ ೧ ॥ ಬಾವಿ ಮೊದಲಾದವುಗಳ ಸ್ನಾನವು ೧೨ ವರ್ಷದ ಫಲವನ್ನು ಕೊಡುವುದು. ಕೆರೆಯ ಸ್ನಾನವು ಅದರ ಎರಡರಷ್ಟು. ನದಿಯು ನಾಲ್ಕರಷ್ಟು, ಮಹಾನದಿಯು ನೂರರಷ್ಟು, ಮಹಾನದಿಯ ಸಂಗಮವು ಅದರ ನಾಲ್ಕರಷ್ಟು, ಗಂಗೆಯು ಸಹಸ್ರಭಾಗವು, ಗಂಗಾ ಯಮುನಾ ಸಂಗಮವು ಅದರ ನೂರರಷ್ಟು. ಹೀಗೆ ಉದಕ ತಾರತಮ್ಯದಿಂದ ಫಲಭೇದಗಳುಂಟು. ಎಲ್ಲಿ ಸ್ನಾನ ಮಾಡಿದಾಗ್ಯೂ ಪ್ರಯಾಗವನ್ನು ಸ್ಮರಿಸಬೇಕು. ಸಮುದ್ರಸ್ನಾನವು ಪುಣ್ಯಕರವಾದದ್ದು.

## — ಸ್ನಾನವಿಧಿಯು. —

ಸ್ನಾನವಿಧಿ—'ಮಾಘಮಾಸಮಿಮಂ ಪೂರ್ಣಂ ಸ್ನಾಸ್ಯೇಹಂ ದೇವ ಮಾಧವ । ತೀರ್ಥಸ್ಯಾಸ್ಯಜಲೇನಿತ್ಯ ಮಿತಿಸಂಕಲ್ಪ್ಯ ಚೇತಸಿ ॥ ೧ ॥' ಎಲೈ ಮಾಧವನೇ! ಈ ಮಾಘಮಾಸವು ಪೂರ್ತಿಯಾಗುವವರೆಗೂ ನಾನು ಈ ತೀರ್ಥದಲ್ಲಿ ಸ್ನಾನ ಮಾಡುವೆನು, ಎಂದು ಮನಸ್ಸಿನಲ್ಲಿ ಸಂಕಲ್ಪ ಮಾಡಿಕೊಂಡು ॥೧॥ ಯಾವುದಾದರೊಂದು ತೀರ್ಥವನ್ನು ಗೊತ್ತುಮಾಡಿಕೊಂಡು.- 'ದುಃಖದಾರಿದ್ರ್ಯನಾಶಾಯ ಶ್ರೀವಿಷ್ಣೋಸ್ತೋಷಣಾಯಚ। ಪ್ರಾತಃಸ್ನಾನಂ ಕರೋಮ್ಯದ್ಯ ಮಾಘೇ ಪಾಪವಿನಾಶನಂ ॥೧ ॥ ಮಕರಸ್ಥೇ ರವೌ ಮಾಘೇ ಗೋವಿಂದಾಚ್ಯುತ ಮಾಧವ। ಸ್ನಾನೇನಾನೇನ ಮೇದೇವ ಯಥೋಕ್ತ ಫಲದೋ ಭವ ॥ ೨॥ಇತಿ ಮಂತ್ರಾ ಸಮುಚ್ಚಾರ್ಯ ಸ್ನಾಯಾನ್ಮೌನ ಸಮನ್ವಿತಃ ॥' ದುಃಖವನ್ನೂ ಬಡತನವನ್ನೂ ಪರಿಹರಿಸುವುದಕ್ಕಾಗಿಯೂ, ಶ್ರೀವಿಷ್ಣುವನ್ನು ಸಂತೋಷಪಡಿಸುವುದಕ್ಕೂ, ಈ ಮಾಘಮಾಸದಲ್ಲಿ ಪಾಪಪರಿಹಾರಕವಾದ ಪ್ರಾತಃಸ್ನಾನವನ್ನು ಮಾಡುತ್ತೇನೆ ॥ ॥ ೧ ॥ ಎಲೈ ಗೋವಿಂದನೇ ! ಸೂರ್ಯನು ಮಕರದಲ್ಲಿರುವ ಮಾಘದಲ್ಲಿ ನಾನು ಮಾಡುವ ಸ್ನಾನದಿಂದ ನನ್ನ ಇಷ್ಟಫಲವನ್ನು ಕೊಡುವವನಾಗು॥ ॥ ೨ ॥ ಈ ಎರಡು ಮಂತ್ರಗಳನ್ನು ಹೇಳಿ ಮೌನವಾಗಿ ಸ್ನಾನ ಮಾಡ

ಬೇಕು. 'ಸವಿತ್ರೇ ಪ್ರಸವಿತ್ರೇಚ ಪರಂಧಾಮ ಜಲೇಮಮ। ತ್ವತ್ತೇಜ ಸಾ ಪರಿಭ್ರಷ್ಟಂ ಪಾಪಂ ಯಾತು ಸಹಸ್ರಧಾ ॥೧॥ ನೀರಿನಲ್ಲಿ ಹೆಚ್ಚಾದ ಕಾಂತಿಯನ್ನುಂಟುಮಾಡುವ ನಿನಗೆ ಅರ್ಘ್ಯವನ್ನು ಕೊಡುವೆನು. ನಿನ್ನ ತೇಜಸ್ಸಿನಿಂದ ನನ್ನ ಪಾಪವು ಸಾವಿರಭಾಗಗಳಾಗಿ ನಾಶವಾಗಲಿ ॥ ೧ ॥ ಈ ಮಂತ್ರದಿಂದ ಸೂರ್ಯನಿಗೆ ಪ್ರತಿದಿನವೂ ಅರ್ಘ್ಯವನ್ನು ಕೊಟ್ಟು, ಪಿತೃ ತರ್ಪಣಾದಿಗಳನ್ನು ಪ್ರತಿನಿತ್ಯವೂ ಮಾಡಿ ವಿಷ್ಣುವನ್ನು ಪೂಜಿಸಬೇಕು.

— ಅದಕ್ಕೆ ನಿಯಮಗಳು. —

ಅದರ ನಿಯಮಗಳು—'ಭೂಮೌ ಶಯೀತ ಹೋತವ್ಯ ಮಾಜ್ಯಂತಿಲ ಸಮನ್ವಿತಂ । ಹವಿಷ್ಯಂ ಬ್ರಹ್ಮಚರ್ಯಂಚ ಮಾಘಮಾಸೇ ಮಹಾಫಲಂ॥ ॥೧॥ ನೆಲದಲ್ಲಿ ಮಲಗುವುದು, ಎಳ್ಳು, ತುಪ್ಪ ಇವುಗಳಿಂದ ಹೋಮಮಾ ಡುವುದು, ಹವಿಷ್ಯಾನ್ನ ಭೋಜನವು, ಬ್ರಹ್ಮಚರ್ಯವೂ ಮಾಘಮಾಸದಲ್ಲಿ ಹೆಚ್ಚಾದ ಫಲವನ್ನು ಕೊಡುವುವು, ಈ ಕಾಲದಲ್ಲಿ ಕಟ್ಟಿಗೆ, ಕಂಬಳಿ, ಪಾದರಕ್ಷೆ, ವಸ್ತ್ರ, ಎಣ್ಣೆ, ತುಪ್ಪ, ಹತ್ತಿ, ಪೂರ್ಣಕುಂಭ, ಸುವರ್ಣ, ಅ ನ್ನ ಈ ದಾನಗಳು ಮಹಾ ಫಲವನ್ನುಂಟುಮಾಡುವುವು. 'ನವಹ್ನಿಂ ಸೇ ವಯೇತ್ ಸ್ನಾತೋ ಹ್ಯಸ್ನಾತೋಽಪಿ ವರಾನನೇ । ಹೋಮಾರ್ಥಂ ಸೇ ವಯೇದ್ವಹ್ನಿಂ ಶೀತಾರ್ಥೇ ನ ಕದಾಚನ॥೧॥ ಅಹನ್ಯಹನಿ ದಾತವ್ಯಾ ಸ್ತಿ ಲಾ ಶ್ಶರ್ಕರಯಾನ್ವಿತಾಃ॥' ಸ್ನಾನ ಮಾಡಿದವನು ಚಳಿಗಾಗಿ ಬೆಂಕಿಯನ್ನು ಕಾಯಕೂಡದು, ಸ್ನಾನಮಾಡುವವನೂ ಬೆಂಕಿಯನ್ನು ಕಾಯಿಸಕೂಡದು. ಹೋಮಾರ್ಥವಾಗಿ ಅಗ್ನಿಯನ್ನು ಸೇವಿಸಬೇಕಲ್ಲದೆ ಚಳಿಗಾಗಿ ಸೇವಿಸ ಕೂಡದು ॥ ೧ ॥ ಪ್ರತಿದಿನವೂ ಎಳ್ಳನ್ನೂ, ಸಕ್ಕರೆಯನ್ನೂ ಅಗ್ನಿಗೆ ದಾನ ಮಾಡಬೇಕು. ॥ ಅಂದರೆ ಮೂರು ಭಾಗ ಎಳ್ಳನ್ನೂ, ನಾಲ್ಕುಭಾಗ ಸಕ್ಕ ರೆಯನ್ನೂ ಕೂಡಿಸಿ ಹೋಮಮಾಡಬೇಕೆಂದರ್ಥವು. ಈ ಮಾಸದಲ್ಲಿ ಅ ಭ್ಯಂಗವು ಕೂಡದು. 'ಮಾಘೇಮಾಸ್ಯುಷಸಿ ಸ್ನಾನಂ ಕೃತ್ವಾ ದಾಂಪತ್ಯ ಮರ್ಚಯೇತ್। ಮಾಘೇ ಯತ್ನೇನ ಸಂತ್ಯಾಜ್ಯಂ ಮೂಲಕಂ ಮದಿರೋ ಪಮಂ ॥೧ ॥ ಪಿತೄಣಾಂ ದೇವತಾನಾಂಚ ಮೂಲಕಂ ನೈವದಾಪಯೇ ತ್॥' ಮಾಘಮಾಸದ ಉಷಃಕಾಲದಲ್ಲಿ ಪ್ರತಿದಿನವೂ ಸ್ನಾನಮಾಡಿ ದಂಪ ತಿಗಳನ್ನು ಪೂಜಿಸಬೇಕು. ಮೂಲಂಗಿಯನ್ನು ಮದ್ಯಕ್ಕೆ ಸಮಾನವೆಂದು

ಭಾವಿಸಿ ಈ ತಿಂಗಳಲ್ಲಿ ತ್ಯಜಿಸಬೇಕು. ॥ ೧ ॥ ದೇವತೆಗಳಿಗೂ ಪಿತೃಗಳಿಗೂ ಮೂಲಂಗಿಯನ್ನು ಸಮರ್ಪಿಸಕೂಡದು. ಮಾಘವು ಮಲಮಾಸವಾಗಿ ಬಂದರೆ ಆಗ ಕಾಮ್ಯ ವ್ರತಗಳನ್ನು ಮುಗಿಯಿಸಕೂಡದಾದ್ದರಿಂದ ಎರಡು ತಿಂಗಳುಗಳಲ್ಲಿಯೂ ಸ್ನಾನವನ್ನೂ ಮಾಸನಿಯಮಗಳನ್ನೂ ನಡೆಯಿಸಬೇಕು. ಮಾಸೋಪವಾಸವನ್ನೂ, ಚಾಂದ್ರಾಯಣವ್ರತವನ್ನೂ ಮಲಮಾಸದಲ್ಲಿಯೇ ನಿಲ್ಲಿಸಬೇಕೆಂದು ಹೇಳಿದೆ. ಮಾಘಸ್ನಾನವು ಕಾಮ್ಯವಾಗಿಯೂ, ನಿತ್ಯವಾಗಿಯೂ ಇದೆ. ಒಂದು ತಿಂಗಳು ಪೂರ್ತಿಯಾಗಿ ಸ್ನಾನಮಾಡುವದಕ್ಕೆ ಶಕ್ತಿಯಿಲ್ಲದವರು ಮೂರು ದಿನಗಳಾದರೂ, ಅಥವಾ ಒಂದು ದಿನವಾದರೂ ಸ್ನಾನಮಾಡಬಹುದು. ಮೊದಲು ಮೂರು ದಿನಗಳಲ್ಲಿ ಮಾಡಬೇಕೆಂದು ಕೆಲವರು, ತ್ರಯೋದಶಿಮೊದಲು ಮೂರುದಿನಗಳೆಂಬುದು ಬಹು ಜನ ಸಮ್ಮತವಾದದ್ದು. ಪುಷ್ಯಶುದ್ಧ ಪೂರ್ಣಿಮಾನಂತರದ ಸಪ್ತಮಿ, ಅಷ್ಟಮಿ, ನವಮಿಗಳಲ್ಲಿ ಅಷ್ಟಕಾದಿ ಶ್ರಾದ್ಧಗಳನ್ನು ಮಾಡಬೇಕೆಂದು ಹಿಂದೆಯೇ ಹೇಳಿದೆ.

## — ಅರ್ಧೋದಯಯೋಗವು —

ಅರ್ಧೋದಯ ಯೋಗವು—ಪುಷ್ಯಬಹುಳ ಅಮಾವಾಸ್ಯೆಯಲ್ಲಿ ಅರ್ಧೋದಯಯೋಗವು. 'ಅಮಾರ್ಕಪಾತ ಶ್ರವಣೈ ರ್ಯುಕ್ತಾಚೇ ತ್ಪೌಷಮಾಘಯೋಃ । ಅರ್ಧೋದಯ ಸ್ಸವಿಜ್ಞೇಯಃ ಕೋಟಿಸೂರ್ಯಗ್ರಹೈಸ್ಸಮಃ ॥' ಪುಷ್ಯಮಾಘಮಾಸಗಳ ಅಮಾವಾಸ್ಯೆಗೆ ಪಾತವೂ, ಶ್ರವಣವೂ ಸೇರಿದರೆ ಅರ್ಧೋದಯವೆಂಬ ಯೋಗವು. ಇದು ಕೋಟಿಸೂರ್ಯಗ್ರಹಣದಷ್ಟು ಉತ್ಕೃಷ್ಟವಾದ ಪುಣ್ಯಕಾಲವೆನ್ನಿಸುವುದು ॥ ೧ ॥ ಮೇಲ್ಕಂಡ ಶ್ಲೋಕಕ್ಕೆ ' ಕಿಂಚಿನ್ನ್ಯೂನಂ ಮಹೋದಯಃ ' ಮಹೋದಯಕ್ಕೆ ಸ್ವಲ್ಪ ಕಡಿಮೆಯಾದದ್ದು. ಎಂಬುದನ್ನು ನಾಲ್ಕನೆಯ ಪಾದದ ಪಾಠಾಂತರವಾಗಿ ಕೆಲವರು ಹೇಳುತ್ತಾರೆ. ಪುಷ್ಯಮಾಘಗಳ ಮಧ್ಯದಲ್ಲಿರುವ ಅಮಾವಾಸ್ಯೆಯೆಂಬರ್ಥವೆಂದು ಕೆಲವರು, ಅಮಾವಾಸ್ಯೆಯೇ ಕೊನೆಯಾದ ಮಾಸವಾದರೆ ಪುಷ್ಯದ್ದು. ಪೌರ್ಣಮ್ಯಂತವಾದ ಮಾಸವಾದರೆ ಮಾಘದ್ದು. (ಅಮಾವಾಸ್ಯೆ) ಎಂದು ಮತ್ತೆ ಕೆಲವರು. ಹೇಗೂ ಪುಷ್ಯ ಶುದ್ಧ ಪೌರ್ಣಮಾಸ್ಯಾನಂತರದ ಅಮಾವಾಸ್ಯೆಎಂದರ್ಥವು'ದಿವೈವಯೋಗಶ್ಶಸ್ತೋಯಂ.

ರಾತ್ರೌ ನತು ಕದಾಚನ|ಅರ್ಧೋದಯೇತು ಸಂಪ್ರಾಪ್ತೇಸರ್ವಂ ಗಂಗಾ ಸಮಂ ಜಲಂ||೧||ಶುದ್ಧಾತ್ಮಾನೋ ದ್ವಿಜಾ ಸ್ಸರ್ವೇ ಭವೇಯುಃ ಬ್ರಹ್ಮಸ ನ್ನಿಭಾಃ|ಯತ್ಕಿಂಚಿ ದ್ದೀಯತೇ ದಾನಂ ತದ್ದಾನಂ ಮೇರುಸನ್ನಿಭಂ||೨||" ಈ ಯೋಗವು ಹಗಲು ಆದರೆ ಗೊತ್ತಲ್ಲದೆ ರಾತ್ರಿಯಲ್ಲಾದರೆ ಪ್ರಯೋಜ ನವಿಲ್ಲ. ಅರ್ಧೋದಯವು ಬಂದಾಗ ಎಲ್ಲಾ ಉದಕವೂ ಗಂಗೆಗೆ ಸದೃಶ ವಾದದ್ದು ||೧|| ಬ್ರಾಹ್ಮಣರೆಲ್ಲರೂ ಪರಿಶುದ್ಧರಾಗಿ ಬ್ರಹ್ಮನಸಮಾನರೆನ್ನಿ ಸಿಕೊಳ್ಳುವರು. ಈಕಾಲದಲ್ಲಿ ಅಲ್ಪವಾದ ದಾನಮಾಡಿದರೂ ಅದೇ ಮೇ ರುಪರ್ವತದಷ್ಟು ಮಹತ್ತರವಾದದ್ದಾಗಿ ಪರಿಣಮಿಸುವುದು ||೨||

## — ಕಂಚಿನ ಭೋಜನಪಾತ್ರೆ (ತಣಿಗೆ) ಯ ದಾನವು —

ಕಂಚಿನ ತಣಿಗೆಯ ದಾನವು--ದೇಶಕಾಲಗಳನ್ನು ಹೇಳಿ, ಸಮುದ್ರ ವೇ ಕಾಂಚಿಯಾಗಿರುವಈ ಭೂಮಿಯ ದಾನದಫಲವುಉಂಟಾಗಲೆಂದೂ, ಅರ್ಧೋದಯ ಕಾಲದಲ್ಲಿ ಮಾಡಬೇಕಾದ ಭೋಜನಪಾತ್ರೆಯನ್ನು ದಾ ನಮಾಡುವೆನೆಂದೂ, ಸಂಕಲ್ಪಮಾಡಿ, ಸಾರಿಸಿದ ನೆಲದಲ್ಲಿ ತೊಳೆದ ಅಕ್ಕಿ ಯಿಂದ ಎಂಟುದಳದ ಪದ್ಮವನ್ನು ಮಾಡಿ, ಅದರಮೇಲೆ ೬೪ಪಲ ಅಥವಾ ೪೦ಪಲ ಅಥವಾ ೩೪ ಪಲದ ತೂಕವುಳ್ಳ ಕಂಚಿನ ಪಾತ್ರೆಯನ್ನು ಅಗ್ನ್ಯು ತ್ತಾರಣ ಪೂರ್ವಕವಾಗಿ, ಇಡಬೇಕು. (ಎಂಟುಗುಲಗಂಜಿಯ ತೂಕ ಕ್ಕೆ ಮಾಷವೆಂತಲೂ, ೪೦ ಮಾಷಗಳಿಗೆ ಒಂದು ಕರ್ಷವೆಂತಲೂ, ೪ಕರ್ಷ ಗಳಿಗೆ ಒಂದು ಪಲವೆಂತಲೂ ಸಂಜ್ಞೆ, ಅಮರಸಿಂಹನು-೮೦ ಗುಲಗಂಜಿ ಯ ತೂಕಕ್ಕೆ ಕರ್ಷವೆಂತಲೂ ೪ಕರ್ಷಕ್ಕೆ ಪಲವೆಂತಲೂ ಹೇಳಿದ್ದಾನೆ) ಕಂಚಿನ ಪಾತ್ರೆಯಲ್ಲಿ ಪಾಯಸವನ್ನು ಹಾಕಿ, ಪಾಯಸದಲ್ಲಿ ಅಷ್ಟದಳವ ನ್ನು ಬರೆದು, ಅದರ ಕರ್ಣಿಕೆಯಲ್ಲಿ ಕರ್ಷದ ತೂಕ ಅಥವಾ ಅದರ ಅರ್ಧ ಅಥವಾ ಅದರಲ್ಲರ್ಧ ತೂಕವುಳ್ಳ ಚಿನ್ನದ ಲಿಂಗವನ್ನು ಇಟ್ಟು, ಕಂಚಿನಪಾ ತ್ರೆಯಲ್ಲಿಬ್ರಹ್ಮನನ್ನೂ, ಪಾಯಸದಲ್ಲಿ ವಿಷ್ಣುವನ್ನೂ, ಲಿಂಗದಲ್ಲಿಶಿವನನ್ನೂ, ಅವರವರ ಅಧಿಕಾರಗಳಿಗೆ [ಸೃಷ್ಟ್ಯಾದಿಪಾಲನಾದವು] ತಕ್ಕಂತೆ ವೇದಮಂ ತ್ರಗಳಿಂದಾಗಲಿ, ನಾಮಮಂತ್ರಗಳಿಂದಾಗಲಿ, ಆವಾಹನೆಮಾಡಿ ಷೋಡ ಶೋಪಚಾರಗಳಿಂದ ಪೂಜಿಸಬೇಕು. ಅನಂತರದಲ್ಲಿ ಬ್ರಾಹ್ಮಣನನ್ನು

ವಸ್ತ್ರಾದಿಗಳಿಂದ ಪೂಜೆಮಾಡಬೇಕು. "ಸುವರ್ಣ ಪಾಯಸಾಪಾತ್ರಂ ಯ ಸ್ಮಾದೇತ ತ್ತ್ರಯೀಮಯಂ। ಆವಯೋ ಸ್ತಾರಕಂ ಯಸ್ಮಾ ತ್ತದ್ಗೃಹಾ ಣ ದ್ವಿಜೋತ್ತಮ" ॥೧॥ ಎಲೈ ಬ್ರಾಹ್ಮಣೋತ್ತಮನೇ! ಈ ಚಿನ್ನವೂ ಪಾಯಸವೂ, ಭೋಜನವೂ, ಈ ಮೂರೂ ಮೂರುಲೋಕಗಳಿಗೆ ಸಮಾ ನವಾದ್ದರಿಂದಲೂ, ನಮ್ಮಿಬ್ಬರನ್ನೂ ಪಾಪದಿಂದ ದಾಟಿಸುವುದರಿಂದಲೂ, ನಾನು ನಿನಗೆ ದಾನಮಾಡುತ್ತೇನೆ ॥೧॥ ಎಂಬ ಮಂತ್ರವನ್ನು ಹೇಳಿ, ಇಂ ಥಾಗೋತ್ರದ ಈ ಹೆಸರುಳ್ಳ ನಿನಗೆ ಭೂದಾನ ಫಲಪ್ರಾಪ್ತಿಗಾಗಿ ನಾನು ಸುವರ್ಣಲಿಂಗ, ಪಾಯಸಗಳಿಂದ ಕೂಡಿದ ಈ ಪಾತ್ರೆಯನ್ನು ದಾನಮಾಡಿ ದ್ದೇನೆ. ಇದು ನನ್ನದಲ್ಲ, ಎಂದು ಬ್ರಾಹ್ಮಣಹಸ್ತದಲ್ಲಿ ಉದಕವನ್ನು ಬಿ ಡಬೇಕು. ಬ್ರಾಹ್ಮಣನು 'ದೇವಸ್ಯತ್ವಾ' ಎಂಬ ಮಂತ್ರದಿಂದ ಪ್ರತಿಗ್ರ ಹಮಾಡಬೇಕು. (ತೆಗೆದುಕೊಳ್ಳಬೇಕು) ದಾನಮಾಡಿದವನು - ದಾನವು ಸಂಪೂರ್ಣವಾಗುವುದಕ್ಕಾಗಿ ಈದಕ್ಷಿಣೆಯನ್ನು ಕೊಡುವೆನು. ಎಂದುಹೇಳಿ ತನ್ನಶಕ್ತ್ಯನುಸಾರವಾಗಿ ದಕ್ಷಿಣೆಯನ್ನು ಕೊಡಬೇಕು. ಹೇಮಾದ್ರಿಮೊ ದಲಾದ ಗ್ರಂಥಕಾರರು ಬೇರೆ ಬಗೆಯಾಗಿ ಅರ್ಧೋದಯ ಪ್ರಯೋಗವ ನ್ನು ಅಂದರೆ ಬ್ರಹ್ಮಾದಿಗಳಿಂದ ಕೂಡಿದ ಎಳ್ಳಿನ ಪರ್ವತಗಳು೩, ಶಯ್ಯಾ (ಹಾಸಿಕೆ) ೩, ಗೋವುಗಳು ೩ ಇವುಗಳನ್ನು ದಾನಮಾಡಿ, ಹೋಮಮಾ ಡಬೇಕಾದ ರೀತಿಯನ್ನು, ಕೌಸ್ತುಭದಲ್ಲಿ ತಿಳಿಯಬೇಕು. ಎಂದು ಹೇ ಳಿದಾರೆ. ಇಂತು ಪೌಷಮಾಸಕೃತ್ಯ ನಿರ್ಣಯೋದ್ದೇಶವು.

—(೧೩) ಮಾಘಮಾಸವು.—

(೧೩) ಮಾಘಮಾಸವು....ಕುಂಭಸಂಕ್ರಮಣವಾಗುವುದಕ್ಕೆ ಮುಂ ಚಿನ ೧೬ ಗಳಿಗೆಗಳು ಪುಣ್ಯಕಾಲವು. "ಸಿತಾಸಿತೇತು ಯತ್ರ್ಸ್ನಾನಂ ಮಾಘಮಾಸೇ ಯುಧಿಷ್ಠಿರ। ನತೇಷಾಂ ಪುನರಾವೃತ್ತಿಃ ಕಲ್ಪಕೋಟಿ ಶತೈರಪಿ॥೧॥ಕುರುಕ್ಷೇತ್ರ ಸಮಾಗಂಗಾ ಯತ್ರಕುತ್ರಾವಗಾಹಿತಾ।ತಸ್ಮಾ ದ್ದಶಗುಣಾ ವಿಂಧ್ಯೇ ಕಾಶ್ಯಾಂ ಶತಗುಣಾ ತತಃ॥೨॥ಕಾಶ್ಯಾಃ ಶತಗುಣಾ ಪ್ರೋಕ್ತಾ ಗಂಗಾ ಯಮುನಯಾನ್ವಿತಾ। ಸಹಸ್ರ ಗುಣಿತಾ ಸಾಪಿ ಮಾ ಘೇ ಪಶ್ಚಿಮವಾಹಿನೀ ॥೩॥" ಎಲೈ ಧರ್ಮರಾಜನೇ ! ಮಾಘಮಾಸದಲ್ಲಿ

ಗಂಗಾ ಯಮುನಾ ನದಿಗಳ ಸಂಗಮಸ್ಥಳದಲ್ಲಿ ಸ್ನಾನಮಾಡಿದವರಿಗೆ ಅನೇಕ ಕೋಟಿ ಕಲ್ಪಗಳಾದಾಗ್ಯೂ ಪುನರ್ಜನ್ಮವಿಲ್ಲ ||೧|| ಎಲ್ಲಿ ಗಂಗಾಸ್ನಾನ ಮಾಡಿದರೂ ಕುರುಕ್ಷೇತ್ರ ಫಲಕ್ಕೆ ಸಮಾನವು, ವಿಂಧ್ಯೆಯಲ್ಲಿ ಅದರ ಹತ್ತರಷ್ಟು, ಕಾಶಿಯಲ್ಲಿ ಅದರ ನೂರರಷ್ಟು ||೨|| ಗಂಗಾ ಯಮುನಾಸಂಗಮದಲ್ಲಿ ಅದರ ನೂರರಷ್ಟು, ಮಾಘದಲ್ಲಿ ಪಶ್ಚಿಮಕ್ಕೆ ಹರಿವ ಗಂಗೆಯಲ್ಲಿ ಅದರ ಸಾವಿರದಷ್ಟು ಫಲವು ಹೆಚ್ಚುವುದು ||೩|| ಎಂದು ಹೇಳಿರುವುದರಿಂದ ಮಾಘದಲ್ಲಿ ತ್ರಿವೇಣೀಸ್ನಾನವು ಪ್ರಶಸ್ತವಾದದ್ದು.

— ತಿಲಪಾತ್ರದಾನವು —

ತಿಲಪಾತ್ರದಾನವು--''ತಾಮ್ರಪಾತ್ರೇ ತಿಲಾನ್ ಕೃತ್ವಾ ಪಲಷೋಡಶ ನಿರ್ಮಿತೇ। ಸಹಿರಣ್ಯಂ ಸ್ವಶಕ್ತ್ಯಾವಾ ವಿಪ್ರಾಯ ಪ್ರತಿಪಾದಯೇತ್॥ ಹದಿನಾರು ಪಲಗಳತೂಕವುಳ್ಳತಾಮ್ರಪಾತ್ರೆಯಲ್ಲಿ ಎಳ್ಳನ್ನುತುಂಬಿ,ಶಕ್ತ್ಯನುಸಾರವಾಗಿ ದಕ್ಷಿಣೆಯನ್ನಿಟ್ಟು ಬ್ರಾಹ್ಮಣನಿಗೆಕೊಡಬೇಕು||೧||ವಾಙ್ಮನಃ ಕಾಯಗಳೆಂಬ ತ್ರಿಕರಣದಲ್ಲಿ ಉಂಟಾದ ಪಾಪಗಳನ್ನು ಪರಿಹರಿಸಿ, ಬ್ರಹ್ಮಲೋಕ ಪ್ರಾಪ್ತಿಯನ್ನುಂಟು ಮಾಡಿ ಕೊಳ್ಳಬೇಕೆಂಬಅಪೇಕ್ಷೆಯಿಂದ ನಾನು ತಿಲಪಾತ್ರದಾನವನ್ನು ಮಾಡುವೆನು, ಎಂದು ಸಂಕಲ್ಪಮಾಡಿ, ಮೇಲೆ ಹೇಳಿದ ತೂಕವುಳ್ಳ ಪಾತ್ರೆಯಲ್ಲಿ ಪ್ರಸ್ಥಪ್ರಮಾಣದ ಎಳ್ಳನ್ನೂ, ಕರ್ಷಪ್ರಮಾಣ ಅಥವಾ ಯಥಾಶಕ್ತಿಯಾಗಿ ಸುವರ್ಣವನ್ನೂ ಇಟ್ಟು,ಬ್ರಾಹ್ಮಣನನ್ನುಪೂಜಿಸಿ, ''ದೇವದೇವ ಜಗನ್ನಾಥ ವಾಂಛಿತಾರ್ಥ ಫಲಪ್ರದ। ತಿಲಪಾತ್ರಂ ಪ್ರದಾಸ್ಯಾಮಿ ತವಾಂಗೇ ಸಂಸ್ಥಿತೋಽಪ್ಯಹಂ॥೧॥'' ಇಷ್ಟಾರ್ಥಗಳನ್ನು ಕೊಡತಕ್ಕ ದೇವದೇವನಾದ ವಿಷ್ಣುವೇ ! ವಿಶ್ವರೂಪಿಯಾದ ನಿನ್ನ ದೇಹದಲ್ಲಿ ನಾನಿದ್ದುಕೊಂಡು ಈ ತಿಲಪಾತ್ರವನ್ನು ದಾನಮಾಡುತ್ತೇನೆ ||೧|| ಎಂಬ ಮಂತ್ರದಿಂದ ದಾನಮಾಡಬೇಕು. ''ಧಾನ್ಯಮಾನೇತು ಕುಡವೋ ಮುಷ್ಟೀನಾಂ ಸ್ಯಾಚ್ಚತುಷ್ಟಯೇ ! ಚತ್ವಾರಃ ಕುಡವಾಃ ಪ್ರಸ್ಥಃ ಚತುಃ ಪ್ರಸ್ಥಮಥಾಢಕಂ॥೧॥ಅಷ್ಟಾಢಕೋ ಭವೇದ್ದ್ರೋಣೋ ದ್ವಿದ್ರೋಣಃ ಶೂರ್ಪ ಉಚ್ಯತೇ॥ಸಾರ್ಧಶೂರ್ಪೋ ಭವೇತ್ಖಾರೀ' ನಾಲ್ಕು ಮುಷ್ಟಿ (ಹಿಡಿ)ಗಳಿಗೆ ಒಂದು ಕುಡವು,ನಾಲ್ಕುಕುಡವಗಳು ಒಂದು

ಪ್ರಸ್ಥ, ನಾಲ್ಕುಪ್ರಸ್ಥಗಳು ಒಂದು ಆಢಕ ॥೧॥ ಎಂಟು ಆಢಕಗಳು ಒಂದು ದ್ರೋಣ,ಎರಡುದ್ರೋಣಗಳು ಒಂದು ಶೂರ್ಪ॥೧॥ ಶೂರ್ಪವು ಒಂದು ಖಾರಿ.ಧಾನ್ಯದ ಅಳತೆಯ ಪ್ರಮಾಣಗಳನ್ನು ಈ ರೀತಿಯಲ್ಲಿ ತಿಳಿಯಬೇಕು. ಅಥವಾ "ಪಲಂಸುವರ್ಣಾ ಶ್ಚತ್ವಾರಃ ಕುಡವಂ ಪ್ರಸ್ಥಮಾಢಕಂ। ದ್ರೋಣಂಚ ಖಾರಿಕಾಚೇತಿ ಪೂರ್ವಪೂರ್ವಾಶ್ಚತುರ್ಗುಣಂ ॥೧॥" ನಾಲ್ಕು ಸುವರ್ಣಗಳಿಗೆ ಒಂದು ಪಲ, ಮುಂದೆ ನಾಲ್ಕರಷ್ಟರಂತೆ ಕ್ರಮವಾಗಿ, ಕುಡವ, ಪ್ರಸ್ಥ,ಆಢಕ, ದ್ರೋಣ,ಖಾರಿ; ಈ ಪ್ರಮಾಣವನ್ನಾದರೂ ಅನುಸರಿಸಬಹುದು. ಅಥವಾ ಚಿನ್ನವಿಲ್ಲದೆ ಬರಿಯಎಳ್ಳನ್ನೇ ತಾಮ್ರಪಾತ್ರೆಯಲ್ಲಿಹಾಕಿ, "ತಿಲಾಃ ಪುಣ್ಯಾಃ ಪವಿತ್ರಾಶ್ಚ ಸರ್ವಪಾಪ ಹರಾಃ ಸ್ಮೃತಾಃ।ಶುಕ್ಲಾಶ್ಚೈವ ತಥಾ ಕೃಷ್ಣಾ ವಿಷ್ಣುಗಾತ್ರಸಮುದ್ಭವಾಃ॥೧॥ ಯಾನಿಕಾನಿಚ ಪಾಪಾನಿ ಬ್ರಹ್ಮಹತ್ಯಾ ಸಮಾನಿಚ । ತಿಲಪಾತ್ರ ಪ್ರದಾನೇನ ತಾನಿನಶ್ಯಂತು ಮೇಸದಾ॥೨॥"ಕಪ್ಪು,ಮತ್ತು ಬಿಳಿಯ ಎಳ್ಳುಪುಣ್ಯಕರವಾಗಿಯೂ, ಪರಿಶುದ್ಧವಾಗಿಯೂ,ಸಕಲ ಪಾಪಗಳನ್ನೂ ಪರಿಹರಿಸತಕ್ಕದ್ದಾಗಿಯೂ, ವಿಷ್ಣುವಿನ ದೇಹದಲ್ಲಿ ಹುಟ್ಟಿದುದಾಗಿಯೂ ಇದೆ ॥೧॥ ಎಂತಹ ಬ್ರಹ್ಮಹತ್ಯಕ್ಕೆ ಸಮಾನವಾದ ಪಾಪವನ್ನು ನಾನು ಮಾಡಿದ್ದಾಗ್ಯೂ, ಈತಿಲಪಾತ್ರ ದಾನದಿಂದ ಅದೆಲ್ಲವೂ ನಾಶವಾಗಲಿ ॥೨॥ ಯಮದೇವತಾಕವಾದ ಈ ತಿಲಪಾತ್ರೆಯನ್ನು ನಾನು ಬ್ರಹ್ಮಲೋಕಪ್ರಾಪ್ತಿಗಾಗಿ ಯಥಾಶಕ್ತಿ ದಕ್ಷಿಣೆಯೊಡನೆ ದಾನಮಾಡುವೆನು. ಎಂದು ಬ್ರಾಹ್ಮಣನಿಗೆ ಕೊಡಬೇಕು.

---ತುಲಸೀಪತ್ರ, ಸಾಲಗ್ರಾಮದಾನವು---

ತುಳಸೀಪತ್ರ ಸಾಲಗ್ರಾಮ ದಾನವು---ಚಿನ್ನದತುಲಸೀಪತ್ರವನ್ನು (ಎಲೆ)ದಾನವನ್ನು ಮಾಡುವುದಕ್ಕೆ ಮಂತ್ರವು 'ಸುವರ್ಣ ತುಲಸೀದಾನಾದ್ಬ್ರಹ್ಮಣಃ ಕಾರ್ಯಸಂಭವಾತ್।ಪಾಪಂ ಪ್ರಶಮಮಾಯಾತು ಸರ್ವೇ ಸಂತುಮನೋರಥಾಃ ॥೧॥" ಬ್ರಹ್ಮಕಾರ್ಯವಾದ ಈ ತುಲಸಿಯ ದಾನದಿಂದ ನನ್ನಪಾಪವೆಲ್ಲವೂ ಪರಿಹಾರವಾಗಿ ಇಷ್ಟಾರ್ಥಗಳೆಲ್ಲವೂ ನೆರವೇರಲಿ ॥೧॥ ಸಾಲಗ್ರಾಮ ದಾನಮಂತ್ರವು"ಸಾಲಗ್ರಾಮ ಶಿಲಾಪುಣ್ಯಾ ಭುಕ್ತಿಮುಕ್ತಿ

ಪ್ರದಾಯಿನೀ। ಸಾಲಗ್ರಾಮ ಪ್ರದಾನೇನ ಮಮ ಸಂತು ಮನೋರಥಾಃ ॥೧॥' ಸಾಲಗ್ರಾಮ ಶಿಲೆಯು ಸುಕೃತವುಳ್ಳದ್ದು. ಭುಕ್ತಿಮುಕ್ತಿಗಳನ್ನು ಕೊಡತಕ್ಕದ್ದು. ಈ ಸಾಲಗ್ರಾಮ ದಾನದಿಂದ ನನ್ನ ಮನೋರಥಗಳು ಸಿದ್ಧಿಸಲಿ॥೧॥ "ಚಕ್ರಾಂಕಿತ ಸಮಾಯುಕ್ತಾ ಸಾಲಗ್ರಾಮ ಶಿಲಾಶುಭಾಃ। ದಾನೇನೈವ ಭವೇತ್ತಸ್ಯಾ ಉಭಯೋರ್ವಾಂಛಿತಂಫಲಂ॥೧॥" ಚಕ್ರಚಿಹ್ನೆಯಿಂದ ಕೂಡಿದ ಸಾಲಗ್ರಾಮದ ಶಿಲೆಯು ಶುಭಕರವಾದದ್ದು ಅದರ ದಾನದಿಂದ ಇಬ್ಬರಿಗೂ (ದಾನಮಾಡಿದವನು, ತೆಗೆದುಕೊಂಡವನು) ಇಷ್ಟಾರ್ಥ ಫಲವು ಸಿದ್ಧಿಯಾಗುವುದು ॥೧॥

---ವೇಣೀದಾನವು---

ವೇಣೀದಾನವು--ಪ್ರಯಾಗದಲ್ಲಿ ವೇಣೀದಾನವು ನಡೆಯತಕ್ಕದ್ದು. ಅಲ್ಲಿ ಎಲ್ಲರಿಗೂ ವಪನವು ಮುಖ್ಯವಾದದ್ದು. "ಊರ್ಧ್ವಮಬ್ದಾದ್ದ್ವಿಮಾಸೋನಾದ್ಯದಾ ತೀರ್ಥಂ ವ್ರಜೇನ್ನರಃ। ತದಾತದ್ವಪನಂಶಸ್ತಂ ಪ್ರಾಯಶ್ಚಿತ್ತ ಮೃತೇದ್ವಿಜ ॥೧॥" ಹತ್ತು ತಿಂಗಳನ್ನುಮೀರಿ ಯಾವ ತೀರ್ಥವನ್ನಾದರೂ ಯಾತ್ರಾರ್ಥಿಯು ತಲಪಿದರೆ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುವುದಕ್ಕೆ ಮುಂಚೆ ವಪನವು ನಡೆಯಬೇಕು॥೧॥ ಪ್ರಯಾಗಕ್ಕೆ ಹತ್ತುತಿಂಗಳ ಮುಂಚೆ ಬಂದರೂ,ಮೂರುಯೋಜನದ ದೂರದಿಂದ ಬಂದವರಿಗೆ ವಪನವು ಆಗಬೇಕು. ಮೊದಲನೆಯ ಯಾತ್ರೆಯಲ್ಲಿ ಮಾತ್ರ, ಜೀವತ್ಪಿತೃಕನು (ಬದುಕಿರುವ ತಂದೆಯುಳ್ಳವನು) ಗರ್ಭಿಣೀಪತಿ, ಬಾಲವಾದಮಕ್ಕಳು,ಸುವಾಸಿನಿಯರು, ಇವರೆಲ್ಲರಿಗೂ ವಪನವಾಗಬೇಕು. ಗಂಡನನ್ನುಳ್ಳ ಹೆಂಗಸಿಗೆ 'ಸರ್ವಾನ್ಕೇಶಾನ್ ಸಮುದ್ಧೃತ್ಯ ಛೇದಯೇ ದಂಗುಲದ್ವಯಂ" ಎಲ್ಲಾ ಕೂದಲನ್ನೂ ಮೇಲಕ್ಕೆತ್ತಿ ತುದಿಯಲ್ಲಿ ಎರಡಂಗುಲದ ಉದ್ದವನ್ನು ಕತ್ತರಿಸಬೇಕು. ಎಂದು ಹೇಳುವರು. ಮಂಗಳಕರವಾದ ಅಲಂಕಾರವನ್ನು ಮಾಡಿಕೊಂಡು,ಸ್ತ್ರೀಯು ಜಡೆಯನ್ನು ಹೆಣೆದುಕೊಂಡು, ತನ್ನ ಗಂಡನಿಗೆ ನಮಸ್ಕರಿಸಿ ಅವನ ಅಪ್ಪಣೆಯ ಪ್ರಕಾರ, ಕೂದಲನ್ನೆಲ್ಲವನ್ನೂ, ಅಥವಾ ಎರಡುಗುಲವನ್ನು ಮಾತ್ರ, ಕತ್ತರಿಸಿ ಸ್ನಾನಮಾಡಿ, ತ್ರಿವೇಣಿಯನ್ನು ಪೂಜಿಸಬೇಕು. ಗಂಡನಾದರೂ ಪೂಜಿಸಬಹುದು. ಅನಂತರ ಕತ್ತರಿಸಿದ ಜ

ಡೆಯನ್ನು ಬಿದಿರು ಗೂಡೆಯಲ್ಲಿ ಹಾಕಿ ತನ್ನ ಬೊಗಸೆಯಲ್ಲಿ ಇಟ್ಟುಕೊಂಡೆ, ಅದರಮೇಲೆ ಚಿನ್ನದ ಜಡೆಯನ್ನೂ ಮುತ್ತು ಮೊದಲಾದವುಗಳನ್ನೂ ಇಟ್ಟು--''ವೇಣ್ಯಾಂವೇಣೀ ಪ್ರದಾನೇನ ಮಮಪಾಪಂ ವ್ಯಪೋಹತು। ಜನ್ಮಾಂತರೇಷ್ವಪಿಸದಾ ಸೌಭಾಗ್ಯಂ ಮಮವರ್ಧತಾಂ॥೧॥''ಗಂಗೆಯಲ್ಲಿ ಈ ಜಡೆಯನ್ನು ಬಿಡುವುದರಿಂದ ನನ್ನ ಪಾಪವೆಲ್ಲವೂ ಪರಿಹಾರವಾಗಲಿ, ಮುಂದಿನ ಜನ್ಮಗಳಲ್ಲಿ ಸದಾ ನನಗೆ ಸೌಭಾಗ್ಯವುಂಟಾಗಲಿ ॥ ೧ ॥ ಎಂಬ ಮಂತ್ರದಿಂದ ತ್ರಿವೇಣಿಯಲ್ಲಿ, (ಗಂಗೆಯಲ್ಲಿ) ಹಾಕಬೇಕು. ಬ್ರಾಹ್ಮಣರು 'ಸುಮಂಗಲೀ ರಿಯಂವಧೂಃ' ಎಂಬ ಮಂತ್ರವನ್ನು ಹೇಳಬೇಕು. ಆಮೇಲೆ ಬ್ರಾಹ್ಮಣರನ್ನೂ, ಸುವಾಸಿನಿಯರನ್ನೂವಸ್ತ್ರಾದಿಗಳಿಂದ ತೃಪ್ತಿಗೊಳಿಸಬೇಕು.

---ತ್ರಿವೇಣಿಯಲ್ಲಿ ದೇಹತ್ಯಾಗವು---

ತ್ರಿವೇಣಿಯಲ್ಲಿ ದೇಹವನ್ನು ಬಿಡುವುದು -''ತನುಂತ್ಯಜತಿ ವೈ ಮಾಘೇ ಸತ್ಯಮುಕ್ತಿ ರ್ನಸಂಶಯಃ'' ಮಾಘಮಾಸದಲ್ಲಿ ದೇಹತ್ಯಾಗ ಮಾಡಿದವರು (ಸತ್ತವರು)ಮೋಕ್ಷವನ್ನು ಹೊಂದುತ್ತಾರೆ. ಸಂದೇಹವಿಲ್ಲ ಎಂದು ಬ್ರಹ್ಮವಚನ ವಿರುವುದರಿಂದ ,ಯೇವೈತನ್ವಂ ವಿಸೃಜಂತಿ ಧೀರಾಸ್ತೇ ಜನಾಸೋ ಅಮೃತತ್ವಂ ಭಜಂತೇ,ಯಾರು ದೇಹವನ್ನುಬಿಡುತ್ತಾರೆಯೋ ಅವರು ಮುಕ್ತಿಯನ್ನು ಪಡೆವರು, ಎಂಬ ಶ್ರುತಿಯು ಮಾಘಮಾಸದ ವಿಷಯದಲ್ಲಿ ಹೇಳುವುದೆಂದು ತಿಳಿಯಬೇಕು. ಇತರ ಮಾಸಗಳಲ್ಲಿ ಮರಣವನ್ನು ಹೊಂದಿದರೆ ಸ್ವರ್ಗಲೋಕ ಪ್ರಾಪ್ತಿಯಾಗುವುದು. ಆದಕಾರಣ ಈ ಮಾಸದಲ್ಲಿ ಮುಕ್ತಿಯನ್ನು ಅಪೇಕ್ಷಿಸುವವರು ದೇಹವನ್ನುತ್ಯಾಗಮಾಡಬೇಕು. ಅದಕ್ಕಾಗಿ ತಮ್ಮ ಶಕ್ತ್ಯನುಸಾರವಾಗಿ ಪ್ರಾಯಶ್ಚಿತ್ತವನ್ನು ಮಾಡಿಕೊಂಡು ತನಗೆ ಶ್ರಾದ್ಧಮಾಡತಕ್ಕ ಅಧಿಕಾರಿಗಳೊಬ್ಬರೂ ಇಲ್ಲದಿದ್ದರೆ ತನ್ನ ಜೀವಚ್ಛ್ರಾದ್ಧ (ಆತ್ಮಶ್ರಾದ್ಧ, ತನಗೆತಾನೇ ಶ್ರಾದ್ಧಮಾಡಿಕೊಳ್ಳುವುದು)ವನ್ನು ಸಪಿಂಡನಾನ್ತವಾಗಿ (ಸಾಪಿಂಡ್ಯ) ಮಾಡಿ, ಗೋದಾನ ಮೊದಲಾದ್ದನ್ನು ಮಾಡಿ, ಉಪವಾಸಮಾಡಿ,ಪಾರಣೆಯ ದಿನದಫಲವೂ ತನಗುಂಟಾಗುವಂತೆ ಸಂಕಲ್ಪಮಾಡಿಕೊಂಡು ವಿಷ್ಣುವನ್ನು ಧ್ಯಾನಮಾಡಿ,

ಗಂಗೆಯನ್ನು ಪ್ರವೇಶಿಸಬೇಕು. ಹೀಗೆಂಬ ಜೀವಚ್ಛ್ರಾದ್ಧ ಪ್ರಯೋಗವು ಕೌಸ್ತುಭದಲ್ಲಿದೆ.

--ತಿಲಸ್ನಾನಾದಿಗಳು--

ತಿಲಸ್ನಾನಾದಿಗಳು-ಮಾಘಮಾಸದಲ್ಲಿ“ತಿಲಸ್ನಾಯೀ ತಿಲೋದ್ವರ್ತೀ ತಿಲಹೋಮೀ ತಿಲೋದಕೀ । ತಿಲಭುಕ್ತಿಲದಾತಾಚ ಷಟ್ತಿಲಾಃ ಪಾಪನಾಶನಾಃ ॥೧॥” ಎಳ್ಳು ಕೂಡಿದ ನೀರಿನಲ್ಲಿ ಸ್ನಾನವೂ, ಎಳ್ಳನ್ನು ಅರೆದು ಮೈಗೆ ಸವರಿಕೊಳ್ಳುವುದೂ, ತಿಲಹೋಮವೂ, ತಿಲೋದಕದಿಂದ ದೇವರ ಪೂಜೆ, ಪಿತೃತರ್ಪಣ, ಸಂಧ್ಯಾವಂದನೆ, ಪಾನ, ಮೊದಲಾದುವನ್ನುಮಾಡುವುದೂ, ತಿಲದಾನ ಮಾಡುವುದೂ, ತಿಲಭಕ್ಷಣೆಯೂ ಈ ಆರೂ ಪಾಪನಾಶಕವಾದದ್ದು॥೧॥ “ಪ್ರಥಮೋಽಯುತಹೋಮಃ ಸ್ಯಾಲ್ಲಕ್ಷಹೋಮಸ್ತತಃ ಪರಂ। ಕೋಟಿ ಹೋಮಸ್ತೃತೀಯಸ್ತು ಸರ್ವಕಾಮಫಲಪ್ರದಃ॥೧॥” ತಿಲಹೋಮದಲ್ಲಿ,ಹತ್ತುಸಾವಿರ ಸಂಖ್ಯೆಯಿಂದ,ಲಕ್ಷಸಂಖ್ಯೆಯಿಂದ,ಕೋಟಿಸಂಖ್ಯೆಯಿಂದ, ಈ ಮೂರು ಬಗೆಗಳುಂಟು, ಕೋಟಿ ಹೋಮವು ಸಕಲ ಇಷ್ಟಾರ್ಥಗಳನ್ನೂ ಕೊಡತಕ್ಕದ್ದು ॥೧॥ ಯಜ್ಞಶಾಲೆ, ಯಜ್ಞಕುಂಡ, ಇವುಗಳನ್ನು ನಿರ್ಮಾಣಮಾಡುವ ವಿಧಾನದೊಡನೆ ಈ ಲಕ್ಷಹೋಮ ಮೊದಲಾದವುಗಳ ಪ್ರಯೋಗವು ಕೌಸ್ತುಭ, ಮಯೂಖ, ಮೊದಲಾದ ಗ್ರಂಥಗಳಲ್ಲಿದೆ. ಮಾಘಶುದ್ಧ ಚತುರ್ಥಿಯಲ್ಲಿ ಢುಂಢಿರಾಜನ (ಗಣಪತಿ) ಉದ್ದೇಶದಿಂದ, ನಕ್ತವ್ರತವೂ, ಪೂಜೆಯೂ, ಎಳ್ಳುಂಡೆ ಮೊದಲಾದವುಗಳ ನೈವೇದ್ಯವೂ, ತಿಲಭಕ್ಷಣೆಯೂ, ಮಾಡಬೇಕಾದದ್ದು ಈ ವ್ರತಕ್ಕೆ ಪ್ರದೋಷ ವ್ಯಾಪ್ತಿಯುಳ್ಳ ತಿಥಿಯನ್ನು ಗ್ರಹಿಸಬೇಕು. ಪ್ರದೋಷವ್ಯಾಪ್ತಿಯುಳ್ಳ ಈ ತಿಥಿಯಲ್ಲಿಯೇ ಕುಂದಪುಷ್ಪಗಳಿಂದ ಈಶ್ವರನನ್ನು ಪೂಜಿಸಿ ಉಪವಾಸವನ್ನು, ಅಥವಾ ನಕ್ತಭೋಜನವನ್ನು ಮಾಡಬೇಕು. ಇದರಿಂದ ಐಶ್ವರ್ಯಪ್ರಾಪ್ತಿಯಾಗುವುದು. ಈ ದಿನದಲ್ಲಿ ಮಾಡಬೇಕಾದ ವಿನಾಯಕ ವ್ರತಕ್ಕೆ ಭಾದ್ರಪದ ಶುದ್ಧ ಚತುರ್ಥಿಯಂತೆಯೇ ನಿರ್ಣಯವು, ಮಾಘ ಶುಕ್ಲಪಂಚಮಿಗೆ ವಸಂತಪಂಚಮಿ ಎಂದು ಹೆಸರು. ಆದಿನದಲ್ಲಿ ವಸಂತೋತ್ಸವವನ್ನಾರಂಭಿಸಬೇಕು. ಈ ಉತ್ಸವದಲ್ಲಿ ರತಿಮನ್ಮಥರನ್ನು

ಪೂಜಿಸಬೇಕು. ಇವಕ್ಕೆ ಎರಡನೆಯ ದಿನದಲ್ಲಿಯೇ ಪೂರ್ವಾಹ್ಣವ್ಯಾಪ್ತಿ ಇದ್ದರೆ ಪರತಿಥಿಯನ್ನೂ, ಇಲ್ಲದಿದ್ದರೆ ಮೊದಲನೆಯ ತಿಥಿಯನ್ನೂ ಗ್ರಹಿಸಬೇಕು.

---ರಥಸಪ್ತಮಿಯು---

ರಥಸಪ್ತಮಿ--ಮಾಘಶುದ್ಧ ಸಪ್ತಮಿಯು ರಥಸಪ್ತಮಿಯು, ಇದಕ್ಕೆ ಅರುಣೋದಯ ವ್ಯಾಪ್ತಿಯುಳ್ಳ ತಿಥಿಯನ್ನು ಗ್ರಹಿಸಬೇಕು. ಎರಡು ದಿನಗಳಲ್ಲಿ ಅರುಣೋದಯ ವ್ಯಾಪ್ತಿ ಇದ್ದರೆ ಮೊದಲ ತಿಥಿಯನ್ನೇ ಗ್ರಹಿಸಬೇಕು. ಐದೇ ಗಳಿಗೆ ಮೊದಲಾದ ಅಲ್ಪಕಾಲವುಳ್ಳ ಷಷ್ಠೀ, ಸಪ್ತಮೀ ಇವುಗಳು ಕ್ಷಯವಶದಿಂದ ಅರುಣೋದಯಕ್ಕಿಂತಲೂ ಮುಂಚೆ ಕಳೆದು ಹೋಗುವಹಾಗಿದ್ದರೆ, ಷಷ್ಠೀಯುಕ್ತವಾದ ಸಪ್ತಮಿಯನ್ನೇ ಗ್ರಹಿಸಬೇಕು ಆಗ-ಷಷ್ಠಿಗೆ ಸಪ್ತಮಿಯ ಕ್ಷಯದಗಳಿಗೆಗಳನ್ನು ಸೇರಿಸಿ ಅರುಣೋದಯದಲ್ಲಿ ಸ್ನಾನಮಾಡಬೇಕು. ಈ ವ್ರತದಲ್ಲಿ--ಷಷ್ಠಿಯಲ್ಲಿ ಏಕಭಕ್ತವನ್ನುಮಾಡಿ, ಸಪ್ತಮಿಯಲ್ಲಿ ಅರುಣೋದಯಕಾಲದಲ್ಲಿ ಸ್ನಾನಮಾಡಬೇಕು. "ಯದ್ಯಜ್ಜನ್ಮಕೃತಂ ಪಾಪಂ ಮಯಾ ಜನ್ಮಸು ಜನ್ಮಸು । ತನ್ಮೇರೋಗಂಚ ಶೋಕಂಚ ಮಾಕರೀ ಹಂತು ಸಪ್ತಮೀ ॥೧॥ ಏತಜ್ಜನ್ಮ ಕೃತಂಪಾಪಂ ಯಚ್ಚ ಜನ್ಮಾಂತರಾರ್ಜಿತಂ । ಮನೋವಾಕ್ಕಾಯಜಂ ಯಚ್ಚ ಜ್ಞಾತಾಜ್ಞಾತಂ ಚಯತ್ಪುನಃ ॥೨॥ ಇತಿ ಸಪ್ತವಿಧಂ ಪಾಪಂ ಸ್ನಾನಾನ್ಮೇ ಸಪ್ತಸಪ್ತಿತೇ । ಸಪ್ತವ್ಯಾಧಿ ಸಮಾಯುಕ್ತಂ ಹರ ಮಾ ಕರಿಸಪ್ತಮಿ ॥೩॥" ಸಪ್ತಮಿಯು, ಅನೇಕ ಜನ್ಮಗಳಲ್ಲಿ ನಾನು ಮಾಡಿದ ಪಾಪಗಳನ್ನೂ, ರೋಗಗಳನ್ನೂ, ದುಃಖವನ್ನೂ ಪರಿಹರಿಸಲಿ ॥೧॥ ನಾನು, ಈ ಜನ್ಮದಲ್ಲಿ, ಹಿಂದಣ ಜನ್ಮಗಳಲ್ಲಿ, ಮನಸ್ಸಿನಲ್ಲಿ, ವಾಕ್ಕಿನಲ್ಲಿ, ದೇಹದಲ್ಲಿ, ಜ್ಞಾನದಿಂದ, ಜ್ಞಾನವಿಲ್ಲದೆ, ಮಾಡಿರುವ ॥೨॥ ಈ ಏಳು ಬಗೆಯಾದ ಪಾಪಗಳನ್ನೂ, ಎಲೈ ರಥಸಪ್ತಮಿಯೇ ! ಈ ದಿನದಲ್ಲಿ ನಾನು ಮಾಡುವ ಸ್ನಾನದಿಂದ, ಏಳುವಿಧವಾದ ವ್ಯಾಧಿಗಳೊಡನೆ ಪರಿಹರಿಸಿ ಉದ್ಧರಮಾಡು ॥೩॥ "ಸಪ್ತಸಪ್ತಿ ವಹಪ್ರೀತ ಸಪ್ತಲೋಕ ಪ್ರದೀಪನ। ಸಪ್ತಮೀಸಹಿತೋದೇವ ಗೃಹಾಣಾರ್ಘ್ಯಂದಿವಾಕರ ॥೧॥" ಏಳು ಕುದುರೆಗಳುಳ್ಳ ರಥದಲ್ಲಿ ಸಂಚಾರ ಮಾಡುವವನಾಗಿಯೂ, ಸಪ್ತಲೋಕಗಳಗೂ

ಬೆಳಕನ್ನುಂಟುಮಾಡುವವನಾಗಿಯೂ ಇರುವ ಸೂರ್ಯನೇ! ಸಪ್ತಮಿಯೊಡನೆ ನೀನು ನಾನು ಕೊಡುವ ಅರ್ಘ್ಯವನ್ನು ಸ್ವೀಕರಿಸು ॥ ೧ ॥ ಎಂಬ ಮಂತ್ರದಿಂದ ಅರ್ಘ್ಯವನ್ನು ಕೊಡಬೇಕು ಈದಿನವು ಮನ್ವಾದಿಯು, ಇದು ಶುಕ್ಲಪಕ್ಷದ ಮನ್ವಾದಿಯಾದ್ದರಿಂದ ಪೂರ್ವಾಹ್ಣವ್ಯಾಪ್ತಿಯುಳ್ಳ ತಿಥಿಯನ್ನು ಗ್ರಹಿಸಬೇಕೆಂದು ಹಿಂದೆಯೇ ಹೇಳಿದೆ. ಮಾಘ ಶುಕ್ಲಾಷ್ಟಮಿಯು ಭೀಷ್ಮಾಷ್ಟಮಿಯು.

—ಭೀಷ್ಮಾಷ್ಟಮಿಯು.—

ಭೀಷ್ಮಾಷ್ಟಮಿ:—ಈದಿನದಲ್ಲಿ ಭೀಷ್ಮನನ್ನು ಕುರಿತು ಶ್ರಾದ್ಧ ಮಾಡುವವರಿಗೆ ಸಂತಾನವುಂಟಾಗುವುದು. ತರ್ಪಣಮಾಡಿದರೆ ಸಾಂವತ್ಸರ ಕೃತವಾದ ಪಾಪವು ಪರಿಹಾರವಾಗುವುದೆಂತಲೂ, ಮಾಡದಿದ್ದರೆ ಪುಣ್ಯ ನಾಶವುಂಟಾಗುವುದೆಂತಲೂ ಹೇಳಿರುವುದರಿಂದ ಇದು ನಿತ್ಯವಾಗಿಯೂ ಕಾಮ್ಯವಾಗಿಯೂ ಇರುವುದು. "ವೈಯಾಘ್ರಪದ್ಯಗೋತ್ರಾಯ ಸಾಂಕೃತ್ಯಪ್ರವರಾಯಚ । ಗಂಗಾಪುತ್ರಾಯ ಭೀಷ್ಮಾಯ ಆಜನ್ಮಬ್ರಹ್ಮಚಾರಿಣೇ ॥ ೧ ॥ ಅಪುತ್ರಾಯ ಜಲಂದದ್ಮಿ ನಮೋಭೀಷ್ಮಾಯ ವರ್ಮಣೇ । ಭೀಷ್ಮಃ ಶಾಂತನವೋವೀರಃ ಸತ್ಯವಾದೀಜಿತೇಂದ್ರಿಯಃ ॥ ೨ ॥ ಆಭಿರದ್ಭಿರವಾಪ್ನೋತು ಪುತ್ರಪೌತ್ರೋಚಿತಾಂ ಕ್ರಿಯಾಂ ॥ "ವ್ಯಾಘ್ರಪದ ಋಷಿಯಗೋತ್ರದಲ್ಲಿ, ಸಾಂಕೃತಿಯಪ್ರವರವುಳ್ಳವನಾಗಿ ಹುಟ್ಟಿ, ಗಂಗೆಯಪುತ್ರನಾಗಿಯೂ, ಮರಣಕಾಲದವರೆಗೂ ಬ್ರಹ್ಮಚರ್ಯವುಳ್ಳವನಾಗಿಯೂ ॥ ೧ ॥ ಮಕ್ಕಳಿಲ್ಲದವನಾಗಿಯೂ ಇರುವ ಭೀಷ್ಮಾಚಾರ್ಯನಿಗೆ ತರ್ಪಣವನ್ನು ಕೊಡುವೆನು. ಶಂತನು ಚಕ್ರವರ್ತಿಯ ಮಗನಾಗಿಯೂ, ಪರಾಕ್ರಮಿಯಾಗಿಯೂ, ಸತ್ಯವಾದಿಯಾಗಿಯೂ, ಜಿತೇಂದ್ರಿಯನಾಗಿಯೂ ಇರುವ ಭೀಷ್ಮನು ॥ ೨ ॥ ಈ ಉದಕಗಳಿಂದ, ಮಕ್ಕಳು ಮೊಮ್ಮಕ್ಕಳಿಂದಾಗಬೇಕಾದ ಕಾರ್ಯವನ್ನು ಪಡೆಯಲಿ ಎಂದು ಅಪಸವ್ಯದಲ್ಲಿ ತರ್ಪಣಮಾಡಿ, ಆಚಮನಮಾಡಿ, ಸವ್ಯದಲ್ಲಿ ಅರ್ಘ್ಯವನ್ನು ಕೊಡಬೇಕು. "ವಸೂನಾಮವತಾರಾಯ ಶಂತನೋರಾತ್ಮಜಾಯಚ। ಅರ್ಘ್ಯಂ ದದಾಮಿ ಭೀಷ್ಮಾಯ ಆಬಾಲ್ಯಬ್ರಹ್ಮಚಾರಿಣೇ॥ ೧ ॥"

ವಸುಗಳ ಅವತಾರಕಾರಣನಾಗಿಯೂ, ಶಂತನು ಪುತ್ರನಾಗಿಯೂ, ಬಾಲ್ಯದಿಂದಲೂ ಬ್ರಹ್ಮಚರ್ಯವ್ರತವುಳ್ಳವನಾಗಿಯೂ ಇರುವ ಭೀಷ್ಮನಿಗೆ ಅರ್ಘ್ಯವನ್ನು ಕೊಡುವೆನು ॥ ಎಂಬುದೇ ಅರ್ಘ್ಯಮಂತ್ರವು. ಈ ವಿಷಯದಲ್ಲಿ ಜೀವತ್ಪಿತೃಕನಿಗೆ ಅಧಿಕಾರವಿಲ್ಲವೆಂದು ಕೌಸ್ತುಭಕಾರನು. ಜೀವತ್ಪಿತೃಕನಿಗೂ ಅಧಿಕಾರವುಂಟೆಂಬುದು ಬಹುಜನಸಮ್ಮತವು. ಇಲ್ಲಿ ಶ್ರಾದ್ಧಾದಿಗಳನ್ನು ಏಕೋದ್ದಿಷ್ಟವಾಗಿ ಮಾಡಬೇಕಾದಕಾರಣ ಮಧ್ಯಾಹ್ನವ್ಯಾಪ್ತಿಯುಳ್ಳ ಅಷ್ಟಮಿಯನ್ನು ಗ್ರಹಿಸಬೇಕು. ಮಾಘ ಶುಕ್ಲದ್ವಾದಶಿಯಲ್ಲಿ ತಿಲೋತ್ಪತ್ತಿಯು (ಎಳ್ಳು ಹುಟ್ಟಿದ ದಿನವು) ಆದ್ದರಿಂದ ಈದಿನದಲ್ಲಿ ಉಪವಾಸಮಾಡಿ ತಿಲಸ್ನಾನ, ತಿಲದಿಂದ ವಿಷ್ಣುಪೂಜೆ, ಎಳ್ಳು ನೈವೇದ್ಯ, ಎಳ್ಳೆಣ್ಣೆಯ ದೀಪದಾನ, ತಿಲಹೋಮ, ತಿಲದಾನ, ತಿಲಭಕ್ಷಣ, ಇವುಗಳನ್ನೆಲ್ಲಾ ಮಾಡಬೇಕು.

## —ಮಾಘ ಪೌರ್ಣಮಿಯ ಕೃತ್ಯಗಳು—

ಮಾಘಪೂರ್ಣಿಮೆಯ ಕೃತ್ಯವು:—ಎರಡನೆಯ ಪೂರ್ಣಿಮೆಯನ್ನು ಗ್ರಹಿಸಬೇಕು. "ಏವಂ ಮಾಘಾವಸಾನೇತು ದೇಯಂಭೋಜ್ಯಮಮಾರಿತಂ । ಭೋಜಯೇದ್ದ್ವಿಜದಾಂಪತ್ಯಂ ಭೂಷಯೇದ್ವಸ್ತ್ರಭೂಷಣೈಃ॥೧॥" ಮಾಘಮಾಸದಕೊನೆಯಲ್ಲಿ ಭಕ್ಷ್ಯಭೋಜ್ಯಾದಿಗಳಿಂದ ಬ್ರಾಹ್ಮಣದಂಪತಿಗಳನ್ನು ಭೋಜನಮಾಡಿಸಿ, ವಸ್ತ್ರ, ಆಭರಣಾದಿಗಳಿಂದ ಅವರನ್ನು ಅಲಂಕರಿಸಬೇಕು ॥ ೧ ॥ ಕಂಬಳಿ, ಚರ್ಮ, ಕೆಂಪು ಬಟ್ಟೆ, ಅರಳೆತುಂಬಿದ ಹಾಸಿಗೆ (ಲೇಪು) ಜೋಡುಗಳು, ಮಗ್ಗುಲಹಾಸಿಗೆ, ಇವುಗಳನ್ನು ವಿಷ್ಣುಪ್ರೀತವಾಗಲೆಂದು ಹೇಳಿ ದಾನಮಾಡಬೇಕು. ನಾನು ಮಾಡಿದ ಮಾಘಸ್ನಾನವು ಸಾಂಗವಾಗುವುದಕ್ಕೆ ಉದ್ಯಾಪನೆಯನ್ನು ಮಾಡುವೆನೆಂದು ಸಂಕಲ್ಪಮಾಡಿ, "ಸವಿತ್ರೇ ಪ್ರಸವಿತ್ರೇಚ ಪರಂಧಾಮ ಜಲೇಮಮ । ತ್ವತ್ತೇಜಸಾ ಪರಿಭ್ರಷ್ಟಂಪಾಪಂ ಯಾತು ಸಹಸ್ರಧಾ ॥ ದಿವಾಕರಜಗನ್ನಾಥ ಪ್ರಭಾಕರ ನಮೋಸ್ತುತೇ । ಪರಿಪೂರ್ಣಂ ಕರಿಷ್ಯೇಹಂ ಮಾಘಸ್ನಾನಂ ತವಾಜ್ಞಯಾ ॥ ೨ ॥" ಮೊದಲನೆಯಮಂತ್ರಕ್ಕೆ ಹಿಂದೆಯೇ ಅರ್ಥವನ್ನು ಬರೆದಿದೆ ॥ ೧ ॥ ಎಲೈ ದಿವಾಕರನಾದ

ಸೂರ್ಯನೇ ! ನಾನು ನಿನ್ನಾಜ್ಞೆಯಿಂದ ಮಾಘಮಾಸವು ಪೂರಯಿಸುವ ವರೆಗೂ ಸ್ನಾನವನ್ನು ಮಾಡುವೆನು ॥ ೨ ॥ ಈಮಂತ್ರಗಳಿಂದ ಸಂಕಲ್ಪಮಾಡಬೇಕು. ಚತುರ್ದಶಿಯಲ್ಲಿ ಸಂಕಲ್ಪ, ಉಪವಾಸ, ಅಧಿವಾಸನ, ಮಾಧವಪೂಜೆಗಳನ್ನು ಮಾಡಿ, ಪೌರ್ಣಿಮಿಯಲ್ಲಿ ತಿಲ, ಚರು, ಆಜ್ಯಗಳಿಂದ ೧೦೮ ಹೋಮಗಳನ್ನುಮಾಡಿ 'ಸವಿತಃಪ್ರಸವಸ್ತ್ವಂಹಿ ಪರಂಧಾಮಜಲೇಮಮ । ತ್ವತ್ತೇಜಸಾ ಪರಿಭ್ರಷ್ಟಂಪಾಪಂಯಾತು ಸಹಸ್ರಧಾ ॥ ೧ ॥ ದಿವಾಕರಜಗನ್ನಾಥ ಪ್ರಭಾಕರನಮೋಸ್ತುತೆ । ಪರಿಪೂರ್ಣಂ ಕುರುಷ್ವೇಹ ಮಾಘಸ್ನಾನ ಮುಪಃಪತೇ ॥ ೨ ॥' ಈ ಮಂತ್ರಗಳಿಂದಎಳ್ಳುಸಕ್ಕರೆಗಳ ಹೂರಣವುಳ್ಳ ೩೦ ಕಡುಬುಗಳನ್ನು ದಾನ ಮಾಡಬೇಕು. ಅನಂತರದಲ್ಲಿ ದಂಪತಿಗಳಿಗೆ ಸೂಕ್ಷ್ಮವಸ್ತ್ರಗಳನ್ನೂ ಏಳುಧಾನ್ಯಗಳನ್ನೂ (ಗೋಧಿ ಮೊದಲಾದವು) ಕೊಟ್ಟು 'ಸೂರ್ಯೋಮೇ ಪ್ರಿಯತಾಂದೇವೋ ವಿಷ್ಣುಮೂರ್ತಿರ್ನಿರಂಜನಃ॥' ವಿಷ್ಣುರೂಪಿಯಾದ ಸೂರ್ಯನು ಸಂತುಷ್ಟನಾಗಲಿ. ॥ ಎಂದು ದಂಪತಿಗಳಿಗೂ ಬ್ರಾಹ್ಮಣರಿಗೂ ಷಡ್ರಸಗಳಿಂದ ಭೋಜನಮಾಡಿಸಬೇಕು. 'ಏವಂ ಮಾಘಪ್ಲವೀಯಾತಿ ಭಿತ್ವಾ ದೇವಂದಿವಾಕರಂ। ಪರಿವ್ರಾಡ್ಯೋಗ ಯುಕ್ತಶ್ಚ ರಣೇ ಚಾಭಿಮುಖೇಹತಃ ॥೧॥' ಹೀಗೆ ಮಾಘಸ್ನಾನಮಾಡಿದವನೂ ಸನ್ಯಾಸಿಯೂ, ಯೋಗನಿಷ್ಠನೂ, ಯುದ್ಧಮಾಡುತ್ತಾ ಸತ್ತವನೂ, ಸೂರ್ಯನನ್ನು ಭೇದಿಸಿಕೊಂಡು ಹೋಗಿ ಸದ್ಗತಿಯನ್ನು ಪಡೆಯುವರು. ॥ ೧ ॥ ಮಾಘಕೃಷ್ಣಾಷ್ಟಮಿಯಲ್ಲಿ ನಾಲ್ಕು ಅಷ್ಟಕೆಗಳನ್ನು ಮಾಡಲು ಶಕ್ತಿಯಿಲ್ಲದವನು ಪೂರ್ವೇದ್ಯುಃಶ್ರಾದ್ಧ, ಅನ್ವಷ್ಟಕ್ಯಶ್ರಾದ್ಧಗಳೊಡನೆ ಏಕಾಷ್ಟಕಾಶ್ರಾದ್ಧವನ್ನು ಮಾಡಬೇಕು. ಮೂರುದಿನಗಳಲ್ಲಿ ಶ್ರಾದ್ಧಮಾಡುವಶಕ್ತಿಯಿಲ್ಲದವನು ಅಷ್ಟಮಿಯಲ್ಲಿ ಏಕಾಷ್ಟಕವನ್ನು ಮಾಡಬೇಕು.

## —ಶಿವರಾತ್ರಿಯು—

ಶಿವರಾತ್ರಿಯು—ನಿಶೀಥವ್ಯಾಪ್ತಿಯುಳ್ಳ ತಿಥಿಯನ್ನು ಗ್ರಹಿಸಬೇಕು. ರಾತ್ರಿಯ ಎಂಟನೆಯ ಮುಹೂರ್ತವೇ ನಿಶೀಥೆಯು, ಎರ

ಡನೆಯ ದಿನದಲ್ಲಿಯೇ ಅರ್ಧರಾತ್ರವ್ಯಾಪ್ತಿ ಇದ್ದರೆ ಎರಡನೆಯದನ್ನೂ, ಪೂರ್ವದಿನದಲ್ಲಿಯೇ ವ್ಯಾಪ್ತಿ ಇದ್ದರೆ ಮೊದಲ ತಿಥಿಯನ್ನೂ ಗ್ರಹಿಸ ಬೇಕು. ಎರಡುದಿನಗಳಲ್ಲಿಯೂ ಅರ್ಧರಾತ್ರಿವ್ಯಾಪ್ತಿ ಇಲ್ಲದಿದ್ದರೆ ಎರ ಡನೆಯ ದಿನವನ್ನೇ ಗ್ರಹಿಸಬೇಕು. ಎರಡುದಿನಗಳಲ್ಲಿಯೂ ಸಂಪೂ ರ್ಣವಾಗಿಯೂ, ಅಥವಾ ಒಂದುಭಾಗಕ್ಕಾದರೂ ವ್ಯಾಪ್ತಿ ಇದ್ದರೆ ಪೂರ್ವತಿಥಿಯನ್ನೇ ಗ್ರಹಿಸಬೇಕೆಂದು ಹೇಮಾದ್ರಿಮತದಂತೆ ಕೌಸ್ತುಭ ದಲ್ಲಿ ಹೇಳಿದೆ. ಎರಡನೆಯ ದಿನದಲ್ಲಿಯೇ ಮಾಡಬೇಕೆಂದು ಮಾಧ ವ, ನಿರ್ಣಯಸಿಂಧು, ಪುರುಷಾರ್ಥಚಿಂತಾಮಣಿ ಮೊದಲಾದ ಅನೇಕ ಗ್ರಂಥಗಳಲ್ಲಿ ಹೇಳಿದೆ. ಎರಡನೆಯದಿನದಲ್ಲಿ ನಿಶೀಥದ ಒಂದು ಭಾಗಕ್ಕೆ ವ್ಯಾಪ್ತಿಇದ್ದು, ಪೂರ್ವದಿನದಲ್ಲಿ ಸಂಪೂರ್ಣವ್ಯಾಪ್ತಿಯು ಇದ್ದರೆ ಪೂರ್ವದಿನವನ್ನೇ ಗ್ರಹಿಸಬೇಕು. ಪೂರ್ವದಿನದಲ್ಲಿ ನಿಶೀಥದ ಒಂದು ಭಾಗಕ್ಕೆ ವ್ಯಾಪ್ತಿಯೂ, ಪರದಿನದಲ್ಲಿ ಸಂಪೂರ್ಣವ್ಯಾಪ್ತಿಯೂ, ಇದ್ದರೆ ಪರದಿನವನ್ನೇ ಗ್ರಹಿಸಬೇಕು. ಈ ವ್ರತಕ್ಕೆ ಭಾನುವಾರ ಮಂಗಳವಾರ ಯೋಗವೂ, ಶಿವನಾಮಯೋಗದ ಯೋಗವೂ ಇದ್ದರೆ ಪ್ರಶಸ್ತವು. ಪಾ ರಣೆಯ ನಿರ್ಣಯವು-ಮೂರು ಯಾಮಗಳಿಗಿಂತ ಮುಂಚೆ ಚತುರ್ದಶಿ ಮುಗಿದು ಹೋಗುವುದಾದರೆ ಚತುರ್ದಶಿಯ ಕೊನೆಯಲ್ಲಿ ಪಾರಣೆಯ ನ್ನು ಮಾಡಬೇಕು. ಮೂರುಯಾಮಕ್ಕಿಂತ ಹೆಚ್ಚಾಗಿ ಚತುರ್ದಶಿ ಇದ್ದರೆ ಪ್ರಾತಃಕಾಲದಲ್ಲಿ ಚತುರ್ದಶೀ ಮಧ್ಯದಲ್ಲಿಯೇ ಪಾರಣೆಎಂದು ಮಾಧವಾದಿ ಗ್ರಂಥಕಾರರು. ಯಾಮತ್ರಯಕ್ಕಿಂತ ಮುಂಚೆಯೇ ಚತು ರ್ದಶಿಯು ಕಳೆದು ಹೋಗುವದಾಗಿದ್ದರೂ, ಚತುರ್ದಶಿಯ ಮಧ್ಯದಲ್ಲಿ ಪಾರಣೆಯನ್ನು ಮಾಡಬೇಕಲ್ಲದೆ, ಚತುರ್ದಶಿಯ ಕೊನೆಯಲ್ಲಿ ಎಂದಿಗೂ ಪಾರಣೆಯನ್ನು ಮಾಡಕೂಡದೆಂದು ‹ಉಪೋಷಣಂ ಚತುರ್ದಶ್ಯಾಂ ಚತುರ್ದಶ್ಯಾಂ ಚ ಪಾರಣಂ । ಕೃತೈಸ್ಸುಕೃತಲಕ್ಷೈಸ್ತು ಲಭ್ಯತೇಯ ದಿವಾನವಾ ॥ ೧ ॥ ನಿರ್ಕ್ಷೇ ನಿರ್ಕ್ಷೇಫಲಂ ತಸ್ಯಶಕ್ತೋ ವಕ್ತುಂ ನವಾ ರ್ವತಿ ॥› ಚತುರ್ದಶಿಯಲ್ಲಿ ಉಪವಾಸವೂ ಅದೇ ಚತುರ್ದಶಿಯಲ್ಲಿಯೇ ಪಾರಣೆಯೂ ಅನೇಕಲಕ್ಷಪುಣ್ಯಗಳಿಂದ ದೊರೆಯಬೇಕಲ್ಲದೆ ಸಾಮಾ ನ್ಯಕ್ಕೆ ಸಿಕ್ಕಲಾರದು. ಆ ಪಾರಣೆಯಲ್ಲಿ ಒಂದೊಂದು ಅನ್ನದ ಅಗುಳಿಗೂ

ಉಂಟಾಗುವ ಫಲವನ್ನು ನನ್ನಿಂದ ವರ್ಣಿಸುವುದಕ್ಕೆ ಸಾಧ್ಯವಿಲ್ಲವೆಂದು ಪರಮೇಶ್ವರನು ಪಾರ್ವತಿಗೆ ಹೇಳಿದನು. ಎಂದು ನಿರ್ಣಯ ಸಿಂಧುವಿನಲ್ಲಿದೆ. ದ್ವಾದಶಿಯಲ್ಲಿ ಹೇಗೆಯೋ ಹಾಗೆ ಇಲ್ಲಿ ನಿತ್ಯಕರ್ಮವನ್ನು ಅಪಕರ್ಷಣೆ ಮಾಡಬಹುದೆಂಬ ವಚನವಿಲ್ಲದ್ದರಿಂದಲೂ, ತಿಥ್ಯನಂತರದಲ್ಲಿ ಪಾರಣೆಯನ್ನು ಮಾಡಬೇಕೆಂದು ವಿಧಿಸುವ ವಾಕ್ಯವಿರುವದರಿಂದಲೂ ಸಂಕಟವಿಷಯದಲ್ಲಿ ಜಲಪಾರಣೆಯನ್ನು ಮಾಡಬಹುದೆಂಬ ವಿಧಿವಚನವು ಇಲ್ಲಿಗೆ ಅನ್ವಯಿಸುವುದಿಲ್ಲವಾದ್ದರಿಂದಲೂ, ನಿತ್ಯಕರ್ಮವನ್ನೂ, ಪಾರಣೆಯನ್ನೂ ಮಾಡುವದಕ್ಕೆ ಸಾಕಾಗುವಷ್ಟು ಚತುರ್ದಶಿ ಇಲ್ಲದಿರುವಾಗಲೂ, ಶೇಷ (ಉಳಿದ) ಚತುರ್ದಶಿಯಲ್ಲಿ ದರ್ಶಾದಿಶ್ರಾದ್ಧಗಳ ಪ್ರಸಕ್ತಿಯುಂಟಾದಾಗಲೂ (ಮಾಡಬೇಕಾಗಿ ಬರುವಾಗ) ತಿಥ್ಯಂತದಲ್ಲಿ (ಕೊನೆ) ಪಾರಣೆಯೂ, ಕರ್ಮಕ್ಕೆ ತಕ್ಕಷ್ಟು ಕಾಲದವರೆಗೆ ಚತುರ್ದಶಿ ಇದ್ದು, ಶ್ರಾದ್ಧಾದಿ ಪ್ರಸಕ್ತಿ ಇಲ್ಲದಿರುವಾಗ ತಿಥಿಮಧ್ಯದಲ್ಲಿಯೇ ಪಾರಣೆಯೂ ನಡೆಸಬೇಕು.

## —ವ್ರತಪ್ರಯೋಗವು—

ವ್ರತಪ್ರಯೋಗವು:—ತ್ರಯೋದಶಿಯಲ್ಲಿ ಏಕಭುಕ್ತವನ್ನು ಮಾಡಿ, ಚತುರ್ದಶಿಯಲ್ಲಿ ನಿತ್ಯಕರ್ಮವನ್ನು ಮಾಡಿಕೊಂಡು ಪ್ರಾತಃಕಾಲದಲ್ಲಿ ಸಂಕಲ್ಪವನ್ನು ಮಾಡಬೇಕು. ಹೇಗೆಂದರೆ:- ‹ಶಿವರಾತ್ರಿ ವ್ರತಂ ಹ್ಯೇತತ್ಕರಿಷ್ಯೇಽಹಂ ಮಹಾಫಲಂ। ನಿರ್ವಿಘ್ನಮಸ್ತು ಮೇ ಚಾತ್ರ ತ್ವತ್ಪ್ರಸಾದಾಜ್ಜಗತ್ಪತೇ ॥ ೧ ॥ ಚತುರ್ದಶ್ಯಾಂ ನಿರಾಹಾರೋಭೂತ್ವಾ ಶಂಭೋಽಪರೇಹನಿ । ಭೋಕ್ಷ್ಯೇಽಹಂ ಭುಕ್ತಿಮುಕ್ತ್ಯರ್ಥಂ ಶರಣಂ ಮೇ ಭವೇಶ್ವರ ॥ ೨ ॥› ಎಲೈ ಜಗತ್ಪತಿಯಾದ ಈಶ್ವರನೇ ! ನಾನು ಈ ಮಹಾಫಲಪ್ರದವಾದ ಶಿವರಾತ್ರಿವ್ರತವನ್ನು ಮಾಡುವೆನು. ನಿನ್ನ ಅನುಗ್ರಹದಿಂದ ಇದು ನಿರ್ವಿಘ್ನವಾಗಿ ನಡೆಯಲಿ॥೧॥ ಈಶ್ವರನೇ ! ನಾನು ಚತುರ್ದಶಿಯಲ್ಲಿ ಉಪವಾಸಮಾಡಿ ಎರಡನೆಯದಿನದಲ್ಲಿ ಪಾರಣೆಯನ್ನು ಮಾಡುತ್ತೇನೆ. ಇಹಪರಲೋಕಗಳನ್ನು ಕೊಟ್ಟು ಕಾಪಾಡು ॥ ೨ ॥ ಬ್ರಾಹ್ಮಣನಾದರೆ—‹ರಾತ್ರಿಂ ಪ್ರಪದ್ಯೇ, ಮೊದಲಾದ ಎರಡು ಋಕ್ಕು

ಗಳನ್ನು ಹೇಳಿ ಉಪಕವನ್ನು ಬಿಡಬೇಕು. ಅನಂತರದಲ್ಲಿ ಸಾಯಂಕಾಲದಲ್ಲಿ ಕರಿಯ ಎಳ್ಳನ್ನು ಉಜ್ಜಿಕೊಂಡು ಸ್ನಾನಮಾಡಿ ಭಸ್ಮತ್ರಿಪುಂಡ್ರವನ್ನೂ, ರುದ್ರಾಕ್ಷಿಗಳನ್ನೂ ಧರಿಸಿ, ಪ್ರದೋಷಕಾಲಕ್ಕೆ ಶಿವಾಲಯಕ್ಕೆ ಹೋಗಿ ಪಾದಪ್ರಕ್ಷಾಳನ ಮಾಡಿಕೊಂಡು ಆಚಮನಮಾಡಿ ಉತ್ತರಮುಖನಾಗಿ ಕುಳಿತು,ದೇಶಕಾಲಗಳನ್ನು ಹೇಳಿಕೊಂಡು, ನಾಲ್ಕು ಯಾಮದಲ್ಲಿ ಪೂಜೆಯನ್ನು ಮಾಡುವುದಾಗಿದ್ದರೆ ,ಪ್ರಥಮಯಾಮ ಪೂಜಾಂಕರಿಷ್ಯೇ ಎಂತಲೂ, ಒಂದೇಸಾರಿ ಪೂಜೆಮಾಡ ವಹಾಗಿದ್ದರೆ ಶ್ರೀ ಶಿವಪ್ರೀತ್ಯರ್ಥಂ ಶಿವಪೂಜಾಂಕರಿಷ್ಯೇ ಎಂತಲೂ, ಸಂಕಲ್ಪ ಮಾಡಬೇಕು. ಸಾಮಾನ್ಯವಾಗಿ ಇಲ್ಲಿ ಪೂಜಾವಿಧಿಯನ್ನು ಹೇಳಿ, ಯಾಮ ಭೇದಗಳಲ್ಲಿ ಮಾಡಬೇಕಾದ ತಿಥಿಗಳನ್ನು ಮುಂದೆ ಹೇಳುವೆವು. ,ಅಸ್ಯ ಶ್ರೀಶಿವಪಂಚಾಕ್ಷರ ಮಹಾಮಂತ್ರಸ್ಯ, ವಾಮದೇವಋಷಿಃ, ಅನುಷ್ಟುಪ್ ಛಂದಃ,ಶ್ರೀಸದಾಶಿವದೇವತಾ ನ್ಯಾಸೇ, ಪೂಜನೇ ಜಪೇಚ ವಿನಿಯೋಗಃ, ವಾಮದೇವಋಷಯೇನಮಃ-ಶಿರಸಿ, ಅನುಷ್ಟುಪ್ ಛಂದಸೇನಮಃ-ಮುಖೇ,ಶ್ರೀಸದಾಶಿವದೇವತಾಯೈ ನಮಃ-ಹೃದಿ, ಓಂ,ನಂ ತತ್ಪುರುಷಾಯನಮಃ-ಹೃದಯೇ, ಓಂ, ಮಂ, ಅಘೋರಾಯನಮಃ-ಪಾದಯೋಃ, ಓಂ, ಶಿಂ,ಸದ್ಯೋಜಾತಾಯನಮಃ-ಗುಹ್ಯೇ, ಓಂ, ವಾಂ, ವಾಮದೇವಾಯನಮಃ,ಮೂರ್ಧ್ನಿ,ಓಂ,ಯಂ,ಈಶಾನಾಯ-ಮುಖೇ, ಓಂ,ಓಂ, ಹೃದಯಾಯ, ಓಂ, ನಂ, ಶಿರಸೇಸ್ವಾಹಾ, ಓಂ, ಮಂ, ಶಿಖಾಯೈ ವಷಟ್, ಓಂ, ಶಿಂ, ಕವಚಾಯಹುಂ, ಓಂ, ವಾಂ, ನೇತ್ರತ್ರಯಾಯವೌಷಟ್ ಓಂ, ಯಂ, ಅಸ್ತ್ರಾಯಫಟ್, ಎಂದು ನ್ಯಾಸಮಾಡಿಕೊಂಡು ಕಲಶಪೂಜೆಯನ್ನು ಮಾಡಿ, ,ಧ್ಯಾಯೇನ್ನಿತ್ಯಂ ಮಹೇಶಂ ರಜತಗಿರಿ ನಿಭಂ ಚಾರುಚಂದ್ರಾವತಂಸಂ ರತ್ನಾಕಲ್ಪೋಜ್ಜ್ವಲಾಂಗಂ ಪರಶುಮೃಗವರಾಭೀತಿಹಸ್ತಂಪ್ರಸನ್ನಂ । ಪದ್ಮಾಸೀನಂ ಸಮಂತಾತ್ ಸ್ತುತಮಮರಗಣೈರ್ವ್ಯಾಘ್ರಕೃತ್ತಿಂವಸಾನಂ ವಿಶ್ವಾದ್ಯಂ ವಿಶ್ವವಂದ್ಯಂ ನಿಖಿಲಭಯಹರಂ ಪಂಚವಕ್ತ್ರಂ ತ್ರಿನೇತ್ರಂ ॥ ೧ ॥' ಎಂಬ ಮಂತ್ರದಿಂದ ಧ್ಯಾನಮಾಡಿ, ಪ್ರಾಣಪ್ರತಿಷ್ಠೆಯನ್ನುಮಾಡಿ, ಇಟ್ಟುಕೊಂಡು, ಲಿಂಗವನ್ನು ಸ್ಪರ್ಶಮಾಡಿ, ಓಂಭೂಃ ಪುರುಷಂ ಸಾಂಬಸದಾಶಿವಮಾವಾಹಯಾಮಿ, ಓಂಭುವಃ

ಪುರುಷಂ - ಮಿ, ಓಂಸ್ವಃ ಪುರುಷಂ-ಮಿ, ಓಂಭೂರ್ಭುವಃಸ್ವಃ ಪುರುಷಂ-ಮಿ, ಎಂದು ಆವಾಹನೆ ಮಾಡಬೇಕು. 'ಸ್ವಾಮಿನ್ ಸರ್ವಜಗನ್ನಾಥ ಯಾವತ್ಪೂಜಾವಸಾನಕಂ । ತಾವತ್ತ್ವಂ ಪ್ರೀತಿಭಾವೇನ ಲಿಂಗೇಸ್ಮಿನ್ ಸನ್ನಿಧೌಭವ ॥ ೧ ॥' ಎಲೈ ಜಗತ್ಪತಿಯಾದ ಪರಮೇಶ್ವರನೇ! ನಾನುಮಾಡುವ ಪೂಜೆಮುಗಿಯುವ ವರಿಗೂ ಪ್ರೀತಿಯಿಂದ ಈ ಲಿಂಗದಲ್ಲಿ ನಿಂತು ನನ್ನ ಸಮೀಪದಲ್ಲಿರು ॥ ೧ ॥ ಎಂದು ಪುಷ್ಪಾಂಜಲಿಯನ್ನು ಅರ್ಪಿಸಬೇಕು. ಸ್ಥಿರಲಿಂಗ (ನೆಟ್ಟ) ದಲ್ಲಿಯೂ, ಸಂಸ್ಕಾರವನ್ನು ಮಾಡಿರುವ ಚರಲಿಂಗದಲ್ಲಿಯೂ (ಮಾಡಿದ್ದು) ಪ್ರಾಣಪ್ರತಿಷ್ಠೆಯಿಂದ ಆವಾಹನೆಯುವರಗೂ ಮಾಡಕೂಡದು. 'ಓಂ, ಸದ್ಯೋಜಾತಂ ಪ್ರಪದ್ಯಾಮಿ ಸದ್ಯೋಜಾತಾಯವೈ ನಮೋನಮಃ । ಓಂನಮಃಶಿವಾಯಶ್ರೀಸಾಂಬಸದಾಶಿವಾಯನಮಃ ಆಸನಂ ಸಮರ್ಪಯಾಮಿ., ಶೂದ್ರನಾದರೆ-ಓಂನಮಃ ಶಿವಾಯ ಎಂಬ ಪಂಚಾಕ್ಷರಿಗೆ ಬದಲಾಗಿ ಶ್ರೀಶಿವಾಯನಮಃ ಎಂಬೀ ನಮೋನ್ತವಾದ ಮಂತ್ರದಿಂದ ಪೂಜಿಸಬೇಕು. 'ಓಂ. ಭವೇಭವೇ ನಾತಿಭವೇಭವಸ್ವಮಾಂ. ಓಂನಮಃಶಿವಾಯ ಶ್ರೀಸಾಂಬಸದಾಶಿವಾಯನಮಃ ಪಾದ್ಯಂ । ಓಂ ಭವೋದ್ಭವಾಯನಮಃ, ಓಂ ನಮಃ ಶಿವಾಯ ಅರ್ಘ್ಯಂ । ಓಂ ವಾಮದೇವಾಯ ಆಚಮನಂ । ಜ್ಯೇಷ್ಠಾಯ-ಸ್ನಾನಂ । ಮೂಲಮಂತ್ರದಿಂದಲೂ 'ಆಪ್ಯಾಯಸ್ವ, ಮೊದಲಾದವುಗಳಿಂದಲೂ ಪಂಚಾಮೃತಸ್ನಾನಮಾಡಿಸಿ, 'ಆಪೋಹಿಷ್ಠಾ, ಮೊದಲಾದ ಮೂರು ಮಂತ್ರಗಳಿಂದ ಶುದ್ಧೋದಕದಲ್ಲಿ ತೊಳೆದು, ಹನ್ನೊಂದು ಸಾರಿ ಅಥವಾ ಒಂದುಸಾರಿ ರುದ್ರದಿಂದಲೂ, ಪುರುಷಸೂಕ್ತದಿಂದಲೂ, ಚಂದನ, ಕುಂಕುಮಕೇಸರ ಪಚ್ಚಕರ್ಪೂರ ಮಿಶ್ರವಾದ ಜಲದಲ್ಲಿ ಅಭಿಷೇಕಮಾಡಿ, ಸ್ನಾನಾನಂತರದಲ್ಲಿ, ಓಂನಮಃ ಶಿವಾಯ, ಎಂದು ಆಚಮನವನ್ನು ಕೊಟ್ಟು, ತಿಲಾಕ್ಷತೆಯೊಡನೆ ತರ್ಪಣವನ್ನು ಮಾಡಬೇಕು. ೧ ಓಂಭವಂದೇವಂ ತರ್ಪಯಾಮಿ, ೨ ಶರ್ವಂದೇವಂ, ೩ ಈಶಾನಂ, ೪ ಪಶುಪತಿಂ, ೫ ಉಗ್ರಂ, ೬ ರುದ್ರಂ, ೭ ಭೀಮಂ, ೮ ಮಹಾನ್ತಂ, ಭವಸ್ಯದೇವಸ್ಯ ಪತ್ನೀಂ ತರ್ಪಯಾಮಿ, ಶರ್ವಸ್ಯ ದೇವಸ್ಯ, ಈಶಾನಸ್ಯ, ಪಶುಪತೇಃ, ರುದ್ರಸ್ಯ, ಭೀಮಸ್ಯ, ಮಹತೋದೇ

ವಸ್ಯ ಪತ್ನೀಂ ತರ್ಪಯಾಮಿ, ಎಂದು ತರ್ಪಣವಮಾಡಿ,ಓಂ ಜ್ಯೇಷ್ಠಾಯ-ವಸ್ತ್ರಂ । ಮೂಲಮಂತ್ರದಿಂದ ಆಚಮನವು । ಓಂ ರುದ್ರಾಯ - ಯಜ್ಞೋಪವೀತಂ। ಆಚಮನಂ। ಓಂ ಕಾಲಾಯ-ಚಂದನಂ। ಓಂ ಕಲವಿಕರಣಾಯ - ಅಕ್ಷತಾನ್ । ಓಂ ಬಲವಿಕರಣಾಯ-ಪುಷ್ಪಾಣಿ । ಸಾವಿರ ಅಥವಾ ನೂರೆಂಟು ಬಿಲ್ವಪತ್ರಗಳನ್ನು ಸಹಸ್ರನಾಮಾದಿಗಳಿಂದ ಅಥವಾ ಮೂಲಮಂತ್ರದಿಂದ ಪೂಜಿಸಬೇಕು. ಓಂ ಬಲಾಯ-ಧೂಪಂ । ಓಂ ಬಲಪ್ರಮಥನಾಯ-ದೀಪಂ । ಓಂ ಸರ್ವಭೂತದಮನಾಯ-ನೈವೇದ್ಯಂ। ಮೂಲಮಂತ್ರೇಣ ಆಚಮನಂ ಫಲಂಚ । ಓಂ ಮನೋನ್ಮನಾಯ-ತಾಂಬೂಲಂ । ವೈದಿಕ ಮಂತ್ರಗಳಿಂದ ನೀರಾಜನವು । ‘ಈಶಾನಃಸರ್ವವಿದ್ಯಾನಾಮೀಶ್ವರಃ ಸರ್ವಭೂತಾನಾಂ ಬ್ರಹ್ಮಾಧಿಪತಿ ಬ್ರಹ್ಮಣೋಧಿಪತಿ ಬ್ರಹ್ಮಾಶಿವೋಮೇ ಅಸ್ತು ಸದಾಶಿವೋಂ।’ ಮಂತ್ರಪುಷ್ಪಂ। ಭವಾಯ ದೇವಾಯನಮಃ ಮೊದಲಾದ ಎಂಟು,ಭವಸ್ಯದೇವಸ್ಯಪತ್ನ್ಯೈ ಮೊದಲಾದ ಎಂಟು ನಮಸ್ಕಾರಗಳನ್ನು ಮಾಡಿ,ಶಿವಾಯ।ರುದ್ರಾಯ।ಪಶುಪತಯೇ। ನೀಲಕಂಠಾಯ।ಮಹೇಶ್ವರಾಯ । ಹರಿಕೇಶಾಯ । ವಿರೂಪಾಕ್ಷಾಯ । ಪಿನಾಕಿನೇ।ತ್ರಿಪುರಾಂತಕಾಯ। ಶಂಭವೇ।ಶೂಲಿನೇ। ಮಹಾದೇವಾಯ ನಮಃ । ಎಂಬ ಹನ್ನೆರಡು ನಾಮಮಂತ್ರಗಳಿಂದ ಪುಷ್ಪಾಂಜಲಿಗಳನ್ನು ಸಮರ್ಪಿಸಿ ಮೂಲಮಂತ್ರದಿಂದ ಪ್ರದಕ್ಷಿಣೆಗಳನ್ನೂ ನಮಸ್ಕಾರಗಳನ್ನುಮಾಡಿ, ಮೂಲಮಂತ್ರದಿಂದ ೧೦೮ ಜಪವನ್ನು ಮಾಡಿ ಕ್ಷಮಾಪಣೆಯನ್ನು ಬೇಡಿಕೊಂಡು, ಪೂಜಾಸಮರ್ಪಣೆಯನ್ನು ಮಾಡಬೇಕು.

### —ನಾಲ್ಕು ಯಾಮದಲ್ಲಿ ನಾಲ್ಕು ಪೂಜೆಗಳು—

ನಾಲ್ಕುಯಾಮದಲ್ಲೂಪೂಜೆಗಳು:-ಪ್ರಥಮಯಾಮದಲ್ಲಿಮೂಲಮಂತ್ರಾನಂತರದಲ್ಲಿ-ಶ್ರೀಶಿವಾಯನಮಃ ಆಸನಂ। ಎಂದು ಶಿವನಾಮದೊಡನೆಷೋಡಶೋಪಚಾರಪೂಜೆಮಾಡಬೇಕು. ದ್ವಿತೀಯ ಯಾಮದಲ್ಲಿ-ಶಿವರಾತ್ರಿಯಲ್ಲಿ ಎರಡನೆಯ ಯಾಮದ ಪೂಜೆಯನ್ನು ಮಾಡುತ್ತೇನೆಂದು ಸಂಕಲ್ಪಮಾಡಿ ಶ್ರೀಶಂಕರಾಯ ನಮಃ ಎಂದು ಶಂಕರನಾಮದಿಂದ ಪೂಜೆಯು. ಮೂರನೆಯ ಯಾಮದಲ್ಲಿ ಮಹೇಶ್ವರನಾಮದಿಂದ,ನಾಲ್ಕನೆಯಯಾಮದಲ್ಲಿ

ರುದ್ರನಾಮದಿಂದ ಪೂಜಿಸಬೇಕು. ಪ್ರತಿಯಾಮದಲ್ಲಿಯೂ, ತೈಲಾಭ್ಯಂಗ (ಎಣ್ಣೆಯೊತ್ತುವುದು) ಪಂಚಾಮೃತ, ಬಿಸಿನೀರು, ಶುದ್ಧೋದಕ, ಗಂಧೋದಕಗಳಿಂದಭಿಷೇಕಮಾಡಬೇಕು ಯಜ್ಞೋಪವೀತಾನಂತರದಲ್ಲಿ ಗೋರೋಚನ, ಕಸ್ತೂರಿ, ಕುಂಕುಮ ಕೇಸರ, ಪಚ್ಚಕರ್ಪೂರ, ಅಗರು, ಚಂದನ, ಇವುಗಳ ಮಿಶ್ರಗಂಧದಿಂದ ಲಿಙ್ಗಕ್ಕೆ ಅನುಲೇಪನ (ಸವರುವುದು) ಮಾಡಬೇಕು. ಎಲ್ಲಾ ಅನುಲೇಪದ ಗಂಧವೂ ೨೪ ಪಲ ಪ್ರಮಾಣವಿರಬೇಕು. ಇಲ್ಲದಿದ್ದರೆ ಶಕ್ತ್ಯನುಸಾರವಿರಬಹುದು. ದತ್ತೂರ, ಕಣಿಗಿಲೆ ಹೂಗಳಿಂದಲೂ, ಬಿಲ್ವಪತ್ರೆಯಿಂದಲೂ, ಪೂಜೆಮಾಡುವುದು ಉತ್ಕೃಷ್ಟವಾದದ್ದು. ಹೂಗಳಿಲ್ಲದಿದ್ದರೆ ಭತ್ತ, ಅಕ್ಕಿ, ಯವೆ, ಗೋಧಿ, ಇವುಗಳಿಂದ ಪೂಜಿಸಬಹುದು. ನೈವೇದ್ಯವಾದಮೇಲೆ ತಾಂಬೂಲವನ್ನೂ ಮುಖವಾಸನೆಯನ್ನೂ ಮಾಡಬೇಕೆಂದು ಹೇಳಿದೆ ವೀಳಯದೆಲೆ, ಅಡಕೆ ಮೊದಲಾದವುಗಳು, ಸುಣ್ಣ ಈ ಮೂರಕ್ಕೆ ತಾಂಬೂಲವೆಂಬ ಸಂಜ್ಞೆಯು. ಇದೇ ಕೊಬರಿ, ಪಚ್ಚಕರ್ಪೂರ, ಏಲಕ್ಕಿ, ಲವಂಗಗಳಿಂದ ಕೂಡಿದರೆ ಮುಖವಾಸವೆಂಬ ಸಂಜ್ಞೆಯು. ಇವುಗಳಲ್ಲಿ ಇಲ್ಲದವಸ್ತುವನ್ನು ಸ್ಮರಿಸಿಕೊಳ್ಳತಕ್ಕದ್ದು. ಪೂಜೆಯೆಲ್ಲವೂ ಮುಗಿದಮೇಲೆ "ನಿತ್ಯಂನೈಮಿತ್ತಿಕಂ ಕಾಮ್ಯಂ ಯತ್ಕೃತಂತು ಮಯಾಶಿವ। ತತ್ಸರ್ವಂ ಪರಮೇಶ್ವನಮಯಾತುಭ್ಯಂ ಸಮರ್ಪಿತಂ ॥೧॥ ಎಲೈ ಪರಮೇಶ್ವರನೇ ನಾನು ಮಾಡಿರುವ ನಿತ್ಯ, ನೈಮಿತ್ತಿಕ, ಕಾಮ್ಯ ವ್ರತಗಳೆಲ್ಲವನ್ನೂ ನಿನಗೆ ಸಮರ್ಪಿಸಿದ್ದೇನೆ ॥೧॥" ಎಂದು ಪ್ರಾರ್ಥಿಸಬೇಕು. "ಶಿವರಾತ್ರಿವ್ರತಂದೇವ ಪೂಜಾಜಪ ಪರಾಯಣಃ। ಕರೋಮಿ ವಿಧಿವದ್ದತ್ತಂ ಗೃಹಾಣಾರ್ಘ್ಯಂನಮೋಸ್ತುತೇ ॥೧॥" ಎಲೈ ದೇವನೇ ನಿನ್ನಪೂಜೆ ಜಪಗಳಲ್ಲಿಯೇ ಮನಸ್ಸುಳ್ಳವನಾಗಿ ವ್ರತವನ್ನು ಮಾಡಿ ನಾನು ಕೊಟ್ಟ ಅರ್ಘ್ಯವನ್ನು ಸ್ವೀಕರಿಸು ॥೧॥ ಹೀಗೆ ನಾಲ್ಕುಯಾಮಗಳಲ್ಲಿಯೂ ಮಾಡಬೇಕಾದ ಬೇರೆಬೇರೆ ಅರ್ಘ್ಯಭೇದಗಳು ಕೌಸ್ತುಭದಲ್ಲಿವೆ. ಬೆಳಗ್ಗೆ ಸ್ನಾನಮಾಡಿ ಪುನಃ ಶಿವಪೂಜೆಯನ್ನು ಮಾಡಿ ಹಿಂದೆ ಹೇಳಿದ ದ್ವಾದಶನಾಮಗಳಿಂದ ೧೨ ಜನ ಬ್ರಾಹ್ಮಣರನ್ನು ಅಥವಾ ಶಕ್ತಿ ಇಲ್ಲದಿದ್ದರೆ ಒಬ್ಬನನ್ನಾಗಲಿ ಪೂಜಿಸಿ, ಎಳ್ಳನ್ನವನ್ನು ತುಂಬಿದ ೧೨ ಪಾತ್ರೆಗಳನ್ನು ಅಥವಾ ಒಂದು ಪಾತ್ರೆಯನ್ನು

ಗಲಿ ದಾನವಾಡಿ, ವ್ರತಸಮರ್ಪಣೆಯನ್ನು ಮಾಡಬೇಕು. "ಯನ್ಮಯಾ ದ್ಯಕೃತಂ ಪುಣ್ಯಂ ತದ್ರುದ್ರಸ್ಯ ನಿವೇದಿತಂ । ತ್ವತ್ಪ್ರಸಾದಾನ್ಮಹಾದೇವ ವ್ರತಮದ್ಯ ಸಮರ್ಪಿತಂ ॥೧॥ ಪ್ರಸನ್ನೋಭವಮೇ ಶ್ರೀಮನ್ಸದ್ಗತಿಃ ಪ್ರತಿಪದ್ಯತಾಂ । ತ್ವದಾಲೋಕನಮಾತ್ರೇಣ ಪವಿತ್ರೋಽಸ್ಮಿ ನ ಸಂಶಯಃ॥" ಎಲೈ ಮಹಾದೇವನೇ ಈಗ ನಾನು ಮಾಡಿರುವ ಪುಣ್ಯಕರವಾದ ವ್ರತವನ್ನು ನಿನ್ನ ಅನುಗ್ರಹಕ್ಕಾಗಿ ನಿನಗೆ ಸಮರ್ಪಿಸಿರುವೆನು. ॥೧॥ ನಿನ್ನ ದರ್ಶನದಿಂದಲೇ (ನೀನು ನನ್ನನ್ನು ನೋಡಿದ್ದರಿಂದ) ನಾನು ಪರಿಶುದ್ಧನಾದೆನು. ನನ್ನಲ್ಲಿ ಅನುಗ್ರಹಮಾಡಿ ಸದ್ಗತಿಯನ್ನುಂಟುಮಾಡು ॥೨॥ ಅನಂತರದಲ್ಲಿ ಬ್ರಾಹ್ಮಣಭೋಜನವನ್ನು ಮಾಡಿಸಿ ಕ್ಲುಪ್ತಕಾಲಕ್ಕೆ ಸರಿಯಾಗಿ ಬಂಧುಗಳೊಡನೆ ಪಾರಣೆಯನ್ನು ಮಾಡಬೇಕು. ಪಾರಣೆಗೆ ಮಂತ್ರವು "ಸಂಸಾರ ಕ್ಲೇಶದಗ್ಧಸ್ಯವ್ರತೇನಾನೇನ ಶಂಕರ। ಪ್ರಸೀದ ಸುಮುಖೋ ನಾಥ ಜ್ಞಾನದೃಷ್ಟಿಪ್ರದೋಭವ ॥೧॥" ಎಲೈ ಶಂಕರನೇ! ಸಂಸಾರ ಕಷ್ಟದಿಂದ ತಪ್ತನಾದ ನಾನು ಮಾಡಿದ ಈಶಿವರಾತ್ರಿವ್ರತದಿಂದ ನನ್ನಲ್ಲಿ ಪ್ರಸನ್ನನಾಗಿ ಜ್ಞಾನವನ್ನು ಉಂಟುಮಾಡು ॥೧॥ ಇಂತು ಶಿವರಾತ್ರಿವ್ರತವಿಧಿಯು.

## — ಪಾರ್ಥಿವಲಿಂಗಪೂಜೆಯು —

ಪಾರ್ಥಿವಲಿಙ್ಗಪೂಜೆ—ಮಣ್ಣಿನಿಂದ ಮಾಡಿದ ಲಂಗವನ್ನು ಪೂಜಿಸುವ ವಿಧಾನವು-ಓಂ ಹರಾಯನಮಃ. ಎಂಬ ಮಂತ್ರದಿಂದ ಮಣ್ಣನ್ನು ತರಬೇಕು. ಅದನ್ನು ಶೋಧಿಸಿ ನೀರನ್ನು ಹಾಕಿ ಮಿದಿದು ಮುದ್ದೆಕಟ್ಟಿ ಅದರಿಂದ ಓಂ ಮಹೇಶ್ವರಾಯನಮಃ. ಎಂಬ ಮಂತ್ರದಿಂದ ಲಿಙ್ಗವನ್ನು ಮಾಡಬೇಕು. ಆ ಲಿಂಗವು ೪೦ ಗುಲಗಂಜಿ ತೂಕವುಳ್ಳ ಕರ್ಷವೆಂಬ ತೂಕಕ್ಕೆ ಹೆಚ್ಚಾದ ತೂಕವುಳ್ಳದ್ದಾಗಿಯೂ, ಅಂಗುಷ್ಠದ (ಹೆಬ್ಬೆರಲು) ಉದ್ದ, ಅಥವಾ ಅದಕ್ಕಿಂತ ಹೆಚ್ಚು ಉದ್ದವಾಗಿಯೂ ಇರಬೇಕಲ್ಲದೆ ಅದಕ್ಕೆ ಕಡಮೆಯಾಗಿರಕೂಡದು. ಮಣ್ಣಿನ ಲಿಂಗಕ್ಕೆ ಪಂಚಸೂತ್ರ (ಐದು ಸೂತ್ರಗಳು) ಗಳಗೆ ತಕ್ಕಂತೆ ಇಲ್ಲದಿದ್ದರೂ ದೋಷವಿಲ್ಲ. ಅದರಿಂದಲೇ "ಸಪ್ತಕೃತ್ವ ಸ್ತುಲಾರೂಢಂ ವೃದ್ಧಿಮೇತಿ ನ ಹೀಯತೇ। ಬಾಣಲಿಙ್ಗಮಿತಿಪ್ರೋಕ್ತಂ ಶೇಷಂ ನಾರ್ಮದ ಮುಚ್ಯತೇ ॥೧॥ ಏಳುಸಾರಿ ತಕ್ಕಡಿಯ

ಲಿಟ್ಟು ತೂಗಿದರೆ ತೂಕವು ಹೆಚ್ಚಾಗುತ್ತ ಬಂದು ಕಡಿಮೆಯಾಗದಿದ್ದರೆ ಅಂತಹ ಲಿಂಗಕ್ಕೆ ಬಾಣಲಿಂಗವೆಂದು ಹೆಸರು. ಉಳಿದುವು ನಾರ್ಮದಗಳು (ನರ್ಮದೆಯಲ್ಲಿ ಸಿಕ್ಕುವುದು) ಎಂಬ ಲಕ್ಷಣಕ್ಕೆ ಸರಿಯಾಗಿರುವ ಬಾಣ ಲಿಂಗವು ಸಿಕ್ಕುವುದು ಅಸಾಧ್ಯವಾದ್ದರಿಂದಲೂ, ಸುವರ್ಣಾದಿಗಳಲ್ಲಿ ಮಾಡಿ ಸುವ ಲಿಂಗಕ್ಕೆ ಪಂಚಸೂತ್ರವು ಸರಿಯಾಗಿರುವುದು ಅಸಾಧ್ಯವಾದ್ದರಿಂದ ಲೂ, ಮೃಣ್ಮಯಲಿಂಗವು 'ದ್ವಾಪರೇ ಪಾರದಂ ಶ್ರೇಷ್ಠಂ ಪಾರ್ಥಿವಂತು ಕಲೌಯುಗೇ' ದ್ವಾಪರಯುಗದಲ್ಲಿ ಪಾದರಸದಲ್ಲಿ ಮಾಡಿದ್ದು, ಕಲಿಯು ಗದಲ್ಲಿ ಮಣ್ಣಿನಲ್ಲಿ ಮಾಡಿದುದೂ ಉತ್ತಮವು; ಎಂದು ವಚನವಿರು ವುದರಿಂದಲೂ, ಎಲ್ಲಕ್ಕಿಂತಲೂ ಶ್ರೇಷ್ಠವಾದ ಆಮೃಣ್ಮಯ ಲಿಙ್ಗವ ನ್ನು ತೆಗೆದುಕೊಂಡು 'ಓಂಶೂಲಪಾಣಯೇನಮಃ. ಎಂಬಮಂತ್ರದಿಂದ ಶಿವನೇ, ನೀನು ಇಲ್ಲಿ ಸ್ಥಿರನಾಗಿರು. ಎಂದು ಪೂಜಾಪೀಠದಲ್ಲಿ ಬಿಲ್ವಾರೆ ತ್ರಗಳನ್ನು ಹಾಸಿ, ಅದರಮೇಲೆ ಇಡಬೇಕು. 'ಧ್ಯಾಯೇನ್ನಿತ್ಯಂ ಮ ಹೇಶಂ' ಎಂಬ ಮಂತ್ರದಿಂದ ಧ್ಯಾನಿಸಿ, 'ಓಂಪಿನಾಕಧೃತೇನಮಃ' ಎಂಬ ವ ಂತ್ರದಿಂದ ಎಲೈ ಸಾಂಬಸದಾಶಿವನೇ! ಇಲ್ಲಿ ದಯೆಮಾಡು ಇಲ್ಲಿ ನಿ ಲ್ಲು, ಇಲ್ಲಿ ಸನ್ನಿಧಿಯನ್ನು ಕಲ್ಪಿಸು ; ಎಂದು ಆವಾಹನೆ ಮಾಡಬೇಕು. ಬ್ರಾಹ್ಮಣರಿಗೆ ಎಲ್ಲಾ ಸಂದರ್ಭಗಳಲ್ಲಿಯೂ ಮೂಲಮಂತ್ರ ವುಂಟು, ಓಂ ನಮಃಶ್ಶಿವಾಯ, ಎಂಬ ಮೂಲಮಂತ್ರದಿಂದ ಪಾದ್ಯ. ಅರ್ಘ್ಯ, ಆಚಮನ ಗಳನ್ನು ಕೊಟ್ಟು. ಪಶುಪತಯೇ ನಮಃ, ಎಂದು, ಸ್ನಾನ, ವಸ್ತ್ರ, ಉಪ ವೀತ, ಗಂಧ, ಪುಷ್ಪ, ಧೂಪ, ದೀಪ, ನೈವೇದ್ಯ, ಫಲ, ತಾಂಬೂಲ, ನೀರಾ ಜನ, ಮಂತ್ರ ಪುಷ್ಪ; ಮೊದಲಾದವುಗಳನ್ನು ಕೊಟ್ಟು, ಶರ್ವಾಯ ಕ್ಷಿತಿ ಮೂರ್ತಯೇ ನಮಃ, ಎಂದು ಪೂರ್ವದಿಕ್ಕಿನಲ್ಲಿ ಪೂಜಿಸಬೇಕು. ಹೀಗೆ ಯೇ ಭವಾಯ ಜಲಮೂರ್ತಯೇ-ಈಶಾನ್ಯದಲ್ಲಿ, ರುದ್ರಾಯ ಅಗ್ನಿಮೂ ರ್ತಯೇ-ಉತ್ತರದಲ್ಲಿ, ಉಗ್ರಾಯ ವಾಯುಮೂರ್ತಯೇ-ವಾಯವ್ಯದಲ್ಲಿ, ಭೀಮಾಯ ಆಕಾಶಮೂರ್ತಯೇ-ಪಶ್ಚಿಮದಲ್ಲಿ, ಪಶುಪತಯೇ, ಯಜಮಾ ನಮೂರ್ತಯೇ, ನೈಋತಿಯಲ್ಲಿ, ಮಹಾದೇವಾಯ, ಸೋಮಮೂರ್ತ ಯೇ - ದಕ್ಷಿಣದಲ್ಲಿ, ಈಶಾನಾಯ, ಸೂರ್ಯಮೂರ್ತಯೇ ನಮಃ- ಆಗ್ನೇ ಯದಿಕ್ಕಿನಲ್ಲಿ, ಹೀಗೆ ಎಂಟುದಿಕ್ಕುಗಳಲ್ಲಿಯೂ, ಈಶ್ವರನ ಅಷ್ಟಮೂ

ರ್ತಿಗಳನ್ನು ಪೂಜಿಸಿ, ಸ್ತೋತ್ರ, ನಮಸ್ಕಾರಗಳನ್ನು ಮಾಡಿ, ಮಹಾದೇವಾಯನಮಃ-ಎಂದು ವಿಸರ್ಜನೆ ಮಾಡಬೇಕು. ಇದು ಸಂಕ್ಷೇಪಪೂಜಾ ವಿಧಿಯು, ವಿಸ್ತಾರವು ಪುರುಷಾರ್ಥಚಿಂತಾಮಣಿಯಲ್ಲಿದೆ, ಶಿವರಾತ್ರಿಯಾದರೆ ಹಿಂದೆಹೇಳಿದ ಪೂಜಾವಿಧಿಯನ್ನು, ಪಾರ್ಥಿವಲಿಂಗದಲ್ಲಿಯೂನಡೆಯಿಸಬೇಕು, ಪಾರ್ಥಿವಲಿಂಗೋದ್ಯಾಪನಾವಿಧಿಯು ಕೌಸ್ತುಭಾದಿಗಳಲ್ಲಿದೆ.

— ಲಿಙ್ಗವಿಶೇಷ ಫಲವು —

ಲಿಙ್ಗವಿಶೇಷಫಲವು - ಬಗೆಬಗೆಯ ಲಿಂಗಗಳಿಂದ ಬಗೆಬಗೆಯಾದ ಫಲಗಳುಂಟು-ವಜ್ರದ ಲಿಂಗಪೂಜೆಯಿಂದ ಆಯುರ್ವೃದ್ಧಿ, ಮುತ್ತಿನಲ್ಲಿ-ರೋಗಪರಿಹಾರವು, ವೈಡೂರ್ಯದಲ್ಲಿ ಶತ್ರುನಾಶ, ಪದ್ಮರಾಗದಲ್ಲಿ - ಲಕ್ಷ್ಮೀಪ್ರಾಪ್ತಿ, ಪುಷ್ಯರಾಗದಲ್ಲಿ - ಸುಖವು, ಇಂದ್ರನೀಲದಲ್ಲಿ- ಕೀರ್ತಿ, ಮರಕತದಲ್ಲಿ (ಪಚ್ಚೆ) - ಪುಷ್ಟಿ, ಸ್ಫಟಿಕದಲ್ಲಿ - ಇಷ್ಟಾರ್ಥಸಿದ್ಧಿ, ಬೆಳ್ಳಿಯಿಂದ- ರಾಜ್ಯಪ್ರಾಪ್ತಿ, ಪಿತೃಗಳಿಗೆ ಮುಕ್ತಿ, ಚಿನ್ನದಲ್ಲಿ-ಸತ್ಯಲೋಕವು, ತಾಮ್ರದಲ್ಲಿ- ಪುಷ್ಟಿ, ಆಯುಸ್ಸು, ಹಿತ್ತಾಳೆಯಲ್ಲಿ- ತುಷ್ಟಿ, ಕಂಚಿನಲ್ಲಿ - ಕೀರ್ತಿ, ಲೋಹ (ಕಬ್ಬಿಣ) ದಲ್ಲಿ - ಶತ್ರುನಾಶವು, ಸೀಸದಲ್ಲಿ - ಆಯುಷ್ಯವು, ಮತಾಂತರದಲ್ಲಿ-ಬ್ರಾಹ್ಮಣಸ್ವತ್ತನ್ನು ಅಪಹರಿಸಿದ ದೋಷಪರಿಹಾರವೂ, ಐಶ್ವರ್ಯವೂ ಉಂಟಾಗುವುದು. ಗಂಧದಿಂದ-ಸೌಭಾಗ್ಯವು, ಆನೆಯ ದಂತದಲ್ಲಿ-ಸೇನಾಧಿಪತ್ಯ, ಅಕ್ಕಿ ಮೊದಲಾದ ಧಾನ್ಯಗಳ ಹಿಟ್ಟಿನಲ್ಲಿ- ಪುಷ್ಟಿ, ಸುಖ, ರೋಗಪರಿಹಾರ ಮೊದಲಾದುವು- ಉದ್ದಿನ ಹಿಟ್ಟು- ಸ್ತ್ರೀಪ್ರಾಪ್ತಿ, ಬೆಣ್ಣೆಯಲ್ಲಿ - ಸುಖವು, ಸಗಣಿಯಲ್ಲಿ (ಹಸುವಿನ ಸಗಣಿ) ರೋಗನಾಶವು, ಬೆಲ್ಲದಲ್ಲಿ - ಅನ್ನಮೊದಲಾದವುಗಳ ಪ್ರಾಪ್ತಿ ಬಿದಿರಮೊಳಕೆಯಲ್ಲಿ-ಕುಲವೃದ್ಧಿ, ಎಂದು ಇನ್ನೂ ಕೆಲವೆಡೆಗಳಲ್ಲಿ ವಿಸ್ತಾರವಾಗಿ ಹೇಳಿದೆ, ಲಿಂಗಗಳ ಸಂಖ್ಯೆಗಳ ಪ್ರಕಾರವಾಗಿ ಫಲವಿಶೇಷಗಳು ಕೌಸ್ತುಭದಲ್ಲಿದೆ. ಶಿವನಿರ್ಮಾಲ್ಯವನ್ನು ಸ್ವೀಕರಿಸುವುದು, ಬಿಡುವುದು ಇವುಗಳ ವಿಚಾರವು ಮೂರನೆಯ ಪರಿಚ್ಛೇದದಲ್ಲಿದೆ ಮಾಘಶಿವರಾತ್ರಿನಿರ್ಣಯವನ್ನು ಪ್ರಥಮಪರಿಚ್ಛೇದದಲ್ಲಿ ಹೇಳಿದೆ. ಶಿವರಾತ್ರಿವ್ರತೋದ್ಯಾಪನೆಯನ್ನೂ, ಮಾಸಶಿವರಾತ್ರಿಯ ಉದ್ಯಾಪನೆಯನ್ನೂ ಕೌಸ್ತುಭದಲ್ಲಿ ತಿಳಿಯಬಹುದು. ಅಪರಾಹ್ಣವ್ಯಾಪ್ತಿಯುಳ್ಳ ಮಾಘಮಾಸದ ಅಮಾವಾಸ್ಯೆಯು

ಯುಗಾದಿಯಾದ್ದರಿಂದ ಪಿಂಡರಹಿತವಾಗಿ ಶ್ರಾದ್ಧವನ್ನುಮಾಡಬೇಕು. ಅದ ನ್ನು ದರ್ಶಶ್ರಾದ್ಧದೊಡನೆ ತಂತ್ರದಿಂದ ಮಾಡಬೇಕು. ಮಾಘಾಮಾವಾಸ್ಯೆ ಯಲ್ಲಿ ಶತಭಿಷಾನಕ್ಷತ್ರಬಂದರೆ ಪುಣ್ಯಕಾಲವು. ಆಗ ಶ್ರಾದ್ಧಮಾಡುವುದ ರಿಂದ ಪಿತೃಗಳಿಗೆ ಬಹಳ ತೃಪ್ತಿಯುಂಟಾಗುವುದು. ಧನಿಷ್ಠಾನಕ್ಷತ್ರ ಯೋ ಗವಿದ್ದರೆ ಎಳ್ಳನ್ನದಿಂದ ಶ್ರಾದ್ಧಮಾಡಬೇಕು. ಅದರಿಂದ ಹತ್ತುಸಾವಿರ ವ ರ್ಷಗಳವರೆಗೆ ಪಿತೃಗಳಿಗೆ ತೃಪ್ತಿಯುಂಟಾಗುವುದು. ಇಂತು ಮಾಘಮಾ ಸಕೃತ್ಯ ನಿರ್ಣಯೋದ್ದೇಶವು.

## (೧೪) ಫಾಲ್ಗುನ ಮಾಸವು.

(೧೪) ಫಾಲ್ಗುನಮಾಸವು—ಮೀನಸಂಕ್ರಮಣದಲ್ಲಿ ಸಂಕ್ರಮಣ ವಾದಮೇಲೆ ೧೬ ಘಳಿಗೆಗಳು ಪುಣ್ಯಕಾಲವು. ರಾತ್ರಿಯಲ್ಲಿ ಸಂಕ್ರಮ ಣವಾದರೆ ನಿರ್ಣಯವು ಹಿಂದೆಯೇ ಹೇಳಿದೆ. ಈ ಮಾಸದಲ್ಲಿ ವಿಷ್ಣುಪ್ರೀ ತ್ಯರ್ಥವಾಗಿ ಗೋದಾನ, ವ್ರೀಹಿದಾನ, ವಸ್ತ್ರದಾನ, ಇವುಗಳನ್ನು ಮಾಡ ಬೇಕು. ಫಾಲ್ಗುನ ಶುದ್ಧ ಪ್ರತಿಪತ್ತು ಮೊದಲ್ಗೊಂಡು ಹನ್ನೆರಡುದಿನಗ ಳವರೆಗೆ ಪಯೋವ್ರತವನ್ನು ಮಾಡಬೇಕೆಂದು ಭಾರತದಲ್ಲಿ ಹೇಳಿದೆ, ಅದ ರಪ್ರಯೋಗವನ್ನು ಮೂಲಕ್ಕನುಸಾರವಾಗಿ ಊಹಿಸಿಕೊಳ್ಳಬೇಕು. ಫಾ ಲ್ಗುನ ಪೌರ್ಣಿಮೆಮನ್ವಾದಿಇದೇ ಹೋಳಿಹುಣ್ಣಿಮೆ. (ಹೋಳಿಕಾ)

## ಹೋಳಿಕಾ ನಿರ್ಣಯವು.

ಹೋಳಿಕಾನಿರ್ಣಯವುಇದಕ್ಕೆ ಪ್ರದೋಷವ್ಯಾಪ್ತಿಯುಳ್ಳ ಭದ್ರಾತಿ ಥಿಯಿಲ್ಲದ ಪೂರ್ಣಿಮೆಯನ್ನು ಗ್ರಹಿಸಬೇಕು. ಎರಡುದಿನಗಳಲ್ಲಿಯೂತಿ ಥಿಗೆ ಪ್ರದೋಷವ್ಯಾಪ್ತಿ ಇದ್ದರೂ, ಎರಡನೆಯದಿನದಲ್ಲಿ ಪ್ರದೋಷದ ಒಂ ದುಭಾಗಕ್ಕೆ ವ್ಯಾಪ್ತಿ ಇದ್ದರೂ ಪೂರ್ವದಿನಕ್ಕೆ ಭದ್ರಾದೋಷವಿರುವುದ ರಿಂದ ಎರಡನೆಯದನ್ನೇ ಗ್ರಹಿಸಬೇಕು. ಎರಡನೆಯದಿನಕ್ಕೆ ಪ್ರದೋಷ ದ ಸ್ಪರ್ಶವಿಲ್ಲದೆಯೂ, ಪೂರ್ವದಿನದಲ್ಲಿ ಪ್ರದೋಷಕಾಲಕ್ಕೆ ಭದ್ರಾಯೋ ಗವೂ ಇದ್ದರೆ, ಎರಡನೆಯ ದಿನದಲ್ಲಿ ಪೂರ್ಣಿಮೆಯೂ ಮೂರುವರೆಯಾ ಮ ಅಥವಾ ಅದಕ್ಕಿಂತ ಹೆಚ್ಚುಕಾಲವಿದ್ದು ಅದರ ದಿನದಲ್ಲಿ ಪ್ರತಿಪತ್ತು ವೃದ್ಧಿಯನ್ನು ಹೊಂದುವುದಾಗಿದ್ದರೆ ಆಗ ಪರದಿನದಲ್ಲಿ ಪ್ರದೋಷವ್ಯಾಪ್ತಿ ಯಲ್ಲಿ ಹೋಳಿಕಾದಹನವನ್ನು ಮಾಡಬೇಕು. ಹಾಗಲ್ಲದೆ ಈ ಸಂದರ್ಭ

ದಲ್ಲಿ ಪ್ರತಿಪತ್ತುಕ್ಷಯ ತಿಥಿಯಾದರೆ ಪೂರ್ವದಿನದಲ್ಲಿಯೇ ಭದ್ರಾಪುಚ್ಛದಲ್ಲಾಗಲಿ, ಭದ್ರಾಮುಖವನ್ನು ಮಾತ್ರವೇ ಬಿಟ್ಟು ಭದ್ರೆಯಲ್ಲೇ ಆಗಲಿ ಹೋಳಿಕೋತ್ಸವವು. ನಿಶೀಥಾನಂತರದಲ್ಲಿ ಭದ್ರೆಯು ಕಳೆದುಹೋದರೆ ಮುಖವನ್ನು ಬಿಟ್ಟು ಭದ್ರೆಯಲ್ಲಿಯೇ ಹೋಳಿಕಾದೀಪನವು. ಪ್ರದೋಷಕ್ಕೆ ಭದ್ರಾಮುಖವ್ಯಾಪ್ತಿ ಇದ್ದರೆ ಭದ್ರಾನಂತರದಲ್ಲಾಗಲಿ, ಪ್ರದೋಷವು ಕಳೆದಮೇಲಾಗಲಿ ಮಾಡಬಹುದು, ಎರಡುದಿನಗಳಲ್ಲಿಯೂ ಪ್ರದೋಷವ್ಯಾಪ್ತಿಯು ಪೂರ್ಣಿಮೆಗೆ ಇಲ್ಲದೆ ಹೋದರೆ ರಾತ್ರಿ ಎಲ್ಲಿ ಪೂರ್ವಾರ್ಧದ ಭದ್ರೆಯನ್ನು ಭದ್ರೆಯಮೊದಲಿನ ಅರ್ಧ ಗ್ರಹಿಸಬಹುದೆಂದು ಕಾರಣ. ಪೂರ್ವದಿನದಲ್ಲಿಯೇ ಭದ್ರಾಪುಚ್ಛದಲ್ಲಿಯೇ ಆಗಲಿ; ಅದಿಲ್ಲದಿದ್ದರೆ ಭದ್ರೆಯಲ್ಲಿಯೇ, ಪ್ರದೋಷವು ಕಳೆದಮೇಲೆಯೇ ಆಗಲಿ ಮಾಡಬೇಕು. ಪೂರ್ವದಿನದ ಪ್ರದೋಷಕಾಲದ ಚತುರ್ದಶಿಯಲ್ಲಾಗಲಿ, ಎರಡನೆಯ ದಿನದ ಸಾಯಾಹ್ನ ಮೊದಲಾದವುಗಳಲ್ಲಾದರೂ ಮಾಡಕೂಡದು. ಹಗಲು ಹೋಳಿಕಾದೀಪನವನ್ನು ಮಾಡುವುದುಮಾತ್ರ ಎಲ್ಲಗ್ರಂಥಗಳಿಗೂ ವಿರೋಧವು. ಈ ಹೋಳಿಕಾಪೂಜೆಯನ್ನು ಶ್ರವಣಾಕರ್ಮದಂತೆ ಭೋಜನಾನಂತರದಲ್ಲಿಯೂ ಮಾಡುತ್ತಾರೆ ಇದು ಯುಕ್ತವಾದದ್ದು. ಕೆಲವರು ಹೋಳಿಕಾಪೂಜೆಯನ್ನು ಮಾಡಿ ಅನಂತರದಲ್ಲಿ ಭೋಜನಮಾಡುತ್ತಾರೆ, ಪೂಜಾಭೋಜನಗಳಿಗೆ ಶಾಸ್ತ್ರದಲ್ಲಿ ಯಾವಕಾಲಗಳನ್ನೂ ವಿಧಿಸಿಲ್ಲ. ಚಂದ್ರಗ್ರಹಣವಾದರೆ ವೇಧೆಯ ಮಧ್ಯದಲ್ಲಿಯೇ ಮಾಡಬೇಕು. ಗ್ರಸ್ತೋದಯವಾದರೆ ಎರಡನೆಯ ದಿನದಲ್ಲಿ ಪ್ರದೋಷಕಾಲಕ್ಕೆ ಪೌರ್ಣಮಿ ಇದ್ದರೆ ಗ್ರಹಣ ಮಧ್ಯಕಾಲದಲ್ಲಿ ಮಾಡಬೇಕು. ಇಲ್ಲದಿದ್ದರೆ ಪೂರ್ವದಿನದಲ್ಲಿ ಮಾಡಬೇಕು.

## —ಭದ್ರಾಮುಖಪುಚ್ಛಲಕ್ಷಣವು—

ಭದ್ರಾ ಮುಖಪುಚ್ಛ ಲಕ್ಷಣವು— ಪೂರ್ಣಿಮೆಯಲ್ಲಿ ಭದ್ರೆಯ ಮೂರನೆಯ ಪಾದದ ಕೊನೆಯ ಮೂರು ಗಳಿಗೆಗಳು ಪುಚ್ಛವು, ನಾಲ್ಕನೆಯ ಪಾದದ ಮೊದಲನೆಯ ಐದುಗಳಿಗೆಗಳಿಗೆ ಮುಖವೆಂದು ಸಂಜ್ಞೆ ಅಂದರೆ ಸಾಮಾನ್ಯ ಪ್ರಮಾಣದಿಂದ ಪೂರ್ಣಿಮೆಯು ೬೦ ಗಳಿಗೆ ಇದ್ದರೆ ಪೂರ್ಣಿಮೆಯು ಪ್ರಾರಂಭವಾದ ಮೇಲೆ ೧೯॥ ಗಳಿಗೆಯ

ಅನಂತರದಲ್ಲಿನ ೩ ಗಳಿಗೆಯು ಪುಚ್ಛವು ೨೩ ॥ ಗಳಿಗೆಯಮೇಲೆ ೫ ಗಳಿಗೆಗಳು ಮುಖವು ತಿಥಿಯು ೬೪ ಗಳಿಗಗಳಿದ್ದರೆ ಪೂರ್ಣಿಮೆಯಲ್ಲಿ ೨೧ ಗಳಿಗೆಯ ಮೇಲೆ ಪುಚ್ಛವು. ೨೪ ಗಳಿಗೆಯಮೇಲೆ ಮುಖವು. ಈ ರೀತ್ಯಾ ತಿಥಿಪ್ರಮಾಣಕ್ಕೆ ತಕ್ಕಂತೆ ಭದ್ರಾಮುಖವನ್ನೂ, ಪುಚ್ಛವನ್ನೂ ಊಹಿಸಿ ಕೊಳ್ಳಬೇಕು.

—ಹೋಳಿಕಾಪೂಜೆಯು—

ಹೋಳಿಕಾಪೂಜಾವಿಧಿಯು ಕುಟುಂಬಸಹಿತನಾದ ನನಗೆ ಢುಂಢಾ ಎಂಬ ರಾಕ್ಷಸಿಯ ಬಾಧೆಯು ಪರಿಹಾರವಾಗಿ; ಆಕೆಯ ಪ್ರೀತಿಯುಂಟಾಗುವುದಕ್ಕಾಗಿ ಹೋಳಿಕಾಪೂಜೆಯನ್ನು ನಾನು ಮಾಡುವೆನು. ಎಂದು ಸಂಕಲ್ಪಮಾಡಿ, ಕಟ್ಟಿಗೆ ಬೆರಣಿಯ ರಾಶಿಯನ್ನು ಮಾಡಿ ಬೆಂಕಿಯಿಂದ ಸುಟ್ಟು ಅಲ್ಲಿ ಅಸ್ಮಾಭಿರ್ಭಯ ಸಂತ್ರಸ್ತೈಃ ಕೃತಾತ್ವಂ ಹೋಳಿಕೇಕುತಃ । ಅತಸ್ತ್ವಾಂ ಪೂಜಯಿಷ್ಯಾಮಿ ಭೂತೇ ಭೂತಿಪ್ರದಾಭವ ॥ ೧ ॥ ಎಲೆ ಹೋಳಿಕೆಯೆಂಬ ಭೂತವೇ ! ಭಯದಿಂದ ನಾವು ಹೆದರಿ ನಿನ್ನನ್ನು ಇಲ್ಲಿ ಇಟ್ಟು ಪೂಜೆಮಾಡುತ್ತೇವೆ. ನಮಗೆ ಸಂಪತ್ತನ್ನುಂಟುಮಾಡು ॥೧॥ ಎಂಬ ಮಂತ್ರದಿಂದ ಶ್ರೀ ಹೋಳಿಕಾಯೈನಮಃ ಹೋಳಿಕಾ ಮಾವಾಹಯಾಮಿ ಎಂದು ಹೋಳಿಕೆಯನ್ನು ಆವಾಹನೆ ಮಾಡಬೇಕು. ಆಮೇಲೆ ಷೋಡಶೋಪಚಾರ ಪೂಜೆಯನ್ನು 'ಮಾಡಿ ತಮಗ್ನಿಂತ್ರಿಃ ಪರಿಕ್ರಮ್ಯ ಗಾಯಂತುಚ ಹಸಂತುಚ । ಜಲ್ಪಂತು ಸ್ವೇಚ್ಛಯಾಲೋಕಾ ನಿಶ್ಶಂಕಾ ಯಸ್ಯಯನ್ಮತಂ॥೧॥ ಜನರೆಲ್ಲರೂ ಆ ಅಗ್ನಿಯನ್ನು ಮೂರಾವೃತ್ತಿ ಪ್ರದಕ್ಷಿಣೆಮಾಡಿ, ತಮ್ಮ ತಮ್ಮ ಇಷ್ಟಾನುಸಾರವಾಗಿ ಭಯವನ್ನು ಬಿಟ್ಟು ಹಾಸ್ಯಗಳು, ಮಾತಾಡುವುದು, ವಿನೋದಗಳು, ಹಾಡುವುದು. ಮೊದಲಾದವುಗಳಿಂದ ಕಾಲವನ್ನು ಕಳೆಯಬೇಕು. 'ಪಂಚಮಿಪ್ರಮುಖಾಸ್ತಾಸುತಿಥಯೋನನ್ತ ಪುಣ್ಯದಾಃ। ದಶಸ್ಯುಃ ಶೋಭನಾಸ್ತಾಸು ಕಾಷ್ಠಸ್ತೇಯಂವಿಧೀಯತೇ ॥೧॥ ಚಾಂಡಾಲಸೂತಿಕಾ ಗೇಹಾಚ್ಛಿಶುಹಾರಿತವಹ್ನಿನಾ । ಪ್ರಾಪ್ತಾಯಾಂ ಪೂರ್ಣಿಮಾಯಾಂತು ಕುರ್ಯಾತ್ತತ್ಕಾಷ್ಠದೀಪನಂ ॥ ॥ ಗ್ರಾಮಾದ್ಬಹಿಶ್ಚ ಮಧ್ಯೇವಾತೂರ್ಯನಾದ ಸಮನ್ವಿತಃ । ಸ್ನಾತ್ವಾ ರಾಜಾಶುಚಿರ್ಭೂತ್ವಾ ಸ್ವಸ್ತಿ ವಾಚನತತ್ಪರಃ ॥೩॥ ದತ್ವಾದಾನಾನಿ

ಘೂರೀಣಿದೀಪಯೇದ್ಧೋಲಿಕಾ ಚಿತಿಂ।ತತೋಭ್ಯುಕ್ಷ್ಯ ಚಿತಿಂ ಸರ್ವಾಂ
ಸಾಜ್ಯೇನಪಯಸಾ ಸುಧೀಃ ॥೪॥ ನಾರಿಕೇಳಾನಿದೇಯಾನಿ ಭಂಜಪೂರಫ
ಲಾನಿಚ । ಗೀತವಾದ್ಯೈಸ್ತಥಾ ನೃತ್ಯೈ ರಾತ್ರಿಸ್ಸಾನೀಯತೇ ಜನೈಃ ॥೫॥
ತವಾಗ್ನಿಂತ್ರಿಃ ಪರಿಕ್ರಮ್ಯ ಶಬ್ದೈರ್ಲಿಂಗ ಭಗಾಂಕಿತೈಃ । ತೇನ ಶಬ್ದೇನ
ಸಾಪಾಪಾರಾಕ್ಷಸೀ ತೃಪ್ತಿಮಾಪ್ನುಯಾತ್ ॥೬॥ ಫಾಲ್ಗುನ ಶುದ್ಧ ಪಂ
ಚಮಿ ಮೊದಲ್ಗೊಂಡು ಹತ್ತು ದಿನಗಳು ಪುಣ್ಯತಮವಾದದ್ದು. ಈದಿನ
ಗಳಲ್ಲಿ ಕಟ್ಟಿಗೆಯನ್ನು ಕದಿಯಬೇಕು ॥೧॥ ಪೌರ್ಣಿಮಾದಿನದಲ್ಲಿ ಆಕಟ್ಟಿಗೆ
ಯ ಗುಡ್ಡೆಯನ್ನು, ಚಂಡಾಲಜಾತಿಯ ಬಾಣಂತಿಯ ಮನೆಯಿಂದ ಮಗು
ವು ತೆಗೆದುಕೊಂಡು ಬಂದ ಬೆಂಕಿಯಿಂದ ಸುಡಬೇಕು ॥೨॥ ದೊರೆಯು
ಸ್ನಾನಮಾಡಿ ಶುದ್ಧನಾಗಿ, ಊರಹೊರಗೆ ಅಥವಾ ಊರೊಳಗೆ ವಾದ್ಯಗ
ಳೊಡನೆ ಸ್ವಸ್ತಿವಾಚನೆಯನ್ನು ಮಾಡಬೇಕು ॥೩॥ ಬಹುವಾಗಿ ದಾನಳಗ
ನ್ನು ಮಾಡಿ ಹೋಳಿಕೆಯೊಡನೆ ಸೌದೆಯ ಗುಡ್ಡೆಗೆ ಬೆಂಕಿಯನ್ನು ಹಾಕಿ
ಹೊತ್ತಿಸಬೇಕು. ಅನಂತರದಲ್ಲಿ ಹಾಲು ತುಪ್ಪದಿಂದ ಉರಿಯನ್ನಾರಿಸ
ಬೇಕು. ॥೪॥ ತೆಂಗಿನಕಾಯಿಗಳನ್ನೂ, ಮಾದಳದ ಹಣ್ಣುಗಳನ್ನೂ ದಾ
ನಮಾಡಿ ಆರಾತ್ರಿಯಲ್ಲೆಲ್ಲರೂ, ಗೀತ, ವಾದ್ಯ, ನರ್ತನೆ ಇವುಗಳಿಂದ ಕಳೆ
ಯಬೇಕು ॥೫॥ ಅಗ್ನಿಯನ್ನು ಲಿಂಗಭಗಸೂಚಕಗಳಾದ ಶಬ್ದಗಳನ್ನುಚ್ಚ
ರಿಸುತ್ತಾ ಮೂರು ಪ್ರದಕ್ಷಿಣೆಯನ್ನು ಮಾಡಬೇಕು. ಈ ಶಬ್ದಗಳಿಂದ
ಆರಾಕ್ಷಸಿಗೆ ತೃಪ್ತಿಯುಂಟಾಗುವುದು ॥೬॥ ಎಂದು ಜ್ಯೋತಿರ್ನಿಬಂಧದಲ್ಲಿ
ಹೇಳಿದೆ. ಹೀಗೆ ರಾತ್ರಿಯಲ್ಲಿ ಹೋಳಿಕೋತ್ಸವವನ್ನು ಮಾಡಿ ಬೆಳಗಿನ
ಪ್ರತಿಪತ್ತಿನಲ್ಲಿ ಚಂಡಾಲನನ್ನು ನೋಡಿ ಅಥವಾ (ಮುಟ್ಟಿ) ಸ್ನಾನಮಾಡ
ಬೇಕು. ''ನತಸ್ಯ ದುಷ್ಕೃತಂ ಕಿಂಚಿನ್ನಾಧಯೋ ವ್ಯಾಧಯೋಪಿಚ ।
ಕೃತ್ವಾಚಾವಶ್ಯಕಾರ್ಯಾಣಿ ಸಂತರ್ಪ್ಯ ಪಿತೃದೇವತಾಃ ॥೧॥ ವಂದಯೇ
ದ್ಧೋಲಿಕಾ ಮೂರ್ತಿಂ ಸರ್ವದುಷ್ಟೋಪಶಾಂತಯೇ ॥ ತನ್ನ ಕರ್ಮಗಳೆಲ್ಲ
ವನ್ನೂ ಮಾಡಿ, ಪಿತೃದೇವತೆಗಳನ್ನು ತೃಪ್ತಿಗೊಳಿಸಿ, ಯಾರು ದುಷ್ಟಾರಿ
ಷ್ಟಪರಿಹಾರಾರ್ಥವಾಗಿ ಹೋಳಿಕಾಮೂರ್ತಿಗೆ ನಮಸ್ಕಾರಮಾಡುವರೋ
ಅವರ ಪಾಪ, ರೋಗ, ಮನೋವ್ಯಥೆಗಳೆಲ್ಲವೂ ಪರಿಹಾರವಾಗುವವು.
ನಮಸ್ಕಾರಮಂತ್ರವು 'ವಂದಿತಾಸಿ ಸುರೇಂದ್ರೇಣ ಬ್ರಹ್ಮಣಾಶಂಕರೇಣ

ಚ! ಅತಸ್ತ್ವಂ ಶಾಹಿನೀ ದೇವಿ ಭೂತಿಭೂತಿಪ್ರದಾಭವ ॥೧॥ ಎಲೌದೇವಿಯೇ! ಬ್ರಹ್ಮನೇ ಮೊದಲಾದ ದೇವತೆಗಳೂ ನಿನ್ನನ್ನು ವಂದಿಸುತ್ತಿರವರು. ನನಗೆ ಐಶ್ವರ್ಯವನ್ನು ಕೊಟ್ಟು ಕಾಪಾಡು ॥೧॥ ಈ ದಿನವೂ, ಕರಿಎನ್ನಿಸಿಕೊಳ್ಳುವ ಎರಡನೆಯು ದಿನವೂ ಶುದ್ಧಿ ಕರ್ಮಗಳಿಗೆ ಯೋಗ್ಯವಲ್ಲ. ಇದರಂತೆ 'ಹೋಳಿಕಾ ಗ್ರಹಣಭಾವುಕಾಯನಂ ಪ್ರೇತದಾಹದಿವಸೋತ್ರುಪಂಚಮು॥ ತತ್ಪರಂಚ ಕರಿಸಂಜ್ಞಕಂದಿನಂ ವರ್ಜಿತಂ ಸಕಲಕರ್ಮಸೂಭಯಿಂ ॥೧॥ ಹೋಳಿಹಬ್ಬ, ಗ್ರಹಣ, ವೈಶಾಖದ ಅಮಾವಾಸ್ಯೆ ಅಯನದಿನ, ಪ್ರೇತದಾಹ (ಹೆಣವನ್ನುಸುಟ್ಟ) ದಿನ, ಈ ಐದುದಿನಗಳನ್ನೂ, ಇವುಗಳ ಮಾರನೆಯು (ಕರಿ) ದಿನಗಳನ್ನೂ, ಎಲ್ಲ ಕರ್ಮಗಳಲ್ಲಿಯೂ ಬಿಡಬೇಕು ಎಂದು ಹೇಳಿದೆ. ಗ್ರಹಣ, ಅಯನ, ಪ್ರೇತದಾಹ ದಿನ, ಇವುಗಳಲ್ಲಿ ನಿಶೀಥವಿಭಾಗದಂತೆ ಪೂರ್ವದಿನವನ್ನೂ ಕರಿದಿನವನ್ನೂ ಗೊತ್ತುಮಾಡಿಕೊಳ್ಳಬೇಕು.

—ವಸಂತಾರಂಭ ಚೂತಪುಷ್ಪಾಶನಾದಿಗಳು—

ವಸಂತಾರಂಭ ಚೂತಪುಷ್ಪಾಶನಾದಿಗಳು—ನರೋದೋಲಾಗತಂ ದೃಷ್ಟ್ವಾಗೋವಿಂದಂ ಪುರುಷೋತ್ತಮಂ । ಫಾಲ್ಗುನ್ಯಾಂ ಸಂಯತೋ ಭೂತ್ವಾಗೋವಿಂದಸ್ಯ ಪುರಂವ್ರಜೇತ್ ॥೧॥ ಫಾಲ್ಗುನಮಾಸದಲ್ಲಿ ಶುದ್ಧನಾಗಿ ಪುರುಷೋತ್ತಮನಾದ ಗೋವಿಂದನನ್ನು ತೂಗುಮಣೆಯಲ್ಲಿ ತೂಗ ದರ್ಶನಮಾಡುವವನು (ಡೋಲೋತ್ಸವ) ವಿಷ್ಣುಲೋಕವನ್ನು ಪಡೆಯುತ್ತಾನೆ. ॥೧॥ ಫಾಲ್ಗುನಕೃಷ್ಣಪ್ರತಿಪತ್ತಿನಲ್ಲಿ ವಸಂತೋತ್ಸವವು ಪ್ರಾರಂಭವಾಗುವುದು. ಅದಕ್ಕೆ ಉದಯವ್ಯಾಪ್ತಿಯುಳ್ಳ ತಿಥಿಯನ್ನು ಗ್ರಹಿಸಬೇಕು. ಎರಡುದಿನಗಳಿಗೆ ವ್ಯಾಪ್ತಿಇದ್ದರೆ ಪೂರ್ವದಿನವನ್ನು ಗ್ರಹಿಸಬೇಕು. ಈ ದಿನದಲ್ಲಿ ತೈಲಾಭ್ಯಂಗವನ್ನು ಮಾಡಿಕೊಳ್ಳಬೇಕು, ಈ ಪ್ರತಿಪತ್ತಿನಲ್ಲಿ ಚೂತಪುಷ್ಪ (ಮಾವಿನಹೂ) ವನ್ನು ಪ್ರಾಶನೆಮಾಡಬೇಕು. ನೆಲವನ್ನು ಸಗಣಿಯಲ್ಲಿ ಸಾರಿಸಿ ಬಿಳಿಯಬಟ್ಟೆಯನ್ನುಹಾಸಿಕೊಂಡು, ಪೂರ್ವಾಭಿಮುಖವಾಗಿಕುಳಿತು, ಸುವಾಸಿನಿಯರಿಂದ ಚಂದನದ ತಿಲಕವನ್ನೂ, ಆರತಿಯನ್ನೂ ಮಾಡಿಸಿಕೊಂಡು ಚಂದನಮಿಶ್ರವಾದ ಚೂತಪುಷ್ಪವನ್ನು ತಿನ್ನಬೇಕು, ಅದಕ್ಕೆ ಮಂತ್ರವು—ಚೂತಮಗ್ರ್ಯಂವಸಂ

ತಸ್ಯೈವಮಾಕಂದಕುಸುಮಂತವ। ಸಚಂದನಂ ಪಿಬಾಮ್ಯದ್ಯಸರ್ವಕಾಮಾರ್ಥಸಿದ್ಧಯೇ ॥೧॥ ಎಲೈ ವಸಂತನೇ! ನಿನಗೆ ಮಾವಿನಹೂವು ಮೊದಲನೆಯದಾದ್ದರಿಂದ ಚಂದನದೊಡನೆ ಅದನ್ನು ಇಷ್ಟಾರ್ಥಸಿದ್ಧಿಯುಂಟಾಗಲೆಂದು ಪ್ರಾಶನಮಾಡುವೆನು ॥೧॥ ಫಾಲ್ಗುನಕೃಷ್ಣದ್ವಿತೀಯೆಯಲ್ಲಿ ದೊರೆ, ಗ್ರಾಮಾಧಿಕಾರಿ, ಇವರು ಮೇಲ್ಕಟ್ಟು ಮೊದಲಾದ್ದರಿಂದ ಅಲಂಕರಿಸಿರುವ ಬಿದುಸ್ಥಳದಲ್ಲಿ ಶ್ರೇಷ್ಠವಾದ ಆಸನಗಳಲ್ಲಿ ಕುಳಿತು, ಪುರಜನ, ದೇಶಜನಗಳಿಗ, ಚಂದ್ರ, ಚಂದನದಪುಡಿ, ಗಂಧದಪುಡಿಗಳನ್ನು ಎಲೆಚಿತಾಂಬೂಲವನ್ನು ಕೊಟ್ಟು, ಸಂಗೀತ, ನಾಟ್ಯ, ಮೊದಲಾದವುಗಳಿಂದ ಮಹೋತ್ಸವವನ್ನು ನಡೆಯಿಸಬೇಕು. ಈಗ ಸಾಮಾನ್ಯಜನರು ಕೃಷ್ಣಪಂಚಮಿಯವರೆಗೆ ಈ ಉತ್ಸವವನ್ನು ನಡೆಯಿಸುವರು. ಇಂತು ಹೋಳಿಕೋತ್ಸವವು, ಫಾಲ್ಗುನದ ಅಮಾವಾಸ್ಯೆಯು ಮನ್ವಾದಿಯು, ಅದಕ್ಕೆ ಅಪರಾಹ್ಣವ್ಯಾಪ್ತಿಯುಳ್ಳ ತಿಥಿಯನ್ನು ಗ್ರಹಿಸಬೇಕು. ಇಂತು ಫಾಲ್ಗುನಮಾಸಕೃತ್ಯ ನಿರ್ಣಯೋದ್ದೇಶವು.

(೧೪) ಎರಡು ಪರಿಚ್ಛೇದಗಳ ಶೇಷವೆಂಬ ಪ್ರಕೀರ್ಣಪ್ರಕರಣವನು ಹೇಳುವೆವು.

(೧೪) ಎರಡು ಪರಿಚ್ಛೇದಗಳ ಶೇಷವಾದ ಮಿಶ್ರ ವಿಷಯಗಳು— ೧೨ ಮಾಸಗಳಲ್ಲಿಯೂ, ಶ್ರಾದ್ಧದಲ್ಲಿ, ವ್ಯತೀಪಾತ ಮೊದಲಾದವುಗಳ ಯೋಗಕ್ಕೂ, ಭರಣಿ ಮೊದಲಾದ ನಕ್ಷತ್ರಯೋಗಕ್ಕೂ ಅಪರಾಹ್ಣವ್ಯಾಪ್ತಿಯಿಂದ ದರ್ಶದಂತೆ ನಿರ್ಣಯವು, ಉಪವಾಸ ಮೊದಲಾದವುಗಳಲ್ಲಿ ಹೆಚ್ಚಾಗಿ ಆಚಾರವಿಲ್ಲದ್ದರಿಂದ ಹೇಳಲಿಲ್ಲ

ಚಾಂದ್ರಮಾನ ಸಂವತ್ಸರ ಭೇದಗಳು.

ಚಾಂದ್ರಸಂವತ್ಸರ ಭೇದಗಳು—ಪ್ರಭವೋ, ವಿಭವಃ, ಶುಕ್ಲಃ, ಪ್ರಮೋದೋಥ, ಪ್ರಜಾಪತಿಃ,। ಅಂಗಿರಾಃ, ಶ್ರೀಮುಖೋ, ಭಾವೋ, ಯುವಾ, ಧಾತಾ, ತಥೈವಚ ॥೧॥ ಈಶ್ವರೋ, ಬಹುಧಾನ್ಯಶ್ಚ, ಪ್ರಮಾಥೀ, ವಿಕ್ರಮೋ, ವೃಷಃ,। ಚಿತ್ರಭಾನುಃ, ಸ್ವಭಾನು, ಶ್ಚ, ತಾರಣಃ, ಪಾರ್ಥಿವೋ, ವ್ಯಯಃ ॥೨॥ ಸರ್ವಜಿತ್, ಸರ್ವಧಾರೀ, ಚ, ವಿರೋಧೀ, ವಿಕೃತಿಃ, ಖರಃ। ನಂದನೋ, ವಿಜಯ, ಶ್ಚೈವ, ಜಯೋ, ಮನ್ಮ

ಥ, ದುರ್ಮ್ಮುಖಾ ॥೩॥ ಹೇಮಲಂಬೋ, ವಿಲಂಬೋಥ, ವಿಕಾರೀ, ಶಾರ್ವರೀ, ಪ್ಲವಃ,। ಶುಭಕೃಚ್ಛೋಭಕೃ, ತ್ಕ್ರೋಧೀ, ವಿಶ್ವಾವಸು, ಪರಾಭವಾ ॥೪॥ ಪ್ಲವಂಗಃ, ಕೀಲಕಃ, ಸೌಮ್ಯ, ಸ್ಸಾಧಾರಣ, ವಿರೋಧಿಕೃತ್।ಪರೀಧಾವೀ, ಪ್ರಮಾದೀ, ಚ, ಆನಂದೋ, ರಾಕ್ಷಸೋ, ನಲಃ॥೫॥ ಪಿಙ್ಗಲಃ, ಕಾಲಯುಕ್ತ್, ಶ್ಚ, ಸಿದ್ಧಾರ್ಥೀ, ರೌದ್ರ, ದುರ್ಮತೀ,। ದುಂದುಭೀ, ರುಧಿರೋದ್ಗಾರೀ, ರಕ್ತಾಕ್ಷೀ, ಕ್ರೋಧನಃ, ಕ್ಷಯಃ ॥೬॥ ಈ ೬೦ ಚಾಂದ್ರಮಾನ ಸಂವತ್ಸರಗಳ ಹೆಸರುಗಳು, ಸೂರ್ಯನು ನಕ್ಷತ್ರಗಳನ್ನು ಪ್ರವೇಶಿಸಿದಾಗಲೂ, ರಾಶಿಯನ್ನು ಪ್ರವೇಶಮಾಡಿದಾಗ ಹೇಗೆಯೋ ಹಾಗೆಯೆ ಸಂಕ್ರಮಣದ ಹಿಂದೆಯೂ ಮುಂದೆಯೂ, ಪುಣ್ಯಕಾಲಗಳು.

—ಚಂದ್ರಾದಿ ಸಂಕ್ರಾನ್ತಿ ಪರ್ವಕಾಲವು—

ಚಂದ್ರಾದಿ ಸಂಕ್ರಮಣಗಳಲ್ಲಿ ಪುಣ್ಯಕಾಲವು—ಚಂದ್ರನ ಸಂಕ್ರಮಣದಲ್ಲಿ ಹಿಂದೆಯೂ ಮುಂದೆಯೂ, ೧ಘಳಿಗೆ ೧೩ ಪಲಗಳು ಪುಣ್ಯಕಾಲವು, ಅಂಗಾರಕನಿಗೆ ೧-೧೪, ಬುಧನಿಗೆ ೬-೧೪, ಗುರುವಿಗೆ ೪-೩೭, ಶುಕ್ರನಿಗೆ ೪-೧, ಶನಿಗೆ ೧೬-೭, ಸಂಕ್ರಮಣಕ್ಕೆ ಪೂರ್ವದಲ್ಲಿಯೂ, ಸಂಕ್ರಮಣಾನಂತರದಲ್ಲಿಯೂ ಈ ಪ್ರಮಾಣವುಳ್ಳ ಕಾಲವು ಪುಣ್ಯಕಾಲವೆನಿಸುವುದು, ಸೂರ್ಯ ಸಂಕ್ರಮಣದಂತೆ ಹಗಲು ಪರ್ವಕಾಲವಾಗುವುದಿಲ್ಲವಾದ್ದರಿಂದ ಇತರ ಗ್ರಹಗಳಿಗೆ ರಾತ್ರಿಯಲ್ಲಿ ಸಂಕ್ರಮಣವಾದರೆ ರಾತ್ರಿಯಲ್ಲಿಯೇ ಪುಣ್ಯಕಾಲವು. ಚಂದ್ರಮೊದಲಾದ ಗ್ರಹಗಳ ಸಂಕ್ರಮಣದಲ್ಲಿ ಸ್ನಾನವು ಕಾಮ್ಯವಲ್ಲದೆ ನಿತ್ಯವಲ್ಲ.

— ನವಗ್ರಹಸ್ನಾನಗಳು —

ನವಗ್ರಹಗಳನ್ನುದ್ದೇಶಿಸಿ ಸ್ನಾನಮಾಡುವುದು—ಸೂರ್ಯಾದಿಗ್ರಹಗಳಿಂದುಂಟಾಗುವ ಪೀಡೆಯು ಪರಿಹಾರಕ್ಕಾಗಿ ಸ್ನಾನಗಳನ್ನು ಮಾಡಬೇಕು, ಮಂಜಿಷ್ಟ, ಗಜಮದ (ಮದೋದಕ) ಕುಂಕುಮ, ಕೆಂಪು ಚಂದನ, ಇವುಗಳನ್ನು ನೀರುತುಂಬಿದ ಪಾತ್ರೆಯಲ್ಲಿ ಹಾಕಿ ಆ ನೀರಿನಿಂದ ಸ್ನಾನಮಾಡಿದರೆ ಸೂರ್ಯಪೀಡೆಯು ನಿವಾರಣೆಯಾಗುವುದು. ಲಾಮಂಚ, ಬಾಗೆಮರ, ಕುಂಕುಮ, ಕೆಂಪುಚಂದನಗಳೊಡನೆ ಶಂಖದ ಉದಕದಲ್ಲಿ ಸ್ನಾನಮಾಡಿದರೆ ಚಂದ್ರಪೀಡಾ ಪರಿಹಾರವು, ಈಾಲೆ, ದೇವ

ದಾರುಗಿಡದ ಸೊಪ್ಪು, ಎಳ್ಳು, ನೆಲ್ಲಿಯಕಾಯಿ, ಇವುಗಳಿಂದ ಕೂಡಿದ ಬೆಳ್ಳಿಯಪಾತ್ರೆಯ ನೀರಿನಸ್ನಾನವು ಅಂಗಾರಕಬಾಧಾಪರಿಹಾರಕವಾದದ್ದು. ಗಜಮದದಿಂದ ಕೂಡಿದ ನದೀಸಂಗಮಸ್ಥಳದ ನೀರನ್ನು ಮಣ್ಣಿನ ಪಾತ್ರೆಯಿಂದ ಸ್ನಾನಮಾಡಿದರೆ ಬುಧನ ಕಾಟವು ಹೋಗುವುದು. ಅತ್ತಿ, ಬಿಲ್ವ, ಆಲ, ನೆಲ್ಲಿಕಾಯಿಗಳಿಂದ ಕೂಡಿದ ಚಿನ್ನಪಾತ್ರೆಯ ನೀರಿನ ಸ್ನಾನಮಾಡಿದರೆ ಬೃಹಸ್ಪತಿಗ್ರಹ ದೋಷಶಾಂತಿಯು. ಗೋರೋಜನ, ಗಜಮದ, ಕಾಡುಸಬ್ಬಸಿಗೆ, ಮಜ್ಜಿಗೆಯ ಗೆಡ್ಡೆ, ಇವುಗಳನ್ನು ಹಾಕಿ ಬೆಳ್ಳಿಯ ಪಾತ್ರೆಯಿಂದ ಸ್ನಾನಮಾಡಿದರೆ ಶುಕ್ರಗ್ರಹ ಪೀಡಾಪರಿಹಾರವು. ಎಳ್ಳು, ಉದ್ದು, ನವಣೆ, ಗಂಧಪುಷ್ಪಗಳಿಂದ ಕೂಡಿದ ಕಬ್ಬಿಣದ ಪಾತ್ರೆಯಲ್ಲಿ ನೀರಿನಿಂದ ಸ್ನಾನಮಾಡಿದರೆ ಶನಿಯಬಾಧೆಯು ನಾಶವಾಗುವುದು. ಗುಗ್ಗುಲ, ಹಿಂಗು, ಹರಿದಳ, ಮಣಿಶಿಲೆಗಳಿಂದ ಕೂಡಿದ ನೀರಿನಿಂದ ಕೋಣನ ಕೊಂಬಿನ ಪಾತ್ರೆಯಲ್ಲಿ ಸ್ನಾನಮಾಡಿದರೆ ರಾಹುವಿನ ದೋಷನಿವಾರಣೆಯೂ, ಹಂದಿಯು ಕೆದರಿರುವ ಪರ್ವತದ ಮಣ್ಣು, ಮೇಕೆಯ ಹಾಲುಗಳಿಂದ ಕೂಡಿದ ನೀರನ್ನು ಖಡ್ಗಪಾತ್ರೆಯಲ್ಲಿ ಸ್ನಾನಮಾಡಿದರೆ ಕೇತುವಿನ ಪೀಡೆಯು ಪರಿಹಾರವಾಗುತ್ತದೆ.

## — ಗ್ರಹಗಳಿಗೆ ದಾನಗಳು —

ಗ್ರಹದಾನಗಳು—ಸೂರ್ಯನ ಪ್ರೀತ್ಯರ್ಥವಾಗಿ, ರತ್ನ, ಗೋಧಿ, ಹಸು, ಕೆಂಪುಬಟ್ಟೆ, ಬೆಲ್ಲ, ಚಿನ್ನ, ತಾಮ್ರ, ಕೆಂಪುಚಂದನ, ಕಮಲ, ಇವುಗಳನ್ನು ದಾನಮಾಡಬೇಕು. ಚಂದ್ರನಿಗೆ ಬಿದಿರುಗೂಡೆಯಲ್ಲಿ ಅಕ್ಕಿ, ಕರ್ಪೂರ, ಮುತ್ತು ಬಿಳಿಯಬಟ್ಟೆ, ತುಪ್ಪದಿಂದ ತುಂಬಿದ ಕುಂಭ, ಎತ್ತು. ಅಂಗಾರಕನಿಗೆ-ಹವಳ ಗೋಧಿ, ಕಿರುಗಡಲೆ, ಕೆಂಪುಎತ್ತು, ಬೆಲ್ಲ, ಚಿನ್ನ, ಕೆಂಬಟ್ಟೆ, ತಾಮ್ರ ಬುಧನಿಗೆ-ಕರಿಯಬಟ್ಟೆ, ಚಿನ್ನ, ಕಂಚು, ಹೆಸರು, ಪಚ್ಚೆ, ದಾಸಿ (ತೊತ್ತು) ಆನೆಯದಂತ, ಹೂ; ಗುರುವಿಗೆ-ಪುಷ್ಯರಾಗ, ಅರಸಿನ, ಸಕ್ಕರೆ, ಕುದುರೆ, ಹಳದಿಯಧಾನ್ಯ, ಹಳದಿಯಬಟ್ಟೆ, ಉಪ್ಪು, ಚಿನ್ನ. ಶುಕ್ರನಿಗೆ-ಚಿತ್ರವರ್ಣದವಸ್ತ್ರ ಬಿಳಿಯಕುದುರೆ ಹಸು, ವಜ್ರ, ಚಿನ್ನ, ಬೆಳ್ಳಿ, ಗಂಧ, ಅಕ್ಕಿ. ಶನಿಗೆ-ಇಂದ್ರನೀಲ, ಉದ್ದು ಎಣ್ಣೆ, ಎಳ್ಳು, ಹುರುಳಿ, ಎಮ್ಮೆ, ಕಬ್ಬಿಣ, ಕರಿಯಹಸು. ರಾಹುವಿಗೆ-

ಗೋಮೇದ (ರತ್ನ) ,ಕುದುರೆ, ಕಪ್ಪುಬಟ್ಟೆ, ಕಂಬಳಿ, ಎಣ್ಣೆ, ಎಳ್ಳು, ಕಬ್ಬಿಣ, ಕೇತುವಿಗೆ-ವೈಡೂರ್ಯ, ಎಣ್ಣೆ, ಎಳ್ಳು, ಕಂಬಳಿ, ಕಸ್ತೂರಿ, ಮೇಕೆ, ವಸ್ತ್ರ, ಇವುಗಳನ್ನು ದಾನಮಾಡಬೇಕು. ಶನಿಯ ಪೀಡೆಯನ್ನು ಪರಿಹರಿಸಿಕೊಳ್ಳುವುದಕ್ಕಾಗಿ ಶನಿವಾರದಲ್ಲಿ ತೈಲಾಭ್ಯಂಗವನ್ನೂ ತೈಲದಾನವನ್ನೂ ಮಾಡಬೇಕು.

## — ಶನಿವ್ರತವು —

ಶನಿವ್ರತವು—ಕಬ್ಬಿಣದಲ್ಲಿ ಶನಿವಿಗ್ರಹವನ್ನು ಮಾಡಿಸಿ, ಕಬ್ಬಿಣ, ಅಥವಾ ಮಣ್ಣಿನಗಡಿಗೆಯಲ್ಲಿ ಎಣ್ಣೆಯನ್ನು ತುಂಬಿ ಅದರಲ್ಲಿಟ್ಟು ಕಪ್ಪುಬಟ್ಟೆ ಅಥವಾ ಕಂಬಳಿಯನ್ನು ಇರಿಸಿ, ಕಪ್ಪು, ಹೂಗಂಧಗಳಿಂದಲೂ, ಚಿಗಳಿ, ಎಳ್ಳನ್ನದಿಂದಲೂ, ಪೂಜೆಮಾಡಿ, ಕರಿಯಬ್ರಾಹ್ಮಣನಿಗೆ ಅಥವಾ ಬೇರೊಬ್ಬ ಬ್ರಾಹ್ಮಣನಿಗೆ ದಾನಮಾಡಬೇಕು. ' ಶನ್ನೋದೇವೀಃ ' ಎಂಬುದೇ ಮಂತ್ರವು ಯಃಪುನರ್ನಷ್ಟರಾಜ್ಯಾಯ ನಲಾಯಪರಿತೋಷಿತಃ । ಸ್ವಪ್ನೇದದೌನಿಜಂರಾಜ್ಯಂಸಮೇಸೌರಿಃ ಪ್ರಸೀದತು ॥೧॥ ನಮೋರ್ಕಪುತ್ರಾಯಶನೈಶ್ಚರಾಯ ನೀಹಾರವರ್ಣಾಂಜನಮೇಚಕಾಯ । ಶ್ರುತ್ವಾರಹಸ್ಯಂ ಭವಕಾಮದಸ್ತ್ವಂ ಫಲಪ್ರದೋಮೇ ಭವಸೂರ್ಯಪುತ್ರ॥, ರಾಜ್ಯವನ್ನು ಕಳೆದುಕೊಂಡು ವ್ಯಥೆಪಡುತ್ತಿದ್ದ ನಳನಿಗೆ ಸ್ವಪ್ನದಲ್ಲಿ ರಾಜ್ಯವನ್ನು ಕೊಟ್ಟು ಸಂತೋಷಪಡಿಸಿದ ಸೂರ್ಯಪುತ್ರನಾದ ಶನೈಶ್ಚರನು ನನಗೆ ಪ್ರಸನ್ನನಾಗಲಿ ॥೧॥ ಸೂರ್ಯಪುತ್ರನಾಗಿಯೂ ಮೇಘದಂತೆ ಕಪ್ಪಾದ ದೇಹವುಳ್ಳವನಾಗಿಯೂ ಇರುವ ಶನೈಶ್ಚರನೆ ! ನಿನಗೆ ನಮಸ್ಕರಿಸುವೆನು. ಈಶ್ವರನಿಗೂ ಇಷ್ಟಾರ್ಥಗಳನ್ನು ಕೊಟ್ಟನೀನು ನನಗೆ ಸತ್ಫಲವನ್ನು ಕೊಡುವವನಾಗು ॥೨॥ ಈ ಮೊದಲಾದುವು ಶೂದ್ರಾದಿಗಳಿಗೆ ಮಂತ್ರವು-ಹೀಗೆ ಸಂವತ್ಸರದಲ್ಲಿ ಪ್ರತಿಶನಿವಾರವೂ ವ್ರತವನ್ನು ಮಾಡಬೇಕು. ಕೋಣಸ್ಥಃ-ಪಿಂಗಳೋ, ಬಭ್ರುಃ, ಕೃಷ್ಣೋ, ರೌದ್ರೋಂತಕೋಯಮಃ । ಸೌರಿಃ, ಶನೈಶ್ಚರೋ, ಮಂದಃ ಪಿಪ್ಪಲಾದೇನ ಸಂಸ್ತುತಃ ॥೧॥ ಈ ೧೦ ನಾಮಗಳನ್ನು ಪ್ರತಿದಿನವೂ ಪಾರಾಯಣಮಾಡಬೇಕು.

## — ಶನಿಸ್ತೋತ್ರವು —

ಶನಿಸ್ತೋತ್ರವು—ನಮಃಸ್ತೇಕೋಣ ಸಂಸ್ಥಾಯ ಪಿಂಗಲಾಯ

ನಮೋಽಸ್ತುತೇ । ನಮಸ್ತೇ ಬಭ್ರುರೂಪಾಯಕೃಷ್ಣಾಯಚ ನಮೋಽಸ್ತು ತೇ ॥೧॥ ನಮಸ್ತೇ ರೌದ್ರದೇಹಾಯ ನಮಸ್ತೇ ಚಾಂತಕಾಯಚ । ನಮಸ್ತೇಯಮಸಂಜ್ಞಾಯ ನಮಸ್ತೇಸೌರಯೇವಿಭೋ ॥ ೨ ॥ ನಮಸ್ತೇ ಮಂದಸಂಜ್ಞಾಯ ಶನೈಶ್ಚರ ನಮೋಽಸ್ತುತೇ । ಪ್ರಸಾದಂ ಕುರುದೇವೇಶ ದೀನಸ್ಯ ಪ್ರಣತಸ್ಯಚ ॥೩॥ ಪಿಪ್ಪಲಾದನು ಹೇಳಿರುವ ಈ ಶನಿಸ್ತೋತ್ರ ವನ್ನು ಪ್ರತಿದಿನದಲ್ಲಿಯೂ ಪ್ರಾತಃಕಾಲದಲ್ಲಿ ಪಾರಾಯಣಮಾಡಿದರೆ ೭॥ ವರ್ಷದ ಶನಿಯ ಕಾಟವು ನಿವಾರಣೆಯಾಗುವುದು. ಭಾನುವಾರದಲ್ಲಿ ಸೂರ್ಯಪೂಜೆ, ಉಪವಾಸ, ಸೂರ್ಯ ಮಂತ್ರ, ಜಪವನ್ನು ಮಾಡಿದರೆ ಸರ್ವ ರೋಗಗಳೂ ನಿವಾರಣೆಯಾಗುವುವು. 'ಹ್ರೀಂ ಹ್ರೀಂ ಸಃ ಸೂರ್ಯಾಯ' ಎಂಬುದೇ ಸೂರ್ಯಮಂತ್ರವು. (ಶ್ರಾವಣ ಪೌರ್ಣಮಿಯ ಉಪಾಕರ್ಮ ದಲ್ಲಿ ದೀಪದಾನವು-ಆಚಮನವನ್ನು ಮಾಡಿ ಪ್ರಾಣಾಯಾಮಮಾಡಬೇಕು. ದೇಶಕಾಲಗಳನ್ನು ಹೇಳಿಕೊಂಡು ‹ಪುರಾಣದಲ್ಲಿ ಹೇಳಿರುವ ಫಲವುಂಟಾಗುವುದಕ್ಕೂ, ನನಗೆ ಈಜನ್ಮದಲ್ಲಿಯೂ ಮುಂದಣಜನ್ಮಗಳಲ್ಲಿಯೂ, ಸಮಗ್ರವಾದ ಐಶ್ವರ್ಯವುಂಟಾಗಿ ಪುತ್ರಪೌತ್ರಾಭಿವೃದ್ಧಿಯುಂಟಾಗುವುದಕ್ಕೂ, ಇಷ್ಟಾರ್ಥಸಿದ್ಧಿಗೂ ಸಭಾದೀಪದಲ್ಲಿ ಹೇಳಿರುವ ಅನೇಕ ಫಲ ಸಿದ್ಧಿಗಾಗಿಯೂ, ಬ್ರಹ್ಮ, ವಿಷ್ಣು, ಮಹೇಶ್ವರ ಪ್ರೀತಿಗಾಗಿಯೂ ಬ್ರಾಹ್ಮಣಶಭೆಯಲ್ಲಿ ನಾನು ಬ್ರಾಹ್ಮಣನಿಗೆ ಸಭಾದೀಪದಾನಮಾಡುತ್ತೇನೆ' ಎಂದು ಸಂಕಲ್ಪಮಾಡಿ, ಅನಂತರದಲ್ಲಿ ಗಣಪತಿಪೂಜೆಯನ್ನೂ, ಪುಣ್ಯಾಹವಾಚನೆಯನ್ನೂ, ಬ್ರಾಹ್ಮಣಪೂಜೆಯನ್ನೂ, ದೀಪಪೂಜೆಯನ್ನೂ ಮಾಡುವೆನೆಂದು ಸಂಕಲ್ಪಮಾಡಿ, ದೀಪಪೂಜೆ, ಬ್ರಾಹ್ಮಣಪೂಜಾನಂತರದಲ್ಲಿ — ಭೋದೀಪಬ್ರಹ್ಮರೂಪಸ್ತ್ವಂಜ್ಯೋತಿಷಾಂಪ್ರಭುರವ್ಯಯಃ । ಆರೋಗ್ಯಂ ದೇಹಿ ಪುತ್ರಾಂಶ್ಚ ಅವೈಧವ್ಯಂ ಪ್ರಯಚ್ಛಮೇ ॥ ೧ ॥ ಶ್ರಾವಣೇಮಾಸ್ಯುಪಾಕರ್ಮಣ್ಯಾರಬ್ಧೇವಿಪ್ರಸಂಸದಿ । ವ್ರೀಹಿತಂಡುಲಪಿಷ್ಟಸ್ಯ ಕಿಂಚಿತ್ಪಂಚಕನಿರ್ಮಿತಂ ॥೨॥ ಘೃತವರ್ತ್ಯಗ್ನಿ ಸಂಯುಕ್ತಂ ವಿಮಲೇಕಾಂಸ್ಯಭಾಜನೇ । ಸಪಾದತಂಡುಲಪ್ರಸ್ಥಂ ಪೂರಿತಂ ಸುಪ್ರತಿಷ್ಠಿತಂ ॥೩॥ ಅವೈಧವ್ಯಂಸುಪುತ್ರತ್ವಂ ದೀರ್ಘಾಯುಃ ಶ್ರೀಸೌಖ್ಯಮೇವ । ಸಭಾದೀಪಪ್ರದಾನೇನ ತುಭ್ಯಂವಿಪ್ರ ಸದಕ್ಷಿಣಂ ॥೪॥

ಬ್ರಹ್ಮವಿಷ್ಣುಮಹೇಶಾಶ್ಚ ಪ್ರೀಯಂತಾಂ ದೀಪದಾನತಃ । ಮಮಾಭೀಷ್ಟಪ್ರದಾಸ್ಸಂತು ಭವೇಽಸ್ಮಿನ್ಸ್ವಾ ಭವಾಂತರೇ ॥೫॥ ಸರ್ವಕಾಮಪ್ರದಾನ್ಯಾಸಾಂದೀಪದಾನಪ್ರತೋಷಿತಾಃ । ಶ್ರಾವಣ್ಯಾಂಶ್ರಾವಣೇ ಋಕ್ಷೇಸಭಾಯಾಮಗ್ನಿಸನ್ನಿಧೌ ॥೬॥ ಸಭಾಯಾಂ ದೀಪದಾನೇನ ತತಃ ಶಾಂತಿಂಪ್ರಯಚ್ಛಮೇ ॥ ಎಲೈ ದೀಪವೇ ! ನಾಶರಹಿತವಾದ ಪ್ರಕಾಶರೂಪವಾಗಿಯೂ, ಬ್ರಹ್ಮಸ್ವರೂಪವಾಗಿಯೂ, ಇರುವ ನೀನು, ನನಗೆ ಆರೋಗ್ಯವನ್ನೂ ಪುತ್ರಸಂತಾನವನ್ನೂ, ಅವೈಧವ್ಯವನ್ನೂ ಕೊಡುವನಾಗು ॥೧॥ ಎಂದು ಪ್ರಾರ್ಥಿಸಬೇಕು. ಶ್ರಾವಣಮಾಸದಲ್ಲಿ ಬ್ರಾಹ್ಮಣಸಭೆಯಲ್ಲಿ ಉಪಕರ್ಮಾರಂಭಮಾಡಿ ಅಕ್ಕಿಯ ಹಿಟ್ಟಿನ ಸೊಡಲನ್ನು ಮಾಡಿ ॥೨॥ ತುಪ್ಪದಲ್ಲಿ ನೆನದ ಬತ್ತಿಯನ್ನಿಟ್ಟು ಹಚ್ಚಿ ಸ ಕಂಚಿನ ಪಾತ್ರೆಯಲ್ಲಿ ೧ ೧/೪ ಸೇರು ಅಕ್ಕಿಯನ್ನು ತುಂಬಿ ಆದರ ಮೇಲಿಟ್ಟು ॥೩॥ ಎಲೈ ಬ್ರಾಹ್ಮಣನೇ ! ದಕ್ಷಿಣೆಯೊಡನೆ ಈ ಸಭಾದೀಪದಾನವನ್ನು ಮಾಡುತ್ತೇನೆ. ಅವೈಧವ್ಯವನ್ನೂ, ಸುಪುತ್ರನನ್ನೂ ದೀರ್ಘವಾದ ಆಯುಸ್ಸನ್ನೂ, ಸಂಪತ್ತನ್ನೂ, ಸುಖವನ್ನೂ, ಉಂಟುಮಾಡಲಿ ॥೪॥ ಈ ದೀಪದಾನದಿಂದ ನನಗೆ ಈ ಜನ್ಮದಲ್ಲಿಯೂ, ಜನ್ಮಾಂತರಗಳಲ್ಲಿಯೂ, ಬ್ರಹ್ಮ ವಿಷ್ಣು, ಮಹೇಶ್ವರರು ಪ್ರೀತರಾಗಲಿ ॥೫॥ ಶ್ರಾವಣಮಾಸದ ಪೌರ್ಣಿಮಾಶ್ರವಣನಕ್ಷತ್ರದಲ್ಲಿ ಈ ಸಭೆಯಲ್ಲಿ ಅಗ್ನಿಸನ್ನಿಧಿಯಲ್ಲಿ ನಾನುಮಾಡಿದ ದೀಪದಾನಕ್ಕೆ ತ್ರಿಮೂರ್ತಿಗಳೂ ಸಂತುಷ್ಟರಾಗಿ ಸಮಸ್ತ ಇಷ್ಟಾರ್ಥಗಳನ್ನು ಕೊಟ್ಟು ಎಲ್ಲಾ ಅರಿಷ್ಟಗಳನ್ನೂ ಪರಿಹರಿಸಲಿ ॥೬॥ ಎಂಬ ಮಂತ್ರಗಳನ್ನು ಹೇಳಿ ತಾಂಬೂಲ, ದಕ್ಷಿಣೆಗಳೊಡನೆ ಈ ಹೆಸರಿನ ಬ್ರಾಹ್ಮಣನಿಗೆ ನಾನು ದಾನಮಾಡುವೆನು, ತ್ರಿಮೂರ್ತಿಗಳೂ ಪ್ರಸನ್ನರಾಗಲಿ. ಎಂದು ದಾನಮಾಡಬೇಕು. (ಎಂಬುದು ಸಭಾದೀಪದಾನ ವಿಧಿಯು) ಇಂತು ಪ್ರಕೀರ್ಣನಿರ್ಣಯೋದ್ದೇಶವು.

—ಇಂತು ದ್ವಿತೀಯ ಪರಿಚ್ಛೇದವು ಮುಗಿದುದು—